ಕನ್ನಡದಲ್ಲಿ ಅಶ್ವಶಾಸ್ತ್ರ ಸಾಹಿತ್ಯ

(ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಮಹಾಪ್ರಬಂಧ)

ಸಂಶೋಧಕ

ಕಲ್ಲಯ್ಯ ಎಸ್. ಹಿರೇಮಠ

ಮಾರ್ಗದರ್ಶಕರು

ಡಾ. ಎಫ್. ಟಿ. ಹಳ್ಳಿಕೇರಿ

ಪ್ರಾಧ್ಯಾಪಕರು

ಹಸ್ತಪ್ರತಿಶಾಸ್ತ್ರ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ಭಾಷಾ ನಿಕಾಯ

ಹಸ್ತಪ್ರತಿಶಾಸ್ತ್ರ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೦೮

ಕನ್ನಡದಲ್ಲಿ ಅಶ್ವಶಾಸ್ತ್ರ ಸಾಹಿತ್ಯ

(ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಮಹಾಪ್ರಬಂಧ)

ಸಂಶೋಧಕ

ಕಲ್ಲಯ್ಯ ಎಸ್. ಹಿರೇಮಠ

ಮಾರ್ಗದರ್ಶಕರು

ಡಾ.ಎಫ್.ಟಿ.ಹಳ್ಳಿಕೇರಿ

ಪ್ರಾಧ್ಯಾಪಕರು

ಹಸ್ತಪ್ರತಿಶಾಸ್ತ್ರ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ಭಾಷಾ ನಿಕಾಯ

ಹಸ್ತಪ್ರತಿಶಾಸ್ತ್ರ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೦೮

ದೃಢೀಕರಣ ಪತ್ರ

ಶ್ರೀ ಕಲ್ಲಯ್ಯ ಎಸ್. ಹಿರೇಮಠ ಇವರು "ಕನ್ನಡದಲ್ಲಿ ಅಶ್ವಶಾಸ್ತ್ರ ಸಾಹಿತ್ಯ" ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯ ಭಾಷಾ ನಿಕಾಯದ ಹಸ್ತಪ್ರತಿಶಾಸ್ತ್ರ ವಿಭಾಗಕ್ಕೆ ಸಲ್ಲಿಸುತ್ತಿರುವ ಪ್ರಸ್ತುತ ಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಸ್ಥಳ : ವಿದ್ಯಾರಣ್ಯ

ದಿನಾಂಕ : 31-08-2009

(ಡಾ. ಎಫ್.ಟಿ.ಹಳ್ಳಿಕೇರಿ)

ಮಾರ್ಗದರ್ಶಕರು ಮತ್ತು ಪ್ರಾಧ್ಯಾಪಕರು

ಹಸ್ತಪ್ರತಿಶಾಸ್ತ್ರ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

ಪ್ರಮಾಣ ಪತ್ರ

"ಕನ್ನಡದಲ್ಲಿ ಅಶ್ವಶಾಸ್ತ್ರ ಸಾಹಿತ್ಯ" ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಡಾ.ಎಫ್.ಟಿ.ಹಳ್ಳಿಕೇರಿಯವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯ ಭಾಷಾ ನಿಕಾಯದ ಹಸ್ತಪ್ರತಿಶಾಸ್ತ್ರ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಸ್ಥಳ : ವಿದ್ಯಾರಣ್ಯ
ದಿನಾಂಕ : ೭೧-೦೮-೨೦೦೯

(ಕಲ್ಲಯ್ಯ ಎಸ್.ಹಿರೇಮಠ)
ಸಂಶೋಧನ ವಿದ್ಯಾರ್ಥಿ
ಹಸ್ತಪ್ರತಿಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಅರಿಕೆ

ಕನ್ನಡಸಾಹಿತ್ಯ ಹಲವು ಮುಖಗಳ ವೈವಿಧ್ಯಮಯ ಪ್ರಕಾರಗಳ ಹೂದೋಟ. ಅದರಲ್ಲಿ ಶಾಸ್ತ್ರವೆಂಬುದು ಒಂದು ಭಾಗ. ಕಾವ್ಯ ಅಭಿವ್ಯಕ್ತಿ ಮಾಧ್ಯಮವಾದರೆ, ಶಾಸ್ತ್ರ ಪಾಂಡಿತ್ಯ ಪೂರ್ಣವಾದದ್ದು. ಪ್ರಸ್ತುತ **'ಕನ್ನಡದಲ್ಲಿ ಅಶ್ವಶಾಸ್ತ್ರ ಸಾಹಿತ್ಯ'** ಪಿಎಚ್.ಡಿ. ಮಹಾಪ್ರಬಂಧವು ಕುದುರೆ ಕುರಿತ ಸಮಗ್ರ ಅಧ್ಯಯನವಾಗಿದೆ. ವಿವಿಧ ಆಕರ ಪರಿಕರಗಳ ಮೂಲಕ ಕುದುರೆಯ ಜನನ, ವಂಶ, ಬಣ್ಣ, ಪ್ರಕಾರ, ಆರೈಕೆ, ಗುಣಲಕ್ಷಣ, ಸ್ವಭಾವ, ಬಳಕೆ, ವೈದ್ಯೋಪಚಾರ, ಚಿಕಿತ್ಸೆ ಇವುಗಳ ಜೊತೆಗೆ ಅದರ ಪ್ರಾಚೀನತೆಯನ್ನು ಗುರುತಿಸಲಾಗಿದೆ. ಶಾಸ್ತ್ರಪೂರ್ಣವಾದ ಈ ಪ್ರಬಂಧಕ್ಕೆ ಸಾಂಸ್ಕೃತಿಕ ಸ್ಪರ್ಶ ನೀಡಿರುವುದು ಒಂದು ವಿಶೇಷ.

ಕನ್ನಡ ವಿಶ್ವವಿದ್ಯಾಲಯದಲ್ಲಿ ಪಿಎಚ್.ಡಿ ಅಧ್ಯಯನ ಕೈಗೊಳ್ಳಲು ಅವಕಾಶ ಮಾಡಿಕೊಟ್ಟ ಅಂದಿನ ಮಾನ್ಯ ಕುಲಪತಿಗಳಾದ ಡಾ. ಬಿ.ಎ.ವಿವೇಕ ರೈ ಅವರಿಗೂ ಇಂದಿನ ಮಾನ್ಯ ಕುಲಪತಿಗಳು ನನ್ನ ವಿದ್ಯಾಗುರುಗಳು ಆದ ಡಾ. ಎ.ಮುರಿಗೆಪ್ಪ ಅವರಿಗೂ ಕೃತಜ್ಞತೆಗಳು. ಮಾನ್ಯ ಕುಲಸಚಿವರಾದ ಶ್ರೀ ಎಸ್.ಎಸ್.ಪೂಜಾರ್, ಅಧ್ಯಯನಾಂಗದ ನಿರ್ದೇಶಕರಾದ ಡಾ. ವೀರೇಶ ಬಡಿಗೇರ ಮತ್ತು ಭಾಷಾ ನಿಕಾಯದ ಡೀನ್‌ರಾದ ಡಾ. ರಹಮತ್ ತರೀಕೆರೆ ಅವರಿಗೆ ಕೃತಜ್ಞತೆಗಳು.

ಈ ಮಹಾಪ್ರಬಂಧಕ್ಕೆ ಮಾರ್ಗದರ್ಶಕರಾಗಿ ಪ್ರಬಂಧವನ್ನು ವಿಶ್ವವಿದ್ಯಾಲಯಕ್ಕೆ ಸಾದರಪಡಿಸುವವರೆಗೂ ತಮ್ಮ ಸೂಕ್ತ ಸಲಹೆ ಹಾಗೂ ಮಾರ್ಗದರ್ಶನವನ್ನು ವಿದ್ವತ್‌ಪೂರ್ಣವಾಗಿ ನೀಡಿರುವ ಸಂಯಮದ ಪೂಜ್ಯ ಗುರುಗಳಾದ ಡಾ. ಎಫ್.ಟಿ.ಹಳ್ಳಿಕೇರಿ ಅವರಿಗೆ ಗೌರವಪೂರ್ವಕ ಕೃತಜ್ಞತೆಗಳು.

ಅಧ್ಯಯನ ಸಮಯದಲ್ಲಿ ವಿಭಾಗದ ಮುಖ್ಯಸ್ಥರಾದ ಡಾ. ಎಸ್.ಆರ್.ಚನ್ನವೀರಪ್ಪ, ಪ್ರವಾಚಕರಾದ ಡಾ.ಕೆ.ರವೀಂದ್ರನಾಥ, ಡಾ. ಎಸ್.ಎಸ್.ಅಂಗಡಿ ಅವರುಗಳ ಶೈಕ್ಷಣಿಕ ಚರ್ಚೆ, ಶಿಷ್ಯ ಪ್ರೀತಿ ವಾತ್ಸಲ್ಯವನ್ನು ಗೌರವದಿಂದ ನೆನೆಯುತ್ತೇನೆ. ಅಧ್ಯಯನ ಸಂದರ್ಭದಲ್ಲಿ ಸಲಹೆ ಸೂಚನೆ ನೀಡಿದ ವಿಶ್ರಾಂತ ಕುಲಪತಿಗಳಾದ ಡಾ. ಎಂ.ಎಂ.ಕಲಬುರ್ಗಿ ಅವರನ್ನು ಗೌರವದಿಂದ ಸ್ಮರಿಸುತ್ತೇನೆ. ಹಾಗೆಯೇ ಎಂ.ಎ. ತರಗತಿಯಲ್ಲಿ ಓದುವ ಸಂದರ್ಭದಲ್ಲಿ ಸಂಶೋಧನೆ ಬಗ್ಗೆ ಆಸಕ್ತಿ ಮೂಡುವಂತೆ ಪ್ರೇರೇಪಿಸಿದ

ನನ್ನ ಗುರುಗಳಾದ ಡಾ. ಬಿ.ವ್ಹಿ.ಶಿರೂರ, ಡಾ.ವೀರಣ್ಣ ರಾಜೂರ, ದಿ.ಡಾ.ಬಿ.ಆರ್.ಹಿರೇಮಠ, ಡಾ. ಹೆಚ್.ಎಂ.ಮಹೇಶ್ವರಯ್ಯ, ಡಾ. ಜೆ.ಎಂ.ನಾಗಯ್ಯ, ಡಾ. ಬಿ.ಬಿ.ಬಿರಾದಾರ್, ಡಾ. ಕೆ.ಆರ್. ದುರ್ಗಾದಾಸ್ ಇವರುಗಳ ಶಿಷ್ಯ ವಾತ್ಸಲ್ಯವನ್ನು ಭಕ್ತಿಯಿಂದ ನೆನೆಯುತ್ತೇನೆ. ಹಾಗೆಯೇ ಹಸ್ತಪ್ರತಿ ವಿಭಾಗದ ಬೋಧಕೇತರ ಸಿಬ್ಬಂದಿಯನ್ನು ನೆನೆಯುತ್ತೇನೆ.

ಅಧ್ಯಯನ ಸಂದರ್ಭದಲ್ಲಿ ಆಕರ ಸಾಮಗ್ರಿಯನ್ನು ಒದಗಿಸಿಕೊಡುವಲ್ಲಿ ಸಹಕರಿಸಿದ ಗ್ರಂಥಪಾಲಕರಾದ ಡಾ. ರಾಧಾಕೃಷ್ಣ, ಡಾ. ನಾಗವೇಣಿ, ಕೂಡಲಸಂಗಮದ ಶರಣ ಸಾಹಿತ್ಯ ಭಂಡಾರದ ಗ್ರಂಥಪಾಲಕರಾದ ಶ್ರೀ ಎಂ.ವೀ. ದಾನಪ್ಪನವರ, ಮೈಸೂರು ವಿ.ವಿ.ಯ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿ ಭಂಡಾರದ ಹಸ್ತಪ್ರತಿಯನ್ನು ಕೊಡುವಲ್ಲಿ ಸಹಕಾರ ನೀಡಿದ ಪ್ರಾಧ್ಯಾಪಕರಾದ ಡಾ. ಮೈಲಾರಹಳ್ಳಿ, ಡಾ. ವೈ.ಸಿ.ಭಾನುಮತಿ, ಡಾ. ಹಿರಿಯಣ್ಣ ಅಂಬಳಿಕೆ, ಡಾ.ನೀಲಗಿರಿ ತಳವಾರ, ಅಂಬುಜಾ ಇವರುಗಳನ್ನು ಸ್ಮರಿಸುವೆ.

ತಮ್ಮ ಬದುಕನ್ನು ನನ್ನ ಶೈಕ್ಷಣಿಕ ಯಶಸ್ಸಿಗಾಗಿ ಧಾರೆ ಎರೆದ ಅಪ್ಪ ಸಿದ್ದಯ್ಯ ಹಿರೇಮಠ, ಅವ್ವ ಕಲ್ಲಮ್ಮ ಹಿರೇಮಠ ಅವರಿಗೆ ಭಕ್ತಿಯ ನಮಸ್ಕಾರಗಳನ್ನು ಸಲ್ಲಿಸುವೆ. ತನ್ನ ಮಗನಂತೆ ಸಾಕಿ ಸಲುಹಿದ ಅಮ್ಮ ಶ್ರೀಮತಿ ವೀರಮ್ಮ ಹಿರೇಮಠ ಅವರಿಗೆ, ತಂಗಿಯವರಾದ ವೀರಮ್ಮ, ಶ್ರೀದೇವಿ, ಮಾವನವರಾದ ಕುಮಾರಸ್ವಾಮಿ, ವೀರೇಶ, ಮಹಾಂತೇಶ ಶಾಸ್ತ್ರಿ, ಕಲ್ಲಿನಾಥ ಶಾಸ್ತ್ರಿ, ಗವಿಸಿದ್ದಯ್ಯ, ದೊಡ್ಡಯ್ಯ, ವೀರಭದ್ರಯ್ಯ, ಸಿದ್ದಯ್ಯ ಅರಳಹಳ್ಳಿ ಇವರನ್ನು, ಅಜ್ಜನವರಾದ ಕಲ್ಲಯ್ಯ, ಅಂದಾನಯ್ಯ, ಷಣ್ಮುಖಯ್ಯ, ವೀರಯ್ಯ, ಚನ್ನಯ್ಯ, ಕಾಕನವರಾದ ಚಂದ್ರಯ್ಯ ಹುಚ್ಚಯ್ಯನಮಠ, ಡಾ. ಚನ್ನಬಸಯ್ಯ, ಮಂಜುನಾಥಸ್ವಾಮಿ ಮುಂತಾದವರನ್ನು ಪ್ರೀತಿಯಿಂದ ನೆನೆಯುತ್ತೇನೆ.

ನನ್ನ ಪ್ರಿಯ ಸ್ನೇಹಿತರಾದ ವಾಗೀಶ್ ಎನ್.ಎಂ., ಜೆ.ಕುಮಾರ, ಈರಣ್ಣ ಹುರುಳಿ, ಡಾ. ಗವಿಸಿದ್ದಪ್ಪ ಹಂದ್ರಾಳ, ಚಂದ್ರಪ್ಪ ಸೊಬಟಿ, ಅರುಣ ಜೋಳದ, ಹುಲಿಗೆಮ್ಮ ಬಿ., ವಿರೂಪಾಕ್ಷಪ್ಪ ಎಚ್., ಎಸ್.ಚಂದ್ರಮೌಳಿ, ಡಾ. ನಾಗಭೂಷಣ ಎನ್.ಎಂ., ಸಂಗಯ್ಯ ಸ್ಥಾವರಮಠ, ವಿಜಯಕುಮಾರ ಕರಮುಡಿ, ಡಾ. ಎ.ಸಿ.ವಾಲಿ, ಎಸ್.ಎಸ್.ದೊಡ್ಡಮನಿ, ವೀರಾಕ್ಷಿ, ವೆಳ್ಳಿಮಾ, ಶೇಖರಚಾರಿ, ಕುಪ್ಪೇರಾವ್, ನಿರಂಜನ ತುಕಾರಾಮ್ ಸುಧಾಕರ, ನಾಗರಾಜ, ಗೋವಿಂದ, ಡಾ. ಕೇಶವಮೂರ್ತಿ ಮುಂತಾದವರನ್ನು ಪ್ರೀತಿಯಿಂದ ನೆನೆಯುತ್ತೇನೆ.

ಸಕಾಲಕ್ಕೆ ಮಹಾಪ್ರಬಂಧದ ಅಕ್ಷರ ಜೋಡಣೆಯನ್ನು ಮಾಡಿಕೊಟ್ಟ ಯಾಜಿ ದಂಪತಿಗಳ ಸಹಕಾರವನ್ನು ಪ್ರೀತಿಯಿಂದ ನೆನೆಯುತ್ತೇನೆ.

ಕಲ್ಲಯ್ಯ ಎಸ್. ಹಿರೇಮಠ

ಪರಿವಿಡಿ

ಅಧ್ಯಾಯ ೩

ಅಶ್ವಶಾಸ್ತ್ರ ಕೃತಿಗಳ ಪರಿಚಯಾತ್ಮಕ ಅಧ್ಯಯನ

ಅಧ್ಯಾಯ ೧

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

೧.೧. ಪ್ರವೇಶ

೧.೨. ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

೧.೩. ಅಧ್ಯಯನದ ಆಕರಗಳು

೧.೪. ಅಧ್ಯಯನದ ಸ್ವರೂಪ

ಅಧ್ಯಾಯ ೧

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

೧.೧. ಪ್ರವೇಶ

ಪ್ರಾಚೀನ ಕನ್ನಡ ಸಾಹಿತ್ಯದ ಹೆಜ್ಜೆಯ ಗುರುತುಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ನಮಗೆ ಹೆಚ್ಚು ಸಮೃದ್ಧಿ ಕಂಡುಬರುವುದು ಕಾವ್ಯ ಕೃತಿಗಳಲ್ಲಿಯೇ. ಜನ ಬದುಕಬೇಕೆಂಬ ಉದ್ದೇಶದಿಂದ ನಮ್ಮ ಕವಿ ಪುಂಗವರು ಕಾವ್ಯಗಳನ್ನೇ ಹೆಚ್ಚು ರಚನೆ ಮಾಡಿ ಸೈ ಎನಿಸಿಕೊಂಡಿದ್ದುಂಟು. ಹಾಗಾಗಿ ಕಾವ್ಯಗಳಷ್ಟು ನಮ್ಮಲ್ಲಿ ಶಾಸ್ತ್ರ ಕೃತಿಗಳು ಬೆಳೆದು ಬರಲಿಲ್ಲವೆಂದೇ ಹೇಳಬೇಕು. ಕಾರಣ ಕಾವ್ಯವು ಕವಿಯ ಆಲೋಚನಾಲಹರಿ, ಸೂಕ್ಷ್ಮ ಗ್ರಹಿಕೆ, ವಿಶೇಷಾನುಭವ, ನಿರ್ಮಾಣ ಕೌಶಲ್ಯದಿಂದ ಸೃಷ್ಟಿಯಾಗುವಂತಹದ್ದು, ಆದರೆ ಶಾಸ್ತ್ರ ಹಾಗಲ್ಲ. ಅದು ಪ್ರಧಾನವಾಗಿ ಬುದ್ಧಿವಿಹಾರಿಯಾಗಿ, ವಸ್ತುಲೋಕ ಸಂಚಾರಿಯಾಗಿ ಖಚಿತವಾದದ್ದು, ಇಲ್ಲಿ ವಾಸ್ತವ ಅರಿವಿಗೆ ಮತ್ತು ಅನುಭವಕ್ಕೆ ಬರುತ್ತದೆಯೇ ಹೊರತು ಊಹೆ ಕಲ್ಪನೆಗಳಿಗಲ್ಲ. ಆದುದರಿಂದ ಕಾವ್ಯ ಆನಂದವನ್ನುಂಟು ಮಾಡಿದರೆ ಶಾಸ್ತ್ರ ಅನುಭವವನ್ನುಂಟು ಮಾಡುವಂತಹದ್ದು, ಕಾವ್ಯಕ್ಕಿರುವ ಗೌರವ ಮನ್ನಣೆ ಶಾಸ್ತ್ರಕ್ಕಿಲ್ಲ. ಕಾರಣ ಶಾಸ್ತ್ರ ಎನ್ನುವುದು ನಮ್ಮ ಬದುಕಿನ ಸುತ್ತ ಹೆಣೆದುಕೊಂಡಿರುವ ವಿಷಯ ಸಂಗ್ರಹ. ಕಾವ್ಯ ಸೃಜನಶೀಲ ಪ್ರತಿಭೆಯ ಫಲವಾಗಿ ಪರಿಣಮಿಸಿದರೆ ಶಾಸ್ತ್ರ ಪಾಂಡಿತ್ಯದ ಎಚ್ಚರಿಕೆ ಘಂಟೆಯಾಗಿ ಪರಿಣಮಿಸುತ್ತದೆ. ಶಾಸ್ತ್ರ ಪ್ರಜ್ಞೆಯು ಪ್ರತಿಭೆ, ಪರಿಶ್ರಮ, ಸತತ ಅಭ್ಯಾಸ ಮತ್ತು ಪ್ರಯೋಗಾತ್ಮಕ ಅನುಭವ ಜನ್ಯ ಆಲೋಚನಾ ಕ್ರಮಗಳಿಂದ ಬರುವಂತಹದ್ದು. ಹೀಗಾಗಿ ಕಾವ್ಯ ಮತ್ತು ಶಾಸ್ತ್ರಗಳೆರಡು ನಮ್ಮ ಬದುಕಿಗೆ ದಾರಿ ತೋರಿಸುವ ಎರಡು ಕಣ್ಣುಗಳಿದ್ದಂತೆ.

ಆಧುನಿಕ ಸೌಲಭ್ಯಗಳಿಲ್ಲದ ಅಂದಿನ ದಿನಮಾನಗಳಲ್ಲಿ ತಮ್ಮದೇ ಆದ ಅನುಭವ, ಆದರ್ಶ ಚಿಂತನೆಗಳ ಮೂಲಕ ಜ್ಞಾನ ಶಾಖೆಯನ್ನು ಸೃಷ್ಟಿಸಿಕೊಂಡಿದ್ದ ಇವರು ಬುದ್ಧಿಯ ವಿಕಾಸವಾದಂತೆ ಆರೋಗ್ಯಪೂರ್ಣ ಸಾಮಾಜಿಕತೆಗೆ ಅನುಗುಣವಾಗಿ ಪೋಷಣೆ ನೀಡಬಲ್ಲಂತಹ ಶಾಸ್ತ್ರ ಸಮ್ಮತವಾದ ಹಾಗೂ ಸೂತ್ರಬದ್ಧವಾದ ಕೃತಿಗಳನ್ನು ರಚಿಸುವತ್ತ ಗಮನಹರಿಸಿದ್ದುಂಟು. ನಂತರ ತಮ್ಮ ಅನುಕೂಲಕ್ಕಾಗಿ ಶಾಸ್ತ್ರಗಳನ್ನು ವಿಭಾಗಿಸಿಕೊಂಡು ಲೌಕಿಕ ಮತ್ತು ಆಗಮಿಕ ಎಂಬೆರಡು ರೀತಿಯಲ್ಲಿ ಪರಂಪರಾನುಗತವಾಗಿ ಕೃತಿಗಳನ್ನು ರಚಿಸಿಕೊಂಡು ಬಂದಿರುವುದನ್ನು ಕಾಣುತ್ತೇವೆ.

ಲೋಕೋಪಕಾರದಂಥ ಅನೇಕ ಶಾಸ್ತ್ರಗ್ರಂಥಗಳನ್ನು ನಿಜ ಜೀವನಕ್ಕೆ ಪೂರಕವಾಗುವ ಜ್ಞಾನದ ಹಿನ್ನೆಲೆಯಲ್ಲಿ ಮನುಷ್ಯ ಸೃಷ್ಟಿಸಿಕೊಂಡಿದ್ದಾನೆ. ಇಂತಹ ಆಲೋಚನಾ ಕ್ರಮದಿಂದಾಗಿ ಗಜಶಾಸ್ತ್ರ, ಸೂಪಶಾಸ್ತ್ರ, ಗೃಹಶಾಸ್ತ್ರ, ವೈದ್ಯಶಾಸ್ತ್ರ, ಕಾಮಶಾಸ್ತ್ರ, ಜ್ಯೋತಿಷ್ಯಶಾಸ್ತ್ರ, ರಟ್ಟಮತಶಾಸ್ತ್ರ, ಖಡ್ಗಶಾಸ್ತ್ರ, ನಕ್ಷತ್ರಫಲ, ಹೋರಾಶಾಸ್ತ್ರ, ಸಾಮುದ್ರಿಗಳಂತಹ ಅನೇಕ ಶಾಸ್ತ್ರಗಳು ಹುಟ್ಟಿಕೊಂಡವು. ಅಂತಹ ಶಾಸ್ತ್ರಗಳ ಪರಂಪರೆಯಲ್ಲಿ ಬರುವ ಪ್ರಮುಖವಾದ ಶಾಸ್ತ್ರವೇ ಅಶ್ವಶಾಸ್ತ್ರ.

ಆದಿ ಕಾಲದಲ್ಲಿ ಮನುಷ್ಯ ಅನಾಗರಿಕತೆಯ ಜೀವನದಿಂದ ಮುಕ್ತಿ ಹೊಂದಿದ ನಂತರ ಬೆಂಕಿಯನ್ನು ಕಂಡುಹಿಡಿದ. ಅಂದಿನಿಂದ ಪ್ರವೃತ್ತನಾಗುತ್ತ ಬಂದ. ಕೆಲವು ದಿನಗಳು ಗತಿಸಿದ ನಂತರ ತನ್ನ ಅನುಕೂಲಕ್ಕಾಗಿ ಕೃಷಿಯನ್ನೂ ಅವಲಂಬಿಸಿದ. ಕೃಷಿ ಕಾರ್ಯಗಳ ಉಪಯೋಗಕ್ಕಾಗಿ ಎತ್ತು, ಆಕಳು, ಎಮ್ಮೆ ಮುಂತಾದ ಪ್ರಾಣಿಗಳನ್ನು ಸಾಕತೊಡಗಿದ. ಅಂದಿನಿಂದ ಮನುಷ್ಯನಿಗೂ ಮತ್ತು ಸಾಕು ಪ್ರಾಣಿಗಳಿಗೂ ಅವಿನಾಭಾವ ಸಂಬಂಧ ಬೆಳೆಯಿತು. ಕೆಲವು ಸಾಕು ಪ್ರಾಣಿಗಳು ಅವನ ನಿತ್ಯ ಜೀವನದ ಒಡನಾಡಿಗಳಾಗಿದ್ದವು. ಅಂತಹವುಗಳಲ್ಲಿ ಆನೆ, ನಾಯಿ, ಕುರಿ, ಆಡು ಪ್ರಾಣಿಗಳು ಪ್ರಮುಖವಾದವು. ಅದರ ಜೊತೆಗೆ ಕುದುರೆಯಂತಹ ಪ್ರಾಣಿಗಳನ್ನು ಸಾಕತೊಡಗಿದ. ಅವನ ಸಹಚರಿಯಾದ ಕುದುರೆಯು ಮನುಷ್ಯನ ಜೀವನದೊಡನೆ ಹಾಸುಹೊಕ್ಕಾಗಿ ಬೆಸೆದುಕೊಂಡಿರುವುದನ್ನು ಕಾಣುತ್ತೇವೆ. ಇತಿಹಾಸವೇ ಆಗಲಿ, ನಾಗರಿಕತೆಯ ವಿಕಾಸದ ವಿಶ್ಲೇಷಣೆಯೇ ಆಗಲಿ, ಕುದುರೆಯ ಪ್ರಸ್ತಾಪ ಕಂಡುಬಂದಿರುವುದು ವೈಶಿಷ್ಟ್ಯಪೂರ್ಣವಾದದ್ದೇ. ಅನಾಗರಿಕತೆಯಿಂದ ಹಿಡಿದು ನಾಗರಿಕತೆಯವರೆಗೆ ಮಾನವನ ನಡೆಯಲ್ಲಿ ಆತನ ಪ್ರತಿಯೊಂದು ಹಂತದಲ್ಲಿ ಕುದುರೆಯಂತಹ ಪ್ರಾಣಿಯನ್ನೂ ಗುರುತಿಸಬಹುದು. ವೇದಗಳಲ್ಲಿ, ಉಪನಿಷತ್ತುಗಳಲ್ಲಿ ಮತ್ತು ಯಜ್ಞ ಯಾಗಾದಿಗಳ ಸಂದರ್ಭಗಳಲ್ಲಿ ಕುದುರೆಯನ್ನು ಬಳಸಿಕೊಂಡ ಉದಾಹರಣೆಗಳಿವೆ. ಹಾಗೆಯೇ ಸಾಕಲು, ಭಾರ ಹೊರಲು, ಸವಾರಿ ಮಾಡಲು, ಸಂದೇಶ ಕಳುಹಿಸಲು, ಯುದ್ಧದ ಪ್ರಮುಖ ಅಂಗವಾಗಿ ಬಳಸಿಕೊಂಡ ಉದಾಹರಣೆಗಳು ಇತಿಹಾಸ ಮತ್ತು ಸಾಹಿತ್ಯದುದ್ದಕ್ಕೂ ಕಂಡುಬರುತ್ತದೆ. ಅದರಂತೆ ವ್ಯವಸಾಯದ ನಾನಾ ಬಗೆಯ ಹತ್ತು ಹಲವು ಕೆಲಸಗಳನ್ನು ನಿರ್ವಹಿಸಲು ಕುದುರೆಯಂಥ ಉಪಯುಕ್ತ ಹಾಗೂ ಸರ್ವಶಕ್ತ ಪ್ರಾಣಿ ಇನ್ನೊಂದಿಲ್ಲ ಎಂದು ಹೇಳಬೇಕು.

೧.೨. ಅಧ್ಯಯನದ ಉದ್ದೇಶ, ವ್ಯಾಪ್ತಿ

ಕುದುರೆಯ ಪ್ರಾಚೀನ ಚರಿತ್ರೆಯನ್ನು ನಿರ್ದಿಷ್ಟವಾಗಿ ಗುರುತಿಸುವುದು ಸಾಧ್ಯವಾಗಿಲ್ಲ. ಆದರೆ ಅಪ್ರತ್ಯಕ್ಷ ನಿದರ್ಶನಗಳಿಂದ ಊಹಿಸಲು ಸಾಧ್ಯವಿದೆ. ಭೂಮಿಯ ಮೇಲೆ ಕುದುರೆ ಮಾನವನ ಉಗಮಕ್ಕಿಂತ ಅವೆಷ್ಟೋ ಶತಮಾನಗಳ ಮೊದಲೇ ಉದಯಿಸಿದ್ದರೂ ದೊರೆತಿರುವ ಪಳೆಯುಳಿಕೆಯ ಆಧಾರಗಳ ಹಿನ್ನೆಲೆಯಿಂದ ಕ್ರಿ.ಪೂ.ಸು. ೨೦೦೦-೩೦೦೦ ವರ್ಷಗಳಿಂದಾಚೆಗೆ ಸಿಂಧೂ ನಾಗರಿಕತೆಯ ಸಂಸ್ಕೃತಿ ಇತಿಹಾಸವನ್ನು ಶೋಧಿಸುವ ಸಂದರ್ಭದಲ್ಲಿ ಆರ್.ಡಿ.ಬ್ಯಾನರ್ಜಿ ಮತ್ತು ಮಾರ್ಷಲ್ ಎಂಬ ಪ್ರಾಚ್ಯ ಸಂಶೋಧನಾ ಅಧಿಕಾರಿಗಳ ಕ್ಷೇತ್ರಕಾರ್ಯದಿಂದ ಕುದುರೆಯ ಎಲುಬುಗಳು ದೊರೆತಿರುವ ಆಧಾರದಿಂದ ಮತ್ತು ಅವರ ಹೇಳಿಕೆಗಳಿಂದ ಗುರುತಿಸಬಹುದಷ್ಟೇ. ಈ ಹಿನ್ನೆಲೆಯಲ್ಲಿ ಅವಲೋಕಿಸಿದಾಗ

ಕುದುರೆಯು ಮಾನವನ ಆರಂಭದ ಎಲ್ಲಾ ಚಟುವಟಿಕೆಗಳಲ್ಲಿ ಸಂಗಾತಿಯಂತೆ ಸಹಕಾರಿಯಾಗಿರುವುದರಿಂದ ಜೀವನದ ಪ್ರಮುಖ ಭಾಗವಾಗಿ ರೂಪಗೊಂಡಿದೆ. ನಂತರ ಅದರ ಪಾಲನೆ, ಪೋಷಣೆಯು ಅವನ ದಿನನಿತ್ಯದ ಆದ್ಯ ಕರ್ತವ್ಯಗಳಲ್ಲೊಂದಾಗಿದ್ದು ಅವುಗಳ ಆರೋಗ್ಯ, ಚಿಕಿತ್ಸೆ ಮತ್ತು ಇತರ ಗುಣಲಕ್ಷಣಗಳನ್ನು ತಿಳಿದುಕೊಳ್ಳುವುದು ಅನಿವಾರ್ಯದ ಜೊತೆಗೆ ಅಗತ್ಯವು ಆಗಿತ್ತು. ಹಾಗಾಗಿ ಕುದುರೆಯ ದೇಹ, ಮನಸ್ಸು, ಆಹಾರ, ವೈದ್ಯೋಪಚಾರ, ಪೋಷಣೆ, ಆರೈಕೆ, ವಿಧಿವಿಧಾನ, ನಿಯಂತ್ರಣ ಮುಂತಾದ ಗುಣಲಕ್ಷಣ ಸ್ವಭಾವಗಳನ್ನು ಅರಿತು ಅವುಗಳಿಗೆ ಪರಿಹಾರ ಕ್ರಮಗಳನ್ನು ತನ್ನ ಅನುಭವದ ಮೂಲಕ ಕರಗತ ಮಾಡಿಕೊಳ್ಳತೊಡಗಿದ. ಕಾಲಾಂತರದಲ್ಲಿ ಇಂತಹ ಅನುಭವಗಳು ವಿಸ್ತಾರವಾಗುತ್ತ ವೈವಿಧ್ಯಮಯತೆ ಬೆಳೆದು ಒಂದು ಶಿಸ್ತುಬದ್ಧವಾದ ಶಾಸ್ತ್ರ ಚೌಕಟ್ಟಿಗೆ ಒಳಪಟ್ಟ ಕೃತಿಗಳಾಗಿ ಮಾರ್ಪಾಟುಗೊಂಡ ಬರವಣಿಗೆಗಳೇ ಶಾಸ್ತ್ರವಾಗಿ ರೂಪುಗೊಂಡವು. ಇವುಗಳಲ್ಲಿ ಗಜ, ಅಶ್ವ ಮುಂತಾದ ಉಪಯುಕ್ತ ಸಹಚರಿ ಪ್ರಾಣಿಗಳನ್ನು ಕುರಿತು ಅಂದಿನಿಂದ ಇಂದಿನವರೆಗೂ ಕೃತಿಗಳನ್ನು ರಚಿಸಿಕೊಂಡು ಬಂದಿರುವುದನ್ನು ಕಾಣುತ್ತೇವೆ.

ಆಧುನಿಕ ಸಂದರ್ಭದಲ್ಲಿ ಕುದುರೆಯ ಮುಂದುವರಿಕೆಯ ಪ್ರಭಾವವನ್ನು ಏಷ್ಯ ಖಂಡದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಕಾಣುತ್ತೇವೆ. ಉತ್ತರ ಮಧ್ಯ ಏಷ್ಯದಲ್ಲಿ ಕುದುರೆಯ ಪೂರ್ವ ಪೀಳಿಗೆಯು ಉಗಮವಾಗಿ ನಂತರ ಅಲ್ಲಿಂದ ಮೂರು ಪ್ರಧಾನ ಕವಲುಗಳಾಗಿ ಒಡೆದು ಒಂದು ಪೂರ್ವಕ್ಕೆ, ಇನ್ನೊಂದು ಪಶ್ಚಿಮಕ್ಕೆ, ಮೊಗದೊಂದು ನೈರುತ್ಯಕ್ಕೆ ವಲಸೆ ಹೋಗಿರುವುದು ಇತಿಹಾಸದಿಂದ ಕಂಡುಕೊಂಡ ಸತ್ಯವಾಗಿದೆ. ಪೂರ್ವಕ್ಕೆ ಹೋದ ಕವಲು ಮುಂದಿನ ದಿನಗಳಲ್ಲಿ ಚೀನಾ ಹಾಗೂ ಮಂಗೋಲಿಯನ್ ಜಾತಿಯ ಕುದುರೆಗಳಿಗೆ ಜನ್ಮ ನೀಡಿದರೆ, ಪಶ್ಚಿಮದ ಕವಲು ಇಡೀ ಯೂರೋಪ್ ಖಂಡವನ್ನು ವ್ಯಾಪಿಸಿ ಅಲ್ಲಿ ಹಲವಾರು ಬಗೆಯ ವಿವಿಧ ಜಾತಿಗಳ ಕುದುರೆಗಳಿಗೆ ಜನ್ಮ ನೀಡಿದವು. ನೈರುತ್ಯದ ಕವಲು ಏಷ್ಯ ಮೈನರ್, ಇರಾನ್, ಭಾರತ, ಅರೇಬಿಯಾ, ಆಫ್ರಿಕಾ ಈ ವಲಯಗಳಲ್ಲಿ ಕುದುರೆಯ ನಾನಾ ತಳಿಗಳ ಜನ್ಮಕ್ಕೆ ಕಾರಣವಾದವು. ಇಂದು ನಾಗರಿಕತೆ ವರ್ಧಿಸಿದಂತೆ ಕುದುರೆ ಆತನ ನಿಕಟ ಸಹವರ್ತಿಯಾಗಿ ವಿಕಾಸಗೊಂಡಿದ್ದು, ಪಳಗಿದ ಆಧುನಿಕ ಕುದುರೆಗಳು ಹವೆಯ ತೀವ್ರ ಏರಿಳಿತಗಳನ್ನು ವಿರೋಧಿಸಿ ಯಾವುದೇ ಸನ್ನಿವೇಶ ಮತ್ತು ಪರಿಸರಕ್ಕೆ ಹೊಂದಿಕೊಳ್ಳಬಲ್ಲ ಶಕ್ತಿ ಸಾಮರ್ಥ್ಯವನ್ನು ಹೊಂದಿವೆ.

ಪ್ರಸ್ತುತ ಅಧ್ಯಯನವು ಅಶ್ವಶಾಸ್ತ್ರ ಸಾಹಿತ್ಯ ಕುರಿತು ಸಮಗ್ರವಾಗಿ, ತುಲನಾತ್ಮಕವಾಗಿ ವಿಶ್ಲೇಷಿಸುವುದು ಮಹಾಪ್ರಬಂಧದ ಮುಖ್ಯ ಉದ್ದೇಶವಾಗಿದೆ. ಅಲ್ಲದೇ ಇದರ ಜೊತೆಗೆ ಒಂದು ಪ್ರಾಣಿಯ ಸುತ್ತ ಹೆಣೆದುಕೊಂಡಿರುವ ನಂಬಿಕೆ, ಆಚರಣೆ, ವದಂತಿ, ಉಪಯುಕ್ತತೆ ಮಹತ್ವವನ್ನು ಗುರುತಿಸುವ ಮೊಗದೊಂದು ಪ್ರಯತ್ನವನ್ನು ಮಾಡಲಾಗಿದೆ.

ಕಾವ್ಯಶಾಸ್ತ್ರ ಪುರಾಣ ಸಮ್ಮಿತವಾದ ಅನೇಕ ಗ್ರಂಥಗಳ ಕುರಿತು ನಮ್ಮಲ್ಲಿ ಸಾಧ್ಯವಾದಷ್ಟು ಸಂಶೋಧನೆ ನಡೆದಿದೆ. ಅದರಂತೆ ವ್ಯಾಕರಣ, ಅಲಂಕಾರ, ಛಂದಸ್ಸು ಕುರಿತು ಅನೇಕ ಕೃತಿಗಳು ಬೆಳಕು ಕಂಡಿವೆ. ಜೊತೆಗೆ ಆ ಕೃತಿಗಳ ರಚನೆಕಾರರ ಕುರಿತು ಸಹ ಅಧ್ಯಯನಗಳು ನಡೆದಿವೆ. ಉದಾಹರಣೆಗೆ

ನಾಗವರ್ಮ ಒಂದು ಅಧ್ಯಯನ, ಕೇಶಿರಾಜ ಒಂದು ಅಧ್ಯಯನ ಮುಂತಾದವುಗಳು ಹಾಗೆಯೇ ಛಂದಸ್ಸು ಕುರಿತು ತೀ.ನಂ.ಶ್ರೀಯವರ ಭಾರತೀಯ ಕಾವ್ಯಮೀಮಾಂಸೆ, ಡಿ.ಎಸ್.ಕರ್ಕಿಯವರ ಕನ್ನಡ ಛಂದೋವಿಕಾಸ, ಟಿ.ವಿ.ವೆಂಕಟಾಚಲಶಾಸ್ತ್ರಿಯವರ ಛಂದೋಂಬುದಿ, ಕೆ.ವಿ.ನಾರಾಯಣರವರ ಧ್ವನ್ಯಾಲೋಕ ಒಂದು ಅಧ್ಯಯನ ಮುಂತಾದವುಗಳು. ಹಾಗೆಯೇ ಸಂಶೋಧನಾ ಪ್ರಬಂಧಗಳ ಜೊತೆಗೆ ವ್ಯಾಕರಣ, ಛಂದಸ್ಸು, ಕಾವ್ಯಮೀಮಾಂಸೆ ಕುರಿತು ಕೃತಿಗಳನ್ನು ರಚನೆ ಮಾಡಿದ್ದುಂಟು. ಇನ್ನೂ ಕಾವ್ಯ, ವ್ಯಾಕರಣ, ಅಲಂಕಾರ ಹೊರತುಪಡಿಸಿ ಹುಟ್ಟಿಕೊಂಡಿರುವ ಶಾಸ್ತ್ರ ಕೃತಿಗಳಾದ ವೈದ್ಯಶಾಸ್ತ್ರ, ಕಾಮಶಾಸ್ತ್ರ, ಗಜಶಾಸ್ತ್ರ, ಜೋತಿಷ್ಯಶಾಸ್ತ್ರ, ರಟ್ಟಮತಶಾಸ್ತ್ರ ಕುರಿತು ಕೃತಿಗಳು ಬಂದಿದ್ದರೂ ಸಹಿತ ವ್ಯವಸ್ಥಿತವಾದ ಸಂಶೋಧನೆ ನಡೆದಿಲ್ಲವೆಂದೇ ಹೇಳಬೇಕು. ಕೆಲವೇ ಬೆರಳೆಣಿಕೆಯಷ್ಟು ಸಂಶೋಧನೆಗಳು ಇತ್ತೀಚಿಗೆ ನಡೆದಿವೆ ಹಾಗೂ ನಡೆಯುತ್ತಿವೆ. ಉದಾಹರಣೆಗೆ ಎ.ರಂಗಸ್ವಾಮಿ ಅವರ ಲೋಕೋಪಕಾರ ಒಂದು ಅಧ್ಯಯನ, ಬಿ.ಮಂಜುಳಾ ಅವರ ಕನ್ನಡದಲ್ಲಿ ಸೂಪಶಾಸ್ತ್ರ ಸಾಹಿತ್ಯ ಇಂತಹ ಕೆಲವೊಂದು ಉದಾಹರಣೆ ಬಿಟ್ಟರೆ ಈಗೀಗ ಇವುಗಳ ಕುರಿತು ಕನ್ನಡ ವಿಶ್ವವಿದ್ಯಾಲಯ ಈ ದಿಶೆಯತ್ತ ಕಾರ್ಯಪ್ರವೃತ್ತವಾಗಿರುವುದು ಸಂತೋಷದ ಸಂಗತಿ. ಅದರಂತೆ ಕೃಷಿಶಾಸ್ತ್ರ ಸಾಹಿತ್ಯ ಕುರಿತು ಶ್ರೀ ಎಚ್.ವಿರೂಪಾಕ್ಷಪ್ಪ, ವೈದ್ಯಶಾಸ್ತ್ರ ಕುರಿತು ಶ್ರೀ ಈರಣ್ಣ ಹುರುಳಿ ಅಧ್ಯಯನ ಕೈಗೊಂಡಿರುವುದು ಈ ಕ್ಷೇತ್ರಕ್ಕೆ ಸಾಧ್ಯವಾದಷ್ಟು ಸಂಮೃದ್ಧಿ ಹೊಂದಬಹುದು ಎಂಬ ಆಶಯ ಇಲ್ಲಿದೆ.

೧.೩. ಅಧ್ಯಯನದ ಆಕರಗಳು

ಅಶ್ವಶಾಸ್ತ್ರ ಎಂದಾಕ್ಷಣ ನಮಗೆ ಅಭಿನವಚಂದ್ರ ವಿರಚಿತ ಅಶ್ವಶಾಸ್ತ್ರ ಎಂಬ ಕೃತಿ ನೆನಪಿಗೆ ಬರುವುದು ಸಹಜ. ಯಾಕೆಂದರೆ ಈ ಕೃತಿಯಲ್ಲಿ ಕುದುರೆಗೆ ಸಂಬಂಧಿಸಿದ ಅನೇಕ ಅಂಶಗಳು ಕರಾರುವಕ್ಕಾಗಿ ಕವಿ ಚಿತ್ರಿಸಿರುವುದು ಕಂಡುಬರುತ್ತದೆ. ಈ ಕೃತಿಯ ಸಮಗ್ರತೆಯಷ್ಟು ಇನ್ನೊಂದು ಕೃತಿ ಬರಲಿಲ್ಲ. ಬಹುಶಃ ಈ ಅಂಶವೇ ಪದೇ ಪದೇ ಮರುಕಳಿಸುವಂತೆ ಮಾಡಿದೆ ಎಂದು ಹೇಳಬೇಕಾಗುತ್ತದೆ. ಇದನ್ನು ಹೊರತು ಪಡಿಸಿದರೆ ಹಿರಿಯಣ್ಣ ಕವಿಯ ಹಯರತ್ನಶ್ರೇಣಿ. ಈ ಕೃತಿಯಲ್ಲಿ ಕುದುರೆಯ ಲಕ್ಷಣಗಳು. ಶುಭ ಅಶುಭ ನಿರ್ದೇಶನ, ವೈದ್ಯೋಪಚಾರದ ವಿವರಗಳು ಮತ್ತು ಚಿಕಿತ್ಸೆ ಕುರಿತು ಸಂಕ್ಷಿಪ್ತ ರೀತಿಯಲ್ಲಿ ಸರಳೀಕರಣಗೊಳಿಸಿರುವುದನ್ನು ಕಾಣುತ್ತೇವೆ. ಹಾಗೆಯೇ ಮಲೆಯೂರಿನ ಪದ್ಮಣ ಪಂಡಿತನ ಹಯಶಾಸ್ತ್ರಸಾರ ಸಮುಚ್ಚಯ ಕೃತಿಯೊಂದಿದ್ದು, ಇದರ ಹಸ್ತಪ್ರತಿ ಜೀರ್ಣಾವಸ್ಥೆಯಲ್ಲಿರುವುದರಿಂದ ಅಸ್ಪಷ್ಟ ವಿವರ ಸಿಗುತ್ತದೆ. ರಾಮಚಂದ್ರಕವಿಯ ಅಶ್ವಶಾಸ್ತ್ರ ಗದ್ಯ ರೂಪದಲ್ಲಿದ್ದು, ಅಧ್ಯಯನ ಯೋಗ್ಯವಾದ ಕುದುರೆಯ ನಾನಾ ಮುಖಗಳನ್ನು ಪರಿಚಯಿಸುತ್ತದೆ. ಸೋದೆಯ ಸದಾಶಿವರಾಯನ ಸದಾಶಿವ ನೀತಿ ಕುದುರೆಯ ಲಕ್ಷಣ ಕುರಿತು ಮಾತ್ರ ಮಾಹಿತಿಯನ್ನು ಒದಗಿಸುತ್ತದೆ. ಅಶ್ವಪರೀಕ್ಷೆ ಸಚಿತ್ರ ಅಪ್ರಕಟಿತ ಕೃತಿ. ಇದು ಕುದುರೆಯ ಲಕ್ಷಣವನ್ನು ಚಿತ್ರ ಸಮೇತ ಚಿತ್ರಿಸುತ್ತದೆ. ಶಾಲಿಹೋತ್ರನ ಹಯ ಆಯುರ್ವೇದ, ಹೇಮಸೂರಿಯ ಅಶ್ವಶಾಸ್ತ್ರ ಇವು ಕುದುರೆಯ ಕುರಿತು ಯಥಾರ್ಥವಾದ ಮಾಹಿತಿಯನ್ನು ಒದಗಿಸುತ್ತದೆ. ಇನ್ನೂ ಅನುಷಂಗಿಕ ಕೃತಿಗಳಾದ ಚಾವುಂಡರಾಯನ ಲೋಕೋಪಕಾರ, ಚಂದ್ರರಾಜನ ಮದನತಿಲಕ, ಸರ್ವಜ್ಞ ಸೋಮೇಶ್ವರನ ಮಾನಸೋಲ್ಲಾಸ, ಕೆಳದಿ ಬಸವರಸನ

ಶಿವತತ್ತ್ವರತ್ನಾಕರ, ಮುಮ್ಮಡಿ ಕೃಷ್ಣರಾಜ ಒಡೆಯರ ಸೌಗಂಧಿಕಾ ಪರಿಣಯ, ಅಶ್ವಶಾಸ್ತ್ರಕ್ಕೆ ಸಂಬಂಧಿಸಿದ ಶಾಸನಗಳು, ದಿನಚರಿಗಳು, ಕಾವ್ಯಗಳಾದ ಚಂಪೂ, ವಚನ, ರಗಳೆ, ಷಟ್ಪದಿ, ತ್ರಿಪದಿ ಮುಂತಾದ ಕೃತಿಗಳಲ್ಲಿ ಉಲ್ಲೇಖಿತಗೊಂಡ ಕುದುರೆಯ ವಿವರಗಳನ್ನು ಅಧ್ಯಯನಕ್ಕೆ ಬಳಸಿಕೊಂಡು ಸಮಗ್ರತೆಯನ್ನು ಕಲ್ಪಿಸಲಾಗಿದೆ. ಇದರ ಜೊತೆಗೆ ಜಾನಪದ ನಂಬಿಕೆ, ಆಚರಣೆ, ಆರಾಧನೆ ಮುಂತಾದವುಗಳನ್ನು ಗಮನದಲ್ಲಿಟ್ಟುಕೊಂಡು ವ್ಯಾಪಕವಾದ ಸ್ವರೂಪವನ್ನು ಅಧ್ಯಯನಕ್ಕೆ ಕೊಡಲಾಗಿದೆ. ಇಂತಹ ಮಹತ್ವದ ಉದ್ದೇಶವೇ ಮಹಾಪ್ರಬಂಧದ ಆಶಯವಾಗಿದೆ.

೧.೪. ಅಧ್ಯಯನದ ಸ್ವರೂಪ

ಕನ್ನಡ ಸಾಹಿತ್ಯದಲ್ಲಿ ಕುದುರೆಯ ಕಲ್ಪನೆ ಸಿಂಧುನಾಗರೀಕತೆಯಿಂದ ಹಿಡಿದು, ಕನ್ನಡ ಕಾವ್ಯ, ಪುರಾಣಗಳು, ಶಾಸನಗಳು, ದಿನಚರಿಗಳು, ಸಾಮಾಜಿಕ ಆಚರಣೆ ನಂಬಿಕೆಗಳು, ಹಬ್ಬಹರಿದಿನಗಳು, ಯಜ್ಞಯಾಗಾದಿಗಳು ಮುಂತಾದ ಸಂದರ್ಭದಲ್ಲಿ ಕುದುರೆಯು ಬಳಕೆಗೊಂಡಿರುವುದನ್ನು ಕಾಣುತ್ತೇವೆ. ಅಧ್ಯಯನ ದೃಷ್ಟಿಯಿಂದ ಶಾಸ್ತ್ರಕಾರರು ರಚಿಸಿದ ಪ್ರಮುಖ ಆಕರ ಪರಿಕರಗಳ ಮೂಲಕ ಒಂದನೆಯ ಅಧ್ಯಾಯದಲ್ಲಿ ಒಟ್ಟು ಪ್ರಬಂಧವನ್ನು ಶಾಸ್ತ್ರ ಚೌಕಟ್ಟಿಗೆ ಅಳವಡಿಸುವುದರ ಮೂಲಕ ಸಮೀಕ್ಷೆ ಮಾಡಲಾಗಿದೆ.

ಅಧ್ಯಾಯ ಎರಡರಲ್ಲಿ ಲೌಕಿಕಶಾಸ್ತ್ರ ಸಾಹಿತ್ಯ ಪರಂಪರೆ ಕುರಿತು ವಿವರ ಪೂರ್ಣವಾಗಿ ವಿಶ್ಲೇಷಿಸಲಾಗಿದೆ. ಲೌಕಿಕಶಾಸ್ತ್ರ ಬೆಳೆದು ಬಂದ ಬಗೆ ವಿವಿಧ ಕೃತಿಗಳ ಹಿನ್ನೆಲೆಯಲ್ಲಿ ಚರ್ಚಿಸಲಾಗಿದೆ. ಶಾಸ್ತ್ರಸಾಹಿತ್ಯದಲ್ಲಿ ಪ್ರಮುಖವಾಗಿ ಲೌಕಿಕ ಮತ್ತು ಅಲೌಕಿಕ ಎಂದು ವಿಭಾಗಿಸಿ, ಲೌಕಿಕ ಸಾಹಿತ್ಯವನ್ನು ಮುಖ್ಯವಾಗಿ ಗುರುತಿಸಲಾಗಿದೆ. ಅಧ್ಯಯನ ಮುಖ್ಯವಾಗಿ ಶಾಸ್ತ್ರ ಸಾಹಿತ್ಯಕ್ಕೆ ಮೀಸಲಾಗಿರುವುದರಿಂದ ಇದಕ್ಕೆ ಪೂರಕವಾಗಿ ರಚನೆಗೊಂಡ ಶಾಸ್ತ್ರ ಕೃತಿಗಳನ್ನು ಗುರುತಿಸುವುದು ಸೂಕ್ತ. ಈ ಹಿನ್ನೆಲೆಯಲ್ಲಿ ವ್ಯಾಪಕವಾದ ಅಧ್ಯಯನಕ್ಕೆ ಮಹತ್ವ ಕೊಡಲಾಗಿದೆ.

ಅಧ್ಯಾಯ ಮೂರು ಅಶ್ವಶಾಸ್ತ್ರ ಸಾಹಿತ್ಯದ ಪರಿಚಯಾತ್ಮಕ ಅಧ್ಯಯನಕ್ಕೆ ಮೀಸಲಾಗಿದೆ. ಮೊದಲ ಭಾಗವಾಗಿ ಅರ್ಥ ಸ್ವರೂಪ ಪರಂಪರೆ ಕುರಿತು ಚರ್ಚಿಸಲಾಗಿದೆ. ಕ್ರಿ.ಪೂ. ೪೦೦೦ ವರ್ಷಗಳಿಂದ ಹಿಡಿದು ವೇದ, ಪುರಾಣ, ಆಗಮ, ಕಾವ್ಯ ಪುರಾಣ, ಶಾಸನ, ದಿನಚರಿಗಳಲ್ಲಿ ಉಲ್ಲೇಖಗೊಂಡ ಕುದುರೆಯ ಉಪಯುಕ್ತ ಅಂಶಗಳ ಕುರಿತು ವಿವರಿಸಲಾಗಿದೆ. ಹಾಗೆಯೇ ಎರಡನೆಯ ಹಂತವಾಗಿ ಪ್ರಧಾನ ಕೃತಿಗಳು ಅನುಷಂಗಿಕ ಕೃತಿಗಳು. ಇತರೆ ಎಂದು ವಿಭಾಗಿಸಿಕೊಂಡು ಕೃತಿಯ ಕರ್ತೃ, ಕಾಲ, ಅವುಗಳ ಆಶಯ ಪಡೆದುಕೊಂಡ ವಿವರ, ಮಹತ್ವ, ವೈಶಿಷ್ಟ್ಯತೆ ಕುರಿತು ವಿಶ್ಲೇಷಿಸಲಾಗಿದೆ. ಈ ಹಿಂದೆ ಗುರುತಿಸಿದ ಆಕರ ಗ್ರಂಥಗಳನ್ನು ಸ್ಥೂಲವಾಗಿ ಪರಿಚಯಿಸಿ ಚರ್ಚೆಗೆ ಒಳಪಡಿಸುವುದರ ಮೂಲಕ ಸತ್ಯತೆಯನ್ನು ಕಂಡುಕೊಳ್ಳಲಾಗಿದೆ.

ಅಧ್ಯಾಯ ನಾಲ್ಕು ಅಶ್ವ ಪ್ರಭೇದಗಳು, ಗುಣ ಸ್ವಭಾವ, ಆರೈಕೆ, ಬಳಕೆ ವಿಧಿ ವಿಧಾನ ಕುರಿತು ಸಮಗ್ರವಾಗಿ ಚರ್ಚಿಸಿ ವಿಶ್ಲೇಷಣೆ ಮಾಡಲಾಗಿದೆ. ಅಶ್ವ ಪ್ರಭೇದಗಳನ್ನು ಪ್ರಾಂತ, ವರ್ಣ ಪ್ರಭೇದಗಳನ್ನಾಗಿ

ವಿಭಾಗ ಮಾಡಿಕೊಂಡು ಅಧ್ಯಯನ ಮಾಡಲಾಗಿದೆ. ಶಾಸ್ತ್ರಕಾರರು ಗುರುತಿಸುವ ೫೪ ಕುದುರೆ ಉತ್ಪತ್ತಿ ಕ್ಷೇತ್ರಗಳಿದ್ದು, ಆಯಾ ಪ್ರಾಂತಗಳಲ್ಲಿ ಹುಟ್ಟಿದ ಕುದುರೆಗಳು ಗುಣ, ಜಾತಿ, ಸ್ವಭಾವವನ್ನು ಕುರಿತು ಶಾಸ್ತ್ರಕಾರರ ಅಭಿಮತ ಹಿನ್ನೆಲೆಯಲ್ಲಿ ವಿವರಿಸಲಾಗಿದೆ. ಶಾಲಿಹೋತ್ರ ಹೇಳುವ ಪೌರಾಣಿಕ ಅಧ್ಯಯನ ಇವತ್ತಿನ ಪ್ರಚಲಿತ ವಿದ್ಯಮಾನಕ್ಕೆ ಹೊಂದಿಕೊಳ್ಳುವುದಿಲ್ಲ. ಅಭಿನವ ಚಂದ್ರ ಹೇಳುವ ೫೪ ಜಾತಿ ಕುದುರೆಗಳು ಕೇವಲ ಪಟ್ಟಿಯೇ ಹೊರತು ವಿವರಣಾತ್ಮಕವಾದ ಅಧ್ಯಯನವಲ್ಲ. ಮಾನಸೋಲ್ಲಾಸಕಾರ ಕುದುರೆಯ ಜಾತಿಗಳು ೬೫ ಎಂದು ಹೇಳಿ, ೩೯ ನ್ನು ಗುರುತಿಸಿ ೨೬ರನ್ನು ಗುರುತಿಸದೇ ಇವು ಅಷ್ಟು ಉಪಯುಕ್ತವಾದವುಗಳಲ್ಲವೆಂದು ಹೇಳುವ ಕ್ರಮ ನಿಖರತೆಯನ್ನು ಸೂಚಿಸುವುದಿಲ್ಲ. ಇಂತಹ ಅನೇಕ ವಿಷಯಗಳ ಕುರಿತು ಅಧ್ಯಯನ ಮಾಡುವುದು ಮಹಾಪ್ರಬಂಧದ ಪ್ರಮುಖ ಅಂಶವಾಗಿದೆ.

ಅಶ್ವಗಳ ಜನನ ವಂಶ ಗುಣಲಕ್ಷಣಗಳನ್ನು ಗುರುತಿಸುವ ಸಂದರ್ಭದಲ್ಲಿ ಅಮೃತ, ಭಾಷ್ಪ, ವಹ್ನಿ, ದೇವತೆ, ಅಂಡಜ, ಗರ್ಭಾಶಯ, ಸಾಮವೇದ ಎಂದು ವಿಭಾಗಿಸಿಕೊಂಡು ಚರ್ಚಿಸುವುದರ ಮೂಲಕ ಪೌರಾಣಿಕ ಸ್ಪರ್ಶವನ್ನು ಪ್ರಬಂಧಕ್ಕೆ ಕೊಡಲಾಗಿದೆ. ಅದರ ಜೊತೆಗೆ ಪ್ರಾಚೀನ ಕಾಲದಲ್ಲಿ ಚಾತುರ್ ವರ್ಣಗಳು ಎಷ್ಟು ಪ್ರಚಲಿತವಿದ್ದವು ಎಂಬುದಕ್ಕೆ ಜಾತಿ ಹಿನ್ನೆಲೆಯಲ್ಲಿ ಕುದುರೆಯನ್ನು ಕುರಿತು ಚರ್ಚಿಸಿರುವುದು ಪ್ರಮುಖ ಅಂಶಗಳಲ್ಲೊಂದು. ಕುದುರೆ ವರ್ಣವನ್ನು ಕುರಿತು ವಿಶ್ಲೇಷಿಸುವಾಗ ಬಿಳಿ, ಕಪ್ಪು, ನಸುಗೆಂಪು, ಹಳದಿ ಎಂಬ ನಾಲ್ಕು ವರ್ಣಗಳಿಂದ ಶುದ್ಧ, ಮಿಶ್ರ ಎಂದು ಗುರುತಿಸುವ ಮೂಲಕ ಅವುಗಳಿಗೆ ವಿಶಿಷ್ಟವಾದ ಹೆಸರಿನಿಂದ ಕರೆಯಲಾಗಿದೆ.

ಕುದುರೆಯ ಜಾತಿಯನ್ನು ಕುರಿತು ಹೇಳುವ ಸಂದರ್ಭದಲ್ಲಿ ಶಾಸ್ತ್ರಕಾರರು ಸುಳಿ, ಬಣ್ಣ, ಶಕ್ತಿ, ಕಾಂತಿ, ವಾಸನೆ, ನಡಿಗೆ, ಸ್ವರ, ಆಕೃತಿ ಹಿನ್ನೆಲೆಯಲ್ಲಿ ಜಾತಿಯನ್ನು ಗುರುತಿಸುವ ಪ್ರಯತ್ನ ಮಾಡಿದ್ದಾರೆ. ಈ ಕುರಿತು ಚರ್ಚಿಸಲಾಗಿದೆ. ಕುದುರೆಯ ಆಯುಷ್ಯವನ್ನು ಒಟ್ಟು ಐದು ಸ್ಥಾನಗಳಿಂದ ಕಂಡುಕೊಳ್ಳಲಾಗಿದೆ. ಮುಖ, ಕೊರಳು, ಕಂಠ, ಹೆಗಲು, ಎದೆ ಇವುಗಳ ಮೂಲಕ ಆಯುಷ್ಯವನ್ನು ನಿರ್ಣಯಿಸುವುದನ್ನು ಅಧ್ಯಯನದ ಹಿನ್ನೆಲೆಯಲ್ಲಿ ಸ್ಪಷ್ಟಪಡಿಸಲಾಗಿದೆ. ಶಾರೀರಿಕ ಪ್ರಕೃತಿ ಕುರಿತು ಚರ್ಚಿಸುವ ಸಂದರ್ಭದಲ್ಲಿ ಗ್ರೀಷ್ಮ, ಹೇಮಂತ, ಶಿಶಿರ ಋತುವಿನಲ್ಲಿ ಶರೀರದಲ್ಲಾಗುವ ಬದಲಾವಣೆ ತೆಗೆದುಕೊಳ್ಳುವ ಆಹಾರ, ವಾತ, ಪಿತ್ತ, ಕಫಗಳಿಂದ ರೋಗಗಳು, ಉಪಶಮನ, ಜನ, ಜಾತಿಯನ್ನು ಸ್ಪಷ್ಟಪಡಿಸಲಾಗಿದೆ. ಶರೀರ ವ್ಯಕ್ತಿಯ ಬದುಕನ್ನು ನಿರ್ಧರಿಸುತ್ತದೆ. ಅದರಂತೆ ಇಲ್ಲಿ ಕುದುರೆಯ ಶರೀರದ ಒಟ್ಟು ಚಿತ್ರಣವನ್ನು ಮನಗಂಡ ಶಾಸ್ತ್ರಕಾರರು ದೇಹದ ಆರೋಗ್ಯ, ಸದೃಢತೆ ಅವುಗಳ ಇರುವಿಕೆಯನ್ನು ಗಮನಿಸಿ ಆಯುಷ್ಯವನ್ನು ನಿರ್ಧರಿಸುವ ಕ್ರಮ ಪ್ರಯೋಗಶೀಲಾತ್ಮಕವಾಗಿದೆ. ಅದರಂತೆ ಶರೀರದಲ್ಲಿ ಉದ್ಭವಿಸಿದ ರೇಖೆಗಳಿಂದ ಆಯುಷ್ಯವನ್ನು ನಿರ್ಧರಿಸಲಾಗಿದೆ.

ಶರೀರ ಲಕ್ಷಣವನ್ನು ಗುರುತಿಸುವಾಗ ಛಾಯೆಯನ್ನು ಪುಷ್ಪ, ಗಂಧ, ಕಿರಣ, ಧ್ವನಿ, ನಡೆ, ಪ್ರಭಾವ ವರ್ಣಗಳಿಂದ ಹೇಳಲಾಗಿದ್ದು, ಅಶ್ವದ ಗತಿಯು ಸಿಂಹ, ಹುಲಿ, ಆನೆ, ಹಂಸ, ನವಿಲು, ಶರಭ, ಎತ್ತು, ಬಭ್ರಾ, ಶಾಖಾಮೃಗ, ಉಷ್ಟ್ರ ಇವುಗಳ ಗತಿಗೆ ಹೋಲಿಕೆ ಮಾಡುವುದರ ಮುಖಾಂತರ ಕುದುರೆಯ

ಲಕ್ಷಣ, ಶುಭ ಅಶುಭವನ್ನು ನಿರ್ಧರಿಸಲಾಗಿದೆ. ದಂತದ ಕುರಿತು ವಿಶ್ಲೇಷಣೆ ಮಾಡುವಾಗ ಬಿದ್ದ ಹಾಗೂ ಎರಡನೆ ಬಾರಿ ಹುಟ್ಟಿದ ಹಲ್ಲುಗಳ ಪರೀಕ್ಷೆಯಿಂದ ಅಶ್ವಗಳ ವಯಸ್ಸನ್ನು ಕಂಡುಕೊಳ್ಳುವ ಪ್ರಯತ್ನ ಮಾಡಲಾಗಿದೆ. ಕುದುರೆಯ ಅಂಗ ರಚನೆ ಸ್ವಭಾವ : ದೇಹ ರಚನೆಯ ಹಿನ್ನೆಲೆಯಲ್ಲಿ ಗುರುತಿಸಲಾಗಿದೆ.

ಸುಳಿಗಳು ಮತ್ತು ಅಂಗಚೇಷ್ಟೆಗಳನ್ನು ಕುರಿತು ವಿಶ್ಲೇಷಿಸುತ್ತ ಸುಳಿಗಳು ಉದ್ಭವಿಸುವ ಕ್ರಮ ತಾಯಿಯ ಗರ್ಭಕೋಶದಲ್ಲಿ ಅಶ್ವ ಶಿಶುವು ಇರುವಾಗ ಶರೀರದ ಒಳಗೆ ವಾಯುವು ಅತಿ ವೇಗದಿಂದ ಸಂಚರಿಸುವ ಸಮಯದಲ್ಲಿ ಶಿಶುವಿನ ಶರೀರದ ರೋಮಗಳನ್ನು ಸುಳಿಯ ಆಕಾರದಲ್ಲಿ ತಿರುಗಿಸುತ್ತವೆ. ಹೀಗಾಗಿ ಅವುಗಳ ಬೆಳವಣಿಗೆ ಗೋಚರವಾಗುತ್ತದೆ ಎಂದು ಶಾಸ್ತ್ರಕಾರರು ಕಂಡುಕೊಂಡ ಸತ್ಯವಾಗಿದೆ. ಆವರ್ತ, ಶತಪಾದೀ, ಶುಕ್ತಿ, ಅವಲೀಢಕ, ಪಾದುಕಾ, ಪಾದುಕಾರ್ಧ, ಸಮೂಹ, ಮುಕುಲ ಎಂದು ಎಂಟು ಪ್ರಕಾರವಾಗಿ ಗುರುತಿಸಿ ಸಮಗ್ರವಾಗಿ ಚರ್ಚಿಸುವ ಪ್ರಯತ್ನ ಅಧ್ಯಯನದಿಂದ ಮಾಡಲಾಗಿದೆ.

ಕುದುರೆಗೆ ಬರುವ ರೋಗಗಳು: ಚಿಕಿತ್ಸೆ ಆರೈಕೆ ಕುರಿತು ಸಮಗ್ರವಾಗಿ ಚರ್ಚಿಸಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಪ್ರಮುಖ ರೋಗಗಳಾದ ಜ್ವರ, ಅತೀಜ್ವರ, ಪಿತ್ತಜ್ವರ, ವಾತಜ್ವರ, ಶ್ಲೇಷ್ಮಜ್ವರ, ಸನ್ನಿವಾತಜ್ವರ, ಸಂಕಜ್ವರ, ಲಘುಣಜ್ವರ, ಅಷ್ಟಜ್ವರ, ಮನ್ಮಥಜ್ವರ, ಪಿತ್ತ, ವಾತ, ಕಫ, ಶ್ಲೇಷ್ಮವಾತ, ಅಂಡವಾತ, ಶೂಲಿಗಳು ಸುಭೀಕ್ಷೆ ಮತ್ತು ಹೊಟ್ಟೆಶೂಲಿ, ಸುಭಿಕ್ಷವರ್ತರೋಗ, ಹೊಟ್ಟೆಶೂಲಿ, ಆಧ್ಮಾನರೋಗ, ಸಿಂಹಾಣಕ ರೋಗ, ಕಾಸ, ಬಿಕ್ಕಳಿಕೆ, ಬುಷಾವರ್ತಶೂಲಿ, ಸ್ತನ್ಯಾವರ್ತಶೂಲಿ, ಮೂತ್ರಶೂಲಿ, ಸಮಾವರ್ತಶೂಲಿ, ಎತ್ತಲ ಅತಿದಾಹ ಶೂಲಿ, ರಕ್ತಶೂಲಿ, ಕ್ರಿಮಿದೋಷಶೂಲಿ, ವರ್ನಿವೆ ಸದಾವರ್ತಶೂಲಿ, ಬಿಂಬಾವರ್ತಶೂಲಿ, ತ್ರಿಭ್ರಮಶೂಲಿ, ಖಾಸವರ್ತಶೂಲಿ, ಸುಖಾವರ್ತಶೂಲಿ, ಪ್ರಾಹಿಕದ ಶೂಲಿ, ಪುರೀಕ್ಷಶೂಲಿ, ಪಾನೀಯಶೂಲಿ, ಕ್ಷುಧಾವರ್ತಶೂಲಿ, ಗುಲ್ಮಿಕಾವರ್ತಶೂಲಿ, ರಂಜನಿಶೂಲಿ, ಕ್ರಿಮಿಶೂಲಿ, ಕ್ರಿಮಿದೋಷ, ಸರ್ವಶೂಲಿಗಳು, ರಸಾಜೀರ್ಣ, ಮುಷ್ಕ ಅಥವಾ ಚಾಲೀರೋಗ, ಉತ್ಕರ್ಣಕರೋಗ, ಸನ್ನಿವಾತ, ಮೈಬಾವು, ಸನ್ನಿಬಾವು, ಹೆಸರುಯದ ಬಾಹು, ವಿಷದೋಷ, ಮೂತ್ರ ಕೃಚ್ಛಕ ರಕ್ತಮೂತ್ರ, ಶೋಣುಕ ಮೇಹ, ವಜ್ರಕೀಟ ಸಿಮ್ಲಾವೇಣುವ್ಯಾಧಿ, ಶೂಷ್ಮರೋಗ, ದೀಪನ, ಉಷ್ಣರೋಗ, ವಾಯುರೋಗ, ಉಷ್ಣವಾಯು, ಸೆಂಬರೋಗ, ಖಾಸರೋಗ, ತಳರೋಗ, ಹರಿಣರೋಗ, ತಾಳು ರೋಗ ನಾಲಗೆಯ ರೋಗ, ಕೂರ್ಚರೋಗ, ಶೋಭೆರೋಗ, ಅತಿಸಾರ, ವಾತ ಅತಿಸಾರ, ರಕ್ತಾತಿಸಾರ, ಶ್ಲೇಷ್ಮಾತಿಸಾರ, ಅಂಡಬಾಹು, ಮುಷ್ಕನಾಳ, ಉಳೂಕ, ರಸದೋಷ, ಮೃಗ ಜೃಂಭ, ರಕ್ತಮೇಹ, ಸಿಂಹ್ವಾಣರೋಗ, ಜಲಗರರೋಗ, ನಾಳೀವ್ರಣ, ತುರಿಕೆಕಜ್ಜಿ, ಹುಣ್ಣುಗಳು, ಸರ್ವಹುಣ್ಣುಗಳು, ಪ್ರಾಣರಸಗಂಟುಗಳು, ಕುಂಟುತ್ತಿರುವ ರೋಗ, ತಳಶಾಸ್ತ್ರ, ರಸರೋಗ, ಮರುತ ಪಂಕರಸ, ಮನಸ್ತಂಭರಸ, ಯುತ್ರಿಕರಸ, ಉತ್ಕರಣ ವಾಯು, ಏಕಾಂಗವಾಯು, ಅಂಡವಾಯು, ಯಾವಿಲವಾಯು, ಉರಕರ್ನಿಕೆಯವಾಯು, ಮುಖರೋಗ, ವಾಯುಯುಗ್ಮ, ಚೂರಂಗವಾಯು, ರಸಕುಂದಿಗೆ, ಕರಕುಳಿಗಳ ಗ್ರಹ, ಗತ್ತ ಸಿಕ್ಕಿದ ರೋಗ ಮೂಲವ್ಯಾಧಿ, ಕಾಲುಬಾಯಿ, ಕಣ್ಣುರೋಗ, ಚಕ್ಷುರೋಗ, ಕಿವಿಯಬೇನೆ, ಕರ್ಣರೋಗ, ಗುದರೋಗ, ಉಂಡಗೆ ಮತ್ತು ಗಂಟುರೋಗ, ಕುದುರೆಗೆ ಹಾವು ಕಚ್ಚುವುದು, ಕುಳಿತ

ಕಚ್ಚುವುದು, ಚೇಳು ಕಚ್ಚುವುದು ಮುಂತಾದ ನೂರಾರು ರೋಗಗಳ ಕುರಿತು ವಿವಿಧ ಶಾಸ್ತ್ರ ಕೃತಿಗಳು ಮತ್ತು ಶಾಸ್ತ್ರಕಾರರ ಅಭಿಪ್ರಾಯದ ಹಿನ್ನೆಲೆಯಲ್ಲಿ ಚರ್ಚಿಸಿ ವಿಶ್ಲೇಷಿಸಲಾಗಿದೆ. ಹಾಗೆಯೇ ಕುದುರೆಯ ಪೋಷಣೆ, ಆರೈಕೆ ಕುರಿತು ವಿವರಿಸಲಾಗಿದ್ದು ಅವುಗಳಿಗೆ ಉಂಟಾಗುವ ಅಡ್ಡಿ, ಆತಂಕ, ಆರೈಕೆ, ಪೋಷಣೆ, ಉಪಚಾರ ಅಗತ್ಯ ಕ್ರಮಗಳನ್ನು ಅಧ್ಯಯನದ ಮೂಲಕ ಸ್ಪಷ್ಟಪಡಿಸಲಾಗಿದೆ. ಶುಭ ಅಶುಭವನ್ನು ಕುರಿತು ಚರ್ಚಿಸುವಾಗ ಸುಳಿ, ಬಣ್ಣ, ಆಕಾರಗಳ ಹಿನ್ನೆಲೆಯಲ್ಲಿ ವಿಶ್ಲೇಷಣೆ ಮಾಡಲಾಗಿದೆ. ರಾಜ ಮಹಾರಾಜರು ಯುದ್ಧದಲ್ಲಿ ಜಯ ಲಭಿಸಲೆಂದು ಅನೇಕ ಶಾಸ್ತ್ರೋಕ್ತ ಕ್ರಮಗಳಿಂದ ನೀರಾಜನ ವಿಧಿ ವಿಧಾನವನ್ನು ಕೈಗೊಂಡ ಕ್ರಮವನ್ನು ಅಧ್ಯಯನದ ಮೂಲಕ ಗುರುತಿಸಲಾಗಿದೆ. ಅಶ್ವಶಿಕ್ಷಣವನ್ನು ಯಾರು, ಯಾರಿಗೆ ಕೊಡಬೇಕು ಎಂತಹವರಿಗೆ ಕೊಟ್ಟರೆ ಒಳ್ಳೆಯದು ಎಂಬುದನ್ನು ಶಾಸ್ತ್ರಕಾರರ ವಿಚಾರಗಳಿಂದ ವಿಶ್ಲೇಷಿಸಲಾಗಿದೆ. ಹಾಗೆಯೇ ಪಳಗಿಸುವ ಕ್ರಮ, ಅಯೋಗ್ಯ ಕುದುರೆ ಲಕ್ಷಣ, ತಳಿ ಅಭಿವೃದ್ಧಿ ಮುಂತಾದವುಗಳನ್ನು ಕುರಿತು ಸಮಗ್ರ ಅಧ್ಯಯನ ಮಾಡುವುದರ ಮೂಲಕ ಶಾಸ್ತ್ರ ಸಾಹಿತ್ಯದ ಅಧ್ಯಯನಕ್ಕೆ ಪುಷ್ಟಿ ಸಿಗುವ ಪ್ರಯತ್ನ ಮಾಡಲಾಗಿದೆ.

ಅಧ್ಯಾಯ ಐದು ಕರ್ನಾಟಕ ಅಶ್ವ ಸಂಸ್ಕೃತಿಗೆ ಮೀಸಲಾಗಿದ್ದು, ಮೊದಲ ಹಂತದಲ್ಲಿ ಅಶ್ವಜಾತಿಯ ಪ್ರಮುಖ ಕುದುರೆಗಳಾದ ಬೊಲ್ಲ, ಪಂಚಕಲ್ಯಾಣ, ಚೇತಕ ಇವುಗಳು ರಾಜರ ಪ್ರೀತಿಗೆ ಪಾತ್ರವಾಗಿ ಹೋರಾಡಿ ಒಂದು ಸಂಪ್ರದಾಯ ಮತ್ತು ಸಂಸ್ಕೃತಿಯನ್ನು ಬಿಂಬಿಸುವ ಪ್ರಯತ್ನ ಮಾಡಿವೆ ಎಂಬುದನ್ನು ಚರ್ಚಿಸಲಾಗಿದೆ. ಬೊಲ್ಲ ಕುಮಾರರಾಮನ ಅತ್ಯಂತ ನಂಬಿಗೆಯ ಮತ್ತು ವಿಶ್ವಾಸಪೂರ್ಣವಾದ ಪ್ರಾಣಿಯಾಗಿದ್ದು, ಪ್ರತಿಯೊಂದು ಹಂತದಲ್ಲಿ ಜಯದ ಸಂಕೇತವಾಗಿ ಮೂಡಿ ಬಂದಿದೆ. ಅದೇ ರೀತಿ ಪಂಚಕಲ್ಯಾಣ ಉಪಯುಕ್ತವಾದ ಸರ್ವ ಲಕ್ಷಣವನ್ನು ಹೊಂದಿರುವ ಕುದುರೆ ಇದನ್ನು ಯಜ್ಞಯಾಗಗಳಿಂದ ಹಿಡಿದು ರಾಜಮಹಾರಾಜರ ಪಟ್ಟದ ವಿಶೇಷ ಕುದುರೆಯಾಗಿ ಗುರುತಿಸಿಕೊಂಡಿರುವುದನ್ನು ಕಾಣುತ್ತೇವೆ. ಅದರಂತೆ ಚೇತಕ ಕುದುರೆ ರಾಣಾಪ್ರತಾಪ ಸಿಂಹನ ಅತ್ಯಂತ ನಂಬುಗೆಯ ಶಕ್ತಿಶಾಲಿ ಕುದುರೆಯಾಗಿರುವುದು ಇತಿಹಾಸದಿಂದ ಕಂಡುಕೊಂಡ ಸತ್ಯವಾಗಿದೆ. ಇವುಗಳ ಚರ್ಚಾತ್ಮಕವಾದ ಅಧ್ಯಯನವನ್ನು ಪ್ರಬಂಧದಲ್ಲಿ ಮಾಡಲಾಗಿದೆ.

ಎರಡನೆಯ ಭಾಗದಲ್ಲಿ ಅಶ್ವಾಚರಣೆ ಕುರಿತು ಚರ್ಚಿಸಲಾಗಿದ್ದು, ಬಾಗಿಲ ಮೇಲೆ ಕುದುರೆ ಚಿತ್ರವಿರುವ ಪ್ರಸ್ತುತತೆ ಮತ್ತು ಮಹತ್ವ ಕುರಿತು ವಿವರಿಸಲಾಗಿದೆ. ಕುದುರೆ ಕುಣಿತ, ಒಂದು ಮನರಂಜನೆಯಾಗಿದ್ದು ಜೊತೆಗೆ ಆಚರಣೆಯ ಪ್ರತೀಕವಾಗಿದೆ. ಹಾಗೆಯೇ ತೇಜಮ್ಮ ಆರಾಧನೆ ಕುರಿತು ಚರ್ಚಿಸಲಾಗಿದ್ದು, ಕುದುರೆ ಪೂಜಿಸುವ ಮತ್ತು ಹಬ್ಬವಾಗಿ ಆಚರಿಸುವ ಕ್ರಮಗಳನ್ನು ವಿವಿಧ ಸಂಪ್ರದಾಯ ಮತ್ತು ಧಾರ್ಮಿಕ ಹಿನ್ನೆಲೆಯಲ್ಲಿ ಚರ್ಚಿಸುವ ಪ್ರಯತ್ನವಾಗಿದೆ. ಕುದುರೆಯ ಶಿಲ್ಪಗಳು ಶಾಸನಗಳಲ್ಲಿ, ವೀರಗಲ್ಲುಗಳಲ್ಲಿ ಅವುಗಳ ವರ್ಣನೆ, ಆಶಯ, ಅಭಿವ್ಯಕ್ತಿ, ಪ್ರಸ್ತುತತೆ, ಮಹತ್ವ ಕುರಿತು ವಿಶ್ಲೇಷಿಸಲಾಗಿದೆ. ಅದರಂತೆ ಕುದುರೆಯನ್ನು ರಾಜರು ಯಾವ ರೀತಿಯಾಗಿ ಬಳಸಿಕೊಂಡರು ಎಂಬುದನ್ನು ವಿವಿಧ ದೇಶಿ ವಿದೇಶಿ ವಿದ್ವಾಂಸರ ಹಿನ್ನೆಲೆ, ಅಭಿಪ್ರಾಯಗಳ ಮೂಲಕ ಕಂಡುಕೊಂಡ ಸತ್ಯವಾಗಿದೆ.

ಅಧ್ಯಾಯ ಆರು ಇದುವರೆಗೂ ಅಧ್ಯಯನ ಮಾಡಿದ ವಿವಿಧ ವಿಷಯಗಳ ಪುನರ್ ಅವಲೋಕನ ಮತ್ತು ಕಂಡುಕೊಂಡ ಫಲಿತಗಳನ್ನು ಸಮಾರೋಪದಲ್ಲಿ ಕ್ರೋಢಿಕರಿಸಿಕೊಂಡು ಅಧ್ಯಯನದ ಅಂತಿಮ ನಿರ್ಧಾರಗಳನ್ನು ಗುರುತಿಸುವ ಪ್ರಯತ್ನ ಮಾಡಲಾಗಿದೆ. ಅನುಬಂಧದಲ್ಲಿ ಕುದುರೆಗೆ ಸಂಬಂಧಿಸಿದ ಛಾಯಾಚಿತ್ರಗಳು, ಅಕಾರಾದಿಯಾದ ಗ್ರಂಥಋಣವನ್ನು ಕೊಡುವುದರ ಮೂಲಕ ಶಾಸ್ತ್ರ ಸಮ್ಮತವಾದ ಅಧ್ಯಯನಕ್ಕೆ ಸಮಾಪ್ತಿಯನ್ನು ಇರುವ ಇತಿಮಿತಿಯಲ್ಲಿ ಕಲ್ಪಿಸಿಕೊಡಲಾಗಿದೆ.

ಅಧ್ಯಾಯ ೨

ಲೌಕಿಕ ಶಾಸ್ತ್ರ ಸಾಹಿತ್ಯ ಪರಂಪರೆ

೨.೧. ಪ್ರವೇಶ

೨.೨. ಅರ್ಥ-ಸ್ವರೂಪ-ಪರಂಪರೆ

೨.೩. ಲೌಕಿಕ ಶಾಸ್ತ್ರ ಸಾಹಿತ್ಯ ಪರಿಚಯ

೨.೩.೧. ವೈದ್ಯಶಾಸ್ತ್ರ

೨.೩.೨. ವಿಷವೈದ್ಯಶಾಸ್ತ್ರ

೨.೩.೩. ಗೋವೈದ್ಯಶಾಸ್ತ್ರ

೨.೩.೪. ಜ್ಯೋತಿಷ್ಯಶಾಸ್ತ್ರ

೨.೩.೫. ಶಕುನಶಾಸ್ತ್ರ

೨.೩.೬. ಸಾಮುದಿಕಶಾಸ್ತ್ರ

೨.೩.೭. ಗಜಶಾಸ್ತ್ರ

೨.೩.೮. ಕಾಮಶಾಸ್ತ್ರ

೨.೩.೯. ಸೂಪಶಾಸ್ತ್ರ

ಅಧ್ಯಾಯ ೨

ಲೌಕಿಕ ಶಾಸ್ತ್ರ ಸಾಹಿತ್ಯ ಪರಂಪರೆ

೨.೧. ಪ್ರವೇಶ

ಕನ್ನಡ ಸಾಹಿತ್ಯ ಪರಂಪರೆಯನ್ನು ಅವಲೋಕಿಸಿದಾಗ ನಮ್ಮ ಗಮನಕ್ಕೆ ಕಾವ್ಯ ಕೃತಿಗಳ ರಚನೆ ಹೆಚ್ಚಿನ ಪ್ರಮಾಣದಲ್ಲಿ ಕಂಡು ಬರುತ್ತದೆ. ಕಾವ್ಯಗಳಲ್ಲಿ ಕವಿಯ ವರ್ಣನಾತ್ಮಕ ವಿಚಾರಗಳು, ಅಭಿವ್ಯಕ್ತಿ ಸ್ವಾತಂತ್ರ್ಯ, ಸೌಂದರ್ಯ ಪ್ರಜ್ಞೆ, ಕವಿತಾಚಾತುರ್ಯ ಮುಂತಾದ ವಿಷಯಗಳಿಗೆ ಹೆಚ್ಚು ಅವಕಾಶವಿರುವುದರಿಂದ ಆ ಕಡೆಗೆ ಕವಿಪುಂಗವರ ಪರಂಪರೆಯೇ ಬೆಳೆದು ಬಂದಿತು. ಶಾಸ್ತ್ರಕೃತಿಗಳು ಕ್ಲಿಷ್ಟಮಯ, ಕ್ರಮಬದ್ಧತೆ, ವರ್ಣನಾರಹಿತವಾಗಿರುವುದರಿಂದ ಓದುಗರ ಮನಸ್ಸನ್ನು ಗೆಲ್ಲಲಾರವು ಎಂಬ ಪರಿಕಲ್ಪನೆಯಿಂದ ಅವುಗಳತ್ತ ಗಮನಹರಿಸಲಿಲ್ಲವೆಂದು ಹೇಳಬಹುದು.

ಕಾವ್ಯಕೃತಿಗಳ ರಚನೆ ಅಗಾಧವಾಗಿ ಬೆಳೆದ ನಂತರ ಶಾಸ್ತ್ರ ಕೃತಿಗಳ ಕಡೆಗೆ ಗಮನಹರಿಸಿದ್ದುಂಟು. ಹಾಗೇ ನೋಡುವುದಾದರೆ ಸರ್ವಜನ ಸುಖಕರವಾಗಿರಲೆಂದು ಸದಾಶಯವನ್ನಿಟ್ಟುಕೊಂಡ ಪ್ರಮುಖ ಶಾಸ್ತ್ರಕವಿ ಚಾವುಂಡರಾಯ. ಈತ ತನ್ನ ಲೋಕೋಪಕಾರ ಕೃತಿಯಲ್ಲಿ ಶಾಸ್ತ್ರಕ್ಕೆ ಸಂಬಂಧಿಸಿದ ಹಲವು ಬಗೆಯ ದಿನನಿತ್ಯ ಜೀವನದ ಎಲ್ಲಾ ಸಂಗತಿಗಳನ್ನು ಶಾಸ್ತ್ರ ರೂಪದಲ್ಲಿ ಬರೆದನು. ಇದು ಮುಂದಿನ ಶಾಸ್ತ್ರಕಾರರಿಗೆ ತೋರುದೀಪದಂತಿದೆ.

ಹತ್ತನೆಯ ಶತಮಾನದಿಂದ ಹಿಡಿದು ಹನ್ನೆರಡನೆಯ ಶತಮಾನದ ಅಂತ್ಯದವರೆಗೂ ಶಾಸ್ತ್ರಕೃತಿಗಳ ರಚನೆ ಅಗಾಧ ಪ್ರಮಾಣದಲ್ಲಿ ಬೆಳೆದು ಬಂದಿತು. ಕನ್ನಡ ಸಾಹಿತ್ಯದ ಒಂದು ಭಾಗ ಶಾಸ್ತ್ರಸಾಹಿತ್ಯ ಎಂಬ ವಿಚಾರ ಅಂದಿನ ಕವಿಗಳಿಗೆ ಮತ್ತು ಶಾಸ್ತ್ರಕಾರರಿಗೆ ಮನದಟ್ಟಾದ ಹಿನ್ನಲೆಯಲ್ಲಿ ಇದಕ್ಕೆ ಹೆಚ್ಚಿನ ಮನ್ನಣೆ ಸಿಕ್ಕಿತು ಎಂದು ಹೇಳಬಹುದು. ಶಾಸ್ತ್ರ ಸಾಹಿತ್ಯವನ್ನು ಸೀಮಿತ ವ್ಯಾಪ್ತಿಗೆ ಒಳಪಡಿಸದೇ ವಿಶಾಲವಾದ ವ್ಯಾಪ್ತಿಯನ್ನು ಕಲ್ಪಿಸುವ ದೃಷ್ಟಿಯಿಂದ ಅಲಂಕಾರಶಾಸ್ತ್ರ, ವ್ಯಾಕರಣ, ನಿಘಂಟು, ಜ್ಞಾನಕೋಶ, ಧಾರ್ಮಿಕಶಾಸ್ತ್ರ ಎಂಬಿತ್ಯಾದಿ ಶಾಸ್ತ್ರಗಳನ್ನೊಳಗೊಂಡ ಅಲೌಕಿಕ ಕೃತಿಗಳು ರಚನೆಗೊಂಡು ಈ ಕ್ಷೇತ್ರವನ್ನು ಇಮ್ಮಡಿಗೊಳಿಸಿದವು. ಹೀಗಾಗಿ ವ್ಯಾಪಕವಾದ, ಸಮೃದ್ಧಸಾಹಿತ್ಯದಿಂದ ಕೂಡಿದ ಕೃತಿಗಳ ಪರಂಪರೆ ಬೆಳೆಯುತ್ತ ಬಂದಿತು.

'ಶಾಸ್ತ್ರಸಾಹಿತ್ಯ' ಎಂಬ ಸಮಾಸ ಪದದಲ್ಲಿ 'ಶಾಸ್ತ್ರ' ಮತ್ತು 'ಸಾಹಿತ್ಯ' ಎಂಬ ಎರಡು ಪದಗಳಿವೆ. ನಮ್ಮ ಪ್ರಾಚೀನ ಶಾಸ್ತ್ರಕಾರರೂ, ಕವಿಗಳೂ 'ಸಾಹಿತ್ಯ' ಎಂಬ ಶಬ್ದವನ್ನು 'ಕಾವ್ಯ' ಎಂಬ ಅರ್ಥದಲ್ಲಿಯೇ ಬಳಸುತ್ತ ಬಂದಿದ್ದಾರೆ. ಈಗಲೂ ಕೂಡ ಕವಿತೆ, ಕಾದಂಬರಿ, ಕಥೆ, ನಾಟಕ ಮುಂತಾದ ಮನೋರಂಜಕ ರಚನೆಗಳನ್ನು ಒಟ್ಟುಗೂಡಿಸಿ ಹೇಳುವಾಗ 'ಸಾಹಿತ್ಯ' ಎಂಬ ಶಬ್ದವನ್ನು ಕಾವ್ಯಾರ್ಥದಲ್ಲಿ ಬಳಸುತ್ತೇವೆ. 'ಪದ್ಯಕಾವ್ಯ'ವನ್ನು ಮಾತ್ರ 'ಕಾವ್ಯ' ಎಂದು ಹೇಳುತ್ತೇವೆ.

ಕಾವ್ಯಲಕ್ಷಣವನ್ನು ವಿವರಿಸುವ ಅನೇಕ ಸಂಸ್ಕೃತ ಗ್ರಂಥಗಳು ಸಾಹಿತ್ಯ ಮಿಮಾಂಸಾ, ಸಾಹಿತ್ಯ ದರ್ಪಣ, ಸಾಹಿತ್ಯಸಾರ, ಸಾಹಿತ್ಯರತ್ನಾಕರ ಎಂಬ ಹೆಸರುಗಳಿಂದಲೇ ಪ್ರಸಿದ್ಧವಾಗಿವೆ.

ನಾವು ತಿಳಿದುಕೊಂಡ ಮಟ್ಟಿಗೆ ಸಂಸ್ಕೃತದ ಬಹುಪಾಲು ಶಾಸ್ತ್ರ ಗ್ರಂಥಗಳೆಲ್ಲವೂ ಪದ್ಯರೂಪದಲ್ಲಿಯೇ ಇವೆ. ಬಹುಶಃ ಸಂಸ್ಕೃತದ ಮಾದರಿಯನ್ನು ಅನುಸರಿಸಿಕೊಂಡ ಕನ್ನಡ ಶಾಸ್ತ್ರಕಾರರೂ ಕೂಡ ಪದ್ಯರೂಪದಲ್ಲಿ ಕೃತಿ ರಚನೆ ಮಾಡಿರಬೇಕು. ಇಲ್ಲಿ ಪ್ರಮುಖವಾಗಿ ಗಮನಿಸಬೇಕಾದ ಅಂಶವೆಂದರೆ "ಕಾವ್ಯವನ್ನು ನೆನಪಿನಲ್ಲಿ ಇಟ್ಟುಕೊಳ್ಳಬೇಕಾದ ಅಗತ್ಯವಿಲ್ಲ. ಆದರೆ ಶಾಸ್ತ್ರಗಳ ವಿಷಯ ಹಾಗಲ್ಲ. ಮುದ್ರಣ ಸೌಕರ್ಯವಿಲ್ಲದಿದ್ದ ಹಿಂದಿನ ಕಾಲದಲ್ಲಿ ಶಿಷ್ಯರು ಶಾಸ್ತ್ರಜ್ಞಾನವನ್ನು ಗುರುಮುಖದಿಂದ ಕಲಿತು, ಬಾಯಿ ಪಾಠಮಾಡಿ ನೆನಪಿನಲ್ಲಿ ಉಳಿಸಿಕೊಳ್ಳಬೇಕಾದ ಅಗತ್ಯವಿದ್ದಿತು. ಆದ್ದರಿಂದ ಶಾಸ್ತ್ರ ವಿಷಯಗಳನ್ನು ಕೂಡಿದ ಮಟ್ಟಿಗೂ ಅಡಕವಾಗಿ, ಸಂದೇಹಕ್ಕೆ ಎಡೆಯಿಲ್ಲದಂತೆ, ಬಳಸಿಲ್ಲದಂತೆ, ನೇರವಾಗಿ ಶ್ಲೋಕಗಳಲ್ಲಿ ರಚಿಸುವ ಪದ್ಧತಿಯನ್ನು ಶಾಸ್ತ್ರಕಾರರು ಅನುಸರಿಸುತ್ತ ಬಂದರು. ಕನ್ನಡದಲ್ಲಿಯೂ ಇದೇ ಪದ್ಧತಿ ನಡೆದುಬಂದಿತು."[೧] ಎಂದು ಪ್ರೊ. ಎಂ.ವಿ.ಸೀತಾರಾಮಯ್ಯನವರು ಅಭಿಪ್ರಾಯ ಪಡುತ್ತಾರೆ. ಕಾವ್ಯ ಬರೆಯುವವನೂ, ಶಾಸ್ತ್ರಗ್ರಂಥರಚನೆ ಮಾಡುವವನೂ, ಪದ್ಯ ರಚನೆಗೆ ಅಗತ್ಯವಾದ ಶಬ್ದಸಂಪತ್ತು, ವ್ಯಾಕರಣ, ಛಂದಸ್ಸು ಇವುಗಳಲ್ಲಿ ಪಾಂಡಿತ್ಯವನ್ನು ಸಂಪಾದಿಸಬೇಕಾಗಿದ್ದಿತು. ಶಾಸ್ತ್ರಕಾರರು ತಾವು ಹೇಳಬೇಕಾದ ವಿಷಯಗಳನ್ನು ಆಕರ್ಷಕವಾಗಿ ಹೇಳಿದರೆ ವಿಷಯವು ಮನಟ್ಟಾಗುವುದೆಂದೂ, ಆದ್ದರಿಂದ ನೆನಪಿನಲ್ಲಿ ಉಳಿಯಲು ಹೆಚ್ಚು ಅನುಕೂಲವೆಂದೂ ಎಣಿಸಿ ಸಾಧ್ಯವಾದ ಕಡೆಗಳಲ್ಲಿ ಅಲಂಕಾರದಿಂದ ಕೂಡಿದ ಭಾಷಾ ಶೈಲಿಯಲ್ಲಿ ಗ್ರಂಥರಚನೆ ಮಾಡುತ್ತಿದ್ದರು ಎಂಬ ಅಂಶ ವಿಧಿತವಾಗುತ್ತದೆ.

"ರಾಜಶೇಖರನೆಂಬ ಅಲಂಕಾರಿಕನು ಕವಿಗಳನ್ನು ಬೇರೆ ಬೇರೆ ದೃಷ್ಟಿಕೋನಗಳಿಂದ ವಿಂಗಡಿಸುವಾಗ 'ಶಾಸ್ತ್ರಕವಿ' ಎಂಬ ಒಂದು ವರ್ಗವನ್ನು ಪ್ರಸ್ತಾಪಿಸುತ್ತಾನೆ. ಹಾಗೆಯೇ 'ಚಂದ್ರಪ್ರಭಚರಿತೆ' ಎಂಬ ಕಾವ್ಯವನ್ನು ಜಾತಕತಿಲಕವೆಂಬ ಜೋತಿಷ್ಯಶಾಸ್ತ್ರದ ಗ್ರಂಥವನ್ನು ಬರೆದಿರುವ ಶ್ರೀಧರಾಚಾರ್ಯ ಕವಿ (೧೦೪೯) ಕವಿತ್ವವನ್ನು 'ಕಾವ್ಯಕವಿತ್ವ', 'ಶಾಸ್ತ್ರಕವಿತ್ವ' ಎಂದು ವಿಭಾಗಮಾಡಿ ಅವುಗಳ ಸ್ವರೂಪವನ್ನು ಹೀಗೆ ಸ್ಪಷ್ಟಪಡಿಸಿದ್ದಾನೆ.

ಸುಭಗ ವಚಂ ಕಾವ್ಯಕವಿ
ತ್ವಭೂಷಣಂ ಶ್ರೀಧರಾರ್ಯ ರಚಿತಂ ಚಂದ್ರ
ಪ್ರಭ ಚರಿತಂ: ಶಾಸ್ತ್ರ ಕವಿ
ತ್ವಭೂಷಣಂ ಧರೆಗೆ ನೆಗಳ್ದ ಜಾತಕ ತಿಲಕಂ

ಆದಿದೆನ್ನದೆ ಜಾತಕ ತಿಲ
ಕದೊಳರಿವುದು ಗಣಿತ ಧರ್ಮಮಂ ಸಕಳಜಗ
ದ್ವಿದಿತಂ ಚಂದ್ರಪ್ರಭ ಚರಿತ
ದೊಳರಿವುದು ಕಾವ್ಯ ಧರ್ಮಮೆಂಬುಧನಿವಹಂ

ಶ್ರೀಧರಾರ್ಯನು ರಚಿಸಿದ ಚಂದ್ರಪ್ರಭ ಚರಿತವು ಸುಂದರವಾದ ಮಾತುಗಾರಿಕೆಯಿಂದ ಹೇಳಿದ ಕಾವ್ಯ ಕವಿತ್ವಕ್ಕೆ ಒಡವೆಯಂತಿದೆ; ಲೋಕ ಪ್ರಸಿದ್ಧವಾದ ಜಾತಕ ತಿಲಕವು ಶಾಸ್ತ್ರ ಕವಿತ್ವಕ್ಕೆ ಒಡವೆ. ಜಾತಕ ತಿಲಕದಲ್ಲಿ ಜೋತಿಷ್ಯಕ್ಕೆ ಸಂಬಂಧಪಟ್ಟ ಎಲ್ಲ ಬಗೆಯ ಗಣಿತ ಸ್ವರೂಪವನ್ನು ತಿಳಿಯಬಹುದು; ವಿದ್ವಾಂಸರು ಜಗತ್ಪ್ರಸಿದ್ಧವಾದ ಚಂದ್ರಪ್ರಭ ಚರಿತದಲ್ಲಿ ಕಾವ್ಯಧರ್ಮವನ್ನು ತಿಳಿಯಬಹುದು"[೨] ಎಂದಿದ್ದಾರೆ.

ಶಾಸ್ತ್ರಗಳೂ ಕಾವ್ಯಗಳೂ ಒಂದೇ ಮಾಧ್ಯಮವಾದ ಮಾತನ್ನು ಬಳಸಿಕೊಳ್ಳುವುದರಿಂದಲೂ, ಶಾಸ್ತ್ರಕಾರನಲ್ಲಿ ಕವಿಯ ಸಾಮರ್ಥ್ಯವೂ, ಕವಿಯಲ್ಲಿ ಶಾಸ್ತ್ರಜ್ಞಾನವೂ ಇರುವುದರಿಂದಲೂ ಎರಡೂ ಒಂದಕ್ಕೊಂದು ಹೊಂದಿಕೊಂಡು ಮಾನವನ ಕಲ್ಯಾಣವನ್ನು ಸಾಧಿಸಬಲ್ಲವಾಗಿವೆ ಎಂದು ಡಾ.ಡಿ.ವಿ.ಗುಂಡಪ್ಪನವರು ಶಾಸ್ತ್ರ ಕಾವ್ಯವನ್ನು ಕುರಿತು ಹೇಳುತ್ತಾ "ವಾಙ್ಮಯದಲ್ಲಿ ಕಾವ್ಯವೆಂದೂ, ಶಾಸ್ತ್ರವೆಂದೂ ಸ್ಥೂಲವಾಗಿ ಎರಡು ಕಾಣಬರುತ್ತವೆ. ಯಾವ ಗ್ರಂಥಗಳು ವಾಚಕರಿಗೆ ಚಿತ್ತ ಸಮುನ್ನತಿಯನ್ನುಂಟುಮಾಡಿ ಧರ್ಮ-ಧರ್ಮಜ್ಞಾನ ಪ್ರವೇಶಕ್ಕೆ ದಾರಿ ಬಿಡಿಸುವವೋ ಅವುಗಳನ್ನು ಕಾವ್ಯಮಾರ್ಗಕ್ಕೆ ಸೇರಿಸಬಹುದು. ಯಾವ ಗ್ರಂಥಗಳು ವಾಚಕರ ವಸ್ತುಜ್ಞಾನವನ್ನು ಹೆಚ್ಚು ಮಾಡಿ ಅವರ ಬಹಿರಂಗದ ಆಚಾರ ವ್ಯವಹಾರಗಳಿಗೆ ಸಾಕ್ಷಾತ್ತಾಗಿ ಉಪಯುಕ್ತವಾಗುವ ತಿಳುವಳಿಕೆಯನ್ನು ಉಂಟುಮಾಡಿಕೊಡುವವೋ ಅವುಗಳನ್ನು ಶಾಸ್ತ್ರವರ್ಗಕ್ಕೆ ಸೇರಿಸಬಹುದು. ಕಾವ್ಯದ ಕಾರ್ಯಕ್ಷೇತ್ರವು ಮನಸ್ಸು; ಶಾಸ್ತ್ರದ ಕಾರ್ಯಕ್ಷೇತ್ರವು ಬುದ್ಧಿ, ಮನೋಬುದ್ಧಿಗಳೆರಡನ್ನೂ ಸಂಪೂರ್ಣವಾಗಿ ಪ್ರತ್ಯೇಕಗೊಳಿಸಲು ಕೆಲವು ಸಂದರ್ಭಗಳಲ್ಲಿ ಆಗುವುದಿಲ್ಲ. ಅಂತಹ ಸಂದರ್ಭಗಳಿಗೆ ಸಂಬಂಧಪಡುವ ಗ್ರಂಥಗಳು ಕಾವ್ಯ ವರ್ಗಕ್ಕೆ ಸೇರತಕ್ಕವಾಗಿಯೂ ಇರಬಹುದು; ಅಥವಾ ಶಾಸ್ತ್ರವರ್ಗಕ್ಕೆ ಸೇರತಕ್ಕವಾಗಿಯೂ ಇರಬಹುದು; ಆದಕಾರಣ ಕಾವ್ಯವನ್ನು ಶುದ್ಧಕಾವ್ಯ, ಮಿಶ್ರಕಾವ್ಯ ಎಂದೂ, ಶಾಸ್ತ್ರವನ್ನೂ ಲೌಕಿಕಶಾಸ್ತ್ರ, ಆಧ್ಯಾತ್ಮಿಕಶಾಸ್ತ್ರ ಎಂದು ಎರಡು ಬಗೆಯಾಗಿ ವಿಂಗಡಿಸಲಾಗಿದೆ. ಶುದ್ಧ ಕಾವ್ಯವು ರಾಮಾಯಣ ಶಾಕುಂತಲಗಳಂತೆ ರಸ ಪ್ರಧಾನವಾದುದು.

ಮಿಶ್ರಕಾವ್ಯವು ಭಾರತ ಹಿತೋಪದೇಶಗಳಂತೆ ಪ್ರಸ್ತಾವಿಕವಾಗಿ ಆಧ್ಯಾತ್ಮ ವಿಷಯ ನೀತಿ ವಿಷಯಗಳನ್ನು ಸಹ ಸರಸ ರೀತಿಯಲ್ಲಿ ಬೋಧಿಸುವುದು ಲೌಕಿಕಶಾಸ್ತ್ರಗಳೆಂಬುದು ಭೌತರಾಸಾಯನಿಕ ಖಗೋಳೀಯ ಮೊದಲಾದವುಗಳಂತೆ ಬಾಹ್ಯ ಪ್ರಪಂಚದ ವಸ್ತುಗಳನ್ನು ಕುರಿತು ವಿಚಾರಮಾಡತಕ್ಕವು. ಅಥವಾ ಅರ್ಥಶಾಸ್ತ್ರ, ವ್ಯವಹಾರಶಾಸ್ತ್ರ, ರಾಜ್ಯ ಮೀಮಾಂಸೆ ಮೊದಲಾದವುಗಳಂತೆ ಸಮಾಜ ವ್ಯವಸ್ಥೆಗಳನ್ನು ಕುರಿತು ವಿಚಾರ ಮಾಡತಕ್ಕವು. ಆಧ್ಯಾತ್ಮಿಕ ಶಾಸ್ತ್ರಗಳಾದರೋ ಧರ್ಮಾಧರ್ಮಗಳು ಭಗವದುಪಾಸನಾ ಕ್ರಮಗಳು, ಜೀವನ ಊರ್ಧ್ವಗತಿ, ಅಧೋಗತಿಗಳು ಇವುಗಳನ್ನೇ ಕುರಿತವು. ವೇದ ವೇದಾಂತಗಳೂ, ಸ್ಮೃತಿ ಪುರಾಣಗಳೂ ಈ ಭಾಗಕ್ಕೆ ಸೇರತಕ್ಕವು. ಈ ಆಧ್ಯಾತ್ಮ ಶಾಸ್ತ್ರಕ್ಕೂ, ಸಾಹಿತ್ಯ ಅಥವಾ ಕಾವ್ಯಕ್ಕೂ ಗಾಢವಾದ ಸಂಬಂಧವಿರುವುದು"[೩] ಎಂದು ಸುದೀರ್ಘವಾಗಿ ಚರ್ಚಿಸಿದ್ದಾರೆ.

೨.೨. ಅರ್ಥ-ಸ್ವರೂಪ-ಪರಂಪರೆ

೨.೨.೧. ಅರ್ಥ

ಶಾಸ್ತ್ರ ಎಂಬ ಪದವನ್ನು ಕುರಿತು ನಿಖರವಾಗಿ ಹೇಳಲಾಗದಿದ್ದರೂ ಶಾಸ್ತ್ರಕಾರರ ಅಭಿಮತದ ಹಿನ್ನೆಲೆಯಲ್ಲಿ ಕ್ರಮಬದ್ಧವಾಗಿ ರಚಿತಗೊಂಡ ಒಂದು ಚೌಕಟ್ಟು ಎಂದು ಗುರುತಿಸಲಾಗಿದೆ.

" 'ಶಾಸನ' ಶಬ್ದದ ಮೂಲಾರ್ಥ 'ಆಜ್ಞೆ' ಎಂದು ಕೌಟಿಲ್ಯ ಹೇಳುತ್ತಾನೆ. ಸಂಸ್ಕೃತದ "ಶಾಸ್" ಎಂಬ ಧಾತುವಿನಿಂದ 'ಶಾಸನ' ಎಂಬ ಶಬ್ದ ಬಂದಿದೆ. 'ಶಾಸ್' ಎಂಬ ಧಾತುವಿಗೆ ಆಜ್ಞೆಮಾಡು, ಶಿಕ್ಷಿಸು, ನಿಯಂತ್ರಿಸು ಮುಂತಾದ ಅರ್ಥಗಳಿವೆ. ಶಾಸನಗಳು ಮೊದಲು ರಾಜಾಜ್ಞೆಗಳಾಗಿದ್ದವು. ಕಾನೂನುಗಳನ್ನು ಜನರಿಗೆ ಪ್ರಕಟಪಡಿಸುವ ಬರಹಗಳೇ ಶಾಸನಗಳು."[೪]

ಶಾಸನ ಎಂದರೆ ನಿಯಮದ ಸಾಮರ್ಥ್ಯ. ಶಿಕ್ಷೆ ಅಥವಾ ನಿಗ್ರಹಿಸು ಎಂಬರ್ಥವನ್ನು ಋಗ್ವೇದ ಸಂಹಿತೆಯಲ್ಲಿ ಕಾಣುತ್ತೇವೆ. ಅಲ್ಲದೆ ಹಂಬಲಿಸುವುದು, ಸ್ತುತಿಸುವುದು ಅಥವಾ ಪ್ರಾರ್ಥಿಸುವುದು ಎಂಬರ್ಥಗಳನ್ನು ಕೆಲವು ಋಕ್ಕುಗಳು ಹೇಳುತ್ತವೆ. 'ಶಾಸನವು ಹಿತೋಪದೇಶವನ್ನು ನೀಡಿ ಅಹಿತಗಳನ್ನು ಪರಿಹಾರ ಮಾಡತಕ್ಕ ಒಂದು ಸಾಧನವಾಗಿದೆ ಎಂದು ಋಕ್ಕುಗಳಲ್ಲಿ 'ಧರ್ಮೋಪದೇಶ' ಎಂದೂ ಹೇಳಿರುವುದು ಕಂಡು ಬರುತ್ತದೆ.

ಆಗಮಗ್ರಂಥಗಳಲ್ಲಿ 'ಶಾಸ್ತ್ರ' ಶಬ್ದದ ವ್ಯುತ್ಪತ್ತಿಯನ್ನು ಕುರಿತು ಈ ರೀತಿ ಹೇಳಲಾಗಿದೆ.

ಶಾಸನಾತ್ ಶಂಸನಾತ್ ಶಾಸ್ತ್ರಂ ಶಾಸ್ತ್ರ ಮಿತ್ಯಬಿಧೀಯತೇ
ಶಾಸನಂ ದ್ವಿವಿಧಂ ಪ್ರೋಕ್ತಂ ಶಾಸ್ತ್ರ ಲಕ್ಷಣ ವೇದಿಭಿ

ಶಾಸ್=ಆಜ್ಞೆ ಮಾಡುವುದು ಮತ್ತು ಶಂಸ್=ಪ್ರಕಟಮಾಡುವುದು ಮತ್ತು ವರ್ಣನೆ ಮಾಡುವುದು. ಶಾಸನ ಮಾಡುವ ಶಾಸ್ತ್ರವು ವಿಧಿರೂಪ ಮತ್ತು ನಿಷೇಧ ರೂಪವೆಂಬುದಾಗಿ ಎರಡು ವಿಧಗಳಾಗಿರುತ್ತವೆ. ಕೃತಿ ಮತ್ತು ಸ್ಮೃತಿಗಳಲ್ಲಿ ಪ್ರತಿಪಾದಿತವಾಗಿರುವ ಕಾರ್ಯಗಳು ಅನುಷ್ಠಾನಕ್ಕೆ ಯೋಗ್ಯವಾದವು ಮತ್ತು

ನಿಂದಿತವಾದ ಕರ್ಮಗಳನ್ನು ಮಾಡುವುದು ಸರ್ವಥಾ ಹೇಯವಾಗಿರುತ್ತದೆ (ನಿಷೇಧ) ಅಂದರೆ ವಿಧಿ-ನಿಷೇಧಗಳು ಶಾಸ್ತ್ರದ ಲಕ್ಷಣಗಳು ಎಂದು ಮೇಲಿನ ಸಾಲುಗಳಿಂದ ಪ್ರಮುಖವಾಗಿ ತಿಳಿದು ಬರುತ್ತದೆ.

ಶಾಸನಮಾಜ್ಞೆಯಂ ಎಂದು ವಸ್ತುಕೋಶ. 'ಜನರ ಕ್ಷೇಮಕ್ಕಾಗಿಯೂ, ಸೌಖ್ಯಕ್ಕಾಗಿಯೂ ಯಾವ ಯಾವ ಸಾಧನಗಳೂ, ಸಂಧಾನಗಳೂ ಯುಕ್ತವೋ ಅದನ್ನೆಲ್ಲಾ ಗೊತ್ತು ಮಾಡುವ ಕೆಲಸ ಎಂದು ರಾಜ್ಯಶಾಸನದಲ್ಲೂ ಹೇಳಲಾಗಿದೆ. "ಧಾತ್ರಿಯೊಳ್ನಡಿದುದೆ ನನ್ನಿ ಮಾಡಿದುದೆ ಶಾಸನಮಿತ್ತುದೆ ದೇವರಿತ್ತದೊಂದೊಡೆ ಗುಣದೊಳ್ಪನೇಕೆ ಬೆಸಗೊಂಡಪೆ ನೀ ಗುಣದಂಕ ಕಾರ್ತಿಯಾ ಎಂದು ರನ್ನನ ಅಜಿತತೀರ್ಥಂಕರ ಪುರಾಣ "ಜಯ ಜಯ ದೇವದೇವ ಪುರಶಾಸನ ಶಾಸನೈಕ ಚಿನ್ಮಯ ಮಯನುತ್ಯಸಂಪದ ಸಮಾನ.... ಎಂದು ಷಡಕ್ಷರದೇವನ ರಾಜಶೇಖರ ವಿಳಾಸದ ಹೇಳಿಕೆಗಳಲ್ಲಿ ಶಾಸನವೆಂಬುದಕ್ಕೆ ಆಜ್ಞೆ, ಕಾನೂನು, ಕಟ್ಟಳೆ, ವಿಧಿ ಎಂಬರ್ಥಗಳು ಕಂಡುಬರುತ್ತವೆ.

" 'ಶಾಸ್ತಿ' ಎಂಬ ಸಂಸ್ಕೃತ ಪದಕ್ಕೂ ಹೆಚ್ಚು ಕಡಿಮೆ 'ಶಾಸನ' ಪದದ ಅರ್ಥವನ್ನೇ ನಿಘಂಟುಕಾರರು ಅರ್ಥೈಸುತ್ತಾರೆ. ಅಧಿಕಾರ, ಆಡಳಿತ, ಆಜ್ಞೆ, ಅಪ್ಪಣೆ, ರಾಯಸ ಎಂಬಿತ್ಯಾದಿ ಅರ್ಥಗಳಿದ್ದರೂ ಸಾಮಾನ್ಯವಾಗಿ 'ಶಾಸ್ತಿ' ಶಬ್ದಕ್ಕೆ ಶಿಕ್ಷಿಸು, ದಂಡಿಸು ಎಂದು ರೂಢಿಯಲ್ಲಿದೆ. ಈ ಧರ್ಮಾಚರಣೆಗೆ ತಕ್ಕ ಶಾಸ್ತಿಯಾಯಿತು ಎಂದು ವಚನ ಭಾರತದಲ್ಲಿ 'ಶಾಸ್ತ್ರ ಶಸ್ತ್ರಮೆ" ಎಂದು ರತ್ನಾಕರಾಧೀಶ್ವರ ಶತಕದಲ್ಲಿ ಬಳಸಿರುವುದರ ಅರ್ಥವೂ ಅದೇ ಆಗಿದೆ. ಹಾಗೆಯೇ ಅನಂತನಾಥ ಪುರಾಣದಲ್ಲಿ "ವಿದೂಷಕ ನರಸಿಂಗೆ ವಿಚಾರ ಮುಳ್ಳೊಡೀದರ್ಪಕನ ತಪ್ಪಿಂಗೆ ರತಿಗೆ 'ಶಾಸ್ತಿ' ಬಾರದೆಂದು ನಗಿಸುತ್ತಂ" ಎಂಬಲ್ಲಿ ಶಿಕ್ಷೆ, ದಂಡಿಸು ಎಂಬ ಅರ್ಥ ಹೇಳುವ ಸಂದರ್ಭದಲ್ಲಿ 'ಶಾಸ್ತಿ' ಪದ ಬಳಕೆಗೊಂಡಿದೆ.

ಹೀಗೆ 'ಶಾಸ್ತಿ' ಪದದ ಹಿನ್ನಲೆಯಲ್ಲಿ ಶಾಸನ, ಶಾಸ್ತಿ, ಶಾಸ್ತಾ ಎಂಬ ಅರ್ಥಗಳ ಹರವನ್ನು ಪಡೆದುಕೊಂಡಿದೆ. ಸಾಹಿತ್ಯ ಪರಿಷತ್ತಿನ ನಿಘಂಟುವಿನಲ್ಲಿ 'ಶಾಸ್ತ್ರ' ಪದಕ್ಕೆ ಅಪ್ಪಣೆ, ಆಜ್ಞೆ, ಕಟ್ಟಳೆ, ತತ್ತ್ವ ತಿಳಿದಿರುವ ವಿಷಯವನ್ನು ತಿಳಿಯಪಡಿಸಬಹುದು ಎಂದು ಅರ್ಥ ನೀಡಲಾಗಿದೆ. ವಿಷಯ ನಿರೂಪಣೆಯನ್ನು ಶಾಸ್ತ್ರೀಯವಾಗಿ ನಿರೂಪಿಸಲಾಗಿದೆ. ಇದನ್ನು ರೂಢಿಯಲ್ಲಿ ವ್ಯವಸ್ಥಿತವಾಗಿರುವ ಜ್ಞಾನ ಎಂದು ಅರ್ಥೈಸಲಾಗಿದೆ.

'ಶಾಸ್ತ್ರವೆಂಬುದಕ್ಕುಂ ಗ್ರಂಥಂ' ಎಂಬ ವಸ್ತುಕೋಶದ ನುಡಿಯೂ ನಿದೇಶ ಗ್ರಂಥೆಯೋಃಶಾಸ್ತ್ರಂ' ಎಂಬ ಅಮರಕೋಶದ ಮಾತೂ ಇದನ್ನು ಪುಷ್ಟಿಗೊಳಿಸುತ್ತದೆ.

ಎಚ್.ಶೇಷಾಯ್ಯಂಗಾರ್ ಅವರು "ಶಾಸನಾತ್ ಶಾಸ್ತ್ರಂ, ಮನುಷ್ಯನ ಕರ್ತವ್ಯಗಳಲ್ಲಿ ಯಾವುದಾದರೊಂದು ವಿಷಯವನ್ನು ಹಿಡಿದು ನಿಸ್ಪಷ್ಟವಾಗಿ ಅದರ ಸ್ವರೂಪ, ಗುಣ, ಉಪಯೋಗಾದಿಗಳನ್ನು ವಿವರಿಸಿ ಶಿಕ್ಷಿಸುವ ಗ್ರಂಥಕ್ಕೆ ಶಾಸ್ತ್ರವೆಂಬ ವ್ಯವಹಾರವು" ಎಂದಿರುವಲ್ಲಿ ಶಾಸ್ತ್ರಗ್ರಂಥದ ಸ್ವರೂಪ

ಲಕ್ಷಣವನ್ನು ವಿವರಿಸಿದ್ದಾರೆ. "ಸಂಜ್ಞಾರ್ಥ ತತ್ತ್ವಕೋಶದಲ್ಲಿ ಶಬ್ದ, ಕರ್ತ, ಮೀಮಾಂಸಾ, ಧರ್ಮಶಾಸ್ತ್ರ ಎಂದೂ, ವಿವೇಕಚಿಂತಾಮಣಿಯಲ್ಲಿ ತರ್ಕ, ವೇದಾಂತ, ಮೀಮಾಂಸ, ವ್ಯಾಕರಣ, ಜ್ಯೋತಿಷ್ಯ, ಧರ್ಮಶಾಸ್ತ್ರ"[೮] ಎಂದು ಶ್ರೀವತ್ಸ ನಿಘಂಟುವಿನಲ್ಲಿ 'ಶಾಸ್ತ್ರ' ಪದಕ್ಕೆ ವಿವಿಧ ಬಗೆಯ ಅರ್ಥಗಳನ್ನು ಕೊಡಲಾಗಿದೆ.

ಜನಪದಸಾಹಿತ್ಯದಲ್ಲಿ 'ಶಾಸ್ತ್ರ' ಎಂಬ ಪದವನ್ನು ಸಂಪ್ರದಾಯದ ಹಿನ್ನೆಲೆಯಲ್ಲಿ ಬಳಸುತ್ತಾರೆ ಆಚರಣೆ, ನಂಬಿಕೆ, ವಿಧಿ ವಿಧಾನಗಳ ಕುರಿತು ಮಾತನಾಡುವಾಗ 'ಶಾಸ್ತ್ರ' ಪದ ಬಳಕೆಯಾಗಿದ್ದುಂಟು. 'ಮದುವೆಶಾಸ್ತ್ರ' ಹೂಮುಡಿಸುವ ಶಾಸ್ತ್ರ, ತೊಟ್ಟಿಲು ಶಾಸ್ತ್ರ ಮುಂತಾದ ಶುಭಕಾರ್ಯಗಳನ್ನು ವಿಧಿವತ್ತಾಗಿ, ಅಚ್ಚುಕಟ್ಟಾಗಿ ಮಾಡಿಸುವ ಮತ್ತು ಮಾಡುವ ಸಂದರ್ಭದಲ್ಲಿ ಇದರ ಅರ್ಥ ಬರುವುದುಂಟು. ಸಾಮಾನ್ಯವಾಗಿ 'ಶಾಸ್ತ್ರ'ವು ನಿಯಮ, ವ್ರತ, ವ್ಯವಸ್ಥೆ, ಅಚ್ಚುಕಟ್ಟುತನ ಹಲವು ಬಗೆಯ ಅರ್ಥಗಳಲ್ಲಿ ಸಹ ಉಪಯೋಗಗೊಂಡಿದೆ.

'ಶಾಸ್ತ್ರ' ಹೇಳಲಿಕ್ಕೆ ಬದನೆಕಾಯಿ ತಿನ್ನಲಿಕ್ಕೆ ಎಂಬಲ್ಲಿ ನೆಪಮಾತ್ರಕ್ಕೆ ಅಥವಾ ತೋರಿಕೆಗೆ ಸಂಪ್ರದಾಯವನ್ನು ಪಾಲಿಸುವಲ್ಲಿ ಈ ಮಾತನ್ನು ವ್ಯಂಗ್ಯಾರ್ಥದಲ್ಲಿ ಬಳಸಿರುವುದು ಗಾದೆನುಡಿಗಳಲ್ಲಿ ಕಾಣಬಹುದು. 'ಕೂಳಿನಶಾಸ್ತ್ರ ಮಾಡುವುದು', 'ಲಗ್ನ ಕೂಡಿಬರುತ್ತೋ ಇಲ್ಲವೋ, ಶಾಸ್ತ್ರ ಕೇಳಿನೋಡಬೇಕು' ಎಂದು ರೂಢಿಯಲ್ಲಿ ಬಳಸುವುದನ್ನು ಜ್ಯೋತಿಷ್ಯ, ಶಕುನ, ಭವಿಷ್ಯ, ಕಾರ್ಯಸಿದ್ಧಿ ಮುಂತಾದ ಸಂದರ್ಭಗಳಲ್ಲಿ 'ಶಾಸ್ತ್ರ' ಪದ ಪ್ರಸ್ತಾಪವಾಗಿದೆ. 'ಶಾಸ್ತ್ರಾದ್ ರೂಢಿರ್ಬಲೀಯಸೀ' ಎಂದರೆ ಶಾಸ್ತ್ರಕ್ಕಿಂತ ರೂಢಿ ಬಲವಾದದ್ದು ಎಂಬುದನ್ನು ಜನತೆ ನಂಬಿತ್ತು. ಒಳ್ಳೆಯ ಪಂಡಿತನು ಶಾಸ್ತ್ರವನ್ನು ಅನುಕೂಲಸಿಂಧುವಾಗಿಸಲು ಸಹಾಯ ಮಾಡುತ್ತಿದ್ದನು. ಹೀಗೆ ಯಾವುದೋ ಸಂದರ್ಭದಲ್ಲಿ ಯಾರೋ ತಮ್ಮ ಅನುಕೂಲಕ್ಕೆ ಮಾಡಿಕೊಂಡ ಪದ್ಧತಿ ಸಂಪ್ರದಾಯಗಳು 'ಶಾಸ್ತ್ರ'ದ ರೂಪಕ್ಕೆ ತಿರುಗಿ ಅವುಗಳನ್ನು ನಿತ್ಯ ಬದುಕಿನ ಆಚರಣೆಗಳಲ್ಲಿ ರೀತಿ ನೀತಿಗಳಲ್ಲಿ ಅಳವಡಿಸಿಕೊಳ್ಳುತ್ತೇವೆ. ಅವೆಲ್ಲ ಪೊಳ್ಳು, ನಿರರ್ಥಕ, ಮೌಢ್ಯದ ಪ್ರತೀಕ ಎಂಬುವರಿದ್ದಾಗಲೂ ಸಂಪೂರ್ಣವಾಗಿ ಬಿಡಲಾರದೆ ನಮ್ಮ ಸುತ್ತ ಭದ್ರವಾದ 'ಶಾಸ್ತ್ರ'ದ ಹೆಸರಿನ ಗೋಡೆಯನ್ನು ಕಟ್ಟಿಕೊಂಡಿರುತ್ತೇವೆ.

'ಶಾಸ್ತ್ರಕ್ಕೆ ನಿಗಳವನಿಕ್ಕುವೆ', 'ಶಾಸ್ತ್ರ ಸಾಧಿಸಲರಿಯದೆ ಕೆಟ್ಟವು' 'ಶಾಸ್ತ್ರವೆಂಬುದು ಸಂತೆಯ ಸುದ್ದಿ', 'ಶಾಸ್ತ್ರ ಸಂಭ್ರಮಂ ಹೋದವು', 'ಶಾಸ್ತ್ರದ ಹೋದ ಹೊಲ ಬಲ್ಲೆದೇ ಪುರಾಣದ ಗಾದೆಗಳ ಜಂಜಡದ ಜಾಡ್ಯದ ಜಿನುಗು ತಾನಲ್ಲ' ಎಂಬ ವಚನಕಾರರ ಮಾತಿನಲ್ಲಿ 'ಶಾಸ್ತ್ರ'ದ ಪರಿಕಲ್ಪನೆ ಇದ್ದರೂ ಅವು 'ಶಾಸ್ತ್ರ'ಕ್ಕೆ ವಿರೋಧವನ್ನು ವ್ಯಕ್ತಪಡಿಸಿದರೂ ಸಹಿತ 'ಶಾಸ್ತ್ರ' ಪದ ಅವರ ಹಿಡಿತದಲ್ಲಿ ಇರುವುದನ್ನು ಕಾಣುತ್ತೇವೆ.

ಬಿ.ಕೆ.ಶಿವರಾಮಯ್ಯ ಅವರು 'ಶಾಸ್ತ್ರ' ವಿಮರ್ಶೆ ಕುರಿತು ಹೇಳುತ್ತಾ ಅದು ಒಂದು ವಿಮರ್ಶನ ವಿದ್ಯೆಯಾದರೂ ಅದು ಕಲಾತ್ಮಕವಾದದ್ದು ಎಂದೂ,

"ಪ್ರವೃತ್ತಿ ನಿವೃತ್ತಿರ್ವಾನಿತ್ಯೇನ ಕೃತಕೇನ ವಾ
ಪ್ರಂಸಾಯೇನೋ ಪದಿಶ್ಯೇತ ತಚ್ಛಾಸ್ತ್ರಮಿತಿ ಕಥತೇ"[5]

ಪ್ರವೃತ್ತಿ ನಿವೃತ್ತಿಗಳ ಬೋಧೆಗೆ ಯಾವುದು ನಿತ್ಯವಾದ ಅಥವಾ ಕೃತಕವಾದ ಸಾಧನವೋ ಅದೇ ಶಾಸ್ತ್ರ ಎಂದು ಹೇಳಿ ಶಾಸ್ತ್ರದ ಸಾಮಾನ್ಯ ಲಕ್ಷಣವನ್ನು ಗುರುತಿಸಿದ್ದಾರೆ.

India as known to paniniಯಲ್ಲಿ ವಿ.ಎಸ್.ಅಗರ್‌ವಾಲ್ ಅವರು ಪಾಣಿನಿಯು ನಾಲ್ಕು ಬಗೆಯ ಗುರುಗಳನ್ನು ಹೆಸರಿಸುತ್ತಾ ಅದರಲ್ಲಿ ಶಾಸ್ತ್ರ ಗ್ರಂಥಗಳನ್ನೋ ಲೌಕಿಕ ವಿದ್ಯೆಯನ್ನೋ ಹೇಳಿಕೊಡುವವನು ಅಧ್ಯಾಪಕ ಎಂದಿದ್ದನ್ನು ಗುರುತಿಸಿದ್ದಾರೆ. "ಕಲಬುರ್ಗಿ ಜಿಲ್ಲೆಯ ನಾಗಾವಿ ಶಾಸನದಲ್ಲಿ ಅಲ್ಲಿಯ ತ್ರೈಪುರುಷ ದೇವರಶಾಲೆ ಒಂದು ಘಟಿಕಾಸ್ಥಾನವಾಗಿದ್ದು. ೨೦೦ ವಿದ್ಯಾರ್ಥಿಗಳು ವೇದಾಭ್ಯಾಸದಲ್ಲಿ ನಿರತರಾಗಿದ್ದಾರೆ. ೫೦ ವಿದ್ಯಾರ್ಥಿಗಳು ಶಾಸ್ತ್ರ ಅಧ್ಯಯನದಲ್ಲಿ ನಿರತರಾದ ಬಗ್ಗೆ ತಿಳಿದು ಬರುತ್ತದೆ. ಈ ವಿದ್ಯೆಗಳನ್ನು ಕಲಿಸಲು ೬ ಜನ ಉಪಾಧ್ಯಾಯರು ಇದ್ದಂತೆ ಹೇಳಲಾಗಿದೆ. ಅದೇ ರೀತಿ ಪ್ರಾಚೀನ ವಿದ್ಯಾಸಂಸ್ಥೆಗಳಾದ ನಲಂದಾ ವಿಶ್ವವಿದ್ಯಾಲಯದಲ್ಲಿ ಶಾಸ್ತ್ರಗಳ ಅಧ್ಯಯನಕ್ಕಾಗಿ ವಿದೇಶಗಳಿಂದ ವಿದ್ಯಾರ್ಥಿಗಳು ಬರುತ್ತಿದ್ದು, ಶಾಸ್ತ್ರಜ್ಞಾನಗಳ ಅನೇಕ ವಿಭಾಗಗಳಿದ್ದು, ಶಾಸ್ತ್ರವನ್ನು ಒಳಗೊಂಡ ಲಕ್ಷಾಂತರ ಗ್ರಂಥಗಳಿಂದ ಕೂಡಿದ ಗ್ರಂಥ ಭಂಡಾರ ಇದ್ದುದಾಗಿ, ಶಾಸ್ತ್ರದಲ್ಲಿ ಪರಿಣಿತಿ ಹೊಂದಿದ ಇಬ್ಬರೊ, ಮೂವರೋ ವಿದ್ಯಾರ್ಥಿಗಳನ್ನು ಮಾತ್ರ ಉತ್ತೀರ್ಣ ಮಾಡುತ್ತಿದ್ದರೆಂದು ಯುವಾನ್ ಚಾಂಗ್ ವರದಿ ಮಾಡುತ್ತಾನೆ. ಹಾಗೆಯೇ ಪ್ರಾಚೀನ ಗದ್ಯ ಕೃತಿಯಾದ ವಡ್ಡಾರಾಧನೆಯಲ್ಲಿ ಮೀಮಾಂಸ, ವ್ಯಾಕರಣ, ನರವೈದ್ಯ, ಜ್ಯೋತಿಷ್ಯ ಇತ್ಯಾದಿ ವಿಷಯಗಳೊಂದಿಗೆ ಹದಿನೆಂಟು ಧರ್ಮಶಾಸ್ತ್ರಗಳು ಪಠ್ಯವಿಷಯಕ್ಕೆ ಸಂಬಂಧಿಸಿದ್ದವು ಎಂಬ ವಿಚಾರವನ್ನು ಸ್ಮರಿಸಬಹುದು.

ಆಡುನುಡಿಯಲ್ಲಿ, ನಿಘಂಟುಗಳಲ್ಲಿ, ಶಾಸನಗಳಲ್ಲಿ, ಪುರಾಣ, ಕಾವ್ಯಗಳಲ್ಲಿ ಬಳಕೆಯಾದ ಶಾಸ್ತ್ರ ಕಾವ್ಯಮೀಮಾಂಸೆ ತನಕ ಸಾಗಿ ಬಂದು ಕಾವ್ಯ ಸಾಹಿತ್ಯಕ್ಕಿಂತ ಭಿನ್ನವಾಗಿ ಶಾಸ್ತ್ರ ಸಾಹಿತ್ಯವೆಂಬ ಪ್ರತ್ಯೇಕ ಅಧ್ಯಯನದ ಪ್ರಕಾರವಾಗಿಯೇ ಬೆಳೆದು ಬಂದಿರುವುದನ್ನು ಗಮನಿಸಬೇಕು. ಹೀಗಾಗಿ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಗಜಶಾಸ್ತ್ರ, ಹಯಶಾಸ್ತ್ರ, ವೈದ್ಯಶಾಸ್ತ್ರ, ಜ್ಯೋತಿಷಶಾಸ್ತ್ರ ಮುಂತಾದ ಶಾಸ್ತ್ರ ಸಮ್ಮತವಾದ ಕೃತಿಗಳನ್ನು ಬಿಟ್ಟರೂ ಧರ್ಮಸಿದ್ಧಾಂತ, ತತ್ತ್ವಪ್ರಧಾನವಾದ ಹಲಕೆಲವು ಕೃತಿಗಳು ಕಾವ್ಯಕ್ಕೆ ಕಾವ್ಯಗಳಾಗಿ ಶಾಸ್ತ್ರಕ್ಕೆ ಶಾಸ್ತ್ರಗಳಾಗಿ ರಚನೆಯಾಗಿರುವುದನ್ನು ಪರಿಭಾವಿಸಬಹುದು. ಹೀಗಾಗಿ ಕನ್ನಡ ಶಾಸ್ತ್ರ ಸಾಹಿತ್ಯ ವಿಪುಲತೆಯ ಫಸಲನ್ನು ವಿವಿಧ ಕ್ಷೇತ್ರಗಳಿಂದ ತಂದು ಕೊಟ್ಟಿದೆ.

೨.೨.೨. ಸ್ವರೂಪ

'ಶಾಸ್ತ್ರ' ಸಾಹಿತ್ಯ ಸ್ವರೂಪದ ದೃಷ್ಟಿಯಿಂದ ಕಾವ್ಯಗ್ರಂಥಗಳಷ್ಟು ವಿಶಾಲವಾದ ಕ್ಷೇತ್ರವಲ್ಲದಿದ್ದರೂ 'ಅಲ್ಪದರಲ್ಲಿಯೇ ಕಲ್ಪವನ್ನು' ಒದಗಿಸುವಂತಹದ್ದು ಇದರಿಂದಾಗಿ ಹೆಚ್ಚು ಮನ್ನಣೆ ಪಡೆಯಲು ಸಾಧ್ಯವಾಯಿತು.

ಕುಂಡಲಗಿರಿಯು ತನ್ನ ಶೃಂಗಾರಕಾವ್ಯ 'ರಸಿಕ ಮನೋರಂಜನ ವಿಲಾಸ'ದಲ್ಲಿ "ಪದ್ಯಂಗಳ್ ಸಲ್ಲಕ್ಷಣ ಪದ್ಯಂಗಳ್ ಸುಕವಿನಿಕರ....." ಎಂದು ತನ್ನ ಪದ್ಯ ರಚನೆಯ ಗುಣಗಾನ ಮಾಡಿರುವ ಈ ಮಾತು ಎಲ್ಲ ಪದ್ಯಕಾವ್ಯಗಳಿಗೂ ಅನ್ವಯಿಸುತ್ತದೆ. 'ಪದ್ಯಂ ಸಮಸ್ತ ಜನತಾಹೃದ್ಯಂ' ಎಂಬ ಕವಿರಾಜಮಾರ್ಗಕಾರನ ನುಡಿಪದ್ಯದ ಪ್ರಕಾರ ಸಮಸ್ತರಿಗೂ ಸಮ್ಮತವಾದುದನ್ನು ಎತ್ತಿಹಿಡಿಯುತ್ತದೆ.

ಲೋಕ ವ್ಯವಹಾರಕ್ಕೆ ಸಂಬಂಧಪಟ್ಟ ಎಲ್ಲ ವಿಷಯಗಳು ಶಾಸ್ತ್ರ ಸಾಹಿತ್ಯದಲ್ಲಿ ರಚನೆಗೊಂಡಿವೆ. ಬದುಕಿನಲ್ಲಿ ಸಂತೋಷ, ಮಾನಸಿಕ ನೆಮ್ಮದಿ, ನೈತಿಕ ಮೌಲ್ಯ, ವ್ಯವಹಾರಜ್ಞಾನವನ್ನು ಪ್ರಸಾರ ಮಾಡುವ ಉದ್ದೇಶವನ್ನು ಇವು ಹೊಂದಿವೆ. ಒಂದೆಡೆ ಶಾಸ್ತ್ರಜ್ಞಾನವನ್ನು ಕುರಿತು ರತ್ನಾಕರಾಧೀಶ್ವರ ಶತಕ ಹೀಗೆ ವಿವರಿಸುತ್ತದೆ.

"ಶಾಸ್ತ್ರಂ ಬಂದೊಡೆ ಶಾಂತಿ ನಿಗರ್ವ ನೀತಿ ಮೆಲ್ಪಾತು ಮು
ಕ್ತಿಸ್ತ್ರೀ ಚಿಂತೆ ನಿಜಾತ್ಮ ಚಿಂತೆ ನಿಲವೇಟ್ಕಂತಲ್ಲದಡೆ ಆ ಶಾಸ್ತ್ರದಿಂ
ದುಸ್ತ್ರೀಚಿಂತನೆ ದುರ್ಮುಖಂ ಕಲಹಂ ಉದ್‌ಗರ್ವ ಮನಂಗೊಂಡೊಡಾ
ಶಾಸ್ತ್ರಂಶಸ್ತ್ರಮೆ, ಶಾಸ್ತ್ರಿ ಶಸ್ತ್ರಿಕನಲಾ ರತ್ನಾಕರಾಧೀಶ್ವರಾ"[೨೦]

ಶಾಸ್ತ್ರ ವಿಷಯವನ್ನು ಕುರಿತು ವಿವರಿಸಲು ಮತ್ತು ನಿರೂಪಣೆ ಮಾಡಲು, ಲಕ್ಷಣ ನಿರ್ವಚನ ಮಾಡಲು ಕಂದವನ್ನು ವಿಶೇಷವಾಗಿ ಬಳಸಲಾಗಿದೆ. ರಂ.ಶ್ರೀ ಮುಗಳಿ ಅವರು ಹೇಳುವಂತೆ 'ಕಂದಪದ್ಯ ಶಾಸ್ತ್ರ ವಿಚಾರದ ಖಚಿತತೆಗಾಗಲಿ, ಕಾವ್ಯಕಲ್ಪನೆಯ ಅಡಕಕ್ಕಾಗಲಿ ಸರಿಹೊಂದುವ ಛಂದೋಬಂಧ' ಎಂಬ ಮಾತು ಸೂಕ್ತವಾಗಿದೆ. ಒಟ್ಟಿನಲ್ಲಿ 'ಕಂದ' ಶಾಸ್ತ್ರಕಾರರಿಗೆ ಪ್ರಿಯವಾದ ಬಂಧವಾಗಿದ್ದು, ಶಾಸ್ತ್ರದ ಖಚಿತತೆಯನ್ನು ಮನದಟ್ಟು ಮಾಡಲು ಸುಲಲಿತ ಮಾರ್ಗವಾಗಿತ್ತೆಂಬುದಕ್ಕೆ 'ಲೋಕೋಪಕಾರ', 'ಅಭಿದಾನವಸ್ತುಕೋಶ', 'ಜಾತಕತಿಲಕ' 'ಸಮಯ ಪರೀಕ್ಷೆ', 'ಕಾವ್ಯಾವಲೋಕನ', 'ಶಬ್ದಮಣಿದರ್ಪಣ' 'ಸೂಪಶಾಸ್ತ್ರ' ಮುಂತಾದ ಹಲವಾರು ಬಗೆಯ ಕೃತಿಗಳು ನಿದರ್ಶನವಾಗಬಲ್ಲವು.

ಶಾಸ್ತ್ರಗಳಲ್ಲಿ ಹೇಳುವ ನೀತಿ ನೇರವಾದುದು, ಖಚಿತವಾದುದು, ಶಾಸ್ತ್ರ ಸಮ್ಮತವಾದದು. ಕಾರಣ ಶಾಸನ ಮಾಡುವುದು, ವಿಧಿಸುವುದು, ಅರಸ ಪ್ರಜೆಗಳಿಗೆ ಅಧಿಕಾರ ಮಾಡುವ ವಿಧಾನ. ಹೀಗೆ ಶಾಸ್ತ್ರಗ್ರಂಥಗಳ ಗುರಿಯೂ, ಕಾವ್ಯಗ್ರಂಥಗಳ ಗುರಿಯೂ, ಒಂದೇ ಆದರೂ ಹೇಳುವ ವಿಧಾನದಲ್ಲಿ ಭಿನ್ನತೆಯಿದೆ. "ಮನಸ್ಸನ್ನು ಕರಗಿಸುವುದು ಕಾವ್ಯದ ಗುಣವಾದರೆ, ಬುದ್ಧಿಯಿಂದ ಕಸರತ್ತು ಮಾಡಿಸುವುದು ಶಾಸ್ತ್ರ ಗುಣವಾಗಿದೆ.

"ಕಳಬೇಡ ಕೊಲಬೇಡ, ಹುಸಿಯ ನುಡಿಯಲುಬೇಡ, ಅನ್ಯರಿಗೆ ಅಸಹ್ಯಪಡಬೇಡ
ಇದೇ ಅಂತರಂಗದ ಶುದ್ಧಿ, ಇದೇ ಬಹಿರಂಗದ ಶುದ್ಧಿ, ಇದೇ ನಮ್ಮ ಕೂಡಲ
ಸಂಗಮದೇವನ್ನೊಲಿಸುವ ಪರಿ"[೨೧]

ಎಂದು ನೇರವಾಗಿ ನೀತಿ ಹೇಳಬಹುದು. ಇದು ಶಾಸ್ತ್ರಮಾರ್ಗ; ವಿಧಿಸುವ ಬಗೆ; ಒಡೆಯ ಆಳಿಗೆ ಹೇಳುವ, ದೊರೆ ಪ್ರಜೆಗಳಿಗೆ ಶಾಸನ ಮಾಡುವ ಅಧಿಕಾರದ ವಿಧಾನ. ಹೀಗೆ ಶಾಸ್ತ್ರ ಗ್ರಂಥಗಳ ಗುರಿಯೂ, ಸಾಹಿತ್ಯ ಗ್ರಂಥಗಳ ಗುರಿಯೂ ಒಂದೇ; ವಿಧಾನ ಮಾತ್ರ ಬೇರೆ ಬೇರೆ. ಈ ವಿಷಯವನ್ನು ಶಾಸ್ತ್ರದ ಪರಿಭಾಷೆಯಲ್ಲಿ ಹೀಗೆ ತಿಳಿಸಬಹುದು.

ಅಲಂಕಾರಿಕರು ಗ್ರಂಥರಾಶಿಯನ್ನು ಉಪದೇಶ ದೃಷ್ಟಿಯಿಂದ ಪ್ರಭುಸಮ್ಮಿತ, ಮಿತ್ರಸಮ್ಮಿತ, ಕಾಂತಾಸಮ್ಮಿತ ಎಂದು ಮೂರು ಭಾಗ ಮಾಡುವರು. ಹೀಗೆ ಮಾಡಬೇಕು, ಹೀಗೆ ಮಾಡಕೂಡದು' ಎಂದು ಕರ್ತವ್ಯಾಕರ್ತವ್ಯಗಳನ್ನು ವಿಧಿಸುವ ಮತ್ತು ನಿಷೇಧಿಸುವ ಶಾಸ್ತ್ರಾಧಿಗಳು ಪ್ರಭುಸಮ್ಮಿತ, ಅವು ನಮಗೆ ಪ್ರಿಯವಾಗಿರಲಿ ಇಲ್ಲದಿರಲಿ, ರಾಜಶಾಸನದಂತೆ, ಅವುಗಳನ್ನು ಅನುಸರಿಸಿ ನಡೆಯಬೇಕು. ಇವು 'ಶಬ್ದಪ್ರಧಾನ' ನಮ್ಮ ಕರ್ತವ್ಯಾಕರ್ತವ್ಯಗಳಿಗೆ ಸಾಧಕಭಾದಕಗಳು ಕಂಡು ಬರುವಂಥ ಕಥೆಗಳನ್ನು ರಸಪ್ರಧಾನ್ಯವಿಲ್ಲದೆ ಹೇಳಿ ನೀತಿಯನ್ನು ಸೂಚಿಸುವ ಪುರಾಣದಿಗಳು 'ಮಿತ್ರಸಮ್ಮಿತ' ಇವು ಪ್ರಧಾನ ಮನಸ್ಸಿಗೆ ಸಂತೋಷವಾಗುವ ವಿಷಯಗಳನ್ನು ರಮಣೀಯವಾದ ರೀತಿಯಲ್ಲಿ ಹೇಳುತ್ತ ನಮ್ಮ ಮನಸ್ಸನ್ನು ಸೆಳೆದುಕೊಂಡು ಕರ್ತವ್ಯಾಕರ್ತವ್ಯಗಳನ್ನು ಸತ್ಫಲ ದುಷ್ಫಲಗಳು ನಮ್ಮ ನಮ್ಮ ಮನಸ್ಸಿಗೇ ತಾವಾಗಿಯೇ ಅಂಟುವಂತೆ ಪ್ರತಿಪಾದಿಸುವ ಕಾವ್ಯ ನಾಟಕಾದಿಗಳು "ಕಾಂತಾಸಮ್ಮಿತ" ಇವು ರಸಪ್ರಧಾನ ಎಂದು ಶಾಸ್ತ್ರ ಸಾಹಿತ್ಯದ ಸ್ವರೂಪವನ್ನು ಕುರಿತು ಎಂ.ವಿ.ಸೀತಾರಾಮ್ಮನವರು ಅಭಿಪ್ರಾಯ ಪಡುತ್ತಾರೆ.

"ಕಾವ್ಯದ ಗುರಿ ಕೇವಲ ಜನರಂಜನೆಯಲ್ಲ, ಅದು ನೀತಿ ಮೌಲ್ಯಗಳ ಪ್ರಚಾರವೂ ಹೌದು. ಅದಕ್ಕಿಂತ ಹೆಚ್ಚಾಗಿ ದೈವಶಕ್ತಿಯನ್ನು ಪುರಸ್ಕರಿಸುವ ತತ್ಫಲವಾಗಿ ಜೀವನದ ಅಶುಭವನ್ನೆಲ್ಲ ಪರಿಹರಿಸುವ ಒಂದು ದೈವಿಕ ಪ್ರಯೋಜನ".[೧೩] ಈ ಕಾವ್ಯಗಳ ಪ್ರಯೋಜನ ಎಂದು ಕೆ.ಕೃಷ್ಣಮೂರ್ತಿ ಅವರು ಹೇಳುವ ಮಾತುಗಳು ಶಾಸ್ತ್ರಸಾಹಿತ್ಯಕ್ಕೂ ಅನ್ವಯಿಸುತ್ತದೆ. ಶಾಸ್ತ್ರ ಸಾಹಿತ್ಯದಿಂದ ಶುಭವುಂಟಾಗುತ್ತದೆ. ಮೋಕ್ಷ ಪ್ರಾಪ್ತಿಯಾಗುತ್ತದೆ ಎಂಬಲ್ಲಿ ಈ ಮಾತುಗಳನ್ನು ಪರಿಭಾವಿಸಬಹುದು.

ಆಶ್ರಯದೊರೆಗಳ ಮನ್ನಣೆ ಹಾಗೂ ಪಂಡಿತರ ಮೆಚ್ಚುಗೆಗಳಿಸುವ ಉದ್ದೇಶವೂ ಹಿನ್ನೆಲೆಯಾಗಿತ್ತೆಂಬುದಕ್ಕೆ ಚಂದ್ರರಾಜ ಹೇಳುವ "ಬುಧಮಂಡಳಿ ನಚ್ಚಿ ಮೆಚ್ಚಿ ಚಂದ್ರನ ಕೃತಿಯಂ"[೧೪] ಹಾಗೂ ರಟ್ಟಕವಿಯ ಜನಕನನುರಾಗನೆ ನೆಗಳ್ದಂ.... ಎಂದು ಹೇಳುವ ಮಾತುಗಳನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು. ರಾಜಶೇಖರನು ತನ್ನ ಕಾವ್ಯಮೀಮಾಂಸೆಯಲ್ಲಿ ಅಲಂಕಾರಶಾಸ್ತ್ರದ ಮೂಲವನ್ನು ಶಿವನಿಗೆ ಆರೋಪಿಸಿದ್ದನ್ನು ಗಮನಿಸಬಹುದು. ವ್ಯಾಕರಣ ಗ್ರಂಥವನ್ನು ರಚಿಸಿದ ಕೇಶಿರಾಜನು ಕೂಡ ತನ್ನ ಶಬ್ದಮಣಿದರ್ಪಣದಲ್ಲಿ "ವ್ಯಾಕರಣದಿಂದೆ ಪದಂ, ಪದಿದಂ ಅರ್ಥ, ಅರ್ಥದೆ ತತ್ವಾಲೋಕಂ, ತತ್ವಾಲೋಕದಿಂ ಆಕಾಂಕ್ಷಿಪ ಮುಕ್ತಿಯುಕ್ಕುಂ"[೧೫] ಎಂದಿದ್ದಾನೆ. ಬುದ್ಧ-ಮಹಾವೀರರು ತಂತಮ್ಮ ಧರ್ಮ ಪ್ರಚಾರ ಮಾಡಲು ಸಾಮಾನ್ಯ ಜನರ ಭಾಷೆಗಳಾಗಿದ್ದ ಪ್ರಾಕೃತ, ಅಪಭ್ರಂಶ, ಪಾಳಿ ಭಾಷೆಗಳನ್ನು ಬಳಸಿ ಪ್ರಚಾರ ಮಾಡಿದ

ತತ್ತ್ವ ವಿಚಾರಗಳೇ ಕ್ರಮೇಣವಾಗಿ ಆಯಾಮತದ ಶಾಸ್ತ್ರ ಗ್ರಂಥಗಳಾಗಿ ರೂಪಗೊಂಡವು ಎಂದು ಎಂ.ವಿ.ಸೀತಾರಾಮಯ್ಯನವರು ಅಭಿಪ್ರಾಯಪಡುತ್ತಾರೆ.

ಹೀಗೆ ಶಾಸ್ತ್ರ ಸಾಹಿತ್ಯದ ಸ್ವರೂಪ, ಶ್ಲೋಕ, ಟೀಕು, ವೃತ್ತ, ಕಂದ, ಮುಂತಾದ ಪ್ರಕಾರಗಳಲ್ಲಿ ಬೆಳೆದು ಬಂದಿರುವುದನ್ನು ಅದರ ಸಿದ್ಧಾಂತ ತತ್ವಗಳ ಹಿನ್ನೆಲೆಯಲ್ಲಿ ಗಮನಿಸಬಹುದು.

೨.೨.೩. ಪರಂಪರೆ

ಶಾಸ್ತ್ರ ಸಾಹಿತ್ಯದ ಹುಟ್ಟು ಬೆಳವಣಿಗೆಯನ್ನು ಕುರಿತು ನಿರ್ದಿಷ್ಟವಾಗಿ ಹೇಳಲು ಸಾಧ್ಯವಾಗಿಲ್ಲ, ಕಾರಣ ಇದಕ್ಕೆ ಸಾಕಷ್ಟು ಆಧಾರಗಳ ಕೊರತೆಯಿದೆ. ಆದರೆ ಕಾವ್ಯ ಸಾಹಿತ್ಯಕ್ಕೆ ಸಂಬಂಧಿಸಿದ ಅಧ್ಯಯನ ಹೆಚ್ಚು. ಶಾಸ್ತ್ರಸಾಹಿತ್ಯ ಕುರಿತ ಅಧ್ಯಯನ ಉಪೇಕ್ಷೆಗೊಂಡಿರುವುದು ಅದರ ರಚನೆಯ ದೃಷ್ಟಿಯಿಂದ ವಿಧಿತವಾಗುತ್ತದೆ. ಡಾ.ಟಿ.ವಿ.ವೆಂಕಟಾಚಲಶಾಸ್ತ್ರೀ ಅವರು ಹೇಳುವಂತೆ ಶಾಸ್ತ್ರ ಮತ್ತು ವಿಚಾರ ಪ್ರಧಾನವಾದ ಪ್ರಕಾರಗಳಲ್ಲಿ ಸೃಜನಶೀಲ ಮನೋಧರ್ಮ ಹೆಚ್ಚಾಗಿ ಬೇಕಾಗಿಲ್ಲ ಎಂಬ ಗ್ರಹಿಕೆ ನಮ್ಮಲ್ಲಿದ್ದು, ಲೌಕಿಕಶಾಸ್ತ್ರ ಸಾಹಿತ್ಯದ ಗ್ರಂಥಗಳ ಪ್ರಕಟಣೆ ಅತ್ಯಂತ ವಾದ ಅವಜ್ಞೆಗೆ ಗುರಿಯಾಗಿರುವುದು ವಿಷಾದಕರವಾಗಿದೆ. ಎಂಬ ವಾಕ್ಯಗಳು ಮೇಲಿನ ಸಾಲಿಗೆ ಸರಿಹೊಂದುತ್ತವೆ. ಹೀಗಾಗಿ ಚಾರಿತ್ರಿಕ ಕ್ರಮದ ಒಂದು ನಿರೂಪಣೆಯ ಮೂಲಕ ಅವುಗಳ ಕಾಲ, ಜನಾಂಗ, ಪರಿಸರ ಮುಂತಾದ ಅನೇಕ ವಿಷಯಗಳನ್ನು ಸುವ್ಯವಸ್ಥಿತವಾದ ರೀತಿಯಲ್ಲಿ ಕಟ್ಟಿಕೊಡುವುದು ಕಷ್ಟ. ಇಷ್ಟೆಲ್ಲ ಅನೇಕ ತೊಂದರೆಗಳ ನಡುವೆ ವಿದ್ವಾಂಸರ ಅಧ್ಯಯನ, ಅಧ್ಯಾಪನ, ಸಂಶೋಧನೆ, ಚರ್ಚೆ, ವ್ಯಾಸಂಗ, ವಿಮರ್ಶೆ ಮುಂತಾದವುಗಳ ಸಹಾಯದಿಂದ ಉಪಲಬ್ಧ ಆಕಾರಗಳ ಮೂಲಕ ಶಾಸ್ತ್ರಸಾಹಿತ್ಯದ ಒಂದು ಪರಂಪರೆಯನ್ನು ಕಟ್ಟಿಕೊಡುವ ಪ್ರಯತ್ನವನ್ನು ಈ ಅಧ್ಯಯನದ ಮೂಲಕ ಮಾಡಲಾಗಿದೆ.

ಆರಂಭದ ಕಾಲಘಟ್ಟದಲ್ಲಿ ಕನ್ನಡ ಸಾಹಿತ್ಯ ಬೆಳೆದು ಬಂದದ್ದು ರಾಜಾಶ್ರಯದಲ್ಲಿ. ಕರ್ನಾಟಕದ ಅರಸುಮನೆತನಗಳು ಅನೇಕ ಕವಿ ಕಲಾವಿದರನ್ನು ಪ್ರೋತ್ಸಾಹಿಸಿದ ಪರಿಣಾಮವಾಗಿ ಕಲೆ, ಸಂಸ್ಕೃತಿ, ಸಾಹಿತ್ಯಗಳ ಬೆಳವಣಿಗೆಯಾಯಿತು. ಹೀಗಾಗಿ ಒಂದು ಭಾಷೆಯ ಸಾಹಿತ್ಯ ಚರಿತ್ರೆಯ ವಿವೇಚನೆಗೆ ತೊಡಗಿದಾಗ ಅಂದಿನ ರಾಜಕೀಯ, ಧಾರ್ಮಿಕ, ಆರ್ಥಿಕ ಸಾಮಾಜಿಕ ಸ್ಥಿತಿಗತಿಗಳ ಅವಲೋಕನ ಅಗತ್ಯವಿದೆ. ಲೌಕಿಕ-ಆಗಮಿಕ ಕಾವ್ಯ ಪರಂಪರೆಗೆ ಶ್ರೀಕಾರ ಹಾಕಿದ ಜೈನಕವಿಗಳು ಕಾವ್ಯಗಳ ಕೃತಿಗಳ ಜೊತೆಗೆ ಶಾಸ್ತ್ರ ಸಿದ್ಧಾಂತ ಕೃತಿಗಳನ್ನು ರಚಿಸಿದರು. ಈ ಕಾರಣದಿಂದಾಗಿಯೇ ಜೈನಧರ್ಮದಲ್ಲಿ ಸಿದ್ಧಾಂತ ಬಸದಿಗಳಿರುವುದನ್ನು ಕಾಣಬಹುದು. ಇವರು ಆಗಮಿಕ ಲೌಕಿಕ ಕಾವ್ಯ ಪ್ರಕಾರಗಳಂತೆ ಶಾಸ್ತ್ರಕೃತಿಗಳಲ್ಲೂ ಆಗಮಿಕ -ಲೌಕಿಕ ಶಾಸ್ತ್ರ ಎಂಬ ಪರಂಪರೆಯನ್ನು ಹಾಕಿಕೊಂಡರು.

ಕ್ರಿ.ಶ. ೫ನೇ ಶತಮಾನಕ್ಕಿಂತ ಹಿಂದೆಯೇ ಜೈನರು ಸಂಸ್ಕೃತ-ಪ್ರಾಕೃತ ಭಾಷೆಯಲ್ಲಿದ್ದ ಧಾರ್ಮಿಕ ಗ್ರಂಥಗಳನ್ನು ಇತರ ಶಾಸ್ತ್ರ ಗ್ರಂಥಗಳನ್ನು, ಪುರಾಣಗಳನ್ನು ಆಧಾರವಾಗಿಟ್ಟುಕೊಂಡು ಜನಸಾಮಾನ್ಯರಿಗೆ

ಹತ್ತಿರವಾದ ಕನ್ನಡದಲ್ಲಿ ಧರ್ಮ ಪ್ರಸಾರ ಮಾಡಲು ಹೊರಟರು. ಆದರೆ ಪುರಾಣ ಕಥೆಗಳನ್ನು ಹೊಂದಿದ್ದ ಶಾಸ್ತ್ರ ಕೃತಿಗಳು ಬರಬರುತ್ತಾ ರಾಜರ ಕಥೆಗಳಾಗಿ ಬೆಳೆದು ಬಂದದ್ದನ್ನು ಕನ್ನಡ ಸಾಹಿತ್ಯದಲ್ಲಿ ಕಾಣುತ್ತೇವೆ.

ಶಬ್ದಾಗಮ, ಯುಕ್ತ್ಯಾಗಮ, ಪರಮಾಗಮಗಳ ಮೇಲಿನ ಗ್ರಂಥಗಳೂ ಕಾವ್ಯ, ನಾಟಕ, ಅಲಂಕಾರ ಹಾಗೂ ವಿವಿಧ ಕಲೆಗಳನ್ನು ಕುರಿತ ಅಸಂಖ್ಯಾತ ಗ್ರಂಥಗಳು ಕನ್ನಡದಲ್ಲಿ ಹುಟ್ಟಿವೆ ಎಂಬ ಭಟ್ಟಕಳಂಕನ ಮಾತು ಶಾಸ್ತ್ರಗ್ರಂಥದ ವೈವಿಧ್ಯತೆಯ ಸಮೃದ್ಧಿಯನ್ನು ಸೂಚಿಸುತ್ತದೆ. ವ್ಯಾಕರಣ ಛಂದಸ್ಸುಗಳ ವಿಪುಲ ವಿಚಾರಗಳನ್ನೊಳಗೊಂಡ ಕವಿರಾಜಮಾರ್ಗ ಒಂದು ಕಾವ್ಯಶಾಸ್ತ್ರ ಗ್ರಂಥವಾಗಿದೆ. ಪ್ರಾಚೀನ ಕಾಲದಿಂದಲೂ ಬೆಳೆದು ಬಂದ ಶಾಸ್ತ್ರ ಸಾಹಿತ್ಯವನ್ನು ಗಮನಿಸಿದರೆ, ಸಂಸ್ಕೃತ ಭಾಷೆಯಲ್ಲಿನ ಗ್ರಂಥಗಳಷ್ಟೇ ಕನ್ನಡ ಗ್ರಂಥಗಳೂ ಆಳವಾದ ಅಧ್ಯಯನಕ್ಕೆ ಯೋಗ್ಯವಾದವುಗಳೆಂಬುದು ಅರಿವಾಗದಿರದು.

ಶಾಸ್ತ್ರ ಸಾಹಿತ್ಯದ ಬೆಳವಣಿಗೆಯಲ್ಲಿ ಮಹತ್ತರವಾದ ಸಾಧನೆಯನ್ನು ನಮ್ಮ ಕವಿಗಳು ಮಾಡಿ ತೋರಿಸಿದ್ದಾದರೂ ಕವಿಚರಿತ್ರೆಕಾರರು ಹೇಳುವಂತೆ ಕನ್ನಡದಲ್ಲಿ ಶಾಸ್ತ್ರಗ್ರಂಥಗಳು ಹೇರಳವಾಗಿ ಹುಟ್ಟಿವೆ, ಆದರೆ ಅವುಗಳು ಉಪಲಬ್ಧವಿಲ್ಲ. ವೈದ್ಯ, ಜ್ಯೋತಿಷ್ಯ ಮುಂತಾದ ಹಲವಾರು ಶಾಸ್ತ್ರ ವಿಷಯಗಳನ್ನು ಕುರಿತು ಗ್ರಂಥರಚನೆಯಾಗಿವೆ; ಅವುಗಳಲ್ಲಿ ಸಂಸ್ಕೃತ ಅನುಪೂರ್ವಿಯ ಪ್ರಭಾವವಿದ್ದರೂ ಸ್ವಾನುಭವದ ಸ್ವತಂತ್ರ ಅಂಶಗಳಿವೆ ಎಂಬ ವಿಚಾರವನ್ನು ರಂ.ಶ್ರೀ.ಮುಗಳಿ ಅವರು ವ್ಯಕ್ತಪಡಿಸಿದ್ದಾರೆ.

ಕವಿರಾಜಮಾರ್ಗ ಪೂರ್ವದಲ್ಲಿ ಅನೇಕ ಶಾಸ್ತ್ರಗ್ರಂಥಗಳು ರಚನೆಗೊಂಡಿರುವ ಉಲ್ಲೇಖಗಳು ಸಿಗುತ್ತವೆ. ಅದರಲ್ಲೂ ವಿಶೇಷವಾಗಿ ವೈದ್ಯಶಾಸ್ತ್ರಕ್ಕೆ ಸಂಬಂಧಿಸಿದ ಅನೇಕ ಗ್ರಂಥಗಳಿದ್ದವೆಂದು ವಿದ್ವಾಂಸರು ಊಹಿಸಿದ್ದಾರೆ. ಕ್ರಿ.ಶ. ೨ನೇ ಶತಮಾನದಲ್ಲಿ ವೈದ್ಯ ಗ್ರಂಥಕರ್ತೃ ನಾಗಾರ್ಜುನನ ಹೆಸರು ಕೇಳಿ ಬರುತ್ತದೆ. ಪೂಜ್ಯಪಾದನ ಸೋದರಳಿಯನಾದ ಈತನು 'ರಸವಾದ'ದಲ್ಲಿ ನುರಿತವನೂ ವೈದ್ಯ ಶಾಸ್ತ್ರದಲ್ಲಿ ನಿಪುಣನೂ ಆಗಿದ್ದನೆಂದು ತಿಳಿದು ಬರುತ್ತದೆ.

ಕವಿಚರಿತಕಾರರು ಹೇಳುವಂತೆ "ನಾಗಾರ್ಜುನ ಕಕ್ಷಪುಟ" ಎಂಬ ವೈದ್ಯಗ್ರಂಥ ನಾಗಾರ್ಜುನದೇ ಆಗಿರುವ ಸಂಭವವಿದೆ ಎಂಬುದು ಮುಗಳಿ ಅವರ ಅಭಿಪ್ರಾಯವಾಗಿದೆ. ಇದೇ ಅವಧಿಯಲ್ಲಿ ಉಮಾಸ್ವಾತಿಯ ತತ್ವಾರ್ಥಸೂತ್ರಕ್ಕೆ ಬರೆದ ವ್ಯಾಖ್ಯಾನ ಗ್ರಂಥ 'ಚೂಡಾಮಣಿಯ' ಉಲ್ಲೇಖವೂ ಆಗಿದ್ದು, ಈ ವ್ಯಾಖ್ಯಾನವನ್ನು ತುಂಬಲೂರಾಚಾರ್ಯ ಬರೆದನೆಂದು, ದೇವಚಂದ್ರನು ಅಭಿಪ್ರಾಯ ಪಟ್ಟಿದ್ದನ್ನು ಉಲ್ಲೇಖಿಸುತ್ತಾ ಡಾ. ಎಂ.ಎಂ.ಕಲಬುರ್ಗಿಯವರು ಹುಮ್ಮಚ ಶಾಸನದ ಹೇಳಿಕೆಯೊಂದನ್ನು ಗಮನದಲ್ಲಿರಿಸಿಕೊಂಡು ಸಮಂತಭದ್ರನ ಶಿಷ್ಯ ಶಿವಕೋಟಿ ಇಲ್ಲವೆ ಶಿವಕೋಟಿಯ ಪ್ರಶಿಷ್ಯನಾದ ಆರ್ಯದೇವ ಈ ತತ್ವಾರ್ಥಸೂತ್ರಕ್ಕೆ ಟೀಕೆ ಬರೆದಿದ್ದು, ಭಟ್ಟಕಳಂಕ ಹೇಳುವ ಚೂಡಾಮಣಿ ಇದೇ ಆಗಿರಲು ಸಾಧ್ಯವಿದೆ ಎಂದು ಊಹಿಸಿದ್ದಾರೆ.

ತುಂಬಲೂರಾಚಾರ್ಯನ ಕಾಲದಲ್ಲಿಯೇ ಇದ್ದ ಶ್ಯಾಮಕುಂದಾಚಾರ್ಯನು ಪ್ರಾಕೃತ, ಸಂಸ್ಕೃತ ಹಾಗೂ ಕರ್ನಾಟಕ ಭಾಷೆಯಲ್ಲಿ ಪ್ರಾಭೃತವನ್ನು ರಚಿಸಿದ್ದಾಗಿ ತಿಳಿದು ಬರುತ್ತದೆ. ಈ ಕಾರಣಗಳಿಂದ ಜೈನ ಆಚಾರ್ಯರು ಕನ್ನಡದಲ್ಲಿ ಜೈನಶಾಸ್ತ್ರಕ್ಕೆ ಸಂಬಂಧಿಸಿದ ಗ್ರಂಥಗಳನ್ನು ಕ್ರಿ.ಶ. ೨೦೦ರಿಂದ ಬರೆಯತೊಡಗಿರಬಹುದೆಂದು ರಂ.ಶ್ರೀ ಮುಗಳಿಯವರು ಅಭಿಪ್ರಾಯಪಡುತ್ತಾರೆ. ಸುಮಾರು ೮೦೦ರಲ್ಲಿ ಜೀವಿಸಿದ್ದ ಗಂಗರಾಜ ಸೈಗೊಟ್ಟ ಶಿವಮಾರನು 'ಶಿವಮಾರಮತ' ಎಂಬ ೮ ಪದ್ಯಗಳ ಗಜಶಾಸ್ತ್ರ ರಚಿಸಿದ್ದಾಗಿ ಹುಮ್ಮಚ ಶಾಸನದಿಂದ ತಿಳಿದು ಬರುತ್ತದೆ. 'ಭೂವಳಯದೊಳ್ ಗಜಾಷ್ಟಕ' ಎಂದು ಮೇಲಿನ ಶಾಸನದಲ್ಲಿ ಹೇಳಿರುವುದರಿಂದ ೮ ಪದ್ಯಗಳ ಈ ಕೃತಿಗೆ 'ಗಜಾಷ್ಟಕ' ವೆಂಬುದು ಅನ್ವರ್ಥಕನಾಮವೆಂದು ವೇದ್ಯವಾಗುತ್ತದೆ ಎಂದು ಡಾ. ಎಂ.ಎಂ.ಕಲಬುರ್ಗಿ ಅವರು ಅಭಿಪ್ರಾಯಪಟ್ಟರೆ, ಟಿ.ಕೇಶವಭಟ್ಟ ಅವರು ಈ ಗಜಾಷ್ಟಕವು ಎಂಟು ಪದ್ಯಗಳ ಕೃತಿಯಾಗಿದ್ದು, ಎಂಟು ಅಧ್ಯಾಯಗಳಿಂದ ಕೂಡಿರುವ ಗ್ರಂಥವಾಗಿರಬೇಕು ಎಂದು ಸೂಚಿಸುತ್ತಾರೆ. ಹಾಗೆಯೇ ಲೋಹದಿಂದ ಬಂಗಾರ ತಯಾರಿಸುವ ವಿದ್ಯೆಯನ್ನು 'ಕಿಮಿಯಾವಿದ್ಯೆ' ಎಂದು ಕರೆಯುತ್ತಿದ್ದರು. ಇದು ಅತ್ಯಂತ ಪ್ರಾಚೀನ ವಿದ್ಯೆ ಎಂಬುದಕ್ಕೆ ಸಾಕ್ಷಿಯಾಗಿ ಸುಮಾರು ೫ನೆಯ ಶತಮಾನದಲ್ಲಿ 'ಸಿದ್ಧನಾಗಾರ್ಜುನ'ನೆಂಬ ಜೈನಕವಿ ವೈದ್ಯಗ್ರಂಥ ಕರ್ತನು ಲೋಹದಿಂದ ಬಂಗಾರ ಮಾಡುವ 'ಕಿಮಿಯಾವಿದ್ಯೆ'ಯನ್ನು ಪ್ರಕಟಿಸಿದನೆಂದು ಡಾ.ಪಿ.ಸಿ.ರಾಯ್ ಅವರು ತಮ್ಮ 'ಹೈಂದವ ರಸಾಯನ ಶಾಸ್ತ್ರದ ಇತಿಹಾಸ' ಎಂಬ ಗ್ರಂಥದಲ್ಲಿ ತಿಳಿಸಿರುವುದನ್ನು ಕಾಣಬಹುದು.

ವೈದ್ಯಗ್ರಂಥಗಳಲ್ಲಿ 'ಗೋವೈದ್ಯ' (ಕೀರ್ತಿವರ್ಮ) ವನ್ನು ಬಿಟ್ಟರೆ ಪೂಜ್ಯಪಾದನ ಸಂಸ್ಕೃತ ಮೂಲಗ್ರಂಥದ ಅನುವಾದ ಎಂದು ತಿಳಿಯಲಾದ ಜಗದ್ದಳ ಸೋಮನಾಥನ 'ಕಲ್ಯಾಣಕಾರಕ' ಅತ್ಯಂತ ಪ್ರಾಚೀನವಾದದ್ದು. ವೈದ್ಯದಲ್ಲಿ, ಸಾಮಾನ್ಯವೈದ್ಯ, ಗೋವೈದ್ಯ, ಅಶ್ವವೈದ್ಯ, ಗಜವೈದ್ಯ, ಬಾಲವೈದ್ಯ, ಪುರುಷವೈದ್ಯ, ಸ್ತ್ರೀವೈದ್ಯ ಮುಂತಾದ ಶಾಖೆ ಉಪಶಾಖೆಗಳು ಕಂಡು ಬರುತ್ತವೆ. ವೈದ್ಯ ಶಾಸ್ತ್ರಕ್ಕೆ ಸಂಬಂಧಿಸಿದಂತೆ ಸುಮಾರು ಮೂವತ್ತು ಗ್ರಂಥಗಳು ಹುಟ್ಟಿರುವುದು ಈ ಶಾಸ್ತ್ರದ ಜನೋಪಯುಕ್ತತೆಯನ್ನು ಸಾರುತ್ತದೆ. ಶ್ರೀಧರನ 'ವೈದ್ಯಾಮೃತ', ಸಾಳ್ವನ 'ವೈದ್ಯ ಸಾಂಗತ್ಯ', ದೇವೇಂದ್ರಮುನಿಯ 'ಬಾಲಗ್ರಹಚಿಕಿತ್ಸೆ', ವೀರಭದ್ರರಾಜನ 'ಹಸ್ತಾಯುರ್ವೇದ' ನಂಜರಾಜನ 'ಸಕಲವೈದ್ಯ ಸಂಹಿತಾ ಸಾರಾರ್ಣವ', ಎಳಂದೂರು ದೊರೆ ಚನ್ನರಾಜನ 'ವೈದ್ಯಸಾರ ಸಂಗ್ರಹ', ಬ್ರಹ್ಮನ 'ವೈದ್ಯಕಂದ' ತಿಮ್ಮರಾಜಗೌಡನ 'ಸ್ತ್ರೀವೈದ್ಯ' ಅಭಿನವಚಂದ್ರ ಮತ್ತು ಚಾಚರಸರ 'ಅಶ್ವವೈದ್ಯ' ಹೀಗೆ ವೈದ್ಯಶಾಸ್ತ್ರ ಗ್ರಂಥಗಳ ಪಟ್ಟಿಯನ್ನು ನೋಡಿದರೆ 'ಶಾಸ್ತ್ರ'ದ ಬಗ್ಗೆ ಶಾಸ್ತ್ರಕಾರರಿಗಿರುವ ಒಲವು ಅಪಾರವಾದುದೆಂಬುದರಲ್ಲಿ ಅನುಮಾನವಿಲ್ಲ. ಅಲ್ಲದೇ ಈ ಶಾಸ್ತ್ರಕಾರರು ಚರಕ, ಸುಶ್ರುತ, ವಾಗ್ಭಟ, ಶಾಙ್ಗಧರ, ಸಿದ್ಧಸಾರ, ಧನ್ವಂತರಿ ಮುಂತಾದವರು ಬರೆದ ಸಂಸ್ಕೃತ ವೈದ್ಯಗ್ರಂಥಗಳನ್ನು ಅಭ್ಯಾಸಮಾಡಿ ಅವನ್ನು ಯಥೋಚಿತವಾಗಿ ಬಳಸಿಕೊಂಡರೆಂದೂ ತಿಳಿದುಬರುತ್ತದೆ.

ಜ್ಯೋತಿಷ್ಯಶಾಸ್ತ್ರದಲ್ಲಿ ಜೈನಕವಿ ಶ್ರೀಧರಾಚಾರ್ಯನ (೧೦೪೯) 'ಜಾತಕ ತಿಲಕ' ಪ್ರಾಚೀನ ಗ್ರಂಥ. ನಂತರ ೧೫೦೦ರಲ್ಲಿ ಲಕ್ಷ್ಮಣಾಂಕನ ಶಕುನಸಾರ, ಅದೇ ಕಾಲದಲ್ಲಿದ್ದ ಶುಭಚಂದ್ರನ 'ನರಪಿಂಗಳಿ', ಚಾಕರಾಜನ 'ಶಕುನಪ್ರಪಂಚ', ಗಂಗಾಧರನ 'ರಟ್ಟನಜಾತಕ' ಸುಮಾರು ೧೫೦೦ರಲ್ಲಿ ರಟ್ಟಕವಿಯ 'ರಟ್ಟಮತ' ಮುಂತಾದ ಜ್ಯೋತಿಷ್ಯ ಶಾಸ್ತ್ರಕ್ಕೆ ಸಂಬಂಧಪಟ್ಟ ಗ್ರಂಥಗಳು ರಚಿತಗೊಂಡಿವೆ. ಇಲ್ಲಿಯ ಗ್ರಂಥಕರ್ತರೂ ಆರ್ಯಭಟ, ಗಾರ್ಗ್ಯ, ವಶಿಷ್ಟ, ವಹಾರಮಿಹಿರ, ವಸಂತರಾಜ ಮುಂತಾದ ಪೂರ್ವಚಾರ್ಯರ ಕೃತಿಗಳಿಗೆ ಬಹುಮಟ್ಟಿಗೆ ಋಣಿಯಾಗಿದ್ದಾರೆ. ಸುಮಾರು ೧೦೧೨-೪೨ರ ಕಾಲದಲ್ಲಿದ್ದ ಚಂದ್ರರಾಜನೆಂಬ ಕವಿ ವಾತ್ಸಾಯನನ ಕಾಮಶಾಸ್ತ್ರವನ್ನು ಅನುಸರಿಸಿ 'ಮದನತಿಲಕ' ಎಂಬ ಗ್ರಂಥವನ್ನು ರಚಿಸಿದನು. ೧೪ನೆಯ ಶತಮಾನದ ಕೊನೆಯ ಭಾಗಕ್ಕೆ ಕವಿಮಲ್ಲನು 'ಮನ್ಮಥ ವಿಜಯ' ಎಂಬ ಕಾಮಶಾಸ್ತ್ರವನ್ನು ಚಂಪೂ ಪ್ರಕಾರದಲ್ಲಿ ಬರೆದಿದ್ದಾನೆ. ೧೪೫೦ರಲ್ಲಿ ಕಲ್ಲರಸನಿಂದ 'ಜನವಶ್ಯ' ಎಂಬ ಮತ್ತೊಂದು ಕಾಮಶಾಸ್ತ್ರ ಕೃತಿ ರಚಿತವಾಗಿದೆ.

ವೈದ್ಯ, ಜ್ಯೋತಿಷ್ಯಶಾಸ್ತ್ರ ಗ್ರಂಥಗಳಂತೆ ಗಣಿತಶಾಸ್ತ್ರದಲ್ಲಿ ಹೇರಳವಾಗಿ ಗ್ರಂಥ ರಚನೆಯಾಗಿವೆ. ಆದರಲ್ಲೂ ಶಾಸ್ತ್ರ ಕೃತಿಗಳ ದೃಷ್ಟಿಯಿಂದ ಹನ್ನೆರಡನೆಯ ಶತಮಾನ ಸಮೃದ್ಧಿಕಾಲ ಎಂದು ಹೇಳಬಹುದು. 'ವ್ಯವಹಾರ ಗಣಿತ', 'ಕ್ಷೇತ್ರಗಣಿತ', 'ವ್ಯವಹಾರರತ್ನ', 'ಚಿತ್ರಹಸುಗೆ', 'ಜೈನಗಣಿತಸೂತ್ರ', ಮುಂತಾದ ಗ್ರಂಥಗಳನ್ನು ರಚಿಸಿದ್ದಾಗಿ ತಿಳಿದು ಬರುತ್ತದೆ. ಕನ್ನಡದಲ್ಲಿ ಬರೆದ ಮೊದಲಿಗನು ಇವನೇ ಆಗಿದ್ದು, ಈತನ ಕಾಲ ೧೧೯೦ ಎಂದು ಕವಿಚರಿತೆಕಾರರು ಅಭಿಪ್ರಾಯಪಟ್ಟಿದ್ದಾರೆ. ಕಂಠೀರವ ನರಸರಾಜ ಒಡೆಯರ ಕಾಲದಲ್ಲಿದ್ದ ಭಾಸ್ಕರನ 'ಬೇಹಾರಗಣಿತ', ತಿಮ್ಮರಸನ 'ಕ್ಷೇತ್ರಗಣಿತ', ಬಾಲವೈದ್ಯದ ಚೆಲುವನ 'ಕನ್ನಡ ಲೀಲಾವತಿ' (ಕ್ಷೇತ್ರ ಗಣಿತ), ಸಿಂಹರಾಜನ 'ಗಣಿತಸಾರ' ಮುಂತಾದ ಗಣಿತಶಾಸ್ತ್ರ ಗ್ರಂಥಗಳು, ಟೀಕಾಗ್ರಂಥಗಳು ರಚಿತವಾಗಿವೆ. ಮದ್ರಾಸ್ ಪ್ರಾಚ್ಯಕೋಶಾಲಯದಲ್ಲಿ ದೊರೆತ ಶಕ ೯೬೩ರಲ್ಲಿ ಬರೆದ ಒಂದು ಶಾಸನದಲ್ಲಿ ಏಚಮ (೧೦೪೧) ಎಂಬುವನನ್ನು ವಿಶೇಷವಾಗಿ ಸುತ್ತಿಸಿ ಅಲ್ಲಿರುವ ಒಂದು ಪದ್ಯದ ಮುಖಾಂತರ ಅವನು 'ಭರತ ಶಾಸ್ತ್ರ'ವನ್ನು ಬರೆದಂತೆ ಎಂಬುದಾಗಿ ಕವಿಚರಿತೆಕಾರರು ತಿಳಿಸುತ್ತಾರೆ. ಸಿಂಹಭೂಪಾಲನು 'ಲಾಸ್ಯರಂಜನಿ' ಎಂಬ ನಾಟ್ಯ ಶಾಸ್ತ್ರಕ್ಕೆ ಸಂಬಂಧಪಟ್ಟ ಗ್ರಂಥ ರಚಿಸಿದ್ದಾಗಿಯೂ ತಿಳಿದು ಬರುತ್ತದೆ. ಅಲ್ಲದೆ ಯಕ್ಷಗಾನಕ್ಕೆ ಸಂಬಂಧಪಟ್ಟ ಶಾಸ್ತ್ರಗ್ರಂಥಗಳು, ವಾಸ್ತುಶಾಸ್ತ್ರ, ಖಡ್ಗಶಾಸ್ತ್ರ, ಮುಲ್ಲಾಶಾಸ್ತ್ರ, ಹೋರಾಶಾಸ್ತ್ರ, ಗಾರ್ದಭಶಾಸ್ತ್ರ, ಭೂಮಿಶಾಸ್ತ್ರ, ಮರ್ಮಶಾಸ್ತ್ರ, ನೀತಿಶಾಸ್ತ್ರ, ರತ್ನಶಾಸ್ತ್ರ ಎಂಬಿತ್ಯಾದಿ ಹಲವಾರು ಶಾಸ್ತ್ರ ಗ್ರಂಥಗಳು ರಚಿತವಾಗಿವೆ.

ಮೇಲಿನ ಎಲ್ಲ ಶಾಸ್ತ್ರ ಗ್ರಂಥಗಳಲ್ಲದೆ ಕನ್ನಡದ 'ಲೋಕೋಪಕಾರ', 'ಸಿರಿಭೂವಲಯ', 'ಅಭಿಲಷಿತಾರ್ಥ ಚಿಂತಾಮಣಿ', ವಿಶ್ವಕೋಶಗಳಿಂದ ಸಕಲ ವಿಷಯ ವಸ್ತುಗಳ ಪರಿಚಯವಾಗಲು ಸಾಧ್ಯ. ಹೆಸರಿಗೆ ತಕ್ಕ ಹಾಗೆ ಇವು ಲೋಕರಹಿತವುಂಟುಮಾಡುವ ಜ್ಞಾನಕೋಶಗಳು. ವಿಶ್ವಕೋಶಗಳು,

ಕನ್ನಡ ಶಾಸ್ತ್ರಸಾಹಿತ್ಯದಲ್ಲಿದ್ದು, ಇವುಗಳಿಗೆ ಉನ್ನತವಾದ ಸ್ಥಾನವಿದೆ. ಅಲ್ಲದೆ ಕವಿರಾಜಮಾರ್ಗ, ಛಂದೋಂಬುಧಿ, ಉದಯಾದಿತ್ಯನ ಅಲಂಕಾರಗ್ರಂಥ, ಶಬ್ದಮಣಿದರ್ಪಣ ಭಾರತೀಯ ಕಾವ್ಯಮೀಮಾಂಸೆ ಇಂಥ ಹತ್ತು ಹಲವು ಶಾಸ್ತ್ರ ಗ್ರಂಥಗಳು ಕನ್ನಡಕ್ಕೆ ಬೆಲೆಯುಳ್ಳ ಚಿರಂತನವಾದ ಅಮೂಲ್ಯ ಗ್ರಂಥಗಳಾಗಿದ್ದು ಕನ್ನಡ ಶಾಸ್ತ್ರ ಸಾಹಿತ್ಯ ಶ್ರೀಮಂತಗೊಳ್ಳಲು ಕಾರಣವಾಗಿದೆ.

೨.೩. ಲೌಕಿಕ ಶಾಸ್ತ್ರ ಸಾಹಿತ್ಯ ಪರಿಚಯ

ಸಾಮಾನ್ಯವಾಗಿ ಲೌಕಿಕಶಾಸ್ತ್ರ ಎಂದರೆ ಲೋಕಕ್ಕೆ ಹಿತವನ್ನು ಬಯಸುವ, ಜನಹಿತಕಾರಿ, ಸರ್ವಜನ ಸಮುದಾಯಕ್ಕೆ ಉಪಯೋಗವಾಗುವ ಶಾಸ್ತ್ರವನ್ನು ಲೌಕಿಕಶಾಸ್ತ್ರ ಎಂದು ಕರೆಯಬಹುದು. ನಿಜಗುಣ ಶಿವಯೋಗಿಗಳು ತಮ್ಮ ಪ್ರಸಿದ್ಧ ಕೃತಿಯಾದ ವಿವೇಕಚಿಂತಾಮಣಿಯಲ್ಲಿ 'ಲೌಕಿಕವೇ ಧನ್ವಂತರ್ಯಾದಿ ಗಳಿಂದುಕ್ತವಾದ ಆಯುರ್ವೇದ, ದಂಡನೀತಿ ಮೊದಲಾದ ದೃಷ್ಟ ಫಲಂಗಳಂ ನಿರ್ಧರಿಸುತ್ತಿರ್ಕ್ಕುಂ ಎಂದು ಲೌಕಿಕದ ಅರ್ಥವನ್ನು ಕುರಿತು ವಿವರಿಸುತ್ತಾರೆ. ಈ ಬಗೆಯ ಶಾಸ್ತ್ರಗಳನ್ನು ಪ್ರತಿಪಾದಿಸುವ ಸಾಕಷ್ಟು ಕೃತಿಗಳು ಕನ್ನಡದಲ್ಲಿ ರಚನೆಗೊಂಡಿವೆ. ಕನ್ನಡದಲ್ಲಿ ಶಾಸ್ತ್ರಕೃತಿಗಳ ರಚನೆ ಸಾಕಷ್ಟು ಪ್ರಮಾಣದಲ್ಲಿ ರಚನೆಗೊಂಡಿತ್ತು ಎಂಬ ವಿಚಾರವನ್ನು ಭಟ್ಟಕಳಂಕ ತಿಳಿಸುತ್ತಾ 'ಶಬ್ದಾಗಮಯುಕ್ತ್ಯಾಗಮ ಪರಮಾಗಮ ವಿಷಯಾಣಾಂ ತಥಾಕಾವ್ಯ ನಾಟಕಾಲಂಕಾರ ಕಲಾಶಾಸ್ತ್ರ ವಿಷಯಣಾಂಚ ಬಹೂನಾಂ ಗ್ರಂಥನಾಮಾಪಿ ಭಾಷಾ ಕೃತಾನಾಮುಪ ಲಭ್ಯಮಾನತ್ವಾತ್ ಎಂಬ ಮಾತು ನಿದರ್ಶನ. ಹಾಗೆಯೇ 'ಆರಯೆತಚ್ಛಾಸ್ತ್ರ ವ್ಯವಹಾರ ಜ್ಞಾನಾರ್ಥಮಾಗಿ ಪೇಳಲ್ಪಡೆಗುಂ' ಎಂಬ ಕೇಶಿರಾಜನ ಹೇಳಿಕೆಯಲ್ಲಿಯೂ ಈ ಅಂಶವನ್ನು ಗುರುತಿಸುತ್ತೇವೆ. ಮೀಮಾಂಸಕರು ಶಾಸ್ತ್ರ ಸಾಹಿತ್ಯವನ್ನು ಲೌಕಿಕ ಹಾಗೂ ಅಲೌಕಿಕ ಎಂದು ವರ್ಗೀಕರಿಸುತ್ತಾರೆ.

ದೊರೆತ ಆಕರಗಳಿಂದ ಶಾಸ್ತ್ರಸಾಹಿತ್ಯ ವಿಪುಲವಾಗಿ ರಚನೆಗೊಂಡು ೧೨ನೇ ಶತಮಾನದ ನಂತರದಲ್ಲಿ ಮತ್ತು ಅದಕ್ಕಿಂತ ಪೂರ್ವದಲ್ಲಿ ಶಾಸ್ತ್ರಸಾಹಿತ್ಯ ರಚನೆಗೊಂಡಿದ್ದರೂ ಅದಕ್ಕೆ ಅಷ್ಟೊಂದು ಮಹತ್ವ ದೊರೆತಿರಲಿಲ್ಲ. ಶಾಸ್ತ್ರಸಾಹಿತ್ಯ ಅಗಾಧ ಪ್ರಮಾಣದಲ್ಲಿ ಬೆಳೆದಿದೆ ಎಂದು ಗುರುತಿಸಲು ವೈದ್ಯಶಾಸ್ತ್ರ, ಜೋತಿಷ್ಯಶಾಸ್ತ್ರ, ಸೂಪಶಾಸ್ತ್ರ, ಅಶ್ವಶಾಸ್ತ್ರ, ಗಜಶಾಸ್ತ್ರ, ಕಾಮಶಾಸ್ತ್ರ, ವ್ಯಾಕರಣ, ಛಂದಸ್ಸು, ನಿಘಂಟು, ವಿಶ್ವಕೋಶ ಇಂಥ ಹಲವಾರು ಲೌಕಿಕ ವಿಷಯಗಳಿಗೆ ಸಂಬಂಧಿಸಿದ ಶಾಸ್ತ್ರಕೃತಿಗಳು ಕನ್ನಡದಲ್ಲಿ ರಚನೆಗೊಂಡಿರುವುದು ಸಾಕ್ಷಿಯಾಗಿ ನಿಂತಿದೆ. ಆದರೆ ಇಲ್ಲಿ ಜನಹಿತಕಾರಿಯಾದ ಶಾಸ್ತ್ರಕೃತಿಗಳನ್ನು ಮಾತ್ರ ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ.

೨.೩.೧. ವೈದ್ಯಶಾಸ್ತ್ರ

ಮಾನವನ ಉಪಯುಕ್ತತೆಗೆ ವೈದ್ಯಶಾಸ್ತ್ರ ಅವಶ್ಯಕ. ದೇಹಕ್ಕೆ ಯಾವುದೇ ಭಾದೆ ಬರದಂತೆ ಮುಂಜಾಗ್ರತೆ ಕೈಗೊಳ್ಳಲು ವೈದ್ಯೋಪಚಾರ ಅತೀ ಮುಖ್ಯವಾದದ್ದು. ಮನುಷ್ಯನ ಪುರುಷಾರ್ಥಸಾಧನೆಗೆ

ಮೂಲ ಸಾಧನ ಶರೀರ. ದಂಡಿ ಹೇಳುವಂತೆ ಶರೀರಂ ತಾವದಿಷ್ಟಾರ್ಥ ವ್ಯವಚ್ಛಿನ್ನ ಪದಾವಲಿ" ಎಂಬ ಮಾತು ಹಾಗೆಯೇ ಚರಕ ಮಹರ್ಷಿಗಳು ಹೇಳುವಂತೆ "ಧರ್ಮಾರ್ಥ ಕಾಮಮೋಕ್ಷಾಣಾಂ ಶರೀರಂ ಮೂಲಮುತ್ತಮಂ ಎಂಬುದು ಹಾಗೂ ಶರೀರ ಮಾದ್ಯಂ ಬಲು ಧರ್ಮಸಾಧನಂ' ಎಂಬ ನೀತಿವಚನವೂ ಧರ್ಮಾದಿಗಳ ಸಾಧನೆಗೆ ಶರೀರ ಮೂಲ ಎಂದು ಸಾರುತ್ತದೆ. ಇಂಥ ಪಂಚಭೂತಾತ್ಮಕವಾದ ಶರೀರವನ್ನು ಸರ್ವರೀತಿಯಿಂದಲೂ ರಕ್ಷಿಸಿಕೊಳ್ಳಬೇಕಾದುದು ಎಲ್ಲರ ಕರ್ತವ್ಯ ಎಂದು ಭಾವಿಸಿ, ನಮ್ಮ ಪ್ರಾಚೀನರು ರೋಗಾದಿಗಳ ಭಾದೆಗಳಿಂದ ಸಂರಕ್ಷಿಸಲು ಆಯುರ್ವೇದವನ್ನು ಮೊರೆಹೋದರು. ಆಯುರ್ವೇದವು ಮನುಷ್ಯನ ಆಯುಷ್ಯವನ್ನು ಹೆಚ್ಚಿಸುವ ಶಾಸ್ತ್ರ ಎಂಬ ನಂಬಿಕೆಯಿದೆ. ಜಗತ್ತಿನ ಮಾನವ ಕಲ್ಯಾಣಕ್ಕಾಗಿಯೇ ಆಯುರ್ವೇದ ಅವತರಿಸಿದೆ ಎಂಬುದು ಚರಕಾದಿಗಳ ಅಭಿಪ್ರಾಯ. ಹೀಗಾಗಿ ಈ ಶಾಸ್ತ್ರಕ್ಕೆ ಶತಶತಮಾನಗಳ ಇತಿಹಾಸವಿದೆ. ವಾಗ್ಭಟನ 'ಅಷ್ಟಾಂಗ ಹೃದಯ' ಇಂದಿಗೂ ವೈದ್ಯಕೀಯ ಜಗತ್ತಿಗೆ ಮಾದರಿಯಾಗಿದೆ. ಸುಶ್ರುತ ಸಂಹಿತೆ, ಚರಕಸಂಹಿತೆ. ಅಷ್ಟಾಂಗ ಹೃದಯ ಕ್ರಮವಾಗಿ ಅರಬ್ಬೀ, ಸರಗ್, ಆಸ್ಟಂಕರ್ ಭಾಷೆಗಳಿಗೆ ಭಾಷಾಂತರವಾಗಿರುವುದು ಭಾರತೀಯ ವೈದ್ಯ ಪದ್ಧತಿಯ ಪ್ರಾಚೀನತೆಗೂ ಅದರ ಹಿರಿಮೆಗೂ ನಿದರ್ಶನವಾಗಿದೆ.

ಪ್ರಾಚೀನ ಕಾಲದಿಂದಲೂ ಕರ್ನಾಟಕದಲ್ಲಿ ಅನೇಕ ವೈದ್ಯಶಾಸ್ತ್ರಜ್ಞರು ಆಗಿಹೋದ ಬಗ್ಗೆ ದಾಖಲೆಗಳಿವೆ. ಎಂಟನೆಯ ಶತಮಾನದ ಉಗ್ರಾದಿತ್ಯ, ಹನ್ನೆರಡನೆಯ ಶತಮಾನದ ಬೋಪದೇವ, ಹೇಮಾದ್ರಿ ಮುಂತಾದವರು ಗ್ರಂಥರಚನೆ ಹಾಗೂ ವೈದ್ಯವೃತ್ತಿಯಲ್ಲಿ ಪ್ರಸಿದ್ಧರಾಗಿದ್ದರೆಂದು ತಿಳಿದು ಬರುತ್ತದೆ. ಹಾಗೆಯೇ ಕ್ರಿ.ಶ.೨ನೇ ಶತಮಾನದಲ್ಲಿ ಸಮಂತಭದ್ರ, ೫ನೇ ಶತಮಾನದಲ್ಲಿ ಪೂಜ್ಯ ಪಾದಾಚಾರ್ಯರು ವೈದ್ಯಗ್ರಂಥ ಬರೆದಿದ್ದರು ಎಂಬ ಹೇಳಿಕೆಗಳಿದ್ದರೂ ಅವು ಉಪಲಬ್ಧವಿಲ್ಲದ ಕಾರಣ ಸ್ಪಷ್ಟತೆಯನ್ನು ಕೊಡಲು ಸಾಧ್ಯವಾಗಿಲ್ಲ. ಸದ್ಯದ ಮಟ್ಟಿಗೆ ಉಗ್ರಾದಿತ್ಯನ 'ಕಲ್ಯಾಣಕಾರಕ'ವೇ ಕರ್ನಾಟಕದಲ್ಲಿ ಪ್ರಸಿದ್ಧವಾದ ಮೊಟ್ಟ ಮೊದಲ ಸ್ವತಂತ್ರ ವೈದ್ಯ ಕೃತಿ. ಆದರೆ ಇದು ಸಂಸ್ಕೃತ ಭಾಷೆಯಲ್ಲಿ ರಚನೆಗೊಂಡಿದೆ. ಹೀಗೆ ಒಂಭತ್ತನೆಯ ಶತಮಾನಕ್ಕಿಂತ ಹಿಂದಿನಿಂದಲೂ ಅನೇಕ ವೈದ್ಯ ಗ್ರಂಥಗಳು ಜೈನ ಕವಿಗಳಿಂದ ರಚನೆಗೊಂಡಿರುವ ಬಗ್ಗೆ ಉಲ್ಲೇಖಗಳು ದೊರೆಯುತ್ತವೆ. ಅಲ್ಲದೇ ಸಂಸ್ಕೃತ ಗ್ರಂಥಗಳಿಗೆ ಕನ್ನಡದಲ್ಲಿ ಟೀಕು, ವ್ಯಾಖ್ಯಾನವನ್ನು ಬರೆಯುವ ಸಂಪ್ರದಾಯವನ್ನು ಜೈನರು ಆರಂಭಿಸಿದರು. ಇದಕ್ಕೆ ಉದಾಹರಣೆಯಾಗಿ ಹೇಳುವುದಾದರೆ ತತ್ವಾರ್ಥ ಸೂತ್ರಕ್ಕೆ ದಿವಾಕರಣಂದಿ ಮುನಿಗಳು ಕನ್ನಡದಲ್ಲಿ ವೃತ್ತಿ ಬರೆದ ವಿಷಯವನ್ನು ಕ್ರಿ.ಶ. ೧೦೭೭ರ ನರಸಿಂಹರಾಜಪುರದ ಶಾಸನ ತಿಳಿಸುತ್ತದೆ.

ಕಲ್ಯಾಣ ಕಾರಕ : ಈ ಕೃತಿಯ ಕಾಲ ೧೧೭೫ ಎಂದು ಕವಿಚರಿತೆಕಾರರು ಗುರುತಿಸಿದ್ದಾರೆ. ಕೃತಿಯ ಕರ್ತೃ ಜಗದ್ದಳ ಸೋಮನಾಥ ಅತ್ಯಂತ ಪ್ರಾಚೀನ ವೈದ್ಯ ಗ್ರಂಥವಾದ ಇದು ಅನೇಕ ರೋಗಗಳ ಕುರಿತು ವಿವರಪೂರ್ಣವಾದ ಮಾಹಿತಿಯನ್ನು ನೀಡುತ್ತದೆ. ಇದು ಪೂಜ್ಯಪಾದನ ಸಂಸ್ಕೃತ ಮೂಲ ಗ್ರಂಥದ

ಅನುವಾದ. ದೊರಕಿರುವ ಅಸಮಗ್ರ ಹಸ್ತ ಪ್ರತಿಯಲ್ಲಿ ಪೀಠಿಕಾಪ್ರಕರಣ, ಪರಿಭಾಷಾ ಪ್ರಕರಣ ಮತ್ತು ರಕ್ತ, ಪಿತ್ತ, ಷೋಡಶಜ್ವರ, ಅತಿರಾಸ ಗ್ರಹಣೀ, ಉದರರೋಗ, ಕ್ಷಯ, ಗುಲ್ಮರೋಗ, ಈ ರೋಗಗಳ ವಿಧಾನ ಮತ್ತು ಚಿಕಿತ್ಸಾ ಕ್ರಮಗಳನ್ನು ವಿವರಿಸುವ ೮ ಅಧ್ಯಾಯಗಳಿವೆ. 'ಸುಕರಂ ತಾನೆನೆ ಪೂಜ್ಯಪಾದ ಮುನಿಗಳ್....' ಎಂಬ ಪದ್ಯದಿಂದ ಪೂಜ್ಯಪಾದ ಮುನಿಗಳು ಪ್ರಾರಂಭದಲ್ಲಿ ಹೇಳಿದ ಕಲ್ಯಾಣಕಾರಕವಲ್ಲದೇ ಬಾಹಟ, ಸಿದ್ಧಸಾರ, ಚರಕ ಎಂಬುವವರ ವೈದ್ಯಗ್ರಂಥಗಳಿಗಿಂತ ಪೂಜ್ಯಪಾದನ ಕಲ್ಯಾಣಕಾರವು ಉತ್ಕೃಷ್ಟವಾದುದೆಂದೂ ಹೇಳಿ, ನಂತರ ಚಿಕಿತ್ಸೆ ಕ್ರಮವನ್ನು ವಿವರಿಸುತ್ತಾ ಮದ್ಯಮಾಂಸ ಮಧುವರ್ಜಿತವೆಂದೂ ಗ್ರಂಥಕಾರ ತಿಳಿಸುತ್ತಾನೆ. ಜ್ವರದ ಚಿಕಿತ್ಸಾ ಕ್ರಮವನ್ನು ಚರ್ಚಿಸುತ್ತಾ "ಜ್ವರದ ಆದಿಯೊಳ್ ಉಪವಾಸಂ, ಜ್ವರ ಮಧ್ಯಮದಲ್ಲಿ ಗಂಜಿ, ಪೇಳ್ವ ಕಷಾಯಂ, ಜ್ವರ ಪಾಕದೊಳ್, ಅಸ್ತಮಿತ ಜ್ವರದೊಳ್ ಮಲಹರಣಂ, ಇನಿತು ಇವು ಆರೋಗ್ಯಕಂ ಎಂದು ಹೇಳಿರುವನು. ರೋಗದಿಂದ ಮುಕ್ತಿಹೊಂದಲು ಉಪವಾಸ, ಗಂಜಿ, ಕಷಾಯದಂಥ ಕ್ರಮಗಳನ್ನು ಕೈಗೊಂಡು ಉಪಚರಿಸಿಕೊಳ್ಳಬೇಕೆಂದು ಸಲಹೆ ನೀಡಿದ್ದಾನೆ".[೧೫] ಅಲ್ಲದೇ ಹೃದಯಾಘಾತವನ್ನು, ಅದರಿಂದಾಗುವ ಅನಿರೀಕ್ಷಿತ ಸಾವನ್ನು ಶಾಸ್ತ್ರಕಾರ ಅಂದೇ ಪ್ರಸ್ತಾಪಿಸಿರುವುದು ಸೋಜಿಗವಾಗಿದೆ. ಅಲ್ಲದೇ ಮನುಷ್ಯ ತಾನು ಸೇವಿಸುವ ಆಹಾರವೇ ಅವನಿಗೆ ಉಂಟಾಗುವ ಹಲವು ರೋಗಗಳಿಗೆ ಕಾರಣ ಎಂಬುದನ್ನು ಶಾಸ್ತ್ರಕಾರ ಪದೇ ಪದೇ ತಿಳಿಸುತ್ತಾನೆ. ಜೊತೆಗೆ ನೀರನ್ನು ಕುರಿತು ನಾನಾ ಬಗೆಯ ತಿಳುವಳಿಕೆ ನೀಡಲಾಗಿದೆ. ಈ ಎಲ್ಲ ಸಂಗತಿಗಳನ್ನು ಗಮನಿಸಿ ಹ.ಕ.ರಾಜೇಗೌಡರು ಸುಮಾರು ೮೦೦ ವರ್ಷಗಳಷ್ಟು ಹಿಂದೆ ಸೋಮೇಶ್ವರನು ಆಹಾರ ಪಥ್ಯದಿಂದ ರೋಗನಿವಾರಣೆ ಮಾಡುವ ವಿಧಾನವನ್ನು ಗುರ್ತಿಸಿರುವುದನ್ನು ನೋಡಿದರೆ ಇಂದಿನ ವೈದ್ಯಶಾಸ್ತ್ರದ ರೂಪುರೇಷೆಗಳನ್ನು ಗುರುತಿಸಬಹುದಾಗಿದೆ ಎಂಬ ಅಭಿಪ್ರಾಯ ಸೂಕ್ತ ವಿಚಾರವನ್ನು ತಿಳಿಸುತ್ತದೆ.

ವೈದ್ಯಾಮೃತ : ಶ್ರೀಧರದೇವನೆಂಬ ಜೈನಕವಿಯಾದ ಈತ ೧೫೦೦ರಲ್ಲಿದ್ದ ಪ್ರಸಿದ್ಧ ಶಾಸ್ತ್ರಕಾರ. 'ವೈದ್ಯಾಮೃತ' ಎಂಬ ಕೃತಿಯನ್ನು ಚಂಪೂ ರೂಪದಲ್ಲಿ ಬರೆದಿದ್ದಾನೆ. ೨೪ ಅಧಿಕಾರಗಳ ಈ ಕೃತಿಯಲ್ಲಿ ರೋಗವಿಧಾನ, ಔಷಧಿ ಮತ್ತು ಅವುಗಳ ಪ್ರಯೋಗವನ್ನು ನಿರೂಪಿಸಿದ್ದಾನೆ. ಅಷ್ಟೇ ಅಲ್ಲದೇ ಮೂಲವ್ಯಾಧಿ ರೋಗಕ್ಕೆ ಕಾರಣ ಹಾಗೂ ಅದರ ಪರಿಣಾಮ ಕುರಿತು ಪರಿಹಾರ ನೀಡಿದ್ದಾನೆ. 'ಶ್ರೀಧರದೇವರು ವಿರಚಿತಮಪ್ಪ ವೈದ್ಯಾಮೃತ ಸಕಲಜಗಜ್ಜನ ಹಿತಾರ್ಥ ಕಾರಣ' ಎಂದು ಶಾಸ್ತ್ರಕಾರ ಹೇಳಿಕೊಂಡಿರುವುದನ್ನು ಗಮನಿಸಿದಾಗ ಆತನ ಲೋಕೋಪಕಾರದ ಭಾವನೆ ಮೆಚ್ಚುವಂತಹದ್ದು. ಈ ಕೃತಿಯ ಕುರಿತು. ವಿ.ಶಿವಾನಂದರು ಹೇಳುವಂತೆ "ಇಲ್ಲಿನ ಉಪಯುಕ್ತ ವಿಷಯಗಳು ಚಂಪೂರೂಪದಲ್ಲಿರುವುದರಿಂದ ಈ ಗ್ರಂಥದ ಲಾಭ ಸಾಮಾನ್ಯ ಓದುಗರಿಗೆ ಆಗದೆ ಉಳಿದಿದೆ"[೧೬] ಎಂದು ಹೇಳಿ ಇದರ ಉಪಯೋಗ ಆಗದೇ ಇರುವುದನ್ನು ಸೂಕ್ಷ್ಮವಾಗಿ ಪರಿಗಣಿಸಿದ್ದಾರೆ.

ವೈದ್ಯಸಾರ ಸಂಗ್ರಹ : ಕನ್ನಡದಲ್ಲಿ ಇಬ್ಬರು ವೈದ್ಯಸಾರ ಸಂಗ್ರಹ ಕುರಿತು ಕೃತಿ ರಚನೆಮಾಡಿರುವುದುಂಟು. ಮೊದಲಿಗೆ ಸುಮಾರು ೧೫೭೦ರಲ್ಲಿ ಹದಿನಾಡು ಪ್ರಾಂತ ಎಳಂದೂರಿನ ಅರಸು ಚೆನ್ನರಾಜ ಎಂಬುವನು. 'ವೈದ್ಯಸಾರಸಂಗ್ರಹ' ಗ್ರಂಥ ಬರೆದದ್ದು, ೧೨ ಪ್ರಕರಣಗಳುಳ್ಳ ಇದರಲ್ಲಿ ಹಲವು ವಿಧವಾದ ಚಿಕಿತ್ಸೆಗಳನ್ನು ಕುರಿತು ವಿವರಿಸಲಾಗಿದೆ. ಸಂಸ್ಕೃತ ಶ್ಲೋಕಗಳೊಂದಿಗೆ ಟೀಕೆಯೂ ಇರುವುದರಿಂದ ಓದುಗರಿಗೆ ಅನುಕೂಲವಾಗಿದೆ. ಗ್ರಂಥಕಾರ ತನ್ನ ಕೃತಿಯನ್ನು ಕುರಿತು .... "ಬಾಲಚಂದ್ರಪುರಾಧೀಶ್ವರ ಚೆನ್ನರಾಜ ಭೂಪಾಲ ವಿರಚಿತಮಪ್ಪ ಸರ್ವ ಲೋಕೋಪಕಾರಕ ಕರ್ಣಾಟಭಾಷಾ ವಿಶದೀಕೃತ ವೈದ್ಯಸಾರ ಸಂಗ್ರಹವೆ"[೧೭] ಎಂದು ಪ್ರಕರಣದ ಅಂತ್ಯದಲ್ಲಿ ನಿರೂಪಿಸಿರುವನು. ಜನರ ಉಪಯೋಗಕ್ಕಾಗಿಯೇ ಈ ವೈದ್ಯಗ್ರಂಥ ಬರೆದಿದ್ದಾಗಿ ತಿಳಿದುಬರುತ್ತದೆ. ಎರಡನೆಯದಾಗಿ ಸುಮಾರು ೧೭೦೦ರಲ್ಲಿದ್ದ ನಂಜನಾಥ ಭೂಪಾಲನು 'ವೈದ್ಯಸಾರ ಸಂಗ್ರಹ' ಬರೆದದ್ದಾಗಿ ಕವಿಚರಿತೆಕಾರರು ಅಭಿಪ್ರಾಯಪಡುತ್ತಾರೆ. ಆದರೆ "ನಂಜನಾಥನ ಈ ಕೃತಿ ಸ್ವತಂತ್ರ ಕೃತಿಯಾಗಿರದೆ ಎಳಂದೂರು ನರಸಿಂಹ ಶಾಸ್ತ್ರೀಯ, 'ವೈದ್ಯಸಾರ'ವನ್ನೇ ತನ್ನ ಹೆಸರಿಗೆ ಅಂಕಿತಮಾಡಿಕೊಂಡಿರುವುದರಿಂದ ಈ ಸಂಗತಿ ಬೆಳಕಿಗೆ ಬಂದಿದೆ."[೧೮] ಎಂದು ಜಿ.ಶ್ರೀನಿವಾಸಮೂರ್ತಿ ಹಾಗೂ ಎಸ್.ರಾಮಚಂದ್ರ ಭಟ್ ಅವರು ವೈದ್ಯಸಾರ ಸಂಗ್ರಹ ಮುನ್ನುಡಿಯಲ್ಲಿ ತಿಳಿಸಿದ್ದಾರೆ. ಈ ವಿಷಯವನ್ನು ಕುರಿತು ನಿಖರತೆಯನ್ನು ಕಂಡುಕೊಳ್ಳಲು ಇನ್ನು ಸಂಶೋಧನೆ ನೆಡೆಯಬೇಕಿದೆ.

ವೈದ್ಯಸಾಂಗತ್ಯ : ಶ್ರೀಧರದೇವನಂತೆ ಇವನು ಸಹ ಜೈನ ಕವಿ. ೧೫-೧೬ನೆಯ ಶತಮಾನದಲ್ಲಿ ಬಾಳಿ ಬದುಕಿದ ಪ್ರಮುಖ ಶಾಸ್ತ್ರಕಾರರಲ್ಲಿ ಒಬ್ಬ. ಸುಮಾರು ೧೫೫೫ರಲ್ಲಿ 'ವೈದ್ಯಸಾಂಗತ್ಯ ಎಂಬ ಕೃತಿಯನ್ನು ಬರೆದ ಸಾಳ್ವ. ಈ ಗ್ರಂಥದ ಜೊತೆಗೆ ಹರಿವಂಶ, ಕುರುವಂಶ ಚರಿತ್ರೆಯನ್ನು ಬರೆದ ಕವಿ; ಉತ್ತಮ ಶಾಸ್ತ್ರಕಾರನೂ ಆಗಿರುವುದು ವಿಶೇಷ. ನೀರಸ ಎಂದು ಭಾವಿಸಿರುವ ಶಾಸ್ತ್ರ ವಿಷಯವನ್ನು ಹಾಡುಗಬ್ಬದ ಛಂದಸ್ಸಾರದ ಸಾಂಗತ್ಯಕ್ಕೆ ಅಳವಡಿಸಿಕೊಂಡಿದ್ದಲ್ಲದೆ ಆನಂದ ಭೈರವಿ ಎಂಬ ರಾಗದ ಹೆಸರಿನ ಔಷಧಿಯಿಂದ 'ಆನಂದ ಭೈರವಿರಸ' ತಯಾರಿಸುವ ವಿಧಾನ ಹೇಳಿರುವುದನ್ನು ನೋಡಿದರೆ, ಸಾಳ್ವನು ಕವಿಯೂ, ಶಾಸ್ತ್ರಕಾರನೂ ಅಲ್ಲದೆ ಸಂಗೀತಶಾಸ್ತ್ರ ಬಲ್ಲವನೂ ಅಥವಾ ಸಂಗೀತ ಪ್ರೇಮಿಯೋ ಆಗಿರಬೇಕು. ಸಾಳ್ವರಚಿಸಿದ ಈ ಸಾಂಗತ್ಯದ ಪರ್ಯಾಯನಾಮ 'ವೈದ್ಯ ಸಾಂಗತ್ಯ' ಹಸ್ತಪ್ರತಿಗಳಲ್ಲಿ ಸಾಳ್ವಸಾಂಗತ್ಯ ಎಂದಿದೆ.

ವೈದ್ಯಕಂದ : ಸಾಳ್ವನು ಸಾಂಗತ್ಯದಲ್ಲಿ 'ವೈದ್ಯಸಾಂಗತ್ಯ' ಕೃತಿ ರಚನೆ ಮಾಡಿದಂತೆ ೧೮ನೆಯ ಶತಮಾನದಲ್ಲಿದ್ದ ಬೊಮ್ಮಯ್ಯನೆಂಬ ಶಾಸ್ತ್ರಕಾರನು ಕಂದ ಪದ್ಯಗಳಲ್ಲಿ ರಚಿಸಿದ ವೈದ್ಯಶಾಸ್ತ್ರ ಗ್ರಂಥಕ್ಕೆ 'ವೈದ್ಯಕಂದ' ಎಂಬ ಹೆಸರನ್ನು ಸೂಚಿಸಲಾಗಿದೆ. ಶಾಸ್ತ್ರಕಾರನು ಚರಕ, ಸುಶ್ರುತ, ಬಾಹವ, ವಾರತಿ ಸಾರಂಗಧರಾದಿಗಳ ಮತವನ್ನು ಕನ್ನಡದಲ್ಲಿ ಹೇಳಿರುವೆನು ಎಂದು ಅಭಿಮಾನದಿಂದ ತಿಳಿಯಪಡಿಸುತ್ತಾನೆ.

ಸಕಲ ವೈದ್ಯ ಸಂಹಿತಾ ಸಾರಾರ್ಣವ : ಕಳಲೆ ವೀರರಾಜನು ಸುಮಾರು ೧೭೨೦ರಲ್ಲಿ 'ಸಕಲ ವೈದ್ಯ ಸಂಹಿತಾ ಸಾರಾರ್ಣವ'ವನ್ನು ಬರೆದಿದ್ದಾಗಿ ತಿಳಿದು ಬರುತ್ತದೆ. 'ರಾಜಾವಳೀ ಕಥೆ'ಯನ್ನು ಬರೆದ ದೇವಚಂದ್ರನು (೧೮೩೮) ತನ್ನ ಗ್ರಂಥದಲ್ಲಿ "ಕಳಲೆ ವಂಶದ ವೀರರಾಜಂ ದೊಡ್ಡ ಕೃಷ್ಣರಾಯರ ದಿವಸದಲ್ಲಿ ಅನೇಕ ವೈದ್ಯಶಾಸ್ತ್ರಂಗಳೊಳಿರ್ಪ ರೋಗಹರಮಪ್ಪ ಚಿಕಿತ್ಸೆಗಳಂ ಕನ್ನಡ ವಾಕ್ಯದೊಳ್ ವೀರರಾಜೋಕ್ತಿ ವಿಲಾಸಮೆಂದು ಬರೆಯಿಸಿದಂ ಎಂಬ ಹೇಳಿಕೆಯಿಂದ ಬೇರಾರೋ ಈ ಗ್ರಂಥವನ್ನು ರಚಿಸಿರಬಹುದು ಎಂಬ ಸಂದೇಹಕ್ಕೆ ಎಡೆಮಾಡಿದೆ"[೧೯] ಎಂದು ಗ್ರಂಥವನ್ನು ಸಂಪಾದಿಸಿದ ಡಿ.ಶ್ರೀನಿವಾಸ್‌ಚಾರ್ ಹಾಗೂ ಡಿ.ಎಲ್.ನರಸಿಂಹಾಚಾರ್ಯ ಅಭಿಪ್ರಾಯ ಪಡುತ್ತಾರೆ.

ಈ ಕೃತಿಯು 'ವೈದ್ಯಸಾರಸಂಗ್ರಹ'ವನ್ನೇ ಅಲ್ಲಲ್ಲಿ ಮಾರ್ಪಾಡು ಮಾಡಿದ ಕೃತಿಯೇ ಹೊರತು ಸ್ವತಂತ್ರ ಗ್ರಂಥವಲ್ಲ ಎಂಬ ಅಭಿಪ್ರಾಯವೂ ಇದೆ. ಆದರೂ ಏನೆಲ್ಲ ಭಿನ್ನ ಅಭಿಪ್ರಾಯಗಳು ಇದ್ದಾಗ್ಯೂ ವೈದ್ಯಕ್ಷೇತ್ರಕ್ಕೆ ಇದೊಂದು ಅಪರೂಪದ ಕೃತಿ ಎಂದು ಹೇಳಬಹುದು. ಇದರಲ್ಲಿ ೧೮೯ ಪ್ರಯೋಗಗಳನ್ನು ಶಾಸ್ತ್ರಕಾರ ಚರ್ಚಿಸಿದ್ದಾನೆ. ರೋಗ ವಿಧಾನದಲ್ಲಿಯಾಗಲಿ, ಚಿಕಿತ್ಸಾ ಕ್ರಮದಲ್ಲಿಯಾಗಲಿ ಇರುವ ಭಿನ್ನಾಭಿಪ್ರಾಯಗಳನ್ನು ಲೇಖಕ 'ಮತಾಂತರ' ಎಂದು ಗುರುತಿಸಿದ್ದಾನೆ. ಸಂಸ್ಕೃತ, ತೆಲಗು ಭಾಷೆಯ ವೈದ್ಯಗ್ರಂಥಗಳಿಂದ ಅನೇಕ ವಿಷಯಗಳನ್ನು ಸಂಗ್ರಹಿಸಿದ್ದಲ್ಲದೆ ಕೆಲವು ಭಾಗ ತೆಲಗು ಭಾಷೆಯ ಗದ್ಯಸರಣಿಯಲ್ಲೂ ಇವೆ. ನಾಡೀ, ಜಿಹ್ವಾ, ಮೂತ್ರಪರೀಕ್ಷೆ ದೇಶ-ಕಾಲ-ವಯೋಭೇದ, ಜ್ವರೋತ್ಪತ್ತಿ ಲಕ್ಷಣ, ರೋಗ ಪರೀಕ್ಷೆ, ಭೋಜನಾ ಪ್ರಶಂಸಾ ಕಲ್ಕಗಳು, ಲೇಪ, ಘೃತ ರಸಾಯನಗಳು ಹೀಗೆ ಕೃತಿಯಲ್ಲಿಯ ಒಂದೊಂದು ಸಂಹಿತೆ ಬಗ್ಗೆ ಒಂದೊಂದು ನಿಬಂಧ ತಯಾರಿಸುವಷ್ಟು ವಿಷಯ ಸಂಪತ್ತು ಈ ಹೊತ್ತಿಗೆ ಪಡೆದುಕೊಂಡಿದೆ.

ಜ್ಞಾನಬೋಧಾಂಕಿತ ವೈದ್ಯಾಮೃತ : ಒಂದುನೂರ ಐವತ್ತು ವರ್ಷಗಳ ಹಿಂದೆ ರಚಿತವಾಗಿದೆ ಎನ್ನಲಾದ ಈ ವೈದ್ಯಕೃತಿ ಸಾಂಗತ್ಯ ಪ್ರಕಾರದಲ್ಲಿದ್ದು, ೪ ಸಂಧಿಗಳು, ೩೭೫ ಪದ್ಯಗಳಿಂದ ಕೂಡಿದ ಚಿಕ್ಕಗ್ರಂಥ. ಕೃತಿಕಾರ ಬಂಕಾಪುರದ ಮೂಲವಳ್ಳಿಯೆಂಬ ಗ್ರಾಮದ ವೆಂಕ ಅಥವಾ ವೆಂಕಟೇಶ ಎಂದು ಕೃತಿಯಿಂದ ತಿಳಿದುಬರುತ್ತದೆ. ಗಿರಿಜೆ ಹಾಗೂ ಶಂಕರರ ಸಂವಾದದಂತೆ ಕೃತಿ ರಚನೆಯಿದ್ದು, ನರರನ್ನು ಬಾಧಿಸುವ ಅನೇಕ ವ್ಯಾಧಿಗಳು ಹಾಗೂ ಅವುಗಳಿಂದ ಮುಕ್ತಿಯಾಗುವ ಪರಿಯನ್ನು ಶಂಕರ ಗಿರಿಜೆಗೆ ವಿವರಿಸುತ್ತಾನೆ.

ಕೃತಿಯಲ್ಲಿ ಬಾಣಂತಿಯರ ಔಷಧಗಳು, ಬಾಲಗ್ರಹಚಿಕಿತ್ಸೆ, ಫಿರಂಗಿಹಣ್ಣು, ಹಿರೇಫಿರಂಗಿಹಣ್ಣು, ಗಂಡಮಾಲೆ, ಬಿಲ್ಲುಡಿ, ದುಷ್ಟವ್ರಣ, ಕರ್ನದಲೂಲೆ, ತದ್ದು, ಕುಷ್ಠ, ಮೂಲವ್ಯಾಧಿ, ಕ್ಷಯ, ದಂತರೋಗ, ಚಳಿಜ್ವರ ಮುಂತಾದ ಹಲವಾರು ಕಾಯಿಲೆಗಳಿಗೆ ಔಷಧಿಗಳನ್ನು ತಿಳಿಸುವುದರೊಂದಿಗೆ, ಆಹಾರ ಪಥ್ಯವನ್ನು ತಿಳಿಸಲಾಗಿದೆ. ಈ ಸಂದರ್ಭದಲ್ಲಿ ಕ್ಷೀರಾನ್ನ, ಅನ್ನ, ಮಜ್ಜಿಗೆ, ಈರುಳ್ಳಿ ಊಟ, ಹುರುಳಿಕಟ್ಟು, ಜೋಳದ ಅನ್ನ, ಮೊಸರು ಮುಂತಾದ ಉತ್ತರ ಕರ್ನಾಟಕದ ಅಡಿಗೆಗಳನ್ನು ಪರಿಚಯಿಸಲಾಗಿದೆ.

ಒಟ್ಟಿನಲ್ಲಿ ೧೫೦ ವರ್ಷಗಳ ಹಿಂದೆ ಬಳಕೆಯಲ್ಲಿದ್ದ ಅನೇಕ ಔಷಧಗಳನ್ನು, ಶುದ್ಧಶಾಸ್ತ್ರ ವಿಷಯವನ್ನು ಸುಂದರವಾದ ದೇಸಿ ಛಂದಸ್ಸಿನಲ್ಲಿ ಪ್ರತಿಪಾದಿಸಲಾಗಿದೆ. ಇಂತಹ 'ಸಾಮಾನ್ಯ ವೈದ್ಯ' ಗ್ರಂಥಗಳಲ್ಲದೆ ವೈದ್ಯಶಾಸ್ತ್ರದಲ್ಲಿ ವಿಷವೈದ್ಯ, ಗೋವೈದ್ಯ, ಸ್ತ್ರೀವೈದ್ಯ, ಬಾಲವೈದ್ಯ, ವ್ರಣವೈದ್ಯ ಮುಂತಾದ ಹಲವು ಬಗೆಗಳನ್ನು ಕಾಣುತ್ತೇವೆ. ಅವುಗಳಿಗೆ ಸಂಬಂಧಿಸಿದಂತೆಯೇ ಹಲ- ಕೆಲವು ಗ್ರಂಥಗಳು ರಚನೆಯಾಗಿರುವುದನ್ನು ಗಮನಿಸಬಹುದು.

೨.೩.೨. ವಿಷವೈದ್ಯಶಾಸ್ತ್ರ

ಮಾನವ ಪ್ರತಿನಿತ್ಯ ಜೀವನಕ್ಕೆ ಉಪಯೋಗವಾಗುವ ಸಕಲ ವಸ್ತುಗಳಲ್ಲಿ ಒಂದಿಲ್ಲದೊಂದು ಬಗೆಯ ವಿಷಗಳು ತುಂಬಿಕೊಂಡಿರುತ್ತವೆ ಎಂದು ಅನೇಕ ಶಾಸ್ತ್ರಕೃತಿಗಳು ಮಾಹಿತಿಯನ್ನು ನೀಡುತ್ತವೆ. ಈ ರೀತಿಯ ವಿಷಪೂರಿತ ವಸ್ತುಗಳಿಂದ ಅಪಾಯ ತಪ್ಪಿದ್ದಲ್ಲ. ಇದಕ್ಕೆ ಪರಿಹಾರ ಕಂಡುಕೊಳ್ಳಲು ಚಿಕಿತ್ಸೆ ಅವಶ್ಯವೆಂದು ಅರಿತು ಪ್ರಾಚೀನಕಾಲದಿಂದಲೂ ಯಾವುದೇ ಬಗೆಯ ವಿಷಕ್ಕೆ ಒಂದಲ್ಲ ಒಂದು ಚಿಕಿತ್ಸೆಯನ್ನು ಕಂಡು ಹಿಡಿಯುವ ಪ್ರಯತ್ನಗಳು ನಡೆದಿವೆ ಹಾಗೂ ನಡೆಯುತ್ತಲೇ ಇವೆ. ಹಾವು, ಚೇಳು ಮುಂತಾದ ವಿಷ ಪ್ರಾಣಿಗಳ ಕಡಿತಕ್ಕೆ ವೈದ್ಯ ಗ್ರಂಥಗಳು 'ಜಂಗಮ ವಿಷದೋಷ' ಚಿಕಿತ್ಸೆಗೆ ಪ್ರಾಧಾನ್ಯತೆ ನೀಡಿವೆ. ಇಂದಿಗೂ 'ವಿಷವೈದ್ಯಶಾಸ್ತ್ರ' ವೈದ್ಯ ವಿಜ್ಞಾನದಲ್ಲಿ ಒಂದು ಉಪಶಾಖೆ ಎಂದು ಪರಿಗಣಿಸಿದರೂ ಅದೊಂದು ಪ್ರತ್ಯೇಕ ಶಾಸ್ತ್ರವೆ ಎಂದು ಹೇಳುವಷ್ಟರ ಮಟ್ಟಿಗೆ ವಿಸ್ತಾರವಾದ ಕ್ಷೇತ್ರದಲ್ಲಿ ಈಗ ಹಬ್ಬಿದೆ ಎನ್ನುತ್ತಾರೆ ಡಾ.ಎಂ.ಎಂ.ಭಟ್. ಸಂಸ್ಕೃತದಲ್ಲಿ ವಿಷವೈದ್ಯಕ್ಕೆ ಸಂಬಂಧಿಸಿದಂತೆ 'ಕಾಶ್ಯಪಸಂಹಿತೆ' ಮುಖ್ಯವಾಗಿದ್ದು, 'ಗರುಡ ಪಂಚಾಕ್ಷರೀಕಲ್ಪ' ಎಂದೇ ಪ್ರಸಿದ್ಧಿಯಲ್ಲಿದೆ. ಇವುಗಳ ಹೋಲಿಕೆಯನ್ನು ಕಾಣುವ ಕನ್ನಡ ಗ್ರಂಥ ಖಗೇಂದ್ರ ಮಣಿದರ್ಪಣವಾಗಿದೆ.

ಖಗೇಂದ್ರಮಣಿದರ್ಪಣ : ಸುಮಾರು ೧೩೬೦ರಲ್ಲಿ ರಚನೆಗೊಂಡ ಮೊದಲನೆಯ ಮಂಗರಾಜನ ಖಗೇಂದ್ರ ಮಣಿದರ್ಪಣ ಎಂಬ ವಿಷ ವೈದ್ಯಕೃತಿ. ೧೬ ಅಧಿಕಾರಗಳು, ೧೫೦೦ ವೃತ್ತಗಳನ್ನು ಒಳಗೊಂಡ ವಿವಿಧ ಬಗೆಯ ಛಂದಸ್ಸುಗಳಲ್ಲಿ ಹರವು ಪಡೆದುಕೊಂಡ ಬೃಹತಗ್ರಂಥ. ಜೈನ ಅನುಯಾಯಿ ಆದ ಈತ ಹೇಳಿಕೊಂಡಂತೆ "ಗುಣನಿದಿ ಖಗೇಂದ್ರ ಮಣಿದರ್ಪಣಮೀ ಕೃತಿ ರಚಿತವಾಯ್ತು ಮಂಗಪ್ರಭುವಿಂ" ಎಂಬ ಮಾತುಗಳಿಂದ ಮಂಗರಸನು ವಿಜಯನಗರ ರಾಜ್ಯ ಸಂಸ್ಥಾನಪಕನಾದ ಒಂದನೆಯ ಹರಿಹರನ ಕಾಲದಲ್ಲಿ ಇದ್ದನೆಂದು ತಿಳಿದು ಬರುತ್ತದೆ.

ಗ್ರಂಥ ರಚನೆಯ ಉದ್ದೇಶವನ್ನು ಒಂದು ಕಡೆ ಈ ರೀತಿಯಾಗಿ ತಿಳಿಸುತ್ತಾನೆ.

"ಮರನಂ ಗಾಳಿಯಂ ದೂಳಿಯಂ ರಜನಿಯಂ ನೀರಾಟಮಂ ಬೇಟಮಂ
ಸುರೆಯಂ ಸೂಳೆಯಂ ವಿಟಾಟವಿಕರಂ ಕೊಂಡಾಡಿ ಬೆಂಡಾಗದೀ

ಧರೆಯೊಳ್ ಸರ್ವಜನೋಪಕಾರ ಮೆನಲ್ ಈ ಮಂತ್ರೌಷಧಿವ್ರಾತಮಂ
ನಿರುತಂ ಭಾವಿಸಿ ಪೇಳ್ವ ಮಾನವನೆ ತಾಂ ದೇವಂ ಧರಾಚಕ್ರದೋಳ್''[೨೦]

ಶೃಂಗಾರರಸ ಪ್ರಧಾನವಾದ ೧೮ ವರ್ಣನೆಗಳಿಂದ ಕೂಡಿದ ಕಾವ್ಯಗಳನ್ನು ರಚನೆ ಮಾಡುವುದಕ್ಕಿಂತ ಜನೋಪಕಾರಿಯಾದ (ವೈದ್ಯ) ಶಾಸ್ತ್ರಗ್ರಂಥಗಳನ್ನು ರಚನೆ ಮಾಡುವುದು ಮೇಲು ಎಂಬ ಇಂಗಿತವನ್ನು ವ್ಯಕ್ತಪಡಿಸುತ್ತಾನೆ.

'ವಿಷ ವೈದ್ಯದ ಹೊತ್ತಿಗೆಗಳಲ್ಲಿಯೇ ವಿರಳ ಕೃತಿಯಾದ ಇದು ಹಳಗನ್ನಡದಲ್ಲಿ ರಚಿತಗೊಂಡಿದ್ದರೂ ನಡುಗನ್ನಡದ ರೂಪಗಳನ್ನು ಕಾಣಬಹುದಾಗಿದೆ'.

'ಕನ್ನಡದಿಂ ಸಮಸ್ತಜನ ಗೋಚರಮಪ್ಪವೊಲೊಲ್ದು ಪೇಳ್ವುದೈ ನೀನ್ನಮಗೆಂದು ಭವ್ಯರೊರೆದಳ್ತಿಯೊಳಂ ಬೆಸಗೊಳ್ವುದುಂ'' (೧-೫೭) ಎಂದು ಶಾಸ್ತ್ರಕಾರ ಕೃತಿರಚನೆಗೆ ಕಾರಣ ಕೊಡುತ್ತಾ ಈ ರೀತಿಯಾಗಿ ಹೇಳುತ್ತಾನೆ.

"ನರರ್ಗರುಜತೆ ಭೇಷಜದಿಂ
ದರುಜತೆಯಿಂ ದೇಹದೇಹದಿಂದಂ ಜ್ಞಾನಂ
ಪರಮಜ್ಞಾನದೆ ಮೋಕ್ಷಂ
ದೊರೆಕೊಳ್ಗುಮದೆಂದು ಪೇಳ್ದಪೆಂ ಭೇಷಜಮಂ'' (೧-೬೫)[೨೧]

ಎಂದು ಶಾಸ್ತ್ರಕಾರ ಮಂಗರಾಜನು ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾ ಕವಿಕೇಶವನ ನೆನಪನ್ನು ತಂದುಕೊಳ್ಳುತ್ತಾನೆ. ವ್ಯಾಕರಣದಿಂದ ಮೋಕ್ಷವನ್ನು ಸಾಧಿಸಬಹುದೆಂದು ಕೇಶಿರಾಜ ನುಡಿದಂತೆ, ಭೇಷಜ (ವೈದ್ಯ)ದಿಂದ ಮೋಕ್ಷ ದೊರಕುತ್ತದೆಂದು ಶಾಸ್ತ್ರಕಾರ ನಂಬಿರುವನು. ಹಾಗೆಯೇ ಖಗೇಂದ್ರಮಣಿ ಎಂದರೆ ಗರುಡರತ್ನ. ಈ ರತ್ನದ ಪ್ರಯೋಗದೊಂದಿಗೆ ವಿಷ ಸರ್ಪಗಳು ಕಚ್ಚಿದರೆ ಆ ವಿಷವನ್ನು ತೆಗೆಯಬಹುದೆಂಬ ನಂಬಿಕೆಯಿದ್ದು ಅವುಗಳ ಜೊತೆಗೆ ಸ್ಥಾವರ, ಜಂಗಮ, ಕೃತಕ ಎಂಬ ಪ್ರಕಾರಗಳಲ್ಲಿ ಅಡಕಗೊಂಡಿರುವ ಅನೇಕ ಬಗೆಯ ವಿಷಗಳ ಲಕ್ಷಣಗಳನ್ನು ತಂತ್ರ-ಮಂತ್ರ ಔಷಧ ಮುಂತಾದ ಪ್ರಯೋಗಗಳಿಂದ ವಿಷವನ್ನು ಪರಿಹರಿಸುವ ಚಿಕಿತ್ಸಾ ವಿಧಾನಗಳನ್ನು ಈ ಕೃತಿಯುದ್ದಕ್ಕೂ ಕಂಡುಕೊಳ್ಳಬಹುದು.

೨.೩.೩. ಗೋವೈದ್ಯಶಾಸ್ತ್ರ

ಪ್ರಾಚೀನ ಕಾಲದಿಂದಲೂ ಗೋವುಗಳಿಗೆ ಅತ್ಯಂತ ಮಹತ್ವದ ಸ್ಥಾನವನ್ನು ಕೊಡಲಾಗಿದ್ದು, ದೇವರು ಎಂದು ಪೂಜಿಸಲಾಗುತ್ತಿದೆ. ಇಂತಹ ಪಾವಿತ್ರ್ಯಹೊಂದಿರುವ ಗೋವುಗಳ ಕುರಿತು ಶಾಸ್ತ್ರಗ್ರಂಥಗಳು ರಚನೆಗೊಂಡಿವೆ. ಕ್ರಿ.ಶ. ೧೧೦೦ರಲ್ಲಿ ಪ್ರಾಣಿವೈದ್ಯಕ್ಕೆ ಸಂಬಂಧಿಸಿದ ಅದರಲ್ಲೂ ಗೋವೈದ್ಯಕ್ಕೆ ಸಂಬಂಧಿಸಿದಂತೆ ಕನ್ನಡದಲ್ಲಿ ರಚನೆಗೊಂಡ ಮೊದಲ ಕೃತಿ ಕೀರ್ತಿವರ್ಮನದು. ಪ್ರಸ್ತುತ ಗ್ರಂಥದಲ್ಲಿ ಗೋವುಗಳ ವ್ಯಾಧಿಗಳಿಗೆ ಔಷಧ, ಮಂತ್ರ, ಬರೆಹಾಕುವ ಕ್ರಮಗಳನ್ನು ವಿಸ್ತಾರವಾಗಿ ವಿವರಿಸಲಾಗಿದೆ.

ಕೀರ್ತಿವರ್ಮನ ಗೋವೈದ್ಯ ಗ್ರಂಥವನ್ನು ಕುರಿತು ಡಾ. ಕೆ.ಕೃಷ್ಣಮೂರ್ತಿ ಅವರು "ಈತನ ಗೋವೈದ್ಯ ಗ್ರಂಥವು ಕನ್ನಡ ವೈದ್ಯಶಾಸ್ತ್ರಕ್ಕಷ್ಟೇ ಅಲ್ಲದೇ ಭಾರತೀಯ ವೈದ್ಯಶಾಸ್ತ್ರಕ್ಕೂ ಒಂದು ವಿಶಿಷ್ಟ ರೀತಿಯ ಕೊಡುಗೆಯನ್ನು ನೀಡಿದೆ ಎನ್ನಬಹುದು ಎಂದು ಅಭಿಪ್ರಾಯಪಡುತ್ತಾರೆ. ಏಕೆಂದರೆ ಭಾರತೀಯ ವೈದ್ಯಶಾಸ್ತ್ರದ ವಿಭಾಗಗಳಲ್ಲಿ ಆಯುರ್ವೇದದ ಅಂಗವಾಗಿ ಮನುಷ್ಯರ ಚಿಕಿತ್ಸೆಯೂ ಅಶ್ವಶಾಸ್ತ್ರ, ಗಜಶಾಸ್ತ್ರಗಳ ಅಂಗವಾಗಿ ಆಯಾ ಪ್ರಾಣಿರೋಗಗಳ ಚಿಕಿತ್ಸೆಯೂ ಪ್ರತಿಪಾದಿತವಾಗುತ್ತಿದ್ದವೇ ಹೊರತು ಪ್ರತ್ಯೇಕವಾಗಿ ಗೋವೈದ್ಯವನ್ನೇ ಕುರಿತು ಸ್ವತಂತ್ರಗ್ರಂಥ ಸಂಸ್ಕೃತದಲ್ಲಿ ಕೂಡ ಅಲ್ಲಿಯವರೆಗೆ ದೊರೆಯದು"[೨೨] ಎಂದಿರುವುದು ಈ ಕೃತಿಯ ಹೆಗ್ಗಳಿಕೆಗೆ ಸಾಕ್ಷಿಯಾಗಿದೆ.

ವಿಷವೈದ್ಯ, ಗೋವೈದ್ಯ ಗ್ರಂಥಗಳ ಜೊತೆಗೆ ವಿಶೇಷವಾಗಿ ಮಹಿಳೆಯರಿಗೆ ಸಂಬಂಧಿಸಿದ ರೋಗಗಳನ್ನು ಕುರಿತಾದ 'ಸ್ತ್ರೀ ವೈದ್ಯ' ಮಕ್ಕಳಿಗೆ ಸಂಬಂಧಿಸಿದ 'ಬಾಲಗ್ರಹಚಿಕಿತ್ಸೆ' ಮುಂತಾದ ಬಗೆಯ ಹಲವು ಕೃತಿಗಳು ರಚನೆಗೊಂಡಿವೆ. ಕ್ರಿ.ಶ.೧೭೫೦ರಲ್ಲಿ ತಿಮ್ಮರಾಜಗೌಡನ ಸ್ತ್ರೀವೈದ್ಯ. ಚಿಕ್ಕುಪಾಧ್ಯಾಯನ 'ವೈದ್ಯಾಮೃತಟೀಕೆ' ಇವುಗಳ ಜೊತೆಗೆ ಪ್ರಾಸಂಗಿಕ ಕನ್ನಡ ಶಾಸ್ತ್ರಗ್ರಂಥಗಳಾದ ಚಾವುಂಡರಾಯನ ಲೋಕೋಪಕಾರದಲ್ಲಿ ಬರುವ 'ನರಾದಿವೈದ್ಯ' 'ವಿಷವೈದ್ಯ' ಎಂಬ ಭಾಗಗಳಲ್ಲಿ ಬರುವ ವೈದ್ಯಶಾಸ್ತ್ರದ ಮಾಹಿತಿಗಳು. ಹಾಗೆಯೇ ಮಾನಸೋಲ್ಲಾಸದಲ್ಲಿಯ 'ಶಸ್ತ್ರಕರ್ಮ ಕಲಾದಕ್ಷರಾದ' ವೈದ್ಯರನ್ನು ಶಸ್ತ್ರಕ್ರಿಯೆಯನ್ನು ಹೆಸರಿಸುವ ವಿಚಾರಗಳು ಶಿವತತ್ತ್ವರತ್ನಾಕರದಲ್ಲಿ ಆಯುರ್ವೇದಕ್ಕೆ ಸಂಬಂಧಿಸಿದ ಕೆಲವು ಉಪಯುಕ್ತ ವಿಚಾರಗಳು, ನಾಡಿಯ ಸ್ವರೂಪ, ಅದರ ಅವಯವಗಳು, ಸ್ತ್ರೀ-ಪುರುಷರಲ್ಲಿ ನಾಡಿ ಪರೀಕ್ಷೆಯ ಸ್ಥಾನಗಳು, ಜ್ವರದ ಪ್ರಭೇದಗಳು, ಔಷಧಗಳ ನಿರೂಪಣೆ, ವಿವಿಧ ವ್ಯಾಧಿಗಳಿಗೆ ಔಷಧ ನಿರ್ಮಾಣ ವಿಧಾನಗಳ ಹೇಳಿಕೆ, ಔಷಧ ತೆಗೆದುಕೊಳ್ಳುವ ನಕ್ಷತ್ರ ಮುಂತಾದವುಗಳ ಪರಿಶೀಲನೆ ಜಪಿಸುವ ಮಂತ್ರ, ಲೇಹ್ಯಾದಿಗಳನ್ನು ತಯಾರಿಸುವ ಎಲೆಗಳ ಜೊತೆಗೆ ವಿಷವೈದ್ಯಕ್ಕೆ ಸಂಬಂಧಿಸಿದ ಅನೇಕ ವಿಷಯಗಳ ನಿರೂಪಣೆಯಿದೆ.

ಪಂಪಭಾರತದ ಹನ್ನೊಂದನೆಯ ಆಶ್ವಾಸದಲ್ಲಿ ಬರುವ ಯುದ್ಧ ಮುಗಿದ ನಂತರದ ಶಸ್ತ್ರಚಿಕಿತ್ಸಾ ವಿಧಾನಗಳು, ಹಾಗೆಯೇ "ಸುಶ್ರುತ ಸಂಹಿತೆ, ಅಷ್ಟಾಂಗಹೃದಯ ಸಂಹಿತೆಯಲ್ಲಿ ಹೇಳಲಾದ ಶಲ್ಯ ಎಂಬ ಶಸ್ತ್ರ ಚಿಕಿತ್ಸೆಯನ್ನು ಹೋಲುತ್ತದೆ"[೨೩] ಎಂದು ಡಾ. ಎಂ.ಬಿದಿರಿನಂದಮೂರ್ತಿ ಅಭಿಪ್ರಾಯಪಟ್ಟಿದ್ದಾರೆ.

ಬಸವಣ್ಣನವರ ಷಟ್‌ಸ್ಥಲದ ವಚನಗಳಲ್ಲಿ ಬರುವ 'ಗುರೂಪದೇಶ ಮಂತ್ರವೈದ್ಯ' ಜಂಗಮೋಪದೇಶ ಶಸ್ತ್ರವೈದ್ಯ' ಎಂಬ ನುಡಿಯನ್ನು ಗಮನಿಸಿದರೆ ವೈದ್ಯ, ಮಂತ್ರವೈದ್ಯ, ಶಸ್ತ್ರ ವೈದ್ಯಗಳ ಪರಿಚಯವಿರುವುದು ಕಂಡು ಬರುತ್ತದೆ. ಅಲ್ಲದೇ ವಚನಕಾರರಲ್ಲಿ ಪ್ರಸಿದ್ಧನಾದ ವೈದ್ಯಸಂಗಣ್ಣನೆಂಬುವನು ಸುಮಾರು ೨೦ ವಚನಗಳಲ್ಲಿ ವೈದ್ಯಸಂಬಂಧಿ ವಿಚಾರಗಳನ್ನು ಪ್ರಸ್ತಾಪಿಸಿರುವುದನ್ನು ಕಾಣಬಹುದು. ಹಾಗೆಯೇ ಚನ್ನಬಸವಣ್ಣನ ಕರುಣಹಸುಗೆ ಕೃತಿಯಲ್ಲಿನ ಕೆಲವು ವೈದ್ಯಶಾಸ್ತ್ರದ ವಿಚಾರಧಾರೆಗಳು ಇದರ ಇತಿಹಾಸವನ್ನು ಬಿಂಬಿಸುತ್ತವೆ. ವೈದ್ಯಸಾಸ್ತ್ರಕ್ಕೆ ಸಂಬಂಧಿಸಿದ ಕೆಲವು ಟೀಕೆ ಟಿಪ್ಪಣಿಗಳು, ನಿಘಂಟುಗಳು ರಚನೆಯಾಗಿರು

ವುದನ್ನು ಕಾಣಬಹುದು. ಜನಪದರು ಬಳಸುವ ಹಲವು ಬಗೆಯ ವೈದ್ಯೋಪಚಾರ, ಔಷಧಿಗಳನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು.

ವೈದ್ಯ ಶಾಸ್ತ್ರದ ಇನ್ನೊಂದು ವಿಶೇಷವೆಂದರೆ ಪ್ರಕೃತಿಯ ಮಡಿಲಲ್ಲಿ ದೊರೆಯುವ ಎಲ್ಲಾ ಬಗೆಯ ಗಿಡ, ಮರ, ಬಳ್ಳಿ, ಸಸ್ಯಸಂಪತ್ತುಗಳು ಒಂದು ರೀತಿಯ 'ಪ್ರಯೋಗಶಾಲೆ' ಎಂದು ಭಾವಿಸಿರುವ ಜಾನಪದರು ಕೃತಿರೂಪದಲ್ಲಿ ರಚನೆ ಮಾಡದೆ ಇದ್ದರೂ ಸಹಿತ ಅವರ ದೈನಂದಿನ ಬದುಕಿನಲ್ಲಿ ಅಡಿಗೆ, ಆಹಾರಸೇವನೆ, ಪಾತ್ರೆಗಳ ಬಳಕೆ, ಅಷ್ಟೇ ಅಲ್ಲದೇ ಉಡುಗೆ-ತೊಡುಗೆಗಳಲ್ಲಿ ವೈದ್ಯಶಾಸ್ತ್ರ ಜೀವಂತವಾಗಿ ಉಳಿದುಕೊಂಡಿದೆ.

೨.೩.೪. ಜ್ಯೋತಿಷ್ಯಶಾಸ್ತ್ರ

ಜ್ಯೋತಿಷ್ಯಶಾಸ್ತ್ರವೆಂದರೆ ಕಾಲಜ್ಞಾನ ಶಾಸ್ತ್ರವೆಂದು ಕರೆಯುತ್ತಾರೆ. ಇದಕ್ಕೆ ಹೋರಾಶಾಸ್ತ್ರವೆಂತಲೂ ಹೆಸರುಂಟು. ವೇದದ ಪ್ರಮುಖ ಅಂಗವಾಗಿರುವ ಇದು ವ್ಯಕ್ತಿಯ ಜನನದಿಂದ ಮರಣದವರೆಗೆ ಪ್ರತಿಯೊಂದು ಕಾರ್ಯಗಳನ್ನು ಶಾಸ್ತ್ರೋಕ್ತ ರೀತಿಯಲ್ಲಿ ನಡೆಸುವಾಗ ಜ್ಯೋತಿಷ್ಯದ ಪಾತ್ರ ಪ್ರಮುಖವಾಗಿ ನಿಲ್ಲುತ್ತದೆ. ಪ್ರಾಚೀನ ಕಾಲದಿಂದಲೂ ಇದೊಂದು ಅಧ್ಯಯನಯೋಗ್ಯ ವಿಷಯವಾಗಿ ಬೆಳೆದು ಬಂದಿದೆ. ಜ್ಯೋತಿ ಎಂದರೆ 'ಬೆಳಕು' ಎಂದರ್ಥ. ಹೀಗೆ ಜ್ಯೋತಿಷ್ಯವು ಬೆಳಕನ್ನು, ಪ್ರಕಾಶವನ್ನು ತಿಳಿಯಪಡಿಸುವ ಶಾಸ್ತ್ರವೆಂದು ಪ್ರಸಿದ್ಧವಾಗಿದೆ ಎಂದು ವರಾಹಮಿಹಿರನ ಬೃಹಜ್ಜಾತಕ ತಿಳಿಸುತ್ತದೆ. ಜ್ಯೋತಿಷ್ಯಶಾಸ್ತ್ರವನ್ನು 'ಭವಿಷ್ಯಶಾಸ್ತ್ರ' ಎಂದೂ 'ಕಾಲವಿಧಾಯಕ ಶಾಸ್ತ್ರ' ಎಂದೂ ಕರೆಯುತ್ತಾರೆ. ಮನುಷ್ಯನ ಬದುಕಿನಲ್ಲಿ ಸಂಭವಿಸಬಹುದಾದ ಒಳಿತು ಕೆಡಕುಗಳನ್ನು ಮುಂಚಿತವಾಗಿಯೇ ದರ್ಶಿಸಿ ವಿವರಿಸಿರುವುದರಿಂದ, ಇದು ಭವಿಷ್ಯಶಾಸ್ತ್ರ ಕಾಲಗಣನೆಗೆ ಇಲ್ಲಿ ಪ್ರಾಮುಖ್ಯತೆಯಿರುವುದರಿಂದ ಇದು ಕಾಲವಿಧಾಯಕ ಶಾಸ್ತ್ರವೆಂದು ಕರೆಯಿಸಿಕೊಂಡಿದೆ. ಈ ಶಾಸ್ತ್ರದ ವ್ಯಾಪ್ತಿಯಲ್ಲಿ ಪ್ರಶ್ನಶಾಸ್ತ್ರ, ಸಾಮುದ್ರಿಕ, ಶಕುನ, ನಾಡಿಶಾಸ್ತ್ರ, ಸ್ವಪ್ನಫಲ ಮುಂತಾದ ಶಾಸ್ತ್ರಗಳನ್ನು ಸಮಾವೇಶ ಮಾಡಲಾಗಿದೆ.

ಜ್ಯೋತಿಷ್ಯ ಗ್ರಂಥಗಳಲ್ಲಿ ಶ್ರೀಧರಾಚಾರ್ಯನ 'ಜಾತಕ ತಿಲಕ'ವೇ ಮೊದಲ ಗ್ರಂಥ. ೧೦೪೯ರಲ್ಲಿ ರಚನೆಗೊಂಡ ಈ ಕೃತಿ ಜ್ಯೋತಿಷ್ಯದ ವಿವಿಧ ಮುಖಗಳನ್ನು ಪರಿಚಯಿಸುತ್ತದೆ. ಈತನಿಗಿಂತ ಮುಂಚೆ ಜ್ಯೋತಿಷ್ಯಕ್ಕೆ ಸಂಬಂಧಪಟ್ಟ ಉಲ್ಲೇಖಗಳು ಸಿಗುವುದನ್ನು ಗಮನಿಸಿದರೆ, ಈ ಮೊದಲು ಜ್ಯೋತಿಷ್ಯ ಗ್ರಂಥಗಳು ರಚನೆಗೊಂಡಿರುವ ಸಾಧ್ಯತೆ ಇದೆ. ಚಾವುಂಡರಾಯನ ಲೋಕೋಪಕಾರದಲ್ಲಿ ಈ ಶಾಸ್ತ್ರಕ್ಕೆ ಸಂಬಂಧಪಟ್ಟ ಹಲವಾರು ವಿಷಯಗಳು ಉಲ್ಲೇಖಗೊಂಡಿವೆ. ಅಲ್ಲದೇ ನಾಗವರ್ಮನ ಕಾವ್ಯಾವಲೋಕನದ ಉದಾಹರಣ ಪದ್ಯಗಳಲ್ಲಿ (೨೧೫) 'ಊರೇರಲ್ ಮನೆಮಾಡ.... ತಾರೆಗಳ ನುಳಿಯೆ ಪೆರವರೊಳುಚಿತಂ' ಎಂಬ ಪದ್ಯವನ್ನು ಗಮನಿಸಿದಾಗ ಶ್ರೀಧರಾಚಾರ್ಯನಿಗಿಂತ ಮೊದಲು ಕನ್ನಡದಲ್ಲಿ ಜ್ಯೋತಿಷ್ಯ ಹುಟ್ಟಿರಬೇಕೆಂದು ಊಹಿಸಬಹುದು. ಆದರೆ ಸದ್ಯಕ್ಕೆ 'ಜಾತಕತಿಲಕ'ವೇ ಮೊದಲ ಉಪಲಬ್ಧ ಜ್ಯೋತಿಷ್ಯಗ್ರಂಥ.

ಜಾತಕ ತಿಲಕ : ಈ ಕೃತಿಯ ಕರ್ತೃ ಜೈನಮತಾವಲಂಬಿಯಾಗಿದ್ದು. ಬೆಳುವಲ ನಾಡಿನ ನರಗುಂದ ಪ್ರಾಂತದವನು. ವಾಕ್ ಶ್ರೀವರ ಗದ್ಯಪದ್ಯವಿದ್ಯಾಧರ ಇತ್ಯಾದಿ ಬಿರುದುಗಳುಳ್ಳವನು. ಈ ಕೃತಿಯು ೨೪ ಅಧಿಕಾರಗಳನ್ನು ಹೊಂದಿದ್ದು, ಕಂದ ವೃತ್ತಗಳಲ್ಲಿ ಜಾತಕ ವಿಚಾರವನ್ನು ಚರ್ಚಿಸಲಾಗಿದೆ. ತನ್ನ ಕೃತಿ ಜೋಯಿಸುಗಬ್ಬ (೧-೧೩) ಎಂದು ತಿರಸ್ಕರಿಸಬೇಡಿ ಎಂದು ಕೇಳಿಕೊಳ್ಳುತ್ತಾ ಮುನ್ನ ಆರು ಜಾತಕಮಂ ಕನ್ನಡದಿಂ ವ್ಯಕ್ತಮಾಗೆ ಪೇಳ್ದ ಅನ್ವಿತರಿಲ್ಲ ಇನ್ನುಂ ಪೇಳ್ವಪರಿಲ್ಲ ಉತ್ಪನ್ನಂ ಶ್ರೀಧರನೆ ಪೇಳುಂ (೧-೧೬) ಎಂದು ಹೆಮ್ಮೆಯಿಂದ ಗ್ರಂಥ ಪ್ರಾಶಸ್ಯವನ್ನು ಹೇಳಿಕೊಂಡಿದ್ದಾನೆ. ಈ ಹಿಂದೆ ಕಾವ್ಯ, ಶಾಸ್ತ್ರ ಗ್ರಂಥಗಳಲ್ಲಿ ಉಲ್ಲೇಖವಾದ ಜ್ಯೋತಿಷ್ಯ ವಿಷಯವನ್ನು ಹಾಗೂ ಆರ್ಯಭಟ ವರಾಹಮಿಹಿರ, ಕಲ್ಯಾಣವರ್ಮರ ಕೃತಿಗಳಿಂದ ಉಪಯುಕ್ತ ಮಾಹಿತಿಗಳನ್ನು ಸಂಗ್ರಹಿಸಿ ಕಂದ ವೃತ್ತಗಳಲ್ಲಿ ಜ್ಯೋತಿಷ್ಯವನ್ನು ಹೆಣೆದಿರಬೇಕು.

ಜ್ಯೋತಿಷ್ಯದ ಪ್ರಯೋಜನ ಕುರಿತು ತನ್ನ 'ಜಾತಕ ತಿಲಕ' ಕೃತಿಯಲ್ಲಿ ಈ ರೀತಿ ವ್ಯಕ್ತಪಡಿಸುತ್ತಾ "ಭವಬದ್ಧ ಶುಭಾಶುಭ ಕರ್ಮವಿಚಾರದ ಫಲಮಂ ಅರಿಪುಗುಂ ಜ್ಯೋತಿರ್ಜ್ಞಾನಂ ಅದೆಂತನೆ ಕತ್ತಲೆವನೆಯ ವಸ್ತುವಂ ತೋರ್ಪಸೊಡರ ಬೆಳಗಿನ ತೆರದಿಂ' ಶಾಸ್ತ್ರವಿಚಾರವನ್ನು ಆಕರ್ಷಕವಾದ ಶೈಲಿಯಲ್ಲಿ ಹೇಳಿ ಲೋಕಪ್ರಸಿದ್ಧವಾದ ಜಾತಕ ತಿಲಕವು ಶಾಸ್ತ್ರ ಕವಿತ್ವಕ್ಕೆ ಒಡವೆ ಎಂದು ಗ್ರಂಥಕಾರನು ಹೇಳಿಕೊಂಡಿದ್ದಲ್ಲದೆ ಜಾತಕ ತಿಲಕದೊಳರಿವುದು ಗಣಿತ ಧರ್ಮಮಂ' (೨೪-೪೦) ಎಂಬ ಹೇಳಿಕೆಯನ್ನು ಗಮನಿಸಿದರೆ ಜ್ಯೋತಿಷ್ಯಶಾಸ್ತ್ರಗಳು ಅವಶ್ಯಕವಾಗಿದ್ದವು"[೨೪] ಎಂಬ ಮಾತನ್ನಿಲ್ಲಿ ಸ್ಮರಿಸಬಹುದು. ಒಟ್ಟಿನಲ್ಲಿ 'ಜಾತಕತಿಲಕ'ದಂತಹ ಶಾಸ್ತ್ರೀಯ ಕೃತಿಯನ್ನು ಸಂದಿಗ್ಧತೆಯಿಂದ ದೂರವಾದ ಲಲಿತಬಂಧುರ ಕಾವ್ಯವನ್ನಾಗಿ ನಿರೂಪಿಸಿರುವುದು ಶಾಸ್ತ್ರಕಾರನ ಪಾಂಡಿತ್ಯ ಪೂರ್ಣಪ್ರಜ್ಞೆಗೆ ಸಾಕ್ಷಿಯಾಗಿ ನಿಂತಿದೆ. ಈ ಹಿನ್ನೆಲೆಯಲ್ಲಿ ವೈಶಿಷ್ಟ್ಯಪೂರ್ಣ ಕೃತಿಗಳಲ್ಲಿ ಇದರ ಪಾಲು ಸಿಂಹಪಾಲಾಗಿದೆ.

ರಟ್ಟಮತ : ರಟ್ಟಕವಿಯಿಂದ ಕ್ರಿ.ಶ.೧೩೦೦ರಲ್ಲಿ ರಚನೆಗೊಂಡ 'ರಟ್ಟಮತ' ಎಂಬ ಗ್ರಂಥವು ಜ್ಯೋತಿಷ್ಯ ಶಾಸ್ತ್ರದ ಪ್ರಮುಖ ಕೃತಿಗಳಲ್ಲೊಂದು. ವಿವಿಧ ಛಂದೋಬಂಧಗಳಿಂದ ಕೂಡಿರುವ ಇದರಲ್ಲಿ ಮಳೆಯ ಕುರುಹು, ಮೇಘಲಕ್ಷಣ, ಮಿಂಚಿನ ಲಕ್ಷಣ, ಬಿತ್ತುವ ಶಕುನ, ಮುಂತಾದ ಬೇಸಾಯಕ್ಕೆ ಸಂಬಂಧಿಸಿದ ಹಲವು ಬಗೆಯ ವಿಷಯಗಳನ್ನೊಳಗೊಂಡ ಕೃತಿ. ಕನ್ನಡದಲ್ಲಿ ಹೆಚ್.ಶೇಷಯ್ಯಂಗಾರ್‌ರವರು ಗೌರ್ನಮೆಂಟ್ ಓರಿಯಂಟಲ್ ಮ್ಯಾನ್‌ಸ್ಕ್ರಿಪ್ಟ್ ಲೈಬ್ರರಿ ಮದ್ರಾಸಿನಿಂದ ೧೯೫೦ರಲ್ಲಿ ಐದು ಹಸ್ತಪ್ರತಿಗಳ ಸಹಾಯದಿಂದ ಸಂಪಾದಿಸಿಕೊಟ್ಟಿದ್ದಾರೆ. ಪ್ರಸ್ತುತ ಕೃತಿಯ ಮುನ್ನಡಿಯಲ್ಲಿ ಗ್ರಂಥವಿಚಾರ, ಗ್ರಂಥಕರ್ತೃವಿನ ವಿಚಾರವನ್ನು ಸಾದರಪೂರಕವಾಗಿ ಪರಿಚಯಿಸಲಾಗಿದೆ. ಈ ಕೃತಿಯನ್ನು ಹೊರತುಪಡಿಸಿದರೆ ವೇದಮೂರ್ತಿ ಬಸಯ್ಯ ಶಾಸ್ತ್ರಿಗಳು ಹಿರೇಮಠ ಅವರ ೬೦ ವರ್ಷಗಳ ಕುರುಬರ ರಟ್ಟಮತ ಶಾಸ್ತ್ರವನ್ನು ಗದುಗಿನ ಪಿ.ಸಿ.ಶಾಬಾದಿಮಠ ಪ್ರಕಾಶನದಿಂದ ಪ್ರಕಟಗೊಂಡಿದೆ. ಹಾಗೆಯೆ ಇದೇ ಹೆಸರಿನ ಇನ್ನೊಂದು ಕೃತಿಯನ್ನು ಡಾ.ಎಸ್.ಎಫ್.ಜಕಬಾಳ ಅವರು ಗದುಗಿನ ವಿದ್ಯಾನಿಧಿ ಪ್ರಕಾಶನದಿಂದ ಸಂಪಾದಿಸಿ ಕೊಟ್ಟಿದ್ದಾರೆ.

ಈ ಮೇಲೆ ಹೆಸರಿಸಿದ ಈ ಎರಡು ಕೃತಿಗಳು ೬೦ ಸಂವತ್ಸರಗಳ ಫಲಗಳನ್ನು ಶ್ಲೋಕಗಳಲ್ಲಿ ಹಿಡಿದಿಟ್ಟು ಗದ್ಯರೂಪದಲ್ಲಿ ನಿರೂಪಿಸಲಾಗಿದೆ. ಪ್ರಾಯಶಃ ಈ ಎರಡು ಜನಪ್ರಿಯ ಆವೃತ್ತಿಗಳನ್ನು ಬಿಟ್ಟರೆ ಕಂದ, ವಚನ, ತ್ರಿಪದಿ, ವೃತ್ತ, ರಗಳೆ, ಅಕ್ಕರ ಪ್ರಕಾರಗಳಿಂದ ಸಂರಚನೆಗೊಂಡಿರುವ ಹೆಚ್. ಶೇಷಯ್ಯಂಗಾರ್ ಅವರು ಸಂಪಾದಿಸಿದ ರಟ್ಟಮತಶಾಸ್ತ್ರ ಕೃತಿಯು ಶಾಸ್ತ್ರ ಗೌರವದಿಂದ ಮನ್ನಣೆ ಪಡೆದ ಅಧ್ಯಯನ ಯೋಗ್ಯವಾದ ಕೃತಿಯಾಗಿದೆ.

ಹನ್ನೆರಡು ಅಧ್ಯಾಯಗಳಲ್ಲಿ ರಚನೆಗೊಂಡ ರಟ್ಟಮತಶಾಸ್ತ್ರ ಮಳೆಯ ವಿಚಾರವನ್ನು ಕುರಿತು ಈ ರೀತಿ ಮಾಹಿತಿ ನೀಡುತ್ತದೆ.

> "ಸುರಪ ಕುಬೇರ ಶಂಕರದಿಶಾಲಿಯ ಗಾಳಿಯೊಳೊಳ್ಳಿತಕ್ಕುಮಾ
> ವರುಣನಿನಲ್ಪ ವೃಷ್ಟಿಯನಿಲಾಗ್ನಿಯ ಮಂಡಲದಿಂ ಸು ವೃಷ್ಟಿ ಕಾಲನಿಂ
> ನಿರುತಿಯೊಳಿಲ್ಲಮೆಂದು ಮಱೆ ಯಣ್ದೆಸೆಯಿಂ ಬಿಡೆ ಬೀಸೆ ಗಾಳಿ ನಿ
> ತ್ತರಿಸದೆ ಬೀಸಿದಂದು ಮಱೆಯಿಲ್ಲ ನೆಲಂ ಪುಡಿವಿಟ್ಟು ಪಾಱುಗುಂ"[೨೫]

ಉತ್ತರ, ಪೂರ್ವ ಹಾಗೂ ಈಶಾನ್ಯ ದಿಕ್ಕಿಗೆ ಗಾಳಿ ಬೀಸಿದರೆ ನಾಡಿಗೆ ಒಳ್ಳೆಯದು. ಪಶ್ಚಿಮ ದಿಕ್ಕಿನ ಗಾಳಿ ಬೀಸಲು ಅಲ್ಪ ದೃಷ್ಟಿಯು, ವಾಯುವ್ಯ ಹಾಗೂ ಅಗ್ನಿ ದಿಕ್ಕಿನಿಂದ ಗಾಳಿ ಬೀಸಲು ಮಳೆಯಿಲ್ಲವೆಂದು ತಿಳಿಯುವುದು. ಭೂಮಿಯೆಲ್ಲ ಹುಡಿ ಎದ್ದು ಹಾರುವುದು ಎಂದು ವಿವರಿಸಲಾಗಿದೆ. ಮುಂದವರೆದು ಬೀಜವಾಪ ನಕ್ಷತ್ರಾಧಿಗಳ ಫಲವಿಚಾರವನ್ನು ತಿಳಿಸುವ ಶಾಸ್ತ್ರಕಾರ ಬೀಜವನ್ನು ಬಿತ್ತುವ ಶುಭನಕ್ಷತ್ರಗಳು ಯಾವ ಯಾವ ನಕ್ಷತ್ರಗಳಲ್ಲಿ ಯಾವ ಧಾನ್ಯ ಬಿತ್ತಿದರೆ ಉತ್ತಮ, ಯಾವ ಯಾವ ಗ್ರಹನಕ್ಷತ್ರಗಳಲ್ಲಿ ಯೋಗದಲ್ಲಿ ಬೀಜ ಬಿತ್ತಿದರೆ ಕೇಡು ಬರುತ್ತದೆ ಎಂಬುದನ್ನು ವಿವರಿಸುತ್ತಾ

> "ಮೃಗಸಿರೆಯಾದಿಯಾಗೆಸೆವ ಪಂಚಕದೊಳ್ ಪುಗೆ ಬಿತ್ತುನೆಲ್ಲಳಂ
> ಮಿಗೆ ಮಘೆ ಪೂರ್ಣೆಯಂ ದಿನಕರಂ ನಿಲೆಕೊಳ್ ಪೆಸರೆಲ್ಲಳೆಂಬಿಮಂ"
> ನೆಟ್ಟಿ ವರಾಹ ಗಾರ್ಗ್ಯನವ ಕೀರ್ತಿಯ.........
> ಸೊಗಕಂಮಯಿಪ ನಾಗಣಕ ಱಟ್ಟನ ಪೇೞ್ದನಯಾಗಮಂಗಳಿಂ"[೨೬]

ಮೃಗಶಿರ, ಪುನರ್ವಸು, ಪುಷ್ಯ ಈ ಮೂರು ನಕ್ಷತ್ರಗಳಲ್ಲಿ ನೆಲ್ಲು (ಭತ್ತ) ಬಿತ್ತುವುದು ಮಘ ಪೂರ್ಣಿಮೆಯೆಂದು ಸೂರ್ಯನು ಮೂಡಲು ಎಲ್ಲಾ ತರಹದ ಧಾನ್ಯಗಳನ್ನು ಬಿತ್ತುವುದೆಂದು ವರಾಹಗಾರ್ಗ್ಯ ಶಾಸ್ತ್ರಕಾರರಂತೆ ರಟ್ಟನು ಅಭಿಪ್ರಾಯಪಡುತ್ತಾನೆ.

ಹೀಗೆ ಅನೇಕ ವಿಷಯಗಳ ಕುರಿತು ಚರ್ಚಿಸಿರುವ ಶಾಸ್ತ್ರಕಾರರು, ಸಂಸ್ಕೃತದ ರತ್ನೋಜ್ವಲಸಂಹಿತೆ, ಧನಕೀರ್ತಿ ಸಂಹಿತೆ, ವರಾಹಮಿಹಿರ ಹಾಗೂ ಗಾರ್ಗ್ಯಾಚರಕ ಸಂಹಿತೆಗಳ ಜೊತೆಗೆ ಪಿಂಗಳ, ನವಕೀರ್ತಿ,

ಕಪಿಲ ಮುಂತಾದ ಸಂಹಿತಕಾರಕ ಕೃತಿಗಳನ್ನು ಅನುಸರಿಸಿ ಕನ್ನಡದಲ್ಲಿ ರಟ್ಟಮತವನ್ನು ಬರೆದಿರುವುದು ಸತ್ಯ. ಸುಲಲಿತಭಾಷೆ, ಅಲಂಕಾರಗಳಿಂದ ರಚನೆಗೊಂಡ ಕೃತಿ ಹಾಡುಗಬ್ಬ ರೂಪದಲ್ಲಿ ವೈಜ್ಞಾನಿಕ ತಿಳುವಳಿಕೆ ಹೊಸ ಹೊಸ ಆಲೋಚನೆಗಳನ್ನು ಬಿಂಬಿಸುವುದರಿಂದ ಗ್ರಂಥದ ಶ್ರೇಷ್ಠತೆ ಹೆಚ್ಚಿದೆ.

ರಟ್ಟನ ಜಾತಕ : ರಟ್ಟಮತದಂತೆ ಕ್ರಿ.ಶ.೧೫೦೦ರಲ್ಲಿದ್ದ ಗಂಗಾಧರ ಎಂಬ ಕವಿಯಿಂದ ರಚನೆಗೊಂಡ 'ರಟ್ಟನ ಜಾತಕ' ಕೃತಿಯು ಜ್ಯೋತಿಷ್ಯವನ್ನು ಕುರಿತು ವಿವರಣೆಯನ್ನು ನೀಡುತ್ತದೆ. ಕಂದ ವೃತ್ತಗಳಲ್ಲಿ ರಚಿತವಾದ ಇದು ೧೨೦ ಪದ್ಯಗಳನ್ನೊಳಗೊಂಡಿದ್ದು, ಕೃತಿಯಲ್ಲಿ ಪ್ರಶ್ನೆಭಾಗ, ಗ್ರಹಗಳಿಗೆ ಷಡ್ಬಲಿ, ಔರಪುತ್ರಲಕ್ಷಣ ಮುಂತಾದ ವಿಷಯಗಳಿರುವುದಾಗಿ ತಿಳಿದು ಬರುತ್ತದೆ. ರಟ್ಟಕವಿಯ ಮೇಲಿನ ಅಭಿಮಾನದಿಂದ ಗಂಗಾಧರ ಕವಿ ತನ್ನ ಕೃತಿಯನ್ನು 'ರಟ್ಟನಜಾತಕ' ಎಂದು ಕರೆದಿರಬಹುದೇ ಎಂದು ಕವಿಚರಿತೆಕಾರರು ಊಹಿಸುತ್ತಾರೆ.

> "ಪುನರುಕ್ತಮಿದಪಶಬ್ದಮಿ
> ದೆನಲಾಗದು ವೈದ್ಯಜೋಯಿಸಂಗಳೊಳೆತ್ತಂ
> ಜನಕತಿಹಿತಮಂ ಪ್ರತಿಭೋ
> ದನೆಯಿಂ ಕೈಕೊಳ್ಳುದೆಂದರಾ ಮುನಿಮುಖ್ಯರ್"[೨೭]

ಎಂದು ವೈದ್ಯ ಜ್ಯೋತಿಷ್ಯ ಗ್ರಂಥಗಳಲ್ಲಿ ಅಪಶಬ್ಧಗಳನ್ನು, ಪುನರುಕ್ತಪದಗಳನ್ನು ನೋಡಬಾರದೆಂದೂ ಜನಕತಿಹಿತವಾದ ಗ್ರಂಥಗಳಿವು ಎಂದು ಅಭಿಪ್ರಾಯಪಡುವಲ್ಲಿ ಶಾಸ್ತ್ರಗ್ರಂಥಗಳ ಮೇಲೆ ಕವಿಗಿರುವ ಅಪಾರ ಒಲವೇ ಕಾರಣವಿರಬೇಕು.

ನರಪಿಂಗಳಿ : ಸುಮಾರು ೧೫೦೦ರಲ್ಲಿದ್ದ ಶುಭಚಂದ್ರನೆಂಬ ಕವಿ ಜ್ಯೋತಿಷ್ಯಶಾಸ್ತ್ರಕ್ಕೆ ಸಂಬಂಧಿಸಿದ 'ನರಪಿಂಗಳಿ' ಎಂಬ ಗ್ರಂಥವನ್ನು ಬರೆದಿದ್ದು, ಹಲವು ವಿಷಯಗಳನ್ನು ಕುರಿತು ಮಾಹಿತಿಯನ್ನು ಒದಗಿಸುವ ಇದು ೧೬೭ ಕಂದ ಪದ್ಯಗಳಲ್ಲಿ ರಚನೆಗೊಂಡಿದೆ ಎಂದು ಕವಿಚರಿತ್ರೆಕಾರರು ತಿಳಿಸುತ್ತಾರೆ.

೨.೩.೫. ಶಕುನಶಾಸ್ತ್ರ

ಶಕುನ ಶಾಸ್ತ್ರವು ಜ್ಯೋತಿಷ್ಯಶಾಸ್ತ್ರದ ಒಂದು ಭಾಗವಾಗಿದ್ದು, ಪುರಾತನ ಕಾಲದಿಂದಲೂ ಶಾಸ್ತ್ರರೂಪದಲ್ಲಿಯೇ ಬೆಳೆದು ಬಂದಿದೆ. ಮನುಷ್ಯ ಬೆಳೆಸಿಕೊಂಡು ಬಂದ ಹತ್ತು ಹಲವು ಬಗೆಯ ನಂಬಿಕೆಗಳೆ ಕಾಲಾಂತರದಲ್ಲಿ ಶಕುನಗಳಾಗುತ್ತವೆ. ದೇ.ಜವರೇಗೌಡರು ತಮ್ಮ 'ಜಾನಪದ ಸೌಂದರ್ಯ'ದಲ್ಲಿ ಪ್ರಸ್ತಾಪಿಸಿದಂತೆ 'ಮುಂಬರುವ ಜಯಾಪಜಯಗಳ ಅಥವಾ ವೃದ್ಧಿಹಾಸ್ಯಗಳ ಮಂಗಳಾಮಂಗಳ ಸೂಚನೆಯೆ ಶಕುನ' (ಪುಟ-೨೨) ಎಂದು ಅರ್ಥೈಯಿಸಿದ್ದಾರೆ. ಜನಪದರಲ್ಲಿ 'ಶಕುನಶಾಸ್ತ್ರ'ದ ಮೇಲೆ ಅಪಾರ ನಂಬಿಕೆ, ಗೌರವ, ಚಾವುಂಡರಾಯನ 'ಲೋಕೋಪಕಾರ' ಹಾಗೂ ಕೆಳದಿಬಸವರಸರ

‘ಶಿವತತ್ತ್ವರತ್ನಾಕರ’ ಕೃತಿಯಲ್ಲಿ ಪ್ರಾಸಂಗಿಕವಾಗಿ ಶಕುನಶಾಸ್ತ್ರಕ್ಕೆ ಸಂಬಂಧಿಸಿದಂತೆ ಹಲವಾರು ವಿಷಯಗಳು ಚರ್ಚಿತವಾಗಿವೆ.

ಶಕುನ ಪ್ರಪಂಚ : ಸುಮಾರು ೧೫೦೦ರಲ್ಲಿ ಜೀವಿಸಿದ್ದ ಬ್ರಾಹ್ಮಣ ಕವಿ ಚಾಕರಾಜನು ‘ಶಕುನ ಪ್ರಪಂಚವನ್ನು ರಚಿಸಿದ್ದಾಗಿ ತಿಳಿದು ಬರುತ್ತದೆ. ೨೫ ಅಧ್ಯಾಯ ಹಾಗೂ ೬೨೦ ಪದ್ಯಗಳನ್ನು ಹೊಂದಿದ ಈ ಕೃತಿಯ ಆರಂಭದಲ್ಲಿ ಶಾಸ್ತ್ರಕಾರನು ‘ಪಿಂಗಲಿಯ ಶಾಸ್ತ್ರಾನೀಕ ಸಾರಂಗಳಂ ಪೇಳ್ವಂ’ ಎಂದು ಹೇಳಿಕೊಂಡಿರುವುದರಿಂದ ಈ ಗ್ರಂಥಕ್ಕೆ ‘ಪಿಂಗಲಿಯಶಾಸ್ತ್ರ’ ‘ಪಿಂಗಲಿಯ ಶಕುನ’ ಎಂಬ ಭಿನ್ನ ಹೆಸರುಗಳಿರಬೇಕೆಂದು”[೪೬] ಕವಿಚರಿತೆಕಾರರು ಊಹಿಸಿದ್ದಾರೆ.

ಗ್ರಂಥದ ಕೊನೆಯಲ್ಲಿ ‘ಇದು ಸಕಲಜನ ಮನೋರಂಜನಂ ಪಿಂಗಲಿಶಾಸ್ತ್ರ ಸಮುದಿತ ತ್ರಿಕಾಲ ಜ್ಞಾನೋದಯ ಶ್ರೀ ಚಾಕರಾಜ ವಿರಚಿತಮಪ್ಪ ಶಕುನ ಪ್ರಪಂಚದೊಳ್ ಎಂದಿರುವಲ್ಲಿ ಈ ಶಾಸ್ತ್ರ ಗ್ರಂಥದ ಮೂಲಕ ಜನರಿಗೆ ರಂಜನೆಯನ್ನು ತ್ರಿಕಾಲ ಜ್ಞಾನವನ್ನು ದೊರಕಿಸಿಕೊಡುವುದು ಗ್ರಂಥಕಾರನ ಆಶಯವಿರಬೇಕು.

ಶಕುನಸಾರ : ಲಕ್ಷಣಾಂಕವೆಂಬ ಕವಿಯು ‘ಶಕುನಸಾರ’ ಎಂಬ ಕೃತಿಯನ್ನು ಬರೆದಿದ್ದು, ಇದು ೮ ಅಧಿಕಾರ, ೩೧೨ ವೃತ್ತಗಳನ್ನೊಳಗೊಂಡ ಗ್ರಂಥ. ಕ್ರಿ.ಶ.೧೫೦೦ರಲ್ಲಿ ರಚಿಸಿದ ಮಹತ್ವದ ಕೃತಿ. ರಾಜ್ಯ, ಓಲಗ, ಯಾತ್ರೆ, ಲಾಭ, ಮಳೆ, ಫಲಾರ್ಥ, ವಿವಾಹ, ಗರ್ಭ, ಪುತ್ರೋತ್ಪತ್ತಿ, ಜಯ, ಆಕಸ್ಮಿಕಕಾಲ ಮುಂತಾದ ವಿಷಯಗಳನ್ನೊಳಗೊಂಡಿದೆ.

ವೀರಾವಳಿ : ವಜ್ರಭಟ್ಟನಿಂದ ರಚನೆಗೊಂಡ ಈ ಕೃತಿಯು ಜ್ಯೋತಿಷ್ಯ, ಶಕುನ ಮೊದಲಾದ ವಿಷಯಗಳನ್ನು ಕುರಿತು ಮಾಹಿತಿಯನ್ನು ನೀಡುತ್ತದೆ. ಈಗ ದೊರೆತ ಭಾಗದಲ್ಲಿ ೨೨ ಅಧಿಕಾರಗಳಿವೆ. ಪೀಠಿಕಾಪ್ರಕರಣ, ಲಾಭಾಧಿಕಾರ, ವಿವಾಹಧಿಕಾರ, ರೂಪಾರ್ಥಧಿಕಾರ, ಪುತ್ರಾಧಿಕಾರ, ವರ್ಷಾಧಿಕಾರ, ಬೆಳೆಯಲಧಿಕಾರ, ಅರ್ಘಾಧಿಕಾರ, ಭೋಜನಾಧಿಕಾರ, ಗಮನಾಧಿಕಾರ, ಯುದ್ಧಾಧಿಕಾರ, ರಾಜಾಧಿಕಾರ, ಭೃತ್ಯಾಧಿಕಾರ, ವಣಿಜಾಧಿಕಾರ, ಬಂಧನಾಧಿಕಾರ, ರೋಗಾಧಿಕಾರ ಆಯುಷ್ಯಾಧಿಕಾರ, ಗತ್ಯಧಿಕಾರ, ಆಗಂತುಕಾಧ್ಯಾಯ, ನಷ್ಟಮುಷ್ಟಿಜ್ಞಾನ, ಲುಕ್ಯಾಧಿಕಾರ ಹಾಗೂ ಚೋರಾಧಿಕಾರ(ಅಪೂರ್ಣ), ಕಂದ ಪದ್ಯಗಳ ಪ್ರಧಾನವಾದ ಈ ಕೃತಿಯಲ್ಲಿ ಮಧ್ಯ ಮಧ್ಯ ಅಕ್ಷರವೃತ್ತಗಳೂ ಇವೆ. ಕೃತಿಯ ಹೆಸರು ಶ್ರೀವೀರಾವಳಿ ಮತಂ’ ಎಂದೂ ಅಲ್ಲಲ್ಲಿ ‘ಶ್ರೀ ವೀರಂ’ ಎಂದು ಸೂಚಿಸಲಾಗಿದೆ. ಇಂತಹ ‘ಶಕುನಶಾಸ್ತ್ರ’ ಕೃತಿಗಳಲ್ಲದೆ ‘ಪಂಚಪಕ್ಷಿಯ ಶಕುನ’, ‘ಪಂಚಪಕ್ಷಿ ಪ್ರಶ್ನಶಾಸ್ತ್ರ’ ಹಾಗೂ ‘ಶಕುನಗಳು’ ಎಂಬ ಕೃತಿಗಳನ್ನು ಎಂ.ವಿ.ಸೀತಾರಾಮಯ್ಯನವರು ತಮ್ಮ ಶಾಸ್ತ್ರಸಾಹಿತ್ಯ (ಪುಟ ೨೦೦) ಕೃತಿಯಲ್ಲಿ ಉಲ್ಲೇಖಿಸಿರುವುದನ್ನು ಗಮನಿಸಬಹುದು.

೨.೩.೬ ಸಾಮುದ್ರಿಕಶಾಸ್ತ್ರ

'ಸಾಮುದ್ರಿಕಶಾಸ್ತ್ರ'ವೂ ಜ್ಯೋತಿಷ್ಯಶಾಸ್ತ್ರದ ವ್ಯಾಪ್ತಿಯೊಳಗೆ ಸೇರುತ್ತದೆ. ಪ್ರಾಚೀನ ಭಾರತದಲ್ಲಿದ್ದ ಭೃಗು, ಕಶ್ಯಪ, ಪರಾಶರ ಮುಂತಾದ ಋಷಿಮುನಿಗಳ ಪಾತ್ರ ಈ ಶಾಸ್ತ್ರದ ಬೆಳವಣಿಗೆಯಲ್ಲಿ ಸಾಕಷ್ಟಿದ್ದರೂ ಅವರ ಯಾವ ಗ್ರಂಥಗಳು ಉಪಲಬ್ಧವಿಲ್ಲ. ವರಾಹಮಿಹಿರನ ಬೃಹತ್ಸಂಹಿತೆ, ಶಿವತತ್ತ್ವರತ್ನಾಕರ, ಲೋಕೋಪಕಾರಗಳಲ್ಲಿಯೂ ಈ ಶಾಸ್ತ್ರ ಕುರಿತು ಉಲ್ಲೇಖಗಳಿವೆ. ಎಂ.ವಿ.ಸೀತಾರಾಮಯ್ಯ ತಮ್ಮ 'ಶಾಸ್ತ್ರಸಾಹಿತ್ಯ' ಕೃತಿಯಲ್ಲಿ ಸಿದ್ಧಾಂತ ಶಿವಶಂಕರ ಶಾಸ್ತ್ರಿಯ 'ಸಾಮುದ್ರಿಕಶಾಸ್ತ್ರ', 'ಸಾಮುದ್ರಿಕಲಕ್ಷಣ' ಹಾಗೂ ರಾಮಸೂರಿಯ 'ಸಾಮುದ್ರಿಕ ಶಾಸ್ತ್ರಸಾರ ಸಂಗ್ರಹ' ಕೃತಿಗಳನ್ನು ಉಲ್ಲೇಖಿಸಿದ್ದಾರೆ.

ಇದುವರೆಗೂ ದೊರೆತ ಜ್ಯೋತಿಷ್ಯಶಾಸ್ತ್ರದ ಹಸ್ತಪ್ರತಿಗಳು ಲಂಕ್ಕೂ ಹೆಚ್ಚು ಇದ್ದು, ಸಂಶೋಧಕರ ಅಧ್ಯಯನಕ್ಕೆ ಉಪಯೋಗವಾಗುವ ರೀತಿಯಲ್ಲಿ ವಿವಿಧ ಬಗೆಯ ಹಲವು ವಿಷಯಗಳನ್ನೊಳಗೊಂಡ ಹಸ್ತಪ್ರತಿಗಳು ಕರ್ನಾಟಕ ವಿಶ್ವವಿದ್ಯಾಲಯದ ಆರ್.ಸಿ.ಹಿರೇಮಠ ಕನ್ನಡ ಅಧ್ಯಯನಪೀಠ ಧಾರವಾಡ ಮತ್ತು ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ಹಸ್ತಪ್ರತಿ ಭಂಡಾರದಲ್ಲಿ ಸಂಗ್ರಹಿಸಲಾಗಿದ್ದು ಆಸಕ್ತ ಸಂಶೋಧಕರಿಗೆ ಆಕರಸಾಮಗ್ರಿಗಳಾಗಿ ಬರವಣಿಗೆಗೆ ಸಹಾಯಕವಾಗಿವೆ.

೨.೩.೭. ಗಜಶಾಸ್ತ್ರ

ಗಜ ಎಂದರೆ ಆನೆ. ಆನೆಗಳನ್ನು ಕುರಿತು ಬರೆದ ಶಾಸ್ತ್ರವನ್ನು ಗಜಶಾಸ್ತ್ರ ಎಂದು ಕರೆಯುತ್ತೇವೆ. ಗಜಯುದ್ಧ, ಗಜವೇಂಟೆಗಳಲ್ಲಿ ಕನ್ನಡಿಗರಿಗೆ ಮೊದಲಿನಿಂದಲೂ ಆಸಕ್ತಿ. ಗಂಗರಸರಾದ ದುರ್ವಿನೀತ, ವಿಕ್ರಮ ಮುಂತಾದ ಅರಸರು ಗಜಗಳ ಬಗ್ಗೆ ತೀವ್ರ ಆಸಕ್ತಿಯನ್ನು ಹೊಂದಿದ್ದರು. ಆನೆಯನ್ನು ತಮ್ಮ ರಾಜ ಚಿಹ್ನೆಯನ್ನಾಗಿ ಇಟ್ಟುಕೊಂಡಿದ್ದನ್ನು ಇಲ್ಲಿ ಸ್ಮರಿಸಬಹುದು. ಹೀಗಾಗಿ ಗಜಗಳ ಕಾಯಿಲೆಗಳು, ಅವುಗಳ ಗುಣಲಕ್ಷಣಗಳು, ಅವುಗಳ ಆಹಾರ, ಪೋಷಣೆ ಮೊದಲಾದ ವಿಷಯಕ್ಕೆ ಸಂಬಂಧಿಸಿದಂತೆ 'ಗಜಶಾಸ್ತ್ರ'ದಂಥ ಕೃತಿ ರಚನೆ ಮಾಡಿರಲು ಸಾಧ್ಯವಿದೆ.

ಎರಡನೇ ಶಿವಮಾರನ ಸಂಸ್ಕೃತ ಕೃತಿಯಾದ 'ಗಜಮತ ಕಲ್ಪನಾ' ಎಂಬ ಮೂರು ಪರಿಚ್ಛೇಧಗಳ ಗಜಶಾಸ್ತ್ರ' ವೊಂದು ಉಪಲಬ್ಧ ಕೃತಿಯಾಗಿದೆ. ಆದರೆ ಕನ್ನಡದಲ್ಲಿ ರಚಿತಗೊಂಡ ಸೈಗೊಟ್ಟಶಿವಮಾರನ ಅನುಪಲಬ್ಧ 'ಗಜಾಷ್ಟಕ' ಪ್ರಾಚೀನ ಗಜಶಾಸ್ತ್ರ ಗ್ರಂಥವೊಂದರ ಉಲ್ಲೇಖವನ್ನು ಶಾಸನ ತಿಳಿಸುತ್ತದೆ. ಶಿವಮಾರನ ಈ 'ಗಜಾಷ್ಟಕ'ವು ಕನ್ನಡ ನಾಡಿನಲ್ಲಿ ಒನಕೆವಾಡಾಗಿ ಪರಿಣಮಿಸುವಷ್ಟು ಜನಪ್ರಿಯವಾಗಿತ್ತೆಂದು ಹುಮ್ಮಚ ಶಾಸನದಲ್ಲಿ ಹೇಳಲಾಗಿದೆ. ಮೊದಲನೆಯ ಶಿವಮಾರನನ್ನು 'ಗಜದಾನಮನರ್ಥಿಗಿತ್ತುಚಾಗಿ' ಏನಿಸಿದ ಮಹಾದಾನಿ ಎಂದೂ ಈತನ ಮೊಮ್ಮಗ ಶ್ರೀಪುರುಷ 'ಗಜಶಾಸ್ತ್ರಕರ್ತೃ' ಎಂದೂ ಉಲ್ಲೇಖಿಸಲಾಗಿದೆ. ಈ ಶ್ರೀ ಪುರುಷನ ಮಗನೇ ಎರಡನೇ ಶಿವಮಾರನಾಗಿದ್ದು, ಈತನೆ 'ಗಜಮತ

ಕಲ್ಪನಾ' ಹಾಗೂ ಕನ್ನಡದ ಶಿವಮಾರಮತದ ಕರ್ತೃ ಎಂದು ಡಾ.ಎಂ.ಎಂ.ಕಲಬುರ್ಗಿಯವರು 'ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ' ಎಂಬ ಕೃತಿಯಲ್ಲಿ ಅಭಿಪ್ರಾಯಪಡುತ್ತಾರೆ. ನೃಸಿಂಹ ವೀರಾಂಚಿಯರ ಪುತ್ರನಾದ ವೀರಭದ್ರರಾಜನು (೧೬೦೦) 'ಪಾಲಕಾಪ್ಯನ ಹಸ್ತಾಯುರ್ವೇದ ಕೃತಿಗೆ ಟೀಕು ಬರೆದಿದ್ದಾನೆ 'ಪಾಲಕಾಪ್ಯ ಕೃತ ಹಸ್ತಾಯುರ್ವೇದ ಟೀಕೆ' ಎಂಬ ಹೆಸರಿನ ಇದು ಗದ್ಯದಲ್ಲಿದೆ. ಗಜಶಾಸ್ತ್ರಕ್ಕೆ ಸಂಬಂಧಿಸಿದ ಆನೆಗಳ ರೋಗ ಹಾಗೂ ಚಿಕಿತ್ಸೆಗಳ ಕೆಲವು ವಿಚಾರಗಳನ್ನು ಇಲ್ಲಿ ನಿರೂಪಿಸಲಾಗಿದೆ.

ಹೀಗೆ ಪ್ರತ್ಯೇಕ ಗಜಶಾಸ್ತ್ರ ಕೃತಿಗಳನ್ನು ಹೊರತುಪಡಿಸಿದರೆ ಕನ್ನಡದಲ್ಲಿ ಹಾಲಾಸ್ಯ ಪುರಾಣ, ಗುರು ನಂದೀಶಾಂಕಿತವಾದ ಸದಾಶಿವನೀತಿ, ಶಂಕರಾರಾಧನ, ಚಾವುಂಡರಾಯನ ಲೋಕೋಪಕಾರ ಕೃತಿಗಳಲ್ಲಿ ಪ್ರಾಸಂಗಿಕವಾಗಿ ಗಜಶಾಸ್ತ್ರಕ್ಕೆ ಸಂಬಂಧಿಸಿದ ಪ್ರಮುಖ ವಿಷಯಗಳು ಉಲ್ಲೇಖಗೊಂಡಿವೆ. ಲೋಕೋಪಕಾರ ಕೃತಿಯಲ್ಲಿ ಕೆಲವು ಗಿಡಮೂಲಿಕೆಗಳನ್ನು ಕುಟ್ಟಿ, ಅದರ ರಸ ತೆಗೆದು ಆನೆಗಳಿಗೆ ಕುಡಿಸುವುದರಿಂದ ಸರ್ವರೋಗಗಳು ಗುಣ ಮುಖವಾಗುತ್ತವೆ ಎಂದು ತಿಳಿಸಲಾಗಿದೆ. ಇಂತಹ ಅನೇಕ ರೋಗ ರುಜಿನಗಳು ಅವುಗಳಿಗೆ ಪರಿಹಾರ ಕುರಿತು ಶಾಸ್ತ್ರಕಾರರು ಶಾಸ್ತ್ರರೂಪದಲ್ಲಿ ಕ್ರಮಬದ್ಧರೀತಿಯಲ್ಲಿ ಬರೆದಿಟ್ಟಿದ್ದಾರೆ.

೨.೩.೮. ಕಾಮಶಾಸ್ತ್ರ

'ಕಾಮಶಾಸ್ತ್ರ'ವೊಂದು ಲೌಕಿಕ ವಿದ್ಯೆ ಎಂಬ ಭಾವನೆ ಪ್ರಾಚೀನಕಾಲದಿಂದ ಬೇರೂರಿತ್ತಲ್ಲದೆ ಪುರುಷಾರ್ಥಗಳಲ್ಲಿ ಇದಕ್ಕೆ ಮೂರನೇ ಸ್ಥಾನವಿದೆ. ಕಾಮಶಾಸ್ತ್ರಕ್ಕೆ ಪರ್ಯಾಯವಾಗಿ 'ಸ್ಮರಶಾಸ್ತ್ರ', 'ಕಕ್ಕೋಕಶಾಸ್ತ್ರ' ಎಂದೂ ಕರೆಯುತ್ತಾರೆ. ವಾತ್ಸಾಯನ ತನ್ನ 'ಕಾಮಶಾಸ್ತ್ರ' ಗ್ರಂಥದಲ್ಲಿ ತನಗಿಂತ ಹಿಂದಿನ ಈ ಶಾಸ್ತ್ರಕೃತಿಯನ್ನು ರಚಿಸಿದ ಗ್ರಂಥಕರ್ತರ ಪಟ್ಟಿಯನ್ನು ನೀಡಿದ್ದಾನೆ. ಇದನ್ನು ಅವಲೋಕಿಸಿದರೆ ಸಂಸ್ಕೃತದಲ್ಲಿ ಪ್ರಾಚೀನಕಾಲದಿಂದಲೂ ಕಾಮವನ್ನು ಕುರಿತು ಶಾಸ್ತ್ರ ರೂಪದಲ್ಲಿ ಗ್ರಂಥರಚನೆಯಾದ ಬಗ್ಗೆ ಉಲ್ಲೇಖಗಳು ದೊರೆಯುತ್ತವೆ.

ಮದನತಿಲಕ : ಚಂದ್ರರಾಜನೆಂಬ ಬ್ರಾಹ್ಮಣ ಕವಿಯಿಂದ ೧೦೪೦ರಲ್ಲಿ ರಚನೆಗೊಂಡ ಕಾಮಶಾಸ್ತ್ರಕ್ಕೆ ಸಂಬಂಧಿಸಿದ ಮದನತಿಲಕ ಕೃತಿ ವಿಶಿಷ್ಟವಾದದ್ದು. "ಆಗಮ ಲೌಕಿಕ ವಿರೋಧಮಂ ಕಳೆದು ಸಾರಾಂಶಮಂಕೊಂಡು ಪಲವು ಮತಂಗಳನೊಂದು ಮಾಡಿ ಪದಿನೆಂಟಧಿಕರಣಂಗಳಿಂದಲಂ ಕಾರಾಲಂಕೃಮಾಗೆ ನಾನಾ ಛಂದದಿನ್ನೆನೂರು ಗದ್ಯಪದ್ಯಂಗಳಿಂ ಮಿಶ್ರಿತಂ ಮಾಡಿ ಪೇಳ್ವಂ"[೨೮] ಎಂದು ಕೃತಿಕಾರ ಹೇಳಿದ್ದರೂ ಸದ್ಯಕ್ಕೆ ಸಿಕ್ಕ ಪ್ರತಿಯಲ್ಲಿ ೧೧ ಅಧಿಕಾರಗಳು. ೩೯೭ ಗದ್ಯಪದ್ಯಗಳು ಇರುವುದರಿಂದ ಈಗಿರುವ ಮದನತಿಲಕ ಕೃತಿ ಅಸಮಗ್ರವಾಗಿದೆ.

ಚಂದ್ರರಾಜನು ತನ್ನ ಗ್ರಂಥದಲ್ಲಿ ವಿವಿಧ ಛಂದಸ್ಸುಗಳ ಪ್ರಯೋಗ ಮಾಡಿರುವುದರಿಂದ ಛಂದಶಾಸ್ತ್ರ ದೃಷ್ಟಿಯಿಂದಲೂ ಈ ಗ್ರಂಥ ಗಮನಾರ್ಹವಾಗಿದೆ. ಒಂದು ಸಂಕಲನದಂತಿರುವ ಗ್ರಂಥ ಓದುಗರಿಗೆ

ಸುಲಭವಾಗಿ ಅರ್ಥವಾಗುತ್ತದೆ. ಮಾರ್ಗ ದೇಶಿಗಳ ಹೊಂದಾಣಿಕೆ, ಅನೇಕ ಲೋಕೋಕ್ತಿ, ಗಾದೆ, ನಾಣ್ನುಡಿ, ಉಪಮೆಗಳಿಂದ ಸೊಗಸಾಗಿದೆಯಲ್ಲದೆ ತತ್ಕಾಲೀನ ಸಮಾಜದ ರೂಪುರೇಷೆಗಳನ್ನು ಪರಿಚಯಿಸುವ ಮೌಲ್ಯಭರಿತ ಶಾಸ್ತ್ರ ಕಾವ್ಯವಾಗಿದೆ.

'ಕವಿತಾ ಮಹಾರ್ಣವಂ' 'ಮಹಾಕವಿ' ಎಂಬ ಪ್ರಶಸ್ತಿಗಳಿಂದ ಪ್ರಖ್ಯಾತನಾದ ಚಂದ್ರರಾಜನು 'ಮುನ್ನ ಪೇಳ್ದುದನನು ಭವಣಿಗ ಮಾಗಮಕ್ಕ ಮಳವಡೆ', 'ಮನೋಭಾವ ಮೋಕ್ತಮಂ ಲೌಕಿಕಮಂ ಸಂಧಿಸಿ ನೀತಿಗೊಡಂ ಬಡುವಂದದಿ ಬುಧಮಂಡಳಿ ನಚ್ಚಿಮೆಚ್ಚಿ' ಎಂದು ಗ್ರಂಥ ಪ್ರಾಶಸ್ತ್ಯವನ್ನು ಹೇಳಿಕೊಂಡಿದ್ದಾನೆ. 'ಅಪುತ್ರಸ್ಯಗತಿರ್ನಾಸ್ತಿ' ಎಂಬ ವಾಕ್ಯವನ್ನು ಉದಾಹರಿಸಿ, ಪುತ್ರೋದಯವು ಕಾಮ ಸುಖ ಫಲವಾದ್ದರಿಂದ ವಂಶದ ಏಳಿಗೆಯನ್ನು ಬಯಸುವವನು ಮಾನಿನಿಗೆ ವಿರಾಗವಾಗದಂತೆ ಅವಳ ಮನಸ್ಸನ್ನು ಒಲಿಸಿಕೊಂಡು ಸುಖಿಸಬೇಕೆಂದು ಕವಿ ಸಲಹೆ ಮಾಡಿದ್ದಾನೆ. ಧರ್ಮಕ್ಕೆ ಅವಿರುದ್ಧವಾಗಿ, ಧರ್ಮಪತ್ನಿಯ ಸಹವಾಸದಲ್ಲಿ ದಾಂಪತ್ಯ ಸುಖವನ್ನು ವಂಶಾಭಿವೃದ್ಧಿಗಾಗಿ ಅನುಭೋಗಿಸಬೇಕೆಂದು ಹೇಳಿ ಆ ಬಗೆಗೆ ಅನುಸರಿಸಬೇಕಾದ ವಿಧಿ ನಿಷೇಧಗಳನ್ನು ತಿಳಿಸುವ ಕಾಮಶಾಸ್ತ್ರವನ್ನು ಕಡೆಗಣ್ಣಿನಿಂದ ನೋಡಬೇಕಾಗಿಲ್ಲ ಎಂದು ಹೇಳುತ್ತಾ

> "ಪರವಧುವಂ ನಪುಂಸಕಿಯರಂ ಗುರುಭಾರ್ಯೆಯರಂ ಮುನೀಂದ್ರಸೌಂ
> ದರಿಯರಂ ಅಂತ್ಯಜಾತಿಯವಳಂ ವ್ರತಮುಳ್ಳಳಂ ಅಂಗಹೀನೆಯಂ
> ತಿರಿವವಳಂ ಕುಲಕ್ಷಯೆಯಂ ಆ ಕೊಡಗೂಸುಗಳಂ ವಿದಗ್ಧಂ ಆ
> ದರದೊಳೆ ಕೂಡಲುಂ ಬಯಸಿ ನೋಡಲುಂ ಆಗದು ಕೂರ್ತು ಬೊಂದೊಡಂ"[೨೯] (೯-೨)

ಹೀಗೆ ಹಲವು ವಿಚಾರಗಳನ್ನು ತಿಳಿಸುತ್ತಾ ಮೋಕ್ಷಸುಖ ಹೊಂದಲು ಸ್ತ್ರೀ ಸೌಖ್ಯವನ್ನು ಪಡೆಯಬೇಕು. ವ್ಯಭಿಚಾರಿಣಿಯನ್ನು, ದುಷ್ಟಸ್ತ್ರೀಯನ್ನು ತೊರೆಯಬೇಕು. ಒಬ್ಬ ಸತಿಯನ್ನು ಪಡೆದು ಸುಖವಾಗಿರಬೇಕು. "ನೂರ್ಬರುಮಂ ಪಡೆದೊಡೆ ಕರಂ ಸುಖಂ ಬಡೆದಪನೆ"[೩೦] (೮-೫೩) ಎಂದು ಹೇಳಿರುವಲ್ಲಿ ಸ್ತ್ರೀ ಸಹವಾಸದ ಇತಿಮಿತಿಗಳನ್ನು ನಿರ್ಧರಿಸಿದ್ದಾನೆ. ಪ್ರಸ್ತುತ ಕೃತಿ ನೀತಿ ನಡಾವಳಿಕೆ ಕುರಿತು ತಿಳಿಸುವುದರಿಂದ ನೀತಿಶಾಸ್ತ್ರವಾಗಿದೆ ಎಂದು ಹೇಳಬೇಕಾಗುತ್ತದೆ.

ಜನವಶ್ಯ : ಕಾಮಶಾಸ್ತ್ರಕ್ಕೆ ಸಂಬಂಧಿಸಿದ ಮತ್ತೊಂದು ಉಪಯುಕ್ತ ಕೃತಿ ಕಲ್ಲರಸನ ಜನವಶ್ಯ. ಕ್ರಿ.ಶ.೧೪೪೬-೬೭ರವರೆಗೆ ಆಳಿದ ವಿಜಯನಗರದ ಪ್ರೌಢದೇವರಾಯನ ಮಗ ಮಲ್ಲಿಕಾರ್ಜುನ ರಾಯನ ಆಸ್ಥಾನ ಕವಿಯಾಗಿದ್ದ ಕಲ್ಲರಸ ತನ್ನ ಹೆಂಡತಿಗೆ ಈ ಶಾಸ್ತ್ರವನ್ನು ಹೇಳಿದಂತೆ ತಿಳಿದು ಬರುತ್ತದೆ. ೧೨ ಸಂಧಿಗಳಲ್ಲಿ ವಿವಿಧ ಷಟ್ಪದಿಗಳಲ್ಲಿ ರಚನೆಗೊಂಡ ಈ ಗ್ರಂಥ ವಾತ್ಸಾಯನನ ಕೃತಿಗೆ ಪೂರಕವಾಗಿದ್ದು, 'ಮಲ್ಲಿಕಾರ್ಜುನ ವಿಜಯ' ಎಂದೂ ಕರೆಯುವ ವಾಡಿಕೆಯಿದೆ. "ಜನವಶ್ಯ (೧೧ನೆಯ ಶತಮಾನದಲ್ಲಿದ್ದ ಸಂಸ್ಕೃತ ಶಾಸ್ತ್ರಕಾರ) ಕಕ್ಕೋಕನ 'ರತಿರಹಸ್ಯ'ದ ಅನುವಾದ ಎಂಬುದನ್ನು ಎರಡು ಗ್ರಂಥಗಳ ತೌಲನಿಕ

ಅಧ್ಯಯನದಿಂದ ತಿಳಿದು ಬರುತ್ತದೆ. ಆದರೆ ಕವಿ ಕಕ್ಕೋಕನ ಹೆಸರನ್ನು ಬಳಸಿಲ್ಲ ಕನ್ನಡದಲ್ಲಿ ದೊರೆತಿರುವ ಕಾಮಶಾಸ್ತ್ರಗಳಲ್ಲೆಲ್ಲ ಇದು ಶ್ರೇಷ್ಠವಾಗಿದೆ"[೩೧] ಎಂದು ಕೃತಿ ಸಂಪಾದಕರಾದ ಜಿ.ಜಿ. ಮಂಜುನಾಥನ್ ಅಭಿಪ್ರಾಯ ಪಡುತ್ತಾರೆ.

ಮನ್ಮಥ ವಿಜಯ : ಕವಿಮಲ್ಲನ 'ಮನ್ಮಥವಿಜಯ' ಸ್ವತಂತ್ರ ಕಾಮಶಾಸ್ತ್ರಗ್ರಂಥ. ಇದನ್ನು 'ಸ್ಮರವಿಜಯ' ಎಂದೂ ಕರೆಯಲಾಗಿದೆ. ಮೇಲ್ಕಂಡ ಕೃತಿಗಳಲ್ಲದೆ ಜನ್ನನ ಅನುಭವ ಮುಕುರ, ೧೬೫೦ರ ಅಂಗಜಭೋದೆ, ಕಕ್ಕೋಕಶಾಸ್ತ್ರ ಟೀಕೆ, 'ಕಾಮಶಾಸ್ತ್ರ' (ಗದ್ಯ) 'ರತಿರಹಸ್ಯ' ಟೀಕು ಕೃತಿಗಳನ್ನು ಎಂ.ವಿ.ಸೀತಾರಾಮಯ್ಯ ಹೆಸರಿಸುತ್ತಾರೆ. ಅಲ್ಲದೆ ಕನ್ನಡ ಪ್ರಾಚೀನ ಕಾವ್ಯಗಳಲ್ಲಿ ಪಂಪಾದಿ ಕವಿಗಳು 'ಕಾಮಶಾಸ್ತ್ರ'ವನ್ನು ಕುರಿತು ಪ್ರಾಸಂಗಿಕವಾಗಿ ಚಿತ್ರಿಸಿದ್ದಾರೆ. ಕಾಮದ ಒಂದು ಮುಖ ಶೃಂಗಾರವನ್ನು ಕಾವ್ಯಗಳಲ್ಲಿ ಕಲಾತ್ಮಕವಾಗಿ ವರ್ಣಿಸಿರುವುದನ್ನು ಕಾಣುತ್ತವೆ. ಇಲ್ಲಿಯವರೆಗೆ ಲಭ್ಯವಾದ ಕಾಮಶಾಸ್ತ್ರದ ಹಸ್ತಪ್ರತಿಗಳು ೧೫೦ಕ್ಕೂ ಹೆಚ್ಚು ದೊರೆತಿದ್ದು, ಅವು ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ಮತ್ತು ಕರ್ನಾಟಕ ವಿಶ್ವವಿದ್ಯಾಲಯದ ಆರ್.ಸಿ.ಹಿರೇಮಠ ಕನ್ನಡ ಅಧ್ಯಯನ ಪೀಠದ ಹಸ್ತಪ್ರತಿ ಭಾಂಡಾರದಲ್ಲಿ ಸಂಗ್ರಹಿಸಿ ಇಡಲಾಗಿದೆ.

೨.೩.೯. ಸೂಪಶಾಸ್ತ್ರ

ಸಾಮಾನ್ಯವಾಗಿ 'ಸೂಪ' ಎಂದರೆ ಅಡುಗೆ ಎಂಬ ಅರ್ಥ ಹೊಳೆಯುತ್ತದೆ. 'ಅಡು' ಎಂಬ ಧಾತುವಿನಿಂದ 'ಅಡುಗೆ' ಶಬ್ದದ ನಿಷ್ಪತ್ತಿಯಾಗಿದೆ. ಅಡು ಎಂದರೆ ಬೇಯಿಸು ಎಂಬ ಅರ್ಥವನ್ನು ಕೊಡುತ್ತದೆ. "ಹಸಿಯಾದ ಆಹಾರವನ್ನು ರುಚಿಯಾದ ಊಟವನ್ನಾಗಿ ಪರಿವರ್ತಿಸುವ ವಿಧಾನವೇ ಅಡಿಗೆ ಶಾಸ್ತ್ರ ಎಂದು ನಮ್ಮ ಅಡಿಗೆ ಪಥ್ಯದ ಊಟ ಎಂಬ ಕೃತಿಯಲ್ಲಿ ಎಂ.ಶಿವರಾಮ ಅವರು ಸ್ಪಷ್ಟ ಪಡಿಸುತ್ತಾರೆ. ಸೂಪಶಾಸ್ತ್ರ ಕೃತಿ ಸಂಪಾದಕರಾದ ಎಸ್.ಎಸ್.ಕೃಷ್ಣಜೋಯಿಸ್ ಅವರು "ಮನುಷ್ಯನ ಅಸ್ತಿತ್ವಕ್ಕೆ ಕಾರಣವಾದ ಮತ್ತು ಗುಣಗಳನ್ನು ಹೊರಹೊಮ್ಮಿಸಬಲ್ಲ ಅನ್ನದ ತಯಾರಿಕೆ ಉಪಯೋಗಕ್ರಮ ಮುಂತಾದ ವಿಚಾರಗಳನ್ನು ಶಾಸ್ತ್ರರೂಪವಾಗಿ ತಿಳಿಸುವುದೇ ಸೂಪಶಾಸ್ತ್ರ"[೩೨] ಎಂದಿರುವರು. ಹಾಗೆಯೇ 'ಅಡಿಗೆಯ ಶಾಸ್ತ್ರ' ಅಥವಾ 'ಪಾಕಶಾಸ್ತ್ರ' ಎಂಬುದರ ಪರ್ಯಾಯ ಪದವೇ ಸೂಪಶಾಸ್ತ್ರ. ಅಂದರೆ ಅಡುಗೆ ಮಾಡುವ ಕ್ರಮವನ್ನು ತಿಳಿಸುವ ಶಾಸ್ತ್ರ ಅಥವಾ ಗ್ರಂಥ ಎಂದು ಕರೆಯಬಹುದು. 'ಸೂಪ' ಎಂಬುದು ಸಂಸ್ಕೃತ ಪದ. ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟಿನಲ್ಲಿ 'ಸೂಪ'ಕ್ಕೆ "ಅನ್ನದೊಂದಿಗೆ ಕಲಸಿಕೊಳ್ಳುವ ವ್ಯಂಜನಪದಾರ್ಥ. ಸಾರು, ತೊವ್ವೆ ಮುಂತಾದ ಮೇಲೋಗರ"[೩೩] ಎಂದು ಅರ್ಥಕೊಡಲಾಗಿದೆ. ಅದರಂತೆ ಕಿಟೆಲ್‌ಕೋಶದಲ್ಲಿ "ಸೂಪ ಶಬ್ದಕ್ಕೆ 'ಸೂವ' soup, broth split pease a cook ಎಂದೂ 'ಸೂಪಶಾಸ್ತ್ರ' ಎಂಬುದಕ್ಕೆ 'A Book on cookery"[೩೪] ಎಂದು ಅರ್ಥೈಯಿಸಲಾಗಿದೆ. ಮೇಲಿನ ಎಲ್ಲಾ ವಿಚಾರಗಳನ್ನು ಪರಾಮರ್ಶಿಸಿದಾಗ ದ್ವಿದಳ ಧಾನ್ಯಗಳ ಸಾರವನ್ನು

ರಸವನ್ನು ಬೇಳೆಕಾಳುಗಳ ತಿಳಿಯ ಕಟ್ಟನ್ನು 'ಸೂಪ' ಎಂಬ ಅರ್ಥದಲ್ಲಿ ಬಳಸಿಕೊಳ್ಳಲಾಗಿದೆ ಎಂದು ವಿಧಿತವಾಗುತ್ತದೆ. ಲೋಕೋಪಕಾರ ಕೃತಿಯು ಸೂಪಶಾಸ್ತ್ರದ ಬಗ್ಗೆ ಮಾಹಿತಿಯನ್ನು ಮೊದಲ ಬಾರಿಗೆ ಶಾಸ್ತ್ರೀಯವಾಗಿ ತಿಳಿಸಿಕೊಡುತ್ತದೆ. ಆದರೆ ಸಮಗ್ರತೆ ದೃಷ್ಟಿಯಿಂದ ೩ನೆಯ ಮಂಗರಸನ ಸೂಪಶಾಸ್ತ್ರ ಕೃತಿ ಅತ್ಯಂತ ಮಹತ್ವದ ಕೃತಿ. ಕ್ರಿ.ಶ. ೧೫೦೮ರಲ್ಲಿ ರಚನೆಗೊಂಡಿದ್ದು. ೬ ಅಧ್ಯಾಯ ೩೫೮ ಪದ್ಯಗಳಲ್ಲಿ ಸುಮಾರು ೨೬೦ ವಿವಿಧ ಬಗೆಯ ಪಾಕಶಾಸ್ತ್ರ ವಿಧಾನಗಳನ್ನು ವಾರ್ಧಕ ಷಟ್ಪದಿಯಲ್ಲಿ ಹೇಳಿರುವನು.

ಕೃತಿ ಸಂಪೂರ್ಣವಾಗಿ ಅಡಿಗೆ ವಿಧಾನಗಳಿಗೆ ಮೀಸಲಾಗಿರುವುದರಿಂದ ಈ ಗ್ರಂಥಕ್ಕೆ ಸೂಪಶಾಸ್ತ್ರ ಎಂಬ ಹೆಸರು ಅನ್ವರ್ಥಕವಾಗಿ ಬಂದಿದೆ. ಕವಿ ಪೀಠಿಕಾ ಪದ್ಯದಲ್ಲಿ ಹೇಳುವಂತೆ

ವಸುಧಾವಲಯ ಜೀವಿಗಳ ತನೂರಕ್ಷಣೆಗೆ
ರಸರೂಪ ಗಂಧ ಶಬ್ದ ಸ್ಪರ್ಶ ಭೋಗಂಗ
ಳೆಸಕವೇ ಮುಖ್ಯಮಾ ಪಂಚವಿಧ ವಿಷಯ ಭೋಗೋಪಭೋಗಂಗಳೊಳಗೆ
ರಸನೇಂದ್ರಿಯಂ ತೃಪ್ತಿ ವಡೆಯಲಿಹಪಿರ ಸೌಖ್ಯ
ಮುಸುಕುವುದು ನಿಜಮದರಿನಾ ಭೋಜ್ಯವಸ್ತುವಂ
ಹಸನಾಗಿ ಪಾಕಮಂ ಮಾಳ್ಪ ವಿವರದ ಶಾಸ್ತ್ರಮಂ ಮನಂಗೊಂಡು ಪೇಳ್ವೆಂ[೩]

ಎಂದು ಗ್ರಂಥದ ಮಹತ್ವ ಅದರ ಉದ್ದೇಶವನ್ನು ಸ್ಪಷ್ಟಪಡಿಸಿದ್ದಾನೆ.

ಒಟ್ಟಾರೆಯಾಗಿ ಇಲ್ಲಿಯವರೆಗೆ ದೊರೆತ ಮತ್ತು ಪ್ರಸ್ತಾಪಿಸಲಾದ ವೈದ್ಯ, ಜ್ಯೋತಿಷ್ಯ ಶಕುನ, ಸಾಮುದ್ರಿಕ, ಗಜ, ಕಾಮ, ಸೂಪಶಾಸ್ತ್ರ ಮುಂತಾದ ಜನೋಪಯೋಗಿ ವಿಷಯಗಳಲ್ಲಿ ಹೆಚ್ಚು ವೈದ್ಯ, ಜ್ಯೋತಿಷ್ಯ ಗ್ರಂಥಗಳನ್ನು ಹಸ್ತಪ್ರತಿಗಳಲ್ಲಿ ಗಣನೀಯವಾಗಿ ಕಾಣುತ್ತೇವೆ. ಆದರೆ ಗಜಶಾಸ್ತ್ರ, ಅಶ್ವಶಾಸ್ತ್ರದಂತಹ ಗ್ರಂಥದ ಹಸ್ತಪ್ರತಿಗಳು ವಿರಳ. ಕಾರಣ ಒಂದು ಕಾಲಕ್ಕೆ ಉಪಯುಕ್ತ ಪ್ರಾಣಿಗಳಾದ ಕುದುರೆ ಯುದ್ಧ ಸಾಮಗ್ರಿಗಳಾಗಿ ಬಳಸುತ್ತಿದ್ದರು ಅದೇ ರೀತಿ ಆನೆಯೂ ಸಹ ರಾಜಪ್ರಭುತ್ವತ್ವವೂ ಮರೆಯಾಗಿ ಪ್ರಜಾಪ್ರಭುತ್ವ ರೂಪಗೊಂಡ ಹಿನ್ನೆಲೆಯಲ್ಲಿ ಅವುಗಳ ಕುರಿತು ಕೃತಿ ರಚನೆ ಕಡಿಮೆ ಆಗಿರುವ ಸಾಧ್ಯತೆ ಇದೆ. ಇನ್ನೂ ವ್ಯಾಕರಣ, ಛಂದಸ್ಸು, ನಿಘಂಟು, ವಿಶ್ವಕೋಶಶಾಸ್ತ್ರ ಕುರಿತು ಸಾಕ,ಟು ಕೃತಿಗಳು ಬೆಳಕು ಕಂಡಿವೆ. ಅವುಗಳನ್ನು ಇಲ್ಲಿ ಕೈಬಿಡಲಾಗಿದೆ. ಜನಕ್ಕೆ ಹತ್ತಿರವಾದ ಶಾಸ್ತ್ರವನ್ನು ಮಾತ್ರ ವಿಶ್ಲೇಷಿಸಿ ಪರಿಚಯಿಸಲಾಗಿದೆ.

ಅಡಿಟಿಪ್ಪಣಿಗಳು

೧. ಶಾಸ್ತ್ರ ಸಾಹಿತ್ಯ, ಪ್ರೊ.ಎಂ.ವಿ.ಸೀತಾರಾಮಯ್ಯ ಸಂಪುಟ ೩, ಪುಟ ೬

೨. ಅದೇ, ಪುಟ ೩

೩. ಅದೇ, ಪುಟ ೨೧

೪. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಡಾ.ಎಂ.ಚಿದಾನಂದಮೂರ್ತಿ ಪುಟ ೧೩

೫. ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟು, ಸಂಪುಟ ೮, ಪುಟ ೮೧೦೮

೬. ಅನಂತನಾಥ ಪುರಾಣ, ೬-೧೧ ನ (ಸಂ) ಎಚ್.ದೇವೀರಪ್ಪ ಹಾಗೂ ಎಂ.ಸಿ.ಪದ್ಮನಾಭ ಶರ್ಮ

೭ ಲೋಕೋಪಕಾರಂ (ಸಂ) ಎಚ್. ಶೇಷಾಯ್ಯಂಗಾರ್ ಪುಟ iv

೮. ಶ್ರೀ ವತ್ಸನಿಘಂಟು ಟಿ.ವಿ.ವೆಂಕಟಾಚಲಶಾಸ್ತ್ರೀ ಪುಟ ೩೮೪

೯. ಅಲಂಕಾರ ಶಾಸ್ತ್ರ ಬಿ.ಕೆ.ಶಿವರಾಮಯ್ಯ ಪುಟ ೧ (ಪೀಠಿಕೆ)

೧೦. ಶೃಂಗಾರಕವಿಯ ರತ್ನಾಕರಾಧೀಶ್ವರ ಶತಕ

೧೧. ಬಸವಣ್ಣನವರ ವಚನಗಳು (ಸಂ) ಡಾ.ಎಲ್.ಬಸವರಾಜ ಪುಟ ೪೮

೧೨. ಭಾರತೀಯರ ದೃಷ್ಟಿಯಲ್ಲಿ ಮಹಾಕಾವ್ಯ (ಲೇಖನಗಳ ಸಂಗ್ರಹ) ಡಾ. ಕೆ.ಕೃಷ್ಣಮೂರ್ತಿ. ಪುಟ ೧೨೪

೧೩. ಮದನತಿಲಕಂ (ಪದ್ಯ-೫೭) ಸಂ. ಆರಂ.ಎಸ್.ಪಂಚಮುಖಿ, ಪುಟ ೧೪

೧೪. ಶಬ್ದಮಣಿದರ್ಪಣ (೧೦ ಪೀಠಿಕಾಪದ್ಯ) (ಸಂ) ತ.ಶು.ಶಾಮರಾಯ ಹಾಗೂ ಎಚ್.ನಂಜೇಗೌಡ ಪುಟ ೬

೧೫. ಶಾಸ್ತ್ರ ಸಾಹಿತ್ಯ ಪ್ರೊ. ಎಂ.ವಿ.ಸೀತಾರಾಮಯ್ಯ ಪುಟ ೨೭೩

೧೬. ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ, ಸಂಪುಟ ೪, ಭಾಗ-೨ ಪುಟ ೬೯೨

೧೭. ಕರ್ನಾಟಕ ಕವಿಚರಿತೆ, ಸಂಪುಟ-೨ ಆರ್. ನರಸಿಂಹಾಚಾರ್ಯ, ಪುಟ ೧೪

೧೮. ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ ಸಂಪುಟ ೫ ಪುಟ ೨೮೦

೧೯. ಸಕಲ ವೈದ್ಯ ಸಂಹಿತಾಸಾರಾರ್ಣವ, ಸಂಪುಟ-೧ ಸಂ. ಡಿ.ಶ್ರೀನಿವಾಸಚಾರ್ ಹಾಗೂ ಡಿ.ಎಎಲ್.ನರಸಿಂಹಾಚಾರ್
ಪ್ರಸ್ತಾವನೆ ಪುಟ viii

೨೦. ಶಾಸ್ತ್ರ ಸಾಹಿತ್ಯ ಪ್ರೊ.ಎಂ.ವಿ.ಸೀತಾರಾಮಯ್ಯ ಪುಟ ೨೭೪

೨೧. ಸಂಕ್ಷಿಪ್ತ ಕನ್ನಡ ಸಾಹಿತ್ಯ ಚರಿತ್ರೆ ಪ್ರೊ. ಎಂ.ಮರಿಯಪ್ಪ ಭಟ್ ಪುಟ ೧೭೬

೨೨. ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ ಸಂಪುಟ-೨ ಪುಟ ೩೦೩-೩೦೪

೨೩. ಶಾಸನಗಳಲ್ಲಿ ಸಾಂಸ್ಕೃತಿಕ ಅಧ್ಯಯನ ಡಾ. ಎಂ.ಚಿದಾನಂದಮೂರ್ತಿ ಪುಟ ೨೮೦

೨೪. ಭಾರತೀಯ ಸಂಸ್ಕೃತಿ ಎಸ್.ಶ್ರೀಕಂಠಶಾಸ್ತ್ರೀ ಪುಟ ೩೦೬

೨೫. ರಟ್ಟಮತಂ (ಸಂ) ಹೆಚ್ ಶೇಷಾಯ್ಯಾಂಗಾರ್ ಅ.೪ ಪುಟ ೧

೨೬. ಅದೇ ಪುಟ ೭

೨೭. ಕರ್ನಾಟಕ ಕವಿಚರಿತೆ ಸಂಪುಟ-೨ ಆರ್.ನರಸಿಂಹಾಚಾರ್ ಪುಟ ೨೨೧

೨೮. ಮತದನತಿಲಕ ೧-೫೮ (ಸಂ) ಆರ್.ಎಸ್.ಪಂಚಮುಖಿ ಪುಟ ೧೫

೨೯. ಅದೇ ಪುಟ ೫೯

೩೦. ಅದೇ ಪುಟ ೫೫

೩೧. ಜನಮತ್ಯ (ಸಂ) ಜಿ.ಜಿ.ಮಂಜುನಾಥನ್ ಪುಟ xxvii

೩೨. ಸೂಪಶಾಸ್ತ್ರ (ಸಂ) ಎಸ್.ಎಸ್.ಕೃಷ್ಣಜೋಯಿಸ್. ಉಪೋದ್ಘಾತ ಪುಟ ix

೩೩. ಕನ್ನಡಸಾಹಿತ್ಯ ಪರಿಷತ್ತಿನ ನಿಘಂಟು, ಸಂಪುಟ-೮, ಪುಟ ೮೬೫೭

೩೪. ಕಿಟೆಲ್ ನಿಘಂಟು ಪುಟ ೧೫೮೩ ಹಾಗೂ ೧೫೮೪

೩೫. ಸೂಪಶಾಸ್ತ್ರ (ಸಂ) ಎಸ್.ಎನ್.ಕೃಷ್ಣಜೋಯಿಸ್, ಪೀಠಿಕಾ ಪದ್ಯ ೫

ಅಧ್ಯಾಯ ೩

ಅಶ್ವಶಾಸ್ತ್ರ ಕೃತಿಗಳ ಪರಿಚಯಾತ್ಮಕ ಅಧ್ಯಯನ

೩.೧. ಪ್ರವೇಶ

೩.೨. ಅಶ್ವಶಾಸ್ತ್ರ ಸಾಹಿತ್ಯ: ಅರ್ಥ ಸ್ವರೂಪ ಪರಂಪರೆ

೩.೩. ಪ್ರಧಾನ ಕೃತಿಗಳು

೩.೩.೧. ರಾಮಚಂದ್ರ ಕವಿಯ ಅಶ್ವಶಾಸ್ತ್ರ

೩.೩.೨. ಬಾಚರಸನ ಶಾಲಿಹೋತ್ರಮತ

೩.೩.೩. ಅಭಿನವಚಂದ್ರನ ಅಶ್ವಶಾಸ್ತ್ರ

೩.೩.೪. ಪದ್ಮಣ ಪಂಡಿತನ ಹಯಶಾಸ್ತ್ರ

೩.೩.೫. ಅಶ್ವ ಪರೀಕ್ಷೆ ಸಚಿತ್ರ

೩.೩.೬. ಜಯದತ್ತನ ಅಶ್ವವೈದ್ಯಕ

೩.೩.೭. ನಕುಲನ ಅಶ್ವ ಚಿಕಿತ್ಸತಮ್

೩.೩.೮. ಶಾಲಿಹೋತ್ರನ ಹಯಾಯುರ್ವೇದ

೩.೩.೯. ಹಿರಿಯಣ್ಣ ಕವಿಯ ಹಯರತ್ನಶ್ರೇಣಿ

೩.೩.೧೦. ಹೇಮಸೂರಿಯ ಅಶ್ವಶಾಸ್ತ್ರ

೩.೩.೧೧. ಭೋಜನ ಶಾಲಿಹೋತ್ರ

೩.೩.೧೨. ಅಶ್ವಶಾಸ್ತ್ರ (ಅನಾಮಿಕ ಕವಿ)

೩.೩.೧೩. ಅಶ್ವವೈದ್ಯ (ಸಚಿತ್ರ)

೩.೪. ಅನುಷಂಗಿಕ ಕೃತಿಗಳು

೩.೪.೧. ಚಾವುಂಡರಾಯನ ಲೋಕೋಪಕಾರ

೩.೪.೨. ಕೆಳದಿ ಬಸವರಾಜನ ಶಿವತತ್ತ್ವರತ್ನಾಕರ

೩.೪.೩. ಸೋದೆ ಸದಾಶಿವರಾಯನ ಸದಾಶಿವನೀತಿ

೩.೪.೪. ಇಮ್ಮಡಿ ಗುರುಸಿದ್ಧನ ಹಾಲಸ್ಯ ಪುರಾಣ

೩.೪.೫. ಚಂದ್ರರಾಜನ ಮದನತಿಲಕ

೩.೪.೬. ಸರ್ವಜ್ಞ ಸೋಮೇಶ್ವರನ ಮಾನಸೋಲ್ಲಾಸ

೩.೪.೭. ಮುಮ್ಮಡಿ ಕೃಷ್ಣರಾಜ ಒಡೆಯರ ಸೌಗಂಧಿಕಾ ಪರಿಣಯ

೩.೫. ಇತರೆ

೩.೫.೧. ಕಾವ್ಯ ಪುರಾಣಗಳು

೩.೫.೨. ಶಾಸನಗಳು

೩.೫.೩. ದಿನಚರಿಗಳು

ಅಧ್ಯಾಯ ೩

ಅಶ್ವಶಾಸ್ತ್ರ ಕೃತಿಗಳ ಪರಿಚಯಾತ್ಮಕ ಅಧ್ಯಯನ

೩.೧. ಪ್ರವೇಶ

ಅಶ್ವ, ಹಯ, ತೇಜ, ತುರಗ ಎಂಬಿತ್ಯಾದಿ ಹೆಸರಿನಿಂದ ಕರೆಯಲಾಗುತ್ತಿದೆ. ಕುದುರೆ ಮನುಷ್ಯನ ಅತ್ಯಂತ ನಂಬಿಗಸ್ಥ ಮತ್ತು ವಿಶ್ವಾಸಪೂರ್ಣವಾದ ಪ್ರಾಣಿಯಾಗಿದೆ. ಪ್ರಾಚೀನ ಭಾರತೀಯ ಸೈನ್ಯದ ತೃತೀಯ ಅಂಗಶಕ್ತಿಯಾಗಿ, ಸೈನ್ಯದಲ್ಲಿ ಇದು ಸಂಚಾರಿ ಸೌಧ. ಅಶ್ವಬಲ ಪ್ರಧಾನವಾಗಿರುವ ರಾಜ ಯುದ್ಧದಲ್ಲಿ ಸುಲಭ ಜಯವನ್ನು ಪಡೆಯುವನು, ಯಾತ್ರೆ, ಆಕ್ರಮಣ, ಹಿಂದೆಗೆತ, ಸೈನ್ಯ ಭೇದ ಅಶ್ವದಿಂದ ಸಾಧ್ಯ ಎಂದು ನೀತಿ ಸೂತ್ರಗಳಲ್ಲಿದೆ. ಯುದ್ಧಕ್ಕೆ ಬಳಸುವ ಮುನ್ನ ಸಂಪರ್ಕ ಸಾಧನವಾಗಿ ಅಶ್ವಗಳನ್ನು ಬಳಸುತ್ತಿದ್ದರು. ಕ್ರಿ.ಪೂ.೪೦೦೦ದಷ್ಟು ಹಿಂದಿನ ಕುದುರೆಯ ಎಲುಬುಗಳು ಉತ್ತರ ಪರ್ಷಿಯದಲ್ಲಿ ದೊರೆತಿವೆ. ಮನುಷ್ಯನು ಮೊದಲು ಕುದುರೆಯನ್ನು ತನ್ನ ಹಿಡಿತಕ್ಕೆ ತೆಗೆದುಕೊಂಡದ್ದು ಮೆಸಪೊಟೇಮಿಯ ಮತ್ತು ಚೀನಗಳಲ್ಲಿ ಎಂಬ ಅಭಿಪ್ರಾಯವಿದೆ. ಹಾಗಾಗಿ ಇಷ್ಟೊಂದು ಪ್ರಾಚೀನತೆಯನ್ನು ಹೊಂದಿರುವ ಅಶ್ವದ ಕುರಿತು ಅಧ್ಯಯನ ಮಾಡುವುದು ಉತ್ತಮವಾದುದೆಂದು ಭಾವಿಸಿ ಅವುಗಳಿಗೆ ಪೂರಕವಾದ ಶಾಸ್ತ್ರಕೃತಿಗಳ ಪರಿಚಯಾತ್ಮಕ ಅಧ್ಯಯನ ಅವಶ್ಯಕವೆನಿಸುತ್ತದೆ.

೩.೨. ಅಶ್ವಶಾಸ್ತ್ರ ಸಾಹಿತ್ಯ: ಅರ್ಥ-ಸ್ವರೂಪ-ಪರಂಪರೆ

ಚೀನಾದ ಚಕ್ರವರ್ತಿ ಪೋಹೀ ಕ್ರಿ.ಪೂ. ೩೫೬೮ ವರ್ಷಗಳಷ್ಟು ಹಿಂದೆಯೇ ಕುದುರೆಗಳನ್ನು ಆಮದು ಮಾಡಿಕೊಂಡ ವಿಚಾರ ಪುರಾತನ ಚೀನೀ ಕಡತಗಳಲ್ಲಿ ಹೀಗೆ ಉಲ್ಲೇಖಿತವಾಗಿರುವುದು ತಿಳಿದು ಬರುತ್ತದೆ. "ಕ್ರಿ.ಪೂ. ೨೦೦೦ದ ಹೊತ್ತಿಗೆ ಚೀನದಲ್ಲೆಲ್ಲ ಕುದುರೆಗಳು ಪರಿಚಿತವಿದ್ದುವಲ್ಲದೆ ವ್ಯಾಪಕವಾಗಿ ಹರಡಿದ್ದವು. ಹರಪ್ಪ ಮತ್ತು ಮಹೆಂಜೊದಾರೊ ಸಂಸ್ಕತಿಯ ಅವಶೇಷಗಳಲ್ಲೂ ಕುದುರೆಯ ಎಲುಬುಗಳು ದೊರಕಿವೆ. ಲೋಥಾಲ್‌ನಲ್ಲಿ ಮೂರು ಕುದುರೆಯ ಮಣ್ಣಿನ ಗೊಂಬೆಗಳು ಲಭ್ಯವಾಗಿವೆ. ಆದ್ದರಿಂದ ಆರ್ಯ ಪೂರ್ವ ಯುಗದ ಭಾರತೀಯರಿಗೆ ಕುದುರೆಯ ಬಗೆಗೆ ತಿಳಿದಿರುವುದು ಸ್ಪಷ್ಟವಿದೆ"[೧] ಎಂದು ಡಾ.ಶ್ರೀಧರ ಎಚ್.ಜಿ. ಅವರು ಅಭಿಪ್ರಾಯ ಪಡುತ್ತಾರೆ.

ಭಾರತೀಯರಿಗೆ ವೇದ ಕಾಲದಿಂದಲೂ ಕುದುರೆಗಳ ಪರಿಚಯವಿದೆ. ಅಶ್ವಮೇಧದ ಉಲ್ಲೇಖಗಳು ಸಾಕಷ್ಟು ಲಭ್ಯವಿವೆ. ಆದರೆ ಯುದ್ಧದಲ್ಲಿ ಕುದುರೆಗಳನ್ನು ಬಳಸಿದ ವಿಚಾರ ವೇದಗಳಿಂದ ತಿಳಿದು ಬರುವುದಿಲ್ಲ. ರಾಮಾಯಣ ಮಹಾಭಾರತ ಕಾಲಕ್ಕೆ ಯುದ್ಧದಲ್ಲಿ ಕುದುರೆಗಳನ್ನು ಬಳಸಿದ ಸಂಗತಿಗಳಿವೆ. ಮಹಾಭಾರತ ಕಾಲದಲ್ಲಿ ಸೇನಾ ಪ್ರಮಾಣವನ್ನು ಅಕ್ಷೋಹಿಣಿ ಲೆಕ್ಕದಲ್ಲಿ ಹೇಳುತ್ತಿದ್ದರು. "ಆದಿ ಪರ್ವದಲ್ಲಿ ಬರುವಂತೆ ಒಂದು ಅಕ್ಷೋಹಿಣೆಯಲ್ಲಿ ೨೧.,೮೭೦ ರಥ, ೨೧,೮೭೦ ಆನೆ, ೬೫,೬೧೦ ಕುದುರೆ ಮತ್ತು ೧,೦೯,೩೫೦ ಪದಾತಿಗಳಿದ್ದುವು. ಉದ್ಯೋಗ ಪರ್ವದಲ್ಲಿ ಬರುವಂತೆ ಪಾಂಡವರ ಪರ ಏಳು ಅಕ್ಷೋಹಿಣಿ ಸೇನೆ ಎಂದರೆ ೧,೫೩,೦೯೦ ರಥ, ೧,೫೩,೦೯೦ ಆನೆ, ೪,೫೯,೨೭೦ ಕುದುರೆ, ೭,೬೫,೪೫೦ ಪದಾತಿಗಳಿದ್ದವು. ಕೌರವರ ಕಡೆ ೧೧ ಅಕ್ಷೋಹಿಣಿ ಸೈನ್ಯ ಎಂದರೆ ೨,೪೦,೫೭೦ ರಥ, ೨,೪೦,೫೭೦ ಆನೆ, ೭,೨೧,೭೧೦ ಕುದುರೆ ಮತ್ತು ೧೨,೦೨,೮೫೦ ಪದಾತಿಗಳಿದ್ದುವು.

ಭಾರತದ ಮೇಲೆ ಅಲೆಕ್ಸಾಂಡರ ಧಾಳಿ ಮಾಡಿದ ಕಾಲಕ್ಕೆ ಪೂರೂರವನಲ್ಲಿ ೪,೦೦೦ ಕುದುರೆಗಳಿದ್ದುವು. ಮಾಳವ ಮತ್ತು ಕ್ಷುದ್ರಕರಲ್ಲಿ ೩,೦೦೦ ಕುದುರೆಗಳಿದ್ದವು. ಅಂಬಷ್ಟರಲ್ಲಿ ೬,೦೦೦ ಕುದುರೆಗಳಿದ್ದುವು, 'ಶಿಬಿ' ಪ್ರಾಂತವಾಸಿಗಳಲ್ಲಿ ೩,೦೦೦ ಕುದುರೆಗಳಿದ್ದುವು. ಉಗ್ರಸೇನನಲ್ಲಿ ೨೦,೦೦೦ ಕುದುರೆಗಳಿದ್ದುವು. ಅಲೆಕ್ಸಾಂಡರನನ್ನು ಎದುರಿಸುವಲ್ಲಿ ಭಾರತೀಯ ದೊರೆಗಳು ಯುದ್ಧರಂಗಕ್ಕೆ ಕುದುರೆಗಳನ್ನು ತಂದಿದ್ದರು ಎಂಬ ಅಂಶ ಇತಿಹಾಸಕಾರರಿಂದ ತಿಳಿದು ಬಂದಿರುವ ಸಂಗತಿಯಾಗಿದೆ.

ಪ್ರಾಚೀನ ಭಾರತದಲ್ಲಿ ಅಶ್ವ ಪಡೆಯ ಮುಖ್ಯಸ್ಥನಿಗೆ ೮೦೦೦ ಪಣಗಳು, ಅಧ್ಯಕ್ಷ(ಮೇಲ್ವಿಚಾರಕ)ರಿಗೆ ೪೦೦೦ಪಣ, ವೈದ್ಯರಿಗೆ ೨೦೦೦ ಪಣಗಳನ್ನು ವೇತನವಾಗಿ ಕೊಡುತ್ತಿದ್ದರು. ಯುದ್ಧ ರಂಗದಲ್ಲಿ ಹೋರಾಡಲು ಮತ್ತು ಸಾಮಾನು ಸಾಗಾಣಿಕೆಗಾಗಿ ಅಸಂಖ್ಯಾತ ಕುದುರೆ, ಆನೆ ಮತ್ತು ದನಗಳನ್ನು ಬಳಸುತ್ತಿದ್ದರು. ಅವುಗಳ ಆಹಾರ ಬಟ್ಟೆ ಮುಂತಾದ ಖರ್ಚು ವಿಪರೀತವಾಗಿದ್ದು, ರಾಜಾದಾಯದ ಬಹುಭಾಗ ಅದಕ್ಕಾಗಿ ವಿನಿಯೋಗವಾಗುತ್ತಿತ್ತು.

ಸಬಕ್ತಗೀಸನ ಧಾಳಿಯ ಹೊತ್ತಿಗೆ ಭಾರತದಲ್ಲಿ ಸೈನ್ಯದ ಕೊರತೆ ಎದ್ದು ಕಾಣುತ್ತಿತ್ತು. ಭಾರತ ಎಂದೂ ಕುದುರೆ ತಳಿಗಳನ್ನು ಅಭಿವೃದ್ಧಿ ಪಡಿಸುವ ಉತ್ತಮ ಕೇಂದ್ರವಾಗಿರಲಿಲ್ಲ. ಕುದುರೆಗಳ ಸರಬರಾಜಿನ ಕೊರತೆ ಯಾವಾಗಲೂ ಇದ್ದಿತು. ಸಿಂಧು, ಬ್ಲಾಹೀಕ್ ಪ್ರಾಗ್ಜ್ಯೋತಿಷಪುರ ಮತ್ತು ಕಾಂಭೋಜಗಳ ಕುದುರೆಗಳು ಪ್ರಸಿದ್ಧವಾಗಿದ್ದವು. ವ್ಯಾಸ, ಕಾಳಿದಾಸ ಮತ್ತು ಕಲ್ಹಣರು ಆ ದೇಶದ ಕುದುರೆಗಳನ್ನು ಪ್ರಶಂಸಿಸಿದ್ದಾರೆ."[೨]

"ಆನೆಗಳನ್ನು ಬಿಟ್ಟರೆ ನಾಲ್ಕು ಕುದುರೆಗಳ ರಥ ಹೆಚ್ಚಿನದು ಎಂಬ ಮೆಗಾಸ್ತಾನೀಸ್‌ನ ಅಭಿಪ್ರಾಯದಲ್ಲಿ ಈ ಅಂಶ ವ್ಯಕ್ತವಾಗಿದೆ. ವೇದಗಳಲ್ಲಿ ಕುದುರೆ ಹಾಗೂ ರಥಗಳಿಗೆ ಅವುಗಳನ್ನು ಬಳಸಿದ್ದರ ಬಗೆಗೆ ಮಾಹಿತಿಗಳಿವೆ. 'ಓ ದೇವ ಮಾನವಾದಿಗಳೆಲ್ಲರ ವೀರನೇ ನೀನು ಯಾರು ನಿನ್ನ ಕುದುರೆಗಳಲ್ಲಿ, ಲಗಾಮೆಲ್ಲಿ

ನೀನು ಬಲಶಾಲಿಯಾದುದು ಹೇಗೆ' ಎಂದು ಮರುತರನನ್ನು ಕುರಿತು ಬರುವ ಈ ಉಲ್ಲೇಖದಲ್ಲಿ ಕುದುರೆಗಳನ್ನು ಯುದ್ಧದಲ್ಲಿ ಬಳಸುತ್ತಿದ್ದರೆಂಬ ಕಡೆಗೆ ಒತ್ತು ಕೊಡಲಾಗಿದೆ. ಕುದುರೆಯ ಮೇಲೆ ಕುಳಿತು ಯುದ್ಧ ಕುಶಲರಾದ ಯೋಧರು ಪರಸ್ಪರ ಯುದ್ಧ ಮಾಡುತ್ತಿರುವ ಚಿತ್ರ ವೇದದಲ್ಲಿ, ರಣಭೇರಿಯೊಡನೆ ಯುದ್ಧ ಸಂಕೇತವನ್ನು ನೀಡಲು ನಮ್ಮ ವೀರ ಯೋಧರು ಕುದುರೆಯೇರಿ ಬರುವರು. ರಥಿಕ, ಇಂದ್ರ ವಿಜಯಗಳಿಸಿ ಬರುವರು ಎಂಬಲ್ಲಿ ಅಶ್ವ ಮತ್ತು ರಥಿಕರನ್ನು ಸ್ಪಷ್ಟವಾಗಿ ಗುರುತಿಸಿದೆ.

ಸಾಮವೇದದಲ್ಲಿ ಮರುತರು ಅತ್ಯಂತ ಬಲಶಾಲಿ ಯೋಧರು. ಅಶ್ವದ ಮೇಲೆ ಕುಳಿತು ಸ್ವರ್ಗವನ್ನು ಗೆದ್ದವರು ಎಂದಿದೆ. ಧೂಳನ್ನೆಬ್ಬಿಸುತ್ತ ಬರುವ ಅಶ್ವಾರೋಹಿಗಳ ಚಿತ್ರ ಅಥರ್ವವೇದದಲ್ಲಿದೆ. ಕೆಲವೆಡೆ ಸವಾರನ ಹಗಲು ಪ್ರಯಾಣದ ಚಿತ್ರವಿದೆ. ವಾಜಸನೇಯಿ ಸಂಹಿತದಲ್ಲಿ ಅಶ್ವಾರೋಹಿ, ಅಶ್ವಪಾಲಕ ಮತ್ತು ಅಶ್ವವಿದ್ಯೆಯ ಗುರುವಿನ ಉಲ್ಲೇಖವಿದೆ. ಪ್ರಜಾಪತಿಯ ಪಾದದಲ್ಲಿ ಅಶ್ವ ಹುಟ್ಟಿದ್ದನ್ನು ತೈತ್ತರೀಯ ಸಂಹಿತೆ ಹೇಳಿದೆ. ಹೀಗಾಗಿ ಅಶ್ವಗಳ ಬಳಕೆ ಭಾರತೀಯರಿಗೆ ತೀರಾ ಪ್ರಾಚೀನ ಕಾಲದಲ್ಲಿ ತಿಳಿದಿತ್ತೆಂಬುದರಲ್ಲಿ ಸಂಶಯವಿಲ್ಲ.

ಕಾಂಭೋಜದಲ್ಲಿ ಶಿಕ್ಷಣ ಪಡೆದ ಕುದುರೆಗಳಿಂದ ಉತ್ತಮ ಬಲವನ್ನು ರಚಿಸಿದರೆ ದೂರದ ವೈರಿಗಳನ್ನು ಗೆಲ್ಲಬಹುದೆಂದು ಅಭಿಲಕ್ಷಿತಾರ್ಥ ಚಿಂತಾಮಣಿಯಲ್ಲಿದೆ. ಸಿಂಧು, ಯವನ, ಕಾಂಭೋಜದಲ್ಲಿ ಹುಟ್ಟಿದ ಶಿಕ್ಷಿತ ಕುದುರೆಗಳಿಂದ ದೂರದ ವೈರಿಗಳನ್ನು ಸೋಲಿಸಬಹುದು. ಸೈಂದವರು ಶ್ರೇಷ್ಠ ತುರಗಗಳನ್ನು ಕಾಣಿಕೆಯಾಗಿ ತಂದಿರುವರೆಂದು ಯಶಸ್ತಿಲಕ ಚಂಪುವಿನಲ್ಲಿದೆ. ಗುಜರಾತ್ ದೇಶದ ರಾಜನಲ್ಲಿ ಒಳ್ಳೆಯ ಸೈನ್ಯವಿದೆ. ಈ ಅಶ್ವದಳವನ್ನು ಮೀರಿಸುವ ಸೈನ್ಯ ಬೇರೊಬ್ಬರಲ್ಲಿಲ್ಲವೆಂದು ಪ್ರವಾಸಿ ಸುಲೇಮಾನ್ ಬರೆದಿರುವನು. ಪಳಗಿದ ಯುದ್ಧ ಯೋಗ್ಯವಾದ ಕುದುರೆಗಳಲ್ಲಿ ಕಾಂಭೋಜ, ಸಿಂಧು, ಅರಟ್ಟ, ವನಾಯು ದೇಶದಲ್ಲಿ ಹುಟ್ಟಿದವು ಉತ್ತಮ. ಬ್ಲಾಹೀಕ, ಪಾಪೇಯಕ, ಸೌವೀರಕ, ತೈತಲದೇಶದ ಅಶ್ವಗಳು ಮಧ್ಯಮ. ಸೌರಾಷ್ಟ್ರಾದಿ ದೇಶದವು ಅಧಮವೆಂದು ಕೌಟಿಲ್ಯನ ಅಭಿಪ್ರಾಯ."[೩]

ಮಹಾಭಾರತದಲ್ಲಿ-

"ಮಹಾಲಲಾಟ ಜಘುನಸ್ಕನ್ದವಕ್ಷೋಜವಾ ಹಯಾಃ
ದೀರ್ಘ ಗ್ರಿವಾಯತಾ ಹ್ರಸ್ವಮುಷ್ಕಾಃ ಕಾಮ್ಬೋಜಕಾಃ ಸ್ಮತಾಃ"[೪] (ಮಹಾಭಾ ೭-೨೩)

ಎಂದು ಕಾಂಭೋಜದ ಅಶ್ವಗಳ ಲಕ್ಷಣವನ್ನು ಹೇಳಿದೆ. "ಯಾವ ಕುದುರೆಗೆ ಹಣೆ, ನಿತಂಬ ಪ್ರದೇಶ, ಹೆಗಲು, ಎದೆ ವಿಶಾಲವಾಗಿದ್ದು ಹೆಚ್ಚಿನ ವೇಗವುಳ್ಳ ಉದ್ದ ಹಾಗೂ ಅಗಲ ಕತ್ತಿನಿಂದ ಕೂಡಿರುವ ಕುದುರೆಗಳನ್ನು ಕಾಂಭೋಜದವು ಎಂದು ಹೇಳಿದೆ."[೫] ಉತ್ತರಾಪಥದ ಕುದುರೆಗಳು ಶ್ರೇಷ್ಠವೆನ್ನುತ್ತ ಅಲ್ಲಿದ್ದ ೫೦೦ ಕುದುರೆಯೊಂದಿಗೆ ಬಂದ ಅಶ್ವವ್ಯಾಪಾರಿಯನ್ನು ವಿನಯಪಿಟಕ ಚಿತ್ರಿಸಿದೆ. ವಿಶೇಷವಾಗಿ ಅಶ್ವಗಳು

ಹುಟ್ಟಿದ ದೇಶದ ಹೆಸರಿನಿಂದಲೇ ಅವುಗಳನ್ನು ಕರೆಯುತ್ತಿದ್ದರು. ಕುದುರೆಯ ಆಯ್ಕೆಯ ಸಂದರ್ಭದಲ್ಲಿ ಅದರ ದೇಶ, ಪರಿಸರ, ಆಹಾರ ಮತ್ತು ಅವುಗಳಿಗೆ ದೊರೆತ ಶಿಕ್ಷಣ ಕ್ರಮವನ್ನು ಗಮನಿಸಿ ಆಯ್ಕೆಮಾಡಿಕೊಳ್ಳುತ್ತಿದ್ದರು ಎಂಬ ಅಂಶ ವಿಧಿತವಾಗುತ್ತದೆ.

ಸಮ ಭೂಭಾಗದಲ್ಲಿ ರಥ, ಕುದುರೆಗಳಿಂದ ಹೋರಾಡಬೇಕೆಂದು ಮನುಸ್ಮತಿಯಲ್ಲಿದೆ. ಅಲ್ಪವೃಕ್ಷವಿರುವ, ಕಲ್ಲುಗಳಿಂದ ಛಿದ್ರಗೊಂಡು ಹಾರಬಹುದಾದ ಕಂದಕವುಳ್ಳ, ಮರುಳು ಕಡಿಮೆ ಇರುವ ಕೆಸರಿನ ಭೂಮಿ ಅಶ್ವವ್ಯೂಹಕ್ಕೆ ಯೋಗ್ಯವಾದುದು.

"ಐತರೇಯ ಬ್ರಾಹ್ಮಣದಲ್ಲಿ ಕುದುರೆಯನ್ನು ಪಕ್ಕದಿಂದ ಏರುತ್ತಿದ್ದರೆಂದು ಹೇಳಿದೆ. ವಿದುರ, ಪಾಂಡು ಅಶ್ವಶಾಸ್ತ್ರದಲ್ಲಿ ತಜ್ಞರು. ರಾಮ ಸಮರ್ಥ ಕುದುರೆ ಸವಾರನಾಗಿದ್ದು, ಅದನ್ನು ಪಳಗಿಸುವ ಕಲೆಯನ್ನು ಬಲ್ಲವನಾಗಿದ್ದನು. ದ್ರೋಣರು ಅರ್ಜುನಿನಗೆ ಅಶ್ವದ ಮೇಲೆ ಕುಳಿತು ಯುದ್ಧ ಮಾಡುವ ಶಿಕ್ಷಣ ನೀಡಿದ್ದರು. ದ್ರೋಣರು ಕುರುರಾಜ ಕುಮಾರರಿಗೆ ಏರ್ಪಡಿಸಿದ ಶಸ್ತ್ರ ವಿದ್ಯಾಪ್ರದರ್ಶನ ಸ್ಪರ್ಧೆಯಲ್ಲಿ ಕುದುರೆ ಸವಾರಿಯೂ ಸೇರಿತ್ತು. ಇಲ್ಲಿ ಬಿಲ್ಗಾರಿಕೆ ಮತ್ತು ಕುದುರೆ ಸವಾರರು ಏಕಕಾಲಕ್ಕೆ ಪ್ರದರ್ಶನಗೊಂಡಿದ್ದಾರೆ. ಯುದ್ಧ ಕಲೆಯಲ್ಲಿ ಚಾಣಾಕ್ಷರಾದ ಅಶ್ವಾರೋಹಿಗಳು ರಥಿಕರ ಶಿರಚ್ಛೇದವನ್ನು ಮಾಡಿದ ಉದಾಹರಣೆಗಳಿವೆ."[೬] ಕುದುರೆಗಳು ಕೆನೆಯುತ್ತ ಮುಂದಿನ ಎರಡು ಕಾಲನ್ನು ಮೇಲೆತ್ತಿ ಹಾರುವುದಕ್ಕೆ ಸಂಗ್ರಾಹ ಅಥವಾ ಬೃಂಹದುದ್ರಂಗ ಎಂದು ಹೆಸರು. ಕುದುರೆಯ ಮೇಲಕ್ಕೇರಿದೊಡನೆ ಕುಣಿಯುವ ಇಲ್ಲವೇ ಎಲ್ಲೆ ತಪ್ಪಿಹೋಗದ ಶಿಕ್ಷಣವನ್ನು ಅವುಗಳಿಗೆ ನೀಡಲಾಗುತ್ತಿತ್ತು.

"ಹರಿ ತುರಂಗಂಸಪ್ತಿ ....ವಾಹಮುರುರಥ್ಯ ಮನೆ ಕುದುರೆಯಕ್ಕು (ಮಂಗರಾ, ೮೧-೧೨) ಎಂದು ಉಲ್ಲೇಖಿಸಿದರೆ, ಸೊರಬದ ಒಂದು ಶಾಸನ "ಬಿಲ್ವಿಲ್ಲಳ್ಕುದರೆ ಕುದುರೆಯೊಳ್ಕಿಟ್ಟ ಅತಿತುಮುಲ ಕಾಳಗ ಪೆಟ್ಟಿ (ಎಕ VIII, ಸೊರಬ, ೧೦-೫, ಸು.೮೦೦) ಎಂದಿದೆ. ಕವಿರಾಜ ಮಾರ್ಗದಲ್ಲಿ ಶ್ರೀ ವಿಜಯ "ಕುದುರೆ ತಗುಳ್ದುವಾದೆಸೆಯ ಬಲ್ಲವರಂ ಸುಟಿದಾನೆ ಮೆಟ್ಟಿದವು." (ಕವಿರಾ ೧-೧೨೦) ಎಂದು ವರ್ಣಿಸಿದ್ದಾನೆ. ವಡ್ಡಾರಾಧನೆಯಲ್ಲಿ "ಕುದುರೆ ನಾಯೊಟ್ಟಯುವ ಉಡುವುಂ" (ವಡ್ಡಾರಾಧನೆ, ೯೭-೫) ಪಂಪಭಾರತದಲ್ಲಿ "ಆದಿತ್ಯನ ಕುದುರೆಗಳುಜೆಯ ಕುದುರೆಗಳುಮಂ ಇಂದ್ರ ಪುಸ್ತಕ್ಕೆ ತೆರಳ್ಚಿ (ಪಂಪಭಾರತ ೭-೩೩.ವ) ಧರ್ಮಾಮೃತ ಕಾವ್ಯದಲ್ಲಿ "ಕೋಣನಂ ಕಂಡ ಕುದುರೆಯಂತೆ ನಾಯಂ ಕಂಡ ಬೆಕ್ಕಿನಂತೆ" (ಧರ್ಮಾಮೃತ ೫-೧೨೫) ಕುಮಾರ ವ್ಯಾಸಭಾತರದಲ್ಲಿ "ಕರ್ಣನ ಕುದುರೆಗಳು ನುಗ್ಗಿದವು"(ಕುವ್ಯಾಕ. ೮-೨೭). "ಸಾವಿರ ಕುದುರೆ ಸರದಾರ ಮನೆ ಹೆಂಡತಿ ಕಾಸ್ದಾರ" ಎಂಬ ಗಾದೆಯೊಂದು ಪ್ರಚಲಿತದಲ್ಲಿರುವುದನ್ನು ಕಾಣಬಹುದು. ಹಾಗೆಯೇ ಶ್ರೀರಾಮಾಯಣದಲ್ಲಿ ಕುದುರೆಯ ನೆಳೆದು ಕೋವಿ ಗುಂಡಿಡು (ಶ್ರೀರಾಮಾ ೭೮೬-೨೧೨) ಎನ್ನಲಾಗಿದೆ.

ವಸ್ತುಕೋಶದಲ್ಲಿ "ತುರಗಂ ಯಯು ಸಪ್ತಿಹಯಂ.. ... ತುರಂಗ ಮೆನೆ ಕುದಿರೆ" (ವಸ್ತುಕೋ-೮೫-೨೨) ಹಾಲಾಯುಧದಲ್ಲಿ "ಅರ್ವಾಗಂಧರ್ವ ಅಶ್ವ ..... ಹಯ. ವಾಹಃಈ ೧೪ ಕುದಿರೆ" ಎಂದಿದೆ. (ಹಲಾಯ, ೭೨-೨೮೨) ಕುಮಾರವ್ಯಾಸ ಭಾರತದಲ್ಲಿ ಕುದುರೆ ಕಾಜಿರು ಮೇಲುವಾಯಲಿ (ಕುವ್ಯಾದ್ರೋ-೧೫-೭೦) ಎಂದು ಕರೆಯಲಾಗಿದೆ.

ಅನಂತನಾಥ ಪುರಾಣದಲ್ಲಿ "ಭೂಮಾನ ಮುಮಂ ಪುಗುವ ಪೊಱಮಡುವ ನೀರ ಕಂಡಿಯ ಕುದುರೆ ಗಂಡಿಯ ತೆಱಪುಗಳುಮಂ ವಸುಷೇಣಂ ಬಳಸಿ ನೋಡುತ್ತುಂ (ಅನಂ.ಪು ೧೧-೮೨ ವ) ಕುಮಾರ ರಾಮನ ಸಾಂಗತ್ಯದಲ್ಲಿ -ಗುಗ್ಗುರಿ ಗಲ್ಲುಂಡುಗಲ್ಲು ಮೊರಡಿ ಬೆಟ್ಟ ನುಗ್ಗುಗಲ್ಲುದುವುರೆಗಲ್ಲುಗಳ ಮೊಗ್ಗರ ದೊಳ್ಕಾಲಾಡ ಬಾರದು ಬಲದುರ್ಗವದಿಳೆಗೆ (ಕುರಾಸಾಂ-೨೦-೯೬) ಜೈಮಿನಿ ಭಾರತದಲ್ಲಿ- "ಆ ಕುದುರೆಗಳ್ಗನಂ ತೋಱು ತೋಱುನುತ ನಡೆತಂದು" (ಜೈಮಿಭಾ. ೪-೨೧) ಕುದುರೆಗಾಪಿನ ಭಟರ ಕಣ್ಗೆ ಬಲ್ಗತ್ತಲೆಗಳಂ ದೂಳ್ಗಳಂ ಕವಿಸಿ" (ಜೈಮಿಭಾ, ೪-೧೨) "ಕುದುರೆಗಾಹಿನ ಚತುರ್ಬಲಂ ಕಂಡು ಬೊಬ್ಬಿಱಿದು" (ಜೈಮಿಭಾ ೪-೧೩) "ಕಡು ಭರದಿ ಹತ್ತಿ ಕೋಂಟೆಯ ಮೇಲೆ ಕುದುರೆ ಕಾಲಿಡುವುದಂ ಕಂಡೆಕ್ಕಟ್ಟಗಳೊಳಗಣಿಂ ಒಂದು ಕೆಡೆವಂತೆ ಹುಯ್ದು ಬೀಳ್ವಾಗಳಾ ಕಾಲ್ಗಳಂ ತೆನೆಗಳೊಳ್ಕಟ್ಟ ಬಿಗಿಯೆ ಬಿಡದೆ ತಲೆಕೆಳಗಾಗಿ ಜೋಲುತ್ತಮಿರ್ದು" (ಸಮ್ಯಕೌ ೮-೩೩) ಎಂದು ವರ್ಣಿಸಲಾಗಿದೆ. ಧರ್ಮಾಮೃತ ಕೃತಿಯಲ್ಲಿ "ಕುದುರೆಗಾಲಿಕ್ಕುತ್ತುಂ ಲಯತೆಯಂತೆ ಬಳ್ಕುತ್ತುಂ....... ಪರವಶಮಾದಂತೆ ಜಡನಾಗುತ್ತುಮಿರಲಾಗದೆಂಬೀ ಮೂವತ್ತೆರಡು ದೋಷಂಗಳಿಂಪಿಂಗಿ" ಎನ್ನಲಾಗಿದೆ. ಜೈಮಿನಿಭಾರತದಲ್ಲಿ- ಕುದುರೆಗಾವಲ ಸುಭಟರನಿತರೊಳೊದಗಿ ಬಂದು ಕದಳೀದ್ರುಮಕ್ಕೆ ಕಟ್ಟಿದ ತುರಗಮಂ ಕಂಡು" (ಜೈಮಿಭಾ ೨೦-೯) "ಕುದುರೆಗಾವಲೊಳಿರ್ದ ವೀರತಾಮ್ರ ಧ್ವಜವ ಮಂತ್ರಿ ನಕುಲಧ್ವಜಂ"(ಜೈಮಿಭಾ ೨೫-೯).

"ಕುದುರೆ ನಗೆ ನಕ್ಕನಸುರಂ ತಿರಸ್ಕರಿಸುವೋಲ್ (ಶ್ರೀರಾಮಾ, ೪೯೦-೨೨) ಜೈಮಿನಿಭಾರತ "ಕತ್ತೆ ಮೊಗ ಕುದುರೆ ಮೊಗದವರ ದೇಶಂಗಳಂ ಕಂಡನಾ ಕಲಿಪಾರ್ಥನು" (ಜೈಮಿಭಾ ೧೬-೨೦) ವಿಷ್ಣು ಪುರಾಣ "ಸೂರ್ಯ ಪತ್ನಿಯಾದ ಸಂಜ್ಞಾದೇವಿ ಕುದುರೆಯ ರೂಪದಿಂದಿದ್ದಾಗ ಸೂರ್ಯನಿಂದ ಹುಟ್ಟಿದ ಅವಳಿ ಮಕ್ಕಳು"(ವಿಷ್ಣು ಪು.೩-೨-೨-೭).

"ತನ್ನ ಸಮಸ್ತ ಸಾಧನಂ ಬೆರಸು ಪೋಪಿಮಟ್ಟೊಡ್ಡಣವನೊಡ್ಡೆ ಬಿಲ್ ಬಲ್ಲೊಳ ಕುದುರೆ ಕುದುರೆಯೊಳ ರಥಂ ರಥದೊಳಣಿಯಣಿಯೋಳ್ ಘಟೆಯಾನೆ ಘಟೆಯಾನೆಯೊಳ್ ತಳ್ತುತಾಗಿ" ಕಾದುತ್ತಿದ್ದವು ಎಂದು ವಡ್ಡಾರಾಧನೆಯಲ್ಲಿದೆ(ವಡ್ಡಾರಾ.ಪು.೧೪೭-೧೪೮)

"ಆನೆ ಆನೆಯೊಂದಿಗೆ, ಕುದುರೆ ಕುದುರೆಯೊಂದಿಗೆ, ಕಾಲಾಳು ಕಾಲಾಳಿನೊಂದಿಗೆ, ಹೋರಾಡಿದರೆಂದು ಪೊನ್ನನ ಕಾವ್ಯದಲ್ಲಿದೆ. (ಶಾಂತಿ ಪು. ೭-೮೨) ಕರಿ ಕರಿಯೊಳು, ಕಾಲಾಳು ಕಾಲಾಳೊಳು, ತುರಗ ತುರಗದೊಳು ಬಂದು ಉರವಣೆಯಿಂತಾಗಿದವೆಂದು ರಾಮನಾಥ ಚರಿತದಲ್ಲಿದೆ (ನಂಜುಡ ೧೨-೫೨-೧೩-

೨) "ಪಟ್ಟ ಸಹಣದ ಹಿರಿಯ ಸಹಣದ ಕುದುರೆಗಳು ಎಲ್ಲಿ ಸಹಣಿಗಳನ್ನು ಕರೆ ಕರೆ" ಎಂದು ಧುರಧರರಾದ ಆಶ್ವಾರೋಹಿಗಳು ಕುದುರೆಗಳಿಗಾಗಿ ಕೂಗುತ್ತಿದ್ದರು(ಕಾವ್ಯಾಭೀ ೪-೫೦).

"ಆಶ್ವಾರೋಹಿಗಳು ವಿಭಾಗ, ನೆಲ, ಜಲ, ಕುದುರೆಗಳ ಹೊಂದಾಣಿಕೆ, ಮೋಸ, ಮಾತ್ಸರ್ಯ ಔದಾಸೀನ್ಯ, ವಾಹನದ ಆರೋಹಣ, ದಿಕ್ಕು, ದೃಷ್ಟಿ, ಮುಷ್ಟಿ, ಮುನ್ನುಗ್ಗುವಿಕೆ, ಹೆದರಿಸುವಿಕೆ, ಹಿಂದಿರುಗುವಿಕೆ ಪುನಃ ಕಾಣಿಸಿಕೊಳ್ಳುವ ಕೌಶಲಗಳೆಲ್ಲ ಸಮನ್ವಯವಾಗಿರುವಂತೆ ಯುದ್ಧ ಮಾಡಿದರು(ಪಂಪಭಾ ೧೦-೭೭). "ಜೀನು ಹಾಕಿದ ಕುದುರೆ ಸೈನ್ಯ ಭಯವನ್ನುಂಟು ಮಾಡುವಂತೆ ಯುದ್ಧಕ್ಕೆ ಪ್ರವೇಶಿಸುತ್ತಿತ್ತು(ಪಂಪಭಾ, ೧೦-೭೬) ಕುದುರೆ ತಗಳ್ದುವಾದೆಸೆಯ ಬಿಲ್ಲವರಂ"(ಕವಿರಾ, ೧-೧೨೦).

"ಹರಿಹರ ಹೇಳಿದ 'ಕುದುರೆ ಕಾಳಗ' ಅಶ್ವ ಸೈನ್ಯದ ನಡುವೆ ನಡೆದ ಯುದ್ಧವನ್ನು ಸೂಚಿಸುತ್ತದೆ. ಶಾಸನದಲ್ಲಿ ಕುದುರೆಯ ಕಾಳಗದ ಬಗೆಗೆ ಮಾಹಿತಿಯಿದೆ. ಮಹಾಸಾಮಾಂತಾಧಿಪತಿ ಹಿರಿಯ ಬೊಮ್ಮನಾಯಕ ಪೆನುಗೊಂಡೆಯ ಮೇಲು ಮಾವಿನವರ ಕುದುರೆದಳದ ವಿರುದ್ಧ ಹೋರಾಡಿ ಮಡಿವನು. "ತುರಗದವಿಂಗಳ್ಕವಿತರೆ ತುರಂಗಮಾರೂಢನಾಗಿ ತನ್ನಯ ಹಯಮಂ ಪರಿಯಿಸಿ ಕೊಂಗುಳಿವರ್ಮಂ ಕರಾಸಿಂಯಿಂದಿಜೆದು ತವಿಸಿದಂ ಹಯಬಲಮಂ" (ಕಾವ್ಯಾವ ೨೮೫) ಎಂಬಲ್ಲಿ ಆಶ್ವಸೇನೆಯ ವಿರುದ್ಧ ಹೋರಾಡಿದ ಕೊಂಗುಳಿವರ್ಮನ ಚಿತ್ರವಿದೆ. ಆಶ್ವಾರೋಹಿಗಳೆಲ್ಲರೂ ಗರ್ಜಿಸುತ್ತಾ ಒಟ್ಟಾಗಿ ಒಂದೇ ದಿಕ್ಕಿಗೆ ಗುರಿಯಿಟ್ಟು ಹಿರಿದ ಕತ್ತಿಗಳಿಂದಲೂ, ಮಿರುಗುವ ಪರಿಘುಗಳಿಂದಲೂ ಸಜ್ಜಾಗಿ ಮೈ ಮೇಲೆ ನುಗ್ಗಿ ಬರುವ ವಿವರ ಪೊನ್ನನಲ್ಲಿದೆ(ಶಾಂತಿ ಪು. ೪-೧೫). ಹೀಗೆ ನುಗ್ಗಿ ಬರುವ ಹಗೆಗಳ ಕುದುರೆ ಸೈನ್ಯದೊಡನೆ ಕಾದಿ ಮಾಚಗೋಮರೆಂಬ ಅಣ್ಣ ತಮ್ಮಂದಿರು ಮರಣ ಹೊಂದಿದ ವಿಷಯ ಶಾಸನದಲ್ಲಿದೆ. ಹೊಯ್ಸಳ ಮೂರನೇ ಬಲ್ಲಾಳ ಮತ್ತು ಆತನ ತಮ್ಮ ರಾಮನಾಥರ ನಡುವೆ ಏರ್ಪಟ್ಟ ಕುದುರೆ ಕಾಳಗವೊಂದರಲ್ಲಿ ಲಾಳ ಮಾಚೆಯ ನಾಯಕ ಕಾದು ಮೃತನಾದನು.

ಕವಿರಾಜಮಾರ್ಗದಲ್ಲಿ "ಕುದುರೆ ತಗುಳ್ದುವಾದೆಸೆಯ ಬಿಲ್ಲವರಂ" (ಕವಿರಾ ೧-೧೨೦) ಎಂದಿದೆ. ಕ್ರಿ.ಶ.೮೦೦ ಶಾಸನವೊಂದರಲ್ಲಿ ಆಶ್ವಾರೋಹಿಗಳು ಪರಸ್ಪರ ಕಾದಾಡಿದರೆಂದಿದೆ. "ಮಧುವರಸಂ ನಾಲ್ವತ್ತು ಕುದುರೆಯ ಬೆರಸಿ ಬಂದು ಹೊಲಮೇರೆಯಲು ಕಾಳಗದಿಟಿದಡೆ ತನ್ನಾಟ್ಟಂಗೆ ಹರಿಗೆಯಂನಿಕ್ಕಿ ಬಂದು ಕುದುರೆಯಂ ರಾಹುತನಂ ಭೀಮರಸನು ಎದುರಿಸಿ ಮರಣ ಹೊಂದುವನು. ನೆರೆ ನೂಱು ಕುದುರೆ ಸಾವಿರದ ಮಿನೂಮಿೞ್ಪೆರಸು ಮುತ್ತಿ ತುರುವುಂ ಸೆಱಿಯಂ ಪೆಱಗಿಕ್ಕಿ ಮೃತನಾದ ಸೋವಯ್ಯನಾಡು ಸೆಟ್ಟಿಯ ಸ್ಮರಣೆಯಿದೆ. ಅಂದರೆ ಅಶ್ವಾರೋಹಿಗಳ ನಡುವೆ ಪರಸ್ಪರ ನಡೆದ ಕದನವನ್ನು 'ಕುದುರೆ ಕಾಳಗ' ಎಂದು ಕರೆದಿದೆ.

ಸಾಮಾನ್ಯ ಯೋಧರಂತೆಯೇ ಅಧಿಕಾರದಲ್ಲಿರುವ ಪ್ರತಿಷ್ಠಿತ ವ್ಯಕ್ತಿಗಳೂ ಕುದುರೆ ಕಾಳಗದಲ್ಲಿ ಭಾಗವಹಿಸಿದ ಉದಾಹರಣೆಗಳಿವೆ. "ಮಹಾ ಸಾಮಂತಾಧಿಪತಿ ಹಿರಿಯಬೊಮ್ಮೆಯ ನಾಯಕ ಪೆನುಗೊಂಡೆಯ ಮೇಲು

ಮಾವಿನವರ ಕುದುರೆದಳದ ವಿರುದ್ಧ ಹೋರಾಡಿ ಮಡಿಯುವನು. ಶತ್ರುವಿನ ಕುದುರೆಯ ಕೊರಳಿಗೆ ಜೋತು ಬಿದ್ದು, ತನ್ನ ಕಾಲುಗಳನ್ನು ಕುದುರೆಯ ಎದೆಗೆ ಹೆಣೆದು ಹೋರಾಡುವ ಕೆಚ್ಚು, ಪರಾಕ್ರಮ, ಧೈರ್ಯ ಸೈನಿಕರದು. ಈ ರೀತಿ ಕುದುರೆಯೊಂದಿಗೆ ಹೆಣೆದು ಕಾದು ಮಡಿದ ವಿಷಯವೊಂದು ಕ್ರಿ.ಶ. ೧೦೨೨ರ ಶಾಸನದಲ್ಲಿದೆ.

ರಣರಂಗದಲ್ಲಿ ಅಸಾಮಾನ್ಯ ಯುದ್ಧ ಕೌಶಲವನ್ನು ಪ್ರದರ್ಶಿಸುವ ರಾವುತರನ್ನು ಉಳಿದವರು ಮುಕ್ತ ಕಂಠದಿಂದ ಹೊಗಳುತ್ತಿದ್ದರು ಎಂಬ ವಿಚಾರವನ್ನು ಕೆಳಗಿನ ಸಾಲುಗಳು ಸ್ಪಷ್ಟಪಡಿಸುತ್ತವೆ.

"ರಾವು ತೋ ಮಝು ಭಾಪು ರಾವುತು
ದೇವು ರಾವುತು ಭಲರೆ ರಾವುತು
ರಾವುತೋ ನಿಶ್ಶಂಕರಾವುತು ರಾವುತೆಂದರೆನುತ
ರಾವು ರಾವುತು ಪೂತು ರಾವುತು
ಭಾಪು ರಾವುತು ರಾವುತೋ ಎಂ
ದೋವಿ ಹೊಯಿದಾಡಿದರು ರಣದಲಿಲಾಳ ರಾವುತರು"[೭] (೪,೭೧, ಕು.ವ್ಯಾ.ಭ)

ಎನ್ನುತ್ತ ಕುದುರೆ ಸವಾರರ ಬೆನ್ನು ತಟ್ಟುತ್ತಿದ್ದ ಸೊಗಸಾದ ಚಿತ್ರವೊಂದನ್ನು ನಾರಣಪ್ಪ ನೀಡುವನು. (ಕುವ್ಯಾಭ. ೪-೭೧) ಇದರಿಂದ ರಾವುತರಲ್ಲಿ ಹೋರಾಟದ ಛಲ, ರಣೋತ್ಸಾಹ ಮತ್ತಷ್ಟು ಉಕ್ಕೇರುತ್ತಿತ್ತು. ಹೀಗೆ ಕುದುರೆ ಕಾಳಗದಲ್ಲಿ ಪ್ರಾಣದ ಹಂಗು ತೊರೆದು ಹೋರಾಡಿ ಮಡಿದ ವ್ಯಕ್ತಿಗಳನ್ನು ಸಮಾಜ ಗೌರವದಿಂದ ಕಾಣುತ್ತಿತ್ತು. ಅಶ್ವಬಲದೊಂದಿಗೆ ನಡೆದ ಯುದ್ಧದಲ್ಲಿ ಮಡಿದ ಲಾಳ ಮಾಚೆಯ ನಾಯಕನಿಗೆ ಆತನ ತಮ್ಮ ಹತ್ತಯನು ವೀರಗಲ್ಲನ್ನು ಸ್ಥಾಪಿಸುವನು.

"ಕ್ರಿ.ಶ. ೮೦೦ರ ಸೊರಬರ ಶಾಸನದಲ್ಲಿ ಬಿಲ್ಲು ಬಿಲ್ಲಿನವರಲ್ಲಿ ಕುದುರೆ ಕುದುರೆಯಾಳಲ್ಲಿ ಹೋರಾಡುತ್ತಿದ್ದರೆನ್ನುತ್ತ, 'ತುಮುಲಯುದ್ಧ'ವನ್ನು ಪ್ರಸ್ತಾಪಿಸಿದೆ. ತುಮುಲಯುದ್ಧವೆಂದರೆ ನೀತಿ ನಿಯಮಗಳನ್ನು ಉಲ್ಲಂಘಿಸಿದ ಯುದ್ಧವೆಂದು ಅರ್ಥ."[೮] ಹೋರಾಟ ಮಾಡುವ ಸಂದರ್ಭದಲ್ಲಿ ಕುದುರೆಯನ್ನು ಆವೇಶಭರಿತವನ್ನಾಗಿ ಮಾಡಿ ಯುದ್ಧದ ಉಲ್ಲಂಘನೆಯನ್ನು ಮಾಡುವುದು ತಪ್ಪಾಗಿ ಕಂಡು ಬಂದರೂ ಸಹಿತ, ಅಲ್ಲಿ ಗೆಲವು ಒಂದು ಪ್ರತಿಷ್ಠೆ ಎಂಬ ಕಾರಣದಿಂದ ಒಂದು ಪ್ರಾಣಿಯು ಸಹ ಅವರ ಜೊತೆಗೆ ಸಹಕರಿಸುವುದು ಹೆಚ್ಚು ಮಹತ್ವವೆನಿಸುತ್ತದೆ.

ತೀ.ನಂ ಶ್ರೀಕಂಠಯ್ಯನವರು ಕುದುರೆಯ ಪ್ರಾಚೀನತೆ ಮತ್ತು ಅದರ ಶಬ್ದ ನಿಷ್ಪತ್ತಿ ಕುರಿತು ತಮ್ಮ ಸಮಾಲೋಕನ ಕೃತಿಯ 'ಕುದುರೆ' ಒಂದು ವಿಶೇಷಣೆ ಎಂಬ ಲೇಖನದಲ್ಲಿ ಚರ್ಚಿಸುತ್ತಾ, "ವಾಲ್ಮೀಕಿ ಮುನಿಯ ಆಶ್ರಮದ ವಟುಗಳು (ಅಲ್ಲಿ ಹುಟ್ಟಿ) ಬೆಳಯುತ್ತಿದ್ದ ಕುಶಲವರು ಕೂಡ 'ಕುದುರೆ' ಎಂಬ

ಪ್ರಾಣಿಯನ್ನು ನೋಡಿಯೇ ಇರಲಿಲ್ಲವಂತೆ. ಅದರ ಹೆಸರನ್ನು ಮಾತ್ರ ಜನರ ಬಾಯಿಯಿಂದ ಕೇಳಿದ್ದರು. ಪಶುಗಳ ಪಟ್ಟಿ, ಚತುರಂಗ ಬಲದ ಪಟ್ಟಿ ಇವುಗಳಲ್ಲಿ ಪಠಿಸಿದ್ದರು. ಶ್ರೀರಾಮನ ಯಾಗದ ಕುದುರೆ ಆಶ್ರಮಕ್ಕೆ ಬಂದಾಗ ಈ ಜಾತಿಯ ಪ್ರಾಣಿಯನ್ನು ವಟುಗಳು ಮೊಟ್ಟಮೊದಲನೆಯ ಸಲ ಕಂಡು, ಆ ಸಡಗರದಲ್ಲಿ ಲವನ ಬಳಿಗೆ ಬಂದು

ಪಶ್ಚಾತ್ ಪ್ರುಚ್ಛಂ ವಹತಿ ವಿಪುಲಂ ತಚ್ಚ ಧೂನೋತ್ಯಜಸ್ರಂ
ದೀರ್ಘಗ್ರೀವಃ ಸ ಭವತಿ ಖುರಾಸ್ತಸ್ಯ ಚತ್ವಾರ ಏವ
ಶಷ್ಪಾಣ್ಯತ್ತಿ ಪ್ರಕಿರತಿ ಶಕೃತ್ಪಿಂಡ ಕಾನಾಮ್ರಮಾತ್ರಾ
ಕಿಂ ವ್ಯಾಖ್ಯಾತೈರ್ವ್ರಜತಿ ಸ ಪುನರ್ದೂರ ಮೇಹ್ಯೇಹಿ ಯಾಮಃ

ಅದಕ್ಕೆ ಹಿಂದುಗಡೆ ತುಂಬುಬಾಲ ಅದನ್ನು ಸುಮ್ಮನೆ ಅಲ್ಲಾಡಿಸುತ್ತಿರುತ್ತದೆ. ಅದರ ಕತ್ತು ನೀಳ ಗೊರಸುಗಳು ನಾಲ್ಕೇ ನಾಲ್ಕು ಗರಿಕೆಯನ್ನು ಮೇಯುತ್ತದೆ. ಮಾವಿನ ಕಾಯಿ ಗಾತ್ರದ ಲದ್ದಿಯನ್ನು ಹಾಕುತ್ತದೆ. ವಿವರಿಸುವುದೇನು? ಅದು ದೂರ ಹೋಗಿ ಬಿಡುತ್ತದೆ. ಬಾ.ಬಾ ನಾವು ಹೋಗುತ್ತೇವೆ ಎಂದು ಅದನ್ನು ನೋಡಲು ಅವನನ್ನು ಎಳೆದುಕೊಂಡು ಹೋದಂತೆ ಭವಭೂತಿ 'ಉತ್ತರ ರಾಮಚರಿತ'ದಲ್ಲಿ (೪.೪೬) ಚಿತ್ರಿಸಿದ್ದಾನೆ. ಹೀಗೆ ಆಶ್ರಮದ ವಟುಗಳಿಗೆ ಮಾತ್ರವಲ್ಲ ಮಾನವ ಜಾತಿಗೇ ಹಿಂದೊಮ್ಮೆ ಅಷ್ಟೇನೂ ದೂರವಲ್ಲದ ಕಾಲದಲ್ಲಿ ಕುದುರೆ ಬೆರಗಿನ ವಸ್ತುವಾಗಿದ್ದಿತು. ಮನುಷ್ಯನು ಕುದುರೆಯನ್ನು ಪಳಗಿಸಿದ್ದು ಇತ್ತೀಚೆಗೆ. ಹಸು, ಕುರಿ, ಆಡು, ನಾಯಿ, ಹಂದಿ ಮೊದಲಾದ ಪ್ರಾಣಿಗಳನ್ನು ಪಳಗಿಸಿ ಎಷ್ಟೋ ಕಾಲವಾದ ಮೇಲೆ ಕುದುರೆಯ ಸವಾರಿಗೆ ಮನುಷ್ಯನು ಮೊಟ್ಟ ಮೊದಲು ಪ್ರಾರಂಭಿಸಿದ್ದು, ಬಹುಶಃ ಮಧ್ಯ ಏಷ್ಯದಲ್ಲಿ, ಬೆಬಿಲೋನಿಯಾದಲ್ಲಿ ಅದು ಕಾಣಿಸಿಕೊಂಡಿದ್ದು, ಕ್ರಿ.ಪೂ. ೨೦೦೦ರ ಸುಮಾರಿನಲ್ಲೆಂದೂ ತಿಳಿದು ಬರುತ್ತದೆ. ಅಂತೂ ಈಜಿಪ್ಟ್ ಮೊದಲಾದ ದೇಶಗಳಲ್ಲಿ ನಾಗರೀಕತೆ ಪ್ರಬಲಿಸಿ ಎಷ್ಟೋ ಕಾಲವಾಗಿದ್ದಾಗಲೂ ಈ ಪ್ರಾಣಿ ಮಾತ್ರ ಕಡಿವಾಣಕ್ಕೆ ಸಿಕ್ಕದೆ, ಜೀನಿನ ಭಾರವನ್ನರಿಯದೆ, ಕಾಡು ಮೇಡುಗಳಲ್ಲೇ ವಿಹರಿಸುತ್ತ ಆಕಸ್ಮಿಕವಾಗಿ ಜನರ ಕಣ್ಣಿಗೆ ಕಾಣಿಸಿಕೊಂಡು ಮಿಂಚಿನಂತೆ ಮಾಯವಾಗುತ್ತಿದ್ದಿರಬೇಕು.

ಇದರ ಹೆಸರಂತೂ ತುಂಬ ಕುತೂಹಲಕರವಾಗಿದೆ. ಭಾಷೆಗಳ ಸಂಪರ್ಕದ ತೊಡಕನ್ನು ಎತ್ತಿ ತೋರಿಸುವ ಸಾಧನವಾಗಿದೆ. ಇಂಡೋ ಯೂರೋಪಿಯನ್ ಮೂಲಭಾಷೆಯಲ್ಲಿ ಇದಕ್ಕಿದ್ದ ಹೆಸರು ಸಂಸ್ಕೃತದಲ್ಲಿ 'ಅಶ್ವ' ಎಂಬ ರೂಪದಲ್ಲಿ ನಿಂತಿತು. ಆದರೆ ಒಂದೆರಡು 'ಕ್ಷುಲ್ಲಕ' ಭಾಷೆಗಳನ್ನು ಬಿಟ್ಟರೆ ಭರತಖಂಡದಲ್ಲಿ ವ್ಯವಹಾರದಲ್ಲಿರುವ ಯಾವ ಆರ್ಯ ಭಾಷೆಗೂ ಈ ಅಶ್ವ ಎಂಬ ಶಬ್ದವು ಕ್ರಮಾಗತವಾಗಿ ಉಳಿಯಲಿಲ್ಲ. ಹಿಂದಿ, ಬಂಗಾಳಿ, ಮರಾಠಿ, ಮೊದಲಾದ ಭಾಷೆಗಳಲ್ಲೆಲ್ಲಾ ಬಳಕೆಯಲ್ಲಿರುವ ಶಬ್ದ 'ಘೋಡಾ' ಇತ್ಯಾದಿ. ಅಶ್ವ ಎಂದಲ್ಲಿ ಈ ಘೋಡಾ ಎನ್ನುವುದಕ್ಕೆ ಮೂಲ ಸಂಸ್ಕೃತದ 'ಘೋಟ' ಎಂಬ ಶಬ್ದ. ಇದಕ್ಕೆ ಜ್ಞಾತಿ ಶಬ್ದ (Cognate word) ಯಾವುದೂ ಇಂಡೋ ಯೂರೋಪಿಯನ್ ವರ್ಗದ ಬೇರೆ ಭಾಷೆಗಳಲ್ಲಿ ದೊರೆಯುವುದಿಲ್ಲ. ಇದು ಹೊರ ಭಾಷೆಯ ಶಬ್ದವೆಂಬುದು ಖಂಡಿತ.

ಹೀಗೆ ಅಶ್ವವನ್ನು ಮೂಲೆಗೊತ್ತಿ ಅದರ ಸ್ಥಾನವನ್ನು ಆಕ್ರಮಿಸಿದ ಘೋಟ ಎಂಬುದರ ಬಾಂಧವ್ಯ ಏನು? ಈಗ ನಮ್ಮ ಕನ್ನಡದ ಕುದುರೆ, ತಮಿಳು ತೆಲಗುಗಳ ಕುತಿ (ದಿ) ರೈ, ಗುರ್ರ-ಮು ಎಂಬುದನ್ನು ನೋಡಬಹುದು. ಇವೆಲ್ಲಕ್ಕೂ ಮೂಲ ಒಂದೇ. ಅದು ಬಹುಶಃ ಘುತ್ರ ಎಂದು ಇದ್ದಿರಬೇಕು. ಘೋಟ, ಘೋಡಾ ಮೊದಲಾದವೂ ಮತ್ತೊಂದು ಕಡೆ ಶಬ್ಧದ ಆದಿಯ ಮಹಾಪ್ರಾಣವು ಅಳಿದು 'ತ್ರ' ಎಂಬ ಕಡೆ ನಡುವೆ ಸ್ವರ ಸೇರಿ ಕುದುರೆ ಮೊದಲಾದವೂ ಉದಿಸಿರಬೇಕೆಂದು ವಿದ್ವಾಂಸರು ಊಹಿಸುತ್ತಾರೆ.

ಮೂಲ ದ್ರಾವಿಡದಲ್ಲಿ 'ಘುತ್ರ' ಎಂದೇ ಇದ್ದಿರಬಹುದು. ಅಲ್ಲಿಂದಲೇ ಅದು ಆರ್ಯಭಾಷೆಗಳಿಗೆ ಹರಿದಿರಬಹುದು. ಈ ಹೆಸರಿನ ವ್ಯಾಪ್ತಿ ಭರತ ಖಂಡಕ್ಕೆ ಮುಗಿಯುವುದಿಲ್ಲ, ಪ್ರಾಚೀನ ಈಜಿಪ್ಷಿಯರ್ ಭಾಷೆಯಲ್ಲಿ ಕುದುರೆಗೆ 'ಹತರ್' ಎಂದು ಹೆಸರು. ಆಧುನಿಕ ಗ್ರೀಕಿನಲ್ಲಿ ಕತ್ತೆಯನ್ನು 'ಗದ್ಯೆರೋಸ್' (gadairos) ಎಂದು ಕರೆಯುತ್ತಾರೆ. ತುರ್ಕೀ ಭಾಷೆಯಲ್ಲಿ 'ಕತರ್' (Katyr) ಎಂದರೆ ಹೇಸರಗತ್ತೆ. ಈ ಶಬ್ದಗಳೆಲ್ಲಾ ನಮ್ಮ "ಕುದುರೆ"ಯ ಕುಲಕ್ಕೆ ಸೇರಿದವೆಂದು ತೋರುತ್ತದೆ. ಅಂತೂ ಘುತ್ರ ಎಂಬುದು ಒಂದಲ್ಲ ಒಂದು ರೂಪದಲ್ಲಿ ಮೆಡಿಟರೇನಿಯನ್ ಸಮುದ್ರದ ಪೂರ್ವ ಪ್ರದೇಶ (The Near East)ದಲ್ಲೆಲ್ಲಾ ನೆಲಸಿದೆ. ಅದು ಏಷ್ಯಾ ಮೈನರ್ ಅಥವಾ ಮೆಸಪೊಟೇಮಿಯದಲ್ಲಿ ಮೊದಲು ತಲೆಯೆತ್ತಿರಬಹುದು. ಮೂಲ ದ್ರಾವಿಡರ ಜನ್ಮಭೂಮಿ ಮೆಡಿಟರೇನಿಯನ್ ಪ್ರಾಂತವೆಂಬ ವಾದವನ್ನು ಜ್ಞಾಪಿಸಿಕೊಂಡರೆ ಈ ಶಬ್ದವು ಮೂಲದ್ರಾವಿಡವೇ ಆಗಿರಬಹುದೆಂಬ ಊಹೆಗೆ ಪುಷ್ಟಿ ದೊರೆಯುತ್ತದೆ.

ಸಂಸ್ಕೃತದಲ್ಲಿ ಸಾದ, ಸಾದಿ ಅಶ್ವಸಾದಿ (ಅಶ್ವಾರೋಹಕ) ಎಂಬ ಶಬ್ದಗಳಿವೆ. ಶಾತವಾಹನ ಅಥವಾ ಶಾಲಿವಾಹನ ಎಂಬ ಹೆಸರಂತೂ ಪ್ರಸಿದ್ಧವಾಗಿದೆ. ಸಾದ-ಶಾತ-ಶಾಲಿ ಎಂಬುದು ಆದಿಯಲ್ಲಿ ಕುದುರೆ ಎಂಬಷ್ಟೇ ಅರ್ಥವನ್ನು ಕೊಡುತ್ತಿದ್ದಂತೆ ತೋರುತ್ತದೆ. ಇದೂ ಕೂಡ ಇಂಡೋ ಯೂರೋಪಿಯರ್ ಶಬ್ದವಲ್ಲ. ಭರತಖಂಡದಲ್ಲಿ ದ್ರಾವಿಡರು ಬರುವುದಕ್ಕಿಂತಲೂ ಮುಂಚೆ ಇದ್ದ ಪೂರ್ವ ನಿವಾಸಿಗಳ (ಈಗಿನ ಕೋಲರು, ಸಂತಾಲರು, ಮೊದಲಾದವರು ಇವರ ಸಂತತಿಯವರು) ಭಾಷೆಯಿಂದ ಇದು ಬಂದದ್ದು. ಕುದುರೆಗೆ ಸಂತಾಲಿ ಭಾಷೆಯಲ್ಲಿರುವ 'ಸದೂಮ್' ಮುಂದಾರಿ ಭಾಷೆಯ 'ಸಾದೋಮ್' ಎಂಬ ಹೆಸರುಗಳನ್ನು ಇಲ್ಲಿ ಹೋಲಿಸಿ ನೋಡಬಹುದು.

'ಶಾಲಿಹೋತ್ರ' ಎಂಬ ಹೆಸರು ಅಶ್ವಾಯುರ್ವೇದವನ್ನು ಬರೆದ ಋಷಿ ಮುನಿಯಿಂದ ಪ್ರಸಿದ್ಧಿಯನ್ನು ಪಡೆದು ಕೊಂಡಿದೆ. ಈಗಲೂ ಹಿಂದೂದೇಶದ ಸೈನ್ಯದ ಇಲಾಖೆಯಲ್ಲಿ ಅಶ್ವವೈದ್ಯನನ್ನು 'ಸೋಲುತ್ರಿ' (solutri) ಎಂದು ಕರೆಯುತ್ತಾರೆ. ಶಾಲಿಹೋತ್ರ ಎಂಬ ಈ ಪೂಜ್ಯನಾಮವನ್ನು ಒಡೆದು ನೋಡಿದರೆ ನಮಗೆ ಕಾಣುವುದೇನು? ಅದರ ಮೊದಲನೆಯ ಭಾಗ ಕೋಲ್ (ಅಥವಾ ಮುಂಡ) ವರ್ಗದ ಶಬ್ದ. ಎರಡನೆಯದು ಬಹುಶಃ ದ್ರಾವಿಡ ಘುತ್ರ>ಘೋತ್ರ ಎಂಬುದರ ರೂಪಾಂತರ. ಎರಡರ ಅರ್ಥವೂ ಒಂದೇ; ಶಾಲಿ

ಹೋತ್ರ. ಈ ಎರಡು ಶಬ್ದಗಳು ಬೇರೆ ಬೇರೆ ದಿಕ್ಕುಗಳಿಂದ ಬಂದು ಸಂಸ್ಕೃತ ಸಮಾಸವಾಗಿ ಸೇರಿ ಒಬ್ಬ ಋಷಿಯ ಹೆಸರಾಗಿ ಪರಿಣಮಿಸಿದೆ.

ಇಂಥ 'ಭಾಷಾಂತರ ದ್ವಂದ್ವ'ಗಳು ಸಂಸ್ಕೃತದಲ್ಲಿ ಇನ್ನೂ ಉಂಟು. ಕುತೂಹಲಿಗಳು ಡಾ.ಎಸ್.ಕೆ. ಚಟರ್ಜಿಯವರ Polyglottism in Indo-Aryan Cproceedings and Transactions of the Seventh oriental conference. Baroda pp-117-189) ಎಂಬ ಲೇಖನವನ್ನು ನೋಡಬಹುದು ಎಂದು ತೀ.ನಂ ಶ್ರೀಕಂಠಯ್ಯನವರು ಸಲಹೆಯನ್ನು ಕೊಡುತ್ತಾರೆ."[೯] ಇದು ಅಶ್ವಶಾಸ್ತ್ರದ ಕುರಿತು ನೀಡುವ ಉಪಯುಕ್ತ ಮಾಹಿತಿಯಾಗಿದೆ.

ಚೀನಾದೇಶದ ಪ್ರವಾಸಿ ಮೆಗಾಸ್ತನೀಸ್‌ನ ಪ್ರಕಾರ "ಚಂದ್ರಗುಪ್ತನ ಕಾಲದಲ್ಲಿ ಮೌರ್ಯ ಸಾಮ್ರಾಜ್ಯದಲ್ಲಿ ೬,೦೦,೦೦೦ ಪದಾತಿ, ೩೦,೦೦೦ ಅಶ್ವಾರೋಹಿ ೮ ರಿಂದ ೯ ಸಾವಿರದಷ್ಟು ಆನೆಗಳಿದ್ದವು. ಹರ್ಷನ ಸೈನ್ಯದಲ್ಲಿ ೫೦,೦೦೦ ಪದಾತಿ, ೨೦,೦೦೦ ಕುದುರೆ, ೫೦೦೦ ಆನೆಗಳಿದ್ದವು'[೧೦] ಎಂದು ವಿವರವಾದ ಮಾಹಿತಿಯನ್ನು ನೀಡಿದ್ದಾನೆ.

ಕನ್ನಡದಲ್ಲಿ ಬಂದ ವ್ಯವಹಾರ ಗಣಿತದ ಪ್ರಕಾರ "ಅಕ್ಷೋಹಿಣಿಯ ಹತ್ತನೇ ಒಂದು ಭಾಗಕ್ಕೆ 'ಅನೀಕಿನಿ' ಎಂದು ಹೇಳಿದೆ. ೨,೧೮೭ ಆನೆ, ೨,೧೮೭ ರಥ, ೬೫೬೧ ಕುದುರೆ ೧೦,೯೩೫ ಕಾಲಾಳುಯಿದು ಒಂದು ಅನೀಕಿನಿಯೆಂಬ ಬಲವಕ್ಕುಂ (ವ್ಯವಹಾ ಅನು ೧-೧೦) ಎಂದು ಗುರುತಿಸಿದೆ. ಬನ್ನಂಜೆ ಗೋವಿಂದಾಚಾರ್ಯರು ತಮ್ಮ ಒಂದು ಭಾಷಣದಲ್ಲಿ '೬೫,೬೧೦ ಕುದುರೆ, ೨೧,೮೭೦ ರಥ, ೨೧,೮೭೦ ಆನೆ, ೧,೦೯,೩೧೪ ಕಾಲಾಳುಗಳ ಸಮೂಹಕ್ಕೆ ಒಂದು ಅಕ್ಷೋಹಿಣಿ ಎಂದು ಹೇಳಿದ್ದಾರೆ.

ವಿಜಯನಗರ ಕಾಲದಲ್ಲಿ ಸೈನ್ಯದ ಪ್ರತಿಯೊಂದು ಘಟಕದಲ್ಲಿ ೧ ಆನೆ, ೨೦ ಕುದುರೆ, ೬೦ ಮಂದಿ ಬಿಲ್ಲಾಳುಗಳು, ೬೦ ಮಂದಿ ಖಡ್ಗಧಾರಿಗಳು ಮತ್ತು ೬೦ ಮಂದಿ ಈಟಿಯನ್ನು ಹಿಡಿದ ಯೋಧರಿದ್ದರು. ಇಂತಹ ಘಟಕಗಳು ವಿಜಯನಗರದ ಸೈನ್ಯದಲ್ಲಿ ಒಟ್ಟು ೩,೫೦೦ ಇದ್ದವೆಂದು ತಿಳಿದು ಬರುತ್ತದೆ. ಕೃಷ್ಣದೇವರಾಯನು ರಾಯಚೂರಿಗೆ ಮುತ್ತಿಗೆ ಹಾಕಿದಾಗ ಆತನ ಸೈನ್ಯದಲ್ಲಿ ೧೨೦ ಘಟಂ ಆನೆಗಳು, ೬೦,೦೦೦ ಕುದುರೆಗಳು, ೫೦,೦೦೦ ಕಾಲಾಳುಗಳು ಇದ್ದರೆಂದು ರಾಯವಾಚಕಮ್ ಕೃತಿಯಲ್ಲಿದೆ.

ಪೋರ್ಚುಗೀಸ್ ಪ್ರವಾಸಿ ನ್ಯೂನಿಜ್‌ನ ಪ್ರಕಾರ ಇದೇ ರಾಯಚೂರು ಯುದ್ಧದಲ್ಲಿ ವಿಜಯನಗರ ಸೈನ್ಯವು ೫೫೧ ಆನೆ, ೩೨,೦೦೦ ಕುದುರೆ, ೭,೦೩,೦೦೦ ಕಾಲಾಳುಗಳು ಇದ್ದವು ಎಂದು ಅಭಿಪ್ರಾಯ ಪಟ್ಟಿದ್ದಾನೆ. ಫೆರಿಸ್ತಾನ್ ಪ್ರಕಾರ ಕ್ರಿ.ಶ.೧೪೪೩ರಲ್ಲಿ ವಿಜಯನಗರ ಸೈನ್ಯದಲ್ಲಿ ೬೨,೦೦೦ ಬಿಲ್ಲಾಳುಗಳು ೮೦,೦೦೦ ಕುದುರೆಯಾಳುಗಳು ಮತ್ತು ೨,೦೦,೦೦೦ ಪದಾತಿ ಸೈನ್ಯವಿತ್ತು ಎಂದು ಮಾಹಿತಿಯನ್ನು ನೀಡುತ್ತಾನೆ.

ಹಾಗೆಯೇ ಕುದುರೆಯನ್ನು ಕನ್ನಡದಲ್ಲಿ ಅಶ್ವ, ತುರಗ, ಹಯ, ಎಂದು ಕರೆಯುವಂತೆ ಘುತ್ರ ಎಂದು ತಮಿಳಿನಲ್ಲಿ, ಕುದಿರೈ ಮಲೆಯಾಳಂನಲ್ಲಿ, ಕುದಿರ, ಕೊಡಗಿನಲ್ಲಿ, ಕುದೀರೆ, ತುಳುವಿನಲ್ಲಿ ಕುದುರೆ, ತೆಲುಗಿನಲ್ಲಿ ಕುದಿರ, ಕುದರ, ಗುಜರಾತಿನಲ್ಲಿ ಕುದಿರೆ, ಕೋಲಾಮಿಯಲ್ಲಿ ಗುರು, ನಾಯ್ಕಿ ಘುರ್ರ, ಪರ್ಜಿಯಲ್ಲಿ ಗುರ್ರೋಲ್, ಗುರ್ರೋಮಿ ಎಂದು ಕರೆಯಿಸಿಕೊಂಡಿದೆ.

ಇನ್ನೂ ಚದುರಂಗದ ಆಟದಲ್ಲಿ ಕುದುರೆ ಆಕಾರದ ಒಂದು ಕಾಯಿಯನ್ನು ಬಳಸುವುದುಂಟು. ಹಾಗೆಯೇ ಲೋಹದ ಕುದುರೆ, ದೇವರ ವಿಗ್ರಹಗಳನ್ನು ಹೊರುವ ಸಂದರ್ಭದಲ್ಲಿ ಮರದ ಅಥವಾ ಲೋಹದ ಕುದುರೆಯನ್ನು ಮಾಡಿಸುವ ಉದಾಹರಣೆಗಳು ನಮ್ಮಲ್ಲಿ ಸಿಗುತ್ತವೆ.

ಕುಪ್ಪಳಿಸುವ ಮತ್ತು ಕೀಚುವ, ಹಸಿರು ಅಥವಾ ಕಂದು ಬಣ್ಣದ ಒಂದು ಜಾತಿಯ ಮಿಡತೆ 'ಶಿವನ ಕುದುರೆ' ಎಂದು ಕರೆಯುವುದು ವಾಡಿಕೆ. ಇನ್ನೂ ಮಕ್ಕಳು ಆಡುವ ಒಂದು ಬಗೆಯ ಆಟ, ಮರದ ಕುದುರೆಯ ಮೇಲೆ ಕುಳಿತು ಅದನ್ನು ಹಿಂದಕ್ಕೂ, ಮುಂದಕ್ಕೂ ಬಾಗುವಂತೆ ಆಡಿಸುವ ಒಂದು ಆಟ 'ಕುದುರೆಯಾಡುವ' ಆಟವಾಗಿದೆ.

ಕುದುರೆಯ ಸುಂಕ, ಕುದುರೆಯ ಮೇಲೆ ಹಾಕುವ ಸುಂಕ, ತೆರಿಗೆ, ಅಲ್ಲಿಯ ಕುದುರೆಯ ಸುಂಕವಂ .. ಬಿಟ್ಟರು (ಕಣ೨,೧೧, ೨೫ ೧೯೬೨) ಕುದುರೆಯ ಸುಂಕಂ ಕಿಱುಕುಳ ಸುಂಕದಾಯಮೆಲ್ಲವಂ (ಕೊಲ್ಹಾಶಾ ೧೨,೧೯:೧೧೬೭) ಕುದುರೆಯ ಸೇಸೆ ಕುದುರೆಯ ಸುಂಕ, "ಕುದುರೆಯ ಸೇಸ ಗ೫ ರ್ಪ ಹಾ೩. ಕುಮಾರಗಾಣಿಕೆ ಪ ೨ ಹಾ೨ ವಿಜಯ ವೀರವಣ (ಎಕ V ಹಾಸನ. ೮೪-೬೫ ೧೨೩೦) ಇಂತಹ ಉದಾಹರಣೆಗಳು ಕುದುರೆಯ ಬಗ್ಗೆ ಇರುವ ಸಾಮಾನ್ಯ ದಿನ ನಿತ್ಯದ ಉಪಯುಕ್ತ ಉದಾಹರಣೆಗಳಾಗಿವೆ.

ಇನ್ನೂ ಕುದುರೆಯ ಜವಿ, ಕುದುರೆಜಮೆ, ಕುದುರೆಜವೆ, ಕುದುರೆಯ ಬಾಲದ ಕೂದಲು ಎನ್ನುವಂತೆ 'ಆಕೆಯ ಕೂದಲು ಕುದುರೆಯ ಜವಿಯಾಗಿದೆ' ಎಂಬ ರೂಢಿಯಿಂದ ಬಂದ ಸಹಜ ವಾಕ್ಯಗಳಾಗಿವೆ.

ಒಟ್ಟಾರೆಯಾಗಿ ಕನ್ನಡ ಸಾಹಿತ್ಯದಲ್ಲಿ ಕುದುರೆಯ ಕಲ್ಪನೆ ಸಿಂಧೂ ನಾಗರೀಕತೆಯಿಂದ ಹಿಡಿದು ಕನ್ನಡ ಕಾವ್ಯಗಳ ಎಲ್ಲಾ ಪ್ರಕಾರಗಳಲ್ಲಿ ನಮ್ಮ ಕವಿಗಳು, ಶಾಸ್ತ್ರಕಾರರು ಪ್ರಾಸಂಗಿಕವಾಗಿ ಮಹತ್ವದ ತುಣುಕುಗಳನ್ನು ಅಲ್ಲಲ್ಲಿ ಚೆಲ್ಲಿದ್ದಾರೆ. ಅವುಗಳ ಒಟ್ಟು ಸಂಗ್ರಹವನ್ನು ಮಾಡಿದರೆ "ಕನ್ನಡ ಸಾಹಿತ್ಯದಲ್ಲಿ ಕುದುರೆಯ ಉಲ್ಲೇಖಗಳು" ಎಂಬ ವಿಷಯದ ಮೇಲೆ ಪಿಎಚ್.ಡಿ ಮಾಡುವಷ್ಟು ವಿಷಯ ಸಿಗುತ್ತದೆ. ಸಿಂಹಾವಲೋಕನ ಕ್ರಮದಿಂದ ಒಟ್ಟು ಕುದುರೆಯ ಅರ್ಥ, ಸ್ವರೂಪ, ಪರಂಪರೆ ಕುರಿತು ಪ್ರಮುಖವಾದ ಕಾವ್ಯಗಳು, ಪುರಾಣಗಳು, ಶಾಸನಗಳು, ಸಾಮಾಜಿಕ ನಂಬಿಕೆಗಳ ಹಿನ್ನಲೆಯಲ್ಲಿ ಕ್ರೋಢಿಕರಿಸಿ ಕೊಡುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

೩.೩. ಪ್ರಧಾನ ಕೃತಿಗಳು

೩.೩.೧. ರಾಮಚಂದ್ರ ಕವಿಯ ಅಶ್ವಶಾಸ್ತ್ರ

೧೬೨೫ರಲ್ಲಿ ರಾಮಚಂದ್ರನು ಅಶ್ವಶಾಸ್ತ್ರವನ್ನು ಬರೆದಿದ್ದಾನೆ. ಈ ಕೃತಿಯು ಕೆ. ೧೮೬೫, ಕೆ.ಬಿ.೨೨೭ ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿ ಭಂಡಾರದಲ್ಲಿದೆ. ಅಪ್ರಕಟಿತವಾಗಿರುವ ಈ ಕೃತಿಯು ಕಾಗದ ಪ್ರತಿಯನ್ನು ಹೊಂದಿದ್ದು ಜೀರ್ಣವಾಗಿದೆ. ಕೆಲವು ಹಾಳೆಗಳು ಹರಿದು ಹೋಗಿವೆ. ಈ ಕೃತಿಯು ೧೮ ಅಧ್ಯಾಯಗಳನ್ನೊಳಗೊಂಡಿದ್ದು ಗದ್ಯರೂಪದಲ್ಲಿದೆ. ಕವಿ ಅಶ್ವಾಸಾಂತ್ಯ ಗದ್ಯದಲ್ಲಿ "ಇದು ಸಮಸ್ತ ಜಗದ್ಧಿತಮಪ್ಪ ಬಿರುದುವಂತೆಂಬರಗಂಡ ಕಾಠಾರಿಯಸಾಳ್ವ ವೈರಿಗಜಭೇರುಂಡ ಚಾಮುಂಡೀವರಪ್ರಸಾದಕನಾದ ಮೈಸೂರು ನರಸರಾಜೇಂದ್ರ ನಂದನ ಚಾಮರಾಜ ಭೂವರ ಪ್ರೋತ್ಸಾಹಿತವಾದ ರಾಮಚಂದ್ರ ಕವಿ ವಿರಚಿತಮಪ್ಪ ಅಶ್ವಶಾಸ್ತ್ರ"[೧೧] ಎಂದು ದೊರೆಯುತ್ತದೆ.

ಈ ಮೇಲಿನ ಸಾಲುಗಳಿಂದ ತಿಳಿದುಕೊಳ್ಳುವುದೇನೆಂದರೇ ಮೈಸೂರು ಅರಸರ ವಂಶಸ್ಥನಾದ ನರಸ ರಾಜೇಂದ್ರನ ಮಗನಾದ ಚಾಮರಾಜನ ಆಸ್ಥಾನದ ಕವಿಯಾಗಿ ಈ ಕೃತಿಯನ್ನು ಬರೆದಿದ್ದೇನೆ ಎಂದು ಹೇಳಿರುವನು.

ಈ ಕೃತಿಯು ೧೮ ಅಧ್ಯಾಯಗಳಲ್ಲಿ ಈ ರೀತಿಯಾಗಿ ಹರವು ಪಡೆದುಕೊಂಡಿದೆ. "ಮೊದಲು ಪರೀಕ್ಷಾಧ್ಯಾಯ, ವರ್ಣಾಧ್ಯಾಯ, ಕುದುರೆಯ ಶಕುನ, ಪುಂಡ್ರ ಪುಷ್ಪ ಕಾಂತಿಗತಿ ಗಂಧ ಪರೀಕ್ಷಾಧ್ಯಾಯ, ಆವರ್ತಲಕ್ಷಣಾಧ್ಯಾಯ, ಕರಣಾಧ್ಯಾಯ, ವಯೋಲಕ್ಷಣ, ಅಶುಭ-ಶುಭಲಕ್ಷಣ, ಆಯುಷ್ಯಾಧ್ಯಾಯ, ದೇಹಲಕ್ಷಣನಿರ್ಣಯ, ನಿಶ್ಚಿತಾಯುಷಾಧ್ಯಾಯ, ಛಾಯಾಲಕ್ಷಣ, ಅಂಗಗಳಪ್ರದೇಶಗಳಿಂದ ಹೆಸರು, ಲಕ್ಷಣಾಅಧ್ಯಾಯ, ಆಗಂತುಲಕ್ಷಣನಿಶ್ಚಯಾಧ್ಯಾಯ. ವ್ರಣಚಿಕಿತ್ಸಧ್ಯಾಯ, ಪ್ರಣವಚಿಕಿತ್ಸೆ, ಪಾದತಳಕೊರ್ಚಲಿಂಗ, ಚಕ್ಷುರೋಗಾದಿ ಭೇಷಜಾ ಅಧ್ಯಾಯ, ವಿಷರೋಗ ಗ್ರಹಪೀಡಾ, ಚಕ್ಷುರೋಗಾದಿ, ಭೇಷ ಜಾಧ್ಯಯಂಗಳೆಂದು ಈ ಹದಿನೆಂಟು ಅಧ್ಯಾಯಂಗಳ ಅರ್ಥವನ್ನು ಬಾಲಕರರುವಂತೆ ಸೇರುವೆಯಾಗಿ ಕನ್ನಡಿಸಿ ಹೇಳಿಹೆನು ಎಂದು ಸ್ಪಷ್ಟಪಡಿಸುತ್ತಾನೆ.

ರಾಮಚಂದ್ರನು ತನ್ನ ಅಶ್ವಶಾಸ್ತ್ರದಲ್ಲಿ ರೇವಂತ, ಸಿಂಹದತ್ತ ಮತ್ತು ಶಾಲಿಹೋತ್ರರು ಅಶ್ವಶಾಸ್ತ್ರಜ್ಞರೆಂದು ತಿಳಿಸಿದ್ದಾನೆ. ಶಾಲಿಹೋತ್ರವನ್ನು ಅನುಸರಿಸಿ ತಾನು ಕೃತಿರಚನೆ ಮಾಡಿರುವುದಾಗಿ ಹೇಳಿಕೊಂಡಿದ್ದಾನೆ. ಅಭಿನವಚಂದ್ರನ ಅಶ್ವಶಾಸ್ತ್ರ ಮತ್ತು ರಾಮಚಂದ್ರನ ಅಶ್ವಶಾಸ್ತ್ರಗಳಿಗೆ ತುಂಬಾ ಹೋಲಿಕೆಯಿದೆ. ಅಂದರೆ ಅಭಿನವಚಂದ್ರನ ಕೃತಿ ಶಾಲಿಹೋತ್ರವನ್ನು ಹೆಚ್ಚು ಹೋಲುತ್ತದೆನ್ನಬಹುದು. ಹಾಗಲ್ಲದಿದ್ದ ಪಕ್ಷದಲ್ಲಿ ಇವರೆಡಕ್ಕೂ ಸಮಾನ ಆಕರ ಶಾಲಿಹೋತ್ರವಾಗಬೇಕಾಗುತ್ತದೆ.

ಉದಾಹರಣೆಗೆ ಅಭಿನವಚಂದ್ರನ ೧೫-೧ರಿಂದ ೫ ಪದ್ಯಗಳು ಮತ್ತು ಆ ಭಾಗಕ್ಕೆ ಸಂವಾದಿಯಾದ ರಾಮಚಂದ್ರನ ಕೃತಿಯನ್ನು ಹೋಲಿಸಬಹುದಾಗಿದೆ ಎಂದು ಜಿ.ಜಿ.ಮಂಜುನಾಥನ್ ಅವರು ಅಭಿಪ್ರಾಯ ಪಡುತ್ತಾರೆ.

ಅಭಿನವಚಂದ್ರ-

ಕಿರುಗಲ್ಲೊಳ್ ಕೆಸರೊಳ್ ಮೋಳೆ
ಕೊರಡುಗಳೊಳ್ ಮುಳ್ಳೊಳಿಡುಕುರೆಡೆಗಳೊಳಂ ಪಾ
ಯ್ದುರದೆ ಕೊಳಗುಗಳ್ ಸಲೆ ಕು
ತ್ತಿರುದಳ್ಕುತ್ತಡಿಯ ನೀಡುವೊಡದು ತಳರೋಗಂ|| (೧೫-೧)

ರಾಮಚಂದ್ರ-

ಹರುಳುಗಲ್ಲುಗಳಲ್ಲಿ ಕೆಸರಲ್ಲಿ ದಶಿ ಮುಳ್ಳುಗಳಲ್ಲಿ ಬಿರಿಸಾದ
ತವರಿಗಳಲ್ಲಿ ಕಿರುಗಾಳಿಗಳಲ್ಲಿ ಕುದುರೆ ಕೊಳುಗಳದ ಅಂಜಿಕೆಯಿಂದ
ಊರಿನಡೆಯಲು ಕಾಲುಗಳಲ್ಲಿ ರೋಗ ಹುಟ್ಟುವದು

ಅಭಿನವಚಂದ್ರ-

ಅರಿದಾಳಂ ಲೋಧ್ರಂ ತಿಳ
ಮರಿಸಿನಮಂ ತ್ರಿಫಲಕೇರಗೊಟ್ಟೆಯ ನಿಂಬಾ
ಗಿರೆ ಕೂಡಿ ಕಾಸಿ ಪೂಸುಗೆ
ಖುರಮಂ ಮೆಟ್ಟಿಸುಗೆ ಕಾಸಿ ತಂದಿಟ್ಟಗೆಯಂ|| (೧೫-೫)

ರಾಮಚಂದ್ರ-

"ಅರಿದಳಲೋದ್ರಂರ ಚಕ್ಕೆ, ಎಳ್ಳು, ಅರಿಸಿನ, ಅಣಿಲೆಯಕಾಯಿ, ನೆಲ್ಲಿಯಚಟ್ಟು ತಾರೆಯಕಾಯಿ, ಗೇರಹರಳು ಇವನರೆದು ಕೂಡಿದುದನು ಮಡಿಕೆಯಲ್ಲಿ ಹಾಕಿ, ಕಾಯಿಸಿ ಕಷಾಯವ ಮಾಡಿ ಕುದುರೆಯ ಅಂಗಾಲಿಗೆ ತೊಡೆದು ಆ ಮೇಲೆ ಇಟ್ಟಿಗೆಯಿಂದ ಕಾಯಿಸಿ ಮುಟ್ಟಿಸುವುದು ಅಂಗಾಲು ರೋಗಗಳು ಮಾಯಿವುದು"[೧೨]

ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ (ಜ-ಟ) ಪ್ರತಿಗಳಲ್ಲಿ ೫ನೇ ಪದ್ಯವಾದ ಮೇಲೆ ೪ನೇ ಪದ್ಯ ಬಂದಿದೆ. ಹಾಗೆಯೇ ಈ ಟೀಕು ಕೂಡಾ. ರಾಮಚಂದ್ರನಲ್ಲಿ ೫ನೇ ಪದ್ಯದ ಟೀಕು ಆದಮೇಲೆ ೪ನೇ ಟೀಕು ಬಂದಿದೆ. ಆದುದರಿಂದ ಅಶ್ವಶಾಸ್ತ್ರದ (ಜ-ಟ) ಸಂಪ್ರದಾಯದ ಪ್ರತಿಗಳ ಆಧಾರದ ಮೇಲೆ ಈತ ಅಶ್ವಶಾಸ್ತ್ರವನ್ನು ರಚಿಸಿರಬಹುದೆಂದು ಜಿ.ಜಿ.ಮಂಜುನಾಥನ್ ಅಭಿಪ್ರಾಯ ಪಟ್ಟಿದ್ದಾರೆ.

ಈ ಎಲ್ಲಾ ವಿಚಾರಗಳನ್ನು ಪರಾಮರ್ಶಿಸಿದಾಗ ಶಾಲಿಹೋತ್ರನ ನಂತರ ಅಶ್ವಶಾಸ್ತ್ರದ ಕೃತಿಗಳನ್ನು ಬರೆದ ಅನೇಕ ಕವಿಗಳು ಅವನ ಕೃತಿ ಆಧರಿಸಿ ಬರೆದಂತೆ ಕಂಡುಬರುತ್ತದೆ. ಅದರಂತೆ ಅಭಿನವಚಂದ್ರ ಮತ್ತು ರಾಮಚಂದ್ರ ಇಬ್ಬರು ಕವಿಗಳಿಗೆ ಶಾಲಿಹೋತ್ರನ ಕೃತಿ ಆಕರವಾಗಿರುವ ಸಾಧ್ಯತೆ ಇದೆ.

೩.೩.೨. ಬಾಚರಸನ ಶಾಲಿಹೋತ್ರನಮತ

ಈ ಕೃತಿಯು 'ಚೌಡರಾಜನ ಸುತ (ಮಗ)ನಾದ ಬಂಜರಸ ಅಥವಾ ಬಾಚರಸನು ಕ್ರಿ.ಶ.ಸು ೧೫೦೦ ರಲ್ಲಿ ಶಾಲಿಹೋತ್ರನಮತ ಎಂಬ ಚಿಕ್ಕ ಕೃತಿಯನ್ನು ಬರೆದಿದ್ದಾನೆ' ಈ ಕೃತಿಯ ಕೆ.ಬಿ.೧೦೩ ಕಾಗದ ಪ್ರತಿ ನಂಬರಿನ ಕನ್ನಡ ಅಧ್ಯಯನ ಸಂಸ್ಥೆ ಮೈಸೂರಿನ ಹಸ್ತಪ್ರತಿ ಭಂಡಾರದಲ್ಲಿದೆ. ಈ ಕೃತಿಯನ್ನು ಗಮನಿಸಿದ ವಿದ್ವಾಂಸರಾದ ಜಿ.ಜಿ.ಮಂಜುನಾಥನ್ ಅವರು ಪರಿಷ್ಕರಿಸಿ, ಸಂಪಾದಿಸಿ ಅಭಿನವಚಂದ್ರ ವಿರಚಿತ ಅಶ್ವಶಾಸ್ತ್ರ ಕೃತಿಯ ಅನುಬಂಧದಲ್ಲಿ ಕೊಟ್ಟಿದ್ದಾರೆ. ಖ್ಯಾತ ಕರ್ನಾಟಕ ವೃತ್ತಗಳಲ್ಲಿ ರಚನೆಗೊಂಡಿದ್ದು, ಕುದುರೆಯ ಸುಳಿಗಳು, ರೂಪ, ಗಂಧ ಹಯಚೇಷ್ಟೆಗಳ ಜೊತೆಗೆ ಶುಭ-ಅಶುಭ ನಿರ್ಣಯ ಕುರಿತು ವಿವರವಾದ ಮಾಹಿತಿಯನ್ನು ನೀಡುತ್ತದೆ. ಕವಿ ಮೂವತ್ತೈದು ವೃತ್ತಗಳಲ್ಲಿ ಈ ಕೃತಿಯನ್ನು ರಚಿಸಿದ್ದೇನೆ ಎಂದು ಹೇಳಿದ್ದರೂ ಸಹಿತ ಈಗ ೩೪ ವೃತ್ತಗಳು ಮಾತ್ರ ಲಭ್ಯವಾಗಿದ್ದು, ಕೃತಿಯ ಕುರಿತು ವೃತ್ತವೊಂದರಲ್ಲಿ ಹೀಗೆ ಹೇಳಿಕೊಂಡಿದ್ದಾನೆ.

"ಸುಶ್ರುತ ಶಾಲಿಹೋತ್ರನಳ ವಾಕ್ಯದೊಳುಂ ಹಯ ಚೇಷ್ಟೆ ರೂಪುದಂ
ತಶ್ರವಣಾಕ್ಷಿ ವರ್ಣ ಸುಳಿ ನಾಲಗೆ ಗಂಧ ಶುಭಾಶುಭಂಗಳಂ
ವಿಶ್ರುತ ಮೂವತ್ತೆದೆನಿಪ ವೃತ್ತದೊಳುಂ ನೆರೆ ಪೇಳ್ದ ನಾಗ ಮೈ
ಕಾಶ್ರಯ ಚೌಡರಾಜಸುತ ಬಂಜರಸಂ ಸುಜನೈಕಬಾಂಧವಾ"[೧೩] (೧)

ಇದರ ಅರ್ಥ, ಕವಿ, ಶ್ರೇಷ್ಠ ಶಾಸ್ತ್ರ ಪರಿಣಿತರಾದ, ಸುಶ್ರುತ, ಶಾಲಿಹೋತ್ರ, ನಳ ಅವರ ವಾಕ್ಯಗಳನ್ನರಿತು ಹಯಚೇಷ್ಟ, ರೂಪು, ದಂತ, ಶ್ರವಣ, ಅಕ್ಷಿ, ವರ್ಣಸುಳಿ, ನಾಲಗೆ, ಗಂಧ, ಶುಭಾಶುಭಗಳನ್ನೊಳಗೊಂಡಂತೆ ೩೫ ವೃತ್ತದಲ್ಲಿ ಜನರಿಗೆ ತಿಳಿಯಲೆಂದು ಬರೆದಿದ್ದೇನೆ ಎನ್ನುತ್ತಾನೆ. ಛಂದಸ್ಸಿನ ದೃಷ್ಟಿಯಿಂದ ಈ ಕೃತಿಯು ಖ್ಯಾತ ಕರ್ನಾಟಕ ವೃತ್ತಗಳನ್ನು ಆಶ್ರಯಿಸಿ ರಚನೆಗೊಂಡಿರುವುದರಿಂದ ಕೃತಿಯ ಮಹತ್ವ ಹೆಚ್ಚಿದೆ.

ಸ್ತನಿ ಶೃಂಗಿ ದ್ವಿಕುರಿ ದ್ವಿಕರ್ಣಿ ತಳಹೆನಂ ಹೀಳನೇಕಾಂಡಕ
ಧ್ವನಿ ಹೆವಂ ಜಡ ಚೋಡಿಗಂ ಕಡಿಗ ಬೀಸುಂಗಾಲ ನಿಸ್ಪತ್ವದು
ರ್ಮನಸಂ ನಾಸಿಕಭಗ್ನ ಕಾಣೆ ಹುಲಿಗಾರ್ದಭಂ ಗೂಗೆ ಪ
ದ್ದಿನ ಭಾಸಂ ವೃಕ ಧೂಮವೆಂಬಿನಿತು ವರ್ಣಂ ತ್ಯಾಜಿ ನಿಸ್ಸಂಶಯಂ (೨೨)

ಸ್ತನಿ, ಶೃಂಗಿ, ದ್ವಿಕರ್ಣಿ, ತಳಹೀನ, ಹೀಳನೇಕಾಂಡಕ, ಧ್ವನಿಹೆವ, ಜಡಚೋಡಿಗ, ಕಡಿಗ, ಬೀಸುಗಾಲು ನಿಸ್ಪತ್ತುಳ್ಳದ್ದೂ ಹಾಗೂ ದುಷ್ಟ ಮನಸ್ಸುಳ್ಳದ್ದು ಎಂದು ಹೇಳಿ, ಮೂಗಿಗೆ ಕೆಟ್ಟ ವಾಸನೆಯನ್ನೂ ಬೀರುವಂತ ವರ್ಣಗಳನ್ನು ಕುರಿತು ಹೇಳುತ್ತಾ ಕಾಗೆ, ಹುಲಿ, ಕತ್ತೆ, ಗೂಗೆ, ಹದ್ದು ಮುಂತಾದವುಗಳನ್ನು ಹೆಸರಿಸಿ ವಿವರಣೆ ನೀಡಿದ್ದಾನೆ.

ಸಲೆ ಸಂದೇಶಮ ಮೇಳು ತಿಂಗಳಿಗೆ ಬೆಳ್ವೆಂಟಪ್ಪ ಮಾಸಂಗಳಾ
ಗಲು ಸುಕ್ಷೀರನಿಭೋಜ್ವಲಚ್ಛವಿಯನಾಗಳ್ವೆಂಬತುಂ ತಿಂಗಳ್ನೋ
ಡಲು ತನ್ಮಧ್ಯಮದಂತ ಬೆಳ್ಪಸೆಗು ಹತ್ತುಂ ತಿಂಗಳೊಳ್ ಶುಭ್ರನಿ
ರ್ಮಲಮೇಕಾದಶಮಾಸದಲ್ಲಿ ಬೆಳುಪಕ್ಕುಂ ಪಾರಿಪಕ್ವಂಗಳುಂ (೨೮)

ಏಳನೆಯ ತಿಂಗಳ ಸಂದೇಶವನ್ನು ಸೂಚಿಸುವಂತೆ ಬೆಳೆದ ಕಣ್ಣಿಗೆ ರಾಚಿಸುವಂತಹ ನಿಜೋಜ್ವಲವಾದ, ಒಂಬತ್ತು ತಿಂಗಳಲ್ಲಿ ಮಧ್ಯದ ಹಲ್ಲುಗಳು ಬೆಳೆಯಲು, ಹತ್ತು ತಿಂಗಳಲ್ಲಿ ಶುಭ್ರವಾದ ಸ್ವಚ್ಛತೆಯಿಂದ ಕೂಡಿದ್ದು, ನಂತರ ಹನ್ನೇರಡನೆಯ ತಿಂಗಳಲ್ಲಿ ಬೆಳ್ಳಗೆ ಪರ್ವವಾಗಿ ಪರಿಪೂರ್ಣವಾಗಿ ಕಾಣುವುದು ಎಂದು ಶಾಸ್ತ್ರಕಾರ ತಿಳಿಸಿ, ಹಲ್ಲುಗಳು ಯಾವ ಯಾವ ತಿಂಗಳಲ್ಲಿ ಹೇಗೆ ಸಮೃದ್ಧವಾಗಿ ಬೆಳೆದು ಬರುತ್ತವೆ ಎಂಬುದನ್ನು ತಿಳಿಸುತ್ತಾನೆ.

೩.೩.೩. ಅಭಿನವಚಂದ್ರನ ಅಶ್ವಶಾಸ್ತ್ರ

ಶಾಸ್ತ್ರ ಸಂಬಂಧಿಯಾದ ಈ ಕೃತಿಯು ಅಧ್ಯಯನಕಾರರಿಗೆ, ಸಂಶೋಧಕರಿಗೆ, ವಿದ್ವಾಂಸರಿಗೆ ಪಂಡಿತ ಪಾಮರರಿಗೆ ಪ್ರಮುಖ ಆಕರ ಕೃತಿಯಾಗಿದೆ. ಮೊದಲಬಾರಿಗೆ ಕ್ರಿ.ಶ.೧೬೫೦ರಲ್ಲಿ ಪಂಡಿತ ಎಚ್.ಶೇಷಯ್ಯಂಗಾರ್ ಅವರು ಓಲೆಗರಿಯ ಕಟ್ಟಿನಿಂದ ಗ್ರಂಥರೂಪಕ್ಕೆ ತಂದರು. ಇದು ಮದ್ರಾಸ್‌ಸರ್ಕಾರದ ಪ್ರಾಚ್ಯಮಾಲೆಯ ಮುಖಾಂತರ ಪ್ರಕಟಣೆಗೊಂಡಿತು. ಅದರ ಪ್ರತಿಗಳು ದೊರೆಯದಿರುವ ಈ ಸಂದರ್ಭದಲ್ಲಿ, ದೊರೆಯುವ ಹೆಚ್ಚು ಪ್ರತಿಗಳ ಸಹಾಯದಿಂದ ಜಿ.ಜಿ.ಮಂಜುನಾಥನ್ ಅವರು ೫ ಓಲೆಪ್ರತಿ, ೧ ಕಾಗದ ಪ್ರತಿ ಮತ್ತು ಶೇಷಯ್ಯಂಗಾರ್ ಅವರ ಮುದ್ರಿತ ಪ್ರತಿಗಳನ್ನು ಅನುಲಕ್ಷಿಸಿ ಅಶ್ವಶಾಸ್ತ್ರವನ್ನು ತುಂಬಾ ಶ್ರಮವಹಿಸಿ ಪರಿಷ್ಕರಿಸಿದರು. ೧೯೮೭ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯಿಂದ ಪ್ರಕಟಗೊಂಡಿತು. ಪ್ರಸ್ತುತ ಅಧ್ಯಯನಕ್ಕೆ ಈ ಕೃತಿ ಪ್ರಮುಖ ಆಕರ ಗ್ರಂಥವಾಗಿ ನಿಲ್ಲುತ್ತದೆ.

ಈ ಕೃತಿಯು ೧೯ ಅಧ್ಯಾಯಗಳಲ್ಲಿ ವಿಭಾಗಿಸಲ್ಪಟ್ಟಿದ್ದು, ೮೮೮ ಪದ್ಯಗಳನ್ನು ಒಳಗೊಂಡಿದೆ. ಪದ್ಯಗಳು ಪ್ರಾಯಿಕವಾಗಿ ಕಂದಪದ್ಯಗಳಾಗಿವೆ. ಇದರಲ್ಲಿ ಸರ್ವಾಂಗ ಪರೀಕ್ಷೆ, ವರ್ಣ, ಸುಳಿ, ಹಲ್ಲಿನಿಂದ ವಯಸ್ಸನ್ನು ನಿರ್ಣಯಿಸುವುದು, ಹಯವಯೋಲಕ್ಷಣ, ಪೋಷಣವಿಧಿ, ಚಿಕಿತ್ಸೆ ಮೊದಲಾದ ವಿಷಯಗಳು ಒಳಗೊಂಡಿವೆ.

ಗ್ರಂಥಾವತಾರದಲ್ಲಿ ವಿಷ್ಣುಸ್ತುತಿ ಇದೆ. ಬಳಿಕ ಕವಿ ಶಿವ, ಬ್ರಹ್ಮ, ಸೂರ್ಯ, ಗಣಪತಿ, ಲಕ್ಷ್ಮೀ, ಮಹಿಷಾಸುರ ಮರ್ದಿನಿ ಇವರುಗಳನ್ನು ಸ್ಮರಿಸಿದ್ದಾನೆ. ತನ್ನ ಕವಿತಾಶಕ್ತಿಯನ್ನು ತೋರರ್ಪಡಿಸಲು ಈ ಗ್ರಂಥವನ್ನು ಪದ್ಯರೂಪವಾಗಿ ಹೇಳಿರುವೆ ಎಂದಿದ್ದಾನೆ.

ಉದಾಹರಣೆಗೆ

ಕನ್ನಡ ಕವಿ ನಿಜ ಕವಿತೆಯ
ಬಿನ್ನಣಮಂ ಮೆರೆವುದರಿದೆ ಪದ್ಯದೊಳದರೆಂ
ಬಿನ್ನಣಮನರುಪ ವೆಂದಾ
ನೆನ್ನರ್ತಿಯ ವಾಜಿಶಾಸ್ತ್ರಮಂ ವಿರಚಿಸುವೆ (೧-೧೧)

ಈ ಕೃತಿಯ ಅಧ್ಯಾಯಗಳ ಅಂತ್ಯದಲ್ಲಿ ಗ್ರಂಥಕ್ಕೆ ಚಂದ್ರಮತ ಎಂಬ ಹೆಸರು ಇರುವುದನ್ನು ಕಾಣಬಹುದು.

ಉದಾಹರಣೆಗೆ

ಈ ಗುಗ್ಗುಳಂ ರಸಾಯನ
ಯೋಗಮಿದಂ ಕೊಟ್ಟಡುತ್ತರ ಕ್ರಿಯೆಯೊಳದಂ
ರಾಗದಿನಿಕ್ಕುವುದಣೆಯಲೆಯ
ಸೊಗಡಿಸದೆ ಹಯಕೆ ಚಂದಿವರ್ಮನಮತದಿಂದ (೧೯-೩೦)

ಇದು ವೈದ್ಯಗ್ರಂಥವಾದರೂ ಬಂಧವು ಲಲಿತವಾಗಿದೆ. ಇದರಿಂದ ಕೆಲವು ಪದ್ಯಗಳನ್ನು ಉದ್ಧರಿಸಿ ಬರೆಯುತ್ತೇವೆ.

ಅತಿದೂರಂ ಪಯಣಕ್ಕೆ ಬೇಂಟೆಗೆ ವಿನೋದಾರ್ಥಕ್ಕೆ ಸಂದಿಗ್ಧದೂ
ರ್ಜಿತ ಕಾರ್ಯಕ್ಕೆ ರಣಾಜಿರಕ್ಕೆ ಭಟರಂ ಗಂಧೇಭೇ ಮುಂಸುತ್ತಿಮು

ಎಂದು ಕರ್ನಾಟಕ ಕವಿಚರಿತ್ರೆ ಸಂ.೧ರಲ್ಲಿ ಆರ್.ನರಸಿಂಹಾಚಾರ್ಯರು ಚರ್ಚಿಸುತ್ತಾರೆ.

ಇಂಥಹ ಪ್ರಮುಖ ಸಾಲುಗಳು ಕೃತಿಯ ಶ್ರೇಷ್ಠತೆಯನ್ನು ಎತ್ತಿ ಹಿಡಿಯುವಲ್ಲಿ ಸಹಾಯಕವಾಗಿವೆ.

ಕವಿ ವಿಚಾರ ಕುರಿತು ಹೇಳುವುದಾದರೆ, "ಅಶ್ವಶಾಸ್ತ್ರವನ್ನು ಬರೆದವನು ಅಭಿನವಚಂದ್ರ. ಈತನು ಬ್ರಾಹ್ಮಣಕವಿ. ಇವನ ತಂದೆ ಕಾಳಪಯ್ಯ, ತಾಯಿ ಅತ್ತಿಮಬ್ಬೆ, ಅಣ್ಣ ಸೋಮದೇವ, ಸ್ಥಳ ಬಾಗೇವಾಡಿ. ಈ ದಂಪತಿಗಳಿಗೆ ಪಂಕರುಹ ಹಲಕುಲಿಶ ಮಕರಕರ ಲೇಖಾನೀಕ ಪಾದ ತಲನೂ ಗಿರಿಜಾಧೀಶ್ವರ ಭಕ್ತನೂ ಆದ ಸೋಮದೇವ ಮಗ. ಈತನ ತಮ್ಮ ಹಯಶಾಸ್ತ್ರ ಪ್ರೌಢಜನ ಮನೋನಯನಪ್ರಿಯನೂ ಅಕಲಂಕಚರಿತನೂ ಆದ ಅಭಿನವಚಂದ್ರ, ಕಾಳಪಯ್ಯನನ್ನು ವಿಪ್ರಪ್ರಭು ಎಂದು ಕರೆದಿರುವುದರಿಂದಲೂ, ಸೋಮದೇವನಿಗೆ ಚಕ್ರವರ್ತಿ ಸೂಚಕ ಚಿಹ್ನೆಗಳನ್ನು ಹೇಳಿರುವುದರಿಂದಲೂ ಇವರು ಬಾಗೇವಾಡಿ ಪ್ರಭುಗಳಾಗಿದ್ದರೆಂದು ಊಹಿಸಬಹುದು"[೧೦] ಎಂದಿದ್ದಾರೆ.

ಕವಿಚರಿತೆಕಾರರ ಅಭಿಪ್ರಾಯದಂತೆ "ಚಂದ್ರಕವೀಂದ್ರ ವಾಗ್ವಿಲಾಸ ನೆಗಳಲ್ ವಾಜಿಶಾಸ್ತ್ರಮಂ ವಿರಚಿಸುವೆಂ ಎಂದಿರುವುದರಿಂದ ಹಿಂದೆ ವಾಜಿಶಾಸ್ತ್ರವನ್ನು ಬರೆದ ಚಂದ್ರಕವಿಯನ್ನು ಅನುಸರಿಸಿ ಈ ಗ್ರಂಥವನ್ನು

ಬರೆದಂತೆ ತೋರುತ್ತದೆ. ಈ ಚಂದ್ರಕವಿ ಮದನತಿಲಕವನ್ನು ಬರೆದ ಚಂದ್ರರಾಜನಾಗಿರಬಹುದು. ಆ ಚಂದ್ರಕವಿಯನ್ನು ಅನುಸರಿಸಿ ಅಭಿನವಚಂದ್ರ ಎಂದು ಕವಿ ತನ್ನ ಹೆಸರನ್ನು ಇಟ್ಟುಕೊಂಡಿರಬಹುದು. ಇವನ ಕಾಲವನ್ನು ನಿರ್ಧರಿಸುವದಕ್ಕೆ ಸರಿಯಾದ ಆಧಾರವಿಲ್ಲ. ಸುಮಾರು ೧೪೦೦ರಲ್ಲಿ ಇದ್ದಿರಬಹುದೆಂದು ಊಹಿಸುತ್ತೇವೆ ಎಂದಿದ್ದಾರೆ.''[೧೫] ಶ್ರೀ ಮಾನ್.ಎಚ್.ಶೇಷಯ್ಯಂಗಾರ ಮತ್ತು ಡಾ.ಕೆ.ಜಿ.ನಾರಾಯಣಪ್ರಸಾದರು ಈ ಕಾಲವನ್ನು ಅನುಮೋದಿಸುತ್ತಾರೆ.

ಆದರೆ ಈ ಕೃತಿಯ ಸಂಪಾದಕರಾದ ಜಿ.ಜಿ.ಮಂಜುನಾಥನ್ ಅವರು ಕ್ರಿ.ಶ.೧೧೭೦ರಲ್ಲಿ ಕಳಚೂರಿಯ ಚಕ್ರವರ್ತಿ ಸೋವಿದೇವನ ಕಾಲಕ್ಕೆ ಸೇರಿದ, ಬಿಜಾಪುರ ಜಿಲ್ಲೆಯ ಬಾಗೇವಾಡಿ ಶಾಸನದಿಂದ ಕವಿಕಾಲವನ್ನು ಅನೇಕ ಬಿಟ್ಟು ಹೋದ ಪಾಠಾಂತರಗಳಿಂದ ಮರುಪರಿಶೀಲಿಸಿ ಕವಿಯ ಕಾಲವನ್ನು ಕ್ರಿ.ಶ.೧೪೦೦ರಿಂದ ಹಿಂದಕ್ಕೆ ಅಂದರೆ ಸುಮಾರು ೧೧೭೦ರಿಂದ ೧೨೦೦ರ ಸುಮಾರಿಗೆ ತಂದು ನಿಲ್ಲಿಸುತ್ತಾರೆ. ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿದ್ದಾಗ್ಯೂ ಈ ಮೇಲಿನ ಎಲ್ಲಾ ಹೇಳಿಕೆಯನ್ನು ಅನುಲಕ್ಷಿಸಿದಾಗ ತೋಚುವ ವಿಚಾರವೇನೆಂದರೆ ಸದ್ಯಕ್ಕೆ ಅಭಿನವಚಂದ್ರನ ಕಾಲವನ್ನು ೧೨ನೇ ಶತಮಾನ ಎಂದು ಹೇಳಬಹುದು. ಮುಂದೆ ಕವಿಕಾಲ ವಿಚಾರವಾಗಿ ಸಂಶೋಧನೆ ನಡೆದು ಮರುಪರಿಶೀಲನೆ ಮಾಡಿದಾಗ ಅದರ ನಿಜವಾದ ಫಲಿತ ಹೊರಬರಬಹುದು.

ಕವಿಗೆ ಸುಖಕರವಿಳಾಸ, ಬುಧಬಂಧು, ದಿನಬಂಧು, ವಿಭೂದ ದಿನಕರ ಮತ್ತು ಗುಣರತ್ನ ಎಂಬ ಬಿರುದುಗಳು ಇದ್ದವು ಎಂದು ಕವಿಚರಿತೆಕಾರರು ತಿಳಿಸುತ್ತಾರೆ.

ತನಗಿಂತ ಹಿಂದೆ ಅಶ್ವಶಾಸ್ತ್ರವನ್ನು ಕುರಿತು ಬರೆದ ಕೆಲವರ ಮತವನ್ನು ಹೊಸಗನ್ನಡದಿಂದ ಹೇಳುವೆನು ಎಂದಿದ್ದಾನೆ. ಉದಾ

ಅನುಪಮ ಹಯಶಾಸ್ತ್ರಗಮ
ವನದಿಯೊಳಾ ಸಿಂಹದತ್ತ ಕೃತಿ ಲಕ್ಷಣಮಂ
ದಿನಕರ ತನಯನ ರೇವಂ
ತನಮತದಿಂದ ಪೇಳ್ವನೆಸೆವ ಪೊಸಕನ್ನಡದಿಂ (೧-೨೦)

ಈ ಮೇಲಿನ ಸಾಲುಗಳಲ್ಲಿ ಶಾಸ್ತ್ರ ಪಂಡಿತರನ್ನು ಸ್ಮರಿಸುತ್ತಾ, ಶಾಸ್ತ್ರ ಸಮುದ್ರದಂತಿರುವ ಸಿಂಹದತ್ತ, ಸೂರ್ಯನ ಮಗನಾದ ರೇವಂತನ ಮತದಿಂದ ಹೊಸಗನ್ನಡವಾಗಿ ಹೇಳುತ್ತೇನೆ ಎಂದಿರುವನು. ಮುಂದುವರಿದು ತನ್ನ ಕವಿತಾಚಾತುರ್ಯವನ್ನು ಕುರಿತು ಹೀಗೆ ಹೇಳಿಕೊಂಡಿದ್ದಾನೆ.

ಪ್ರಹಸಿತ ಸರಸ್ವತಿಮುಖ
ಕುಹರವಿನಿರ್ಗತನು ತತ್ಪ್ರಸನ್ನಾಳಾಪಂ

ಸಹಜಮಿದೆಯಂತಿರೆ ವಾ

ಗ್ಮಹಿಮೆಯ ನಾಂ ಮೆರೆದು ವಿಭುದರಂ ಮೆಚ್ಚಿಸುವೆಂ (೧-೧೯)

ಹೀಗೆ ಕವಿ ಒಂದು ಕೃತಿಯನ್ನು ರಚಿಸುವಲ್ಲಿ ತನ್ನ ಶಕ್ತಿ ಸಾಮರ್ಥ್ಯವನ್ನು ತಿಳಿಯಪಡಿಸುವುದರ ಜೊತೆಗೆ ಪಾಂಡಿತ್ಯವನ್ನು ತೋರ್ಪಡಿಸಿದ್ದಾನೆ.

ಎರಡನೆಯ ಅಧ್ಯಾಯದಲ್ಲಿ ಕುದುರೆಯ ವರ್ಣವಿಸ್ತಾರಗಳಿಂದ ವಿವಿಧ ಹೆಸರುಗಳನ್ನು ಗುರುತಿಸಿದ್ದಾನೆ.

ರಾಜಕಪೋತದ ಬಣ್ಣದ

ವಾಜಿಗೆ ಪಿಸರುಂ ಕಪೋತನೆಂಬುದು ಮತ್ತಾ

ವಾಜಿಗತಿ ಧವಲಮಂಡಲ

ರಾಜಿ ವಿರಾಜಿಪೊಡೆ ರೂಟವಂ ವೆಸರಕ್ಕುಂ (೨-೨೨)

ಬಳಿಯದಾದ ಎಳೆ ಮೊದಲ ಛಾಯೆಯನ್ನು ಹೊಂದಿರುವ ಪಾರಿವಾಳದ ಕುದುರೆಯನ್ನು ಕಪೋತವೆಂದೂ, ಆ ಬಣ್ಣದ ಮೈಯ ಕುದುರೆಗೆ ಬಟಾ ಒಟುವಾಗಿ ಬಿಳಿಯಾಗಿದ್ದರೆ ಅದನ್ನು ಯವಟನೆಂದು ಗುರುತಿಸಲಾಗಿದೆ. ಕುದುರೆಯ ಮೈ ಬಣ್ಣದಿಂದ ಅದನ್ನು ಅನೇಕ ರೀತಿಯಾಗಿ ಹೆಸರಿಸಿರುವುದು ವಿಧಿತವಾಗುತ್ತದೆ.

ಉತ್ತಮ ಬಣ್ಣವನ್ನು ಹೊಂದಿದ ಕುದುರೆಯ ಉತ್ತಮ ಲಕ್ಷಣವನ್ನು ಗುರುತಿಸುತ್ತಾ ಅಂತಹ ಕುದುರೆಯನ್ನು ಈ ಕೆಳಗಿನಂತೆ ಹೆಸರಿಸಲಾಗಿದೆ.

ಲಕ್ಷಣ ಯುಕ್ತಂ ಸರ್ವಬ

ಲಕ್ಷಮನೆನಿಸಿರ್ದು ಶೋಣನುಗ್ರಾಹವದೊಳ್

ಭಕ್ಷಿಸುಗುಂ ರಿಪುವಂ ಪದಿ

ರಾಕ್ಷಿಸುಗುಂ ಪತಿಯನೆಂದನಭಿನವಚಂದ್ರಾ (೨-೬೦)

ಹವಳದ ಮೈಬಣ್ಣವನ್ನು ಹೊಂದಿರುವ ಕುದುರೆಯನ್ನು ಆಳುವ ಒಡೆಯನಿಗೆ ಐಶ್ವರ್ಯ ಪ್ರಾಪ್ತಿಯಾಗುವುದು. ಯುದ್ಧಕ್ಕೆ ಹೋದ ಸಂದರ್ಭದಲ್ಲಿ ವೈರಿಯನ್ನು ಕೊಂದು ತನ್ನನ್ನ ರಕ್ಷಿಸಿದ ಒಡೆಯನ ರಕ್ಷಣೆ ಮಾಡುವುದು.

ಮೂರನೆಯ ಅಧ್ಯಾಯದಲ್ಲಿ ಪುಂಡ್ರ, ಪುಷ್ಪ, ಕಾಕಸೆ, ಗಂಧ, ಕಾಂತೆಯಿಂದ ಶುಭ-ಅಶುಭವನ್ನು ನಿರ್ಣಯಿಸುತ್ತಾ ಹೀಗೆ ಹೇಳಿರುವನು

ತುರಗದ ಮಯ್ಯೊಳೆ ಪುಷ್ಪಂ

ಕರಿದಾದಂದಶುಭಮಾವ ಬಣ್ಣದೊಳಂ ಪಾಂ

ಡುರಮಾದೊಡೆ ಶುಭಮದನಾ

ದರಿಪುರ ಪರಿಹರಿಪುದಸಿತ ಪುಷ್ಪಾದಿಗಳಂ (೩-೧೨)

ಕುದುರೆಯ ಮೈಯಲ್ಲಿ ಪುಷ್ಪ ರೇಖೆಗಳು ಕರಿದಾಗಿದ್ದರೆ ಕಷ್ಟ ಆಗುವುದು. ಆ ಕರಿಯ ಬಣ್ಣದ ಜೊತೆಗೆ ಬಿಳಿದು ಕೂಡಿಕೊಂಡಿದ್ದರೆ ಆ ಕಪ್ಪಿನ ದೋಷವಿಲ್ಲವೆಂದು ಹೇಳಿ, ಕುದುರೆಗೆ ಇರಬೇಕಾದ ಉತ್ತಮ ಗುಣಗಳನ್ನು ವಿವರಿಸಲಾಗಿದೆ.

ಅನೇಕರಭಂ ನವಿಲ್ಪುರಿ

ಧೇನು ವೃಷಂ ಹಂಸೆ ಚಕ್ರವಾಕಂ ಸಿಂಹಂ

ವಾನರ ಮೆಂಬಿನಿತರಗ

ತ್ಯನೂನ ತುರಗದ ಗತಿಯೊಳಂ ತತಿ ಶುಭದಂ (೩-೩೫)

ಆನೆ, ನವಿಲು, ಹುಲಿ, ಹಸು, ಗೂಳಿ, ಹಂಸೆ, ಚಕ್ರವಾಕ, ಸಿಂಹ, ಕೋಡಗ ಇವುಗಳ ನಡೆಯುಳ್ಳ ಕುದುರೆಗಳು ಉತ್ತಮವೆಂದು ಬಣ್ಣಿಸಲಾಗಿದೆ.

ಅಧ್ಯಾಯ ನಾಲ್ಕರಲ್ಲಿ ಕುದುರೆಯ ವಿವಿಧ ಬಗೆಯ ಸುಳಿಗಳು ಮತ್ತು ಗತಿಚೇಷ್ಟೇಗಳನ್ನು ಹೇಳಿ, ಉತ್ತಮ ಸುಳಿಗಳಿಂದಾಗುವ ಲಾಭಗಳು ಮತ್ತು ಕೆಟ್ಟ ಸುಳಿಗಳಿಂದಾಗುವ ನಷ್ಟಗಳು ಹೇಗೆ ಪರಿಣಾಮ ಬೀರುತ್ತವೆ ಎಂಬುದನ್ನು ಚರ್ಚಿಸಲಾಗಿದೆ.

ನೊಸಲೊಳ್ ನಾಲ್ಕಾವರ್ತಂ

ಪಸರಿಸಿ ಚತುರಸ್ರಮಾಗಿ ನಾಲ್ಕೆಡೆಯೊಳ್ ರಂ

ಜಿಸಿ ಸಮನಾಗಿದೆ ಲೋಕ

ಪ್ರಸಿದ್ಧನಂ ಸುಜನಸುತನನಧಿಪತಿ ಪಡೆಗುಂ (೪-೬)

ಕುದುರೆಯ ಹಣೆಯಲ್ಲಿ ನಾಲ್ಕು ಸುಳಿಗಳು ಚೌಕವಾಗಿದ್ದರೆ ಅದನ್ನು ಆಳುವವನು ಲೋಕ ಪ್ರಸಿದ್ಧನಾಗುವನು, ಅಂತಹ ಕುದುರೆಯನ್ನು ಸಾಕಿದವನು ಮಹಾರಾಜನಾಗಿ ಮೆರೆಯುವನು.

ಕರ್ಣಂಗಳ ತುದಿಯೊಳ್ ಸುಳಿ

ನಿರ್ಣೀತಂ ತೋರೆ ಪತಿಗೆ ಮಂತ್ರಾಗಾರಾ

ಭ್ಯರ್ಣದೊಳಕ್ಕುಂಮರಣಂ

ಸ್ವರ್ಣದ ಕಬ್ಬುನದ ಮಂದಸಂ ಪುಗಿಸಿದೊಡಂ (೪-೧೯)

ಕುದುರೆಯ ತುದಿಯ ಕಿವಿಯ ಎಡೆಗಡೆಯಲ್ಲಿ ಸುಳಿ ಇರಲು ಒಡೆಯನಿಗೆ ತನ್ನ ಮನೆಯಲ್ಲಿಯೇ ಸಾವು ಬರುವುದು ಖಂಡಿತ.

ಚಿಂತಿಸಿ ಮೋಹಂ ಬಿಸುಟು
ದ್ಭ್ರಾಂತಿಸುತಂ ಹೀನ ದೀನ ದೀರ್ಘಶ್ವಸನದಿಂ
ದಂತೆ ಕೀಳಿಮಿತ್ತಮಿರೆ ಮಾ
ಳ್ಪುಂ ತಡೆಯದೆ ಪತಿಗೆ ಭಯಮನತಿದುರ್ನಯದಿಂ (೪-೫೮)

ಕುದುರೆ ಎರಡು ಕಣ್ಣಿನಲ್ಲಿ ನೀರು ಸುರಿಸುತ್ತ ದುಃಖದಿಂದ ಲದ್ದಿಯನ್ನು ಹಾಕುತ್ತ, ಗತ್ತವ ಮಾಡುತ್ತ, ಹಲುಮಣಿಸುತ್ತ (ಒದುರುತ್ತ) ಇರಲು ಇದರಿಂದ ಒಡೆಯನಿಗೆ ಅತಿಶಯವಾಗಿ ಭಯವನ್ನುಂಟುಮಾಡುವುದು.

ಅಧ್ಯಾಯ ಐದು ರೇಖೆಗಳಿಂದ ಕುದುರೆಯ ಆಯುಷ್ಯ ನಿರ್ಧರಿಸುತ್ತದೆ.

ಒಂದೆ ಬೆರಲೆನಿತನತೆ ನೀ
ಳೊಂದಳವಿಗಳೂರ್ಧ್ವರೇಖೆ ತೋರ್ಪಡೆ ಮರುಗಂ
ತೊಂದು ವರಿದೇಳೆ ಮುಖರೋ
ಗಂದೂಷಿಸಿ ಮರಣಮಕ್ಕಮಭಿನವಚಂದ್ರ (೫-೩೪)

ಒಂದು ಬೆರಳಳವಿಯೊಳು ನೀಳೊಂದುಳವಿಯೊಳು ಉರ್ಧ್ವರೇಖೆಗಳು ಇರುಲು ಒಂದು ವರುಷ ಆಯುಷ್ಯವೆಂದು ತಿಳಿಯಬೇಕು.

ದಿನಕರನನರ್ಧ ಚಂದ್ರನ
ನನುಕರಿಸಿದ ಪ್ರೋಥರೇಖೆಯಿಂದಂರಿಸುಮ
ರ್ದನವಾಗಿ ಬಾಳ್ಗುಮದನಾ
ಳ್ವ ನೃಪಂ ಹರಿ ಮೂವತ್ತೆರಡು ವರ್ಷಂ ಬಾಳ್ಗುಂ (೫-೭೦)

ಕುದುರೆಯ ಪ್ರೋಥರೇಖೆ ಸೂರ್ಯನ ಹಾಗೆ ಅಥವಾ ಅರ್ಧಚಂದ್ರನ ಹಾಗೆ ಇರಲು ಅದನ್ನಾಳುವವನು ಅಂತಃಪುರವನ್ನು ಜೈಯಿಸಿ ಸುಖದಲ್ಲಿ ಇರುವನು. ಆ ಕುದುರೆ ಮೂವತ್ತೆರಡು ವರ್ಷಕ್ಕೆ ಸಾಯುವದು ಅಧ್ಯಾಯ ಆರರಲ್ಲಿ ಕುದುರೆಯ ಶಾರೀರಿಕ ಗುಣಗಳಿಂದ ಕುದುರೆಯ ಆಯುಷ್ಯ ಕುರಿತು ವಿವರ ಪೂರ್ಣವಾದ ಮಾಹಿತಿ ನೀಡಲಾಗಿದೆ. ಒಂದು ವರ್ಷದಿಂದ ಮೂವತ್ತೆರಡು ವರ್ಷದವರೆಗೆ ವಿವರಿಸಲಾಗಿದೆ.

ದುರ್ಗಂಧ ನಾಭಿಯಿಂದ
ದುರ್ಗಂಧಂ ನಾರ್ಪುವೆತ್ತ ನಾಲಿಗೆಯಿಂದಂ
ರುರ್ಗಂಧ ದೋಷದಶನಂ
ದುರ್ಗುಣಮರ ಕಳಿವುದೊಂದು ಸಂವತ್ಸರದೊಳ್ (೬-೨)

ಕುದುರೆ ಹೊಕ್ಕಳಿಂದಲೂ, ನಾಭಿಯಿಂದಲೂ, ಹಲ್ಲುಗಳಿಂದಲೂ, ನಾರುತ್ತಿರಲು ಅದು ಒಂದು ವರ್ಷಮಾತ್ರ ಬದುಕುವುದು.

ಅಡಿಗಡಿಗೆ ಮೆಯ್ಯನಿಕ್ಕುಗು
ಮೆಡಗೆಲದೊಳ್ ಕಂದಿ ಕುಂದುಗುಂ ಮುಖ ದೋಷ್ಠಂ
ಕಿಡುಗುಂ ಮುಂದಣ ಪುಲ್ಲಂ
ತುಡುಕದು ತದ್ವಾಜಿ ವಿಗತಜೀವಿತನಕ್ಕುಂ (೬-೬೭)

ಕುದುರೆಯ ಕಿವಿ ರಕ್ತ ಲೋಹಿರಸದ ಹಾಗೆ ಇರಲು, ಕಾಲು ನೀರಿನ ಹಾಗೆ ಬಿಳಿದು ಕೂಡಿರಲು, ದೇಹ ಕೆಂಪಾಗಿರಲು, ಆ ಕುದುರೆಯು ಇಪ್ಪತ್ತು ವರ್ಷ ಬದುಕುವುದು.

ಅಧ್ಯಾಯ ಏಳರಲ್ಲಿ ಕುದುರೆಯ ಪೋಷಣೆ ಮತ್ತು ಆರೈಕೆಯ ಕುರಿತು ಚರ್ಚಿಸುತ್ತ ವಾತ, ಪಿತ್ತ, ಶ್ಲೇಷ್ಮ, ಹರವಾದ ಸಪ್ತಧಾತು ಪಂಚೇಂದ್ರಿಯ ಬಲಿವಂತ ಆಹಾರ ಕಾಲವನ್ನು ಕುರಿತು ಹೇಳಲಾಗಿದೆ.

ಕಡು ಬಿಸಿಲೊಳ್ಕ್ ಕಡು ಮಳೆಯೊಳ್
ಕಡುಗಾಳಿಯೊಳಿರಿಸಲಾಗದಿರ್ದೋಡೆ ಕುತ್ತ
ಕೆಡೆಯಕ್ಕು ಮದರಿನಿಂಬಾ
ದೆಡೆಯೊಳ್ ಕಟ್ಟುವುದು ಕಲಿತ ಯೋಗ್ಯಾಲಯದೊಳ್ (೭-೭)

ಕಡುಬಿಸಿಲಲ್ಲಿ, ಕಡುಮಳೆಗಳಲ್ಲಿ, ಕಡುಗಾಳಿಯಲ್ಲಿ, ಕುದುರೆಗಳನ್ನರಸಿದರೆ ಅದರಿಂದ ವ್ಯಾಧಿ ಹುಟ್ಟುವದು. ಆ ಸಂದರ್ಭದಲ್ಲಿ ಕಾಲಗಳನ್ನು ಅರಿತು ಒಳ್ಳೆಯ ಸ್ಥಳಗಳಲ್ಲಿ ಕುದುರೆಯನ್ನಿರಿಸಿ ರಕ್ಷಣೆಯನ್ನು ಮಾಡುವುದು. ಶಾಸ್ತ್ರಕಾರ ಅಧ್ಯಾಯ ಎಂಟರಲ್ಲಿ ಕುದುರೆಗೆ ಅಲಂಕಾರ ಮತ್ತು ನೀರಾಜನ ಮಾಡುವ ಪದ್ಧತಿಯನ್ನು ಕುರಿತು ವಿವರಣೆ ನೀಡಿದ್ದಾನೆ.

ಲಕ್ಷಣೆಯುಕ್ತ ಸರ್ವಭ
ರಕ್ಷಮನಂ ಕ್ರೋಧಿರಾಜನೆ ನಿಪ ನಿಲಜವಂ
ಶಿಕ್ಷಿತ ವಿದನಂ ಪಂಚವಿ
ಧಂ ಕಾಂತಿಯ ಶೋಣವರ್ಣನದು ಯುವರಾಜಂ (೮-೬)

ಲಕ್ಷಣವುಳ್ಳ ಸರ್ವಗುಣ ಸಂಪನ್ನನು, ಕೋಪವುಳ್ಳವನು, ವಾಯುವೇಗವುಳ್ಳ, ನಾನಾ ಸಾಧನೆಯ ಬಲ್ಲವನು ಐದು ಗುಣಗಳುಳ್ಳ, ಹವಳ ವರ್ಣದ ಕೆಂಪಿನ ಕುದುರೆಯನ್ನು ಯುವರಾಜ ಪಟ್ಟವ ಕಟ್ಟುವದು.

ಅಭಿಷೇಕಮಂ ತೋರಣದೊಳ್
ವಿಭೂತಿಯಂ ತಂದು ಪಟ್ಟವರ್ಧನಕೆ ಜಗ

ತ್ರಿಭುವಂ ಪೊಡವಡಿಸುವುದಿರು
ಳಭಿಮುಖವಾಗಿರ್ದು ಶಾಸ್ತ್ರ ವೇದ್ಯಂ ವೈದ್ಯಂ (೮-೨೫)

ಅಭಿಷೇಕವನ್ನು ಮಾಡಿ ತೋರಣದ ಸಂಪತ್ತಿನಿಂದ ತಂದು ಪಟ್ಟದ ಕುದುರೆಗೆ ಅರಸನು ಪಡಮಡಿಸಿ ರಾತ್ರಿಯಲ್ಲಿ ಆಯುಧ ಪೂಜೆಗಳನ್ನು ಶಾಸ್ತ್ರೋಕ್ತವಾಗಿ ಮಾಡುವನು.

ಅಧ್ಯಾಯ ಒಂಭತ್ತರಲ್ಲಿ ಕುದುರೆ ದೇಹದ ವಿವಿಧ ಭಾಗಗಳನ್ನು ಗುರುತಿಸಲಾಗಿದೆ. ಇದರಲ್ಲಿ ಶರೀರದ ವಿವಿಧ ಅಂಗಾಂಗಗಳನ್ನು ಲಕ್ಷಣಗಳ ಮೂಲಕ ವಿವರಿಸಲಾಗಿದೆ.

ಕಡೆ ವಲ್ಲುಂ ನಾಲ್ಕಕ್ಕುಂ
ಪಡೆಗುಂ ತಾಂ ಪಾರಿಪಕ್ಷಮೆಂಬಾ ಪೆಸರಂ
ನಡುವಲ್ ನಾಲ್ಕಕ್ಕುಂ ತಾಂ
ಗಡಣೆಪು ದಾ ಮಧ್ಯವೆಂಬ ಪೆಸರಂ ಪಡೆಗುಂ (೯-೮)

ಕುದುರೆಯ ಕಡೆಯ ಹಲ್ಲುಗಳ ನಾಲ್ಕನು ಪಾರಿಪಕ್ಷವೆಂಬ ಹೆಸರಿನಿಂದ ಕರೆಯಲಾಗಿದೆ. ನಡುವಣ ನಾಲ್ಕು ಹಲ್ಲು ಮಧ್ಯಮವೆಂದು ಗುರುತಿಸಲಾಗಿದೆ.

ಕಂಠದ ನಡುವಳಯದ ಪೆಸ
ರುಂಟೆನಿಸುಗು ಕಕ್ಷವದರಿ ನಡುವಣ ದೇಶಂ
ಕಂಠವದೆ ನಿಸಿರೆ ಕೊಳ್ಳುದು
ಗೆಂಟುಂ ನಿಗಳಾದಿ ಕಂಠಕಡೆ ಪನ್ನೊಂದುಂ (೯-೨೯)

ಕೊರಳಿನ ನಡುವಿನ ನೀಳದ ಹೆಸರನ್ನು ಕಕ್ಷಗಳೆನ್ನುವರು, ಆ ಕಕ್ಷಗಳ ನಡುವಿನ ಭಾಗ ಕಂಠಕವೆನಿಸಿ ಕೊಳ್ಳುವುದರಿಂದ ಆ ಕಂಠದ ನೀಳ ಕಡೆಯು ಹನ್ನೊಂದು ಎಂದು ಪರಿಗಣಿಸಲಾಗಿದೆ.

ಅಧ್ಯಾಯ ಹತ್ತು ಕುದುರೆಯ ಶಾಸ್ತ್ರವನ್ನು ಯಾರು ಯಾರಿಗೆ ಕಲಿಸಬೇಕು ಎಂಬ ವಿಚಾರವನ್ನು ತಿಳಿಸುವದು.

ಗುರುಭಕ್ತತಂ ಕುಲಜಂ ಪ್ರಸನ್ನವದನಂ ಮೇಧಾವಿ ಸದ್ಧರ್ಮತ
ತ್ಪರನುತ್ಪಾಟಿತ ಚಿಂತ್ಯ ನನ್ಯರಮಣೀದೂರಂ ಕೃತಜ್ಞಂ ಸ್ಥಿರಂ
ನಿರುಜಂ ಸರ್ವಜನೋಪಕಾರಿ ಶುಚಿ ಸದ್ವಾಕ್ಯಂ ನಿರಾಲಸ್ಯರ
ಪ್ಪರನಾರಯ್ದು ಪದೇಶಮಂ ಕುಡುವುದುಶ್ವಾಚಾರ್ಯ ರಾಜೋತ್ತಮಂ (೧೦-೩)

ಗುರುಭಕ್ತಿಯುಳ್ಳವನಿಗೆ, ಕುಶಲವನುಳ್ಳವನಿಗೆ, ಮತಿಯುಳ್ಳವನಿಗೆ, ಧರ್ಮಬುದ್ಧಿಯವನಿಗೆ, ಹರುಷನೂಳ್ಳವನಿಗೆ, ಪರಸ್ತ್ರೀಗಮನವಿಲ್ಲದವನಿಗೆ, ಶಾಸ್ತ್ರಸಂಪನ್ನನಿಗೆ ಸ್ಥಿರಂಗೆ ಸರ್ವಜನೋಪಕಾರಿಗೆ,

ಶುಚಿಗೆ, ಸತ್ಯಯುಳ್ಳವನಿಗೆ, ಆಲಸ್ಯವಿಲ್ಲದವನಿಗೆ ಈ ಮೇಲಿನ ಎಲ್ಲಾ ಗುಣಗಳನ್ನು ಹೊಂದಿರುವವರನ್ನು ನೋಡಿ ಕುದುರೆಶಾಸ್ತ್ರವನ್ನು ಕಲಿಸುವದು ಉತ್ತಮವೆಂದು ತಿಳಿಸಲಾಗಿದೆ.

ಒಂದು ತುರಗವಂ ಕೊಂದವಗೆ
ಬಂದುದು ಅಯ್ದರೊಳೆ ಮೊದಲ ಪಾತಕವವಗಂ
ಬಂಧಿಸಿ ಕುದುರೆಯ ಸಾಕದೆ
ಕೊಂದಗೆ ಪಾತಕ ಮೆನಿತ್ತೊ ಕುರು ಪಿಡಲರುಯಂ (೧೦-೧೧)

ಒಂದು ಕುದುರೆಯನ್ನು ಕೊಂದವನು ಪಂಚಮಹಾಪಾತಕಕ್ಕೆ ಹೋಗುತ್ತಾನೆ. ಮೊದಲ ಪಾತಕವನ್ನು ಬಂಧಿಸಿ, ಕುದುರೆಯನ್ನು ಸಾಕದೆ ಕೊಂದವಗೆ ಆ ಪಾಪವನು ಹೇಳಲು ಅಸಾಧ್ಯ. ಘೋರ ಪಾಪಕ್ಕೆ ತುತ್ತಾಗುತ್ತಾನೆ ಎಂದು ಹೇಳುವುದರ ಮೂಲಕ ಎಚ್ಚರಿಕೆಯ ಮಾತುಗಳನ್ನು ಆಡಿದ್ದಾನೆ.

ಅಧ್ಯಾಯ ಹನ್ನೊಂದರಲ್ಲಿ ಕುದುರೆಯ ಉಪಚಾರ ಮತ್ತು ವೈದ್ಯ ಪದ್ಧತಿಯನ್ನು ಕುರಿತು ವಿವರಣೆ ನೀಡಲಾಗಿದೆ.

ಬಜೆಯಿಂಗು ತಿಗುಡೆ ಕಟುಕ
ವಜ್ರದ ತಿಬಜೆ ಪಂಚಲವಣ ಮಣಿಲೆಯ ಕಾರ್ಯಮ
ತ್ತಜ ಮೋದ ಮುದರ ಶೂಲಾ
ವಜ್ರಮಂ ಕಿಡಿಸಲ್ಕೆ ನೆರೆಗುಮಷ್ಣೋದಕದೊಳ್ (೧೧-೨)

ಬಜೆ, ಇಂಗು, ತಿಗಡೆ, ಶುಂಠಿ, ಮೆಣಸು, ಹಿಪ್ಪಲಿ, ಅತಿಬಜೆ, ಬಿಡಲವಣ, ಗಾಜು, ಇವನ್ನು ಬಿಸಿನೀರಿನಲ್ಲಿ ಹಾಕಿ ಕೊಡಲು ಕುದುರೆಗೆ ಸರ್ವಶೂಲಿಗಳು ನಿವಾರಣೆಯಾಗುವವು.

ತೊಡೆ ಜಂಘು ವಿಷಾಣಂ ಕೀ
ಳ್ವಿಡಿ ಕೋಶಂ ನಾಭಿಜಠರ ವಿಂತಿನಿತುಂಬಾ
ತೊಡೆ ತೊಡೆಯೊಳ್ ಪಾಂಡುವಿನೊಳ್
ಬಿಡುವುದು ಸೆರೆಯಂ ಬಳಿಕ್ಕ ಬಳಿವುದು ಕೆಸರಂ (೧೧-೬೫)

ತೊಡೆ, ಜಂಘು, ಪ್ರಜಾಪತಿ, ಕಿಬ್ಬಸುರು, ಅಂಡ, ಹೊಕ್ಕಳು, ಹೊಟ್ಟೆ ಇವು ಬಾತರೆ ತೊಡೆಯಲ್ಲಿಯೂ, ಪಾಂಡುವಿನಲ್ಲಿಯೂ, ಸೆರೆಯನ್ನು ಬಿಡಿಸಿ, ರಕ್ತ ಬಿದ್ದ ಬಳಿಕ ಆ ಗಾಯಕ್ಕೆ ಕೆಸರನ್ನು ತೊಡುವುದು.

ತಿಲಕದ ದಕ್ಕಪಮಾರ್ಗಂ
ಗಳ ದಕ್ಕಂ ಸುಟ್ಟು, ಮೂತ್ರದಿಂ ದರೆದು ನವೋ

ಜ್ವಲ ಚೂರ್ಣ ವಿಮಿಶ್ರಿತದುಂ

ವಿಲೇಪನಂಗೆಯ್ದು ಕಳಗೆ ದುಷ್ಟವ್ರಣಮಂ (೧೨-೪)

ಉತ್ತರಣೆ, ಕೊಳವಳಿಕೆ, ಇವನ್ನು ಸುಟ್ಟು ಬೂದಿಯನ್ನು ಗೋಮೂತ್ರದಲ್ಲಿ ಕಲಸಿಕೊಡಲು ತೊಡೆಯ ಕೆಟ್ಟ ಹುಣ್ಣುಗಳು ಮಾಯುವವು.

ನವನೀತದ ಬತ್ತಿಯ ತಿಗು

ಡುವುಂಗುರಂ ಕಳ್ಳಿ ಜೇನುತುತ್ತಮಿವಂಕೂ

ಡುವುದರೆದು ನಿಚ್ಚಲುಂ ಪೂ

ಡುವುದರೆದು ನಿಚ್ಚಲುಂ ಪೂ

ಸುವುದಾ ದುಷ್ಟ ವ್ರಣಂಗಳೆಲ್ಲಂ ತೀರ್ಗುಂ (೧೨-೧೫)

ಬೆಣ್ಣೆಯನ್ನು, ಮತ್ತಿಯ ತೊಪ್ಪೆಯನ್ನು, ಹಿರಿಯ ಮದ್ದಿನಬೇರು, ಅಂಬಲಿ, ಜೇನುತುಪ್ಪ, ಇವೆಲ್ಲವನ್ನು ಕೂಡಿಸಿ ಅರೆದು ಆ ಹುಣ್ಣಿಗೆ ದಿನಂಪ್ರತಿ ಕೊಡಲು ಎಲ್ಲಾ ಹುಣ್ಣುಗಳೂ ಮಾಯುವವು.

ಅಧ್ಯಾಯ ಹದಿಮೂರು, ಕುದುರೆಯ ಚಿಕಿತ್ಸೆಗೆ ಮೀಸಲಾಗಿದ್ದು, ಕುದುರೆಗೆ ಯಾವ ರೀತಿಯಾಗಿ ಸೂಕ್ತ ಸನ್ನಿವೇಶದಲ್ಲಿ ಚಿಕಿತ್ಸೆ ನೀಡಬೇಕು ಎಂಬ ವಿಚಾರವನ್ನು ಶಾಸ್ತ್ರಕಾರರು ಕ್ರಮಬದ್ಧ ರೀತಿಯಲ್ಲಿ ತಿಳಿಸಿದ್ದಾರೆ.

ಸುರಿಯೆ ಮುಖಲೋಚನಾಭ್ಯಾಂ

ತರದಿಂ ಶ್ಲೇಷಾಂಬು ಝೊಂಪಿಸುತ್ತಂ ಮೇಹಂ

ಪರಿಹರಿಸಿ ನಿಂದೊಡಂತಾ

ತುರಗಂ ಶ್ಲೇಷ್ಮಜ್ವರಸ್ಥನೆಂದರುವುದದಂ (೧೩-೧೮)

ಕುದುರೆಯ ಮುಖದಲ್ಲಿ, ಕಣ್ಣಿನಲ್ಲಿ, ಶ್ಲೇಷ ತೊರೆದು ಬೀಳುತ್ತಾ ಮೇವು (ಮೇಯ್ಯದೆ) ನೊಲ್ಲದೆ ಇದ್ದರೆ ಅದಕ್ಕೆ ಶ್ಲೇಷ್ಮಜ್ವರ ಬಂದಿದೆ ಎಂದು ತಿಳಿಯುವುದು.

ಸುರಿಯೆ ಮುಖದಿಂ ಶ್ಲೇಷ್ಮಂ ಕೃಷ್ಣಾರುಣಂ ಕ್ರಿಮಿ ಲದ್ದಿಯೊಳ್

ಪರಿಯೆ ಭರದಿಂದು ಮೆಯ್ಯಿಕ್ಕುತುಂ ಬಲಿದೇಳುತುಂ

ಪೊರಳೆ ಕರಮಾಪತ್ತಿಂ ಮೆಯ್ವಟ್ಟು ಬೀಸದೆ ಬಾಲಮಂ

ತುರಗಮಿರೆ ನಿರ್ವ್ಯಾಜಂ ಸಾಯ್ಗುಂ ಹಯಕ್ಕದು ನಿರ್ಣಯಂ (೧೨-೨೪)

ಮುಖದಿಂದ ಶ್ಲೇಷ್ಮ ಸುರಿಯುತ್ತಿರಲೂ, ರಕ್ತವೂ, ಹುಳುಗಳೂ ಕೂಡಿ ಲದ್ದಿಯ ಹಾಕಲು ಭಾರವಾಗಿ ಬೀಳುತ್ತೇಳುತ್ತ, ಹೊರಳುತ್ತ ಇರಲು ಈ ಗುಣದ ಕುದುರೆಗೆ ಮದ್ಯವನ್ನು ಹಾಕಿದರೆ ಬದಕುವದು. ಆದರೆ ಸ್ವಲ್ಪ ದಿನದನಂತರ ಸಾವು ನಿಶ್ಚಿತವೆಂದು ಪರಿಗಣಿಸಬೇಕು.

ಅಧ್ಯಾಯ ಹದಿನಾಲ್ಕು, ಆರೈಕೆ ಮತ್ತು ಚಿಕಿತ್ಸೆ ಕುರಿತು ಮಾಹಿತಿಯನ್ನು ಒದಗಿಸಿ ಕೊಡುತ್ತದೆ.

ಕಡುವಿಸಿತೊಳಿರ್ದು ತಾಳುಗೆ
ಪುಡಿವಿಡೆ ಮಖ ಮೆಣಗೆ ನೀರು ಮಾಹಾರ ಮುಮಂ
ಪಡೆಯದುಪಲಾಪದಿಂ ದಡ
ದಡಿದಿದ ತುರಗಕ್ಕೆ ತಾಳು ರೋಗಂ ತೋರ್ಕುಂ (೧೪-೧)

ಕುದುರೆ ಕಡು ಬಿಸಿಲಲ್ಲಿ ಇದ್ದು, ತಾಳುಗೆಬಣಗಿ, ಮುಖಬಣಗಿ, ನೀರನ್ನು, ಆಹಾರವನ್ನು ಒಲ್ಲದೆ ತಾಪದಿಂದ ದಡದಡಿಸಲು ಆದಕ್ಕೆ ತಾಳುರೋಗ ಬಂದಿದೆ ಎಂದು ತಿಳಿದು ಉಪಚರಿಸುವುದು.

ಪುಲಿಗಿಲಗೊಟ್ಟೆ ಕಬ್ಬಿನರಸಂ ಬಜೆ ಪಿಪುಲಿ ಮೂಲ ಮುಪ್ಪುಪಿ
ಪ್ಪಲಿ ರಜನೀದ್ವಯಂ ಸರುಷಪಂ ದಹನಂ ಕನಕಂಗಳೆಂಬಿವಂ
ಗಲಸಿ ಗವಾಂಬುವಿಂ ದಲಜ ಮೂತ್ರದಲಿಂತದನಟ್ಟು ಕೊಟ್ಟು ತಂ
ದಲಸದೆ ಪೂಸಿದಂದು ಕೆಳೆಗುಂ ಚರಯೋಗ ಮುಲೊಕ ಪಾತಮಂ (೧೪-೧೪)

ಹೊಂಗೆಯಬೀಜ, ಕಬ್ಬಿನರಸ, ಬಜೆ, ಹಿಪ್ಪಲಿಮೂಲ, ಉಪ್ಪು, ಹಿಪ್ಪಲಿ, ಅರಿಸಿನ, ಮರದರಿಸಿನ, ಸಾಸುವೆ, ಚಿತ್ರಮೂಲ ವಿಮ್ಮತ್ತ ಇವೆಲ್ಲವನ್ನು ಗೋಮೂತ್ರ ಮತ್ತು ಆಡಿನ ಮೂತ್ರದಿಂದ ಅರೆದು (ಕುಡಿಸಲು) ಹಚ್ಚಲು ಉಳೂಕರೋಗ ಮಾಯುವದು.

ಅಧ್ಯಾಯ ಹದಿನೈದು. ಕುದುರೆಗೆ ಬರುವ ರೋಗಗಳ ಮಾಹಿತಿಯನ್ನು ಕುರಿತು ವಿವರಿಸಲಾಗಿದೆ.

ಅರಗಣಲೆ ತಾರೆಮಣಿ ಶಿಲೆ
ಮರಿಚಂ ಮಾಗಧಮು ಶಂಖ ನಿಂಬ ಶಲಾಕೋ
ತ್ತರಮನಜಮೂತ್ರ ಮಂ ಪೊ
ಯ್ದರೆ ದೆಚ್ಚುಗೆ ಚಕ್ಷರೋಗಮಿರದು ಪಶಮಕುಂ (೧೫-೧೪)

ಅರಗುತೂಕ ೧, ಅಣಲೆಕಾಯಿ ತೂಕ ೨, ತಾರೆಕಾಯಿ ತೂಕ ೩, ಮೆಣಸಿಲೆ ತೂಕ ೪, ಮೆಣಸು ತೂಕ ೫, ಹಿಪ್ಪಲಿ ತೂಕ ೬, ಶಂಬ ತೂಕ ೭, ಬೇವಿನ ಕಡ್ಡಿ ತೂಕ ೮, ತೂಕವನ್ನು ಕೂಡಿಸಿ ಆಡಿನ ಮೂತ್ರದಲ್ಲಿ ಅರೆದು ಕಣ್ಣಿಗೆ ಹಚ್ಚಲು ಎಲ್ಲಾ ಚಕ್ಷು ರೋಗಗಳು ಮಾಯವಾಗುವವು.

ಕಳಿಯಂ ಸೋದಿಸಿ ತಂದದ
ರೆಳಗಲ್ಲಮನಿಕ್ಕಿ ಮಾತುಲಿಂಗಾಮ್ಲ ಮುಮಂ
ತಿಲತೈಲಮುವಂ ಪೊಯ್ದೂ
ಗಳೆ ಬೆಚ್ಚನೆ ಮಾಡಿ ಕಿವಿಯೊಳೆರೆದೊಡೆ ತೀರ್ಗುಂ (೧೫-೧೭)

ಅಂಬಿಲವನ್ನು ಸೋಸಿ, ಹಸಿಯ ಶುಂಠಿಯನ್ನು ಜಜ್ಜಿಕುಟ್ಟಿ ಮೊದಲದ ಹಣ್ಣಿನ ರಸವನ್ನು ಕೂಡಿಸಿ ಎಳ್ಳೆಣ್ಣೆಯನ್ನು ಬೆರಸಿ, ಕಾಯಿಸಿ ಬಿಸಿಲಿನಲ್ಲಿಟ್ಟು ನಂತರ ಕಿವಿಯಲ್ಲಿ ಎರೆಯಲು ಕರ್ಣರೋಗ ಮಾಯುವದು.

ಅಧ್ಯಾಯ ಹದಿನಾರು. ಕುದುರೆಯ ಪೋಷಣೆಯ ಕುರಿತು ಮಾಹಿತಿಯನ್ನು ನೀಡುತ್ತದೆ.

ಸ್ಥಾವರ ಜಂಗಮವಿಷಹರ
ಮಾ ವಸುಧೆಯೊಳೊಂದೆ ದಿವ್ಯ ಮೀಲಿಕೆ ಪೆರತಂ ಭಾವಿಸದೆ ಕುಡುಗೆ ನರತುರ
ಭಾವಿಸದೆ ಕುಡುಗೆ ನರತುರ
ಗೌವಳಿಗೆ ವಿಷಕ್ಕೆ ಕರಿಯ ನೀಲಿಯಬೇರಂ (೧೬-೧೦)

ಸ್ಥಾವರವೆಂದರೆ ಮರನಡುಬಳ್ಳಿ, ಕಾಯಿ, ಹೂವು, ಬೇರಿನಿಂದಾದ ವಿಷಗಳು, ಜಂಗಮವೆಂದರೆ ಹಾವು ಮೊದಲಾದ ಕ್ರೂರ ಜೀವಿಗಳಿಂದಾದ ವಿಷ ಈ ಎರಡು ಪ್ರಕಾರಕ್ಕೂ ಕುದುರೆ, ಮನುಷ್ಯರಿಗೂ ಕರಿಯ, ನೀಲಿಯ ಬೇರನ್ನು, ಅಂಬಿಲದಲ್ಲಿ ಆಗಲಿ ಹಳೆಯ ನೀರಿಂದಲಾಗಲಿ ಅರೆದು, ಎರೆಯಲು ಎಲ್ಲಾ ವಿಷವು ಮಾಯವಾಗುವುದು.

ಆರುನೂರೆನೆಂಟು ನೂರಂ
ಸೆರೆ ಸಾಸಿರ ಮಣಿಲೆಯಂ ತಥಾಕ್ರಮಂದಿಂದಂ
ಕರುಗುದರೆ ಮಧ್ಯ ಮೋತ್ತಮ
ಮರೆದಿಕ್ಕುಗೆ ಮೂರು ಸಪ್ತಕಂ ಒಪ್ಪಿನೆಗಂ (೧೬-೩೨)

ಕಿರುಗುದುರೆಗೆ ಮೆಣಸಿನೆಲೆಯನ್ನು ಮೊದಲು ಹೇಳಿದ ಓಗರದಲ್ಲಿ ೬೦ ತೂಕವನೂ ಇಪ್ಪತ್ತೊಂದು ದಿನ ಪರಿಯಂತರ ಕೊಡುವದು ಅದರಿಂದ ದೊಡ್ಡ ಕುದುರೆಗೆ ತೂಕದ ಮೆಣಸಿನೆಲೆಯನ್ನು ೨೧ ದಿನ ಓಗರದಲ್ಲಿ ಕೊಡುವದು. ಹಿರಿಯ ಕುದುರೆಗೆ ೧೦೦ ತೂಕವನ್ನು ೨೧ ದಿನ ಕ್ರಮದಲ್ಲಿ ಕೊಡಲು ಸರ್ವರುಜೆರೋಗ ಶಮನವಾಗುವವು. ಹೀಗೆ ಕವಿ ಒಂದು ಕೃತಿಯನ್ನು ರಚಿಸುವಲ್ಲಿ ತನ್ನ ಪಾಂಡಿತ್ಯಪೂರ್ಣ ವಿಚಾರಧಾರೆಗಳಿಂದ ಕಾವ್ಯವನ್ನು ಶಾಸ್ತ್ರ ಚೌಕಟ್ಟಿಗೆ ಅಳವಡಿಸುವದರಿಂದ ಓದುಗರಿಗೆ ನಿಖರವಾದ ಮಾಹಿತಿಯನ್ನು ಒದಗಿಸುವುದರಲ್ಲಿ ಯಶಸ್ವಿಯಾಗಿದ್ದಾನೆ.

೩.೩.೪. ಪದ್ಮಣಪಂಡಿತನ ಹಯಶಾಸ್ತ್ರ

ಈ ಕೃತಿಯು ಮಲೆಯೂರಿನ ಪದ್ಮಣ ಪಂಡಿತನಿಂದ ರಚನೆಗೊಂಡಿದೆ. ಕುದುರೆಯ ಶಾಸ್ತ್ರವನ್ನು ಹೇಳುವ ಈ ಗ್ರಂಥವು ಹಯಶಾಸ್ತ್ರಸಾರ ಸಮುಚ್ಚಯ ಅಥವಾ ತುರಗಶಾಸ್ತ್ರ ಎಂದು ಕರೆಯಿಸಿಕೊಂಡಿದೆ. ಕೆ. ೪೨೪ ನಂಬರಿನ ೧೫. ೮x೧.೮ ಅಳತೆಯನ್ನು ಹೊಂದಿದ್ದು, ಕಂದ ವೃತ್ತಗಳಿಂದ ರಚಿತವಾದ ಕೃತಿ ೧.೧೨೦ ಪತ್ರವನ್ನು ಹೊಂದಿದೆ. ಇದು ಸದ್ಯ ಮೈಸೂರು ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿ

ಭಂಡಾರದಲ್ಲಿದ್ದು, ಕುದುರೆಯ ಚಿಕಿತ್ಸಾಕ್ರಮದ ಮಾಹಿತಿಯನ್ನು ನೀಡುತ್ತದೆ. ಈ ಗ್ರಂಥಕ್ಕೆ ಇನ್ನೊಂದು ಹೆಸರಿದೆ ಚಾಮರಾಜೀಯವೆಂದೂ" ಕೃತಿಯ ಆರಂಭದ ಪದ್ಯವೊಂದು ಈ ರೀತಿಯಲ್ಲಿ ಸ್ತುತಿಸುತ್ತದೆ.

ಶ್ರೀಮದ್ಗೀರ್ವಾಣ .... ಮಕುಟತಟ ಪ್ರೋಲ್ಲಸ ತ್ಪದ್ಮರಾಗೋ
ದ್ದಾಮ .... ಚರಣ ಸರೋಜಂ ಸುನಾಶಿರವೈರಿ
ಸ್ತೋಮಾಬ್ಧ ಕ್ರೂರ ಜಂಝೂನಿಲ ನಗಣಿತ ಸದ್ಭಕ್ತವಾರಾಶಿಚಂದ್ರಂ
ಶಾಮಾಂಗಂ ಜ್ಯೋತಿ ಲಕ್ಷ್ಮೀರಮಣ ನಮಗೆ ಸಂಸಿದ್ಧಿಯಂ ಮಾಳ್ಕೆದೇವಂ ||೧||

ಪದ್ಯವು ಶ್ರೀ ಮದ್ಗೀರ್ವಾಣ, ಸುನಾಶಿರವೈರಿ, ವಾರಾಶಿಚಂದ್ರ ಶಾಮಾ, ಜ್ಯೋತಿ ಲಕ್ಷ್ಮೀರಮಣ ಎಂದು ಪ್ರಾರ್ಥಿಸುವುದರ ಜೊತೆಗೆ ಕ್ರೂರ ಶಕ್ತಿಯನ್ನು ನಿರ್ನಾಮ ಮಾಡುವ ವಿಷ್ಣುವೇ ನಮಗೆ ಸಕಲ ಸಿದ್ಧಿಯನ್ನು ಕೊಡು ಎಂದು ಬೇಡಿಕೊಳ್ಳುತ್ತಾ ಕವಿ ಕೃತಿಯನ್ನು ಆರಂಭಿಸಿದ್ದಾನೆ.

ಕರ್ನಾಟ ಭಾಷೆಯಿಂದಂ
ನಿರ್ನೇತಸು ಕಂದ ವೃತ್ತವಚನಗಳಿಂದಂ
ವರ್ನಿ...... ಗುರುಲಘು
ವರ್ನಾಹುತಿಯಿಲ್ಲದಂತೆ ಸುಲಲಿತ ಪದದಿದಿಂ ||೧||

ಕನ್ನಡ ಭಾಷೆಯಿಂದ ರಚಿತವಾದ ಕನ್ನಡದ ಲಕ್ಷಣಗಳೇ ಆಗಿರುವ ಕಂದ, ವೃತ್ತ ವಚನಗಳಿಂದ ಈ ಕೃತಿಯನ್ನು ರಚಿಸಿದ್ದೇನೆ. ಅಲ್ಲದೇ ಗುರುಲಘುಗಳು ಅರ್ಥಕೆಡದ ಹಾಗೆ ಸುಲಲಿತ ಪದದಿಂದ ಸರಳವಾಗಿ ವಿವರಿಸಿದ್ದೇನೆ ಎಂದು ಹೇಳಿಕೊಂಡಿದ್ದಾನೆ. ಚಿಕಿತ್ಸೆಯನ್ನು ಕುರಿತು ಕೃತಿಯ ಕೊನೆಯ ಭಾಗದಲ್ಲಿ ಈ ರೀತಿಯ ಸ್ಪಷ್ಟಪಡಿಸುತ್ತಾನೆ.

"ವುದರ ಶೂಲಿಯುಂ ಭಗಂದರಮುಂ ಕೆಟ್ಟು ತುರಗಂ ಸುಖಿಯಪ್ಪುದು ಯಿದು
ಶ್ರೀಮದ್ರಾಜಾಧಿರಾಜ ರಾಜ ಕುಲತಿಕ ರಾಜ ಶಿಖಾಮಣಿ ಶ್ರೀಮಚ್ಚಾಮ
ರಾಜಭೂಪಾಲಕಾರಿತ ಹಯಸಾರಸ ಮುಚ್ಚಯಾಭಿಧಾನ ಚಾಮ
ರಾಜೀಯ ಗ್ರಂಥವೆಂಬ ಹಯಶಾಸ್ತ್ರದೊಳ್ ಶ್ವಸ್ತಿಶ್ರೀ
ಜಯಾಭ್ಯುದಯ ಶಾಲಿ ವಾಹನ ಶಕವರ್ಷ ೧೫೪೯ನೆಯ ಪ್ರಭವಸಂವ
ತ್ಸರದ ಚೈತ್ರಮಾಸ ಶುಕ್ಲಪಕ್ಷ ಪ್ರತಿಪತ್ರಥಿಯೊಳ್ ತುರಗಶಾಸ್ತ್ರಂ
ಬರೆದಾತಂ ಪದ್ಮಣ ಪಂಡಿತಾರ್ಯನಳಿಯ ಪದ್ಮರಸಂ ಎಂದಿದೆ"[೧೬]

ಮೇಲಿನ ಈ ಸಾಲುಗಳನ್ನು ಗಮನಿಸಿದಾಗ 'ಈ ಕೃತಿಯ ಕಾಲ ಕ್ರಿ.ಶ.೧೬೨೭ ಎಂದಾಗುತ್ತದೆ' ಇದನ್ನು ವಿಚಾರಿಸಿ ನೋಡಲಾಗಿ ಇತನ ಕಾಲವನ್ನು ೧೬-೧೭ನೇ ಶತಮಾನದ ಮಧ್ಯಭಾಗ ಎಂದು ಗುರುತಿಸಬಹುದು.

ಕೃತಿಯು ಒಟ್ಟು ೨೪ ಅಧ್ಯಾಯಗಳನ್ನು ಒಳಗೊಂಡಿದೆ. ಕೃತಿಯನ್ನು ಪರಿಶೀಲಿಸಿದಾಗ ಓದಲಿಕ್ಕೆ ಬಾರದಂತಹ ಪರಿಸ್ಥಿತಿಯಲ್ಲಿದ್ದು ಗರಿಗಳು ತ್ರುಟಿತಗೊಂಡಿವೆ. ಅತ್ಯಂತ ಜೀರ್ಣಾವಸ್ಥೆಯಲ್ಲಿರುವ ಕೃತಿ ತಿರುವು ಮುರುವಾಗಿದೆ ಮೊದಲ ಗರಿಗಳು ಯಾವುವು? ಮಧ್ಯದ ಗರಿಗಳು ಯಾವುವು? ಎಂಬುದು ತಿಳಿಯಲು ಸಾಧ್ಯವಾಗುವುದಿಲ್ಲ. ಅಲ್ಲದೇ ಕೃತಿಯಲ್ಲಿ ಬೇರೆ ಕೆಲವು 'ಜ್ಯೋತಿಷ್ಯ, ಮಂತ್ರ, ವೈದ್ಯವಿಷಯಗಳು ಕೂಡಿಕೊಂಡಿರುವುದನ್ನು ಕಾಣಬಹುದು.' ಒಟ್ಟಾರೆ ಗ್ರಂಥ ಜೀರ್ಣವಾಗಿ ಪ್ರಕಟಣೆಗೆ ಬಾರದಂತಹ ಸ್ಥಿತಿಯಲ್ಲಿದೆ.

೩.೩.೫. ಅಶ್ವಪರೀಕ್ಷೆ ಸಚಿತ್ರ

ಮೈಸೂರು ದೊರೆ ಚಾಮರಾಜ ಒಡೆಯರ (೧೮೬೮) ಕಾಲದಲ್ಲಿ ರಚಿತವಾದ ಈ ಕೃತಿಯು ಕುದುರೆಯ ವೈದ್ಯೋಪಚಾರದ ಬಗ್ಗೆ ಮಾಹಿತಿಯನ್ನು ನೀಡುತ್ತದೆ. "ಕೆ.ಎ.೫೨೭ ನಂಬರಿನ ೧೧.೮x ೯" ಅಳತೆಯ ೪೫ ಪತ್ರಗಳನ್ನು ಹೊಂದಿದ್ದು ಗದ್ಯರೂಪದಲ್ಲಿದೆ. ಕವಿ ಅಶ್ವಪರೀಕ್ಷೆಯನ್ನು ನೋಡುವ ಲಕ್ಷಣಗಳನ್ನು ಕುರಿತು ಹೇಳಿದ್ದಾನೆ.

> "ಶ್ರೀ ಗುರುಭ್ಯೊನಮಃ ॥ ಅಶ್ವಪರೀಕ್ಷೆ ನೋಡತಕ್ಕ ಕ್ರಮ ಪ್ರಾರಂಭ
> ಪೂರ್ವದಲ್ಲಿ ಬ್ರಂಹ್ಮದೇವರಿಂದ ಅಶ್ವವುತ್ಪತ್ತಿ ॥ ಬ್ರಂಹ್ಮ
> ದೇವರ ಜಯ ಕಣು ಬಿಂಧುಗಳಿಂದಾ ಹುಟ್ಟಿದವೂ । ಅನಂತರ ಅಗ್ನಿ
> ಯಿಂದಲೂ ಹುಟ್ಟಿದವೂ । ದೂರ್ವಾಸರೃಷಿಗಳ ಶಾಪದಿಂದಾ ಯಿಂದ್ರಪತ್ನಿ
> ಕೊಡೆಯಲಾ ಕುದುರೆಗಳು ಸಮುದ್ರದಲ್ಲಿ ಬಿದವೂ ಆ ಮೇಲೆ ದೇವತೆಗಳೂ
> ರಾಕ್ಷಸರೂ ಸಮುದ್ರಮಥನ ಮಾಡುವಾಗಾ ಅಮೃತ ಹುಟ್ಟುವ ಸಮಯದಲ್ಲಿ"[೧೭]

ಎಂದಿರುವುದನ್ನು ಅವಲೋಕಿಸಿದಾಗ ಆರಂಭದ ಪದ್ಯವನ್ನು ಗಮನದಲ್ಲಿಟ್ಟುಕೊಂಡು ನೋಡಿದಾಗ ಕುದುರೆಯ ಜನನದ ಬಗ್ಗೆ ಪೌರಾಣಿಕ ಹಿನ್ನಲೆಯನ್ನು ಕೊಡುತ್ತಾನೆ. ಆದ್ದರಿಂದ ಕವಿ ಈ ಕೃತಿಯನ್ನು ಶಾಲಿಹೋತ್ರನ ಕೃತಿಯನ್ನು ಆಕರವಾಗಿಟ್ಟುಕೊಂಡು ರಚಿಸಿರಬಹುದು. ಏಕೆಂದರೆ ಅಭಿನವಚಂದ್ರನ ಕೃತಿಯಲ್ಲಿ ಬರುವಂತೆ.

> "ಸುರರುಂ ದಾನವರುಂ ಭೋ
> ಗ್ಗರೆದಮ್ಮ ತಾಂಭೋಧಿ ಮಥನಮಂ ಮಾಡೆ ನಭಂ
> ಬಿರಿವಿನೆಗಂ ಕಿಳುರುತ್ತಂ
> ಶರಧಿಯಲು ದಯಿಸಿದವ ಮೃತ ಸಂಭವ ತುರಗಂ (೧-೨೨)

ಎಂದಿರುವುದರಿಂದ ಮೇಲಿನ ಗದ್ಯಕ್ಕೂ ಮತ್ತು ಕೆಳಗಿನ ಪದ್ಯಕ್ಕೂ ಸಾಮ್ಯತೆ ಇದೆ. ಕವಿ ಶಾಲಿಹೋತ್ರನನ್ನು ಅನುಸರಿಸದೇ ಹೋದ ಪಕ್ಷದಲ್ಲಿ ಅಭಿನವಚಂದ್ರನ ಕೃತಿಯನ್ನು ಆಶ್ರಯಿಸಿ ಕೃತಿಯನ್ನು ಬರೆದಿರುವ ಸಾಧ್ಯತೆಯಿದೆ.

ಕೃತಿಯ ವಿಶಿಷ್ಟವೆಂದರೆ 'ಮೋಡಿ ಲಿಪಿಯ' ಬರವಣಿಗೆ ಹೊಂದಿದ್ದು, ಕುದುರೆಯ ಲಕ್ಷಣವನ್ನು "೧-೧೦೫ ಉಲ್ಲೇಖಗಳಿಗೆ ವರ್ಣರಂಜಿತ ಕುದುರೆಯ ಚಿತ್ರಗಳಿದ್ದು, ವಿವರಣೆಗೆ ಅನುಗುಣವಾಗಿವೆ. ೧೦೯-೨೦೩ ಉಲ್ಲೇಖಗಳಿಗೆ ಚಿತ್ರವಿಲ್ಲ. ವಿವರಣೆ ಮಾತ್ರವಿದೆ

ಉದಾಹರಣೆಗೆ

ಈ ಲಕ್ಷಣವುಳ್ಳ ಕುದುರೆಗಳ ಹಿಂದೂಸ್ಥಾನಿಯಲ್ಲಿ 'ತೆಡಿಕುರನ್' ಹೇಳುತ್ತಾರೆ. ಯಿದಕೆ ಮೂರು ಕಿವಿ ದೊಡದುಯೆರಡು ವಂದು ಚಿಕ್ಕದುಯಿದರ ಮಧ್ಯೆ ಶಿಳಿದಂ ಥಾದುಯಿದು ರಾಜಾಹರಿಶ್ಚಂದ್ರ ಮಹಾರಾಜನ ಮನೆಯಲ್ಲಿಯಿತ್ತು ಆಥೊರಿಗೆ ಕಷ್ಟ ದಾರಿದ್ರ ಬಂದು ಪ್ರಾಪ್ತವಾಯಿತು ಅದು ನಿಮಿತ್ತ್ಯಯಿ ಕುದುರೆ ಲಕ್ಷಣ ಕೆಟ್ಟದೂ ಈ ರೀತಿಯಾಗಿ ವಿವರಣೆಗಳು ಇವೆ.

ಇನ್ನೂ ಕುದುರೆಯ ವೈದ್ಯೋಪಚಾರ ಕುರಿತು ಈ ಕೆಳಗಿನಂತೆ ಮಾಹಿತಿಯನ್ನು ನೀಡುತ್ತದೆ.

> "ಜುಲಾಬು ಆಗುವುದಕ್ಕೆ ನೀರುಗೋಣೀಸೊಪ್ಪು ೨-೩ ಹಿಡಿ ಅದಕಚ್ಚ
> ಚೀಯಶಿ ೧ ತೋಲಾ ಸೈಂದಲವಣಾ ಪುಡಿ ಮಾಡಿ ಹಾಕಿ ೧ ಬ್ಯಾಲದ
> ಕಾಯಷ್ಟು ಉಂಡೆಮಾಡಿ ಕೊಟ್ಟರೆ ಜುಲಾಬು ಆಗುತ್ತೆ ಬಂದಾಗ
> ಬೇಕಾದರೆ ಅದರ ಮೇರೆಗೆ ಕೊಡುವುದೂ ಕುದುರೆ ಲಾಗರಿ ಆಗಿ ಯಿಪ್ಪಂಥೆ
> ತಾಜಾ ಆಗಕ್ಕದಕೆ ಆವುಷದಿ ಹಿರಾ ಗೊಗ್ಗಳ ೧ತೊಲಾ ಬೆಲ್ಲಾ ಸೇರಿಸಿ
> ಯಿದನೆಲ್ಲ ಮಿಲಾಯಿಶಿ ೨೧ ದಿವ್ಸಯಿ ಮೇರೆಗೆ ತಿಂನಿಸಬೇಕು. ವಣಗದ
> ಹಸಿಗಡಲೆ ಹೊಟ್ಟೆ ತುಂಬಾ ತಿಂನಿಸಬೇಕು. ಹರಿಯೋನೀರು ಕುಡಿಸ
> ಕೂಡದು ಭಾವೀ ನೀರು ಕೂಡ್ಯಬೇಕೂ ಕುದುರೆ ಬುವತ್ತಾಗಿ ತಾಜಾ ಆಗುತ್ತೆ"[೧೮]

ಇಷ್ಟು ಕೃತಿಯ ಆಶಯವಾಗಿದೆ. ಇನ್ನೂ ಈ ಕೃತಿಯ ಕತ್ರು ಯಾರು ಎಂಬುದು ಕೃತಿಯ ಒಡಲಲ್ಲಿ ಎಲ್ಲಿಯೂ ಪ್ರಸ್ತಾಪಗೊಂಡಿಲ್ಲ.

೩.೩.೬. ಜಯದತ್ತನ 'ಅಶ್ವವೈದ್ಯಕ'

"ಸಾಮಂತ ಅರಸನಾಗಿದ್ದ ವಿಜಯದತ್ತನ ಮಗ ಜಯದತ್ತನು ಶಾಲಿಹೋತ್ರವನ್ನು ಆಧರಿಸಿ ಅಶ್ವವೈದ್ಯಕವನ್ನು ಬರೆದಿದ್ದಾನೆ. ೬೮ ಅಧ್ಯಾಯ ೧೧೦೮ ಶ್ಲೋಕಗಳಿಂದ ಕೂಡಿದ ಈ ಕೃತಿಯಲ್ಲಿ ೧. ಉದ್ದೇಶಾಧ್ಯಾಯ ೨. ಪದೇಶಾಧ್ಯಾಯ, ೩. ಸರ್ವಲಕ್ಷಣಾಧ್ಯಾಯ, ೪. ಆಯುರ್ವಯೋಜ್ಞಾನ, ೫. ದಶಕ್ಷೇತ್ರಾಧ್ಯಾಯ, ೬. ಜನ್ಮದೇಶ, ೭. ವಾಹನ ವಿಧಾನ, ೮. ಬಂಧ್ಯೋಪಚಾರ, ೯. ಗರ್ಭಜ್ಞಾನ, ೧೦. ಸೂತಿಕೋಪಚಾರ, ೧೧. ದ್ರವ್ಯಮಾತ್ರಜ್ಞಾನ, ೧೨. ನಿಘಂಟು, ೧೩. ಋತುವಿಭಾಗ ೧೪. ಕ್ಷಾರ ಅಗ್ನಿ ಶಸ್ತ್ರ ವಿಧಾನ, ೧೫. ಶಿರಾವೇದ, ೧೬. ನಿರೂಹಾನುವಾಸನ, ೧೭. ನಸ್ಯಾಧ್ಯಾಯಾ, ೧೮. ಸ್ವೇದ

ವಿಧಾನ, ೧೯. ಸ್ನೇಹ ಪ್ರಯೋಗ, ೨೦. ತೈಲವಿಧಾನ, ೨೧. ಘೃತವಿಧಾನ, ೨೨. ಶಾಂತೋಪಚಾರ, ೨೩. ಸ್ವಸ್ಥ ಅರಿಷ್ಟ, ೨೪. ವೇದಾರಿಷ್ಟ, ೨೫. ಕೀಟಾರಿಷ್ಟ, ೨೬.ಮೃಗರೋಗ, ೨೭. ವಾತಾದಿಕೋಪ, ೨೮. ವ್ಯಾಧಿನಿರ್ದೇಶ, ೨೯. ಮುಖರೋಗ, ೩೦. ಅಕ್ಷಿರೋಗ, ೩೧. ಶಿರೋರೋಗ ಚಿಕಿತ್ಸೆ, ೩೨. ಲಂಗಿತರೋಗ, ೩೩.ಕರ್ಣರೋಗ, ೩೪. ಕಾಸರೋಗ, ೩೫. ಹಿಕ್ಕಾಶ್ವಸ, ೩೬. ವ್ರಣರೋಗ, ೩೭. ಸಿಂಘಾನರೋಗ, ೩೮. ಘೃಣಿರೋಗ, ೩೯. ಪಾದರೋಗ, ೪೦. ಜ್ವರರೋಗ, ೪೧. ಅಜೀರ್ಣರೋಗ, ೪೨.ಅತಿಸಾರ, ೪೩. ಶೂಲರೋಗ, ೪೪. ಉದಾವರ್ತರೋಗ, ೪೫. ಪ್ರಸ್ಕರೋಗ, ೪೬. ಕ್ರಮಿಕೋಷ್ಠ, ೪೭. ಮೂತ್ರ ಗ್ರಹರೋಗ. ೪೮. ಕುಷ್ಠರೋಗ, ೪೯. ಶೋಥರೋಗ, ೫೦. ಮುಷ್ಕರೋಗ, ೫೧. ಜೌನೀತರೋಗ, ೫೨. ಉದರರೋಗ, ೫೩. ಆರ್ಶೋರೋಗ, ೫೪. ಉತ್ಕರ್ಣರೋಗ, ೫೫. ವಾತವ್ಯಾಧಿ, ೫೬. ವಿನ್ಮಾದ, ೫೭. ಗ್ರಹಗೃಹೀತ. ೫೮. ಶೋಷರೋಗ, ೫೯. ವಾತವಲಾಸಕ. ೬೦. ವ್ಯಾಪದ, ೬೧. ವಿಷರೋಗ, ೬೨. ಅಪಸ್ಮಾರ, ೬೩. ಷಟ್ಪದೀ ಭಕ್ಷಣ. ೬೪. ಸಾಧ್ಯಾ ಸಾಧ್ಯ ವಿವೇಕ. ೬೫. ಪ್ರಕೃತಿ ಜ್ಞಾನ. ೬೬. ರಸೋನಕಲ್ಪ. ೬೭. ಗುಗ್ಗುಲಕಲ್ಪ, ೬೮. ರಸಾಯನ ಕಲ್ಪ ಹೀಗೆ ಶಾಲಿಹೋತ್ರನನ್ನು ಅನುಸರಿಸಿ ಕೃತಿ ಬರೆದ ಜಯದತ್ತ ಕುದುರೆಗೆ ಸಂಬಂಧಿಸಿದ ಎಲ್ಲಾ ಬಗೆಯ ಸಮಗ್ರ ರೋಗಗಳಿಗೆ ಉಪಚರಿಸುವಂತಹ ಕೃತಿಯು ಶಾಸ್ತ್ರದೃಷ್ಟಿಯಿಂದ ಒಂದು ಬೃಹತ್ ಗ್ರಂಥವಾಗಿ ಬೆಳೆದಿರುವುದು ನಮ್ಮೆಲ್ಲರ ಭಾಗ್ಯವೇ ಸರಿ. ಇಂತಹ ಕೃತಿಗಳು ಅನುಭವದಿಂದ ಬಂದವುಗಳಾಗಿವೆ. ನಮ್ಮ ಹಿರಿಯ ಪರಂಪರೆ ಪ್ರಯೋಗಶೀಲತೆಯ ಮೂಲಕ ಬರೆದ ಬರವಣಿಗೆಗಳು ಕಾಲಾಂತರದಲ್ಲಿ ಶಾಸ್ತ್ರವಾಗಿ ಮಾರ್ಪಟ್ಟವು. ವಿದ್ಯಾವಂತರಲ್ಲದ ಅನಕ್ಷರಸ್ಥ ಆಯುರ್ವೇದ ಪರಿಣಿತರಾದ ಅನೇಕ ಜನರು ಇಂದಿಗೂ ಗಿಡಮೂಲಿಕೆಗಳಿಂದ ಹಳ್ಳಿಯಲ್ಲಿ ದನಕರುಗಳಿಗೆ ಮತ್ತು ಮನುಷ್ಯರಿಗೆ ವೈದ್ಯೋಪಚಾರವನ್ನು ಮಾಡುವ ಪದ್ಧತಿಯನ್ನು ಕಾಣುತ್ತೇವೆ. ಹೀಗಾಗಿ ಒಂದು ಶಾಸ್ತ್ರ ಕೃತಿಯಿಂದ ಒಂದು ಕಾಲದ ಜನರ ಜೀವನಪದ್ಧತಿ, ಅವರು ಬದುಕಿಗಾಗಿ ಕೈಗೊಳ್ಳುವ ವಿಧಾನಗಳು ಮುಂತಾದ ವಿಷಯಗಳು ಕೃತಿಯಲ್ಲಿ ಆಳವಡಿಸಿಕೊಂಡು ಬರೆದಿರುವುದು ಒಂದು ರೀತಿಯಲ್ಲಿ ದಾಖಲೆಗಳಾಗಿ ಕಂಡುಬರುತ್ತವೆ.

೩.೩.೭ ನಕುಲನ 'ಅಶ್ವಚಿಕಿತ್ಸಿತಮ್'

"ಮಹಾಭಾರತದಲ್ಲಿ ಬರುವ ಯುಧಿಷ್ಠರ ಸೋದರರಾದ ನಕುಲ ಸಹದೇವರಿಗೆ ದ್ರೋಣಾಚಾರ್ಯರು ಗವಾಶ್ವ ಚಿಕಿತ್ಸೆಗಳನ್ನು ಕಲಿಸಿದ್ದರೆಂದು ತಿಳಿದುಬರುತ್ತದೆ. ಗವಾಶ್ವಶಾಸ್ತ್ರ ಚಿಕಿತ್ಸಾ ಪ್ರಣೇತಾ ಎನ್ನುವುದು ನಕುಲನ ಬಗ್ಗೆ ತಿಳಿದು ಬರುವ ಸಂಗತಿ. ಈತನ 'ಅಶ್ವಚಿಕಿತ್ಸಿತಮ್' ಎನ್ನುವ ಗ್ರಂಥ ಉಪಲಬ್ಧವಿದೆ" ಅದರಲ್ಲಿ ತನ್ನನ್ನು ಕುರಿತು:

> ಜಯತಿಚ ಪಾಂಡವನಾಥೋ ಧರ್ಮಸನಾಥೋ ಯುಧಿಷ್ಠಿರೋ ನೃಪತಿಃ
> ಭೀಮಾರ್ಜುನ ಸಹದೇವಾಸ್ತದನು ಚಯೇ ವಾಜಿಶಾಸ್ತ್ರ ತತ್ವಜ್ಞಃ (೧-೨)

ದೃಷ್ಟ್ವಾ ಸಮ್ಯಜ್ಞ ಕುಲಂ ಶಾಸ್ತ್ರಂ ಕೃತ್ಸ್ನಂಚ ಶಾಲಿಹೋತ್ರೀಯಮ್
ಬ್ರೂತೇ ಶಾಸ್ತ್ರಾರ್ಥ ಮನ್ಯಚ್ಛಾಸ್ತ್ರಂ ಕೃತ್ವಾಸಮಾಸೇನ (೧-೨) ಎಂದಿದ್ದಾನೆ.

ಕನ್ನಡದ ಅಲಂಕಾರ ಶಾಸ್ತ್ರ ಗ್ರಂಥವಾದ ಕಾವ್ಯಾವಲೋಕನದಲ್ಲಿ ಈ ರೀತಿಯಾಗಿ ಹೇಳಲಾಗಿದೆ.

ಅನ್ನೋಡರ್ಜುನ ನೆಂಬನಂತಕಸುತಂ ಭರ್ತಾರನೆಂಬಾತನಿ
ನ್ನೇ ನಂದನ್ನ ವಿಪಾಕಿ ವಲ್ಲಭನವಂ ಭೀಮಂ ಹಯಾದ್ಯಕ್ಷನಾ
ಸನ್ನದ್ದ ನಕುಲಂ ಗವಾಧಿಕೃತನಾ ಸಾದೇವನೆಂದಾದಳಿಂ
ದನ್ನ ರ್ಕೀಚಕರಳ್ಕಿದರ್ಮಗಳಿವಳ್ ಸೈರಂಧ್ರಿ ಪಾಂಚಾಳನಾ (೧೭೮)

ಎನ್ನುವ ಉದಾಹರಣ ಪದ್ಯ ದೊರೆತಿದ್ದು, ನಕುಲನು ಹಯಾಧ್ಯಕ್ಷತಾ ಸನ್ನದ್ಧನೆಂಬುದು ತಿಳಿದು ಬರುತ್ತದೆ.

ನಕುಲನ ಅಶ್ವಚಿಕಿತ್ಸೆಯಲ್ಲಿ ಪ್ರಶ್ನಕಥನಮ್, ಜಾತಿ, ವರ್ಣ, ಆವರ್ತ, ದಂತ, ಅವಯುವ, ಪ್ರಮಾಣ, ವೇಗ, ಆರೋಹಣ, ವಾಹನವಿರಣ, ಧಾತುಪರೀಕ್ಷೆ, ಋತುಚರ್ಯೆ, ನಶ್ಯ-ಪಿಂಡ, ಘೃತವಿಧಾನ, ಕ್ವಾಥ, ವಿಷ, ಅಶ್ವಶಾಲಾವಿಧಿ, ಎನ್ನುವ ಅಧ್ಯಾಯಗಳಿವೆ. ನಕಲುನು ತನ್ನ ಕೃತಿಯ ಕುರಿತು ಹೀಗೆ ಹೇಳಿದ್ದಾನೆ.

ಪ್ರಶ್ನೋಜಾತಿ ವರ್ಣಮಾವರ್ತ ದಂತಾ
ಲಕ್ಷ್ಮಂ ವೇಗಾವಾಹನಂ ಧಾತುರಸ್ತ್ರಮ್
ಕಾಲೋನಸ್ಯಂ ಪಿಂಡ ಮಾಜ್ಯಂ ಕಷಾಯಂ
ಶಾಲಾಂ ಚೇಷ್ಠ ವಾಜಿನಾಮತ್ರ ವಕ್ಷ್ಯೇ (೧-೪)

ನಕುಲನ ಪ್ರಕಾರ ಅಶ್ವಶಾಸ್ತ್ರವನ್ನು ಬರೆದವರ ವಿವರ ಈ ರೀತಿಯಾಗಿ ತಿಳಿದುಬರುತ್ತದೆ. ಉದಾಹರಣೆಗೆ ಸೂರ್ಯ, ಚಂದ್ರ, ಶಾಲಿಹೋತ್ರಮುನಿ, ಸುಶ್ರುತ, ಗರ್ಗ ಮತ್ತು ಇತರರ ಕುರಿತು ಮಾಹಿತಿ ಒದಗಿಸುತ್ತದೆ. ಹಾಗೆಯೇ ನಕುಲನ ಈ ಕೃತಿ ಇವರೆಲ್ಲರ ಕೃತಿಗಳ ಸಾರವನ್ನು ಒಳಗೊಂಡಿದೆ ಎನ್ನಲಾಗಿದೆ.

೩.೩.೮. ಶಾಲಿಹೋತ್ರನ ಹಯಾಯುರ್ವೇದ

ಅಶ್ವಶಾಸ್ತ್ರದ ಬಹು ಪಾಲು ಕೃತಿಗಳನ್ನು ಗಮನಿಸಿದಾಗ 'ಶಾಲಿಹೋತ್ರನ' ಹೆಸರು ಪ್ರಮುಖವಾಗಿ ಕಂಡುಬರುತ್ತದೆ. ಕಾರಣ ಶಾಲಿಹೋತ್ರನೇ 'ಪ್ರಥಮ ಅಶ್ವಶಾಸ್ತ್ರಕಾರ' ಎಂಬ ಅಂಶ ಬೆಳಕಿಗೆ ಬರುತ್ತದೆ. ಅಶ್ವಶಾಸ್ತ್ರವನ್ನು ಬರೆದ ಅಭಿನಚಂದ್ರ, ರಾಮಚಂದ್ರ, ಬಾಚರಸ, ಸದಾಶಿವರಾಯ, ಜಯದತ್ತ ಮುಂತಾದ ಅಶ್ವಶಾಸ್ತ್ರಕಾರರು ಶಾಲಿಹೋತ್ರನನ್ನು ಅನುಸರಿಸಿ ಕೃತಿಯನ್ನು ರಚಿಸಿದ್ದೇವೆ; ಎಂದುಕೊಂಡಿರುವುದರಿಂದ

ಶಾಲಿಹೋತ್ರನೆ ಪ್ರಥಮಿಗ ಎನ್ನುವುದರಲ್ಲಿ ಅರ್ಥವಿದೆ. ಉದಾಹರಣೆಗೆ ಜಯದತ್ತನು ತನ್ನ "ಅಶ್ವವೈದ್ಯಕ' ಕೃತಿಯಲ್ಲಿ

ಶಾಲಿಹೋತ್ರಾದಿ ಮುನಿಪ್ರಣೀತಂ ದೃಷ್ಟ್ವಾಶ್ವಶಾಸ್ತ್ರಂ ಬಹು ವಿಸ್ತರಂಚ
ಸಲ್ಪಪ್ರವೋದಂ ಸಫಲಂ ಯಥಾಢಂಘುಕೃತಂಚ ತದ್ವೇಜಯದತ್ತಕೇನ||

ಎನ್ನುವಲ್ಲಿ ಶಾಲಿಹೋತ್ರನ ಕೃತಿ ವಿಸ್ತಾರ ಮತ್ತು ತನ್ನ ಕೃತಿಯ ಆಕರವನ್ನು ಸೂಚಿಸಿದ್ದಾನೆ. "ಅದೇ ರೀತಿ ರಾಮಚಂದಕವಿ, ರೇವಂತ, ಸಿಂಹದತ್ತ ಮತ್ತು ಶಾಲಿಹೋತ್ರರನ್ನು ಪ್ರಸಿದ್ಧ ಅಶ್ವಶಾಸ್ತ್ರಕಾರರೆಂದೂ ತಾನು ಶಾಲಿಹೋತ್ರನನ್ನು ಅನುಸರಿಸಿ ಕೃತಿಯನ್ನು ರಚಿಸಿದ್ದೇನೆಂದು ಹೇಳಿಕೋಂಡಿದ್ದಾನೆ. ಶಾಲಿಹೋತ್ರನ ಮತ ಕೃತಿಯಲ್ಲಿ ಬಾಚರಸ ಸುಶ್ರುತ ಶಾಲಿಹೋತ್ರ ನಳವಾಕ್ಯದೊಳುಂ ಎಂದಿರುವುದರಿಂದ ಈ ಮೇಲಿನ ಮಾತಿಗೆ ಪುಷ್ಟಿ ದೊರೆಯುತ್ತದೆ.

ಶಾಲಿಹೋತ್ರನ ಹಯಾಯುರ್ವೇದ ಕೃತಿ ೧೨,೦೦೦ ಶ್ಲೋಕಗಳ ಬೃಹದ್ಗ್ರಂಥ. ಈ ಗ್ರಂಥದ ಸ್ವಲ್ಪ ಭಾಗ ಇಂದಿಗೂ ಉಪಲಬ್ಧವಿದೆ. ಶಾಲಿಹೋತ್ರನ ಕೃತಿಗೆ ಹಯ ಆಯುರ್ವೇದ, ತುರಂಗಮಶಾಸ್ತ್ರ ಶಾಲಿಹೋತ್ರ ಸಂಹಿತ ಎನ್ನುವ ಹೆಸರುಗಳಿದ್ದು, ಇದರಲ್ಲಿ ಭಾರತೀಯ ಪದ್ಧತಿಯಂತೆ ಕುದುರೆಗಳ ಚಿಕಿತ್ಸೆ ಇದೆ. ಈ ಕೃತಿಯಲ್ಲಿ ೮ ವಿಭಾಗಗಳಿದ್ದು, ಕುದುರೆಗೆ ಸಂಬಂಧಿಸಿದಂತೆ ಒಂದೊಂದು ವಿಚಾರಗಳನ್ನು ಕುರಿತು ಪ್ರತಿಪಾದಿಸಲಾಗಿದೆ.

ಕುದುರೆಗಳ ಪ್ರಕೃತಿ, ಅನುವಂಶಿಕ ಗುಣಗಳು, ವಂಶ, ಬಣ್ಣ, ಜಾತಿ, ಬೇರೆ ಬೇರೆ ವಂಶಗಳ ಲಕ್ಷಣಗಳು, ವಯೋನಿರ್ಣಯಗಳು ಅಂಗಪರೀಕ್ಷೆ ಮತ್ತು ಅಂಗಗಳ ಹೆಸರುಗಳು, ಅಂಗಪ್ರಮಾಣ, ಕುದುರೆಯ ಬೆಳವಣಿಗೆ, ಕೈಗೊಳ್ಳಬಹುದಾದ ಕ್ರಮಗಳು, ತುಂಟ ಕುದುರೆಗಳನ್ನು ಪಳಗಿಸುವುದು, ರಾಜಯೋಗ್ಯ ಕುದುರೆ ಮತ್ತು ಅವುಗಳನ್ನು ಖರೀದಿಸುವ ಕ್ರಮಗಳನ್ನು ಮೊದಲ ಭಾಗದಲ್ಲಿ ಹೇಳಿದೆ.

ಕುದುರೆಗಳ ಕಾಲಿನ ಕುಂಟು, ನೇತ್ರರೋಗ, ಜ್ವರ, ಉದರಶೂಲಿ, ಅತಿಸಾರ, ಆಮಶಂಕೆ, ಮೂಲವ್ಯಾಧಿ, ಬಿಕ್ಕಳಿಕೆ, ಅಸ್ತಮ, ಕೆಮ್ಮು, ನೆಗಡಿ, ಕಾಮಲೆ, ಮೂರ್ಛೆ, ಕರುಳಿನಲ್ಲಿ ಕ್ರಿಮಿಗಳು, ಶರೀರದ ಒಳ ಅಂಗಳದಲ್ಲಿ ರಕ್ತಸ್ರಾವ, ಕಾಲಿನವಾತ, ಹಾವು ಕಚ್ಚಿದುದರ ಚಿಹ್ನೆ ಮತ್ತು ಚಿಕಿತ್ಸೆ, ವಿಷಪ್ರಾಶನ, ವಿಷಲಿಪ್ತ ಬಾಣಗಳಿಂದ ಆದ ಗಾಯಗಳನ್ನು ಕುರಿತು ಎರಡು ಮೂರನೆಯ ಭಾಗಗಳಲ್ಲಿ ಹೇಳಿದೆ.

ಮೇಯದ ಕುದುರೆಗಳ ಬಾಯಿ ಮತ್ತು ನಾಲಗೆಗಳ ಚಿಕಿತ್ಸೆ ಉಬ್ಬರ ಮತ್ತು ಅತಿಸಾರ ಚಿಕಿತ್ಸೆ ನಾಲ್ಕನೆಯ ಭಾಗದಲ್ಲಿದೆ. ಕುದುರೆಗಳ ಮೇಲೆ ನವಗ್ರಹಗಳ ದುಷ್ಪಭಾವ ಮತ್ತು ನಿವಾರಣೋಪಾಯ ಆರನೆಯ ಭಾಗದಲ್ಲಿದೆ. ಚಿಕಿತ್ಸೆಯ ವಿವಿಧ ಜಟಿಲತೆಗಳು, ಹಾಲು ಮದ್ಯ, ಉಪ್ಪು ಮುಂತಾದ ಆಹಾರಗಳಿಂದ ಉಂಟಾಗುವ ರೋಗಗಳು ಮತ್ತು ಭೇದಿ ಮಾಡಿಸಲು ನಾಳಿಗೆಯ ಆಕಾರದ ಉಪಕರಣಗಳನ್ನು ಉಪಯೋಗಿಸುವುದರಿಂದ ಆಗುವ ತೊಂದರೆಗಳ ವಿವರಗಳು ಏಳನೆಯ ಭಾಗದಲ್ಲಿವೆ.

ನಿಗೂಢ, ಸಂಗತಿಗಳು, ಕುದುರೆಗಳ ಮೇಲಿರುವ ರೇಖೆಗಳು ಮತ್ತು ಅವುಗಳ ಮಹತ್ವ, ಕುದುರೆಗಳ ಆಯಸ್ಸು, ನಕ್ಷತ್ರಗಳ ಪ್ರಭಾವಗಳಿಂದ ಆಗುವ ದುಷ್ಪಭಾವ ಕುದುರೆಗಳಿಗೆ ನಡೆಸುವ ಅನೇಕ ಔಷಧೋಪಚಾರಗಳು, ಉದಾರಣೆಗೆ ಅಳಿಲೆಕಾಯಿ, ಬೆಳ್ಳುಳ್ಳಿ, ಗುಗ್ಗಳ, ಸಾಸುವೆ, ಅರಗು, ತ್ರಿಫಲ, ರಾಳಗಳ ಬಳಕೆಯ ವಿವಿರಗಳಿವೆ. ಆಯುವರ್ಧನೆಗೆ ತಕ್ಕ ಉಪಾಯಗಳು, ಕುದುರೆಗಳನ್ನು ಪಳಗಿಸುವುದು, ಅವು ಹೊರಬಹುದಾದ ಭಾರಗಳು, ರಥಕ್ಕೆ ಕುದುರೆ ಹೂಡುವುದು, ಲಾಯಗಳ ವ್ಯವಸ್ಥೆ ಮುಂತಾದವು ಎಂಟನೆಯ ಭಾಗದಲ್ಲಿದೆ. ಹೀಗೆ ಒಂದು ಪ್ರಾಣಿಯ ಸುತ್ತ ಹೆಣೆದುಕೊಂಡಿರುವ ರೋಗ ರುಜಿನಿಗಳ ಬಗ್ಗೆ ವಿಪುಲವಾದ ಮಾಹಿತಿಯನ್ನು ನೀಡುವ ಸಮಗ್ರ ಗ್ರಂಥವಾಗಿದೆ. ಇದರ ಜೊತೆಗೆ ಶಾಲಿಹೋತ್ರಮುನಿ ಅಶ್ವಪ್ರಶಂಸ ಮತ್ತು ಅಶ್ವಲಕ್ಷಣಶಾಸ್ತ್ರಂ ಎನ್ನುವ ಎರಡು ಕೃತಿಗಳನ್ನು ಬರೆದಿದ್ದಾನೆ. ಎಂದು ಆರೋಪಿಸಲಾಗಿದೆ.

ಭಾರತದಲ್ಲಿ ಕುದುರೆಗಳನ್ನು ಸಾಕುವ, ಪಳಗಿಸುವ ವಿವರಗಳು ಶಾಸ್ತ್ರ ರೂಪವನ್ನು ಪಡೆದುದಕ್ಕೆ ಸು. ೫,೦೦೦ ವರ್ಷಗಳ ಇತಿಹಾಸವಿದೆ. ಕುದುರೆಗಳ ಬಗ್ಗೆ ಬರೆದವರಲ್ಲಿ ಶಾಲಿಹೋತ್ರನು ಮೊದಲಿಗ. ನಕುಲನ ಅಶ್ವಚಿಕಿತ್ಸಾ ಗ್ರಂಥದಲ್ಲಿ ಶಾಲಿಹೋತ್ರನನ್ನು ಕುರಿತು ಹೀಗೆ ಹೇಳಿದೆ.

"ಏನಜ್ಞಾನವತಾ ಹಿಮಾಲಯತರುಚ್ಛಾಯಾಸು ವಿಕ್ರೀಡಿತಂ
ಯಃ ಸ್ನಾತೋ ಹಿಮಪುಷ್ಪವಾತ ಶಿಶಿರೇ ಗಂಗಾಜಲೇ ಪಾವನೇ
ರೇಮೇಯಸ್ತು ತುರಂಗಯಾಥ ಜನಿತ್ಯೆ ನಾನಾ ವಿಧೈರ್ಹೇಷಿತ್ಯೆಃ
ಪಾಯಾದ್ವಃ ಸತುರಂಗ ಘೋಷತನಯ ಶ್ರೀ ಶಾಲಿಹೋತ್ರೇಮುನಿಃ
ಬರ್ನಲ್ ರವರ ಸಂಸ್ಕತ ಹಸ್ತಪ್ರತಿಗಳ ಸೂಚೀಭಾಗ ೧ರಲ್ಲಿ

ಚಾಹ್ನವ್ಯಾ ಉತ್ತರೇ ತೀರೇ ಪ್ರಾಲೇಯಾದ್ರೇಸ್ತಟಾಂತರೇ
ಸ್ವಶ್ರಮೇ ಚಂಪಕಾರಣ್ಯೇ ವೇದಿಕಾಯಾಂ ಕುಶಾಸನೇ
ಶಾಲಿಹೋತ್ರಂ ಸುಖಾಸೀನಂ ಋಷಿಭಿಃ ಪರಿವೇಷ್ಟಿತಮ್
ಬ್ರಹ್ಮ ಸೂರ್ಯಗ್ನಿ ತೇಜಸ್ಕಂ ಹಯಶಾಸ್ತ್ರ ವಿಶಾರದಮ್"[೯]

"ಶಾಲಿಹೋತ್ರನು ಗಾಂಧಾರ ಜನಪದದ 'ಶಾಲಾತುರಂ' ಗ್ರಾಮಕ್ಕೆ ಸೇರಿದವನೆಂದು ತಿಳಿದುಬರುತ್ತದೆ. ಬೇರೆ ಕೆಲವು ಆಧಾರಗಳು ಆತನನ್ನು 'ಶ್ರಾವಸ್ತಿನಿವಾಸಿ' ಎಂದಿವೆ. ತುರಂಗ ಘೋಷತನಯ ಅಥವಾ ಹಯ ಘೋಷತನಯನೆಂದು ಶಾಲಿಹೋತ್ರನನ್ನು ವರ್ಣಿಸುತ್ತಾರೆ. ಶಾಲಿಹೋತ್ರ ಮತ್ತು ಅಗ್ನೀವೇಶರು ಸಧರ್ಮಿಗಳೆಂದು ತಿಳಿದುಬರುತ್ತದೆ. ಶಾಲಿಹೋತ್ರನ ಶಿಷ್ಯ ಶುಶ್ರುತನೆಂದು ಪ್ರತೀತಿ. ಯುಧಿಷ್ಠಿರನ ಸಹೋದರನಾದ ನಕುಲನ 'ಅಶ್ವಚಿಕಿತ್ಸಾ' ಕೃತಿಯಲ್ಲಿ ಶಾಲಿಹೋತ್ರನ ಹೆಸರು ಲಭ್ಯವಿರುವದರಿಂದ ಈತನು

ಮಹಾಭಾರತಕ್ಕಿಂತ ಹಿಂದಿನವನು ಎಂದು ಹೇಳಲು ಸಾಧ್ಯವಿದೆ"[೨೦] ಏಕೆಂದರೆ, ಹಯಾಯುರ್ವೇದ ಪರಿಪೂರ್ಣ ಗ್ರಂಥವಾಗಿದ್ದು, ಇದರ ಕೆಲವು ಅಧ್ಯಾಯಗಳು ಅಗ್ನಿಪುರಾಣದಲ್ಲಿವೆ. ಮತ್ಸ್ಯಪುರಾಣ ಮತ್ತು ಗರುಡುಪುರಾಣಗಳು ಕೂಡ ಕುದುರೆಯ ವಿಚಾರವನ್ನು ತಿಳಿಸುವಲ್ಲಿ ಹಯಾಯುರ್ವೇದನ್ನು ಆಶ್ರಯಿಸಿವೆ. ಪರ್ಷಿಯನ್ ಅರ‍್ಯಾಬಿಕ್, ಟಿಬೆಟಿನ್ ಮತ್ತು ಇಂಗ್ಲೀಷ ಭಾಷೆಗಳಲ್ಲಿ ಈ ಕೃತಿ ಅನುವಾದಗೊಂಡಿದೆ. ಶಾಲಿಹೋತ್ರನ ಹೆಸರು ಸಾಕಷ್ಟು ಪ್ರಸಿದ್ಧವಾಗಿದೆ. ಕುದುರೆಯ ವೈದ್ಯ ಎನ್ನುವುದಕ್ಕೆ ಸಮಾನಾರ್ಥಕವಾಗಿ 'ಶಾಲೋತ್ರಿ' ಎನ್ನುವ ಪದ ಇಂದಿಗೂ ಬಳಕೆಯಲ್ಲಿದೆ.

ಈ ಕೃತಿಯಿಂದ ಈಚಿನ ಕಾಲದಲ್ಲಿ ಬಂದಿರುವ ಅಶ್ವಶಾಸ್ತ್ರದ ಗ್ರಂಥಗಳನ್ನು ಶಾಲಿಹೋತ್ರ ಎಂದು ಕೃತಿಕಾರರು ಕರೆದಿದ್ದಾರೆ. ಮತ್ತೆ ಕೆಲವರು ಈತನ ಸಂಹಿತೆಯನ್ನು ಆಧರಿಸಿ ಬರೆದಿದ್ದಾರೆ. ಶಾಲಿಹೋತ್ರ ಶಬ್ದದ ಬಗ್ಗೆ ಪ್ರೊ. ತೀ.ನಂ.ಶ್ರೀಕಂಠಯ್ಯನವರು ಕೊಡುವ ವಿವರಣೆ ಹೀಗಿದೆ:

"ಕೊನೆಯಲ್ಲಿ 'ಶಾಲಿಹೋತ್ರ' ಎನ್ನುವ ಹೆಸರಿನ ಕಡೆಗೆ ತಿರುಗೋಣ ಇದು ಅಶ್ವಾಯುರ್ವೇದವನ್ನು ನಿರೂಪಿಸಿದವನೆಂದು ಪ್ರಸಿದ್ಧನಾದ ಒಬ್ಬ ಋಷಿಯ ಹೆಸರು(ಇದಕ್ಕೆ ಕುದರೆ ಎಂಬ ಅರ್ಥವೂ ಉಂಟು). ಈಗಲೂ ಹಿಂದೂ ದೇಶದ ಸೈನ್ಯ ಇಲಾಖೆಯಲ್ಲಿ ಅಶ್ವವೈದ್ಯನನ್ನು ಸೋಲುತ್ರಿ (Solutri) ಎಂದು ಕರೆಯುತ್ತಾರೆ. ಶಾಲಿಹೋತ್ರ ಎಂಬ ಈ ಪೂಜ್ಯನಾಮವನ್ನು ಒಡೆದು ನೋಡಿದರೆ ನಮಗೆ ಕಾಣುವುದು ಅದರ ಮೊದಲನೆಯ ಭಾಗ ಕೋಲ್ (ಅಥವಾ ಮುಂಡ) ವರ್ಗದ ಶಬ್ದ. ಎರಡನೆಯದು ಬಹುಶಃ ದ್ರಾವಿಡ; ಘುತ್ರ ಘೋತ್ರ ಎಂಬುದರ ರೂಪಾಂತರ ಎರಡರರ್ಥವೂ ಒಂದೇ ಶಾಲಿ=ಹೋತ್ರ. ಈ ಎರಡು ಶಬ್ದಗಳು ಬೇರೆ ಬೇರೆ ದಿಕ್ಕುಗಳಿಂದ ಬಂದು ಸಂಸ್ಕೃತ ಸಮಾಸವಾಗಿ ಸೇರಿ ಒಬ್ಬ ಋಷಿಯ ಹೆಸರಾಗಿ ಪರಿಣಮಿಸಿದೆ ಎಂದು ಹೇಳುತ್ತಾರೆ."[೨೧]

೩.೩.೯. ಹಿರಿಯಣ್ಣ ಕವಿಯ ಹಯರತ್ನ ಶ್ರೇಣಿ

ಈ ಕೃತಿಯನ್ನು ಕೊಪ್ಪಳ ಜಿಲ್ಲೆಯ ಮುದ್ದಾಬಳ್ಳಿ ಗ್ರಾಮದ ಶ್ರೀ ಶೇಷೇಂದ್ರಾಚಾರ್ ಅವರ ಮನೆಯಲ್ಲಿ ದೊರೆತ ಏಕೈಕ ಹಸ್ತಪ್ರತಿಯ ಸಹಾಯದಿಂದ ಡಾ.ಎಫ್.ಟಿ.ಹಳ್ಳಿಕೇರಿ ಅವರು ಈ ಕೃತಿಯನ್ನು ಸಂಪಾದಿಸಿಕೊಟ್ಟಿದ್ದಾರೆ. ಅಶ್ವಶಾಸ್ತ್ರಕ್ಕೆ ಸಂಬಂಧಿಸಿದ ಈ ಕಿರುಗ್ರಂಥ ಶಾಸ್ತ್ರ ಸಾಹಿತ್ಯ ದೃಷ್ಟಿಯಿಂದ ಮಹತ್ವದ ಕೃತಿ. ವಿವಿಧ ಭಾಗಗಳಲ್ಲಿ ಕುದುರೆ ಶಾಸ್ತ್ರವನ್ನು ಬಿಂಬಿಸುವ ಇದು ಗಾತ್ರದಿಂದ ಕಿರಿದಾಗಿ ಕಂಡರೂ ಸಹಿತ ಇದರ ಉದರದಲ್ಲಿ ಮಹತ್ವದ ಅಂಶಗಳು ಹೆಣೆದುಕೊಂಡಿವೆ. ಅಧ್ಯಯನ ದೃಷ್ಟಿಯಿಂದ ಆಕರ ಸಾಮಗ್ರಿಯಾದ ಇದು ಅತ್ಯಂತ ಶ್ರೇಷ್ಠವಾಗಿದೆ. ಕೃತಿಯು ೨ ಸಂಧಿ ೧೪೨ ಪದ್ಯಗಳನ್ನೊಳಗೊಂಡಿದ್ದು, ೧ರಿಂದ ೫ ಸಂಧಿಗಳು ಭಾಮಿನಿ ಷಟ್ಪದಿಯಲ್ಲಿದ್ದು, ೬ ಮತ್ತು ೭ನೆಯ ಸಂಧಿಗಳು ವಾರ್ಧಕ ಷಟ್ಪದಿಯಲ್ಲಿರುವುದು ಗ್ರಂಥದ ವೈಶಿಷ್ಟ್ಯವಾಗಿದೆ.

ಈ ಕೃತಿಯ ಕರ್ತೃ ಹಿರಿಯಣ್ಣ ಕವಿ. ವಿಶಿಷ್ಟವಾಗಿ ಶಕ್ತಿದೇವತೆಯಾದ ದುರ್ಗಾದೇವಿಯ ಆರಾಧಕನಾಗಿದ್ದಾನೆಂಬುದು ಗ್ರಂಥವನ್ನು ಅವಲೋಕಿಸಿದಾಗ ವ್ಯಕ್ತವಾಗುತ್ತದೆ. ಒಂದು ಕೃತಿಯನ್ನು ಆರಂಭಿಸುವ ಮೊದಲು ದೇವರ ಪ್ರಾರ್ಥನೆ ಮಾಡುವುದು ಸಹಜ. ಅದು ಭಾರತೀಯ ಧರ್ಮ ಸಂಸ್ಕೃತಿಯಾಗಿದ್ದರಿಂದ ಅದಕ್ಕೆ ಕವಿಯು ಕೂಡಾ ಹೊರತಾಗಿಲ್ಲ. ಉದಾಹರಣೆಗೆ ಶಾಸನಕಾರರು, ಕಾವ್ಯ ಪಂಡಿತರು ಆರಂಭದ ಪೀಠಿಕಾ ಪದ್ಯದಲ್ಲಿ ಶಿವ, ವಿಷ್ಣು, ಗಣೇಶ, ನಂದಿ, ದೇವಿಸ್ತುತಿ ಮುಂತಾದ ದೇವಾನು ದೇವತೆಗಳ ಪ್ರಾರ್ಥನೆ ಮಾಡುವುದು ಸಂಪ್ರದಾಯವಾಗಿದೆ. ಈ ಕೃತಿಯ ಆರಂಭದ ಪದ್ಯವೊಂದು ಈ ರೀತಿಯಾಗಿದೆ.

ಶ್ರೀಮದ ಜಹರಿ ರುದ್ರವರ ಸು
ತ್ರಾಮ ಮುಖ್ಯಾಮರ ವಿನುತಪದ
ತಾಮ ರಸಯುಗ ಪಾಶಮೋದಕ ದಂತ ಶೃಣಿಧರನಾ
ಚಾಮರಾಯತ ಕರ್ಣ ಕರಿಮುಖ
ಸಾಮಗಾನ ಪ್ರಿಯ ಗಣೇಶ
ತ್ವಾಮಹಂ ಪ್ರಣತೋಸ್ಮಿಮೀ ಕುರುವಿಘ್ನೇಶ ಮನಂಭೋ ॥ (೧-೧)

ಹೀಗೆ ಶ್ರೀಮದಜಹರಿ, ಪಾಶಮೋದಕ, ಕರ್ಣಕರಿಮುಖ, ಗಣೇಶ, ಪ್ರಾಣತೋಸ್ಮಿಮೀ ಎಂದು ಏನೆಲ್ಲಾ ವರ್ಣನೆ ಮಾಡಿದರು, ಅದು ಕೇವಲ ಸಂಪ್ರದಾಯಕ್ಕೆ ಬದ್ಧನಾಗಿ ಮಾಡಿರುವಂತೆ ತೋರುತ್ತದೆ. ಮುಂದುವರೆದು ಕವಿ, ಪ್ರತಿ ಸಂಧಿಯ ಕೊನೆಯ ಪದ್ಯದಲ್ಲಿ ಹೇಳುವಂತೆ.

ಧರೆಗಧಿಕ ವುತ್ಸಂಗ ಗಿರಿಯಲಿ
ಮರೆವ ದುರ್ಗಾಂಭಿಕೆಯ ಸಿರಿಪದ
ಸರಸಿಜ ಭ್ರಮರಾಯಮಾನ ಕವೀಂದ್ರ ಹಿರಿಯಣ್ಣಾ
ವಿರಚಿಸಿದ ಹಯರತ್ನ ಶ್ರೇಣಿಯ ಲೊರದ (೧-೨೯)

ಈ ಪದ್ಯದಿಂದ ಅರಿತುಕೊಳ್ಳುವುದೆನಂದರೇ ಕವಿಯ ಉಚ್ಚಂಗಿದುರ್ಗದ ದುರ್ಗಾಂಬಿಕೆಯ ಪರಮ ಭಕ್ತನಾಗಿದ್ದನೆಂಬುದು ವಿಧಿತವಾಗುತ್ತದೆ. ಇನ್ನೂ ಕವಿಯ ಕಾಲ ವಿಚಾರವಾಗಿ ಹೇಳುವುದಾದರೆ ಕೃತಿಯ ಆರಂಭದಲ್ಲಾಗಲಿ ಮತ್ತು ಅದರ ಒಡಲಲ್ಲಾಗಲಿ ಎಲ್ಲಿಯೂ ತನ್ನ ಬಗ್ಗೆ ತಾನು ಹೇಳಿಕೊಂಡಿಲ್ಲ. ಆದರೆ ಒನೆಯ ಸಂಧಿಯ ಕೊನೆಯ ಒಂದು ಪದ್ಯದಲ್ಲಿ ಮಾತ್ರ ಈ ರೀತಿ ವ್ಯಕ್ತಪಡಿಸಿದ್ದಾನೆ.

ಶಾಲಿವಾಹನ ಶಕವು ಸಂದೊಂದು ಸಾವಿರದ
ಏಳುನೂರು ವರುಷಕ್ಕೆ ವಿಳಂಬಿ ಸಂವತ್ಸರದ ವನ

ಮೊಲೆ ಪೆಸರಾಂತ ಮಾಸ ಶುಕ್ಲ ಪಂಚಮಿಯ ಭೃಗುವಾರ ಲೀಕ್ಷಿತಿಯೊಳೊ
ಲೀಲಿಮೆಗೆ ಹರಪುರವನಾಳ್ದ ಬಾಗುಳಿಯೂ ಭೂ
ಪಾಲ ಮಣಿ ಬಸವೇಂದ್ರ ನೃಪಾಲ ಪುರೋಹಿತಂ
ಹೇಳಿದ ಹಯರತ್ನ ಶ್ರೇಣಿಯೆಂಬ ತುರಗಲಕ್ಷಣನರ್ಥಿಯಿಂದಾ, (೭-೩೭)

ಈ ಮೇಲಿನ ಸಾಲುಗಳಿಂದ ಕವಿಯ ಕಾಲವನ್ನು ೧೬೯೦ರಿಂದ ೧೭೦೯ರ ಅವಧಿಯಲ್ಲಿದ್ದ ಹರಪನಹಳ್ಳಿ ಪಾಳೆಗಾರ ಬಾಗುಳಿಯ ಬಸಪ್ಪ ನಾಯಕನಲ್ಲಿ ಪುರೋಹಿತನಾಗಿದ್ದವನು ಹಿರಿಯಣ್ಣ ಕವಿ ಎಂಬುದು ಸ್ಪಷ್ಟವಾಗುತ್ತದೆ. ಈತ ೧೭೭೦೦(ಕ್ರಿ.ಶ. ೧೭೭೮)ರಲ್ಲಿ ಕುದುರೆಗಳ ಲಕ್ಷಣ, ಸ್ವರೂಪ, ಪ್ರಕಾರ ಅವುಗಳಿಗೆ ಬರುವ ಕಾಯಿಲೆಗಳು ಔಷಧಿಗಳು ಇತ್ಯಾದಿ ಸಂಗತಿಗಳನ್ನು ತಿಳಿಸುವ ಹಯರತ್ನ ಶ್ರೇಣಿಯೆಂಬ ಅಶ್ವಶಾಸ್ತ್ರ ಕೃತಿಯನ್ನು ರಚನೆ ಮಾಡಿದ್ದಾನೆಂಬುದು ತಿಳಿದುಬರುತ್ತದೆ. ಇದನ್ನು ಹೊರತುಪಡಿಸಿದರೆ ಕೃತಿಯಲ್ಲಿ ಇನ್ನಾವುದೇ ಮಾಹಿತಿ ನಮಗೆ ದೊರೆಯುವುದಿಲ್ಲ. ಹಾಗಾಗಿ ಸಂಪಾದಕರು ಹೇಳುವ ಮೇಲಿನ ಸಾಲುಗಳಿಂದ ತಿಳಿದುಕೊಳ್ಳುವುದೇನೆಂದರೆ ಹರಪನಹಳ್ಳಿಯ ಪಾಳೆಗಾರರ ಆಡಳಿತದ ಕಾಲವನ್ನು ಗಮನದಲ್ಲಿಟ್ಟಕೊಂಡು ಕವಿಯ ಕಾಲವನ್ನು ೧೭ನೇ ಶತಮಾನದ ಆರಂಭದ ಘಟ್ಟ ಎಂದು ಖಚಿತವಾಗಿ ಹೇಳಬಹುದು.

ಪ್ರಸ್ತುತ ಕೃತಿಯ ೭ ಸಂಧಿಗಳಲ್ಲಿ ಕುದುರೆಯ ಕುರಿತಾದ ವಿವರ ಪೂರ್ಣ ಮಾಹಿತಿಯನ್ನು ನೀಡುತ್ತದೆ. ಸಂಧಿ ೧ರಲ್ಲಿ ಕುದುರೆಯ ದುರ್ಲಕ್ಷಣ ವಿಚಾರವನ್ನು ೫೯ ಪದ್ಯಗಳಲ್ಲಿ ವಿವರಿಸಲಾಗಿದೆ. ಒಂದನೆಯ ಸಂಧಿಯಲ್ಲಿ ಕುದುರೆಗಳ ಲಕ್ಷಣ, ವಂಶ, ಬಣ್ಣ ಜಾತಿ ಅಂಗಾಂಗಗಳ ಕುರಿತು ಪ್ರಸ್ತಾಪಿಸುತ್ತಾ ಅವುಗಳ ದುರ್ಲಕ್ಷಣ ಕುರಿತಂತೆ ಕೆಳಗಿನ ಪದ್ಯವೊಂದರಲ್ಲಿ ಈ ರೀತಿಯಾಗಿ ಹೇಳಿದ್ದಾನೆ.

ಶೃಂಗಿ ವಾಳಾಂಜನಿಕ ರಾಳಿಕು
ಚೌಂಗಿ ಕಾಲಾಮುಖಿ ವಿಕಾಳಿ ಕೃ
ಶಾಂಗಿ ಪಂಚಖರಿ ತ್ರಿಕರ್ಣ ವಿದಿಕ್ ಶೃತಿಗಳೆಂಬಾ
ಅಂಗದೊಲಗೀರ್ರೈದು ಬಗೆಯ ತು
ರಂಗವಿವು ದೇಶಾಧಿಪತಿಗಳ
ಭಂಗ ಬಡಿಸುವವಧಿಕ ಖೋಡಿಗಳೆಂದನಾ ಮುನಿಪಾ (೧-೮)

ಶೃಂಗಿ, ವಾಳಾಂಜನಿಕ, ರಾಳಿಕುಚಾಂಗಿ, ಕಾಳಾಮುಖಿ, ವಿಕಾಳಿ, ಕೃಶಾಂಗಿ, ಪಂಚಖರಿ, ತ್ರಿಕರ್ಣೆ ವಿದಿಕ್ ಮತ್ತು ಶೃತಿಗಳೆಂಬ ಹತ್ತು ಬಗೆಯ ಕುದುರೆಗಳು ದೇಶಾಪತಿಗಳ ಭಂಗವನ್ನು ಕೆಡಿಸುವಂಥವುಗಳು ಎಂದು ವಿವರಿಸುತ್ತಾನೆ. ಮುಂದುವರಿದು ಕುದುರೆಯ ಸುಳಿಗಳನ್ನು ಕುರಿತು ಈ ರೀತಿ ಉಲ್ಲೇಖಿಸುತ್ತಾನೆ.

ಅವ ಕುದುರೆಗಳ ಬಾಲದ್ಹಣೆಗಳ
ಠಾವಿನಲಿ ಸುಳಿಯಿರಲು ಒಡೆಯಗೆ
ಸಾವು ಕೇಡಹುದುದರ ಕಂದಕದಲ್ಲಿ ರೋಮಗಲೂ
ನ್ಯಾವರಿಸಿದಂತೆರಡು ಪಾರ್ಶ್ವವ
ನಾವರಿಸಿಕೊಂಡು ದ್ವಿಭಾಗವ
ಭಾವಿಸುತ್ತಿರೆ ಭಾಳಲೋಚನನೆನಿಪ್ಪದ ಶೂಭಕರಾ (೧-೧೭)

ಕುದುರೆಯ ಬಾಲ, ಹಣೆ, ಠಾವಿನಲಿ ಸುಳಿಯಿರಲು ಒಡೆಯನಿಗೆ ಆಗುವ ಹಾನಿಯನ್ನು ಕುರಿತು ಮೇಲಿನ ಸಾಲುಗಳು ತಿಳಿಯಪಡಿಸುತ್ತವೆ. ಸುಳಿಗಳಿಂದ ಆಗುವ ಅನಾಹುತಗಳನ್ನು ಶಾಸ್ತ್ರಕಾರರು ಮನಗಂಡು ಬರವಣಿಗೆಯ ಮೂಲಕ ಕಟ್ಟಿಕೊಂಡಿದ್ದಾರೆ. ಅದರಂತೆಯೇ ಸುಳಿಗಳ ಕುರಿತು ಹೇಳುವುದಾದರೆ ಎತ್ತು, ಆಕಳು ಮುಂತಾದ ಪ್ರಾಣಿಗಳನ್ನು ಖರೀದಿಸುವಾಗ ನಮ್ಮ ಹಿರಿಯರು ಹಿಂದಿನಿಂದ ಇಂದಿನವರೆಗೂ ಈ ಪದ್ಧತಿಯನ್ನು ಅನುಸರಿಸುತ್ತಾ ಬಂದಿರುವುದನ್ನು ಕಾಣುತ್ತೇವೆ. ಅಂತಹ ಉದಾಹರಣೆಗಳಲ್ಲಿ ಕುದುರೆಯು ಒಂದಾಗಿದೆ.

ಕವಿಯು ಎರಡನೆಯ ಸಂಧಿಯಲ್ಲಿ ಶುಭಲಕ್ಷಣ ವಿಚಾರವನ್ನು ಕುರಿತು ಹೇಳುವಾಗ ಉತ್ತಮ ಸುಳಿಗಳಿಂದ ಒಡೆಯನಿಗಾಗುವ ಲಾಭಗಳನ್ನು ವಿಶ್ಲೇಷಿಸಿಸುತ್ತಾ,

ತಲೆಲಲಾಟಗಳುದರುದ ಸ್ಥಳ
ಗಳ ವಿವೈದರ ಮುಂದುಗಡೆಯಲ್ಲಿ
ಸುಳಿಯೆರಡು ನಾಲ್ಕಿರಲು ಜಯಮಂಗಳನು ತಾನೆನಿಕುಂ
ಘಳಿಲನುತ್ತಹ ವೇದವಾದ್ಯಂ
ಗಳನು ತಾನೇ ನಡಸಿಕೊಂಬದು
ತಿಳಿವುದೀ ಹಯ ವಿಜಯ ಮಾಳ್ಪದು ರಾಜಯೋಗ್ಯಮದೂ (೨-೧)

ತಲೆ, ಲಲಾಟ, ಉದರ, (ಹೊಟ್ಟೆ) ಸ್ಥಳಗಳ ಮುಂದುಗಡೆಯಲ್ಲಿ ಸುಳಿ ಎರಡು, ನಾಲ್ಕು ಇರಲು ಜಯಸಾಧಿಸುವನು. ಅಲ್ಲದೆ ವೇದ ವಾದ್ಯ ಮಂಗಳ ಕಾರ್ಯವು ಉಂಟಾಗುವುದು. ಉತ್ತಮ ಸುಳಿಗಳಿಂದ ವಿಜಯದ ಜೊತೆಗೆ ರಾಜಯೋಗ ದೊರೆಯುವದೆಂದು ಹೇಳಲಾಗಿದೆ. ಮೂರನೆಯ ಸಂಧಿಯಲ್ಲಿ ಅಶ್ವಗಳ ಜನನದಿಂದ ಒಡೆಯನಿಗೆ ಆಗುವ ಹಾನಿಯನ್ನು ಕುರಿತು ವಿವರಿಸಲಾಗಿದೆ.

ಶ್ರಾವಣದಿ ಹಯ ಪ್ರಸವವಾಗಲು
ಸಾವು ತಪ್ಪದು ಮನೆಯ ಒಡೆಯಗೆ

ಆವ ವಿಪ್ರಂಗಾದಡೆಯು ತುರಗವನು ಮರಿಯೊಡನೆ
ಗೋವು ಸಹಿತ ಹೀರಣ್ಯದಾನವ
ನೀವುದಾಕ್ಷಣ ಇಲ್ಲದಿದ್ದಡೆ
ಭಾವ ಮೈದುನ ಸೋದರಳಿಯಳಿರಿಗಿತ್ತು ಬಿಡುವದಿದ (೩-೨)

ಶ್ರಾವಣ ಮಾಸದಲ್ಲಿ ಕುದುರೆ ಜನಿಸಿದರೆ ಕುದುರೆಯನ್ನು ಸಾಕಿದ ಒಡೆಯನಿಗೆ ಸಾವು ತಪ್ಪದು. ಆ ಅನಾಹುತವನ್ನು ಪರಿಹರಿಸಿಕೊಳ್ಳಲಿಕ್ಕೆ ಕುದುರೆ ಜೊತೆಗೆ ಮರಿಯೊಡನೆ ಗೋವು ಸಹಿತ ಹಿರಣ್ಯದಾನವ ನೀಡಬೇಕು. ಇಲ್ಲವಾದರೆ ಭಾವ ಮೈದುನ, ಸೋದರಳಿಯರಿಗೆ ಕೊಡುವುದು ಉತ್ತಮ. ಹೀಗೆ ಒಂದು ಕುದುರೆಯನ್ನು ಸಾಕುವುದರ ಜೊತೆಗೆ ಅದರಿಂದ ಆಗುವ ಲಾಭ ನಷ್ಟಗಳನ್ನು ಶಾಸ್ತ್ರಕಾರರು ತಿಳಿಸಿದ್ದಾರೆ. ಮಾನವನ ಉಪಯೋಗಿ ಪ್ರಾಣಿಯ ಸುತ್ತ ಹೆಣೆದುಕೊಂಡಿರುವ ಇಂತಹ ಎಲ್ಲಾ ಘಟನೆಗಳು ಶಾಸ್ತ್ರಕಾರರ ದೂರದೃಷ್ಟಿತ್ವಕ್ಕೆ ಹಿಡಿದ ಕನ್ನಡಿಯಾಗಿದೆ. ನಾಲ್ಕನೆಯ ಸಂಧಿಯಲ್ಲಿ ನಾನಾ ವಿಧದ ರೋಗ ಲಕ್ಷಣಗಳನ್ನು ತಿಳಿಸುತ್ತಾ ಸೂಚನೆಯನ್ನು ನೀಡಲಾಗಿದೆ. ಉದಾಹರಣೆಗೆ:

ಕಣ್ಣು ಮುಚ್ಚುತ ಮೇವು ಮೇಯಲಿ
ಸನ್ನಿಪಾತ ಜ್ವರವದೆಂಬುದು
ಮನ್ಮಥ ಜ್ವರ ಹುಟ್ಟುವದು ಮೈ ಒಣಮೇವು
ತಿನ್ನದಲೆ ಭೇದದಲಿ ಬರೆ ಬರೆ
ಸಣ್ಣಿಸುತಲದು ಶಿಕ್ಕು ಮೂತ್ರವು ಮಾಡುತಿಹುದೆಂದಾ (೪-೧೬)

ಕುದುರೆಯು ಕಣ್ಣುಮುಚ್ಚಿ, ಮೇವು ತಿನ್ನುತಿರಲು ಆಗ ಸನ್ನಿಪಾತವೆಂಬ ಜ್ವರ ಬಂದಿದೆಯೆಂದು ತಿಳಿದುಕೊಳ್ಳುವದು. ಆ ಸಂದರ್ಭದಲ್ಲಿ ಮನ್ಮಥ ಜ್ವರ ಹುಟ್ಟಿಕೊಳ್ಳುವದು. ಬಹಳ ದಿನಗಳ ಕಾಲ ವ್ಯಸನದಿಂದ ಬಳಲಿ ಮೈ ಒಣಗಿ, ಮೇವು ತಿನ್ನದಲೆ ಭೇದದಲ್ಲಿ ಬರೆ ಬರೆ ಸಣ್ಣಿಸುತ್ತ ಬಿಟ್ಟು ಬಿಟ್ಟು ಮೂತ್ರವು ಮಾಡುತಿಹದು. ಹೀಗೆ ಕುದುರೆಗೆ ಬರುವ ಲಕ್ಷಣಗಳನ್ನು ಅದರ ಕ್ರಿಯೆ ಪ್ರತಿಕ್ರಿಯೆಯಿಂದ ತಿಳಿದುಕೊಳ್ಳಲು ಸೂಚನೆ ನೀಡಲಾಗಿದೆ.

ಬಾಲವನು ಮುರಿ ಮಾಡುತವನಿಗೆ
ಬೀಳುತೇಳುತ ಹೊರಳಿ ನೇರಹಿಂ
ಗಾಲಝಾಡಿಸೆ ನೆಲವ ಮುಂಗಾಲ ಕೆದರುತಿರೇ
ಪೇಳುವದು ತಾಮೂತ್ರ ಸಿಕ್ಕಿನ

ಚಾಳಿಯೆಂದದಿನರಿದು ಬೇಗದಿ

ಕಾಲಮೀರದೆ ವೈದ್ಯವನು ಮಾಡಲ್ಕೆ ಗುಣವಹುದು (೫-೧೧)

ಕುದುರೆ ದೇಹದ ರೋಗ ಲಕ್ಷಣಗಳನ್ನು ವಿವರಿಸುತ್ತಾ ಬಾಲವನು ಮುರಿದು ನೆಲಕ್ಕೆ ಬಿದ್ದು ಏಳುತ ಹೊರಳಾಡಿ ಎದ್ದು ಹಿಂಗಾಲವನು ಝಾಡಿಸುತ್ತಾ, ನೆಲವನ್ನು ಮುಂಗಾಲಿನಿಂದ ಕೆದರುತ್ತ, ಏಳುವುದು ಆಗ ಮೂತ್ರಸಿಕ್ಕಿನ ಚಾಳಿ ಎಂದು ತಿಳಿದು, ಬೇಗನೆ ಸಮಯವನ್ನ ಕಳೆಯದೆ ಉಪಚರಿಸಿದರೆ ಗುಣವಾಗುವುದು. ಆ ರೋಗದಿಂದ ಮುಕ್ತಿ ಹೊಂದುವದು. ಶಾಸ್ತ್ರಕಾರರು ಹೇಳುವಂತೆ ಪ್ರಾಚೀನ ಕಾಲದಿಂದ ಈ ಹೊತ್ತಿನ ಆಧುನಿಕ ಯುಗದಲ್ಲಿ ವೈದ್ಯರು ಪ್ರಾಣಿಗಳ ಗುಣಾವಗುಣಗಳನ್ನು ಅರಿತು ಉಪಚರಿಸುತ್ತಿರುವದು ಒಂದು ವಿಶೇಷ. ಕೆಲವೊಂದು ಕಡೆ ಇದಕ್ಕೆ ಅಪವಾದ ಎಂಬಂತೆ ಪ್ರಾಣಿಗಳನ್ನು ಅರಿತುಕೊಳ್ಳದೆ ಸಾಯಿಸುತ್ತಿರುವುದು ವಿಪರ್ಯಾಸ. ಯಾವುದೇ ಪದವಿ ತರಬೇತಿ ಇಲ್ಲದ ದಿನಮಾನದಲ್ಲಿ ಅವರು ಕಲಿತ ವೈದ್ಯೋಪಚಾರ ಪದ್ಧತಿ, ನಿಯಮ ಸಿದ್ಧಾಂತಗಳು, ಇಂದಿನ ಆಧುನಿಕ ತಂತ್ರಜ್ಞಾನದಿಂದಲು ಗುಣಪಡಿಸಲು ಸಾಧ್ಯವಾಗದು. ಇಂತಹ ಪಂಡಿತರ ಪರಂಪರೆಯನ್ನು ಪ್ರಾಚೀನ ಕಾಲದಿಂದ ಇಂದಿನವರೆಗೂ ಗುರುತಿಸಲು ಸಾಧ್ಯವಿದೆ.

ಇಂಗಳದ ಮೇಣ ನುಗ್ಗಿಯ ತಾಟೆ ಬಜೆವಾಯಿವ

ಳಂಗ ಹಿಪ್ಪಲಿಯ ಮೂಲ ಹೊನ್ನಾವರಿಕೆಯ ಪು

ಷ್ಪಂಗಳಜಿವಾನ ಕಾರ್ಚಿಯ ಗಡ್ಡೆ ಕರಿಲಕ್ಕಿಯ ಮುಗುಳು ಸೈಂಧಲವಣಾ

ಮುಂಗಲಿಯ ಮೂಗಿವರ ಗಡ್ಡೆ ಬೋನಗಾರಿಯ ಕಾಯಿ

ಭಂಗಿ ಬೊಳ್ಳೊಳ್ಳಿ ಹಬ್ಬೇವಿನ ಮುಗುಳು ತ್ರಿಕಂಟು

ಕಂಗಳ ಹದಿನೆಂಟು ಬಿಸಿನೀರು ಮಧುವಿನೋಳ್ ಕೊಡಲೇಳು ವಾಯುಪರಿಹರವೂ(೬-೭)

ಇಂಗಳದ ಮೇಣ, ನುಗ್ಗಿಯ ತೊಗಟೆ, ಬಜೆ, ವಾಯಿವಂಗಳ, ಹಿಪ್ಪಲಿಯಮೂಲ, ಹೊನ್ನಾವರಿಕೆ, ಪುಷ್ಪಂಗಳ, ಅಜಿವಾನ, ಕಾರ್ಚಿಯಗಡ್ಡೆ, ಕರಿಲೆಕ್ಕಿಯ ಮಗುಳು, ಸೈಂಧಲವಣಾ, ಮಂಗಲಿಯ ಮೂಗಿವರ ಗಡ್ಡೆ, ಬೋನಗಾರಿಯ ಕಾಯಿ, ಭಂಗಿ, ಬಿಳ್ಳೊಳ್ಳಿ, ಹಬ್ಬೇವಿನ ಮಗುಳ್, ತ್ರಿಕಟುಕಂಗಳ ಹದಿನೆಂಟು ಬಿಸಿನೀರು ಮಧುವಿನೊಳ್ ಮುಂತಾದವುಗಳನ್ನು ಕೂಡಿಸಿ, ಅರೆದು ಕಷಾಯ ಮಾಡಿ ಕುದುರೆಗೆ ಕೊಡಲು ವಾಯುರೋಗ ಗುಣವಾಗುವುದು. ನಿಸರ್ಗದಲ್ಲಿ ಸಿಗುವ, ಹೆಚ್ಚು ವೆಚ್ಚದಾಯಕವಲ್ಲದ ಇಂತಹ ಗಿಡಮೂಲಿಕೆಗಳಿಂದ ರೋಗಗಳಿಗೆ ಚಿಕಿತ್ಸೆ ಮಾಡುವ ಪದ್ಧತಿ ಪ್ರಾಚೀನ ಕಾಲದಿಂದಲೂ ಬೆಳೆದುಬಂದಿದೆ. ಆಧುನಿಕ ತಂತ್ರಜ್ಞಾನದ ಭರಾಟೆಯಲ್ಲಿ ಅದರ ಪ್ರಭಾವ ಕಡಿಮೆ. ಇತ್ತೀಚಿನ ದಿನಗಳಲ್ಲಿ ವೈದ್ಯರು ಆಯುರ್ವೇದ ಗಿಡಮೂಲಿಕೆಗಳತ್ತ ವಾಲುತ್ತಿರುವುದು ಸಂತೋಷದ ಬೆಳವಣಿಗೆಯಾಗಿದೆ.

೧೯ ಪದ್ಯಗಳನ್ನೊಳಗೊಂಡ ೨ನೆಯ ಸಂಧಿಯು ಶುಭ-ಅಶುಭ ಲಕ್ಷಣ ವಿಚಾರವನ್ನು ತಿಳಿಸುತ್ತದೆ. ೩ನೇ ಸಂಧಿಯಲ್ಲಿ ಅಶ್ವಗಳ ಜನನದ ಕುರಿತು ೧೩ ಪದ್ಯದಲ್ಲಿ ಚರ್ಚಿಸಿದರೆ, ೪ನೆಯ ಸಂಧಿಯು ೧೮ ಪದ್ಯಗಳನ್ನು ಹೊಂದಿದ್ದು, ನಾನಾವಿವಿಧ ರೋಗ ಸೂಚನೆಯ ಬಗ್ಗೆ ಮಾಹಿತಿ ನೀಡುತ್ತದೆ. ೫ನೆಯ ಸಂಧಿ ವಾಯ್ಮುಖ ರೋಗಾವಳಿ ಸೂಚನೆಗೆ ಮೀಸಲಾಗಿದ್ದು, ೧೨ ಪದ್ಯಗಳನ್ನು ಒಳಗೊಂಡಿದೆ. ೬ನೇ ಸಂಧಿ ರೋಗಗಳಿಗೆ ಚಿಕಿತ್ಸೆ ಕುರಿತು ಶಾಸ್ತ್ರೋಕ್ತವಾಗಿ ೧೪ ಪದ್ಯಗಳಲ್ಲಿ ತಿಳಿಯಪಡಿಸುತ್ತದೆ. ಕೊನೆಯದಾಗಿ ೭ನೆಯ ಸಂಧಿ ವೈದ್ಯೋಪಚಾರದ ವಿವರವನ್ನು ೩೨ ಪದ್ಯಗಳಲ್ಲಿ ತಿಳಿಸಲಾಗಿದೆ. ಹೀಗೆ ಕೃತಿಯ ತನ್ನ ವರ್ಗೀಕರಣ ರೂಪದಿಂದಾಗಿ ಅಧ್ಯಯನಕಾರರಿಗೆ ಅತ್ಯಂತ ಸಮೀಪವಾಗುತ್ತದೆ.

೩.೩.೧೦. ಹೇಮಸೂರಿಯ ಅಶ್ವಶಾಸ್ತ್ರ

ನಡುಗನ್ನಡ ಸಾಹಿತ್ಯ ಪರಂಪರೆಯಲ್ಲಿದ್ದ ಹೇಮಸೂರಿಯು ೧೪ನೆಯ ಶತಮಾನದ ಜೈನ ಗ್ರಂಥಕಾರ. ಈತನ ಅಶ್ವಶಾಸ್ತ್ರದಲ್ಲಿ ೧೫೬ ಕುದುರೆಗಳ ವಿವರಗಳಿವೆ. ಅವನ ಪ್ರಕಾರ ಜಾಣ್ಮೆ, ಶಕ್ತಿ ಸ್ವರೂಪಗಳಲ್ಲಿ ಉತ್ತಮವಾದ ಕುದುರೆಗಳ ಸ್ವರ್ಗದಿಂದ ಇಳಿದು, ಒಂದು ಸಮಾನ ಸೌಂದರ್ಯ ಮತ್ತು ಶಕ್ತಿಯ ಕುದುರೆಗಳೊಡನೆ ಕೂಡಿ ಶುದ್ಧ ತಳಿಗಳು ಜನಿಸಿದವು. ಇನ್ನು ಕೆಲವು ಅಸಮಾನ ವಯಸ್ಸಿನ ಕುದುರೆಗಳೊಡನೆ ಕೂಡಿ ಕಡಿಮೆ ಶಕ್ತಿ ಮತ್ತು ಕಡಿಮೆ ವೇಗದ ಕುದುರೆಗಳು ಜನಿಸಿದವು. ಈ ತಳಿಗಳನ್ನು ಅಶ್ವಶಾಸ್ತ್ರಜ್ಞರೇ ಗುರುತಿಸಿದರೆಂದು ಈತನು ಅಭಿಪ್ರಾಯಪಡುತ್ತಾನೆ.

"ಹೇಮಸೂರಿಯು ಮುಂದುವರಿದು ಕುದುರೆಗಳ ಸುಳಿ, ಪುಂಡ್ರ, ಪುಷ್ಪಗಳನ್ನು ಆಧರಿಸಿ ಉತ್ತಮೋತ್ತಮ, ಉತ್ತಮ, ಮಧ್ಯಮ, ಉತ್ತಮ ಅಧಮ, ಅಧಮಾಧ್ಯಮ ಎಂದು ವಿಂಗಡಿಸಿದ್ದಾನೆ. ಅವನ ಪ್ರಕಾರ ಅಂಕುಶಪುಂಡ್ರಿ, ಅಂಗದಿ, ಅಗ್ನಿಸತ್ವ, ಅಮರೇಶ, ಅಶ್ವಪತಿ, ಅಷ್ಟಗ್ರಹಪುಂಡ್ರೀ, ಅಷ್ಟಮಂಗಲ, ಆಕಂಡಲ, ಅನಾಯೀ ಬಹುಕೇಲೀ, ಬಾಣಪುಂಡ್ರೀ, ಬ್ರಹ್ಮಸತ್ವ, ಚಕ್ರಪಂಡ್ರೀ, ಚಂಡಕ್ರಮ, ಚಂದ್ರಕ, ಚಂದ್ರಪುಂಡ್ರೀ, ದಿಕ್ಪಾಲ, ದೇವದೂತಿ, ದೇವಮಣಿ, ದೇವೇಶ, ದೋಷಪಾದಿ, ಧ್ವಜಪುಂಡ್ರಿ, ಗಂಧರ್ವ, ಹಯರಾಜ, ಹಲಪುಂಡ್ರೀ, ಜಯಪ್ರದ, ಜಿನಾನಂದಿ, ಕಮಲದಳ ಪುಂಡ್ರೀ, ಕ್ಷೇಮಕರ, ಕ್ಷತ್ರಿಯ ಸತ್ವ, ಖಡ್ಗಪುಂಡ್ರೀ, ಕಲಿಹಾರಿ, ಕಲ್ಪತರುಪುಂಡ್ರೀ, ಕಿರೀಟಪುಂಡ್ರೀ, ಕೃಷ್ಣಾಂಕ, ಮಂಜುಗತಿ, ಮುಂದುರೇಶ, ಮಹಾಧಾನಿ, ಮುಕುರಪುಂಡ್ರೀ, ಮುನಿಸತ್ವ, ನವಮೂರ್ತಿ, ನಷ್ಟಾರೀ, ನಕ್ಷತ್ರಪುಂಡ್ರೀ, ನಿಶ್ರೇಣಿಪುಂಡ್ರೀ, ಪಂಚಕಲ್ಯಾಣಿ ಪಂಚತರು, ಪತ್ರಪುಡ್ರೀ, ಪೂರ್ಣಪದ್ಮಪುಡ್ರೀ, ರಥಪುಂಡ್ರೀ, ಶಂಖಪುಂಡ್ರೀ, ಶರವೇಗಿ, ಶಿರೋಮಣಿ, ಸುಖದ, ಸೂರ್ಯಜಯ, ಸ್ವಸ್ತಿಕಪುಂಡ್ರೀ, ತಾರಕ, ತುರಂಗಮ, ತ್ರೇತಾಗ್ನಿಪುಂಡ್ರೀ, ಉದ್ಧರೀ, ವಜ್ರಪುಂಡ್ರೀ, ವಸಂತಕ, ವಾಸವಸತ್ವ, ವಾಹನಾಢ, ವಿನಯೀ, ವಿವಿಧಚಾರೀ, ವೃಂತಾಕಪುಂಡ್ರೀ, ಯಮಸತ್ವಗಳು, ಉತ್ತಮೋತ್ತಮ ಕುದುರೆಗಳು.

ಅನಾಕಲೀ, ಬ್ರಾಹ್ಮಣಸತ್ವ, ಚಂದ್ರಜಯ, ದುಂದುಭಿ, ಧರ್ಮಪಾದಿ ಕುಬೇರಸತ್ವ, ಮಹಾಸಾರ, ನಂದನ, ನೀಚಬುದ್ಧಿ, ಸಾಮುದ್ರ, ಸಿಂಹಕರ್ಮ ಸುಕೀರ್ತ, ಸುಬುದ್ಧಿ, ಯಶೋಧ ಎನ್ನುವ ಕುದುರೆಗಳು ಉತ್ತಮ ಕುದುರೆಗಳು.

ಗಂಧರ್ವಸತ್ವ, ಈಶಾನಸತ್ವ, ಕಿನ್ನಡಸತ್ವ, ಪಿಶಾಚಸತ್ವ, ಮರುಣಸತ್ವ, ವಾಯುಸತ್ವ, ಯಕ್ಷಸತ್ವ ಕುದುರೆಗಳು ಉತ್ತಮ ಮಧ್ಯಮ ಕುದುರೆಗಳು.

ತಿರ್ಯಕ್‌ಪುಂಡ್ರೀ, ವೈಶ್ಯಸತ್ವ ಕುದುರೆಗಳು ಉತ್ತಮಾಧಮ ಕುದುರೆಗಳು. ಅಕ್ರಮ, ಅಜಸತ್ವ, ಅಜಸಾರ, ಅಪಕೀರ್ತಿ, ಅಮಂಗಲ, ಅಮಿತಾಶಿ, ಅಲ್ಪಕಾಮ, ಅಲ್ಪಗತಿ, ಅಲ್ಪಮತಿ, ಅಲ್ಪಸಾರ, ಆನಂದಧಾರೀ, ಬಂಧುನಾಶೀ, ಬಲಹಾರಿ, ಬಹುಕೋಪಿ, ಬಹುಭೋಜಿ, ಬಹುಹಾನಿ, ಭಿನ್ನಕರ್ಣೀ, ಭಿನ್ನಗಂಥೀ, ಚಪಲ, ಚಲಬುದ್ಧಿ, ಚಲಪಾದಿ, ಚಾಮರಪುಂಡ್ರೀ, ಛತ್ರಪುಂಡೀ, ಛಾಯಾಹೀನ, ಚೋರ, ದಂಡಪುಂಡ್ರೀ, ದಂಡ್ಯ, ದಾಡದೋಷಿ, ದೋಷಿ, ಗತಿಹೀನ, ಹೀನಗುಣ, ಕ್ಲೇಶದ, ಕ್ಷೇಮಹಾರಿ, ಕೀರ್ತಿಹಾರಿ, ಕುಶಲಹಾರಿ, ಮಂದಚಾರಿ, ಮಹಾದೋಷಿ, ಮಿತಕಾಯ, ಮಾನಸತ್ವ, ನಷ್ಟದಾನಿ, ನಾಶಕ, ನಿಋತಿಸತ್ವ, ನಿದ್ರಾಲು, ಪಕ್ಷಿಸತ್ವ, ಪಾಪಿಷ್ಠ, ರೋಗದ, ಶೂದ್ರಸತ್ವ, ತ್ರುಟಿತಪುಂಡ್ರೀ, ಕುದುರೆಗಳು, ಅಧಮ ಕುದುರೆಗಳು.

ಆಕಲೀ, ಬಕಬುದ್ಧಿ, ಹೀನಕಾಂತಿ, ಖರಸತ್ವ, ಕುಬುದ್ಧಿ, ಕೃಷ್ಣಪುಂಡ್ರೀ, ಪಿಶಾಚಸತ್ವ, ರಾಕ್ಷಸಸತ್ವ, ಶೂಲಪುಂಡ್ರೀ, ಶೃಂಖಲಪುಂಡ್ರೀ, ಸರ್ಪಪುಂಡ್ರೀ, ಸರ್ಪಸತ್ವ ಕುದುರೆಗಳು ಅಧಮಾಧಮ ವರ್ಗಕ್ಕೆ ಸೇರಿದುವು."[೨೨]

ಹೇಮಸೂರಿಯ ಕೃತಿಯ ವೈಶಿಷ್ಟ್ಯವೆಂದರೆ ಆತ ನೀಡುವ ೧೫೭ ಕುದುರೆಗಳ ವಿವರಗಳಿಗೆ ಅನುಗುಣವಾದ ಚಿತ್ರಗಳಿರುವುದರಿಂದ ಕೃತಿಯ ಮಹತ್ವ ಹೆಚ್ಚಿದೆ.

೩.೩.೧೧. ಭೋಜನ ಶಾಲಿಹೋತ್ರ

ಕ್ರಿ.ಶ. ೧೧೦೦ರಲ್ಲಿದ್ದ ಭೋಜನು ಶಾಲಿಹೋತ್ರವನ್ನು ಬರೆದಿದ್ದಾನೆ. ಇದರಲ್ಲಿ ೩೫೬ ಪದ್ಯಗಳಿವೆ. ಸಾಹಿತ್ಯಿಕ ಗುಣದಿಂದ ಕೂಡಿದ ಈ ಕೃತಿ ಸೊಗಸಾಗಿದೆ. ಭೋಜವಿರಚಿತ ಯುಕ್ತಿಕಲ್ಪತರುವಿನಲ್ಲಿ ಅಶ್ವಯುಕ್ತಿ ಎನ್ನುವ ಅಧ್ಯಾಯವೊಂದಿದ್ದು, ಅದರಲ್ಲಿ ಈ ಶಾಲಿಹೋತ್ರದ ಅನೇಕ ಶ್ಲೋಕಗಳಿವೆ. ಇವನು ಒಬ್ಬ ಶ್ರೇಷ್ಠ ರಾಜನಾಗಿದ್ದರೂ ಸಹಿತ, ಶಾಸ್ತ್ರ ಸಾಹಿತ್ಯ ರಚನೆ ಮತ್ತು ಕಾವ್ಯ ಪುರಾಣ ರಚನೆ ಮಾಡುವಲ್ಲಿ ಆಸಕ್ತಿ ಇರುವುದನ್ನು ನೋಡಿದರೆ ರಾಜ್ಯಾಡಳಿತದ ಜೊತೆಗೆ ಸಾಹಿತ್ಯ ಪೋಷಕ ಮತ್ತು ಸ್ವತಃ ಕವಿಯಾಗಿದ್ದನೆಂಬ ಉಲ್ಲೇಖಗಳು ಇತಿಹಾಸ ಮತ್ತು ಸಾಹಿತ್ಯದಿಂದ ತಿಳಿದುಬರುತ್ತದೆ.

೩.೩.೧೨. ಅಶ್ವಶಾಸ್ತ್ರ

ಈ ಕೃತಿಯು ಕುದುರೆಯ ರೋಗಗಳಿಂದ ಅದರ ಆಯುಷ್ಯವನ್ನು ತಿಳಿಸುತ್ತದೆ. ಕೃತಿಯ ಕರ್ತೃ ಯಾರು ಎಂಬುದು ಪ್ರಶ್ನೆಯಾಗಿ ಉಳಿದಿದೆ. ಕೃತಿಯು ಕೆ.೧೫೭೨/೨ ನಂಬರಿನ ೮.೨" x ೧.೫" ಅಳತೆಯನ್ನು ಹೊಂದಿದ್ದು, ಕನ್ನಡ ಅಧ್ಯಯನ ಸಂಸ್ಥೆ ಮೈಸೂರಿನಲ್ಲಿದೆ. ಕೇವಲ ೫೬-೫೮ ಮೂರು ಪತ್ರಗಳು ಮಾತ್ರ ಇದ್ದು ಅಸಮಗ್ರವಾಗಿದೆ. ಬರಹ ಚೆನ್ನಾಗಿದ್ದು, ಇದೇ ಕಟ್ಟಿನಲ್ಲಿ ಅಶ್ವಶಾಸ್ತ್ರಕ್ಕೆ ಸಂಬಂಧಸಿದ ಇನ್ನೊಂದು ಕೃತಿ ಇದೆ. ಆದಿಪದ್ಯವೊಂದು ಈ ರೀತಿ ಮಾಹಿತಿ ನೀಡುತ್ತದೆ.

> "ಅಶ್ವಶಾಸ್ತ್ರ ಕುದುರೆ ಹುಟ್ಟಿದ ತಿಂಗಳು ೧ಕ್ಕೆ ಮೇಲಿಣ ಹಲ್ಲು ಹುಟ್ಟು
> ವವು .... ಎರಡು ಹಲ್ಲು ಹುಟ್ಟುವವು ೧ ತಿಂಗಳು ೩ಕ್ಕೆ ಮೇಲಣ
> ಕೆಲಸ ಹಲ್ಲು ಹುಟ್ಟುವ ||"[೨೩]

ಈ ಮೇಲಿನ ಸಾಲುಗಳನ್ನು ಗಮನಿಸಿದಾಗ ಹಲ್ಲು ಮತ್ತು ರೋಗಗಳಿಂದ ಆಯುಷ್ಯವನ್ನು ನಿರ್ಣಯಿಸುವುದರಿಂದ ಇದೇ ರೀತಿ ಅಭಿನವಚಂದ್ರನ ಅಶ್ವಶಾಸ್ತ್ರದ ಆರು ಮತ್ತು ಒಂಬತ್ತನೆಯ ಅಧ್ಯಾಯದಲ್ಲಿ ಹಲ್ಲುಗಳ ವಿಚಾರ ಬರುತ್ತದೆ. ಹಾಗೆಯೇ ರಾಮಚಂದ್ರಕವಿಯ ಅಶ್ವಶಾಸ್ತ್ರ ಕೃತಿಯಲ್ಲಿಯೂ ಸಹ ಇಂತಹ ಉದಾಹರಣೆಗಳು ಸಿಗುವುದರಿಂದ ಕವಿ ರಾಮಚಂದ್ರನ ಕೃತಿಯನ್ನು ಪ್ರತಿಮಾಡಿರಬೇಕು ಎಂಬ ವಿಚಾರವು ವಿಧಿತವಾಗುತ್ತದೆ. ಏಕೆಂದರೆ ೧೮ನೇ ಅಧ್ಯಾಯದಲ್ಲಿ ರಾಮಚಂದ್ರ ಕವಿ ಸ್ಪಷ್ಟವಾಗಿ ಹಲ್ಲುಗಳಿಂದ ಕುದುರೆಯ ಆಯುಷ್ಯವನ್ನು ನಿರ್ಣಯಿಸುವುದರಿಂದ ಕೃತಿಯ ಆ ವಿಚಾರಕ್ಕೆ ಹತ್ತಿರವಾಗುತ್ತದೆ. ಇನ್ನೂ ಕೆಳಗಿನ ಸಾಲುಗಳನ್ನು ನೋಡಿದಾಗ ಸ್ಪಷ್ಟವಾಗಿ ತಿಳಿದುಬರುತ್ತದೆ.

> "ಯಿ ಪ್ರಕಾರದ ರೇಖೆ ದೊಡ್ಡಿತ್ತಾಗಿಯಿದ್ದಡೆ ಅದಕ್ಕೆ ೮ ವರುಷ
> ದಾಯುಷ್ಯ ಕಂಣೊಳಗೆ ಕೆಂಪಿನ ರೇಖೆಯಿರೆ ೮ ವರುಷದಾಯುಷ್ಯ ಕಿವಿ
> ಯಲ್ಲೂ ದಾರೆಯನೆತ್ತ ಕೆಂಪಾಗಿ ಯಿದ್ದಡಂ ೮ ವರುಷದಾಯುಷ್ಯ| ಯಿ
> ಪ್ರಕಾರದಲ್ಲೂ ನಾಲ್ಕು ವುಂಟಾದರೆ ೩೨ ವರುಷದಾಯುಷ್ಯವೆಂದು ಅರು
> ವುದು ಹೊಕ್ಕುಳು ನಾಲಗೆ ಮೂಗು ಯಿ ೩ ಹೊಲಸುನಾತರೆ ೩
> ವರುಷಕ್ಕೆ ಸಾವುದೆಂದಮಿವುದು ಯಿದು ಆಯುಷ್ಯವನಮಿವ ಕ್ರಮ|| ಶ್ರೀ"[೨೪]

ಹೀಗೆ ಕೃತಿಯು ರೇಖೆಗಳಿಂದ ಕುದುರೆಯ ಆಯುಷ್ಯವನ್ನು ಅದರ ಲಕ್ಷಣಗಳಿಗನುಸಾರವಾಗಿ ತಿಳಿಸುತ್ತದೆ.

೩.೩.೧೩. ಅಶ್ವವೈದ್ಯ (ಸಚಿತ್ರ)

ಶಾಸ್ತ್ರಕ್ಕೆ ಸಂಬಂಧಪಟ್ಟ ಈ ಕೃತಿಯ ಕರ್ತೃಯಾರು ಎಂಬುದು ಅಸ್ಪಷ್ಟ. ಆದರೂ ಸಹಿತ ಇದು ಕುದುರೆಯ ಸುತ್ತ ಹೆಣೆದುಕೊಂಡಿರುವ ರೋಗಾದಿಗಳಿಗೆ ಉಪಶಮನ ಮಾಡುವ ವಿಧಾನವನ್ನು

ತಿಳಿಯಪಡಿಸುವ ಶಾಸ್ತ್ರ ಕೃತಿಯಾಗಿದೆ. ಕೃತಿಯ ಅಪ್ರಕಟಿತವಾಗಿದ್ದು, "ಕೆ.ಎ. ೫೭೧ ನಂಬರಿನ ೬" x ೧೨" ಅಳತೆಯ ಹಸ್ತಪ್ರತಿ ರೂಪದಲ್ಲಿರುವ ಇದು ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿ ಭಾಂಡಾರದಲ್ಲಿದೆ. ಕೃತಿಯು ಅಸಮಗ್ರತೆಯಿಂದ ಕೂಡಿದ್ದು ಜೀರ್ಣಾವಸ್ಥೆಯಲ್ಲಿದೆ. ಲಿಪಿ ಮತ್ತು ಭಾಷೆಯು ಮೋಡಿ ಅಕ್ಷರವನ್ನು ಹೊಂದಿರುವ ಈ ಸಚಿತ್ರ "೧-೮೪ ಪತ್ರಗಳಲ್ಲಿ ೧೪ ಬಣ್ಣ ಬಣ್ಣದ ಚಿತ್ರಗಳಿವೆ. ೧೯ನೇ ಶತಮಾನಕ್ಕೆ ಸೇರಿದ ಈ ಕೃತಿಯ ಆರಂಭದಲ್ಲಿ ಈ ರೀತಿ ಹೇಳಲಾಗಿದೆ.

> ಕುದುರೆಗಳೊಸಬ್ಬು । ಚೀಮಾರಿಯಿಂದಾ ಬಾಯಿ ಮುಚ್ಚಿಕೊಂಡು ॥
> ಹಲ್ಲುಗಳು ಹೊತ್ತುಕೊಂಡು ಅವಷಧಿ ಶೀಷೆಯಲ್ಲಿ ಹಾಕಿ ಕುದುರೆಮೂಗಿ
> ನಿಂದಾ ಹೊಟ್ಟೆವಳಗೆ ಹೋಗುವಂತೆ ಕುಡಿಸಬೇಕು ॥

ಕುದುರೆಗೆ ಔಷಧವನ್ನು ಕೊಡುವ ವಿಧಾನವನ್ನು ಈ ಸಾಲು ಸ್ಪಷ್ಟಪಡಿಸುತ್ತವೆ ಅಲ್ಲದೇ ಕೃತಿಯಲ್ಲಿ ರೋಗ ಸ್ವರೂಪ ಮತ್ತು ಇಲಾಜನ್ನು ಕುರಿತ ವಿವರಗಳಿವೆ. ಉದಾಹರಣೆಗೆ ಕುದುರೆಗಳಿಗೆ ನಾಡಿ ನೋಡತಕ್ಕ ಪರೀಕ್ಷೆ. ಮೊದಲಲ್ಲಿ ಕಣ್ಣು ನೋಡಬೇಕು, ಕಣ್ಣಿನ ನರಗಳು ಕೆಂಪು ವರ್ಣವಾಗಿದ್ದರೆ ಕಾಯಿಲೆಯಾಗಿದೆ, ಬೂದ ವರ್ಣವಾಗಿದ್ದರೆ ಚೌಹರ್‌ಬಾದ್, ನಾಲಿಗೆ ನರಗಳೂ ಬೂದುವರ್ಣ, ಗಬ್ಬವಾಸನೆ (ಡಿಟ್ಟೊ) ಸಹ ಎಂದು ಹೇಳಲಾಗಿದೆ.

> ಲೇಪಮಾಡೊಯಿವಾಜು॥ ಯಿರುಳ್ಳಿರಸ ಪಾವು ೧ ಹರಳೆರಸ ಪಾವು ೧
> ....ಶ್ರೀ ಚೆಕ್ಕೆ ಶೇರು ೫ XXX ತಕ್ಕಾಳೆ ರಸ ೫ ಸಾಸ್ವೆಪುಡಿ ಶೇರು ೫
> ಬಿಳಿಸಾರ ಮೇಲೆ ಕಾಶಿ ಒದಿವ್ಸ .... ತೊಳೆಯುವುದು ಮಾಡ
> ತಕ್ಕದ್ದು ಲೇಪ್ರಾದಿವ್ಸ ....[೫೫]

ಎಂಬುದನ್ನು ಗಮನಿಸಿದಾಗ ಪ್ರಮಾಣ ರೂಪದಲ್ಲಿ ಕುದುರೆಗೆ ಇಂತಿಷ್ಟು ದಿವಸ ಔಷಧವನ್ನು ಕೊಡಬೇಕು ಎಂಬ ವಿಚಾರವನ್ನು ತಿಳಿಸುತ್ತದೆ.

೩.೪. ಅನುಷಂಗಿಕ ಕೃತಿಗಳು

೩.೪.೧. ಚಾವುಂಡರಾಯನ ಲೋಕೋಪಕಾರ

ಶಾಸ್ತ್ರಕಾರರಿಗೆ ನಿಘಂಟಾಗಿ, ಸಾಮಾನ್ಯ ಜನರ ಜೀವನೋಪಯೋಗಿ, ಶಾಸ್ತ್ರವಾಗಿ, ವಿದ್ವಾಂಸ ಪಂಡಿತರ ಕೈಗನ್ನಡಿಯಾಗಿ, ಸಂಶೋಧಕರಿಗೆ ಮಾರ್ಗದರ್ಶಿಯಾಗಿ, ಬಹು ಜನರ ಆಶಯದಾಯಕ ಶಾಸ್ತ್ರ ಕೃತಿಯಾಗಿರುವ ಲೋಕೋಪಾರ, ಶ್ರೇಷ್ಠ ಕೃತಿಗಳ ಸಾಲಿನಲ್ಲಿ ಮುಂಚೂಣಿಯಲ್ಲಿರುವ ಕೃತಿ. "ಮನುಷ್ಯನಿಗೆ ಜೀವಿತ ಕಾಲದಲ್ಲಿ ಅವಶ್ಯವಾಗಿರುವ ವಿದ್ಯೆಗಳೆಲ್ಲಾ ಇದರಲ್ಲಿ ಅಡಗಿರುವುದರಿಂದ ಈ ಹೆಸರು ಗ್ರಂಥಕ್ಕೆ ಸಂಪೂರ್ಣವಾಗಿ ಅನ್ವರ್ಥಕವಾಗಿದೆ ಎಂದು ಗ್ರಂಥ ಕರ್ತೃನೇ ಹೇಳಿರುವನು ಉದಾಹರಣೆಗೆ:

ಮೇದಿನಿಯಪಕಾರಂ ಕಲಿ

ಪೋದುಗಳವನಿಲ್ಲ ನೆಲಸಿರ್ದು ಬುಧೋ

ಪಾದೇಯಮಾದ ದೂಸರೆ

ನಾದುದೊ ಲೋಕೋಪಕಾರ ಮೇನ ಮೇನನ್ವರ್ಥಂ (೧-೨೩)

ಎಂಬ ಪೀಠಿಕೆಯ ೨೩ನೆಯ ಪದ್ಯದಲ್ಲಿ ಹೇಳಿಕೊಂಡಿರುವನು."[೨೬] ಒಂದೆರಡು ಹಸ್ತಲಿಖಿತ ಪ್ರತಿಗಳ ಅಧಿಕಾರಾಂತ್ಯ ಗದ್ಯದಲ್ಲಿ 'ಜನೋಪಾಕಾರ' ಎಂದು, ಲೋಕ ಶಬ್ದ ಪರ್ಯಾಯವಾದ ಜನ ಶಬ್ಧವೂ ಬರೆಯಲ್ಪಟಿರುವುದು. 'ಲೋಕಸ್ತುಭುವನೇ ಜನೇ' ಎಂಬ ಅಮರಸಿಂಹನ ನಾಮಲಿಂಗಾನು ಶಾಸನದ ನಿಘಂಟುವಿನ ಆಧಾರದಿಂದ ಲೋಕ ಶಬ್ದಕ್ಕೆ ಹದಿನಾಲ್ಕು ಲೋಕಗಳೆಂದೂ, ಜನಗಳೆಂದೂ, ಎರಡು ಅರ್ಥಗಳೂಂಟು. ಪ್ರಕೃತ ಗ್ರಂಥದಲ್ಲಿ ಹೇಳಿರುವ ವಿಷಯಗಳೆಲ್ಲವೂ ಜನಗಳಿಗೆ ಮಾತ್ರವೇ ಸಂಬಂಧಿಸಿರುವುದುರಿಂದ ಇಲ್ಲಿ ಲೋಕ ಶಬ್ದಕ್ಕೆ ಜನ ಎಂಬರ್ಥವನ್ನು ಸ್ವೀಕರಿಸುವುದರಿಂದ, ಜನಗಳಿಗೆ ಉಪಕಾರವನ್ನು ಮಾಡುವುದು ಎಂದು, ಈ ಗ್ರಂಥದ ಹೆಸರಿನ ಶಬ್ದಾರ್ಥವು ಜನಗಳಿಗೆ ತುಂಬಾ ಪ್ರಯೋಜನಕಾರಿಗಳಾಗಿರುವ ವಾಸ್ತು, ವೈದ್ಯ ಮೊದಲಾದ ಹಲವು ವಿಷಯಗಳು ಈ ಗ್ರಂಥದಲ್ಲಿ ಪ್ರತಿಪಾದಿಸಲ್ಪಟ್ಟಿರುವುದರಿಂದ ಗ್ರಂಥ ಕರ್ತೃವು ಹೇಳಿರುವ ಅನ್ವರ್ಥಕವೆಂಬುದು ಈ ಗ್ರಂಥಕ್ಕೆ ಪಾರಮಾರ್ಥಿ(ತಾತ್ವಿ)ಕವಾಗಿಯೇ ಇರುವುದು.

ಅಲೌಕಿಕ ವಿಷಯಗಳ ತಿಳುವಳಿಕೆಗೆ ವಿದ್ಯೆ(ಜ್ಞಾನ)ಯೆಂದೂ, ಲೌಕಿಕ ವಿಷಯದ ತಿಳುವಳಿಕೆಗೆ ವಿಜ್ಞಾನವೆಂ(ಕಲೆ)ದೂ, (ಕಲೆಗಳನ್ನು ವಿದ್ಯೆಯೆಂದೂ ವ್ಯವಹರಿಸುವುದೂ ಉಂಟು) ಹೆಸರು. ಈ ಕಲೆಗಳು ಅರುವತ್ತು ನಾಲ್ಕೆಂದು (೬೪) ಪರಿಗಣಿತವಾಗಿವೆ. ಸಂಸ್ಕೃತದಲ್ಲಿ ಅಲೌಕಿಕ ವಿಷಯಗಳನ್ನು ಅಂದರೆ ಮೋಕ್ಷ, ಸ್ವರ್ಗ, ನರಕಗಳ ಸ್ವರೂಪಾದಿಗಳನ್ನು ತಿಳಿಯಲು ವೇದ-ವೇದಾಂಗ, ಧರ್ಮಶಾಸ್ತ್ರ, ಪುರಾಣೇತಿಹಾಸಗಳು ಏರ್ಪಟ್ಟಿರುವವು. ಹಾಗೇಯೆ ಲೌಕಿಕ ವಿಷಯಗಳನ್ನು ಎಂದರೆ ಮನುಷ್ಯನು ಈ ಲೋಕದಲ್ಲಿ ಸುಖವಾಗಿ ಜೀವನ ವೃತ್ತಿಯನ್ನು ನಡೆಸಿಕೊಂಡು ಬರಲು ತಿಳಿದುಕೊಳ್ಳಬೇಕಾಗಿರುವ ವಿಷಯಗಳನ್ನು ತಿಳಿಸುವ ಕಲೆಗಳಿಗೆ ಪ್ರತಿಯೊಂದಕ್ಕೂ ಒಂದೊಂದು ಶಾಸ್ತ್ರಗಳೇ ಏರ್ಪಟ್ಟಿರುವವು. ಪ್ರಕೃತದಲ್ಲಿ ಈ ಗ್ರಂಥ ಕರ್ತೃವು ಈ ಜ್ಞಾನ ವಿಜ್ಞಾನಗಳಲ್ಲಿ ವಿಜ್ಞಾನಕ್ಕೆ ಸಂಬಂಧಪಟ್ಟ, ಜ್ಯೋತಿಶಾಸ್ತ್ರ, ವಾಸ್ತುಶಾಸ್ತ್ರ, ಜಲಾರ್ಗಳ, ಸೂಪಶಾಸ್ತ್ರ, ವೈದ್ಯಶಾಸ್ತ್ರ ಮೊದಲಾದ ಮನುಷ್ಯನಿಗೆ ಉಪಯೋಗಕರವೂ, ಸುಖಸಾಧನವೂ ಆದ ಹಲವು ವಿಷಯಗಳನ್ನು ಈ ಗ್ರಂಥದಲ್ಲಿ ಪ್ರತಿಪಾದಿಸಿರುವನು.

ಈ ಲೋಕೋಪಕಾರ ಗ್ರಂಥವನ್ನು ರಚಿಸಿದ ಕವಿಗೆ 'ಚಾವುಂಡರಾಯ'ನೆಂದು ಹೆಸರು. ಇದನ್ನು ಕವಿಯೇ ಈ ಗ್ರಂಥದ ಪೀಠಿಕಾ ಪ್ರಕರಣ ಪದ್ಯದಲ್ಲೂ, ಅಧಿಕಾರಾಂತ್ಯ ಗದ್ಯಗಳಲ್ಲೂ, ಅಧಿಕಾರದ ಆದಿಪದ್ಯದಲ್ಲೂ ಹೇಳಿಕೊಂಡಿರುವನು.

ಎನೆ ನೆಗಳ್ದಿ ಭಟ್ಟಪಂಗಂ
ವಿನುತಗುಣಾಯತ್ತೆ ಮಲ್ಲಿಕಬ್ಬೆಗಮಾದಂ ॥
ತನಯಂ ದ್ವಿಜವಂಶೋತ್ತಮ ।
ನೆನಿಸಿದ ಚಾವುಂಡರಾಯ ನೂರ್ಜಿತತೇಜಂ (೧-೧೨)

ಅವನೀಚಕ್ರಂ ಮನಗೊಂಡ ಚಳಿತವಚನಂ ಶಿಷ್ಟಕಲ್ಪದ್ರುವಂ ಕಾ
ವ್ಯವಿಳಾಸಂ ವಾಗ್ವಧೂಮಂಡನ ಮುಖತಿಲಕಂ ಧರ್ಮಧರ್ಮಾತ್ಮಜಂ ದಾ॥
ನವಿನೋದಂ ವಿಪ್ರಲೋಕೋತ್ತಮನೆನೆ ನೆಗಳ್ದಿಂಹಾರ (ನೀಹಾರ) ದುಗ್ಧಾ
ರ್ಣವಪೂರ್ಣೇಂದು ಪ್ರಭಾಭೂಸುರವಿಶದಯಶೋ ವ್ಯಾಪ್ತಿ ಚಾವುಂಡರಾಯಂ(೧-೧೬)

ಪೀಠಿಕಾ ಪ್ರಕರಣ ಮತ್ತು ಉಪಸಂಹಾರ ಸ್ಥಳಗಳಲ್ಲಿ ಹೇಳಿರುವ ವಿಷಯಗಳಿಂದ ಈ ಕವಿಯ ವಿಷಯವಾಗಿ ಈ ಸಂಗತಿಗಳು ತಿಳಿದುಬರುವವು.

ಈ ಕವಿಯ ಮತ ಕುರಿತು ವಿವರಿಸುವುದಾದರೆ "ಮಂಗಳಪದ್ಯಗಳಲ್ಲಿ ತ್ರಿಮೂರ್ತಿಗಳನ್ನು, ಗಣಪತಿಯನ್ನೂ, ಸರಸ್ವತಿಯನ್ನೂ, ಸ್ತುತಿಸಿ, ಶ್ರುತಿಪುರಾಣ ಶಾಸ್ತ್ರವಿದರಾದ ಪುರಾತನ ಕವಿಗಳನ್ನು ಸ್ತುತಿಸಿರುವುದರಿಂದಲ್ಲೂ, ಅಶ್ವಾಸಾಂತ್ಯ ಗದ್ಯಗಳಲ್ಲಿ "ಹರವರ ಪ್ರಸಾದೋತ್ಪನ್ನವಾಗ್ವಿಳಾಸಂ"[೨೭] ಎಂದು ಹೇಳಿಕೊಂಡಿರುವುದರಿಂದಲೂ ಈತನು ವೈದಿಕಮತದ ಅದ್ವೈತಿಗಳ ಪಂಗಡಕ್ಕೆ ಸೇರಿದ ಬ್ರಾಹ್ಮಣ ವರ್ಣದವನೆಂದು ತಿಳಿದು ಬರುವುದು.

ಚಾವುಂಡರಾಯನು ೧೧೫೦ರಲ್ಲಿ ಜೀವಿಸಿದ್ದು ಈತನು ಲೋಕೋಪಕಾರವೆಂಬ ಗ್ರಂಥವನ್ನು ಬರೆದಿದ್ದಾನೆ. ಎಂದು ಕವಿಚರಿತೆಕಾರರು ಅಭಿಪ್ರಾಯಪಡುತ್ತಾರೆ. ಈ ಕೃತಿಯು ಕನ್ನಡದ ಪ್ರಥಮ ವಿಶ್ವಕೋಶವಾಗಿದ್ದು, ಮುಂದೆ ಬಂದ ಶಾಸ್ತ್ರಕಾರರಿಗೆ ಮಾರ್ಗವಾಗಿದೆ. ಪಂಪ ಹೇಳುವಂತೆ 'ಆನೆನೆಡೆದುದೇ ಮಾರ್ಗಂ' ಎಂಬ ವಿಚಾರ ಚಂಪೂ ಕಾವ್ಯ ರಚಿಸಲಿಕ್ಕೆ ಮಾರ್ಗವಾದರೆ ಲೋಕೋಪಕಾರದಂತಹ ಕೃತಿ ಶಾಸ್ತ್ರಕೃತಿಗಳನ್ನು ರಚಿಸಲಿಕ್ಕೆ ಮಾರ್ಗವಾಗಿದೆ.

ಪಲವುಂ ಲೌಕಿಕಶಾಸ್ತ್ರ ಮುಳ್ಳುದರಿನೀ ಲೋಕೋಪಕಾರಂ ಜಗ
ತ್ತಿಲಕಂ ರಾಜ ಸಮಾಜ ಪೂಜಿತಮಿದಂ ತಾತ್ಪರ್ಯದಿಂದ ಸ್ವಗೋ (೧-೨೪)

ಎಂದು ಹೇಳಿರುವುದರಿಂದ ಈ ಕೃತಿ ಜನರಿಗೆ ಉಪಕಾರವಾಗಲೆಂದು ರಚಿಸಿರುವಂತಿದೆ. "ಹನ್ನೆರಡು ಅಧಿಕಾರಗಳಿರುವ ಈ ಕೃತಿ ಬಹುಸಂಖ್ಯೆಯ ಕಂದಪದ್ಯಗಳನ್ನು ಒಳಗೊಂಡಿದ್ದು, ಸುಮಾರು ೬೪೦ ವೃತ್ತಗಳನ್ನು ಹೊಂದಿದೆ. ಕಂದ, ವೃತ್ತಗಳಲ್ಲಿರುವ ಇದು ಚಂಪೂ ಪ್ರಕಾರದಲ್ಲಿದೆ. ಪಂಚಾಂಗ, ವಾಸ್ತು, ಜಲಾಶಯ ನಿರ್ಮಾಣ, ವೃಕ್ಷಾಯುರ್ವೇದ, ಸುಗಂಧವಾದ, ನರವೈದ್ಯ, ಸೂಪಶಾಸ್ತ್ರ, ವಿಷವೈದ್ಯ,

ಶಕುನಶಾಸ್ತ್ರ, ಜ್ಯೋತಿಷ್ಯ ಎಂಬಿತ್ಯಾದಿ ಹಲವು ಶಾಸ್ತ್ರ ವಿಷಯಗಳನ್ನು ಒಳಗೊಂಡ ಸಮಸ್ತ ವಿಷಯ ಕೋಶವಾಗಿದೆ.

ಪ್ರಸ್ತುತ ಅಶ್ವಶಾಸ್ತ್ರಕ್ಕೆ ಸಂಬಂಧಿಸಿದ ಏಕದಶಾಧಿಕಾರಂ (೧೧) ಸರ್ವಲಕ್ಷಣ ಪರಿಜ್ಞಾನ ಪ್ರಕರಣದ ಪದ್ಯ ೭೩ರಿಂದ ೭೫ ಪದ್ಯಗಳು ಅಂದರೆ ೨೩ ಪದ್ಯಗಳಲ್ಲಿ ಅಶ್ವಲಕ್ಷಣ ಕುರಿತು ಚರ್ಚಿಸಿದ್ದಾನೆ. ಚಾವುಂಡರಾಯನು ಲೋಕೋಪಕಾರದಲ್ಲಿ ಕುದುರೆಗಳು ಮತ್ತು ಅವುಗಳ ವೈದ್ಯವನ್ನು ಕುರಿತು ವಿವರವಾದ ಮಾಹಿತಿಯನ್ನು ನೀಡಿದ್ದಾನೆ. ಆತನ ಪ್ರಕಾರ ಅಷ್ಟಾಂಗ ಹಯಲಕ್ಷಣಗಳು ಹೀಗಿವೆ:

ಅಂಗಂ ಬಹುವಿಧದಾವ
ರ್ತಂ ಗತಿಹೇಷಿತರವ ಲಸದ್ವರ್ಣಂ ಸ
ತ್ವಂ ಗಂಧಂ ರುಚಿಯೆಂದ
ಷ್ಟಾಂಗಂ ಹಯಲಕ್ಷಣಂ ಯಥೋಚಿತ ಮಕ್ಕುಂ (೧೧-೭೩)

ಲೋಕೋಪಕಾರದ ೧೧ನೇ ಅಧ್ಯಾಯದಲ್ಲಿ ಅಂಗ(೭೪-೮೧), ಆವರ್ತ(೮೨-೮೭), ಗತಿ(೮೮) ಹೇಷಿತ(೮೯), ವರ್ಣ(೯೦-೯೧), ಛಾಯ ರುಚಿ (೯೪) ಹೀಗೆ ೭೪ರಿಂದ ೯೪ ಎಂದರೆ ೨೦ ಪದ್ಯಗಳಲ್ಲಿ ವಿವರಿಸಿದ್ದಾನೆ. ಗಂಧವನ್ನು ಕುರಿತು ಆತ ಹೀಗೆ ಹೇಳಿದ್ದಾನೆ:

ತಗುಣೆ ಬಜೆ ಪೊಲಸು ಬೆಳ್ಳು
ಳ್ಳಿ ಗತ್ತ ಮೆಂಬಿವರಿ ಗಂಧ ಮತ್ಕ ಶುಭಂ ಸಂ
ಪಗೆಯ ಸರಸಿಜದ ಚಂದನ
ದ ಗಂಧಮವು ಶುಭದಮಶ್ವ ರಾಜಿಯ ಬೆಮರೋಳ್ || (೧೧-೯೩)

ಹೀಗೆ ಅಶ್ವ ವಿಚಾರವನ್ನು ಸಂಗ್ರಹವಾಗಿ, ಸಮರ್ಥವಾಗಿ ಹೇಳಿದ ಚಾವುಂಡರಾಯನು ೯ನೇ ಸಂಧಿ ೧೯೯-೨೨೪ ಪದ್ಯದಲ್ಲಿ ಅಶ್ವವೈದ್ಯವನ್ನು ತಿಳಿಸಿದ್ದಾನೆ. ಈತನು ಅಶ್ವಗಳನ್ನು ಹೀಗೆ ಪಟ್ಟಿ ಮಾಡಿದ್ದಾನೆ.

ಉದರಾಗ್ನಿ ವಿಷವ ಮದುವಾ
ತದೇಳ್ಗೆಯಿಂ ಪಿತ್ತದೊದವಿನಿಂ ತೀಕ್ಷ್ಣಂ ಶ್ಲೇ
ಷ್ಮದ ಪೆರ್ಚಿಂದಾದಂತಾ
ತ್ರಿದೋಷ ಸಾಮ್ಯದೆ ಸಮಂ ಹಯಾವಳಿಗಕ್ಕುಂ (೯-೧೯೯)

ಮುಂದೆ ಕ್ರಮವಾಗಿ ದೀಪನ(೨೦೦-೨೦೧), ಪಿತ್ತ, ಕಫ, ವಾತ, (೨೦೨), ಸೆಂಬರೋಗ(೨೦೩-೨೦೪) ಕಫ(೨೦೫), ಖಾಸ(೨೦೬-೨೦೭), ಶೂಲಿ(೨೦೮-೨೦೯), ಹೊಟ್ಟೆಯುಬ್ಬರ(೨೧೦), ಕ್ರಿಮಿ(೨೧೧), ಅತೀಸಾರ(೨೧೨), ಮಾತ್ರಕೃಚ್ಛ್ರ, ರಕ್ತ ಮೂತ್ರ(೨೧೩), ಜ್ವರಲಕ್ಷಣ(೨೧೪), ಜ್ವರವೈದ್ಯ(೨೧೫-೧೨೬),

ನಾನಾ ರೋಗಗಳಿಗೆ ಚಿಕಿತ್ಸೆ(೨೧೭-೨೧೯), ಬಾಹು(೨೨೦) ತುರುಕು ಕಜ್ಜಿ(೨೨೧-೨೨೨), ವ್ರಣ(೨೨೩-೨೨೯)ಕ್ಕೆ ಚಿಕಿತ್ಸೆಗಳನ್ನು ಸೂಚಿಸಿದ್ದಾನೆ. ಉದಾ: ಸೆಂಬರೋಗ ಅಂದ ಚಿಕಿತ್ಸೆ ಹೀಗಿದೆ:

ಅನವರ ತವಚ್ಛಜಳಮರಿ
ಸಿನವರ್ಣಂ ಮೊಸರವರ್ಣ ಮಾಗೊಸರ್ವೊಡೆ ಮೂ
ಗಿನೊಳಗಿಲ ಪಿತ್ತ ಕಫ ಸಂ
ಜನಿತಂ ತುರಗಕ್ಕೆ ಸೆಂಬಮೆಂಬುದದಕ್ಕುಂ (೯-೨೦೩)
ಸುರದಾರು ಸೈಂಧವಂ ಜಳ
ಧರಂ ಬಿಡಂ ಬೀಳಲಕ್ಕಿ ಸದ್ಯಃ ಕ್ಷಾರಂ
ಸುರಭಿ ಜಲಮೆಣ್ಣೆ ಯೆಂಬವ
ನಿರದಟ್ಟಿರೆ ನಸ್ಯಯಂ ಕಳಲ್ಗುಂ ಸೆಂಬಂ (೯-೨೦೪)

ಹೀಗೆ ಒಂದು ಶಾಸ್ತ್ರ ಕೃತಿಯ ಬಹುವಿಧವಾದ ಮಾಹಿತಿಯನ್ನು ನೀಡುವುದರ ಮುಖಾಂತರ ಆಕಾಲದ ಜನರ ಬದುಕಿನ ಚಿತ್ರಣ, ಅನುಸರಿಸಿದ ಆಯಾಮಗಳು, ಪರಿಸರ, ಸಾಮಾಜಿಕ ವ್ಯವಸ್ಥೆಯ ವಿಧಾನಗಳು, ಆಚರಣೆ, ನಂಬಿಕೆ, ಪಾಂಡಿತ್ಯ ಮುಂತಾದವುಗಳನ್ನು ಅರಿಯುವಲ್ಲಿ ಸಹಾಯಕವಾಗಿದೆ.

೩.೪.೨. ಕೆಳದಿ ಬಸವರಾಜನ ಶಿವತತ್ತ್ವರತ್ನಾಕರ

ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಕಾವ್ಯ ಕೃತಿಗಳ ಬೆನ್ನಲ್ಲೇ ಉದಯಿಸಿದ ಶಾಸ್ತ್ರ ಕೃತಿಗಳೂ ನಿಜಕ್ಕೂ ಪಂಡಿತರ ಅನುಭವದ ಪ್ರಯೋಗಶೀಲ ಬರವಣಿಗೆಯಾಗಿವೆ. ಅಂತಹ ಸಾಲುಗಳಲ್ಲಿ ಸೇರುವ ಪ್ರಮುಖ ಕೃತಿಗಳಲ್ಲಿ ಲೋಕೋಪಕಾರ, ಶಿವತತ್ತ್ವರತ್ನಾಕರ, ಮಾನಸೋಲ್ಲಾಸ, ವಿವೇಕಚಿಂತಾಮಣಿ ಮುಂತಾದ ಕೃತಿಗಳು ಮಹತ್ವ ಎನಿಸಿವೆ.

"ಭೌತಿಕವಾದುದ್ದು ರಾಜ್ಯ ಜೊತೆಗೆ ಸಾಂಸ್ಕೃತಿಕವಾಗಿದದ್ದು ಸಾಮ್ರಾಜ್ಯವೆಂಬ ತಿಳುವಳಿಕೆಯಿಂದ ಆಳಿದ ನಮ್ಮ ಅರಸರು ಸಹಜವಾಗಿಯೇ ಸೈನ್ಯ ಕಟ್ಟುವುದರ ಜೊತೆಗೆ ಸಾಹಿತ್ಯವನ್ನು ಸೃಷ್ಟಿಸಿದರು. ಈ ಪರಂಪರೆಯ ಒಂದು ಮುಖ್ಯಕೃತಿ ಕೆಳದಿ ಬಸವರಾಜನ 'ಶಿವತತ್ತ್ವರತ್ನಾಕರ' ಹೆಸರಿನ ವಿಶ್ವಕೋಶ"[೨೮]

ಪ್ರಾಚೀನ ಕರ್ನಾಟಕದಲ್ಲಿ ವಿಶ್ವಕೋಶ ರಚಿಸಿದ ಚಾಲುಕ್ಯ ಸೋಮೇಶ್ವರ, ನಿಜಗುಣ, ಕೆಳದಿ ಬಸವರಾಜರು ಅರಸರೇ ಆಗಿರುವುದು ಒಂದು ವಿಶೇಷ. ಬಹುಮುಖೀ ಸಮಾಜವನ್ನು ಆಳಬೇಕಾಗಿರುವ ರಾಜರಿಗೆ ಬಹುಮುಖೀ ಜ್ಞಾನ ಅಗತ್ಯವೆನಿಸಿದ್ದಿತು. ಹೀಗೆ ಸಂಗ್ರಹಿಸಿದ ಸಮಗ್ರ ಜ್ಞಾನವನ್ನು ಕೃತಿಗೊಳಿಸಿದ ಫಲವೆನಿಸಿವೆ ಇವರ ವಿಶ್ವಕೋಶಗಳು. ಈ ಬಹುಮುಖೀ ವಿಷಯ ಸಂಪತ್ತು ಕನ್ನಡಿಗರಿಗೂ ತಿಳಿದಿರಲೆಂದು ನಿಜಗುಣ ಶಿವಯೋಗಿಗಳು ವಿವೇಕ ಚಿಂತಾಮಣಿಯನ್ನು ಕನ್ನಡದಲ್ಲಿ, ಕನ್ನಡೇತರರಿಗೂ ತಿಳಿದಿರಲೆಂದು

ಚಾಲುಕ್ಯ ಸೋಮೇಶ್ವರ ಮಾನಸೋಲ್ಲಾಸವನ್ನು, ಕೆಳದಿ ಬಸವರಾಜ ಶಿವತತ್ತ್ವರತ್ನಾಕರವನ್ನು ಸಂಸ್ಕೃತದಲ್ಲಿ ನಿರೂಪಿಸಿದರು. ಈ ಎಲ್ಲ ಆಶಯದ ಹಿಂದೆ ಒಂದು ಸಮಾಜದ, ಜನಾಂಗದ ಬದುಕಿನ ರೀತಿಯನ್ನು ಚಿತ್ರಿಸುವ ಶಾಸ್ತ್ರಕೃತಿಗಳ ಅಧ್ಯಯನ ಅವಶ್ಯವಿದೆ.

ಪ್ರಾಪಂಚಿಕದಿಂದ ಪಾರಮಾರ್ಥಿಕದವರೆಗಿನ ಎಲ್ಲ ಜ್ಞಾನ ಶಾಖೆಗಳನ್ನೊಳಗೊಂಡ ೬ ಕಲ್ಲೋಲ, ೧೦೮ ತರಂಗ, ಸುಮಾರು ೧೩ ಸಾವಿರ ಶ್ಲೋಕಗಳ ಗಜಗಾತ್ರದ ಈ ಕೃತಿ ಹಲವು ವಿದ್ವಾಂಸರ ಅನುವಾದ ಸಾಮರ್ಥ್ಯದ ಫಲ ಎಂದು ಡಾ.ಎಂ.ಎಂ.ಕಲಬುರ್ಗಿಯವರು ಈ ಕೃತಿಯ ಮುನ್ನುಡಿಯಲ್ಲಿ ಅದರ ಮಹತ್ವನ್ನು ತಿಳಿಯಪಡಿಸಿದ್ದಾರೆ.

"ಕಾತ್ಯ ವಾಚಸ್ಪತಿ, ವ್ಯಾಡಿ, ವರರುಚಿ, ಭಾಗುರಿ, ಧನ್ವಂತರಿ, ಮೊದಲಾದವರ ಕೋಶಗಳೂ, ಯಾಸ್ಕನ ನಿರುಕ್ತವೂ, ಅಮರಸಿಂಹನ ಅಮರಕೋಶವೂ, ತ್ರಿಕಾಂಡ, ಉತ್ಪಲಿನೀ, ಶಬ್ದಾರ್ಣವ, ರತ್ನಕೋಶ, ಮಾಲಾಕೋಶ ಇಂಥವು ಇನ್ನೂ ಹಲವು ಕೋಶಗಳಿವೆ. ಇವೆಲ್ಲವೂ ಪದಗಳ ಸಂಗ್ರಹ ಅವುಗಳ ವ್ಯವಸ್ಥಿತ ಜೋಡಣೆಯೂ ಆಗಿವೆ. ಈ ಹೊತ್ತು ಭಾರತೀಯ ಸಂಸ್ಕೃತಿ ತಿಳಿಯಲು, ಅಧ್ಯಯನ ಮಾಡಲು ಈ ಕೋಶಗಳು ನೆರವಾಗುವ ಬಗೆಯನ್ನು ನಾವು ತಳ್ಳಿಹಾಕುವಂತಿಲ್ಲ. ಹೀಗೆ ಶಬ್ದ ಸಂಗ್ರಹಗಳಿಂದ ಪ್ರಾರಂಭವಾದ ಕೋಶದ ಕಲ್ಪನೆ ಅನಂತರದಲ್ಲಿ ಒಂದೊಂದು ಶಾಸ್ತ್ರಕ್ಕೆ ಸಂಬಂಧಿಸಿದಂತೆ ಒಂದೊಂದು ಕೋಶ ಬೆಳೆದುಬಂದಿವೆ. ಉದಾಹರಣೆಯಾಗಿ ವೈದ್ಯಕೋಶ, ಸಂಗೀತಕೋಶ, ನಾಟ್ಯಕೋಶಗಳು ಹುಟ್ಟಿಕೊಂಡವು. ಅವು ಮುಂದೆ ವಿವರಣಾತ್ಮಕವಾದ ಶಾಸ್ತ್ರಗಳಾಗಿ ಬೆಳೆದುವು. ಗಜಕೋಶವು ಗಜಶಾಸ್ತ್ರವಾಗಿದ್ದು, ವೈದ್ಯಕೋಶವು ವೈದ್ಯಶಾಸ್ತ್ರವಾಗಿದ್ದು, ಇಂಥ ಬೆಳವಣಿಗೆಯ ಮುಖ್ಯ ಹಂತಗಳೇ ಆಗಿವೆ."[೨೮]

ಪ್ರಾಚೀನ ಭಾರತದಲ್ಲಿ ಎಲ್ಲ ಬಗೆಯ ಜ್ಞಾನ ವಿಷಯಗಳು ಶಾಸ್ತ್ರಗಳಾಗಿ ಬೆಳೆದವು. ಅವು ಲೌಕಿಕ ವಿಷಯಗಳಾಗಿರಬಹುದು ಅಥವಾ ಅಲೌಕಿಕ ವಿಷಯಗಳಾಗಿರಬಹುದು, ಲೌಕಿಕ ವಿಷಯಗಳಾದ ಮಣಿ, ಮಂತ್ರ, ತಂತ್ರ, ಔಷಧ ರಸ, ಸಾಹಿತ್ಯ, ಸಂಗೀತ, ಚಿತ್ರ, ವಾಸ್ತು, ನೃತ್ಯ, ಜೋತಿಷ್ಯ, ಖಗೋಳ, ಭೂಗೋಳ, ರಥ, ತುರಗ, ಹಸ್ತಿ, ಸಂಗ್ರಾಮ, ಕೃಷಿ, ರಾಜನೀತಿ ಮುಂತಾದವು ಹಾಗೂ ಅಲೌಕಿಕ ವಿಷಯಗಳಾದ ವಿವಿಧ ದರ್ಶನಗಳೂ, ಆಗಮಗಳೂ, ಪುರಾಣಗಳೂ, ಶಾಸ್ತ್ರಗಳಾಗಿ ಬೆಳೆದುದ್ದನ್ನು ಕಾಣುತ್ತೇವೆ.

ಶಬ್ದಕೋಶಗಳು ವೈದಿಕರ ಹಾಗೂ ಅವೈದಿಕರ ರಚನೆಗಳಾದರೆ, ಏಕವಿಷಯ ಕೋಶಗಳು ಬಹುತೇಕವಾಗಿ ಅವೈದಿಕರ ರಚನೆಗಳೇ ಆಗಿವೆ. ಇದಕ್ಕೆ ಅಪವಾದವು ಅಲ್ಲಲ್ಲಿ ಉಂಟು. ಪ್ರಾಣಿವೈದ್ಯ, ವೃಕ್ಷವೈದ್ಯ, ಹಸ್ತಿವೈದ್ಯವಾಗಲೀ, ಕ್ರೀಡಾವಿನೋದ ಶಾಸ್ತ್ರವಾಗಲೀ, ಮಣಿ ಮಂತ್ರ ತಂತ್ರಗಳಿಗೆ ಸಂಬಂಧಿಸಿದವುಗಳಾಗಲೀ ಬಹುತೇಕವಾಗಿ ಅವೈದಿಕರ ರಚನೆಗಳೇ ಆಗಿವೆ. 'ಶಬ್ದಕೋಶ'ಗಳು ವೈದಿಕರ ಕೊಡುಗೆ ಏಕವಿಷಯ

ಕೋಶಗಳು ಅದರಲ್ಲೂ ಲೌಕಿಕ ಶಾಸ್ತ್ರಕೃತಿಗಳು ಜೈನರ, ವೀರಶೈವರ, ಕೊಡುಗೆಗಳೇ ಆಗಿವೆ. ಇದು ನಾವು ಗಮನಿಸಬೇಕಾದ ಮುಖ್ಯ ಸಂಗತಿಗಳಲ್ಲಿ ಒಂದು.

ದ್ವಿತೀಯ ಸಂಪುಟದ ಏಳನೆಯ ಕಲ್ಲೋಲದ ಹನ್ನೆರಡನೆಯ ತರಂಗ, ಮತ್ತು ಹರಿಮೂರನೆಯ ತರಂಗದಲ್ಲಿ, ಅಶ್ವದ ಉತ್ಪತ್ತಿ ಸ್ಥಾನಗಳು, ಕುದುರೆಗಳ ಲಕ್ಷಣ ಶುಭಲಕ್ಷಣಗಳು, ಅಶ್ವಗಳ ಆಯುಷ್ಯ ಪ್ರಮಾಣ, ಚಿಹ್ನೆಗಳು, ಅಶ್ವಕುಲಗಳು, ಮುಂತಾದ ವಿಷಯಗಳ ಕುರಿತು ಸಾರಭೂತವಾದ ತಿಳುವಳಿಕೆಯನ್ನು ನೀಡುತ್ತದೆ.

ಹನ್ನೆರಡನೆಯ ತರಂಗ ೨೨೪ ಸಂಸ್ಕೃತ ಶ್ಲೋಕಗಳನ್ನೊಳಗೊಂಡಿದ್ದು ಅಶ್ವೋತ್ಪತ್ತಿ, ಅಶ್ವಚೇಷ್ಟಾಂತವಾದ ವರ್ಣನೆಯನ್ನು ನೀಡುತ್ತದೆ. ಹದಿಮೂರನೆಯ ತರಂಗ ೨೨೫ ಶ್ಲೋಕಗಳಗೊಂಡಿದ್ದು; ಅಶ್ವಲಕ್ಷಣ, ರಥಲಕ್ಷಣ ಜೊತೆಗೆ ಅವುಗಳಿಗೆ ಚಿಕಿತ್ಸೆಯನ್ನು ಮಾಡುವ ಪದ್ಧತಿಯನ್ನು ಸಾದರ ಪಡಿಸಲಾಗಿದೆ.

ಅಶ್ವಲಕ್ಷಣವನ್ನು ಕುರಿತು ಶ್ಲೋಕವೊಂದು ಈ ರೀತಿಯಾಗಿ ಹೇಳುತ್ತದೆ.

> ಘನಾಗಮಾಂತ ಕಾಲೇತು ಹೇಮಾಂತಾದೌ ತುರಂಗಮಾಃ|
> ದಿವಾಕರಕರ್ಯೆ, ಸ್ತಪ್ತಾ ನಿರತಾಂತರುಣಾ ಅಪಿ ||೩೩||
> ಯವಸಾನ್ಯತಿ ಸೇವಂತೇ ಭವೇಯುಃ ಪಿತ್ತಲಾ ಭೃಶಮ್|
> ಬಡಬಾಯಾಂ ತತೋಜಾತಸ್ತೀಕ್ಷ್ಣ ಶೀಲೋ ಜಲಪ್ರಿಯಃ ||೩೪||
> ಆರಕ್ತತಾಲುರ್ಮತಿಮಾನ್ ಘಸ್ಮರ್ರ್ಯೋತ್ಯರ್ಥರೋಷಣಃ|
> ಉತ್ತಾನವೇದೀತುರಗಃ ಪಿತ್ತ ಪ್ರಕೃತಿಕೋ ಭವೇತ್ ||೩೫||

ಮಳೆಗಾಲದ ಆರಂಭ ಹಾಗೂ ಹೇಮಂತಕಾಲದ ಪ್ರಾರಂಭದಲ್ಲಿ ಕುದುರೆಗಳಿಗೆ ಪಿತ್ತ ಪ್ರಕೃತಿ ಉಂಟಾಗುತ್ತದೆ. ಹಾಗೂ ಇದರ ಪರಿಣಾಮ, ಮಳೆಗಾಲದ ಆರಂಭ ಹಾಗೂ ಮುಗಿಯುವಕಾಲ ಮತ್ತು ಹೇಮಂತ ಕಾಲದ ಪ್ರಾರಂಭದಲ್ಲಿ ಪಿತ್ತ ಪ್ರಕೃತಿ ಶರೀರದ್ದಾಗುತ್ತದೆ. ಸೂರ್ಯನ ಎಳೆ ಕಿರಣಗಳಿಂದ ಮೈಯನ್ನೂ ಕಾಯಿಸಿಕೊಳ್ಳುವ ಕುದುರೆಗಳು ಹೆಚ್ಚಾಗಿ ಯವಸವನ್ನು ತಿನ್ನುತ್ತವೆ. ಇವುಗಳ ಶರೀರದ ಬಣ್ಣವು ಹಿತ್ತಾಳೆಯಂತೆ ಹಳದಿ ಬಣ್ಣಕ್ಕೆ ತಿರುಗುತ್ತದೆ. ಇಂತಹ ಸಮಯದಲ್ಲಿ ಈ ರೀತಿಯ ಅಶ್ವಗಳ ಯೋಗದಿಂದ ಹುಟ್ಟುವ ಕುದುರೆಗಳ ಲಕ್ಷಣ ಹೀಗಿರುತ್ತದೆ: ತೀಕ್ಷ್ಣ ಸ್ವಭಾವ, ನೀರಿನಲ್ಲಿ ಹೆಚ್ಚಿನ ಆಸಕ್ತಿ, ಇವುಗಳ ತಾಲು ಪ್ರದೇಶ ಕೆಂಪಾಗಿರುತ್ತದೆ. ಈ ಕುದುರೆಗಳು ಚುರುಕು ಬುದ್ಧಿಯವಾಗಿರುತ್ತವೆ. ಹೆಚ್ಚಿನ ಆಹಾರವನ್ನು ತಿನ್ನುತ್ತವೆ, ಅತ್ಯಂತ ಕೋಪ ಶೀಲವಾದವು. ಇವು ಉತ್ತಾನವೇದಿಗಳು. ಇದು ಪಿತ್ತ ಪ್ರಕೃತಿಯ ಅಶ್ವಲಕ್ಷಣ.

೩.೪.೩. ಸೋದೆಯ ಸದಾಶಿವರಾಯನ ಸದಾಶಿವನೀತಿ

ಸದಾಶಿವರಾಯನ ಈ ಕೃತಿಯು ಒಂದು ಉತ್ತಮವಾದ ನೀತಿ ಶಾಸ್ತ್ರ ಕೃತಿಯಾಗಿದ್ದು, ಕವಿ ಕೃತಿಯಲ್ಲಿ ಅನೇಕ ಶಾಸ್ತ್ರ ಸಂಬಂಧಿ ವಿಷಯಗಳನ್ನು ಭೋದನೆ ಮಾಡುವ ರೀತಿಯಲ್ಲಿ ಚಿತ್ರಿಸಿದ್ದಾನೆ. ಗಜಶಾಸ್ತ್ರ, ವೈದ್ಯಶಾಸ್ತ್ರ, ಜೋತಿಷ್ಯಶಾಸ್ತ್ರ ನಿರೂಪಿಸುವುದರ ಜೊತೆಗೆ ಅಶ್ವಶಾಸ್ತ್ರದ ತುರಗಲಕ್ಷಣವನ್ನು ಕುರಿತು ವಿಶೇಷವಾಗಿ ಹೇಳುತ್ತಾನೆ. ಕೆ.ಬಿ.೪೫೪ ಕನ್ನಡ ಅಧ್ಯಯನ ಸಂಸ್ಥೆ ಮೈಸೂರಿನ ಹಸ್ತಪ್ರತಿ ಭಂಡಾರದಲ್ಲಿರುವ ಕಾಗದ ಪ್ರತಿಯ ಸಹಾಯದಿಂದ ಪರಿಷ್ಕರಿಸಿ ಜಿ.ಜಿ.ಮಂಜುನಾಥನ್ ಅವರು ತಮ್ಮ ಅಭಿನವಚಂದ್ರ ವಿರಚಿತ ಅಶ್ವಶಾಸ್ತ್ರ ಕೃತಿಯ ಅನುಬಂಧದಲ್ಲಿ ಪ್ರಕಟಿಸಿದ್ದಾರೆ.

ಈತನ ಕಾಲವನ್ನು ಸಂಪಾದಕರು '೧೬೭೫' ಎಂದು ಗುರುತಿಸಿದ್ದಾರೆ. ಮೂಲ ಕೃತಿಯು ಹಸ್ತಪ್ರತಿಯಾಗಿದ್ದು, ಕಾಗದ ರೂಪದಲ್ಲಿದೆ. ಮೈಸೂರಿನ ವಿ.ವಿ.ಯ ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿ ಭಂಡಾರದ ಕೆ.ಬಿ.೪೫೪ ನಂಬರಿನ ಕಟ್ಟಿನಲ್ಲಿದೆ. ವಿದ್ವಾಂಸರಾದ ಜಿ.ಜಿ.ಜಿಮಂಜುನಾಥನ್ ಅವರು ಅಭಿನವಚಂದ್ರ ವಿರಚಿತ ಅಶ್ವಶಾಸ್ತ್ರವೆಂಬ ಕೃತಿಯನ್ನು ಸಂಪಾದನೆ ಮಾಡುವ ಸಂದರ್ಭದಲ್ಲಿ ಈ ಕೃತಿಯನ್ನು ಗಮನಿಸಿ, ಸಾಕಷ್ಟು ಶ್ರಮವಹಿಸಿ ಕೃತಿಯು ಆಕರವಾಗಲೆಂದು ಅನುಬಂಧದ ಕೊನೆಯಲ್ಲಿ ಸಂಪಾದಿಸಿ ಕೊಟ್ಟಿದ್ದಾರೆ. ಇದರಲ್ಲಿ ಭಕ್ತಿ, ಜ್ಞಾನ, ವೈರಾಗ್ಯ ಮತ್ತು ವ್ಯವಹಾರ ಬೋಧಕ ನೀತಿಗಳು ಪ್ರತಿಪಾದನೆಗೊಂಡಿವೆ. ಅಲ್ಲದೆ ಮುಂತಾದ ಆಗಮಿಕ ವಿಷಯಗಳ ಜೊತೆಗೆ ಕುದುರೆಯ ಲಕ್ಷಣಕ್ಕೆ ಸಂಬಂಧಿಸಿದಂತೆ ಒಟ್ಟು ೫೮ ಕಂದ ಪದ್ಯಗಳಿಂದ ರೂಪು ಪಡೆದುಕೊಂಡಿದೆ. ಕುದುರೆಯ ಜಾತಿಯನ್ನು ಮನುಷ್ಯನ ಜಾತಿಯೊಡನೆ ಹೋಲಿಕೆ ಮಾಡಿ ವಿವರಿಸಲಾಗಿದೆ.

> ತುರಗದ ಜಾತಿಯನಾಲ್ಕುಂ
> ನೆರೆವಿಪ್ರ ಕ್ಷತ್ರ ವೈಶ್ಯ ಶೂದ್ರದ ಪೆಸರಿಂ
> ಅರಿವದು ಮೊದಲೆರಡುತ್ತಮ
> ತರುವಾಯದಿ ಮಧ್ಯಮಂ ಕನಿಷ್ಠವೆನಿಕ್ಕುಂ (೨)

ಕುದುರೆಯ ನಾಲ್ಕು ಜಾತಿಗಳನ್ನೂ ಹೇಳುತ್ತಾ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರದ ಹೆಸರಿನಿಂದ ಗುರುತಿಸಿ ಮೊದಲೆರೆಡು ಅಂದರೆ ಬ್ರಾಹ್ಮಣ, ಕ್ಷತ್ರಿಯ ಉತ್ತಮವೆಂದು, ತರುವಾಯದ ಎರಡು ಜಾತಿಗಳನ್ನು ಮಧ್ಯಮ, ಕನಿಷ್ಠವೆಂದು ಗುರುತಿಸಲಾಗಿದೆ. ಅಂದರೆ ಇಲ್ಲಿ ಕುದುರೆಯನ್ನು ಅವುಗಳ ಕಾರ್ಯಗುಣಗಳಿಂದ ಮತ್ತು ಸಾಮರ್ಥ್ಯದಿಂದಾಗಿ ವಿಂಗಡನೆ ಮಾಡಿ ಲಕ್ಷಣವನ್ನು ಹೇಳುವ ಪ್ರಯತ್ನಮಾಡಲಾಗಿದೆ. ಆವರ್ತ ಲಕ್ಷಣವನ್ನು ಕುರಿತು ಕೆಳಗಿನ ಪದ್ಯವೊಂದು ಈ ರೀತಿಯಾದ ಮಾಹಿತಿಯನ್ನು ನೀಡುತ್ತದೆ.

ಉರದೊಳ್ ಶಿರದೊಳ್ ಭುಜದೊಳ್
ನೆರೆ ನಾಭಿಯ ಕುಕ್ಷಿ ಮಧ್ಯದೊಳಗೆರಡೆರಡುಂ
ಇರಲಾ ನಾಸಾತಲದೊಳು
ವರನೋಪಲೊಳು ವಾಜಿಗಂಧ ಸಧ್ರುವಮಕ್ಕುಂ (೧೯)

ಉರದೊಳ್ (ಹೊಟ್ಟೆಯೊಳಗೆ) ಶಿರದೊಳ್ (ತಲೆಯೊಳಗೆ) ಭುಜದೊಳ್ (ಭುಜದ ಮೇಲೆ) ನೆರೆ ನಾಭಿ (ಹೊಕ್ಕಳ) ಕುಕ್ಷಿ ಮಧ್ಯದೊಳಗೆ ಗೆರೆ ಎರಡು ಇರಲು ನಾಸಾತಲದೊಳಗೆ ಮತ್ತು ವರನೊಸಲೊಳಗೆ ವಾಜಿ, ಗಂಧ, ಸಧ್ರುವನ್ನಿರಲು ಆವರ್ತಲಕ್ಷಣಕ್ಕೆ ಉತ್ತಮ ಉದಾಹರಣೆಯಾಗುತ್ತದೆ.

ದಶಧ್ರುವ ವಿಚಾರವಾಗಿ ಮುಂದುವರೆದು ಶಾಸ್ತ್ರಕಾರ ಈ ರೀತಿಯಾಗಿ ಸ್ಪಷ್ಟಪಡಿಸುತ್ತಾನೆ.

ಕಟವಾಯಿಗಳು ಸುಳಿಗಳು
ಪಟು ವಾಗೆಂಡಿರಲು ಭಾಗ್ಯವಹುದೂ ಸಿದ್ದಂ
ನಿಡಿಲದೊಳೆಂಡಿರೆ ಜಯಕರ
ದಿಟದಿಂ ಮೂರಡ್ಡಲಿರು ಶುಭ ಫಲ ಪಿತಿಗೇ (೨೩)

ಒಡೆಯನಿಗೆ ಕುದುರೆಯ ಕಟವಾಯಿಗಳಲ್ಲಿ ಸುಳಿಗಳಿರಲು, ಎರಡು ಕಡೆ ಕಾಣಿಸುತ್ತಿರುವುದರಿಂದ ಭಾಗ್ಯ ಪ್ರಾಪ್ತಿಯಾಗುತ್ತದೆ. ಸಿದ್ಧ ನಿಟಿಲದೊಳೆಗೆ ಎರಡಿರಲು ಜಯ ಉಂಟಾಗುತ್ತದೆ. ದಿಟದಿಂದ ಮೂರಡ್ಡಲಿರಲು ಶುಭ ಫಲ ಉಂಟಾಗುವುದು.

ಅಶುಭ ಕುರಿತು ಶಾಸ್ತ್ರಕಾರ ಸದಾಶಿವರಾಯ ಪದ್ಯವೊಂದರಲ್ಲಿ ಈ ರೀತಿಯಾಗಿ ತಿಳಿಸುತ್ತಾನೆ.

ಕೆಳಗಣ ಮೇಗಣ ತುಟಿಯೊಳು
ಸುಳಿಯಿದೆ ಅಶ್ವಕ್ಕೆ ತಂದೆ ತಾಯಿಗೆ ಮರಣಂ
ಒಳಿತಲ್ಲ ಬಲದ ತಿಗದಲಿ
ತಿಳಿವುದು ಎರಡದಲ್ಲಿರಲು ಒಡೆಯಂಗೆ ಮರಣಂ (೩೩)

ಕುದುರೆಯ ಕೆಳಗಡೆ ಮತ್ತು ಮೇಲಗಡೆಯ ತುಟಿಯೊಳಗೆ ಸುಳಿಯಿರಲು ಅಶ್ವಕ್ಕೆ ಮತ್ತು ತಂದೆ ತಾಯಿಗಳಿಬ್ಬರಿಗೂ ಮರಣ ಉಂಟಾಗುವುದು. ಇಂತಹ ಕುದುರೆ ಒಳ್ಳೆದಲ್ಲ, ಬಲದ ತಿಗದಲ್ಲಿ ತಿಳಿದವು. ಎರಡದಲ್ಲಿರಲು ಒಡೆಯನಿಗೆ ಮರಣ ಸಂಭವಿಸುವುದು. ಉತ್ತಮ ಕುದುರೆಗಳು ಯಾವ ರೀತಿ ಮಹತ್ವವನ್ನು ಪಡೆದುಕೊಳ್ಳುತ್ತವೆ ಎಂಬ ವಿಚಾರವನ್ನು ಮುಂದುವರೆದು ಹೀಗೆ ವ್ಯಕ್ತಪಡಿಸಿದ್ದಾನೆ.

ನಾಕು ಸುಜಾತಿಯ ಕುದುರೆಗೆ
ಲೋಕದ ವಿಖ್ಯಾತನಾಮ ಶ್ವೇತವು ಶೋಣಂ
ಏಕಹರಿಜ್ವಲ ಕೈರವ ಮಾಕವಿಗಳು ಪೇಳ್ವರಯ್ಯ ಗುರುನಂದಯ್ಯ (೪೪)

ನಾಲ್ಕು ಸುಜಾತಿಯ ಒಳ್ಳೆಯ ಕುದುರೆಗಳು ಲೋಕದಲ್ಲಿ ಶ್ವೇತ, ಶೋಣ, ಏಕಹರಿಜ್ವಲ, ಕೈರವ ಎಂದು ಪ್ರಸಿದ್ಧ ಹೆಸರುಗಳಿಂದ ಗುರುತಿಸಿಕೊಳ್ಳುತ್ತವೆ. ಹೀಗೆ ಒಂದು ಪ್ರಾಣಿಯ ಸುತ್ತ ವಿವಿಧ ಲಕ್ಷಣಗಳನ್ನು ಗುರುತಿಸುತ್ತಾ ಸ್ವತಃ ಅನುಭವ ಮತ್ತು ಪ್ರಯೋಗಶೀಲತೆಯ ಗುಣಗಳಿಂದಾಗಿ ಶಾಸ್ತ್ರಕಾರರು ಮುಖ್ಯರೆನಿಸುತ್ತಾರೆ.

ತನುಗತಿ ಸುಳಿಗಳು ಗಂಧ
ಧ್ವನಿ ಸತ್ವವು ಕಾಂತಿ ವರ್ಣಮಿದುಮಷ್ಟವಿಧಂ
ಘನವಾದ ತುರಗಕಾಯದೊ
ಳಿನಿತುಂ ಶುಭಮಶುಭಮೆಂಬುದಿದು ಮುಭಯವಿಧಂ

ಎಂದು ಹೇಳುತ್ತ ಕೊನೆಯ ಪದ್ಯದಲ್ಲಿ ಕುದುರೆಯ ಪ್ರಯೋಜ ಮತ್ತು ಅದರ ಮಹತ್ವವನ್ನು ಕುರಿತು ಹೀಗೆ ಪ್ರಶಂಸಿದ್ದಾರೆ.

ತುರಗದಿ ರಾಜ್ಯ ಪ್ರಾಪ್ತಿಯು
ತುರಗದಿ ಧನ ಧಾನ್ಯ ರಾಜ್ಯಕ್ಕೆ ಸೇರುವದೂ
ತುರಗದಿ ಜಯ ಲಕ್ಶ್ಮೀಲಿವಳು
ತರಗಕ್ಕಿಂದಧಿಕವಿಲ್ಲ ಗುರುನಂಧೀಶಾ (೫೮)

ಕುದುರೆಯನ್ನು ಸಾಕುವುದರಿಂದ ರಾಜನಿಗೆ ಆಗುವ ಲಾಭವನ್ನು ಮೇಲಿನ ಸಾಲುಗಳು ತಿಳಿಸುತ್ತವೆ. ರಾಜನಿಗೆ ಹೋದ ರಾಜ್ಯ ಮರಳಿ ಪ್ರಾಪ್ತಿಯಾಗುತ್ತದೆ. ಧನಧ್ಯಾನ ವೃದ್ಧಿಯಾಗುತ್ತದೆ. ಜಯಲಕ್ಷ್ಮಿ ಒಲಿಯುತ್ತಾಳೆ. ತುರಗದಿಂದ ಇಷ್ಟೆಲ್ಲಾ ಲಾಭಗಳಾಗುವುದು. ಹೀಗಾಗಿ ಕುದುರೆಯು ಅತ್ಯಂತ ಮಹತ್ವವುಳ್ಳ ಪ್ರಾಣಿಯಾಗಿ ಪ್ರಾಚೀನ ಕಾಲದಲ್ಲಿ ಉಪಯೋಗವಾಗಿತ್ತೆಂಬುದು ವಿಧಿತವಾಗುತ್ತದೆ.

೩.೪.೪. ಇಮ್ಮಡಿ ಗುರುಸಿದ್ಧನ ಹಾಲಸ್ಯ ಪುರಾಣ

ಈ ಕೃತಿಯು ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿಶ್ವವಿದ್ಯಾನಿಲಯದಿಂದ ಪ್ರಕಟಣೆಗೊಂಡಿದೆ. ಈ ಕೃತಿಯ ಸಂಪಾದನೆಯನ್ನು ಮಾಡುವಲ್ಲಿ ಶ್ರಮಿಸಿದವರು ಜಿ.ಜಿ.ಮಂಜುನಾಥನ್. ಈ ಕೃತಿಯು ಪುರಾಣವೆಂದು ಹಣೆಪಟ್ಟಿ ಕಟ್ಟಿಕೊಂಡಿದ್ದರೂ ಇದರ ಒಡಲಲ್ಲಿ ಅನೇಕ ಶಾಸ್ತ್ರಗ್ರಂಥಗಳು ಹೆಣೆದುಕೊಂಡಿವೆ.

ಭಾರತೀಯ ಸಂಸ್ಕೃತಿಯ ಜೀವಂತ ಪ್ರತೀಕವೆನಿಸಿವೆ ನಮ್ಮ ಪುರಾಣಗಳು. ಇವು ನಮ್ಮ ಸಂಸ್ಕೃತಿಯ ಸಂಕೇತವೂ ಹೌದು ಕೇಂದ್ರವೂ ಹೌದು. ಈ ದೇಶದ ಸಂಸ್ಕೃತಿ ಅಚ್ಚಳಿಯದೆ ಉಳಿದಿರುವುದು ಈ ಪುರಾಣಗಳಲ್ಲಿ ಆದುದರಿಂದಲೇ ಪುರಾಣಗಳನ್ನು ಪಂಚಮವೇದವೆಂದು ಕರೆಯುತ್ತಾರೆ.

ಅಮರ ಸಿಂಹನು ತನ್ನ ನಾಮಲಿಂಗಾನುಶಾಸನದಲ್ಲಿ ಪುರಾಣಗಳ ಲಕ್ಷಣವನ್ನು ಕುರಿತು ಹೀಗೆ ಹೇಳಿದ್ದಾನೆ.

ಅಖ್ಯಾಯಿ ಕೋಪಲಬ್ಧಾರ್ಥ ಪುರಾಣಂ ಪಂಚಲಕ್ಷಣಂ
ಸರ್ಗಶ್ಚ ಪ್ರತಿಸರ್ಗಶ್ಚ ವಂಶೋಮನ್ವಂತರಾಣಿ ಚ
ವಂಶಾನುಚರಿತಂ ಚೈವ ಪುರಾಣಂ ಪಂಚಲಕ್ಷಣಂ

ಇದರಿಂದ ಪುರಾಣಗಳು ಪಂಚಲಕ್ಷಣಗಳನ್ನು ಒಳಗೊಂಡಿರಬೇಕೆಂಬುದು ವ್ಯಕ್ತವಾಗುತ್ತದೆ. ಒಟ್ಟಿನಲ್ಲಿ ಪುರಾಣಗಳನ್ನು ಭಾರತೀಯ ಸಂಸ್ಕತಿ ಆಚಾರ-ವಿಚಾರಗಳ ವಿಶ್ವಕೋಶ ಎನ್ನಬಹುದು.

ಹಾಲಸ್ಯ ಪುರಾಣದ ಕರ್ತೃ ಇಮ್ಮಡಿ ಮುರಿಗಾಗುರುಸಿದ್ಧ ಈತನು ಶೂನ್ಯ ಸಿಂಹಾಸನ ಪರಂಪರೆಗೆ ಸೇರಿದವನು. ಈ ಪರಂಪರೆಯಲ್ಲಿ ಬರುವ ಚಿತ್ರದುರ್ಗದ ಒಂಬತ್ತನೆಯ ಮಠಾಧಿಪತಿಯಾಗಿದ್ದವನು. ಈತನು ಹಾಲಸ್ಯ ಪುರಾಣವನ್ನು ಕ್ರಿ.ಶ.೧೭೨೦ರಲ್ಲಿ ರಚಿಸಿದಂತೆ ಹೇಳಿಕೊಂಡಿದ್ದಾನೆ.

ಗುರುಸಿದ್ಧ ತನ್ನ ಹಾಲಸ್ಯಪುರಾಣವನ್ನು ಸೊದೆಯ ಸದಾಶಿವರಾಜ(೧೬೭೪-೧೬೯೭)ನ ವರ್ಣಕ ಹಾಲಸ್ಯ ಪುರಾಣವನ್ನು ಆಧರಿಸಿ ರಚಿಸಿದಂತೆ ತಿಳಿಸಿದ್ದಾನೆ. ಕ್ರಿ.ಶ.೧೭೪೦ರಲ್ಲಿದ್ದ ವೆಂಕಟೇಶ ಚಂಪುವಿನಲ್ಲಿ ಹಾಲಸ್ಯ ಪುರಾಣವನ್ನು, ಕ್ರಿ.ಶ.೧೭೪೦ರಲ್ಲಿದ್ದ ಕಳಲೆ ನಂಜರಾಜ ಮತ್ತು ಕ್ರಿ.ಶ.೧೭೯೪-೧೮೬೮ರಲ್ಲಿದ್ದ ಮುಮ್ಮಡಿ ಕೃಷ್ಣರಾಜ ಇವರು ಗದ್ಯದಲ್ಲಿ ಹಾಲಸ್ಯ ಪುರಾಣವನ್ನು ಬರೆದಿದ್ದಾರೆ ಎಂದು ಮಾಹಿತಿ ನೀಡಿದ್ದಾನೆ.

ಇಮ್ಮಡಿಗುರುಸಿದ್ಧನು ಕನ್ನಡ ಸಂಸ್ಕೃತ ಭಾಷೆಗಳೆರಡಲ್ಲೂ ಘನವಿದ್ವಾಂಸನಾಗಿದ್ದನೆಂಬುದಕ್ಕೆ ಆತನ ಕಾವ್ಯಗಳೇ ಸ್ಪಷ್ಟ ನಿದರ್ಶನಗಳಾಗಿವೆ. ಈತನು ಕನ್ನಡದಲ್ಲಿ ಮಾತ್ರವಲ್ಲದೇ ಸಂಸ್ಕೃತದಲ್ಲಿಯೂ ಕೃತಿ ರಚನೆ ಮಾಡಿದ್ದಾನೆ. ಕನ್ನಡದಲ್ಲಿ ಹೋಳಿಪದ, ಬಿಜ್ಜನ್ನಮಹಾದೇವಿ ಚಾರಿತ್ರ, ಕೈವಲ್ಯಸೋಪಾನ ನಾಮ್ಯೆಕೋತ್ತರ ಶತಸ್ಥಲ, ಶೂನ್ಯ ಮಂತ್ರಗೋಪ್ಯ, ಶಿವಲಿಂಗಮಹಿಮಾಪಟ್ಟದಿ, ಮಿಶ್ರಾರ್ಪಣ ವಾರ್ಧಿಕ, ಶಿವಲಿಂಗನಾಂದ್ಯ, ಯೋಗಕಲಾಪಸಾರ, ಸ್ಕಂದ ಕಲ್ಯಾಣ, ವಿರೂಪಾಕ್ಷ ಪಂಚಾಶಿಕಾಗಮ ಎಂಬ ಗ್ರಂಥಗಳನ್ನೂ ಅಲ್ಲದೆ ಲಿಂಗಾಚಾರರಚನಾಗಮ ಎಂಬ ಸಂಸ್ಕೃತ ಗ್ರಂಥಕ್ಕೆ ಕನ್ನಡ ಟೀಕನ್ನೂ ಬರೆದಂತೆ ತಿಳಿದುಬರುತ್ತದೆ.

ಚಿತ್ರದುರ್ಗ ಸಂಸ್ಥಾನದ ಜಗದ್ಗುರುವಾಗಿದ್ದ ಇಮ್ಮಡಿಗುರುಸಿದ್ಧನು ಹಲವಾರು ಶಾಸ್ತ್ರಗಳಲ್ಲಿ ಪಾರಂಗತನಾಗಿದ್ದನು. ಪದ್ಮಣಾಂಕ, ಷಡಕ್ಷರಿ ಇವರೇ ಮೊದಲಾದ ಕನ್ನಡ ಕವಿಪುಂಗವರ ಪ್ರಭಾವ ಈತನ ಮೇಲೆ ನಿಚ್ಚಳವಾಗಿ ಆಗಿರುವುದನ್ನು ಈತನ ಕಾವ್ಯಗಳಿಂದ ಗುರುತಿಸಬಹುದಾಗಿದೆ. ಗುರುಸಿದ್ಧನ ಹಾಲಸ್ಯ

ಪುರಾಣದಲ್ಲಿ ಶಾಸ್ತ್ರೀಯ ಸಂಗತಿಗಳೂ, ಐತಿಹಾಸಿಕ ವಿಷಯಗಳೂ, ಪೌರಾಣಿಕ ಪ್ರಕರಣಗಳೂ ವರ್ಣಿತವಾಗಿವೆ. ಪಾಂಡ್ಯರಾಜರ ಚರಿತ್ರೆ, ಮಧುರೆಯ ಇತಿಹಾಸ ಇವು ವಿಶೇಷವಾಗಿ ನಿರೂಪಿಸಲ್ಪಟ್ಟಿವೆ.

ಹಾಲಾಸ್ಯ ಪುರಾಣ ಒಂದು ವಿಶಿಷ್ಟವಾದ ಕೃತಿ. ಇದರಲ್ಲಿ ಬಳಸಿರುವಷ್ಟು ವಿವಿಧ ಜಾತಿಯ ವೃತ್ತಗಳು ಕನ್ನಡದ ಮತ್ತಾವ ಕೃತಿಯಲ್ಲೂ ಕಂಡುಬರುವುದಿಲ್ಲ. ಅಷ್ಟೇ ಅಲ್ಲ ಪ್ರಕಾಂಡ ಪಂಡಿತನೂ, ಉಭಯ ಭಾಷಾ ವಿಶಾರದನೂ, ಆದ ಗುರುಸಿದ್ಧ ಕಷ್ಟವೂ ಕ್ಲಿಷ್ಟವೂ ಆದ ಪ್ರಾಸಸ್ಥಾನಗಳನ್ನು ಬಳಸಿ ಅವನ್ನು ಲೀಲಾಜಾಲವಾಗಿ ನಿರ್ವಹಿಸಿದ್ದಾನೆ. ಕವಿ ಕಾಲ ವಿಚಾರ ಕುರಿತು ಕೃತಿಯಲ್ಲಿ ಈ ರೀತಿಯಾಗಿ ತಿಳಿಸಿದ್ದಾನೆ.

> "ಓವಿದ ಶಾಲಿಸುವಾಹನ
> ಸಾವಿರದರು ನೂರರೆಂದೆ ನಾಲ್ವತ್ತೆರಡನೆ
> ಯಾವರಿಸಿದ ನುತ ಶಾರ್ವರಿ ಭಾವಿತ ವರಸಿಂಹಲಗ್ನ ದೊಳಗತಿಶಯದಿಂ
> ಇದು ಜೇಷ್ಠದ ಬೆಳ್ಪಕ್ಕದ
> ತದಿಗೆಯ ರವಿವಾರ ಪುಷ್ಯಭಧ್ರುವಯೋಗಾ
> ಭ್ಯದಯದ ಗರಜಾ ಕರಣದ
> ಪದಿನಾಲ್ಲಳಿಗೆಯೊಳೆ ಪೂರ್ಣಮಾಯ್ತು ಪುರಾಣಂ"[೨೦] (೭೭೫-೧೬೩-೧೬೪)

ಅಂದರೆ ಶಾಲಿವಾಹನ ಶಕ ೧೬೪೨ನೆಯ ಶಾರ್ವಂ ಸಂವತ್ಸರದ ಜೇಷ್ಠ ಮಾಸ, ಶುದ್ಧ ತದಿಗೆ, ಆದಿತ್ಯವಾರ, ಸಿಂಹಲಗ್ನ, ಪುಷ್ಯನಕ್ಷತ್ರ, ಧ್ರುವಯೋಗ, ಗರಜಾಕರಣ ಉದಯದ ಹದಿನಾಲ್ಕುಗಳಿಗೆ, ಈ ತೇದಿ ಕ್ರಿ.ಶ. ३೧.೫.೧೭೨೦ಕ್ಕೆ ಸರಿ ಹೋಗುತ್ತದೆ.

ಕವಿ ಕೃತಿಯ ಆರಂಭದಲ್ಲಿ ನಂದಿ, ಭೃಂಗಿ, ವೃಷಭ, ರೇಣುಕ, ದಾರುಕ, ಸುಂದರ, ಕಲಿಕಂಬಕ, ಗಣನಾಥ, ಸಿರಿಯಾಳ, ಚಂದಯ, ಬಸವೇಶ, ಮಡಿವಾಳ ಮಾಚಯ್ಯ, ನಾಗಣಾನಂದ, ರನ್ನ, ಹರಿಹರ, ರಾಘವಾಂಕ, ಪಾಲ್ಕುರಿಕೆ ಸೋಮನಾಥ, ಪಂಡಿತರಾಧ್ಯರನ್ನೂ, ತೋಂಟದಾರ್ಯ, ಕೊಟ್ಟೂರೇಶ, ಭೂಜಂಗೇಶ್ವರ, ಕರಸ್ಥಲದ ನಾಗಿದೇವರನ್ನು ಸ್ತುತಿಸಿದ್ದಾನೆ.

ಈ ಕೃತಿಯ ನಾಲ್ಕು ಕಾಂಡಗಳು, ಅರವತ್ತಾರು ಆಶ್ವಾಸಗಳೂ, ಮೂರು ಸಾವಿರದ ಆರುನೂರು ಮೂವತ್ತೇಳು ಪದ್ಯಗಳನ್ನು ಒಳಗೊಂಡಿದೆ. ಚತುರ್ಥಕಾಂಡದ ೧೦ ವಾತಪೂರೀಶ್ವರ ಜ್ಞಾನದೀಕ್ಷಾ ಕಾರಣ ಲೀಲೆ ಮತ್ತು ೧೧ನೆಯ ತುರಂಗ ವಿಕ್ರಯಲೀಲೆ ಅಶ್ವಶಾಸ್ತ್ರಕ್ಕೆ ಸಂಬಂಧಿಸಿದವುಗಳಾಗಿವೆ. ವಾತಪುರೀಶ್ವರ ಜ್ಞಾನದೀಪಾ ಕಾರಣಲೀಲೆ ೧೦೦ ಪದ್ಯಗಳನ್ನೊಳಗೊಂಡಿದ್ದು, ಛಂದಸ್ಸಿನ ದೃಷ್ಟಿಯಿಂದ ವಿವಿಧ ಪ್ರಕಾರಗಳಲ್ಲಿ ರಚನೆಗೊಂಡಿದೆ. ಕಂದ, ವಚನ, ಉತ್ಪಲಮಾಲೆ, ತಿಲಕ, ಚಂಪಕಮಾಲೆ, ಚಿತ್ರಪದ, ಸುಲಲಿತ, ಪೃಥ್ವಿ ಸ್ವಾಗತ, ಶಿಖರಣೆ, ಆರ್ಯ ಪ್ರಭಾತ, ಮಂಜುಭಾಷಿತ, ಪುಷ್ಪತಾಗ್ರ, ಛಂಧೋ, ಮಣಿವಿಭೂಷಿತ,

ಪ್ರಮಾಣಿಕ, ವಿಭ್ರಮ, ಅಕ್ಕರಿಕೆ, ಮನಮಯೂರ, ಜಗದ್ವಿಭೂತಿ, ಅಮಳವಿತಾನ, ಹಂಸಪದ ಮತ್ತೇಭವಿಕ್ರೀಡಿತ, ತರಳ, ಗದ್ಯ ಹೀಗೆ ಮುಂತಾದ ವೈಶಿಷ್ಟ್ಯಪೂರ್ಣ ಛಂದೋಜಾತಿಯಿಂದ ರಚನೆಗೊಂಡಿದೆ. ಹಾಗೆಯೇ ೧೧ ತುರಂಗ ವಿಕ್ರಯಲೀಲೆ ೧೫೧ ಪದ್ಯ ಹೊಂದಿದ್ದು ಇದರಲ್ಲಿಯೂ ಸಹಿತ, ಕಂದ, ವಚನ, ಮಹಾಸ್ರಗ್ಧರೆ, ಉತ್ಸಾಹ ದೇವರಮ್ಯ, ತರಳ, ಚಂಪಕಮಾಲೆ, ವಿದ್ಯುನ್ಮಾಲೆ, ಭುಜಗಶಿಶು, ಮತ್ತ ಪುಟ, ವೈವಸ್ವದ, ಲಲಿತ, ಸ್ರಗ್ಧರೆ, ಉಪಮ, ಸೌಂದರ, ಮಲ್ಲಿಕಾಮಾಲೆ, ಚಿತ್ರಪದ, ಶ್ರುತಾನಂತ, ಉದಯ, ವನಜ, ಭದ್ರಕ, ಮತ್ತೆಭವಿಕ್ರೀಡಿತ, ತೋಟಕ, ಗದ್ಯ ಹೀಗೆ ಎರಡು ಅಶ್ವಾಸಗಳು ಕುದುರೆಯಲೀಲೆ, ಕುದುರೆಯಮಹತ್ವ, ಪವಾಡಗಳು, ಒಳ್ಳೆಯ ಕುದುರೆ ಲಕ್ಷಣ, ರಾವುತರ ವಿಚಾರ ಮುಂತಾದವುಳನ್ನು ತಿಳಿಸುವ ಕೃತಿಯಾಗಿದೆ. ಇಷ್ಟು ಕೃತಿಯ ಮುಖ್ಯ ಶಾಸ್ತ್ರಭಾಗ.

೩.೪.೫. ಚಂದ್ರರಾಜನ ಮದನತಿಲಕ

ಕ್ರಿ.ಶ.೧೦೨೫ರಲ್ಲಿದ್ದ ಚಂದ್ರರಾಜನು ಮದನತಿಲಕ ಎಂಬ ಗ್ರಂಥವನ್ನು ಬರೆದಿದ್ದಾನೆ. ಕರ್ನಾಟಕ ಕವಿ ಚರಿತೆಕಾರರು ಹೇಳುವಂತೆ ಅಶ್ವಶಾಸ್ತ್ರಕೃತಿಯನ್ನು ಬರೆದ ಅಭಿನವಚಂದ್ರನಿಗಿಂತ ಹಿಂದೆ ಚಂದ್ರ ಎಂಬುವವನೊಬ್ಬನಿದ್ದು ಆತನು ಹಯಶಾಸ್ತ್ರಕೃತಿಯನ್ನು ಬರೆದಿರಬೇಕು. ಆತನ ಕೃತಿಯಿಂದ ಅಭಿನವಚಂದ್ರನ ಅಶ್ವಶಾಸ್ತ್ರ ಕೃತಿಗೆ ಪ್ರೇರಣೆಯಾಗಿರಬೇಕು ಎಂದು ಊಹಿಸಿದ್ದಾರೆ. ಮದನ ತಿಲಕದಲ್ಲಿ ಕವಿ ಹೇಳಿರುವಂತೆ

> "ಸಕಲ ವ್ಯಾಕರಣಾರ್ಥಶಾಸ್ತ್ರ ಗಣಿತಾಲಂಕಾರ ಸತ್ಕಾವ್ಯ ನಾ
> ಟಕ ವಾತ್ಸ್ಯಾಯನ ನೃತ್ತ ಗೀತ ಹಯಶಾಸ್ತ್ರ ದ್ವೈತಗಾಂಧರ್ವತಾ
> ರ್ಕಕವಿಂದ್ರಾಗಮ ವೈದ್ಯ ವಾದ್ಯ ಶಕುನೋದ್ಯದ್ವೃದ್ಯ ವಿದ್ಯಾಕದಂ
> ಬಕಮಂ ಚಂದ್ರಕವೀಂದ್ರ ನೋರ್ವನೆ ವಲಂ ಬಲ್ಲಂ ಪೆರೆರ್ ಬಲ್ಲರೇ"[೨೧] (೧-೫೧)

ಎಂದು ವ್ಯಕ್ತಪಡಿಸಿದ್ದಾನೆ.

ಈ ಪದ್ಯ ಮೇಲಿನ ಮಾತಿಗೆ ಉಪಷ್ಟಂಭಕವಾಗಿ ನಿಲ್ಲುತ್ತದೆ. ಕವಿಚರಿತೆಕಾರರು ಇದೇ ಅಭಿಪ್ರಾಯವನ್ನು ಹೊಂದಿದ್ದಾರೆ. ಇದು ನಿಜವಾದ ಪಕ್ಷದಲ್ಲಿ ಮದನತಿಲಕದ ಕರ್ತೃ ಚಂದ್ರರಾಜನು ಕನ್ನಡದ ಮೊಟ್ಟಮೊದಲ ಅಶ್ವಶಾಸ್ತ್ರಕಾರನಾಗುತ್ತಾನೆ ಎಂದು ಜಿ.ಜಿ.ಮಂಜುನಾಥನ್ ಅಭಿಪ್ರಾಯಪಡುತ್ತಾರೆ. ಒಂದು ವೇಳೆ ಕನ್ನಡ ಸಾಹಿತ್ಯ ಕವಿಗಳ ಕಾಲವನ್ನು ಮರು ಪರಿಷ್ಕರಣೆ ಮಾಡಿ ಕಾಲವನ್ನು ಗುರುತಿಸುವುದಾದರೆ ಆಗ ನಿಜವಾದ ಕನ್ನಡದ ಅಶ್ವಶಾಸ್ತ್ರಕಾರ ಯಾರು ಎಂಬ ಮಾತಿಗೆ ಉತ್ತರ ಸಿಗುತ್ತದೆ. ಕೃತಿಯೂ ಒಟ್ಟು ೧೧ ಅಧ್ಯಾಯಗಳನ್ನು ಒಳಗೊಂಡಿದ್ದು ಕವಿಹೇಳುವಂತೆ:

"ನಾಲ್ವತ್ತೆಂಟಕ್ಕರದ ಸಮಪಾದ ಸಹಸ್ರ ಗ್ರಂಥದಿಂ ಪೇಳ್ದನಲ್ಲಿ ಚಂದ್ರರಾಜ ನಾಗಮ ಲೌಕಿಕ ವಿರೋಧಮಂ ಕಳೆದು ಸಾರಾಂಶಮಂ ಕೊಂಡು ಪಲವು ಮತಂಗಳನೊಂದುಮಾಡಿ ಪದಿನೆಂಟಧಿಕರಣಂಗಳಿಂದಳಂ ಕಾರಂ

ಕೃತಮಾಗೆ ನಾನಾ ಛಂದದಿನ್ನೆನೂರು ಗದ್ಯ ಪದ್ಯಗಳಿಂದ ಮಿಶ್ರುತಂ ಮಾಡಿ ಪೇಳ್ದನಲ್ಲಿ"[೨೨] ಇದರಿಂದ ಚಂದ್ರರಾಜನ ಮದನ ತಿಲಕದ ಮೂಲ ಪ್ರತಿಯಲ್ಲಿ ೫೦೦ ಗದ್ಯಪದ್ಯಗಳು ೧೮ ಅಧಿಕರಣಗಳು ಇವೆ ಎಂದು ತಿಳಿದುಬರುತ್ತದೆ.

೩.೪.೬. ಸರ್ವಜ್ಞ ಸೋಮೇಶ್ವರನ ಮಾನಸೋಲ್ಲಾಸ

ಮಾನಸೋಲ್ಲಾಸ ಪ್ರಾಚಿನ ಕರ್ನಾಟಕದ ಒಂದು ಸುಪ್ರಸಿದ್ಧ ವಿಶ್ವಕೋಶ. ಈ ಕೃತಿಯನ್ನು ರಚಿಸಿದವನು ೧೨ನೇ ಶತಮಾನದ ಕಲ್ಯಾಣ ಚಾಲುಕ್ಯ ಚಕ್ರವರ್ತಿ ಸರ್ವಜ್ಞ ಸೋಮೇಶ್ವರ. ಸಂಸ್ಕೃತ ಭಾಷೆಯ ಇದರ ಮೂಲ ಗ್ರಂಥದಲ್ಲಿ ೫ ವಿಂಶತಿಯಿದ್ದು, ಪ್ರತಿಯೊಂದು ೨೦ ಅಧ್ಯಾಯದಂತೆ ಒಟ್ಟು ೧೦೦ ಅಧ್ಯಾಯಗಳಿವೆ. ಪ್ರತಿಯೊಂದು ಅಧ್ಯಾಯದಲ್ಲಿ ಒಂದು ಮುಖ್ಯ ವಿಷಯದ ಬಗ್ಗೆ ವಿವರಣೆ ಸಿಗುತ್ತದೆ. ಈ ಮುಖ್ಯ ವಿಷಯವಲ್ಲದೆ ಆಯಾ ವಿಷಯಗಳಿಗೆ ಸಂಬಂಧಿಸಿದ ಉಪವಿಷಯಗಳು ಬರುತ್ತವೆ. ಹೀಗೆ ಇದು ಸಾವಿರಾರು ವಿಷಯಗಳನ್ನೊಳಗೊಂಡ ಮಹಾಕೋಶ. ಇದರ ೮೦೦೦ ಶ್ಲೋಕಗಳಲ್ಲಿ ಆಗಿನ ಕರ್ನಾಟಕದ ರಾಜನೀತಿ, ಜ್ಯೋತಿಷ್ಯ, ವೈದ್ಯ, ವಾಸ್ತು, ಗೃಹ, ರಾಜಭೋಗ, ಉಪಭೋಗ, ವಿನೋದ, ಗೀತ ವಾದ್ಯ, ನೃತ್ಯ, ಕಥಾ ಚಮತ್ಕಾರ, ಕ್ರೀಡೆ ಮೊದಲಾದ ಕ್ಷೇತ್ರಗಳ ಮೇಲೆ ಬೆಳಕು ಚೆಲ್ಲುವ ಅಗಾಧ ಮಾಹಿತಿ ಇದೆ. ಅಲ್ಲದೆ ಪ್ರಥಮ ಸಂಪುಟದ ದ್ವಿತೀಯ ವಿಂಶತಿಯ ೬ನೇ ಅಧ್ಯಾಯವಾದ ಬಲಾಧ್ಯಾಯದಲ್ಲಿ ಅಶ್ವವೈದ್ಯಕ ಕುರಿತು ೫೭೩ನೇ ಪದ್ಯದಿಂದ ೬೧೯ರವರೆಗೆ ಒಟ್ಟು ೪೬ ಪದ್ಯಗಳಿದ್ದು, ೨ನೇ ಸಂಪುಟದ ಚತುರ್ಥ ವಿಂಶತಿಯ ೪ನೇ ಅಧ್ಯಾಯವಾದ ತುರುಗವಾಹ್ಯಾಲೀವಿನೋದ ಕುರಿತು ೬೬೧ರಿಂದ ೮೨೭ರವರೆಗೆ ಒಟ್ಟು ೧೬೬ ಪದ್ಯಗಳಲ್ಲಿ ಕುದುರೆಯ ಬಗ್ಗೆ ವಿವರಪೂರ್ಣವಾದ ಮಾಹಿತಿ ದೊರೆಯುತ್ತದೆ. ಹೀಗಾಗಿ ಮಾನಸೋಲ್ಲಾಸ ಕೃತಿಯು ಪ್ರಾಚೀನ ಕಾಲದ ಅನೇಕ ವಿಷಯ ವಸ್ತುಗಳ ಕಣಜವಾಗಿರುವುದು ಗಮನಾರ್ಹ ಸಂಗತಿಯಾಗಿದೆ.

೩.೩.೭. ಮುಮ್ಮಡಿ ಕೃಷ್ಣರಾಜ ಒಡೆಯರ ಸೌಗಂಧಿಕಾ ಪರಿಣಯ

ಈ ಕೃತಿಯ ಕರ್ತೃ ಮುಮ್ಮಡಿ ಕೃಷ್ಣರಾಜ ಒಡೆಯರ್. ಇದನ್ನು ಅರ್ಥಪೂರ್ಣ ಮತ್ತು ಸ್ವಾರಸ್ಯಕರವಾಗಿ ಸಂಪಾದನೆ ಮಾಡಿಕೊಟ್ಟವರು ಎಚ್.ಎಸ್.ಶ್ರೀಮತಿಯವರು. ಸಾಹಿತ್ಯ ಮತ್ತು ಇತಿಹಾಸ, ಕಲೆ ಸಂಸ್ಕೃತಿಯಿಂದ ಕೂಡಿರುವ ಕೃತಿ ಗಾತ್ರದಲ್ಲಿ ಗಜಗಾತ್ರವಾಗಿದೆ. ಮೈಸೂರು ಅರಸರ ಸಮಕಾಲೀನ ಪ್ರಜ್ಞೆಯನ್ನು ಮರುಕಳಿಸುವಂತಹದ್ದು, ಸಾಹಿತ್ಯ ಅಕಾದೆಮಿ ೨೦೦೪ರಲ್ಲಿ ಪ್ರಕಟಣೆ ಮಾಡಿ ಮಹಾದುಪಕಾರ ಮಾಡಿದೆ. ೩೬ ಆಶ್ವಾಸ ೬೯೫ ಪುಟಗಳನ್ನು ಒಳಗೊಂಡಿದೆ.

ಕೃತಿಯು ಅನೇಕ ವಿಷಯಗಳನ್ನು ಒಳಗೊಂಡ ಜ್ಞಾನಭಂಡಾರದ ಕಣಜವಾಗಿದೆ. ಈ ಗ್ರಂಥದ ಸಂಪಾದಕರು ತಮ್ಮ ಸಂಪಾದಕತ್ವದಲ್ಲಿ ಸೌಗಂಧಿಕಾ ಪರಿಣಯದಲ್ಲಿ ಒಟ್ಟು ೩೬ ಆಶ್ವಾಸಗಳಿವೆ. ಆದರೆ ಇವಿಷ್ಟು ಆಶ್ವಾಸಗಳು ಒಂದೇ ಹಸ್ತಪ್ರತಿಯಲ್ಲಿ ದೊರೆತಿಲ್ಲ ಎಂದು ಸ್ಪಷ್ಟಪಡಿಸಿ, ಮೊದಲ ೨೬ ಆಶ್ವಾಸಗಳು ಒಂದು ಕಲ್ಲಚ್ಚಿನ ಪ್ರತಿಯಲ್ಲಿ ದೊರೆತಿದೆ. ಎಲ್ಲಾ ಆಶ್ವಾಸಗಳೂ ಸಾಂದರ್ಭಿಕ ರೇಖಾಚಿತ್ರಗಳಿಂದ

ಅಲಂಕೃತವಾಗಿವೆ. ಆದರೂ ಇಪ್ಪತ್ತಾರು ಆಶ್ವಾಸಗಳಿಗೆ ಈ ಕೃತಿ ಕೊನೆಗೊಂಡಿದೆ ಎಂಬ ನಿರಾಸೆ ಭಾವನೆಯಲ್ಲಿರುವಾಗ, ಅದೃಷ್ಟವಶಾತ್ ಕಥೆಯ ಮುಂದುವರಿಕೆಗೆ ಭಾದಕ ಬಾರದ ರೀತಿಯಲ್ಲಿ ಮುಂದಿನ ಹತ್ತು ಆಶ್ವಾಸಗಳನ್ನಷ್ಟೇ ಒಳಗೊಂಡಿರುವ ಮತ್ತೊಂದು ಕೃತಿಯ ಪ್ರತಿಯೂ ಲಭ್ಯವಾಯಿತು. ಈ ಭಾಗದಲ್ಲಿ ಚಿತ್ರಗಳಿಲ್ಲ. ಮೊದಲನೆಯ ಪ್ರತಿಗಿಂತ ಭಿನ್ನವಾದ ಕಾಲದಲ್ಲಿ ಸಿದ್ಧವಾಗಿರುವ ಈ ಪ್ರತಿ ದೊರೆತ ಕಾರಣ ಪೂರ್ಣ ಕೃತಿ ಕೈಗೆ ಸಿಗುವಂತಾಯಿತು ಎಂದು ವ್ಯಕ್ತಪಡಿಸಿದ್ದಾರೆ.

ಪ್ರಸ್ತುತ ಅಧ್ಯಯನವಾದ ಅಶ್ವಶಾಸ್ತ್ರ ಕುರಿತು ೧೬ನೇ ಆಶ್ವಾಸದ ಅಶ್ವಪಣದಲ್ಲಿ ಕೂಡ ನಮ್ಮ ಪ್ರತಿಯಲ್ಲಿ ಪಟ್ಟಕ್ಕೆ ಯೋಗ್ಯವಾದ ಹಾಗೂ ಅಯೋಗ್ಯವಾದ ಅಶ್ವದ ಲಕ್ಷಣಗಳನ್ನು ಕುರಿತು ವಿವರಿಸಲಾಗಿದೆ. ಪುಟ ೩೪೮ರಿಂದ ೪೦೫ರವರೆಗೆ ಅಶ್ವಕ್ಕೆ ಸಂಬಂಧಿಸಿದ ಚಿತ್ರಗಳನ್ನೊಳಗೊಂಡ ವಿಷಯ ವಿವರಣೆ ಇರುವುದು ಅತ್ಯಂತ ಪರಿಣಾಮಕಾರಿಯಾದ ಸಂಗತಿಯಾಗಿದೆ. ಈ ಅಶ್ವಾಸದಲ್ಲಿ ಇಂದ್ರನ ಪ್ರಸಿದ್ಧ ಕುದುರೆಯಾದ ಉಚ್ಚೈಶ್ರವಂ ಕುದುರೆಯ ಬಗ್ಗೆ ವಿವರ ಪೂರ್ಣವಾದ ಮಾಹಿತಿ ಕೊಡಲಾಗಿದೆ.

ಅಲ್ಲದೆ ಕುದುರೆ ಸುಳಿಗಳ ಬಗ್ಗೆ ಉತ್ತಮ, ಅಧಮ ಕುದುರೆಗಳ ವಿವರ ಪಟ್ಟಗಟ್ಟಿತು. ಯಾವ ಯಾವ ಲಕ್ಷಣಗಳ ಕುದುರೆಯನ್ನು ಬಳಸಬೇಕು ಎಂಬಿತ್ಯಾದಿ ಹತ್ತುಹಲವಾರು ವಿಷಯವನ್ನು ಚರ್ಚಿಸಲಾಗಿದೆ. ಶುಭ-ಅಶುಭ ಕುದುರೆ ಕುರಿತು ಹೇಳುತ್ತ "ತೊಡೆಗಳು ತೋಳುಗಳು ಒರಟಾಗಿ ಸಮಾನವಾಗಿದ್ದರೂ ನಡುವಿನ ಮುಂಭಾಗಗಳು ಬಟುವಾಗಿ, ಶಿಲುವಾಗಿ, ಮಾಂಸವರ್ಜಿತವಾಗಿದ್ದರೂ, ಹುಬ್ಬುಗಳು ಮಧ್ಯಮ ಸಮವಾಗಿ ಸುವಾಸನೆಯಾಗಿ ಗಂಟು ಹುಣ್ಣು ಮೊದಲಾದ್ದು ಇಲ್ಲದೆ ಇದ್ದರೂ ಕಾಲುಗಳ ಗೊರಸುಗಳು ಬಟುವಾಗಿ, ದೃಢವಾಗಿ, ಮಂಡೂಕಾಕಾರವಾಗಿ, ನುಣುಪಾಗಿ, ಹೊಳೆಯುತ್ತಾ ವಿಸ್ತಾರಗಳಾಗಿದ್ದರೂ ಮೊಗ್ಗಲುಗಳು ಅತ್ಯಂತ ಉನ್ನತವಾಗಿ, ದೃಢವಾಗಿ, ನೀಟವಾಗಿ ಸಮವಾಗಿದ್ದರೂ ಕಿಬ್ಬೊಟ್ಟೆಯು ಜೋಲುವ ಒಳ್ಳೆ ಸುಳಿಯುಳ್ಳದ್ದಾಗಿ ಬಟುವಾಗಿದ್ದರೂ, ಬೆನ್ನು ಬಹಳ ನೀಟ ಇಲ್ಲದೆ ಸಮವಾಗಿ ಸ್ವಲ್ಪ ಬಗ್ಗಿದ್ದರೆ ನಡುವು ಬಲಿತು ದಪ್ಪವಾಗಿ ಒಳ್ಳೆಯ ಸುಳಿಯುಳ್ಳದ್ದಾಗಿದ್ದರೂ, ಹಿಂಭಾಗವು ಸ್ಥೂಲವಾಗಿದ್ದರೂ, ಬಾಲವು ಮೃದುವಾದ ದೀರ್ಘವಾದ ಕೂದಲುಗಳಿಂದ ಕೂಡಿದ್ದು, ವೃಷಣಗಳು ಸಮವಾಗಿಯೂ, ಬಟುವಾಗಿಯೂ, ಬಿಲ್ವ ಪತ್ರೆ ಮರದ ಕಾಯಿಗಳಿಗೆ ಸಮಾನವಾಗಿಯೂ, ಕೂದಲುಗಳು ಇಲ್ಲದೆ ಹೋದರೆ ಗುಹ್ಯವು ಕಪ್ಪು ವರ್ಣವಿಲ್ಲದೆ ಹ್ರಸ್ವವಾಗಿದ್ದರೂ, ಒಳತೊಡೆಗಳು ಸಮಾವಾಗಿದ್ದು ಸ್ವಲ್ಪ ಬಗ್ಗಿದ್ದರೂ ಶುಭಕರವೆನಿಸುವವು ಎಂದು ಶುಭ ಲಕ್ಷಣ ಕುರಿತು ಪ್ರಸ್ತಾಪಿಸಲಾಗಿದೆ.

೩.೫. ಇತರೆ

೩.೫.೧. ಕಾವ್ಯ ಪುರಾಣಗಳು

ಕನ್ನಡ ಸಾಹಿತ್ಯವನ್ನು ಅನುಲಕ್ಷಿಸಿದಾಗ ನಮಗೆ ಹೆಚ್ಚು ಸಾಹಿತ್ಯ ಸೃಷ್ಟಿಗೊಂಡಿರುವುದು ಕಾವ್ಯ ಪುರಾಣಗಳಲ್ಲಿಯೇ. ಕವಿರಾಜಮಾರ್ಗಕಾರ ಹೇಳುವಂತೆ 'ಕುರಿತೋದಯದೇ ಕಾವ್ಯ ಪ್ರಯೋಗ ಪರಿಣಿತಿ ಮತಿಗಳ್' ಎಂಬ ವಾಕ್ಯದಂತೆ ನಮ್ಮ ಕವಿಗಳು ಕಾವ್ಯ ರಚನೆಯಲ್ಲಿ ಹೆಚ್ಚು ಆಸಕ್ತಿಯನ್ನು ವಹಿಸಿದ್ದುಂಟು. ಹಾಗಾಗಿ ಶಾಸ್ತ್ರ ಸಾಹಿತ್ಯಕ್ಕಿಂತ ಕಾವ್ಯ ಕೃತಿಗಳ ಸಂಖ್ಯೆ ವ್ಯಾಪಕವಾಗಿ ಬೆಳೆದು ಬಂದಿದೆ. ಆನಂದವರ್ಧನ ಹೇಳುವಂತೆ 'ಕಾವ್ಯಸ್ಯಾತ್ಮಧ್ವನಿ' ಕಾವ್ಯದಲ್ಲಿ ಧ್ವನಿ ಇದೆ. ರಸ, ಅಭಿವ್ಯಕ್ತಿ ಸ್ವಾತಂತ್ರ್ಯ, ಲಯ, ಸಂಗೀತ, ಮುಂತಾದ ಎಲ್ಲಾ ಅಂಶಗಳು ಅಡಕಗೊಂಡಿವೆ. ಹಾಗಾಗಿ ಕಾವ್ಯ ಕೃತಿಗಳ ರಚನೆ ಹೆಚ್ಚು ಮಹತ್ವ ಪಡೆದುಕೊಂಡಿದೆ.

ಭಾರತೀಯ ಸಂಸ್ಕೃತಿಯ ಜೀವಂತ ಪ್ರತೀಕವೆನಿಸಿದ ನಮ್ಮ ಪುರಾಣಗಳು ಸಂಸ್ಕೃತಿಯ ಬಹುಮುಖ ಕೇಂದ್ರವಾಗಿ ಬೆಳೆದು ಬಂದಿವೆ. ಆದ್ದರಿಂದ ಪುರಾಣ ಕಾವ್ಯಗಳನ್ನು ಪಂಚಮವೇದವೆಂದು ಕರೆಯುತ್ತಾರೆ.

> ಯಸ್ಮಾತ್ ಪುರಾಹ್ಯನತೀತಿ ಪುರಾಣಂ ತೇನ ಹಿ ಸ್ಮೃತಂ
> ನಿರುಕ್ತಮಸ್ಯಯೋ ವೇದ ಸರ್ವಪಾಪೈಃ ಪ್ರಮುಚ್ಯತೇ

ಎಂದು ಪ್ರಾಚೀನ ಪುರಾಣಕಾರರು ಅಭಿಪ್ರಾಯ ಪಡುತ್ತಾರೆ.

ಅಮರಸಿಂಹನು ತನ್ನ ನಾಮಲಿಂಗಾನು ಶಾಸನದಲ್ಲಿ ಪುರಾಣಗಳನ್ನು ಕುರಿತು ಹೇಳುತ್ತಾ

> ಅಖ್ಯಾಯಿ ಕೋಪ ಲಬ್ದಾರ್ಥ ಪುರಾಣಂ ಪಂಚಲಕ್ಷಣಂ
> ಸರ್ಗಶ್ಚ ಪ್ರತಿ ಸರ್ಗಶ್ಚ ವಂಶೋಮನ್ವಂತರಾಣಿ ಚ
> ವಂಶಾನುಚರಿತಂ ಚೈವ ಪುರಾಣಂ ಪಂಚಲಕ್ಷಣಂ (೧-೧೮೫)

ಪುರಾಣಗಳ ಪಂಚಲಕ್ಷಣಗಳನ್ನು ಒಳಗೊಂಡಿರಬೇಕು ಎಂದು ಹೇಳಿ, ಇವು ಭಾರತೀಯ ಸಂಸ್ಕೃತಿಯ ಆಚಾರ -ವಿಚಾರಗಳ ವಿಶ್ವಕೋಶದಂತಿವೆ ಎಂದಿದ್ದಾನೆ. ಪಂಪಭಾರತದಲ್ಲಿ ಕುದುರೆಯನ್ನು ಕುರಿತು ಕರ್ಚಿ ಪುಡಿಯೊಳ್ ಪೊರಳ್ದುವು ನಚ್ಚಿನ ಕಾಂಭೋಜ ವಾಜಿಗಳ್ ಕೆಲವಾಗಳ್ (೮-೯೪. ವ) ಅಂತು ಮತ್ತು ಮನದೊಳೊಡಂಬಟ್ಟಂತೆ ಮನಮನೆಡಗಲಿಸಿ ಪರಿವಜಾತ್ಯಶ್ವಂಗಳೆಲ್ಲ ಮೆಟಿಗಾಳೆಗದೊಳ್ ಸತ್ತೊಡೆ (ಪಂ.ಭಾ. ೮-೯೪) ಮತ್ಸರದಿಂದ ಒಬ್ಬನ್ನೊಬ್ಬರು ಹಾರಿಸಿ ದನಕಾಯುವವರು ಆರ್ಭಟದಿಂದ ಹೊಡೆಯಲು (ಜಯಿಸಿಯೇ ತೀರುತ್ತೇವೆಂದು) ನಂಬಿದ್ದ ಕೆಲವು ಕಾಂಭೋಜ ದೇಶದ ಕುದುರೆಗಳು ಕಡಿವಾಣವನ್ನು ಕಚ್ಚಿಕೊಂಡೆ ಹುಡಿಯಲ್ಲಿ ಹೊರಳಿದವು. ಹಾಗೆ ತಮ್ಮ ಮನಸ್ಸಿಗೆ ತೃಪ್ತಿಯಾಗುವಂತೆ ಮನಸ್ಸನ್ನು ಮೀರಿ ಓಡುವ ಜಾತಿ ಕುದುರೆಗಳೆಲ್ಲ ಅಸಾಮಾನ್ಯ ಯುದ್ಧದಲ್ಲಿ ಸತ್ತವು.

ಗೋಪಾಲಕರು ಪೌರುಷ ಪ್ರದರ್ಶನ ಮಾಡಿ ಬರಲು, ಕುದುರೆಯ ರಾವುತರು ಕುದುರೆಗಳನ್ನು ಮುನ್ನುಗ್ಗಿಸಿ ಅವರನ್ನು ಬೆನ್ನಟ್ಟಿ ದೇವಾಲಯಕ್ಕೆ ದೊಡ್ಡ ಮರವನ್ನು ಕಡಿಯುವಂತೆ ಚೂರು ಚೂರಾಗಿ ಕತ್ತರಿಸಿದರು. (ಪಂ.ಭಾ. ೮- ೯೫) ಕುದುರೆಯ ವೇಗವನ್ನು ಅರಿತ ರಾವುತರು ಸಾಧ್ಯವಾದಷ್ಟು ಹಿಡಿತದಲ್ಲಿ ಇಟ್ಟುಕೊಂಡು ತಮ್ಮ ಪ್ರದರ್ಶನವನ್ನು ಬಲಶಾಲಿಯಾದ ಕುದುರೆ ಜೊತೆ ಹಂಚಿಕೊಂಡರು

.....ತುರಗಂ ನೂಱನಿತುಂ ತುರಂಗದೊಳ್ ಮೊಂದೊಂದರ್ಕೆ ನೂಱೂಳ್ ತಗು

ಳ್ದಿರೆ ಬಲ್ಲರ ನಡೆ ನೋಡಿ ಕೂಡೆ ಪಡೆದತ್ತ ಕ್ಷೋಹಿಣೀ ಸಂಖ್ಯೆಯಂ (ಪಂ.ಭಾ. ೯-೯೫)

ಆ ತೀರು ಒಂದಕ್ಕೆ ನೂರು ಕುದುರೆಗಳು. ಅಷ್ಟು ಕುದುರೆಯ ಸೈನ್ಯದ ಒಂದೊಂದಕ್ಕೆ ನೂರಾಳು ಸೇರಿಕೊಂಡಿರಲು ಅದು ತಿಳಿದವರ ಗಣನೆಯ ಪ್ರಕಾರ ಒಂದು ಅಕ್ಷೋಹಿಣಿ ಎಂದೆನಿಸಿತು. ಅರ್ಜುನನು ಮಾಡಿದ ಉಪಕಾರವನ್ನು ನೆನಸಿಕೊಂಡು ಅಂಗದರ್ಪಣನೆಂಬ ಗಂಧರ್ವನು ನಾಲ್ಕುಕೋಟಿ ಗಂಧರ್ವ ಸೈನ್ಯವೂ, ಅರವತ್ತು ಸಾವಿರ ಗಿಳಿಯ ಬಣ್ಣದ ಕುದುರೆಗಳೂ ಕೂಡಿ ಗಂಧರ್ವ ಲೋಕವೇ ಕಿತ್ತು ಎದ್ದು ಬರುವ ಹಾಗೇ ಬಂದನು. ಪ್ರಭದ್ರೈಕ ಬಲವೂ ಅಂಗ, ವಂಗ, ಕಳಿಂಗ, ಕೊಂಗ, ಕೊಂಕಣ, ಗೊಲ್ಲ ಕಾಂಭೋಜ, ಮಗಧ, ಸೌರಾಷ್ಟ್ರ ವರಾಟ, ಲಾಟ ಕರ್ಣಾಟ, ಕರಹಾಟ, ಮಳಿಯ, ಮಾಳವ ನೇಪಾಳ, ಪಾರಿವ, ಪಾರಿಯಾತ್ರ, ಬರ್ಬರ, ಕೋಸಳ, ಕಾಶಿ, ಕಾಶ್ಮೀರ ಕೌಶಿಕ, ಆಂಧ್ರ, ದ್ರವಿಡ, ಗಜಮುಖ, ಅಶ್ವಮುಖ, ಉಷ್ಟ್ರಮುಖ, ಖರಮುಖ, ವೇಷಮುಖ, ಲಿಂಬ, ಕರ್ಣ, ಹಸ್ತಿ, ಕರ್ಣ, ಅಶ್ವಕರ್ಣ ತುರುಷ್ಕರೇ ನಾನಾ ದ್ವೀಪಗಳಿಂದ ಬಂದಿದ್ದರು. (ಪಂ.ಭಾ.೯-೯೫) ಬೇರೆ ಬೇರೆ ಪ್ರದೇಶಗಳಿಂದ ಬಂದ ಅಂಗರಕ್ಷಕರು ಅರ್ಜುನನ ಉತ್ತಮವಾದ ಗುಣಗಳನ್ನು ಸಮರ್ಥನೆ ಮಾಡಿಕೊಂಡರು.

ಮದಮಂ ಮಕ್ಕಳಿಸಿರ್ದಿಭಂಗಳನುದಗ್ರಾಶ್ವಂಗಳಂ ತಕ್ಕಿನ

ಗ್ಗದ ಬಾಡಂಗಳನಾಯ್ದು ಕೊಟ್ಟ ತಣಿದೆಂ ಪೋ ಸಾಲ್ಗುವೆಂಬನ್ನ ಮಂ (ಪಂ.ಭಾ.೨- ೫೨)

ಮದವನ್ನು ಉಗುಳುತ್ತಿರುವ ಆನೆಗಳನ್ನು (ಮದ್ದಾನೆಗಳನ್ನು) ಉತ್ತಮವಾದ ಕುದುರೆಗಳನ್ನು ಯೋಗ್ಯವಾದ, ಶ್ರೇಷ್ಠವೂ ಆದ ಗ್ರಾಮಗಳಿಂದ ತೃಪ್ತನಾದೆ. ಸಾಕು ಹೋಗು ಎನ್ನುವಲ್ಲಿ ಇಂತಹ ಮಾತುಗಳು ಬಂದಿವೆ.

ಪಕ್ಕರೆಯಿಕ್ಕಿ ಬಂದವು ಹಯಂ ಘುಡೆ ಪಣ್ಣಿದು ವಾಯುಧಂಗಳಿಂ

ತೆಕ್ಕನೆ ತೀವಿ ಬಂದವು ದಥಂ ಪುಲಿವಿಂಡು ವೊಲಾದಳು ರ್ಕೆ ಕೈ

ಮಿಕ್ಕಿರೆ ಬಂದು ದೊಂದಣಿ ರಣಾನಕ ರಾವಮಳುಂಬ ಮಾದುವಾರ್

ಮಿಕ್ಕ ಬರ್ದುಂಕುವನ್ನೆರಿವರ್ಗೆಂಬಿನೆಗಂ ಮಸಗಿತ್ತುರಾಜಕಂ (೩-೬೭ ಪಂ.ಭಾ.)

ಜೀನುಗಳನ್ನು ಧರಿಸಿದ ಕುದುರೆಗಳು ಬಂದವು. ಆನೆಗಳ ಸಮೂಹವು ಯುದ್ಧ ಸನ್ನದ್ಧವಾದವು. ಆಯುಧಗಳಿಂದ ತುಂಬಿದ ರಥಗಳು ಬಂದವು. ಕಾಲಾಳು ಸೈನ್ಯದ ಪಂಕ್ತಿಯೊಂದು ಹುಲಿಯ ಹಿಂಡಿನ ಹಾಗೆ ಕೈಮೀರಿ ಮುಂದೆ ಬಂದಿತು. ಯುದ್ಧವಾದ್ಯವು ವಿಜೃಂಭಿಸಿತು.

ಎಂಬುದುಂ ನಿನ್ನನಾಳ್ವನೆಂದು ಬಾಣಸಿನ ಕರಣಕ್ಕೆ ನಿರೂಪಣಂಗೆ
ಯ್ದನನ್ನೆಗಂ ನಕುಳನು ಮಂಕವಣಿಯುಂ ಬಾಂ ಚಿಮ್ಮಟಿಗೆ
ಯಮನೊರ್ವ ಕೀಟೂಳಿಂ ಪಡಿಯಿಸಿಕೊಂಡು ಬಂದು ವಿರಾಟನಂ
ಕಂಡೆಂತಪ್ಪ ದುಷ್ಟಾಶ್ವಂಗಳು ಮೇನೇಱಲುಂ ಪಿರ್ದಲುಂ ಬಲ್ಲನೆಂದು
ಪೇಟ್ದೂಳಾಗಿ ತಂತ್ರಪಾಳವೆಸರೊಳ್ ಮಾಸಾದಿಯಾಗಿರ್ದಂ ಸಹದೇವ
ನುಂ ಗೋಪಾಳ ವೇಷದೊಳ್ ಬಂದು ಕಂಡವನ ಗೋಮಂಡಳಾಧ್ಯಕ್ಷ
ನಾಗಿರ್ದಾಗಳ್ (೮. ೫೪.ಪ ಪಂ.ಭಾ.)

ನಿನ್ನನ್ನಾಳುತ್ತೇನೆ ಎಂದು ವಿರಾಟನು ಅವನನ್ನು ಅಡುಗೆಯ ಕಾರ್ಯಕ್ಕೆ ನೇಮಿಸಿಕೊಂಡನು. ಅಷ್ಟರಲ್ಲಿ ನಕುಲನು ಕುದುರೆಯ ಮೇಲಿನ ತಡಿಯನ್ನು, ಕತ್ತಿಯನ್ನು, ಚರ್ಮದ ಲಗಾಮನ್ನು, ಚಾವಟಿಯನ್ನು ಒಬ್ಬ ಸೇವಕನಿಂದ ತೆಗೆಯಿಸಿಕೊಂಡು ಬಂದು ವಿರಾಟನನ್ನು ಕುರಿತು ಎಂತಹ ದುಷ್ಟ ಕುದುರೆಯನ್ನಾದರೂ ಹತ್ತ ಬಲ್ಲೆ ಎಂದು ಹೇಳಿ ಆತನಲ್ಲಿ ಆಳಾಗಿ ಸೇರಿ ತಂತ್ರಪಾಲನೆಂಬ ಹೆಸರಿನಿಂದ ಕುದುರೆಯ ರಕ್ಷಕನಾಗಿದ್ದನು. ಸಹದೇವನೂ ದನಕಾಯುವವನ ವೇಷದಲ್ಲಿ ಬಂದು ಕಂಡು ಅವನ ಗೋಸಮೂಹದ ಮುಖ್ಯಾಧಿಕಾರಿಯಾಗಿದ್ದನು.

......ಭುಜಮಯ ಮಷ್ಟದಿಗ್ವಳಯಮಶ್ವಮಯಂ ಜಗತೀ ತಳಂ ರಥ (೯-೯೮)

ಭೂಮಂಡಲವು ಕುದುರೆಯಿಂದ ತುಂಬಿದೆ ಎಂದು ಹೇಳುವಾಗ ನಡೆಯ ತುರಗಂ ಪೊನ್ನಾಯೋಗಂಗಳಿಂದ ಮರ್ದಟ್ಟೆ (೯-೧೦೨ ಪಂ.ಭಾ.) ಕುದುರೆಗಳು ಚಿನ್ನದ ಅಲಂಕಾರಗಳಿಂದ ಕೂಡಿ ಸಂತೋಷದಿಂದ ನಡೆದು ಬರಲು, ನಡೆಯಲ್ಬಂದಿಱೆಯಲ್ಕೆ ತಕ್ಕ ತುರಂಗಂ ಭೋರೆಂದು ಬರ್ಪೊಂದೊಡಂ ...... ಯುದ್ಧಕ್ಕೆಂದು ಬಂದ ಕುದುರೆಯು ಭೋರೆಂದು ಯೋಗ್ಯವಾದ ರೀತಿಯಲ್ಲಿ ನಾನಾ ರೀತಿಯ ಬಾವುಟ ಮತ್ತು ಕುದುರೆಗಳ ಸಮೂಹಗಳು, ಚಿನ್ನದ ಜೀನುಗಳಿಂದಲೂ ಅಲಂಕರಿಸಲ್ಪಟ್ಟ ಬಿಸಿಲ್ಗುದುರೆಗಳ ಹಾಗೆ ಹೊಳೆಯುತ್ತಿರುತ್ತವೆ. ವೇಗಶಾಲಿಯಾದ ಕುದುರೆಗಳು ಮುಂದುವರಿದವು ಎಂದು ಹೇಳುವಲ್ಲಿ (೧೦-೫೧ ಪಂ.ಭಾ.) ಚಿನ್ನದ ಬಾವುಟಗಳೂ, ಶೋಭಾಯಮಾನವಾಗಿರುವ ಬೆಳ್ಳಿಯ ತೇರು, ಆ ರಥಕ್ಕೆ ಹೊಂದಿಕೊಳ್ಳುವ ಹಾಗೆ ಹೂಡಿರುವ ಕುದುರೆಗಳು ಸಿದ್ಧವಾಗಿದ್ದವು. (೧೦-೫೨ ಪಂ.ಭಾ.) ....ಕರತರವಾದ ಪೆರ್ದೆರೆಗಳಂ ಹಯಸಂತತಿ ಮತ್ಸ್ಯಕೋಡಿಯಂ ...... ಅತಿಭಯಂಕರವಾದ ದೊಡ್ಡ ಅಲೆಗಳನ್ನು ಕುದುರೆಗಳ ಸಮೂಹವೂ ಎನ್ನುವಲ್ಲಿ

ಈ ವಾಕ್ಯ ಉಲ್ಲೇಖವಾಗಿದೆ. (೧೦-೨೮ ಪಂ.ಭಾ.) ಮುಚಲಾಱವೆ ರವಿವಾಜಿಗಳ್ ನೆಗೆದ ಪಾಂಸುಗಳಿಂ ದೆಸೆಗೊಟ್ಟು ಪೋಗಲಾ .... ಸೂರ್ಯನ ಕುದುರೆಗಳು ಮೇಲೆದ್ದ ಧೂಳಿನಿಂದ ದಿಕ್ಕೆಟ್ಟು ಮುಂದೆ ಹೋಗಲಾರವು. (೧೦-೩೦ ಪಂ.ಭಾ.) .... ಜಾತ್ಯಾಶ್ವ ರಥಾಶ್ವ ಸಂಕುಳ ಖರೀನೋದ್ಭೂತ ಲಾಲಾಜಲಂ .... ಅಲಂಕೃತವಾಗಿರುವ ಜಾತ್ಯಶ್ವ ಮತ್ತು ರಥಾಶ್ವ(ಜಾತಿ ಕುದುರೆ ಮತ್ತು ತೇರಿನ ಕುದುರೆ)ಗಳ ಕಡಿವಾಣ ಸಮೂಹದಿಂದ ಎನ್ನುವಲ್ಲಿ (೧೦-೩೧ ಪಂ.ಭಾ).....ತಗುಳ್ದುಂ ಪೂಜಿಸುಗೆ ವಿಶುದ್ಧವಾಜಿಗಳ ನಾಜಿಗೆ ಜೆಟ್ಟಿಗರಾಗಿ ಕಳ್ಳಿವೀಸಿಸುಗೆ ... ಪರಿಶುದ್ಧರಾದ ಕುದುರೆಗಳನ್ನು ಶ್ರದ್ಧೆಯಿಂದ ಪೂಜಿಸಲು ಅನ್ನುವಾಗ (೧೦-೩೨ ಪಂ.ಭಾ.) ಕುದುರೆಯ ನೆಜೆದಂಬೆರನು ಸೌಳನೆ ಪೋಗಿರೆ ಪೊಯ್ದು ಮೆಯ್ದಿಕ... ಹತ್ತಿದ ಕುದುರೆಯೊಡನೆ ಸವಾರನನ್ನು 'ಸಿಳ್' ಎಂದು ಕತ್ತರಿಸುವ ಹಾಗೆ.

ಕೆಂಬಣ್ಣದ ಕುದುರೆಗಳೊಳೋ
ಡಂಬಡೆ ನಿಜರಜತ ರಥ ಮಗುರ್ವುರ್ವರೆಯಂ | (೧೦-೫೪ ಪಂ.ಭಾ)

ತನ್ನ ಬೆಳ್ಳಿಯ ತೇರು ಕೆಂಪು ಬಣ್ಣದ ಕುದುರೆಗಳಿಂದ ಒಡ್ಡಿರಲು ಭಯಂಕರನಾದ ದ್ರೋಣಾಚಾರ್ಯ ಕುರಿತು ಹೇಳುವಾಗ "ಸರದದ ಮುಗಿಲನೆ ಬಿಡದನು ಕರಿಸುವ ಧವಳಾಶ್ವದಿಂದ ಮಸೆದೊಪ್ಪುವ ಲೋಹ ರಥಮದು..... (೧೦-೫೭ ಪಂ.ಭಾ) ಶರತ್ಕಾಲದ ಮೋಡವನ್ನೇ ಅನುಸರಿಸುತ್ತಿರುವ ಬಿಳಿಯ ಕುದುರೆಗಳಿಂದ ಪ್ರಕಾಶಿಸುತ್ತಿರುವ ಆಲೋಹ ರಥದಲ್ಲಿ ಶಲ್ಯ ನಿಂತಿರುವ ಸಂದರ್ಭ. ಪಸುಗೆ ನೆಲಂ ಜಲಂ ಹಯದೊಡಂಬಡು ವಂಚನೆ ಕೇಣಮಾಸನಂ....... (೧೦-೭೭ ಪಂ.ಭಾ) ವಿಭಾಗ, ನೆಲ, ಜಲ, ಕುದುರೆಗಳ ಹೊಂದಾಣಿಕೆ, ಮೋಸ, ಮಾತ್ಸರ್ಯ, ಔದಾಸೀನ್ಯ ಮುಂತಾದವು. ಇಂದ್ರನ ಸ್ನೇಹಿತನಾದ ಭಗದತ್ತ, ಆತನ ಪಕ್ಕದಲ್ಲಿ ಒಂದು ಲಕ್ಷ ಕುದುರೆಯನ್ನು, ಅರವತ್ತು ಸಾವಿರ ರಥವನ್ನು, ಒಂದು ಲಕ್ಷ ಕಾಲಾಳುನ್ನು ಕೂಡಿಕೊಂಡು ನಿಂತವರು ಸೋಮದತ್ತ ಬ್ಬಾಹೀಕರು (೧೦-೫೭ ಪಂ.ಭಾ)

ಕರಿತುರಗ ರಥ ಪದಾತಿಯ
ಚರಣಾ ಸಂಘಾತ ಜಾತ ರಜ ಮಾಜಸ್ರಂ |
ನೆರೆದಂಬರ ಕೊಗೆಯಲ್ ಬಳ
ಭರದಿಂ ಧರೆ (ಯನ್ನ) ಯೆಟ್ದಿ ಪಾಱಿವಂತಾಯ್ತಾಗಳ್ (೧೦-೯೮ ಪಂ.ಭಾ.)

ಆನೆ, ಕುದುರೆ, ತೇರು, ಕಾಲಾಳುಗಳ ಪಾದ ಘಟ್ಟಣೆಯಿಂದ ಉಂಟಾದ ಧೂಳು ಒಟ್ಟಿಗೆ ಕೂಡಿ ಆಕಾಶಕ್ಕೆ ಹಾರಲು ಸೈನ್ಯದ ಭಾರದಿಂದ ಭೂಮಿಯೇ ಎದ್ದು ಹಾರುವ ಹಾಗಾಯಿತು.

.....ಮಾಳಜಿಗೆ ಪಕ್ಕರೆಯಿಕ್ಕಿದ ಜಾಯಿಲಂ ಭಯಂ | ಗೊಳಿಸೆಕಡಂಗಿ ತಾಗಿದುದ ಸುಂಗೊಳೆ ತುಂಗ ತುರಂಗ ಸಾಧನಂ || (೧೦-೭೬ ಪಂ. ಭಾ) ಜೀನು ಹಾಕಿದ ಜಾತಿಯ ಕುದುರೆಗಳು ಇವು ಭಯವನ್ನುಂಟು ಮಾಡಲು ಕುದುರೆಯ ಸೈನ್ಯವು ಪ್ರಾಣವನ್ನು ಪಹರಿಸುವ ಹಾಗೆ ತಾಗಿತು.

ಕುದುರೆಯ ಬಣ್ಣದಿಂ ರಥದ ತೋರ್ಕೆಯಿನೆತ್ತಿದ ಚಿತ್ರಕೇತು ವುಂದದ..... (೧೦-೮೭ಪಂ.ಭಾ.)

ಕುದುರೆಯ ಬಣ್ಣದಿಂ ರಥದ ತೋರಿಕೆಯಿಂದಲೂ, ಎತ್ತಿ ಕಟ್ಟಿದ ಚಿತ್ರ ಖಚಿತವಾದ ಧ್ವಜಗಳ ಗುರುತಿಸುವಾಗ, ತೇರಂ ಪಾಯಿಸಿ, ನೋಯಿಸಿ ಪಾರುವ ಕುದುರೆಗಳ ನರೆ ಬರೆರ್ದೆಯುರಿಯೆಚ್ಚರ್ (೧೦-೮೯ ಪಂ.ಭಾ.) ಕೆಲವರು ತೇರನ್ನು ಹರಿಯಿಸಿ ಹಾರುತ್ತಿರುವ ಕುದುರೆಗಳನ್ನು ನೋಯಿಸಿ ಸಾರಥಿಯ ಮತ್ತು ರಥದೊಳಗಿರುವವರನ್ನು ಗುರುತಿಸುವಾಗ, ರಥಕ್ಕೆ ಸಾಮಾನ್ಯವಾಗಿ ಎರಡು ಕುದುರೆಗಳನ್ನು ಕಟ್ಟುತ್ತಿದ್ದರು. ಇದರ ನೊಗದ ಎರಡು ತುದಿಯಲ್ಲಿ ಕುದುರೆಗಳಿರುತ್ತಿದ್ದವು. ನೋಗಕ್ಕೆ ಒಂದು ಕುದುರೆಯನ್ನು ಕಟ್ಟಿದ್ದಿದೆ. ಕೆಲವೊಮ್ಮೆ ಮೂರು ಅಥವಾ ನಾಲ್ಕು ಕುದುರೆಗಳನ್ನು ಬಳಸುತ್ತಿರುವುದಕ್ಕೆ ನಿದರ್ಶನವಿದೆ. ಆನೆಗಳನ್ನು ಬಿಟ್ಟರೆ ನಾಲ್ಕು ಕುದುರೆಗಳ ರಥ ಹೆಚ್ಚಿನದು ಎಂಬುದು ಮೆಗಾಸ್ತಾನೀಸ್‌ನ ಅಭಿಪ್ರಾಯ (ಪ್ರ.ಕಂ.ಇಂ. ಪು.೨೮). ರಥಕ್ಕೆ ಬಳಸುವ ಕುದುರೆಗಳನ್ನು ವಾಹನಂಧೋರಣಂ ಯುಗ್ಯಂಯಾನಂ ಪತ್ರಂ ಈ ೫ ರಥವ ಹೂಡುವ ಕುದಿರೆ ಎಂಬ ಹೆಸರಿನಿಂದ ಗುರುತಿಸಿದೆ(೭೮-೪೯೫ ಹಲಾಯು). ಯುದ್ಧಭೂಮಿಗೆ ಹೋಗುವಾಗಲೇ ರಥಗಳಿಗೆ ಕುದುರೆಯನ್ನು ಕಟ್ಟುವುದಿಲ್ಲ. ಬದಲಾಗಿ ರಥವನ್ನು ಎಳೆದು ಕುದುರೆಗಳಿಗೆ ಆಯಾಸವಾಗದಿರಲೆಂದು ಕುದುರೆಯ ಬದಲು ಎತ್ತುಗಳನ್ನು ಕಟ್ಟುತ್ತಾರೆ. ಎಂದು ಮೆಗಾಸ್ತನೀಸ್ ಬರೆದಿರುವನು. ಸೈನ್ಯ ಸುಗ್ರೀವ್, ಮೇಘ, ಪುಷ್ಪ, ಬಲಾಹಕ ಎಂಬ ನಾಲ್ಕು ಕುದುರೆಗಳನ್ನು ಕೃಷ್ಣನ ರಥಕ್ಕೆ ಹೂಡಲಾಗಿತ್ತು.

ರಥವೊಂದಕ್ಕೆ ಸೈನ್ಯ ಮತ್ತು ಸುಗ್ರೀವ ಎಂಬ ಎರಡು ಕುದುರೆಗಳನ್ನು ಕಟ್ಟಿದ ವಿಷಯ ಆದಿಪರ್ವದಲ್ಲಿದೆ. ಬಿಳಿ ಬಣ್ಣದ ಕುದುರೆಗಳು ಉಳಿದ ಬಣ್ಣದ ಕುದುರೆಗಳಿಗಿಂತ ಹೆಚ್ಚು ಚುರುಕಾಗಿರುತ್ತಿದ್ದವು. ಭೀಷ್ಮ ಮತ್ತು ಅರ್ಜುನ ಇವರ ರಥಕ್ಕೆ ಬೆಳ್ಳಿಯ ಬಣ್ಣದ ಕುದುರೆಗಳನ್ನು ಕಟ್ಟಿದ್ದರು. ಕರ್ಣನ ರಥಕ್ಕೂ ಬಿಳಿಯ ಕುದುರೆಗಳನ್ನು ಹೂಡಲಾಗಿತ್ತು. ಅವುಗಳನ್ನು ಪವಿತ್ರವಾದ ನೀರಿನಲ್ಲಿ ಮಂತ್ರ ಸಹಿತ ಸ್ನಾನ ಮಾಡಿಸಿ ರಥಕ್ಕೆ ಕಟ್ಟಲು ಕರ್ಣ ಸೇವಕರಿಗೆ ಅಜ್ಞಾಪಿಸುವನು, ರಥಗಳಿಗೆ ಇನ್ನಿತರೆ ಬಣ್ಣದ ಕುದುರೆಗಳನ್ನು ಬಳಸಿದ್ದರ ಬಗೆಗೆ ಸಾಕಷ್ಟು ಮಾಹಿತಿಗಳು ಮಹಾಭಾರತದಲ್ಲಿವೆ. ಸಾಮಾನ್ಯವಾಗಿ ರಥಕ್ಕೆ ಕಟ್ಟಿದ ಕುದುರೆಗಳ ರಕ್ಷಣಾ ಕವಚವಿರುತ್ತಿದ್ದವು. ದ್ರೋಣನ ಕುದುರೆಗಳು ಬಂಗಾರದ ಬಲೆಯಿಂದ ರಕ್ಷಿಸಲ್ಪಟ್ಟಿದ್ದವು. ರಥಕ್ಕೆ ಕಟ್ಟಿದ ಕುದುರೆಗಳನ್ನು ವೈವಿಧ್ಯಮಯವಾದ ಆಭರಣಗಳಿಂದ ಮುಂಭಾಗದಲ್ಲಿ ಅಲಂಕರಿಸುತ್ತಿದ್ದರು. ಕುದುರೆಯ ಬಾಲಕ್ಕೆ ಬಣ್ಣದ ಬಟ್ಟೆ, ತಲೆಗೆ ಬಣ್ಣದ ಗರಿಗಳನ್ನು ಕಟ್ಟುತ್ತಿದ್ದರು.

ನಕುಲನು ಕುದುರೆಯ ಖಾಯಿಲೆ, ಚಿಕಿತ್ಸೆ, ಅದರ ತರಬೇತಿಯ ಕಲೆಯನ್ನು ಬಲ್ಲವನಾಗಿದ್ದನು. ಕವಚ ಧರಿಸಿದ ಶಸ್ತ್ರವಿದ್ಯೆಯಲ್ಲಿ ನಿಶ್ಚಯ ಜ್ಞಾನವಿದ್ದ ಕುಲೀನರಾದ ಕುದುರೆಯ ವಂಶಾವಳಿಯನ್ನು ಸಂಪೂರ್ಣ ತಿಳಿದಿದ್ದ ವೀರಯೋಧರು ಕೌರವ ಪಡೆಯ ಸಾರಥ್ಯದಲ್ಲಿ ನಿಯೋಜಿತರಾಗಿದ್ದರು.

ಶ್ರೀಕೃಷ್ಣನ ಚೋದನೆಯಂತೆ ಕುದುರೆಗಳು ಉತ್ತಮ, ಮಧ್ಯಮ, ಅಧಮವೆಂಬ ಮಂಡಲಗಳ ಕ್ರಮದಲ್ಲಿ ಸುತ್ತುತ್ತಾ ಸಂಚರಿಸುತ್ತಿದ್ದವು. ಸಾರಥಿಯು ನಿಂತುಕೊಂಡೆ ಕುದುರೆಗಳನ್ನು ನಿಯಂತ್ರಿಸುತ್ತಿದ್ದನೆಂದು ಕಾಣುತ್ತದೆ. ಕುದುರೆ ಮತ್ತು ಸಾರಥಿ ನರ್ತನ ಮಾಡುತ್ತಿರುವಂತೆ ಕೆಲವೆಡೆ ವರ್ಣನೆಯಿದೆ.

ಕುದುರೆಗಳು ಮುಂದೆ ನಡೆದವು, ರಥಗಳು ಹಿಂದೆ ಮಧ್ಯದಲ್ಲಿ ಆನೆಗಳು ಹೋದವು. ಸೈನ್ಯದಲ್ಲಿ ಕಾಲಾಳುಗಳು ಎಲ್ಲಾ ಕಡೆ ನಡೆದರೆಂದು ಮಹಾಪುರಾಣದಲ್ಲಿದೆ.

ಕಾವ್ಯಾವಲೋಕನದಲ್ಲಿ ಬರುವ ಪದ್ಯವೊಂದರಲ್ಲಿ ಕುದುರೆಯನ್ನು ಕುರಿತು ಈ ರೀತಿ ಉಲ್ಲೇಖಿಸುತ್ತದೆ.

ತುರಗದಟಂಗಳ್ಕದಿತರೆ
ತುರಂಗ ಮಾರೂಢನಾಗಿ ತನ್ನಯ ಹಯಮಂ
ಪರಿಯಿಸಿಕೊಂಗುಳಿ ವರ್ಮಂ
ಕರಾಸಿಯಿಂದಿಱಿದು ತವಿಸಿದಂ ಹಯಬಲಮಂ (೨೮೫ ಕಾವ್ಯ.ವ.)

ಕೊಂಗುಳಿವರ್ಮನು ಅಶ್ವದಳವೊಂದರ ಮೇಲೆ ಪಡೆದ ಜಯವನ್ನು ದಾಖಲಿಸುತ್ತದೆ.

ಸಮಭೂಭಾಗದಲ್ಲಿ ರಥ ಕುದುರೆಗಳಿಂದ, ಕೆಸರಿನಲ್ಲಿ ದೋಣಿ ಆನೆಗಳಿಂದ, ಕಾಡಿನಲ್ಲಿ ದನುರ್ಬಾಣಗಳಿಂದ, ಸಮಜಾಗದಲ್ಲಿ ಕತ್ತಿ ಕುಂತಗಳಿಂದ ಯುದ್ಧ ಮಾಡಬೇಕೆಂದು ಮನುಸ್ಮೃತಿಯಲ್ಲಿದೆ.

ಕೋಟೆಯ ಕೊನೆದೆನೆ ನೆಗೆದಿಱಿದಾಟದೆ ಕುದುರೆಗಳ್ (೭-೩ ಲೀಲಾ.ವ.)

ಮೂವಳಸುವಳಸಿ ಬೀಡಂಬಿಟ್ಟು ಮಱಿದಿವಸಂ ಲಗ್ಗೆಯ ದೆಸೆಯ ದಿವಸ ಸದರನಿದರ ಮುಮಂ ಜಂತ್ರದೊಡವಣೆಗಳುಮಂ ಭೂಮಾನ ಮುಮಂ ಪುಗುವ ಪೊಱಮಡುವ ನೀರಕಂಡಿಯ ಕುದುರೆ ಗಂಡಿಯ ತೆರಪುಗಳುಮಂ ವಸುಷೇಣಂ ಬಳಸಿ ನೋಡುತ್ತುಂ ಬರ್ಪನ್ನಮಾಗಳ್ (ಅನಂ.ಪು.-೧೧ ೮೨ವ) ಎಂಬಲ್ಲಿ ಕೋಟೆಯ ವೀಕ್ಷಣೆ ಸ್ಪಷ್ಟವಾಗಿದೆ.

ಆಗ ಆನೆಗಳಿಗೆ ಗುಳವನ್ನು ಕುದುರೆಗಳಿಗೆ ಪಲ್ಲಣವನ್ನು ಅಳವಡಿಸುತ್ತಿದ್ದರು.
ತೋರ್ಗಂ ಐದೆ ವಾಜಿಗಳಂ ಕಟ್ಟಿದರು. ಕಾಲಾಳ್ಗಳುಂ ಸಂಜೋಗಮಾಗಿ ಪೊರಮಟ್ಟರು
(೪೨-೧೧-೨೨ ಚೆಬಪು)

.....ಧರ್ಮ ಧವಳ ದ್ವಿರದನಮನೇಱಿಸಿ ಪವನಜವಸತ್ವರ
ತುರಂಗಮಂಗಳ ಮೇಗಣ ಮನ ಮನುಚ್ಚೈಶ್ರವಮಪ್ಪ ವೈರಾಗ್ಯವಾಜಿಯ
ಬೆಂಗೆವರಸಿ ಮುಂದಲೆಯ ಕಸದಂತೆ ಮುಂತಿರ್ದ ಕಸವರಮಂ ಸತ್ಪಾತ್ರದ
ಕೆಯ್ಗಮಣ್ಣೆಕ್ಕುವಂತಿಕ್ಕಿ (೪.೧೨ದ ನೇಮಿ.ಪು)

ವಾಯುವೇಗದ ಕುದುರೆಗಳ ಮೇಲಿದ್ದ ಮನವನ್ನು ವೈರಾಗ್ಯವೆಂಬ ಉಚ್ಚೈಸ್ರವದ ಮೇಲಿಟ್ಟ ಬಾಗಿಲ ಮುಂದಿನ ಕಸದಂತೆ, ತನ್ನ ಮುಂದಿದ್ದ ಚಿನ್ನವನ್ನು ಮಣ್ಣಿಗೆ ಸಮನಾಗಿ ಕಂಡು ಸತ್ಪಾತ್ರಕ್ಕೆ ದಾನ ಮಾಡಿದ ವಿವರಣೆಯನ್ನು ನೀಡುತ್ತದೆ.

.........ತೊಳಪ ತಿಳಿಗೊಳಂಗಳಿಂ ನೀರ ಮೇಲೆ ಪರಿವ ರತಿ ವಲ್ಲಭನ ವಾಜಿ ಕುಳದಂತೆ ತಿಳಿ ನೀರಿನ ಕೊಳಗಳಿಂದಲೂ ನೀರ ಮೇಲೆ ಓಡುವ ಮನ್ಮಥನ ಕುದುರೆಗಳಂತೆ ಕೂಡಿಕೊಂಡಿರುವ ಚಕ್ರವಾಕದಂತೆ (ಮನ್ಮಥರಾಜ) ಎಂದು ವರ್ಣಿಸಲಾಗಿದೆ.(೪-೧೩೮ ನೇಮಿ. ಪು.)

ವಾರಿಜಮನಿಟ್ಟು ಕಿವಿಯೊಳ್

ವಾರುವಮಂ ಪೀರಿಯೆಂದೆ ಪಕ್ಕರಿಸಿ ಮನೋ

ಹಾರಿಯೆನೆಯೊಱು ಮೊಗದ ಕು

ಮಾರನವೋಲ್ ನೃಪಕುಮಾರನೇಱುವನೊಲವಿಂ (೪-೧೪೧, ನೇಮಿ ಪು)

ಕಿವಿಯಲ್ಲಿ ತಾವರೆಯನ್ನಿಟ್ಟು, ಕುದುರೆಗೆ ನವಿಲುಗರಿಯ ಹಲ್ಲಣವನ್ನು ಅಳವಡಿಸಿ ಮನೋಹರನಾಗಿ ಷಣ್ಮುಖನಂತೆ ಆ ಕುಮಾರನು ಅಶ್ವಾರೋಹಿಯಾಗುವನು.

ವಸುದೇವನ ರೂಪವು.... ಒತ್ತಾಯ ಕುದುರೆಯನ್ನು ಹಿಲಾಲು ಹಿಡಿದೇರುವಂತೆ ತನ್ನ ಏರುವಲು ಸಂಪತ್ತನ್ನು ಅರಿತು ಪಟ್ಟಣದ ಒಳಗೆ, ಹೊರಗೆ... (೫-೨ ನೇಮಿ.ಪು)

ಪೂಡುವ ಕುದುರೆ ಬೆಸಂ ಕೊಂ

ಡೋಡುವ ತೇರ್ಗೊಂಡೆ ಗಾಲಿ ಪೊಡೆವಂ ಪೆಱವಂ..... (೫-೧೪ ನೇಮಿ. ಪು)

ಹೂಡುವ ಕುದುರೆಯ ಬೆಸಸಂಖ್ಯೆಯವು (ಏಳು) ಏರುವಂಥಕ್ಕೆ ಒಂದೇಗಾಲಿ ಸಾರಥಿ...

ಹರಿಸ್ಸೈನ್ಯಂ ಪಜೆ ಪೆಱವಿಗೆ ಪಿಂಭಾತಪತ್ರೋತ್ಕರಂಚಾ .... (೫-೬೯ ನೇಮಿ. ಪು)

ಕುದುರೆ ಪಡೆ ಆನೆಪಡೆ, ವಾದ್ಯ, ಧ್ವಜ, ನವಿಲ್ಗರಿಯ ಸುತ್ತಿಗೆಗಳು ವರ್ಣನೆಮಾಡುವಲ್ಲಿ

ರವಿಯಶ್ವಂ ದೆಸೆವಾಯ್ದು ಪಾಯ್ದೆಟ್ಟೆನಂ ತೇರಂ ನಯಂ ಪೆರ್ಚಿಬೆ

ರ್ಚುವಿನಂ ಚಂದ್ರನ ಬೆಳ್ಮಿಗಂ ಬೆದಜೆದಾತ್ಮ ಸ್ತ್ರೀಯರಂ ಪೇಜೆ ಪಾ (೬-೩೨ ನೇಮ.ಪು)

ಬೆಳೆಯುತ್ತಿರುವ ಆತನನ್ನು ಕಂಡು ಸೂರ್ಯನ ಕುದುರೆಗಳು ಕಂಗೆಟ್ಟು ದಿಕ್ಕು ದಿಕ್ಕಿಗೆ ರಥವನ್ನು ಎಳೆದುಕೊಂಡು ಹೋದವು.

ತುಟಿಯ ಪದಾತಿಯಂ ತವೆ ತುರಂಗದಳಂ ತುರಗಂಗಳಂದಥಂ

ತುಟಿಯೆ ರಥಂಗಳಂ ತುಟಿಯ ದಂತಿಗಳಿಂತರಿ ಸೇನೆಮಿಱ್ಱುತೊ...(೬-೬೪ ನೇಮಿ. ಪು.)

ದಿಗ್ಗಜದ ಸೊಕ್ಕಿಳಿದು ಹೋಗುವಂತೆ ತಾಳಹಸ್ತನೇರಿದ ಸಿಂಹವು ಗರ್ಜಿಸಿದೊಡನೆ ಕಾಲಾಳುಗಳನ್ನು ಕುದುರೆಗಳೂ, ಕುದುರೆಗಳನ್ನು ರಥಗಳೂ, ರಥಗಳನ್ನು ಆನೆಗಳು ತುಳಿತವನ್ನು ವರ್ಣಿಸುತ್ತದೆ.... ನಿನ್ನ ಸಿಂಹದ ಪಲ್ಲನೆಣಿಸಿ ನೋಡೆಂದದಱಿ ಪಲ್ಗಳಂ ಕಳೆದು ತಳದೊಳಿಕ್ಕಿ ಮಂದಮತಿಯ ಮುಂದೆ ತಲೆಯ ಚುಂಚಂ ಪಿಡಿದು ಚರೆಯಕ್ಕೆ ಬಿಟ್ಟು ಗೂಂಟನೆಟೆದು ತಪ್ಪಂತೆ..... (೬-೬೭ ನೇಮಿ. ಪು.) ಮೇಯುವುದಕ್ಕೆ ಕುದುರೆಯನ್ನು ಎಳೆದು ತರುವಂತೆ ಅವನ ಮುಂದಲೆಯನ್ನು ಹಿಡಿದು ಎಳೆದುಕೊಂಡು ಬಂದ.

ಅಂತಾಗೂಂಟಿನ ಬಾಯೊಳ್ಗೂಂಟಮಂ ಬೆಟ್ಟದಂತಿರ್ದಕೆಯ್ಯನುರ್ಚಿಕೊಂಡು ಕೋಡದ ಕಿಚ್ಚಿನಂತಿರ್ದ ಕೋಪದೊಳಾ ದುಷ್ಟಾಶ್ವಮನಿಕ್ಕಿ ಕೊಂದು ಮಾಧವನಶ್ವಮೇಧಮಂ ಮಾಡಿ ತುಱಿಪಟ್ಟಿಯ ಪಾಲುಂ ಮೊಸರುಂ ಬೆಣ್ಣೆಯುಮಂ ಸೊಱೆಗೊಂಡು ಸಹಪಾಂಶು ಕ್ರೀಡಿತರಪ್ಪ ಗೋಪಕುಮಾರ ಕರ್ಗೆ ದಕ್ಷಿಣೆಗುಡುವಂತೆ ಕೊಟ್ಟು ಪೊರೆಯುತ್ತಮಿರೆ (೭-೮ ನೇಮಿ.ಪು)

ಆ ಕುದುರೆಯ ಬಾಯಿಯಲ್ಲಿ ಗೂಟವನ್ನು ಜಡಿದಂತಿದ್ದ ತನ್ನ ಕೈಯನ್ನು ಎಳೆದುಕೊಂಡು ಆರದ ಕಿಚ್ಚಿನಂತಿದ್ದ ಕೋಪದಿಂದ ಆದಷ್ಟು ಕುದುರೆಯನ್ನು ಕೊಂದು ಹಾಕಿದನು. ಹೀಗೆ 'ಅಶ್ವಮೇಧ (ಕುದುರೆಸಂಹಾರ)ವನ್ನು ನೆರವೇರಿಸಿ ಕೃಷ್ಣನು ಆ ಹಟ್ಟಿಯ ಹಾಲು ಮೊಸರು ಬೆಣ್ಣೆಯನ್ನು ಸೂರೆಗೊಂಡು ತನ್ನ ಒಡನಾಡಿಗಳಾದ ಗೋಪಬಾಲಕರಿಗೆ ದಕ್ಷಿಣೆ ಕೊಡುವಂತೆ ಕೊಟ್ಟು ಸಲಹುತ್ತಿದ್ದನು.

ಕಡುಮನದ ರಕ್ಕಸರು ಏರಿ
ರೊಡನೆ ಕರಿರಥ ತುರಗವನು ಪಿಡೆ (೬೪-ರಾಮ.ಚ)
ಗಟ್ಟಿಮನಸ್ಸಿನ ರಕ್ಕಸರು ಬೇಗನೆ ಆನೆ, ರಥ, ಕುದುರೆಗಳನ್ನು ಏರಿ ಮುನ್ನಡೆದರು.
ಶರಧಿ ಬಿಟ್ಟದು ಬಳಸಿ ಸುತ್ತಲು
ಕರಿ ತುರಗ ರಥ ಪಾಯ್ದಳವು ಸಂದಣಿಸಿ ನಿಂದಿರಲು.... (೬೯-ರಾಮಾ.ಚ)

ರಾಕ್ಷಸರ ಸೈನ್ಯವು ಸಮುದ್ರದಂತೆ ಸುತ್ತುವರೆದಿತ್ತು ಮಗ್ಗುಲಿನ ಆನೆ, ರಥ, ಕುದುರೆ, ಕಾಲಾಳುಗಳು ಕೂಡಿಕೊಂಡು ನಿಂತಿರಲು ಇವರೆಲ್ಲರು ವೈಭವವನ್ನು ಕಂಡು.

ಪುರವ ಶೃಂಗರಿಸಲ್ಲ ಕರಿರಥ
ತುರಗ ಮೇಳೈಸಿರಲಿ ಮೋದದ.... (೮೭-ರಾಮ.ಚ)

ನಗರವೆಲ್ಲ ಶೃಂಗರಿಸಲಾಗಿತ್ತು. ಅಲ್ಲಿ ಆನೆ, ರಥ, ಕುದುರೆಗಳು ಸಂಭ್ರಮದಿಂದ ಕೂಡಿರಲು ಸಂತೋಷಭರಿತರಾಗಿದ್ದರು ತರುಣಿಯರು.

ತೆತ್ತಿಸಿದ ಸೂನಗಿಯ ಸೀಗುರಿ ಗುಡಿ ಪತಾಕೆಗಳ
ಮತ್ತೆ ಗಜಘಟೆ ತುರಗ ಕಲಾ............ (೮೭-ರಾಮ.ಚ)

ಸಾಲುಗಟ್ಟಿದ ಛತ್ರಿಗಳು, ಬೀಸುವ ವಿಸ್ತಾರವಾದ ಚೌರಿಗಳು, ರಥದಲ್ಲಿ ಮಚ್ಚಿದ ಕತ್ತಿಗಳು, ಚಾಮರ ಗುಡಿ ಪತಾಕೆಗಳ ಮಧ್ಯದಲ್ಲಿ ಆನೆಗಳ ಸಮೂಹ, ಕುದುರೆ, ಕಾಲಾಳುಗಳ ಸೈನ್ಯ ಒತ್ತರಿಸಿದವು.

ಕರುಣದಿಂದ ವಿಭೀಷಣನ ಪತಿ
ಕರಿಸಿ ಕರಿರಥ ತುರಗವಾಸ್ತ್ರ
ಭರಣವಿತ್ತು ಪಚರಿಸಿ ಕಳುಹಿದನಾಗಳ ಸುರರನು .....(೧೫೪-ರಾಮ.ಚ)

ಅತ್ಯಂತ ದಯಾಪರತೆಯಿಂದ ವಿಭೀಷಣವನ್ನು ಸತ್ಕರಿಸಿ ಆನೆ, ರಥ, ಕುದುರೆ, ವಸ್ತ್ರಾಭರಣ ಮೊದಲಾದವನ್ನು ಕೊಟ್ಟು ರಕ್ಕಸರನ್ನು ಕಳುಹಿಸಿದನು.

ಬಳಸೆ ಕೊಡಂಕೆಯೊಳ್ ಪೊಳೆವ ಚೌರಿಯ ಗಾರಿಯ ಕೋಳ್ಗೆ ಬೆಟ್ಟಗಳ್
ತಳರೆ ಪೊಗಟ್ತೆಯಂ ತಳೆದ ತೇಜಿಯ ತಟ್ಟು ತೆರಳ್ದುದೆತ್ತಲುಂ.....(೧೫೯-ಕಬ್ಬಿ.ಕಾ.)

ಕಿವಿಗಳಲ್ಲಿ ಹೊಳೆಯುವ ಚೌರಿಗಳು ಗಾಳಿಯ ಹೊಡೆತಕ್ಕೆ ಬೆಟ್ಟಗಳು ನಡುಗಲಾಗಿ, ಪ್ರಸಿದ್ಧಿಯನ್ನು ಪಡೆದ ಕುದುರೆಗಳ ದಳ ಎತ್ತೆತ್ತಲೂ ಹಬ್ಬಿ ತೆರಳಿದವು.

ಪೂರಿದ ಊರುವಂಗಳ ತೆರಳ್ಕೆಗೆ ನೇಸಱ ತೋರ ತೇಜಿಗಳ್
ಪಾಡದಿರ್ಪಿನಂ ಪರಿವ ಗಾಲಿಯ ಕೋಳ್ಗೆ ಕೆಳರ್ತು ಬೆಟ್ಟಗಳ್.... (೧೬೦-ಕಬ್ಬಿ.ಕಾ)

ಹೂಡಿದ ಕುದುರೆಗಳ ನಡಗೆಗೆ ಸೂರ್ಯನ ಕುದುರೆಗಳು ಕೆಂಗೆಡುವಂತೆಯೂ ಹರಿಯುವ ಗಾಲಿಯ ಹೊಡೆತಕ್ಕೆ ಬಿರಿತು ಬೆಟ್ಟಗಳು ಸಿಡಿಲುವಂತೆಯೂ ವೀರರು ಮಾಡುವ ಗರ್ಜನೆಯಾಗಿತ್ತು.

ಕುದುರೆಯ ತಟ್ಟುಗಳ್ ನೆರೆದ ಬಲ್ದೆರೆಯಂ ಪಿಡಿದಿರ್ದ ಬಾಳ್ಗಳು
ಣ್ಮಿದ ನಿಡುವಾಳೆಯಂ ಬಿಳಿಯ ಸತ್ತಿಗೆಗಳ್ ನೊರೆವಿಂಡನಾನೆಗಳ್|..... (೧೬೨ -ಕಬ್ಬಿ.ಕಾ)

ಕುದುರೆಯ ದಳಗಳೆ ಕೂಡಿದ ದೊಡ್ಡ ಅಲೆಗಳು. ಹಿಡಿದ ಖಡ್ಗಗಳೆ ಉದ್ದವಾದ ಬಾಳೆ, ಮೀನು, ಬಿಳಿಯ ಕೊಡೆಗಳ ನೊರೆಯ ರಾಶಿ, ಆನೆಗಳು ಬೆದರದೆ ಸಾಲಾಗಿ ನಿಂತ ಮೊಸಳೆಗಳು, ಎಂದು ವರ್ಣಿಸಲಾಗಿದೆ.

ಮಿಳಿರ್ವ ಪೊಸದಳಿಕೆ ಪಟಿಯಿಗೆ
ಗಿಳಿಗಳೆ ಪೂಡಿರ್ದ ಕುದುರೆ ತೆಂಗಾಳಿಯೆಕ (೧೬೩-ಕಬ್ಬಿ. ಕಾ)

ನೆಗೆದಾಡುವ ಹೊಸ ತಳಿರೆಲೆಗಳೆ ಧ್ವಜವಾಗಿ, ಗಿಳಿಗಳೆ ಹೂಡಿದ ಕುದುರೆಗಳಾಗಿ, ತೆಂಕಣಗಾಳಿಯೆ ಮನೋಹರವಾಗಿ ರಥವನ್ನು ನಡೆಸುವ ಸಾರಥಿಯಾಗಿರಲು ಎಂದು ಹೇಳಲಾಗಿದೆ.

..... ನಡೆತರ್ಪ ತೇಜಿಗಳ ನೋವಿದೆ ಭಂಡಣದಲ್ಲಿ ಸೀಳದಿ

ರ್ದೊಡೆ ಪೆಸರಾನೆಯಂ ಮುಱಿಯದಿರ್ದೊಡೆ ನಚ್ಚಿನ ನಿನ್ನಲೆಂಕನೇ.... (೧೮೭-ಕಬ್ಬಿ.ಕಾ)

ಏರಿ ಬರುವ ಕುದುರೆಗಳನ್ನು ಕಾಳಗದಲ್ಲಿ ಕ್ರೂರವಾಗಿ ಸೀಳದಿದ್ದರೆ. ಹೆಸರಾದ ಆನೆಗಳನ್ನು ಮುರಿಯದಿದ್ದರೆ ನಾನು ನಿನ್ನ ನಂಬುಗೆಯ ಸೇವಕನೇ ಎನ್ನುವಲ್ಲಿ ಇಂತಹ ಉಲ್ಲೇಖಗಳು ಬಂದಿವೆ.

ಪುಸಿವಡೆಯಂ ಕಡುಮೆಚಿದಿರೆ

ಪಸರಂಬಡೆದಾನೆ ಕುದುರೆ ತೇರಾಳ್ಗಳುಮಂ .... (೧೯೨-ಕಬ್ಬಿ.ಕಾ.)

ಹೆಸರೊಡೆಯದೆ, ಹುಸಿಯನ್ನು ಮಾತನಾಡದೆ, ಕುಡುಮರೆದಿರುವ ಆನೆ, ಕುದುರೆಯನ್ನು ಅವುಗಳ ಸಾಮರ್ಥ್ಯವನ್ನು ಬಲ್ಲೆವು ಎಂದು ಹೇಳಿದ್ದಾನೆ. ಅದು ಹೊಸ ಸಮುದ್ರವೂ ಎಂಬಂತೆ ಮೆರೆಯುವ ಅಧಿಕ ಸಂಖ್ಯೆಯ ಆನೆ, ಕುದುರೆ, ರಥ ಕಾಲಾಳುಗಳ ಮಾಯಾ ಸೈನ್ಯವೊಂದನ್ನು ಶಿವನು ಕೂಡಲೇ ಹುಟ್ಟಿಸಿದನು.

ಬಂದ ಕಡುಗುದುರೆ ಪೊಲದೊಳ್

ನಿಂದವರಂ ತಿವಿದು ವಕಟ ನೋಡಿರೆ ತಾನಿಂ (೧೯೧-ಕಬ್ಬಿ.ಕಾ)

ಕುದುರೆಗಳು ಬಂದು ಹೋಲದಲ್ಲಿ ನಿಂತವರನ್ನು ತಿವಿದವು ಎನ್ನುವಲ್ಲಿ ಇಂತಹ ಉದಾಹರಣೆಗಳನ್ನು ಕಾಣಬಹುದು.

ಕಾಲಾಳ್ಗಳ್ ಕಾಲಾಳ್ಗಳೊಳ್ ಕುದುರೆಗಳ್ ಕುದುರೆಗಳೊಳ್ ತೇರ್ಗಳ ತೇರ್ಗಳೊಳ್

ಆನೆಗಳಾನೆಗಳೊಳೋವದೆ ಕಾದಿ ಮಯ್ಯೆರ್ಗಳಿಂ ಜುಮ್ಮನೆಚ್ಚು ಪಾಯ್ವ ..... (೨೦-೫ ಕಬ್ಬಿ.ಕಾ.)

ಶತ್ರು ಸೈನ್ಯವನ್ನು ಕಂಡು ಕಾಲಾಳು ಕಾಲಾಳೊಡನೆ, ಕುದುರೆ ಕುದುರೆಯೊಡನೆ, ರಥ, ರಥದೊಡನೆ, ಆನೆ ಆನೆಯೊಡನೆ, ಹೋರಾಡಿ ಮೈಯಲ್ಲಾದ ಗಾಯಗಳಿಂದ ಚಿಮ್ಮಿದ ರಕ್ತ ಕುರಿತು ಹೇಳಲಾಗಿದೆ.

...... ಕೆಡೆದವು ತಾಂ ಬಿಡೆ ಕಾಂಭೋಜಾ

ಶ್ವವಿ ಸರಮಾ ಪವನಸುತಗದಾ ಸಂಹತಿಯಿಂ (೩-೫ ಗದಾಯುದ್ಧ)

ಭೀಮಸೇನನ ಗದಾ ಪ್ರಹಾರದಿಂದ ಕಾಂಭೋಜಾಶ್ವಗಳು ಹಿಂಡು ಹಿಂಡಾಗಿ ನೆಲಕ್ಕೆ ಬಿದ್ದವು ಎನ್ನುವಲ್ಲಿ ಯುದ್ಧದಲ್ಲಿ ಉಪಯುಕ್ತ ಕುದುರೆಗಳು ಯಾವ ಜಾತಿಯವು ಎಂಬ ವಿಚಾರ ಹೊಳೆಯುತ್ತದೆ.

ಕುದುರೆಗಳನೊಂದೆ ಪೊಯ್ಲಿಂ

ಮದಕರಿಗಳನೆರಡೆ ಪೊಯ್ಲೊಳಿರ್ಕಡಿ ಮಾಡ ||.... (೪-೩೦ ಗದಾಯುದ್ಧ)

ಕುದುರೆಗಳನ್ನು ಒಂದೇ ಏಟಿನಿಂದಲೂ, ಮದಿಸಿದ ಆನೆಗಳನ್ನು ಎರಡೇ ಏಟಿನಿಂದಲೂ ಎರಡು ಹೋಳಾಗಿ ಸೀಳಿ ಬಿಡುವೆನೆಂದು ಹೇಳುವಾಗ

ಕರಿತುರಗನರಕಳೇಬರ

ಕರಾಳರಣರಂಗದಲ್ಲಿ ಬರೆವರೆ ಕಂಡಂ..... (೫-೯. ಗದಾಯುದ್ಧ)

ಆನೆ, ಕುದುರೆ ಹಾಗೂ ಮನುಷ್ಯರ ಶವಗಳಿಂದ ಭಯಾನಕವಾದ ರಣಭೂಮಿಯಲ್ಲಿ ಅರ್ಜುನನು ಬರುವ ಸಂದರ್ಭದ ವರ್ಣನೆ ಕುರಿತು ಹೇಳುವ ಸಂದರ್ಭದಲ್ಲಿ ಗುರುತಿಸಲಾಗಿದೆ.

ಭೀಕರ ಗದಾ ಘಾತದೊಳಂ ಜಾಜೆ ಪಜೆವಜೆದು ತೂಱು ಪಾಱೂದ ಕಾಂಭೋಜಾವಳಿಗಳ

ತುರುಷ್ಕ ತುರಂಗಮಂಗಳಡಿಯೊಳಡಂಗಿದನೆಗೆತ್ತು ಬಳಸಿ ಬಲವಂದು ನೋಡಿಯುಂ....

(೬-೨೯ ಗದಾಯುದ್ಧ)

ಭೀಮನು ತನ್ನ ಭಯಂಕರವಾದ ಗದಾಪ್ರಹಾರದಿಂದ ನೊಗಹರಿದುಕೊಂಡು ತುಂಡು ತುಂಡಾಗಿ ಬಿದ್ದ ಕಾಂಭೋಜ ಕುದುರೆಗಳ, ತುರುಷ್ಕ ಕುದುರೆಗಳ ಕೆಳಗೆ ಅಡಗಿರುವನೆಂದು ಭ್ರಮಿಸಿ ಸುತ್ತಲೂ ತಿರುಗಿ ನೋಡಿದನು.

ತುರಗಕ ಬಂಧದೊಳ್ ನರಶಿರಂಗಳ ವೀರಮಹಾಕ ಬಂಧದೊಳ್ |

ಕರಿ ಶಿರಮಾಗ (ಮಿಕ್ಕ) ಕಟಬಂಧಮೊ (ಳಾ) ಭಟರ ತಗುಳ್ದೊಡಾ ||

ತುರಗ ಮುಖಂಬೊಲಾದುದು ವಿನಾಯಕನಂತೆ ವೊಲಾಯ್ತು (ನೋಡೆ) ....

(೧೦-೩ ಗದಾಯುದ್ಧ)

ಬಲಿಷ್ಟವಾದ ಸೈನ್ಯವು ಶತ್ರುಸೈನ್ಯವನ್ನು ತಾಗಿ ಯುದ್ಧ ಮಾಡುವಾಗ ಕುದುರೆಗಳ ಅಟ್ಟೆಯಲ್ಲಿ ಕಾಲಾಳುಗಳ ರುಂಡಗಳೂ, ವೀರರ, ಭವ್ಯವಾದ ಮುಂಡಗಳಲ್ಲಿ ಆನೆಗಳ ರುಂಡಗಳೂ ಸೇರಿ ಕಿನ್ನರರೂ ವಿನಾಯಕರು ನಿಂತಂತೆ ತೋರಿತು.

ವಡ್ಡಾರಾಧನೆಯ ಕೃತಿಯ ಸನತ್ಕುಮಾರನಕಥೆಯಲ್ಲಿ ಕುದುರೆ ಉಲ್ಲೇಖವನ್ನು ಕಾಣಬಹುದು.

ಭೂರಾಮನೆಂಬ ಹೆಸರುಳ್ಳ ರಾಜನು ವಿಶ್ವಸೇನ ಮಹಾರಾಜನಿಗೆ, 'ಪಟ್ಟವಾರಮರಗ' ಎಂಬ ಕೆಟ್ಟ ಕುದುರೆಯನ್ನು ಕಾಣಿಕೆಯಾಗಿ ಕಳುಹಿಸಿಕೊಟ್ಟನು. ಆ ಕುದುರೆಯನ್ನು ಸನತ್ಕಮಾರನು ಲಕ್ಷ್ಮೀಗೃಹವೆಂಬ ಉದ್ಯಾನದ ಮಧ್ಯ ಸ್ಥಳದಲ್ಲಿ ಏರಿದಾಗ ಅದು ವಾರಿತ-ಪೂರಿತ ಎಂಬ ಅಶ್ವಗತಿಗಳಲ್ಲಿ ಓಡಿತು. ಎಂದು ಹೇಳುವಲ್ಲಿ ಕುದುರೆಯ ನೀಚ ಬುದ್ಧಿಯನ್ನು ಕಾಣಬಹುದು.

ಕುಮಾರವ್ಯಾಸ ಭಾರತದಲ್ಲಿ ಬರುವ ಗದಾಪರ್ವದಲ್ಲಿ ಕುದುರೆಯ ಉಲ್ಲೇಖವನ್ನು ಈ ಕೆಳಗಿನಂತೆ ಆಲಿಸಬಹುದು. ತುರಗದಳರಥವೆರಡು ಸಾವಿರ ಲಕ್ಷ ಕಾಲಾಳು ಅರಸುಗಳು ಮುನೂರು ನಿಂದುದು (೧-೩ ಕು.ವ್ಯಾ.ಭಾ) ಕುದುರೆಯ ರಥಗಳು ಎರಡು ಸಾವಿರ ಇದ್ದು, ಕಾಲಾಳು ಸೈನ್ಯ ಒಂದು ಲಕ್ಷ ಇದ್ದು, ಅರಸರು ಮೂರುನೂರ ಜನರಿದ್ದರು ಎಂದು ವರ್ಣಿಸಿದೆ.

ತುರುಕ ಬರ್ಬರ ಪಾರಸೀಕರು

ತುರಗವೈಸಾವಿರ ಸಹಿತಮೋ

ಹರಿಸಿ ನಿಂದನು ಶಕುನಿ ಥಟ್ಟಿನ ಬಲದ ಬಾಹೆಯಲಿ (೧-೪ ಕು.ವ್ಯಾ.ಭಾ)

ತುರುಕರು, ಬರ್ಬರ ಪಾರಸೀಕರು, ಕುದುರೆ ಐದು ಸಾವಿರ, ಸಹಿತ ಕೂಡಿ ಬಲವಾದ ಸೈನ್ಯ ಶಕುನಿ ಜೊತೆಗೆ ಇದ್ದರು ಎಂಬುದನ್ನು ಮೇಲಿನ ಸಾಲುಗಳು ವರ್ಣಿಸುತ್ತವೆ.

ನೂರು ರಥವಿನ್ನೂರು ಗಜ ವೈ

ನೂರು ಹಯ ವೈಸಾಸಿರದ ಮೂ..... (೧-೫, ಕು.ವ್ಯಾ.ಭಾ)

ನೂರು ರಥ ಇನ್ನೂರು ಗಜ, ಐದುನೂರು ಕುದುರೆ, ಐದುಸಾವಿರದ ಮುನ್ನೂರು ಯೋಧರು ಕೌರವನ ಸೈನ್ಯದಲ್ಲಿದ್ದರು ಎಂದು ಬಣ್ಣಿಸಲಾಗಿದೆ.

.... ರಥನಿವಹ ಬಿಟ್ಟೆವು ಕುದುರೆ ಸೂಠಿಯ

ಲವಗಡಿಸಿ ತೊಳಿದವು ಹೇರಾನೆಗಳು ಸಂದಣಿಸಿ.... (೧-೬ ಕು.ವ್ಯಾ.ಭಾ)

...... ಕಣೆಯ ಲಾರೋಹಕರು ರಥ ಹಯ

ಹೆಣಗಿದವು ಹಯದೊಡನೆ ಕಂದದ ಖುರದ ಹೊಯ್ಲಿನಲಿ (೧-೭ ಕು.ವ್ಯಾ.ಭಾ)

..... ಗುದುರೆ ಹಾಯ್ದವು ಕಂದದಲಿ ಬಲು ನೊಗನನಸಬಡಿದು

ಕುದುರೆಯೆಳೆದವು ಬರಿಂಥವನೋ..... (೧-೧೫ ಕು.ವ್ಯಾ.ಭಾ)

ಅರರೆ ರಾವುತೆನುತ್ತ ಕವಿದುದು ತುರಗ ಸಾವಿರ ನಕುಲ ಸಹದೇವರಿಗೆ .... (೧-೩೧ ಕು.ವ್ಯಾ.ಭಾ)

ಕರಿಘಟೆಗಳೈನೂರು ರಥಸಾ

ವಿರದ ಮೂನೂರೆರಡು ಸಾವಿರ

ತುರಗದಳವೆಂಬತ್ತು ಸಾವಿರ ವಿಗಡ ಪಾಯದಳ

ತೆರಳಿ ತರತಕ ಪುರಿಗೆ ಪುನಪರಿ

ತುರಗ ಸಾವಿರ ನೂರು ರಥ ಮದ

ಕರಿಗಳಿನ್ನೂರೆಂಟು ಸಾವಿರ ಗಣಿತ ಪಾಯದಳ (೧-೩೯ ಕು.ವ್ಯಾ.ಭಾ)

ಕುದುರೆ ರಾವ್ತರು ಜೋದ ಸಂಸತಿ

ಮದಗಜವು ಜವತಿರಥಾವಳಿ.... (೨-೪೧. ಕು.ವ್ಯಾ.ಭಾ)

ಮೆರೆವ ಗಜ ಹಯ ಶಾಲೆಯಲಿ ಮೈ

ಮುರಿಕ ವೃದ್ಧ ವ್ಯಾಧಿತಾವಾಳಿ

ಮರಿಗುದುರೆ ಮರಿಯಾನೆ ತೆಗೆದವು ಲಕ್ಕ ಸಂಖ್ಯೆಯಯಲ್ಲಿ

ವಿವಿಧ ವಾದ್ಯ ಧ್ವನಿಯ ರಥ ಗಜಹಯದ ಗರ್ಜನೆಯ

ಇವರು ಕೇಳಿದರ ಕಟಕಟಕೌ.... (೪-೫೬ ಕು.ವ್ಯಾ.ಭಾ)

......ತುರಗ ನಿರ್ಘೋಷ ಪದ್ವತ

ಬಿರಿಯ ಮೊಳಗಿತು ಸಿಲುಕಿದನು ಸಿಲುಕಿದನು ಹಗೆಯನುತ (೪-೫೬ ಕು.ವ್ಯಾ.ಭಾ)

...... ತುರಗ ಗಜ ಬಳಲಿದವು ಸೂರ್ಯನ

ತುರಗ ಬಿಡುತದೆ ಪಶ್ಚಿಮಾದ್ರಿಯ ತಡಿಯ ತಪ್ಪಲಲಿ.... (೮-೪೩ ಕು.ವ್ಯಾ.ಭಾ)

.....ಕರಿಗಳಲಿ ತುರಗದಲಿ ರಥದಲಿ ಕಂಡರಲ್ಲಲ್ಲಿ

ಶಿರವ ಮುಂಡಾಡಿದರು ಹೆಣನಲಿ ..... (೧೨-೬ ಕು.ವ್ಯಾ.ಭಾ)

ಕುಮಾರವ್ಯಾಸಭಾರತದ ಶಲ್ಯ ಪರ್ವದ ೨ನೇ ಸಂಧಿಯಲ್ಲಿ ಕೆಲವು ಕುದುರೆಯ ಪ್ರಮುಖ ಉಲ್ಲೇಖ ಕಾಣಬಹುದು.

ಮುರಿದ ಬಲುಗುದುರೆಗಳ ಬಾದಣ

ಗೊರೆದ ಮಯ್ಯಾನೆಗಳ ಹತ್ತಿಗೆ.... (೨-೬ ಕು.ವ್ಯಾ.ಭಾ)

ಕುದುರೆ ಮೈಗಳಲಾಯುಧದ ಕಿಡಿ

ಯುದುರಿದವು ಕುರು ಬಲದಲಬ್ಧುತವಾಯ್ತು ನಿಮಿಷದಲಿ (೨-೧೦ ಕು.ವ್ಯಾ.ಭಾ)

ಈ ಮೇಲಿನ ಎಲ್ಲಾ ಉದಾಹರಣೆಗಳು ಯುದ್ಧದ ಸಂದರ್ಭದಲ್ಲಿ ಶಕುನಿ, ಶಲ್ಯ, ಕೌರವರಾಯ, ಭೀಮ, ಕೃಷ್ಣರಾಜ, ಮಹಾರಾಜರು ಬಳಸಿದ ಸೈನ್ಯ, ಕುದುರೆ, ಕಾಲಾಳು, ಗಜಸೈನ್ಯ ಮುಂತಾದ ವರ್ಣನೆಗಳನ್ನು ಮಾಡುವ ಸಂದರ್ಭದಲ್ಲಿ ಉಪಮೆ ರೂಪಕಗಳನ್ನು ಬಳಸಿಕೊಂಡು ಯುದ್ಧದಲ್ಲಿ ಸಹಾಯಕವಾದ ಪ್ರಮುಖ ಪ್ರಾಣಿಯಾದ ಕುದುರೆಯ ಶಕ್ತಿ ಸಾಮರ್ಥ್ಯದ ಬಗ್ಗೆ ಕುಮಾರವ್ಯಾಸನು ತನ್ನ ಹರಿತವಾದ ಬರಹದಲ್ಲಿ ಬಿಂಬಿಸಿದ್ದಾನೆ.

೧೨ನೇ ಶತಮಾನದ ಶಿವಶರಣರು ಅನೇಕ ವಿಷಯಗಳ ಬಗ್ಗೆ ತಮ್ಮ ಮಾತುಗಳಲ್ಲಿ, ನೇರ ನುಡಿಗಳಲ್ಲಿ ಅನುಭವಾಮೃತದ ಎರಕವನ್ನೇ ಹೊಯ್ದಿದ್ದಾರೆ. ಉದಾಹರಣೆಗೆ ಪ್ರಭುದೇವರ ಒಂದು ವಚನ ಸಾಂಕೇತಿಕ ರೂಪದಲ್ಲಿದ್ದರೂ ಸಹಿತ ಕುದುರೆಯ ಶ್ರೇಷ್ಟತೆಯನ್ನು ಹೆಚ್ಚಿಸುವಂತಹದ್ದು.

"ಕೊಟ್ಟ ಕುದುರೆಯ ನೇರಲರಿಯದೆ

ಮತ್ತೊಂದು ಕುದುರೆಯ ಬಯಸುವವರು

ವೀರರೂ ಅಲ್ಲ, ಧೀರರೂ ಅಲ್ಲ

ಇದು ಕಾರಣ ಮೂರು ಲೋಕವೆಲ್ಲಾ
ಹಲ್ಲಣವ ಹೊತ್ತುಕೊಂಡು ಬಳಲುತ್ತೈದಾರೆ
ಗುಹೇಶ್ವರಾ"[೩೩] (ಶರಣರ ಅನುಭಾವಸಾಹಿತ್ಯ)

ಕೊಟ್ಟ ಕುದುರೆಯನ್ನು ಹತ್ತಿ ಅದರ ಮೂಲಕವೇ ಗುರಿಯನ್ನು ಸೇರಬೇಕು. ಅದನ್ನು ಏರಲಾದ ಇನ್ನೊಂದು ಕುದುರೆಯನ್ನು ಬಯಸುವವನು ನಿಜವಾದ ಸವಾರನಲ್ಲ. ಜೀವನದಲ್ಲಿ ತನ್ನ ಪಾಲಿಗೆ ಬಂದುದನ್ನೇ ಅಭ್ಯುದಯದ ಮಾರ್ಗಕ್ಕೆ ಅಳವಡಿಸಿಕೊಳ್ಳುವುದು ಸಾಧಕನ ಲಕ್ಷಣ. ಇಲ್ಲವಾದರೆ ಕುದುರೆ ಹೊರಬೇಕಾದ ಜೀನನ್ನು ತಾನು ಹೊತ್ತುಕೊಂಡು ಅಲೆದಾಡಬೇಕಾದ ಪಾಡು ಬರುತ್ತದೆ ಎಂದು ಸುಂದರವಾಗಿ ಹೇಳಿದ್ದಾನೆ ಪ್ರಭು. ಇಲ್ಲಿ ಕುದುರೆ ಯುದ್ಧದ ಸಲಕರಣೆಯಾಗಿ, ಸಾಗಾಣಿಕೆಯ ಪ್ರಾಣಿಯಾಗಿ, ನಂಬಿಕೆ ವಿಶ್ವಾಸದ ಜೀವಿಯಾಗಿ ವಿವಿಧ ಆಯಾಮಗಳ ಮೂಲಕ ಉಪಯುಕ್ತವಾದುದನ್ನು ಹೇಳುವ ಉದ್ದೇಶವನ್ನು ಇಲ್ಲಿ ಕಂಡುಕೊಳ್ಳಬಹುದು.

ಅದೇ ರೀತಿ ಇನ್ನೊಂದು ವಚನದಲ್ಲಿ ಕುದುರೆಯ ಏರಿಕೊಂಡು ಹೋದಿರೆ ನೀವು ಆನೆಯ ಏರಿಕೊಂಡು ಹೋದಿರೆ ನೀವು...... ಎಂಬಲ್ಲಿಯೂ ಕುದುರೆ ಮತ್ತು ಆನೆಯ ಮಹತ್ವವನ್ನು ಬಿಂಬಿಸುವುದಾಗಿದೆ.

ಕನ್ನಡ ಸಾಹಿತ್ಯದಲ್ಲಿ ತ್ರಿಪದಿ ಸಾಹಿತ್ಯ ಹೆಚ್ಚು ಜನಮನ್ನಣೆ ಪಡೆದ ಸಾಹಿತ್ಯ ಪ್ರಕಾರ. ಇದರ ಪೋಷಕನಾದ ಸರ್ವಜ್ಞ ತನ್ನ ನೇರ ನಿಷ್ಠೂರ ನುಡಿಗಳಿಂದ ಎಲ್ಲರ ಪ್ರೀತಿಗೆ ಪಾತ್ರನಾಗಿದ್ದಾನೆ. "ಆಡುಮುಟ್ಟದ ಗಿಡವಿಲ್ಲ. ಭಗವದ್ಗೀತೆಯಲ್ಲಿ ಪ್ರಸ್ತಾಪವಾಗದ ವಿಷಯವೇ ಇಲ್ಲ" ಎಂಬ ಗಾದೆ ಮಾತಿನಂತೆ ಸರ್ವಜ್ಞನು ಮೇಲಿನ ಸಾಲಿಗೆ ಹೊಂದಿಕೊಳ್ಳುವ ಶ್ರೇಷ್ಠ ಚಿಂತಕನಾಗಿದ್ದಾನೆ. ಆಡಿಗೂ ಮತ್ತು ಭಗವದ್ಗೀತೆಗೂ ಸಂಬಂಧವಿರುವಂತೆ ಆಡಿಗೂ ಮತ್ತು ಸರ್ವಜ್ಞನ ವಿಷಯ ಸಂಪತ್ತಿಗೂ ಒಂದು ರೀತಿಯಲ್ಲಿ ಹೊಂದಾಣಿಕೆಯಾಗುತ್ತದೆ ಎನ್ನಬೇಕು. ಆದ್ದರಿಂದ ಸರ್ವಜ್ಞನ ತ್ರಿಪದಿಗಳು ಕುದುರೆಯನ್ನು ಕುರಿತು ಈ ರೀತಿಯಾಗಿ ಮಾಹಿತಿಯನ್ನು ಒದಗಿಸುತ್ತವೆ.

"ಆನೆಗೊಂದಿಯ ಅರಸ ನಾನೇ | ಕುದುರೆಯಕಟ್ಟಿ |
ಮಾನಮನ್ನೆಯರು ಮಡಿಯಲಾ ನಗರವನು
ಖಾನರಾಳುವರು ಸರ್ವಜ್ಞ"[೩೪]

ವೈಭವದಿಂದ ಮೆರದ ವಿಜಯನಗರ ಸಾಮ್ರಾಜ್ಯವು ಅನೇಕ ನಾನಾ ಬಗೆಯ ಕುದುರೆ, ನಾನಾ ಬಗೆಯ ಜನಸಮೂಹ, ಸೈನಿಕರು ಇದ್ದರೂ ಸಹಿತ ಕೊನೆಯ ದಿನಗಳಲ್ಲಿ ತನ್ನ ಅವನತಿಗೆ ತಾನೇ (ಕಾರಣವಾಗಿ) ತಂದುಕೊಂಡ ಘಟನೆಗಳನ್ನು ಇಲ್ಲಿ ಸರ್ವಜ್ಞ ವಿವರಿಸಿದ್ದಾನೆ.

"ಕುದುರೆಯನು ಎರದ ಕದನವನು ಜಯಿಸದ
ಸುದತಿಯರ ಓಲುವೆ ಅರಿಯದ ಅರಸು ತಾ
ಸಿದಿಗೆಯ ಹೆಣನು ಸರ್ವಜ್ಞ"[೩೫]   (೭೫೨- ಸರ್ವ.ವ)

ಕುದುರೆಯನ್ನು ಏರಿ ಯುದ್ಧ ಮಾಡದೆ ಅಂತಃಪುರದಲ್ಲಿ ವಾಸವಾಗಿ ಸುದತಿಯರ ಯೋಗಕ್ಷೇಮ ವಿಚಾರ ಮಾಡದ ಅರಸನು ಬದುಕಿದ್ದರೂ ವ್ಯರ್ಥ, ಅಂತಹ ಅರಸ ಇದ್ದರೂ ಇಲ್ಲದಂತೆ ಅವನು ಹೆಣಕ್ಕೆ ಸಮಾನ ಎಂದು ಕಠೋರವಾದ ಮಾತುಗಳಲ್ಲಿ ವ್ಯಕ್ತಪಡಿಸಿದ್ದಾನೆ.

ಅಯೋಗ್ಯ ಕುದುರೆಯ ಕುರಿತು ಪ್ರಸ್ತಾಪಿಸುತ್ತಾ ಹೀಗೆ ಹೇಳುತ್ತಾನೆ

ಹಸಿವಾದಡುಂಬುದು | ಬ್ಬಸ ಬಂದರೋಡುವದು |
ಪಸರಿಸುತ ಸಿರಿಯ ಮೆರೆಯುವ ಕುದುರೆಯ
ನೆಸಗಿ ಕೆಟ್ಟಂದ ಸರ್ವಜ್ಞ   (೭೫೩-ಸರ್ವ.ವ)

ಬಯ್ಯ ಬಯಲಾಗುವದು | ಹೊಯ್ಯಲಿರದೋಡುವದು |
ಮೆಯ್ಯು ಮೆಯ್ದೆಗೆವ ಕುದುರೆಯನು ವಿಧಿತಾನು |
ಒಯ್ದರೆ ಲೇಸು ಸರ್ವಜ್ಞ   (೭೫೮- ಸರ್ವ.ವ)

ಮೆಟ್ಟು ಇಲ್ಲದ ಪಾದ | ಅಟ್ಟ ಲೋಡದ ತುರಗ |
ಕುಟ್ಟಿ ಕೆಡಹದ ಕಲಿತವು ಚಂದನವ
ಸುಟ್ಟು ಬಡಿದಂತೆ ಸರ್ವಜ್ಞ "[೩೬]   (೭೫೫- ಸರ್ವ. ವ.)

ಕಾಲಜ್ಞಾನ ಪದ್ಧತಿ

ಅಶ್ವಪತಿ ಗಜಪತಿಯು | ವಿಶ್ವನುತ ಹಂಪೆಯಲಿ |
ದುಸ್ಮಾನರೊಡನೆ ಹೊಡೆದಾಡೆ ನರಪತಿಗೆ |
ಮಸಣವಹುದೆಂದ ಸರ್ವಜ್ಞ   (೧೦೭೩- ಸರ್ವ.ವ)

ಲೇಸು ಪದ್ಧತಿ

ಕರಿಕೆ ಕುದುರೆಗೆ ಲೇಸು | ಮರುಕು ಹೆಣ್ಣಿಗೆ ಲೇಸು |
ಅರಿಕೆಯುಳ್ಳವರ ಕೆಳಲೇಸು, ಸೇವಿಗೆಯ |
ಸುರುಕು ಲೇಸೆಂದ ಸರ್ವಜ್ಞ   (೧೧೩೧- ಸರ್ವ.ವ)

ಗಿಡ್ಡ ಹೆಂಡತಿ ಲೇಸು | ಮಡ್ಡಿ ಕುದುರೆಗೆ ಲೇಸು |
ಬಡ್ಡಿಯ ಸಾಲ ಕೊಡೆಲೇಸು, ಹಿರಿಯರಿಗೆ |
ಗಡ್ಡ ಲೆಸೆಂದ ಸರ್ವಜ್ಞ   (೧೧೩೩- ಸರ್ವ.ವ)

ನೀತಿ ಪದ್ಧತಿ

ಪುಷ್ಪವಿಲ್ಲದ ಪೂಜೆ । ಅಶ್ವವಿಲ್ಲದ ಅರಸು ।
ಅಪ್ಪಲೊಲ್ಲದಳ ನಗೆನುಡಿಯು ಇವು ಮೂರು ।
ಚಪ್ಪೆಕಾಣಯ್ಯ ಸರ್ವಜ್ಞ (೧೪೮೫- ಸರ್ವ.ವ)

ಅನುಭವೋಕ್ತಿ

ಏರುವ ಕುದುರೆಯನು । ಹೇರುವ ಎತ್ತನ್ನು ।
ಬೇರೂರಲಿದ್ದ ಸತಿಯನ್ನು ಬೇರೊಬ್ಬ ।
ಕೇರದೆ ಬಿಡರು ಸರ್ವಜ್ಞ (೧೫೨೫- ಸರ್ವ.ವ)

ಸ್ತ್ರೀಯರ ನೆಲೆ

ಹೆಣ್ಣಿನ ಹೃದಯದ । ತಣ್ಣಗಿಹ ನೀರಿನ ।
ಬಣ್ಣಿಸುತ ಕುಣಿವ ಕುದುರೆಯ ನೆಲೆಯ ಬ ।
ಲ್ಲಣ್ಣಗಳು ಯಾರು ಸರ್ವಜ್ಞ (೧೬೫೦,- ಸರ್ವ.ವ)

ಕುದುರೆಯಿಲ್ಲದ ಅರಸು । ಮಧುರವಿಲ್ಲದ ಊಟ
ಚದುರೆಯಲ್ಲದಳ ಮನೆವಾರ್ತೆ, ಮುದಿಗೂರ ।
ಲೊದರಿ ಸತ್ತಂತೆ ಸರ್ವಜ್ಞ (೧೭೨೮- ಸರ್ವ.ವ)

ಕುದುರೆಯ ಚದುರೆಯ । ಹದಿರೆರಡು ಒಂದಯ್ಯ ।
ಚದುರನೇರಿದರೆ ಕುಣಿಯುವದು, ಬೆಳ್ಳಾಳ ।
ಬಿದಿರಿ ಹಾಕುವದು ಸರ್ವಜ್ಞ (೧೭೬೭- ಸರ್ವ.ವ)

ದೃಷ್ಟಾಂತಗಳು

ಕುದುರೆಯ ಸೂಳೆಯ । ಚದುರೆರಡು ಒಂದಯ್ಯ ।
ಕುದುರೆ ಕಡಲೆಯನು ಸಲೆ ತಿಂದು ಬಕ್ಕಣವ ।
ನೊದರಿ ಬಿಟ್ಟಂತೆ ಸರ್ವಜ್ಞ (೧೮೮೮- ಸರ್ವ.ವ)

ಬೆಡಗಿನ ಪದ್ಧತಿ

ಕೋಡಗವು ಕುದುರೆಯಲಿ । ನೋಡನೋಡುತ ಹುಟ್ಟಿ ।
ಕಾಡಾನೆಗೆರಡು ಗರಿಮೂಡಿ ಗಗನದಿರಿ ।
ದಾಡುವುದ ಕಂಡೆ ಸರ್ವಜ್ಞ (೨೦೪೪- ಸರ್ವ.ವ)

ಕನ್ನಡ ಸಾಹಿತ್ಯದಲ್ಲಿ ಸರ್ವಜ್ಞ ಕವಿಯ ಜ್ಞಾನ ಅಗಾಧವಾದದ್ದು. ಏಕೆಂದರೆ ಪ್ರತಿಯೊಂದು ವಿಷಯ, ವಸ್ತು, ಘಟನೆ, ಪ್ರಸ್ತುತತೆ ಕುರಿತು ಮಾತನಾಡುವ, ಎಚ್ಚರಿಸುವ, ನೇರ ನುಡಿಗಳನ್ನಾಡುವ, ಸಮಾಜ ತಿದ್ದುವ, ಕವಿ ಇಲ್ಲವೆಂದೇ ಹೇಳಬೇಕು. ಪ್ರಚಲಿತ ಗಾದೆಯಂತೆ ಹೇಳುವುದಾದರೆ ಆಡುಮುಟ್ಟದ ಗಿಡವಿಲ್ಲ ಭಗವದ್ಗೀತೆಯಲ್ಲಿ ಪ್ರಸ್ತಾಪವಾಗದ ವಿಷಯುವಿಲ್ಲವೆಂಬಂತೆ ಇಲ್ಲಿ ಮುಖ್ಯವಾಗಿ ಭಗವದ್ಗೀತೆಯನ್ನು ಹೊರತುಪಡಿಸಿದರೆ ಸರ್ವಜ್ಞನೇ ಶ್ರೇಷ್ಠನಾಗುವುದನ್ನು ಕಾಣಬಹುದು. ಇದಕ್ಕೆ ಸಾಕ್ಷಿ ಎಂಬಂತೆ ಕಾಲಜ್ಞಾನ, ಲೇಸು ಪದ್ಧತಿ, ನೀತಿ, ಅನುಭವೋಕ್ತಿ, ಸ್ತ್ರೀಯರ ನೆಲೆ, ದೃಷ್ಟಾಂತಗಳು, ಬೆಡಗಿನ ಪದ್ಧತಿಗಳು ಕುರಿತು ಹೇಳಿರುವ ಸಾಲುಗಳು ಸ್ಪಷ್ಟ ಉತ್ತರವನ್ನು ನೀಡುತ್ತವೆ.

ಬಸವ ಪುರಾಣದಲ್ಲಿ ಪೌರಾಣಿಕ ಕಥೆಯೊಂದಿದ್ದು ಅದು ಮಧುರೆಯ ಪಾಂಡ್ಯನ ಆಸ್ಥಾನದಲ್ಲಿ ನರಿಗಳು ಕುದುರೆಗಳಾದ ವೃತ್ತಾಂತವನ್ನು ಕಥೆಯ ರೂಪದಲ್ಲಿ ಈ ಕೆಳಗಿನಂತೆ ನಿರೂಪಿಸುತ್ತದೆ.

ನರಿಗಳು ಕುದುರೆಗಳಾದ ಕಥೆ

"ಮಧುರ ಪಾಂಡ್ಯನು ತನ್ನ ಮಂತ್ರಿಗೀ ರೀತಿ
ಯಧಿಕದರ್ಥವನಿತ್ತು ಹಯಗಳ ಬಿಲಿಯೆ
ಕಳುಹಿಸಲಾಗ ಸದ್ಭಕ್ತಿ ಹೆಚ್ಚಳದಿ
ಹೋಗುತ್ತ ಜಂಗಮಾರ್ಚನೆ ಮಾಡಿ ಮಾಡಿ
ಹಣವೆಲ್ಲ ವ್ಯಯವಾಗೆ ಹಯಗಳ ಬಲಿಯ
ಲರ್ಥವಿಲ್ಲದಿರಲು ಚಿಂತೆಯನುಡುಗಿ
ಹೊಲದ ನರಿಗಳನು ಹಿಡಿದು ತರಿಸುತ (೭೦- ಬ.ಪು.)
ಲಾ ಪಾಂಡ್ಯ ಭೂನಾಥಗವನೆ ತೋರಿಸಲು
ಚೊಕ್ಕನ್ನೆನಾರರ ಮಿಕ್ಕದ ಕರುಣೆ
ಯಿಂದಲಕ್ಕಜವನೆ ನರಿಗಳವೆಲ್ಲ
ಕಂಕಣ ತೇಜಿಗಳೆನಿಸವೆಯಾಗ;
ಮಲಹರ ಭಕ್ತರ ಮಹಿಮೆಯನರಿಯ
ಲಿದು ಚೋದ್ಯವೇ" ಯೆಂದು ಎಲ್ಲ ಬಕುತರು
ಸದಮಲಚಿತ್ತದಿಂ ಸಂತಸವೊಂದ
ಲತಿ ವಿಸ್ಮಯಾಕ್ರಾಂತನಾಗಿ ಬಿಜ್ಜಳನು
ಈತನೀಶ್ವರನಲ್ಲದಲ್ಲ ನೆನುತ್ತ
ವರವಸ್ತ್ರ ಭೂಷಣಾವಳಿಗಳನಿತ್ತು. (೭೦)

ಪರಮಾನುರಾಗದಿಂ ನರರೆಲ್ಲ ಕೇಳೆ
ಈ ಭಂಡಾರಿಯ ಮೇಲೆ ಯಾರಾದರಿನ್ನು
ಕೊಂಡೆಯ ನುಡಿದರಾ ಚಂಡಿ ನಾಯಿಗಳ
ನಾಲಗೆ ಸೀಳಿಸಿ ಸುಣ್ಣವನಿಟ್ಟು
ಹುರಿದಿಹ ಮರಥನು ಸುರಿಸುವೆ ಬಾಯ್ಗೆ
ಎನುತ ಬಸವ ಸಿಂಹವನು ಬೀಳುಕೊಂಡು
ನಗರ ಕೈ ತಂದನು ಜನಗಳು ನುತಿಸೆ"[೩೭]

ಕುದುರೆಯ ಶಾಂತ

ನೂರೊಂದು ವಿರಕ್ತರರಲ್ಲಿ ಪ್ರಮುಖರಾದ ಹೇಟೆಯಮರುಳ, ಟಗರಕಾಳಗದ ಪ್ರಭುದೇವ, ಬಾಲ ಲಿಂಗಣ್ಣ, ಮಿಡಿಬಿಲ್ಲ ಶಾಂತೇಶ, ತುಬಾಕದ ಶಾಂತಯ್ಯ, ಮಂಚದ ಶಾಂತ, ಮದ್ದಳೆ ಶಾಂತ, ಬುಡ ಬಡಿಕೆ ಶಾಂತ, ಡಂಗುರ ಶಾಂತ, ಖಂಡಣೆ ಶಾಂತ, ಸಾಣೆ ಖಂಡೆಯ ಶಾಂತ, ಮದ್ದಾನೆ ಶಾಂತ, ಸಿಂಗಾಡಿ ಶಾಂತ, ಚಕ್ರದ ಶಾಂತ, ಬೊಂಬೆ ಕಟ್ಟಿ ಮೆರೆಸುವ ಶಾಂತ, ಚೆಟ್ಟಿ ಶಾಂತ, ಡೊಂಬರ ಶಾಂತ ಹೀಗೆ ಅನೇಕ ವಿರಕ್ತರರಲ್ಲಿ ಕುದುರೆಯ ಶಾಂತನು ಒಬ್ಬ ಶ್ರೇಷ್ಠ ವಿರಕ್ತನಾಗಿದ್ದಾನೆ.

"ಪ್ರೌಢರಾಜೇಂದ್ರನೊಮ್ಮೆ ವೈಹಾಳಿಗೆ ಹೊರಟಾಗ, 'ಕುದುರೆಯ ಶಾಂತ'ನೆಂಬ ವಿರಕ್ತನು ಎದರು ಬರುವನು. ವಿರಕ್ತನ ಕುದುರೆಯನ್ನು ತಂದು ತನ್ನ ತೇಜಿಯೊಡನೆ ಓಡಿಸು ಎಂದು ದೊರೆ ಕೇಳುವನು. ವಿರಕ್ತ ನನ್ನ ಕುದುರೆ ತಮ್ಮ ತೇಜಿಯೊಡನೆ ಓಡಲು ಶಕ್ತವಲ್ಲ ಎಂದು ಎಷ್ಟೇ ಹೇಳಿದರು ಕೇಳಲಿಲ್ಲ. ಕಡೆಗೆ ವಿರಕ್ತನ ಕುದುರೆಯನ್ನು ರಾಜನ ಕುದುರೆಯೊಡನೆ ಓಡಲು ಬಿಡುತ್ತಾನೆ. ಮೈಹಾಳಿಗೆ ಬಂದ ಕುದುರೆಗಳನ್ನು ಹಿಮ್ಮೆಟ್ಟಿ ವಿರಕ್ತನ ಕುದುರೆ ಮುಂದೆ ಓಡುವುದು. ಆಗ ರಾಜ ನಿನ್ನ ಕುದುರೆಗಳನ್ನು ಕೊಳ್ಳುತ್ತೇನೆ? ಎಷ್ಟಕ್ಕೆ ಕೊಡುವೆ? ಎಂದು ಕೇಳುವನು. ಪರಮಾತ್ಮನಲ್ಲದೆ ಇತರರು ಕುದುರೆ ಕೊಳ್ಳಲು ಶಕ್ತರಲ್ಲ ಎಂದು ವಿರಕ್ತ ತಿಳಿಸುವನು. ದೊರೆ ಬಲತ್ಕಾರದಿಂದ ಕುದುರೆಯನ್ನು ವಶಪಡಿಸಿಕೊಳ್ಳಲು ಯತ್ನಿಸುವನು. ಶಾಂತನು ತಾನು ಕೂಡುತ್ತಿದ್ದ ಕುದುರೆಯನ್ನು ಬಯಲಿಗೆ ನೂಕುವನು. ಕುದುರೆ ಪ್ರಾಣನೀಗಿ ಬಯಲಸೇರುವುದು."[೩೮]

"ನೋಡುತ ಜನ ಬೆರಗಾಗುತ ನುಡಿಸಲು
ನಾಡೊಡೆಯನು ಹರಹರ ಈ ಶರಣರು
ಆಡಿದ ನುಡಿಗಳ ತಪ್ಪರು ಎಂಬುತ ಪೊಗಳಿದ ಮನದಣಿಯ
ರೂಢಿಗೆ ಅಚ್ಚರಿಯೆನಿಸುವನೋರ್ವನು

ರೂಢನು ಕುದರಿಯ ಶಾಂತನು ಎನಿಪನು
ಆಡುವನಾವಗ ಕುದುರೆ (ವಯ್ಯಾ)ಳಿಯ ಪರಮಾನಂದದಲಿ (೪-೮೫)

ರಾಜನು ವೈ ಹಾಳಿಗೆಯೆಂದೆನುತಲಿ
ಪೌಜನು ಕೂಡುತ ನಡೆತರೆ ಶರಣನು
ತೇಜಿಯನೇರುತ ಬರುತಿರೆ ಕಾಣುತ ಕರವುತ ತನ್ನಡೆಗೆ
ವಾಜಿಯ ವೈಹಾಳಿಯ ಮಾಡುವದೆನೆ
ರಾಜನೆ ಬಡವರ ಕುದುರೆಯು ನಿಮ್ಮಯ
ತೇಜಿಯ ಸಂಗಡ ಚರಿಸಲು ಶಕ್ತವೆ ಎಂದನು ಭೂಪತಿಗೆ (೪-೮೬)
ನೋಡುವೆ ನಿನ್ನಶ್ವದ ಬಲ್ಮೆಯನಾ
ಓಡಿಸು ನೀನೆಂದೆನಲಿಕೆ ನುಡಿದನು
ರೂಢೀಶನೆ ನಿಮ್ಮಶ್ವವು ಬೆನ್ನಲಿ ಬರುವುದು ಎಂದೆನಲು
ನಾಡೊಡೆಯನು ಉತ್ತಮ ತೇಜಿಗಳನು
ಓಡಿಸಿ ಆತನ ಬೆನ್ನಲಿ ಎನಲಿಕೆ
ಕೂಡದೆ ಹೋದವು ಸೇನೆಯೊಳಿಹ ಬೆಲೆ ತೇಜಿಯು ಕಾಲ್ಗೆಡಲು''[೩೯] (೪-೮೭)

ಕಾಲಜ್ಞಾನ ಸಂಗ್ರಹ ಭಾಗ-೧ ಸಂ. ಶ್ರೀಶಿವಬಸವ ಸ್ವಾಮಿಗಳು ಸಂಪಾದನೆ ಮಾಡಿಕೊಟ್ಟಿರುವ ಕೃತಿಯಲ್ಲಿ ಕುದುರೆಯ ಕುರಿತು ಒಂದು ವಚನ ಈ ರೀತಿಯಾಗಿ ವ್ಯಕ್ತಪಡಿಸುತ್ತದೆ.

ಎತ್ತು ಕುದುರೆಗಳಿಲ್ಲ | ಎತ್ತಿ ಪಿಡಿಯುವವರಿಲ್ಲ
ಒತ್ತಿ ಎಳೆಯುವರು -ಯಾರಿಲ್ಲದಾರಥವು |
ಒತ್ತಿ ನಡೆದೀತು ನಂಜೇಶ (೩೭- ನಂಜೇಶನ ಕಾಲಜ್ಞಾನ)

ಇನ್ನೊಂದು ವಚನ-

ರಾವುತ ನುಂಗ್ಯಾನು ಮದಗಜ ಆನೆಯ
ರಾವುತನ ತುರುಗವೆ ನುಂಗೀತು
ಹನ್ನೆರಡು ಟಂಕೆಗೆ ಒಂದು ಬಿಳಿ ಪಟ್ಟೆ ಮಾರೀತು''[೪೦] (ರುದ್ರಮುನಿ ಸ್ವಾಮಿಯ ಕಾಲಜ್ಞಾನ)

ಎಮ್ಮೆ ಬಸವನ ಕಾಲಜ್ಞಾನದಲ್ಲಿ ಕುದುರೆಯನ್ನು ಕುರಿತು ವಿವರಪೂರ್ಣ ಮಾಹಿತಿ ನೀಡಲಾಗಿದೆ. ಉದಾಹರಣೆಗಾಗಿ ಕೆಳಗಿನ ಸಾಲು ಸ್ಪಷ್ಟತೆಯನ್ನು ನೀಡಬಲ್ಲವು.

"ಬಿದುರೆ ಪರ್ನಾಶಿಯ ಠಾಣ್ಯವನಿಟ್ಟಾರು ಕೂಕೂಕೂ|
ಕುದುರೆ ರಾವುತರೆಲ್ಲ ಕೂಲಿಗೆ ಹೋಗುವರು ಕೂಕೂಕೂ"[೪೧] (೧೦)
"ಆನೆಕುದುರೆ ಮಂದಿ ಸೇನೆ ಭಂಡಾರವು ಕೂಕೂಕೂ
ತಾನೆದ್ದು ನಡೆದಾನು ಉತ್ತರಭಾಗಕ್ಕೆ ಕೂಕೂಕೂ (೨೬)

ಮುಂಡಿಗೆಗಳಲ್ಲಿ ಕುದುರೆಯ ಪ್ರಸ್ತಾಪ ಈ ರೀತಿಯಾಗಿ ಚಿತ್ರಿತಗೊಂಡಿದೆ.

ಮದ್ದಾನೆ ಕುದುರೆಗಳು ಭರಿತ ಬಿದ್ದಾವು ಲೆಕ್ಕವಿಲ್ಲದೆ ಹಾಕಲೊ ಮುಂಡಿಗೆಯ
ಉದ್ದನ ಕೊರಳಿನ ಒಂಟಿಯದ್ದಾವು ಯಮಪುರಕೆ ಹಾಕಲೋ ಮುಂಡಿಗೆಯ (೧೧)
ಕಾಶಿ ಕಡಿಗೆ ಹೋಗಿ ಕಾಯವ ಜಯಸಿನ್ನು
ಲೇಸಾಗಿ ಹಿಂದಕ್ಕೆ ತಿರುಗುವುದು |
ಏಸೊಂದು ಲಕ್ಷ ಕುದುರೆ ಬೆನ್ನಹತ್ತಿ ಬಂದು
ಮೊಸದಲ್ಲಿ ಬಂದು ಮಡಿದು ಹೋಗುವುದು" [೪೨] (೪)

"ಮುಂದೆ ಬೊಕ್ಕ ಸಂಬಾರು ಗಜಿಬಿಜಿ
ಮುಂದೆ ಕಕ್ಕಾಸವಾಗದ ಗಜಿಬಿಜಿ
ಮುಂದೆ ಆನೆಕುದುರೆ ಗಜಿಬಿಜಿ
ಮುಂದೆ ಸಂದಣಿ ಸಂಭ್ರಮ ಗಜಿಬಿಜಿ (೭)
ಆನೆ ಶಾನೆಯು ಕುದುರೆ ಸರ್ವರು
ಬೋನದ ಕುರಿಗಳಂತೆ
ಹೇನು ಹೆಚ್ಚಿದ ಮಂಡೆ ಮೀನದಂತಾಗಿ
ನಾನೆಂಬಹಂಕಾರದಿಂದ"[೪೩] (೩)

ಹೀಗೆ ಕಾಲಜ್ಞಾನ ಸಾಹಿತ್ಯದಲ್ಲಿಯೂ ಕೂಡ ಕಾಲವನ್ನು ಅರಿತು ಸಮಯಕ್ಕೆ ಸರಿಯಾಗಿ ಯಾವ ಯಾವ ಕಾರ್ಯ ಮಾಡಬೇಕು. ಅದರಿಂದ ಆಗುವ ಉಪಯೋಗ ಮತ್ತು ಹಾನಿಯನ್ನು ಕುರಿತು ಸಾಂಕೇತಿಕ ರೂಪದಲ್ಲಿ ವ್ಯಕ್ತಪಡಿಸಿದ್ದಾರೆ. ಹಾಗೆಯೇ ಕುದುರೆಯಂಥ ಪ್ರಾಣಿ ಎಲ್ಲಿ ಎಲ್ಲಿ ಉಪಯೋಗಗೊಂಡಿದೆ ಎಂಬುದನ್ನು ತಿಳಿಸುತ್ತಾರೆ.

೩.೫.೨. ಶಾಸನಗಳು

ಭಾರತೀಯ ಸಂಸ್ಕೃತಿಯ ಪ್ರತಿಬಿಂಬಗಳೇ ಶಾಸನಗಳು. ಶಾಸನಗಳು ಇಲ್ಲದೇ ಹೋಗಿದ್ದರೆ ನಮ್ಮ ಇತಿಹಾಸ ಮತ್ತು ಸಾಹಿತ್ಯಕ್ಕೆ ಆಧಾರ, ಪುರಾವೆಗಳು ಪೂರ್ಣ ಪ್ರಮಾಣದಲ್ಲಿ ಸಿಗುತ್ತಿರಲಿಲ್ಲವೇನೋ ಎಂಬ

ಸಂಶಯ ಕಾಡುತ್ತದೆ. ಆದ್ದರಿಂದ ಡಾ.ಎಂ.ಚಿದಾನಂದ ಮೂರ್ತಿಯವರು ಹೇಳುವಂತೆ "ಶಾಸನಗಳು ಸಾಹಿತ್ಯದ ತಲಕಾವೇರಿ. ಕನ್ನಡ ನಾಡಿನ ಜೀವನವು ಎಲ್ಲಿಯೂ ಯಾವ ಕೃತಿಯಲ್ಲಿಯೂ ಮಡುಗಟ್ಟಿ ನಿಂತಿಲ್ಲ. ಕೆಲವು ಕಾವ್ಯಗಳಲ್ಲಿ ಅಲ್ಲಲ್ಲಿ ಗೋಪಾದ ಜಲದಂತೆ ಕಂಡು ಬಂದರೂ ಹೆಚ್ಚು ಪ್ರಮಾಣದಲ್ಲಿ ಹೆಚ್ಚು ವಿಸ್ತಾರವಾಗಿ, ಹೆಚ್ಚು ಶುದ್ಧ ರೂಪದಲ್ಲಿ ಕಾಣಸಿಕೊಳ್ಳುವುದು ಶಾಸನಗಳಲ್ಲಿ"[೪೪] ಎಂದಿದ್ದಾರೆ.

"ಶಾಸನವೆಂಬ ಪದವನ್ನು 'Inscription' ಎಂಬ ಆಗ್ಲ ಪದಕ್ಕೆ ಸಂವಾದಿಯಾಗಿ ವಿದ್ವಾಂಸರು ಬಳಸುತ್ತಾರೆ. Inscription ಎಂದರೆ ಬಹುಕಾಲ ನಿಲ್ಲಬಲ್ಲ. ಶಾಶ್ವತವಾಗಿ ಉಳಿಯಬಲ್ಲ ವಸ್ತುಗಳ ಮೇಲೆ ಕೊರೆಯಲ್ಪಟ್ಟ ಬರೆಹ ಎಂದು ಅರ್ಥ ನೀಡುತ್ತಾರೆ"[೪೫] ಎಂದು ಶಾಸನ ತಜ್ಞರ ಅಭಿಮತವಾಗಿದೆ.

ತಾಳೆಗರಿ, ಭೂರ್ಜಪತ್ರ, ಕಾಗದ ಮುಂತಾದವುಗಳ ಮೇಲೆ ಕಂಡು ಬರುವ ಬರಹಗಳನ್ನು ಬಿಟ್ಟು, ಬಹುಕಾಲ ಉಳಿಯುವ ಸಾಮಗ್ರಿಯ ಮೇಲೆ ಕೆತ್ತಿರುವ ಬರಹಗಳನ್ನು ಶಾಸನಗಳೆಂದು ಸ್ಥೂಲವಾಗಿ ಕರೆಯಬಹುದು. 'ಶಾಸನ' ಶಬ್ದದ ಮೂಲಾರ್ಥ 'ಆಜ್ಞೆ 'ಎಂದು ಕೌಟಿಲ್ಯ ಹೀಗೆ ಒಂದು ಕಡೆ ಹೇಳುತ್ತಾನೆ. ಪ್ರಾಚೀನರು ಶಾಸನ (ಎಂಬ ಪದ) ರಾಜರ ಆಜ್ಞೆಗಳನ್ನು ತಿಳಿಸುವ ಬರಹವನ್ನು ಹೇಳುತ್ತದೆ ಎಂದಿರುವನು. ಶುಕ್ರಾಚಾರ್ಯರ ಶುಕ್ರನೀತಿಸಾರದಲ್ಲಿ ರಾಜನ ಶಾಸನ ಪ್ರಭೇದಗಳ ಒಂದು ದೊಡ್ಡ ಪಟ್ಟಿಯನ್ನೇ ಕೊಟ್ಟಿದೆ. ಅದರ ಪ್ರಕಾರ "ಶಾಸನ ಪತ್ರದಲ್ಲಿ ರಾಜನ ಸ್ವಂತ ರುಜುವೂ ಆ ಆಜ್ಞೆ, ಹೊರಟ ದಿನಾಂಕವೂ ಇರಬೇಕು ಮತ್ತು ಹೀಗೆ ಆರಂಭವಾಗಬೇಕು ಇತ್ಯಾದಿ"[೪೬] ಅಂಶಗಳಿವೆ. ಒಂದರ್ಥದಲ್ಲಿ ನಮ್ಮ ಹಿರಿಯರು ವ್ಯವಹಾರದ ಅನುಕೂಲಕ್ಕಾಗಿ ಹೊರಡಿಸುವ ಆಜ್ಞಾಪೂರ್ವಕವಾದ, ಪ್ರಮಾಣದ ರೂಪದಲ್ಲಿ ಬರೆಸಿದ ಸ್ಪಷ್ಟ ಬರಹಗಳೇ ಶಾಸನಗಳು ಎಂದು ಹೇಳಬಹುದು.

" 'ಶಾಸ್' ಎಂಬ ಧಾತುವಿಗೆ ಆಜ್ಞೆಮಾಡು, ಶಿಕ್ಷಿಸು, ನಿಯಂತ್ರಿಸು ಮುಂತಾದ ಅರ್ಥಗಳಿವೆ ಕಾನೂನುಗಳನ್ನು ಜನರಿಗೆ ಪ್ರಕಟಪಡಿಸುವ ಬರಹಗಳೇ ಶಾಸನಗಳು"[೪೭]

"ಶಾಸನ ಮಿದಾವುದೆಲ್ಲಿಯ ಶಾಸನಮಾರಿತ್ತರೇಕೆ ಸಲಿಸುವೆ ನಾನೀ ಶಾಸನಮವೆಂಬ ಪಾತಕನಾಸಕಳಂ ರೌರವಕ್ಕೆ ಗಳಗಳನಿಳಿಗುಂ"[೪೮] ಎಂದಿದೆ.

ಭಾರತದಲ್ಲಿ ಸುಟ್ಟ ಮಡಕೆ, ಇಟ್ಟಿಗೆ, ಶಂಖ, ದಂತ, ಮರಗಳ ಮೇಲೂ ಶಾಸನಗಳು ದೊರೆತಿವೆ. ವಿಶೇಷವಾಗಿ ಕರ್ನಾಟಕದಲ್ಲಿ ಕಲ್ಲಿನ ಮೇಲೆ, ಸ್ತಂಭಗಳ ಮೇಲೆ, ದೇವಸ್ಥಾನದ ಗೋಡೆಗಳ ಮೇಲೆ, ವಿಗ್ರಹಗಳ, ಪೀಠಗಳ ಮೇಲೆ, ತಾಮ್ರ ಪಟಗಳ ಮೇಲೆ, ಪಾತ್ರೆಗಳ ಮೇಲೆ, ಮಡಿಕೆಗಳ ಮೇಲೆ ಶಾಸನಗಳು ದೊರೆತಿವೆ ಎಂಬ ಅಂಶಗಳು ಹಿಂದಿನಿಂದಲೂ ದಾಖಲೆಗೊಂಡ ವಿಚಾರಗಳಾಗಿವೆ.

'ದೇವ ದೇವಂ ಪುಲಿಗೆರಿನಗರೀ ಶಾಸನಾಂಕಂ ಮೃಗಾಂಕಂ ಸೋಮೇಶಂ' ಎಂಬಲ್ಲಿ ಆಡಳಿತ ನಡೆಸುವಿಕೆ, ಆಳ್ವಿಕೆ, ಪ್ರಭುತ್ವ ಎಂಬ ಅರ್ಥವನ್ನು ನೀಡಲಾಗಿದೆ.

'ಶಾಸನಮಾಜ್ಞೆಯುಂ' ಹಾಗೂ "ಧಾತ್ರಿಯೊಳ್ನುಡಿದುದೆ ನನ್ನಿ ಮಾಡಿದುದೆ ಶಾಸನವಿತ್ತುದೆ ದೇವರಿತ್ತುದೆಂದೊಡೆ ಗುಣದೊಳ್ಪನೇಕೆ ಬೆಸಗೊಂಡಪೆನೀ ಗುಣದಂಕ ಕಾರ್ತೀಯಾ" ಎಂಬ ಹೇಳಿಕೆಗಳಲ್ಲಿ ಶಾಸನವೆಂಬುದಕ್ಕೆ ಆಜ್ಞೆ, ಅಪ್ಪಣೆ ಎಂಬರ್ಥಗಳು ಹೊರಡುತ್ತಿವೆ."[೪೯]

"ಶಾಸನಗಳು ಪ್ರಾಚೀನ ಭಾರತದ ಕಾಲಾನುಕ್ರಮಣಿಕೆಯ ಏಕೈಕ ಬೆಣ್ಣುಂಡಗಳು"[೫೦] ಎಂದು ಶ್ರೀ ದೀಕ್ಷಿತರು ಅಭಿಪ್ರಾಯ ಪಡುತ್ತಾರೆ. ಡಾ.ಪಿ.ಬಿ.ದೇಸಾಯಿಯವರು ಶಾಸನಗಳನ್ನು ಕುರಿತು ಹೇಳುತ್ತಾ- 'ಶಾಸನಗಳು ನಮ್ಮ ನಾಡಿನ ಅಪೂರ್ವವಾದ ಸಂಪತ್ತು, ಅಮೂಲ್ಯ ನಿಧಿ. ಕಳೆದುಹೋದ ಹಣಕಾಸನ್ನು ಭೂಮಿ ಸೀಮೆಯನ್ನು ಮರಳಿ ಸಂಪಾದಿಸಬಹುದು. ಈ ಸಂಪತ್ತು ಅಂತಹುದಲ್ಲ. ಇದು ನಮ್ಮ ಸಂಸ್ಕೃತಿಯ ಅಮೋಘ ಜ್ಞಾನದ ಗಣಿ. ಈ ಗಣಿಯನ್ನು ನಾವು ಸಂರಕ್ಷಿಸಬೇಕು. ಸಂಶೋಧಿಸಬೇಕು. ಅಭಿವೃದ್ಧಿಗೊಳಿಸಬೇಕು' ಎಂದಿರುವರು. ಡಾ.ಎಂ.ಎಂ.ಕಲಬುರ್ಗಿಯವರು ಶಾಸನಗಳನ್ನು ಕುರಿತು ಮಾತನಾಡುತ್ತ- "ಶಾಸನ ಶಾಸ್ತ್ರ ಓದುತ್ತ ನಡೆದಿದೆ -ನಡೆದೆ ಓದಿಸುತ್ತಾ ಸಾಗಿದೆ. ಆಳಕ್ಕೆ ಇಳಿದಂತೆ ಶಿಲೆಯ ಮರೆಯ ಸುವರ್ಣವನ್ನು ಕಂಡೆ. ಕರ್ನಾಟಕದಲ್ಲಿ ಶಾಸನ ವ್ಯಾಸಂಗ ಕೂರ್ಮಗತಿಯಲ್ಲಿ ಚಲಿಸುತ್ತಲಿದೆ. ಉತ್ತರ ಕರ್ನಾಟಕದಲ್ಲಿಯಂತೂ ಈ ವ್ಯಾಸಂಗವೊತ್ತಟ್ಟಿಗಿರಲಿ; ಪರಿವೀಕ್ಷಣೆ ಸಹ ನಡೆಯದೆ ಶಾಸನಗಳು ಪರದೇಶಿಯಾಗಿ ಬಿದ್ದು ವರುಷ ವರುಷ ಮಣ್ಣು ಪಾಲಾಗುತ್ತ ನಡೆದಿವೆ"[೫೧] ಎಂದು ವ್ಯಕ್ತಪಡಿಸುತ್ತಾರೆ. ಈ ಮೇಲಿನ ಎಲ್ಲಾ ವಿದ್ವಾಂಸರ ಹೇಳಿಕೆಯನ್ನು ಗಮನಿಸಿದಾಗ ಶಾಸನಗಳು ಚಿನ್ನದ ಗಣಿಗಳು ಅವುಗಳನ್ನು ಅಗಿದಂತೆ, ಹೊರತೆಗೆದಂತೆ ಮಹತ್ವದ ವಿಷಯ ಸಂಪತ್ತು ಹೊರಹೊಮ್ಮಿದೆ ಎಂಬ ವಿಚಾರ ಸ್ಪಷ್ಟವಾಗುತ್ತದೆ. ಆದ್ದರಿಂದ ಅವುಗಳ ರಕ್ಷಣೆ, ಸಂರಕ್ಷಣೆ ಜೊತೆಗೆ ಅಧ್ಯಯನ ಮಾಡುವುದರ ಮೂಲಕ ಹೊಸ ಹೊಸ ಆಲೋಚನೆಯನ್ನು ಮಾಡುತ್ತ ಹೋದರೆ ಅರಸರು ಬರೆಸಿದ ಬರವಣಿಗೆಗಳು, ಅವರ ಶ್ರಮ ಸಾರ್ಥಕವಾಗುತ್ತದೆ.

ಕುದುರೆಯ ಕುರಿತು ಉಲ್ಲೇಖಿಸುವ ಮಾದಾಪಟ್ಟಣದ ತಾಮ್ರಶಾಸನವು ಹೀಗೆ ವರ್ಣಿಸುತ್ತದೆ. "ಶ್ರೀ ಮದ್ರಾರಾಜಾಧಿರಾಜ । ರಾಜ ಪರಮೇಶ್ವರ । ರಾಜಾಮಾರ್ತಾಂಡ । ರಾಜಗಂಭೀರ ರಾಜಕುಲಮನೋ ಭಯಂಕರಾದಂತ್ಥಾ । ಕ್ಷಮೆಯೊಳ್ ಧರ್ಮರಾಯ । ಶಕ್ತಿಗೆ ಭೀಮ । ಶಸ್ತ್ರದೊಳರ್ಜುನ ತುರಗಕ್ಕೆ ನಕುಲ। ತಿಳುವಳಿಕೆಗೆ ಸಹದೇವ । ಸತ್ಯಕ್ಕೆ ಹರಿಶ್ಚಂದ್ರ ಚೆಲ್ವಗೆ ಮನ್ಮಥನಾದಂತ್ಥಾ । ಕಂಡನಾಡಕೊಂಡು...... ಎಂದು ನಕುಲನು ಹಯಾಶಾಸ್ತ್ರ ಪರಿಣಿತನೆಂದು ಹೇಳುವ ಮೂಲ ಆಶಯವನ್ನು ಹೊಂದಿದೆ."[೫೨]

"ನಂಜನಗೂಡಿನ ೧೦೪ ನಂಬರ ಶಾಸನ ಸಾರಥಿ ಕುದುರೆಗೆ ಹಣೆ ಮೇಲೆ ಹೆಸರು ಕೆತ್ತಿದ ಹಿತ್ತಾಳೆ ಬಿಲ್ಲೆಗಳು ಸಹಾ.... ಎಂದಿದೆ. ಇದು ಕುದುರೆಯ ವೀರತ್ವವನ್ನು ವರ್ಣಿಸುವ ಯುದ್ಧದ ಬಗೆಯನ್ನು ತಿಳಿಸುವ ಶಾಸನ. ರಣರಂಗದಲ್ಲಿ ಅದರ ಹೋರಾಟವನ್ನು ಕುರಿತು ತಿಳಿಸುತ್ತದೆ."[೫೩] "ಕಾಂಭೋಜ ಭೋಜ ಕಾಳಿಂಗ ಕರಹಾಟಾದಿ ಪಾರ್ಥಿ... ವೈ.... ಅಶ್ವರತ್ನ ಪಯೋಬ್ಧಿಂದು ಗಣಿತೇ ಶಕಜನ್ಮನಾ"[೫೪] ಉಲ್ಲೇಖ ನೀಡುತ್ತದೆ.

"ಶ್ರೀ ವೀರ ಪಾರ್ವತಿರಾಯರೊಡೆಯರು ತಾವು ಆಳುವ ತೆಂಕಣಾಂಬೆಯ ರಾಜ್ಯದ ತಿರುಮಲೆನಾಥದೇವರ ಬೆಟ್ಟದ ಮೂಡದ ಹಳ್ಳದ ಬೇಟೆಯ ಬೈಲಿನಲ್ಲಿ ತಾವು ಆದ ಪರ್ವ್ವತನಾಥನೆಂಬ ಕುದುರೆಯ ಮೇಲೆ ಇದ್ದು ಹಂದಿಯಂ ಕಂಡು ಅಂಜಲ ಹಳ್ಳವಂ ದಾಟಿ..... ಎಂದು ಮಾಹಿತಿ ನೀಡುತ್ತದೆ. ಅಂದರೆ ಪರ್ವತನಾಥನೆಂಬ ಪ್ರಸಿದ್ಧ ಕುದುರೆ ಇದರ ಮೇಲೆ ಇರುವ ಹಂದಿಯನ್ನು ಕಂಡು ರಾಜನು ಹೆದರುವ ಸಂದರ್ಭವನ್ನು ವರ್ಣಿಸಲಾಗಿದೆ."[೫೫]

ಕಳ್ಳಂಬಾಳು ಶಾಸನವೊಂದು "ದೇವರ ವಸಯ ಮುಂದೆ ಮುರಾರಿನು........ ಶಾಸ್ತ್ರ ಸಹಂ ಸಹಲ...... ತುರಗ..... ಮವನಚಮಮುಖ ಜೆ ಸ್ವ ಬಾಜೋ ..... ಎಂದು ತಿಳಿಸಿದ್ದು ಆದರೆ ಇದು ತ್ರುಟಿತವಾಗಿರುವದರಿಂದ ನಮಗೆ ಕುದುರೆಯ ಉಲ್ಲೇಖ ಬಿಟ್ಟು ಬೇರೆಯಾವುದೇ ಮಾಹಿತಿ ತಿಳಿಯಲು ಸಾಧ್ಯವಾಗುತ್ತಿಲ್ಲ."[೫೬]

ನಂಜನಗೂಡ ತಾಲೂಕ ೩೯೮ "ಶಾಸನ.... ತ. ಇತಿ ರುಷಾ ಕಿಂ. ನು ಸಪ್ತಾಂಬುರಾನೊನ್ನಾನಾ ಸೇನಾತುರಂಗ ತ್ರುಟಿತ ವಸ್ತು.... ಮತಿ.... ಎಂದಿದೆ ಹಾಗೆಯೇ ಹುಲಿಯ ಜಂಗುಳಿಯ ಕೇತನು ಹೆಣ್ಣು ಸೆಱೆ ಗೋಮಹಿಷಿಗಳ ಮಾಗಳ್ಚಿ ತುರಗಕಳನಿಱಿದು ಸುಭಟರ ಕೊಂದು ಸುರಲೋಕ ಪ್ರಾಪ್ತನಾದ.... ಎಂದು ವರ್ಣಿಸಿದೆ."[೫೭]

"ಚಂಗಾಳ್ವನ ಹರಿಯಲ್ಲಿ ಕುದುರೆಜ್ಞಾ"[೫೮]....... "ಸಕಲ ವಿದ್ಯಾವಂತರಾದ ಪ್ರಾತಭೂತರಾದ ಬ್ರಾಹ್ಮಣೋತ್ತಮರಿಗೆ ಯಾ ದಿನದಲು ನಾಲು ಮಾಡಿದ ಗಜದಾನ. ಅಶ್ವದಾನ ಮುಂತಾದ ಅನೇಕ ದಾನವಂಲ.... ಹೇಳಿದೆ."[೫೯]

"ಲಕ್ಷ್ಮೀ ವಿಳಾಸದ ದೇವಾಂಬಾ ಅಗ್ರಹಾರವೆಂದು ಹೆಸರನಿಟ್ಟು ಮಹೀಶೂರು ಕೋಟ್ಟೆಗೆ ಪಶ್ಚಿಮಭಾಗ ಖಾಸ ಕುದುರೆಲಾಯಕ್ಕೆ ಬಂದ ಪಾರ್ಶ್ವದಲ್ಲಿ ಇಪ್ಪತ್ತೊಂದು ಮನೆಗಳ ಕಟ್ಟಿಸಿ ಅಗ್ರಹಾರ ಪ್ರತಿಷ್ಠೆಯಂ ಮಾಡಿ. ಯೀ ಅಗ್ರಹಾರಕ್ಕೆ ಎಂಬ ಉಲ್ಲೇಖ ಬರುತ್ತದೆ."[೬೦]

"ಮಹಿಶೂರ ಕೋಟೆಗೆ ಪಶ್ಚಿಮಭಾಗ ಖಾಸ ಕುದುರೆ ಲಾಯಕ್ಕೆ ಯಡ ಪಾರ್ಶ್ವ ಲಕ್ಷ್ಮೀ ವಿಳಾಸದ ನಂ. ಮಕ್ಕಾಜಿಯವರ ಅಗ್ರಹಾರಕ್ಕೆ"[೬೧] ....

"ಮಹಿಶೂರ ಕೋಟೆಗೆ ಪಶ್ಚಿಮಭಾಗದಲ್ಲಿ ಇರುವ ಇನ್ನೊಂದು ಶಾಸನದಲ್ಲಿ ಕುದುರೆಯ ಕುರಿತ ಉಲ್ಲೇಖಗಳನ್ನು ಕಾಣಬಹುದು"[೬೨] .....

"೧೮೩೭ ರ ಶಾಸನ .... ಬೆಳ್ಳಿ ಸಿಂಹಾಸನ ನಿಮಗೆ ಪಟ್ಟದ ಕುದುರೆ ಕಾಲಲ್ಲಿ ಯಿದ್ದ ಬೆಳ್ಳಿ ಗಗ್ರ ಕ್ಕೆಗೆ ಬೆಳಿ ಘಂಟೆ ಸಹ ಬಿರುದು ಕೊಟ್ಟು ಯಿದ ಸ್ಥಳಕ್ಕೆ ಸಂಸ್ಥಾನದಿಂದಾ ಕಳುಹಿಸಿಕೊ"[೬೩]...

“.......ಭಿಕ್ಷಾತುಂಬಿ ದೇವರಿಗೆ ಕೊಟ್ಟ ಪಾಲಖಿ, ೧. ಛತ್ರಿ, ೧ ಶ್ವೇತಛತ್ರಿ ಅಪ್ತಾಗಿರಿ. ೨ ಚವುರಿ, ೨. ಬೆಳಿಕೋಲು ಜೊತೆ ೧ ಕುದುರೆ ಮೇಲೆ ಡಂಕೆ -೧ ಆನೆ ಮೆಲೆ ಜಿರಿ ಪಟಕ ಸಾಹ ೧ ವಂಟೆ ೧ ಘಂಟೆ ಹಾಕಿದ ಭಂಗಾರದ ತೊಡೆ”[೬೪]

“೧೮೬೦ರ ಶಾಸನ.... ಸಂಖ್ಯಾರತ್ನ ಕೋಶ ೧ ಗ್ರಹಣ ದರ್ಪಣ ೧ ದಶಾವಿಭಾಗ ಪ್ರದೀಪಿಕಾ ೧ ಪೂರ್ಣತಾರಾಜ ನನ್ಮೋಹನಾದಿ ವಿಚಿತ್ರ ತರತುರಗ ಪ್ಲುತಿ ವಿಲಸಚ್ಚಕ್ರ ಪರಿಶೋಭಿತ ಚತುರಂಗ ಸಾರಸರ್ವಸ್ವ”[೬೫].....

“ಪೊಲೆಕೇಸಿಯಾಡತಿ ಕುದುರೆ ಕಾಜಿನ ಕೊನ್ದು ಸುತ್ತ”[೬೬]....

“೧೩೯೮ರ ಸಿಂಗನಲ್ಲೂರು ಶಾಸನ. ಮೆಣಸು, ಸೀರೆ, ಉಪ್ಪಿನಕಾಯಿಲಿ ನೂಲು ಇದಕೆ ಹೇಜುಗೆ ತಾ ೧ ಕುದುರೆ ಭಂಡಿ ತೊತ್ತುಯಿ”[೬೭].... ಎಂದು ವರ್ಣಿಸಿದೆ.

“ತಿರುಮ ಕೂಡಲು ನರಸೀಪುರ ೧೬೧೨ರ ಶಾಸನ ಕಾಶ್ಯಪೋಯಂ ವೃತ್ತಿಮೇಕಾಮಿಹಾಶ್ನುತೇ ಕಾಶ್ಯಪಸ್ತಿಂಮಣಾರಾಧ್ಯ ಸುತಶ್ಚೈವಾಶ್ವಲಾಯನ”[೬೮]....

ಕಂಪಲಾಪುರ ಶಾಸನ ಕೋಟೆಯ ಕಪ್ಪೆಯ ಮಾದೆಯ ನಾಯ್ಕರಿಗೆ ಉಯಿಣಬಾಳು ಹತು ಕುದುರೆಯ ಬಾಳಿಕೆಯನೂ ಕೊಟ್ಟ ಆ ಮದೆಯನಾಯ್ಕನ ಸವೂರಣೆಯ ಕಂದಾಯಕೆ ಕಪ್ಪನಾಡೊಳಗೆ ಕೋಟೆ”[೬೯]ಎಂದು ವರ್ಣಿಸಿದೆ.

“೧೭೨೦ ಸೋಸಲೆ ಗ್ರಾಮದ ಶಾಸನವು ಸ್ವಾಮಿದ್ದು ರೋಗಿಯಳ್ ಮಿಣ್ಡನ್ ಕೊಟ್ಟ ಮಡಕ್ಕಿ ತುರಗದೇವನ್ದನ್ ಸುತ್ತಿಯಬಾಸಾ ಅರಿಚ್ಚನ್ದಿರನ್”[೭೦].... ಎಂದು ವರ್ಣನೆ ಮಾಡುತ್ತದೆ.

.... “ತಡಿಮಾಲಿಂಗಿ ಶಾಸನ ಕಾಲ ೧೨೯೦ ... ಹೊಗಿಪ್ಪಣ ಹೊಡಕೆ ಕಾಣಿಕೆ ವೊಸಗೆ ಉತ್ಸಾಹ ಪಟ್ಟಿ ಬಂದ ಪುತ್ರೋತ್ಸಾಹ ಆನೆಯಸೆಸಿ, ಕುದುರೆಯಸೆಸಿ ಊರದಳ ಬ್ರಯ ಅರಮನೆ ಇದಂ”[೭೧]..... ಅರಸನಾದವನು ತನ್ನ ಮಗನ ಆನಂದ ಮತ್ತು ಹುಟ್ಟುಶಬ್ದದ ನಿಮಿತ್ತ ಕುದುರೆ ಮತ್ತು ಆನೆಯನ್ನು ದಾನ ಮಾಡಿದ ವಿವರವನ್ನು ಶಾಸನ ಸ್ಪಷ್ಟಪಡಿಸುತ್ತದೆ.

..... “ನಾಗಮಂಡಲಶಾಸನ ತನದಯ್ಯ ಅದ್ದಿಯಾಪಳ್ರಿಯೊಳ್ ತುಜುಗೊಳೊಳ್ವತ್ತಮಜ್ಜಳ ಮಹಶ್ರೀಂ”[೭೨].........

........“ಕುದುರೆನಾಕನಕಣ”[೭೩]........ (ಶಿವನಹಳ್ಳಿ, ೧೭, ೧೮ನೇ ಶತಮಾನ)

“ಉದ್ದೂರು ಗ್ರಾಮದ, “ಆಲನಾಯಕನ ಬಾಗಿಹಳ್ಳಿ ಗಟ್ಟಿನ ತುಜು, ಎತ್ತು ಕೊಂಡು ಕಳ್ಳರು ಹೋದಲ್ಲಿ”[೭೪] ಎಂದು ಮಾಹಿತಿಯನ್ನು ಒದಗಿಸುತ್ತದೆ.

೧೨೭೧ರ ಬೆಳ್ಳೂರು ಶಾಸನ- "ಸಿದ್ಧಾಯ ಖಾಣ ಅಭ್ಯಾಗತೆ ಕಿಱುಕುಳ ಪಟ್ಟಬದ್ಧ ಪುತ್ರೋತ್ಸಾಹ ಆನೆಯಸೇಸೆ ಕುದುರೆಯಸೇಸೆ ಬಿಟ್ಟ ಸೊಲ್ಲಗೆ ಅಳಿವನ್ಯಾಯ ಮಳಬ್ರಯ ಕಟ್ಟು....."[೨೫] ಎಂದು ಆನೆ ಮತ್ತು ಕುದುರೆಯ ಸೊಸೆ ಬಿಟ್ಟ ಹಣವನ್ನು ಕುರಿತು ವಿವರ ಒದಗಿಸುತ್ತದೆ.

ದೊಡ್ಡಬಟಕ ಗ್ರಾಮದ ಶಾಸನವು ೧೫೧೨ರಲ್ಲಿ ಈ ರೀತಿಯಾಗಿ ಮಾಹಿತಿ ನೀಡುತ್ತ "ಶುತ್ರುಣಾಂ ವಾಸಮೇತೇ ದದತ ಇತಿರುಷಾ ಕಿಂನು ಸಪ್ತಾಂಬುರಾಶೀನ್ ನಾನಾ ಸೇನಾ ತುರಂಗ ತುಟಿತ ವಸುಮತೀ ಧುಳಿಕಾ ಪಾಲಿಕಾಭಿ"[೨೬].... ಎಂದಿದೆ

"ದೇವರಹಳ್ಳಿ ಶಾಸನ ಕಾಲ ೭೭೬-೭೭ರಲ್ಲಿ ನಾರಾಯಣ ನಿಹತಭಕ್ತಿ ಶೂರ ಪುರುಷ ತುರಗ ನರವಾರಣ ಘಟಾಸಂಘಟ್ಟ ದಾರುಣ"[೨೭]... ಎಂದು ಉಲ್ಲೇಖಿಸುತ್ತದೆ.

"ದೊಡ್ಡ ಗದ್ದವಳ್ಳಿ ಶಾಸನ ಕಾಲ ೧೨೦೯. "ಶ್ರೀ ಭೂತನಾಥ ದೇವರಾಳುವ ಹಳ್ಳಿಗಳೊಳಗೆ ಘಟ್ಟಾವಳಿಯಲು ಆನೆ ಮಾಣಿಕ ಕುದುರೆ ಅಡಕೆ ಅರಸಿನ ಮೆಣಸಿನಭಾರ ಎಲೆಯಕ್ಕಿ ಉಪ್ಪು ಆವ ಭಂಡವ ಹೇಱೂದಡಂ...."[೨೮]

"ಗದಲು ಕುದುರೆಗಾಳದ ಕಾದಿ....ಜಯರಾಹು"[೨೯] ಎಂದಿದೆ. ಹಾಗಲಹಳ್ಳಿ ಗ್ರಾಮದ ಶಾಸನ ಕಾಲ ೧೩೯೨... ವರ್ತಮಾನರಾಜ ಪರಮೇಶ್ವರ ಪೂರ್ವ ಪಶ್ಚಿಮ "ದಕ್ಷಿಣ ಸಮುದ್ರಾಧಿಪತಿ. ಅಶ್ವಪತಿ, ಗಜಪತಿ, ನರಪತಿ ತಿನಿರಾಯಾಂಬಾ ಮುಲ"[೩೦].... ಎಂದು ವರ್ಣಿಸಿದೆ.

ಧನಗೂರು ಶಾಸನ ಕಾಲ ೧೪ನೇ ಶತಮಾನ... "ಕೊಜ್ಞಾಯರ್ ರೆಮಿನೂ ಱುವ್ ಕೊಜ್ಞಾರಿಳಇ್ಙ್ಚ್ಞಾರುಮ್ ಕುದಿರೈ ಶೇವ ಗರುಮ್ ವಲಜ್ಜೈವೇ"[೩೧]... ಎಂದಿದೆ.

ಇಂದಾವಾರ ಶಾಸನಕಾಲ ೧೨೯೨..... "ಆ ಪಾಂಡ್ಯ ದೇವ ಮಹಾದೇವನ ಮೇಲೆ ಎತ್ತಿನಡದು ಹೊಂನೂರ ಹೊಳೆಯ ಕುದುರೆಗಾಳಗವಾದಲ್ಲಿ ಸ್ವಸ್ತಿ ಶ್ರೀಮತುಬೆಲುಹೂರ ಶ್ರೀಚೆಂನಕೇಶವ ದೇವರ ದಿವ್ಯಶ್ರೀ..."[೩೨] ಎನ್ನಲಾಗಿದೆ.

"ಉಭಯ ಬಲ್ಲಣೆ ಬಹರಿಯ ಯೇಱದ ಕುದುರೆಯನುಮಿಱಿದ ಕಾಲಾಳನು ತಿವಿದು ಸುರಲೋಕ ಪ್ರಾಪ್ತನಾದನು ಯೀ ಕಲ್ಲಪೂಜಿಸುವ"[೩೩] ಎಂದು ಮಾಹಿತಿ ನೀಲಾಗಿದೆ.

ಕದಿರುಮದಿರೆ ಶಾಸನ ೧೪ನೇ ಶತಮಾನ "ಯಗಟ್ಟಿ ಕುದುರೆಯದ"[೩೪] .... ನಿಲಿಸಿದ ಎಂದು ಉಲ್ಲೇಖಗೊಂಡಿದೆ.

ಬೇಲೂರು ಶಾಸನ ಕಾಲ ೧೩೯೭ .... "ಬೆಂಬತ್ತಿ ಪೊಯ್ಯುಲ್ಕೆ ಬಿರ್ದ್ದತ್ತುರ್ತುರಗಂ ರಾವತರ್ಗ್ಗಜಂ ಜೋದರು ಬಹಳ ಪದಾತಿ ಪ್ರತಾನಂ"[೩೫] ಬೆನ್ನಟ್ಟಿಕೊಂಡು ಹೋಗುತ್ತಿದ್ದ ತುರಗ ಕಳ್ಳರನ್ನು ರಾವುತರು. ಪದಾತಿ ಸೈನ್ಯ ತಡೆಯಿತು ಎಂದು ವರ್ಣಿಸಿದೆ.

ಕರ್ರೆಗಾಲು ಶಾಸನ ಕಾಲ ೧೧೪೦-೪೧... "ಹಾನುಗಲುನಾಡ ತುಱುವಜಯ ಕೇಸಿಯ ಕುದುರೆ ಕಾದಿ ತುಱುವಂನುಯ್ವಲ್ಲಿ ಕಾದಿ ಕುದುರೆಯ ಹಿಡಿದು ತುಱುವಂ ಮಗುರ್ಚ್ಚಿ ಸುರಲೋಕ ಪ್ರಾಪ್ತನಾದ॥ ಶ್ರೀ"[೮೬].... ಹಾನುಗಲುನಾಡ ತುರುವ ಜಯಕೇಸಿಯು ಕುದುರೆಯ ಜೊತೆ ಕಾದು ಕುದುರೆಯನ್ನು ಹಿಡಿದು ತುರುವಲ್ಲಿ ಮಗುಚಿಬಿದ್ದು ಸುರಲೋಕ ಸೇರಿದನು ಎಂದು ವರ್ಣನೆ ಮಾಡುತ್ತದೆ.

ಆಲ್ದೂರು ಶಾಸನ ಕಾಲ ೧೧೧೬-೧೭ .... "ಹೊಯ್ಸಳ ಬಿಟ್ಟಿದೇವನು ಪಾಂಡ್ಯನ ಮೇಲೆತ್ತಿ ದೆಂಮ್ಮೆಯ ಕಾಳೆಗದಲು ಆನೆಯಘಟ ಕುದುರೆಯದಳ ವೆತ್ತಿದಲ್ಲಿ ಆರುಂದೂರ ಲೆಂಕ ಮಾಚಂಣ ಇಮ್ಮುಡಿ ಜೀವಿತಕ್ಕೆ"[೮೭].... ಎಂದು ವರ್ಣನೆ ಮಾಡುತ್ತದೆ.

ಕೆಳಗೂರು ಶಾಸನ ೧೧೨೫- "ಬಿದಿರೂರ ಮುಱುವನ ಹಿಸಹಾನುಂಗಲಕೋಟೆಯಲು ಆನೆಯ ಕುದುರೆಯದಳ ಹೊಸ್ಸದೇವರು ಬೆಸಸಲು"[೮೮].... ಎನ್ನಲಾಗಿದೆ.

ಕೆಳಗೂರು ಕಾಲದ ೧೧೨೫ರ ಶಾಸನವೊಂದು "ಬಿದಿರೂರ ರಕ್ಕಸ ಮೊನೆಯೊಳ್ವದೇವ ಈ ಯಾನೆಯ ಕುದುರೆಯದಳದಲು ಹರಿದಿಱಿಯಲು ಕಯ್ಯ ರಾ ಬುತವಲು ದೇವಂಣಗೆ ಬಿನ್ನಪಂಗೆಯ್ಯಲು"[೮೯].... ಎಂದು ಮಾಹಿತಿಯನ್ನು ಒದಗಿಸಿದೆ.

ಬಳ್ಳೂರು ಶಾಸನ ಕಾಲ ೧೧೪೫... "ದಣ್ಣನಾಯಕ ನಾಗಸೆಟ್ಟಿ ಆಕುದುರೆಯದಳಮಂ ತಳ್ತಿಱಿದು ಸುರಲೋಕ ಪ್ರಾಪ್ತನಾದ ಮಸಣೋಜನ ಮಾತೋಜ ಕಲಿಊರ ವಿಸ್ವಕರ್ಮ್ಮಮಾ"[೯೦] ಎಂದು ವಿವರಣೆ ನೀಡುತ್ತದೆ.

ದಬ್ಬೆ ಅಗ್ರಹಾರ ಶಾಸನಕಾಲ ೧೧೩೮ ... "ಹೊಯ್ಸಳಂ ನೋಡುತಿರಲು ತಾನಿಱಿದು ಕೊಂದನಿದಿರನ್ಲಾನೆಯ ಕುದುರೆಯದಳಂಗಳಂ ಕಲಿರಾಯಂ"[೯೧] ಎಂದು ವರ್ಣಿಸಲಾಗಿದೆ.

"ಎತ್ತಿದ ಮೊನೆಯೊಳು ರಾಯಂ ಕುತ್ತಲು ಕಾಲುಳು ಕುದುರೆಯುಂ ಮೇಲಾಳಂತೆತ್ತ ಮುರುಳ್ಪಡೆ ಪೆಣನಂ ಬಿತ್ತಿದ"[೯೨].....

ಕಸಿಗೆಯ ೧೧೨೭ ಶಾಸನ "…. ಕಡಗುಳದ ಮೂವತ್ತಱ ಬಟ್ಟ ವೆಗ್ಗಡೆಯ ಮಗಡಾಣ ವೆಗ್ಗಡೆ ಬಳುಹದ ಕೊಪ್ಪಲಿದ ಆನೆಗಟ ಕುದುರೆಯದಳ ಎತ್ತಿದಲಿ ಕುಡಹಳ್ಳಲಿ ಹೆಣದಿಱಿದು ಬಿದು ಸುರಲೋಕ"[೯೩].....

ಕೆಂಕೆರೆ ಶಾಸನ ಕಾಲ ೧೧೯೫ .... "ಚಟ್ಟಿ ರತ್ನಾವಳಿಯಪ್ಪ ಕೆಂಕೆರೆಯ ಮಹಾಜನಂಗಳ ತುಱಿವಂ ಕಳ್ಳರು ಕೊಂಡು ಹೋಹಲ್ಲಿ ಹುಯ್ಯಲಂ ಕೇಳ್ದು ಎಯ್ದಿ ಕಾದಿ ಹಲಂಬರಂ ಕೊಂದು ತುಱುವಂ ಮುಗುಳ್ಚಿ ವೀರಗಲಿಯಾಗಿ ಸುರಲೋಕ ಪ್ರಾಪ್ತನಾದಲ್ಲಿಗೆ ಮಹಾಜನಂಗಳು ಮೆಚ್ಚಿಕೊಡೆ ಕುದುರೆ ತಂಬಟ ಸಹಿತಂ"[೯೪]....

ಕೆಂಕೆಜೆಯ ಮಹಾಜನಂಗಳ..... "ತುಱಿವಂ ಮುಗುಳ್ಚಿ ವೀರಗಲಿಯಾಗಿ ಸುರಲೋಕ ಪ್ರಾಪ್ತನಾದಲ್ಲಿಗೆ ಮಹಾಜನಂಗಳು ಮೆಚ್ಚಿ ಕೊಡೆ ಕುದುರೆ ತಂಬಟ ಸಹಿತ ವೀರಕೊಡಗಿ...."[೯೫]

ಹಳೇಬೀಡು ಶಾಸನ ಕಾಲ ೧೨೭೬.... "ಯಣಗಟ್ಟಲಿ... ಕುದುರೆಗಳ ತಿವಿದು ವೀರನಾರಸಿಂಹ ದೇವನ ಸಮಯಕ್ಕೆ ವೊದಗಿ, ಸಿತಗರ ಗಂಡ...."[೯೬]

ಕಳಸಾಪುರ ೧೧೭೮ರ ಶಾಸನ.... "ತ್ರಿಹೇರಿಂಗೆ ಹಾಗವೆರಡು ಕತ್ತೆಯ ಹೇರಿಂಗೆ ಹಾಗ ಒಂದು ಕುದುರೆ... ಕಪ್ರೂರ್ವರ ಪಟ್ಟನೂಲಂಡಕ್ಕೆ ಹಣವೊಂದು"[೯೭].....

ನಂದಿಪುರ ೧೧೯೪ರ ಶಾಸನ.... "ಚತುರಂಗಬಲದಿಂ ಮುತ್ತಿದಲ್ಲಿ ಅಲ್ಲಿನಾಳು ಕುದುರೆಯಂ ಕೊಣ್ಡು ರಣರಂಗದೊಳು ಸರಜಜರಿತನಾಗಿ ಬಿದ್ದ ಬಲ್ಲರ...ಳನು"[೯೮]...

ಪಂಡಿತನಹಳ್ಳಿಯ ೧೧೪೫ರ ಶಾಸನ.... "ಬೀರಶ್ರೀಯುಮಂ ಕೂರಿಸಿಕೊಂಡು ಸುರಲೋಕ ಪ್ರಾಪ್ತನಾದ ಕುದುರೆಯುವಂ ಮೇಲಾಳುಮನದಿಂದೆ ಕೊಂದಿಕ್ಕಿ ತನ್ನ ಭುಜ ಬಳದಿಂದ ......ಮಾಗಿದಿರ್ಚ್ಚಿ ಪಾಯಿಸಿ ಮುದೆದೆ ಜಯಾಂಗನೆಯ ನೊಲಿಸಿದಂ ಕಲಿ ಬಲ್ಲಂ ಎತ್ತಿದ ಕುದುರೆಯ ದಳಮಂತೊತ್ತುಳದುಳಿ...."[೯೯]

ಚಿಕ್ಕೋಲೆಯ ಶಾಸನ .... "ಚಿಕ್ಕಕೊಲೆಯ ಒಮವ ಗವುಡನ ಮಗ ಬಮಚ ಕುದುರೆಯ ತಿವಿದು ತುಱಿಹರಿವಲ್ಲಿ ಬಿದುಸುರಲೋಕ ಪ್ರಾಪ್ತನಾದ"[೧೦೦]....

ಭೈರೆ ಬೇಲೂರ ದೇವರಗುಡ್ನ ಶಾಸನ ೧೨೭೬ ಕಾಲ "ಗ್ರಾಗಣಿ ಪ್ರತಾಪರಾಜದ ಕುದುರೆಯ ಮಿಡಿವ ರಾಹುತರಗಂಡ ಹೊಸ ಗುಂದದಲಿ ಕಂಡಿದಲರುಯಣ....."[೧೦೧] ಎಂದು ಗುಣಗಾನ ಮಾಡಿದೆ.

ಬಸವನಪುರ ಕೊಪ್ಪಲು ಶಾಸನ ಕಾಲ ೧೬೭೦..... "ಧೀರ ಶೂರತ್ವಕೆ ಮೆಚ್ಚಿ ಛತ್ರಿ ಸೂರಿಪಾನಾ ಅಂದಲಾಹಿವೆ ಕುದುರೆವೆಂಟೆ ಕಬಹಳೆ ತಂಬಟಿ ಕಂಚಿನಮರ್ಫ....."[೧೦೨] ಎಂದಿದೆ.

ನಂಜನಗೂಡು ತಾಲೂಕಿನ ನಂಜನಗೂಡು ಶಾಸನ ಕಾಲ ೧೮೪೭ ಇದು ಕುದುರೆಯ ಆಭರಣದ ಬಗ್ಗೆ ವಿವರವಾದ ಮಾಹಿತಿಯನ್ನು ನೀಡುತ್ತದೆ.

"೧. ಶ್ರೀಗರಳಪುರಿ ಶ್ರೀ ಕಂ

೨. ಠೇಶ್ವರಸ್ವಾಮೀಯವರ ಸಂನಿಧಿಗೆ ಸ್ವಸ್ತಿಶ್ರೀ

೩. ವಿಜಯಾಭ್ಯುದಯ ಶಾಲೀವಾಹನ ಶಕವರ್ಷಂಗಳು

೪. ೧೭೬೯ನೆ ಸಂದ ವರ್ತಮಾನವಾದ ಪ್ಲವಂಗನಾಮ ಸಂವತ್ಸ

೫. ರದ ಕಾರ್ತೀಕ ಶುದ್ಧ ೧೫ ಸೋಮುವಾರದಲ್ಲು ಶ್ರೀ ಮನ್ಮಹಿ

೬. ಶೂರ ಮಹಾಸಂಸ್ಥಾನದ ಶ್ರೀ ಮತ್ಸಮಸ್ತಭೂಮಂಡಲೇತ್ಯಾ

೭. ದಿವಸಮಸ್ತ ಬಿರುದಾಂಕಿತರಾದ ಶ್ರೀ ಕೃಷ್ಣರಾಜ ಮಹಾರಾ

೮. ಜ ಕಂಠೀರವರು ಮಾಡಿಶಿವಪ್ಪಸಿದ ಸುವರ್ಣರಜತಗ

೯. ಳಿಂದ ನಿರ್ಮಿತಮಾದ ಉಚ್ಚೈಶ್ರವಸ್ಸೆಂಬ ಅಶ್ವ

೧೦ ವಾಹನ ಸೇವಾರ್ಥ

ಎಂದು ಶಾಸನ ಪಾಠ ಇದೆ.

ಅದೇ ಕುದುರೆ ವಾಹನದ ತಾಮ್ರದ ತಗಡಿನಲ್ಲಿ -ಶ್ರೀ ಕಂಠೇಶ್ವರಸ್ವಾಮಿ ಸಂನಿಧಿಗೆ ಶ್ರೀ ಕೃಷ್ಣರಾಜ ಕಂಠೀರಸರು ಶಕವರುಷ ೧೭೬೯ನೇ ಪ್ಲವಂಗ ಸಂ ಕಾತೀಕ ಶು ೧೩ ರಲ್ಲು ವಪ್ಪಿಸಿದ ಸುವರ್ನರಜತಮ ನಿರ್ಮಿಸಿದ ಉಚ್ಚೈಶ್ರವಸ್ಸೆಂಬ ಅಶ್ವರತ್ನದ ಆಭರಣದ ಲೆಖ್ಖಾ

ಚಿಂನದ ಮುಲಾವಿನ ಸಾಮಾನಿನ ವಿವರ

೧ ವಿಲಾಸದ	೪ ಅನೀನು ೨ ಹಂಡೆ ೧ ತನಾನು ೧ ಸಹಾ...
೧ ವಿಭೂತಿ ರೇಖೆ	೨೦ ಜಡೆಗಳು
೧ ತುರಾಯಿ ಪೀಠಸಹ	೧ ಸಿಂಹದ ತಲೆ
೧೮ ಚೊಟ್ಯಾಲು ಗುಬ್ಬಿ	೧೮ ದುಮಜಿ ಗುಬ್ಬಿ
೧ ಯಿದರ ಕೆಳಗಣ ಪಟ್ಟಿ	೨ ಯಿದರ ಕೆಳಗಣ ಪಟ್ಟಿ
೭ ಮೊಕ ಪಟ್ಟಾ ಪಟ್ಟಿಗಳು	೧ ಬಾಲದ ಕೆಳಗಣ ಹಗ್ಗ
೭ ಯಿದಕ್ಕೆ ಗುಬ್ಬಿ ಮೊಳೆ	೧ ತಂಗು ಪಟ್ಟಿ
೧ ಹೆಣೆಹುವು	೨ ರಿಕಾಬು
೬ ಪಟ್ಟಾದ ಮೂಲೆಹುವು	೨ ರೆಕ್ಕೆ
೧ ಕೊಂಡಿಮಳೆ	೪ ಕಾಲುಕಡಗ
೨ ಕುತ್ರಾಸು ಹಗ್ಗ	೨ ಮುಂಗಾಲಿಗೆ ತೋಡೆ
೧ ಯಿದಕ್ಕೆ ಘಂಟೆ	೪ ಕಾಲುಮೇಲುಗಡೆಹುವು
೧ ನಾಲಿಗೆ	೨೪ ಲಾಳದ ಮೊಳೆ

೫ ಜೇರುಬಂದುಕುಚ್ಚು	೫೪ ಗೆಜ್ಜೆಗಳು
೪೬ ಮಾವಿನ ಕಾಯಿ	೨೦ ಚಿಕ್ಕತಾಳಿ
೨ ಯಿದಕ್ಕೆ ಹಗ್ಗದ ಪಟ್ಟಿ	ಗಂಗಾ ಜಮುನಾ ಸಾಮಾನು
೧೬ ದೊಡ್ಡ ತಾಳಿಗಳು	೩ ಕಾಪಡೆ ೧ ಕೋಗೀರು ೨
೧ ಯಿದಕ್ಕೆ ಹಗ್ಗದ ಪಟ್ಟಿ	೬ ಕಿವಿ ೨ ಪಾದ ೪ ಬಾಲ ೧
೨ ಲಗಾಮು ತುಂಡು	೫ ಪಿಡಕಿ ೪ ಪ್ರಧಾನ ೧
೪ ಯಿದಕ್ಕೆ ಗುಬ್ಬಿ ಮೊಳೆ	೧ ಭಾಲೆ
ಈ ಸಾಲುಗಳ ಪಕ್ಕದಲ್ಲಿಯೇ	೬ಯರಕದ ದೊಡ್ಡ ಹುವು ೩ಸಂಣ ಹುವು ೪
೨ ಕಲಾಪತ್ತು ಕುಚ್ಚು	ದೊಡ್ಡ ಹುವು ಸಂಣ ಹುವು
ಬೆಳ್ಳಿ ಮುಲಾವಿನ ಸಾಮಾನು	
೧ ಬೆಂನು ಮೇಲೆ ಕಮಲ	೪೮ ಆರುಧಳದ ಹುವು
೨ ರಿಕಾಬಿನ ಕೊಂಡಿಮಳೆ	೪ತಳುಕು
೧ ಹಲಿಗೆ ಮೇಲಣ ಸದರು ಮೊಹರ	೪೯ ದೊಡ್ಡ ಘಂಟೆ
೨ ನಗದಾಚವುರೀ	೬ ಯಡತರದ ಘಂಟೆ
	೪೦ ಸಂಣ ಘಂಟೆ
	೪ ಮಾವಿನಕಾಯಿ ಮೋತೆ
ಹಿತ್ತಾಳೆ ವಗೈರೆ ಸಾಮಾನು	
೧ ಯೇಳು ಅಂತಸ್ತಿನ ಕಮಲ	೧೫೨ ಗಾಲಿಚಕ್ರಕ್ಕೆ
೧ ಕಿರಣದ ಹುವು	೪೮ ಅಷ್ಟದಳ ಹುವು
೧ ಯರಕದ ದೊಡ್ಡಹುವು	೪೮ ತಳುಕು
೨ ದೊಡ್ಡ ಕಮಲದ ಹುವು	೪೮ ಅರಳೆಲೆ
೪ ಗುಂಭ	೧೦ ಕಟಕಟೆ ತುಂಡು

೪ ಕಬ್ಬಿಣದ ಬಳೆ	೪ ಮುತಾಕಲು ಪಟ್ಟಿ
೫ ಲೆಖ್ಖದ ತಾಮ್ರದ ತಗಡು	೧೮ ಚೌಕದ ಕಮಲ
೬೦ ಮರದ ಸಾಮಾನು	೧ ರತ್ನಕಂಬಳೀ ಬಟುವು
೨ ಸಿಂಹ	೧ ಕಾರ್ವೆ ಭುರುಕಿ
೧೬ ಮೊರೆ	೧ ಮಾಮುಜಾಮು ಭರಕಿ"[೧೦೩]

ಈ ಶಾಸನವು ಅತ್ಯಂತ ಮಹತ್ವದಾಗಿದ್ದು ಶ್ರೀಕೃಷ್ಣರಾಜ ಕಂಠೀರವ ಅರಸರು ಶಕವರುಷ ೧೭೯ನೇ ಪ್ಲವಂಗ ಸಂವತ್ಸರ ಕಾರ್ತಿಕ ಶುದ್ಧ ೧೩ರಂದು ಶ್ರೀಕಂಠೇಶ್ವರ ಸ್ವಾಮಿಯ ಸನ್ನಿಧಿಗೆ ಉಚ್ಚೈಶ್ರವಸ್ಸೆಂಬ ಅಶ್ವರತ್ನದ ಕುದುರೆಯ ಆಭರಣವನ್ನು ಮಾಡಿಸುವುದರ ಸಲವಾಗಿ ಬರೆಸಿದ ಶಾಸನವಿದು. ಚಿನ್ನದ ಮತ್ತು ಬೆಳ್ಳಿ, ಹಿತ್ತಾಳೆಯ ಸಾಮಗ್ರಿಯನ್ನು ಒಳಗೊಂಡ ಶಾಸನ ಇದಾಗಿದ್ದು, ರಾಜನ ಭಕ್ತಿ, ಪ್ರೀತಿ, ಧಾನಧರ್ಮದ ಪರಾಕಾಷ್ಠತೆಯನ್ನು ತಿಳಿಸುವ ಉಪಯುಕ್ತ ಮಾಹಿತಿಯನ್ನು ಒದಗಿಸುವ ಮಹತ್ವದ ದಾಖಲೆಯಾಗಿದೆ.

ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲೂಕು ಪರಶುರಾಮಪುರ ಹೋಬಳಿಯಲ್ಲಿರುವ ೧೮. ಕಿ.ಮೀ. ದೂರದ ಪುರ್ಲಹಳ್ಳಿಯ ಗ್ರಾಮವು ಪ್ರಾಚೀನ ಅವಶೇಷಗಳ ಚಾರಿತ್ರಿಕ ತಾಣ. ಸೂಕ್ಷ್ಮ ಶಿಲಾಯುಗ ಸಂಸ್ಕೃತಿ ಮತ್ತು ನವಶಿಲಾಯುಗ ಸಂಸ್ಕೃತಿಯ ಅಲಂಕಾರಿಕ ಅಥವಾ ಚಿತ್ರದ ಮಡಿಕೆ ಚೂರುಗಳು ದುಂಡಾದ ಸುಟ್ಟ ಮಣ್ಣಿನ ಅಲಂಕಾರಿಕ ಬಿಲ್ಲೆಗಳು, ಬೃಹತ್ ಶಿಲಾಯುಗದ ಸಂಸ್ಕೃತಿಯ ಅಲಂಕಾರ ಚಿತ್ರಿತ ಮಡಿಕೆ ಚೂರುಗಳು, ಕಬ್ಬಿಣದ ತುಂಡುಗಳು, ಸಮಾಧಿಗಳು, ಇತಿಹಾಸ ಆರಂಭಕಾಲದ ತಾಮ್ರದ ಉಂಗುರ, ದುಂಡಾದ ಕಲ್ಲಿನ ರಂಧ್ರವಿರುವ ಬಿಲ್ಲೆ, ಮುಂತಾದವುಗಳ ಜೊತೆಗೆ ವೀರಮಾಸ್ತಿ ಕಲ್ಲುಗಳು ಇವೆ. "ನೆಲೆಯಿಂದ ಸುಮಾರು ೧/೪ ಕೀ.ಮೀ.ದೂರದಲ್ಲಿ ಊರಿನ ಮಧ್ಯ ಭಾಗದಲ್ಲಿ ೫ ವೀರ ಮಾಸ್ತಿಗಲ್ಲುಗಳು ಇದ್ದು, ಈ ಶಿಲ್ಪಗಳಿಗೆ ಗ್ರಾಮಸ್ಥರು ಗುಡಿಗಳನ್ನು ಕಟ್ಟಿ ಪೂಜಿಸುತ್ತಿದ್ದಾರೆ.

"ಸ್ಥಳೀಯವಾಗಿ ಸಿಗುವ ಬಿಳಿ ಗ್ರಾನೈಟ್ ಕಲ್ಲನ್ನು ಬಳಸಿ ವೀರಮಾಸ್ತಿಕಲ್ಲನ್ನು ರಚಿಸಿದ್ದಾರೆ"[೧೦೪] ಈ ಶಿಲ್ಪವು ವಿಶೇಷವಾಗಿದ್ದು ವೀರ, ಕುದುರೆ ಲಗಾಮು ಹಿಡಿದಿದ್ದಾನೆ. ವೀರ ಆಭರಣ, ಅಲಂಕಾರಭರಿತನಾಗಿದ್ದಾನೆ. ಕುದುರೆಯ ಹಿಂದೆ ಸ್ತ್ರೀ ಕೈಮುಗಿದುಕೊಂಡು ನಿಂತಿದ್ದಾಳೆ. ಸ್ತ್ರೀಯು ಸಹ ಆಭರಣ ಅಲಂಕಾರಭರಿತಳಾಗಿದ್ದಾಳೆ. ಇದೆ ರೀತಿ ಇನ್ನೊಂದು ಚಿತ್ರದಲ್ಲಿ ವೀರ ಕುದುರೆ ಮೇಲೆ ಕುಳಿತು ಬಲಗೈಯಲ್ಲಿ ಖಡ್ಗವನ್ನು, ಎಡಗೈಯಲ್ಲಿ ಲಗಾಮನ್ನು ಹಿಡಿದು ಆಭರಣ ಅಲಂಕಾರಭರಿತನಾಗಿದ್ದಾನೆ. ಕುದುರೆ ಹಿಂದೆ ಇಬ್ಬರು ಸ್ತ್ರೀಯರು ಕೈಮುಗಿದುಕೊಂಡು ಆಭರಣ, ಅಲಂಕಾರಭರಿತರಾಗಿ ನಿಂತಿದ್ದಾರೆ. ಈ ಮಾಸ್ತಿ ವೀರಗಲ್ಲುಗಳು ೧೭-೧೮ನೇ ಶತಮಾನದವು ಎಂದು ಗುರುತಿಸಲಾಗಿದೆ.

೩.೫.೩. ದಿನಚರಿಗಳು

ಶಾಸನ, ಕೈಫಿಯತ್ತು, ಬಖೈರು, ನಾಮೆಗಳು ಮುಂತಾದ ಪ್ರಕಾರಗಳು ಪ್ರಾಚೀನ ಕಾಲದ ಇತಿಹಾಸ ಮತ್ತು ಸಾಹಿತ್ಯದ ಮೇಲೆ ಬೆಳಕನ್ನು ಚೆಲ್ಲುತ್ತವೆ. 'ದಂಡಿ' ಹೇಳುವಂತೆ ಭಾಷೆಯೆಂಬ ಬೆಳಗು ಬೆಳಗದಿದ್ದರೆ ಜೀವನವೆಲ್ಲ ಕತ್ತಲಮಯವಾಗುತ್ತಿತ್ತು ಎಂಬ ಅರ್ಥ ಇಲ್ಲಿ ಪ್ರಸ್ತುತವಾಗುತ್ತದೆ. ಪ್ರಾಚೀನ ಆಕರಸಾಮಗ್ರಿಗಳು ಸಿಗದೇ ಹೋದರೆ ಅಂದಿನ ಜನಾಂಗದ ಅಧ್ಯಯನ ಮಾಡುವುದು ಕಷ್ಟದ ಕೆಲಸವಾಗುತ್ತಿತ್ತು. ಆ ಹಿನ್ನೆಲೆಯಲ್ಲಿ ದಿನಚರಿಗಳು ಸಹ ಪ್ರಮುಖ ಪಾತ್ರವಹಿಸಿವೆ.

"ವ್ಯಕ್ತಿಯೊಬ್ಬ ತಾನು ಬದುಕಿದ ರೀತಿಯನ್ನು ತಾನೇ ಬರೆದು ಕೊಳ್ಳುವುದು ಆತ್ಮ ಚರಿತ್ರೆಯಾದರೆ, ಅದೇ ವ್ಯಕ್ತಿಯ ಬದುಕಿನ ರೀತಿಯನ್ನು ಬೇರೊಬ್ಬರು ಬರೆದರೆ ಅದು ಜೀವನ ಚರಿತ್ರೆಯೆನ್ನಿಸುತ್ತದೆ. ಈ ಎರಡೂ ಸಾಹಿತ್ಯ ಪ್ರಕಾರ ರಚನೆಗೆ ಪ್ರಮುಖ ಆಕರ ಸಾಮಗ್ರಿಯೆಂದರೆ ದಿನಚರಿ"[೧೦೫] ವ್ಯಕ್ತಿ ತಾನು ಮಾಡುವ ಕೆಲಸ ಕಾರ್ಯಗಳನ್ನು ಯತಾವತ್ತಾಗಿ ಬರೆದಿಡುವುದರಿಂದ ಅವನು ಮಾಡಿದ ಸಾಧನೆ ಮತ್ತು ಪ್ರಯತ್ನದ ಫಲಿತಗಳು ಅಧ್ಯಯನದ ಮೂಲಕ ವ್ಯಕ್ತವಾಗುತ್ತವೆ. ಇದರಿಂದ ಯತಾರ್ಥವಾದ ಮಾಹಿತಿ ದೊರೆತು ಮುಂದಿನ ಪೀಳಿಗೆಗೆ ಸಾಮಾಜಿಕ ಬದುಕು ಯಾವ ರೀತಿ ಇತ್ತು ಎಂಬ ಅರಿವು ಮೂಡುತ್ತದೆ. ಹಾಗಾಗಿ ದಿನಚರಿಗಳ ಅಧ್ಯಯನ ಮಾಡುವುದು ಅವಶ್ಯವೆನಿಸುತ್ತದೆ.

'ದಿನಚರಿಯೆಂದರೆ ಒಂದು ದಿನದ ಕೆಲಸ ಕಾರ್ಯಗಳ ವಿವರಣೆಯೆಂದು ತಿಳಿಯಬೇಕಾಗಿಲ್ಲ ಜೀವನದುದ್ದಕ್ಕೂ ಕೈಕೊಂಡ ಕಾರ್ಯಗಳ, ಘಟಿಸಿದ ಘಟನೆಗಳ ಅಂದಂದಿನ ದಾಖಲೆ, ಪ್ರಾಚೀನ ಮೀಮಾಂಸೆ ಕಾವ್ಯ ಹಾಗೂ ನಿಘಂಟುಗಳಲ್ಲಿ ಈ ಪದ ದಿನಚರ್ಯೆ, ಆಹೋರಾತ್ರಿಕಂ, ದಿನವಹಿ, ರೋಜು ಪುಸ್ತಕ ಎಂದು ಮುಂತಾಗಿ ಬಳಕೆಗೊಂಡಿದೆ. ಇಲ್ಲೆಲ್ಲ ಪ್ರತಿದಿನ, ದಿನಂಪ್ರತಿ ಮಾಡುವ ಕೆಲಸ, ಕೈಕೊಳ್ಳುವ ಕಲಾಪಗಳ ದಾಖಲೆ ಎಂಬರ್ಥ ಬರುತ್ತದೆ.

ಕ್ರಿ.ಶ.೯೦೦ ರಲ್ಲಿದ್ದ ರಾಜಶೇಖರ ತನ್ನ ಕಾವ್ಯ ಮೀಮಾಂಸೆಯಲ್ಲಿ ಕವಿಯ ದಿನ ನಿತ್ಯದ ಚಟುವಟಿಕೆಗಳನ್ನು ಕುರಿತು ಹೇಳುವಾಗ '..... ಇದು ದಿನಚರ್ಯೆ (ಅಹೋ ರಾತ್ರಿಕಂ)' ... ಎಂದು ತಿಳಿಸುತ್ತಾನೆ.

'ಬಳಿಕಿಮ್ಮಾವಿನ ಪಣ್ಣೆತ್ತಾ ಅರಗಳಿಯಂ ದಿನಚರಿ ಬರವೇಳುತ್ತುಂ ಕಳುಹಿ ಕಮಲ ಲೋಚನೆ ತನ್ನಯ ಮನದೊಳಗಿಂತೆಣಿಸಿದಳು'

'ಇನಿತುವನು ತಪ್ಪದೆ ನಡೆಸಲಾ ಜನಪನಾರೋಣಿಗೆ ಸುಖ ಸಂಜನಿಸುವುದು ದಿನಚರಿಯ ದಿಂದವನೀಶಕೇಳೆಂದ

'ಭೋಜರಾಜ ಸಂಹಿತೆಯಲ್ಲಿ 'ದಿನಚರ್ಯೆ ಅರಸುಗಳು ಪ್ರತಿದಿನವೂ ನೆಡೆವ ಕಟ್ಟಳೆ ಪ್ರಭಾತದ ದರ್ಶನ ಯೋಗ್ಯ'.

ಕ್ರಿ.ಶ. ೧೬ನೆಯ ಶತಮಾನದ ಶ್ರೀ ಕೃಷ್ಣದೇವರಾಯನ ದಿನಚರಿಯನ್ನು 'ದಿನಚರಿಯ ಕೃತ್ಯಗಳ ವಿಸ್ತಾರ' ಎಂದು ಹೇಳಿರುವುದರಿಂದ ಕೆಲಸಗಳನ್ನು ವಿಸ್ತಾರವಾಗಿ ಹೇಳುವ ಒಂದು ದಾಖಲೆಯೆಂದಾಗುತ್ತದೆ.

ಕ್ರಿ.ಶ.೧೭ನೆಯ ಶತಮಾನದ ಸಂಚಿಯ ಹೊನ್ನಮ್ಮನ ಹದಿಬದೆಯ ಧರ್ಮದಲ್ಲಿ ಪತಿವ್ರತೆಯರು ನಿತ್ಯ ನಡೆದುಕೊಳ್ಳುವ ಪರಿಯನ್ನು ತಿಳಿಸುವಾಗ 'ಲೋಕಶಾಸ್ತ್ರವನ್ನಾಲೋಚಿಸಿ ತಿಳಿದಿದರ್ರೈಕ ಮತ್ಯವನಳವಡಿಸಿ ಏಕಪತ್ನಿಯರೆಸಗುವ ದಿನಚರ್ಯೆಯ ಜೋಕೆ ತಪ್ಪದೆ ಸಲ್ಲಿಸುವೆನು' ಎನ್ನುತ್ತಾಳೆ.

ಕೆಲಸಲ 'ಅಂದಂದಿನ ವ್ಯಾಪಾರ ಒಂದೊಂದನ್ನೂ ಅದು ಆದ ಹಾಗೆಲ್ಲ ಬರೆದುಕೊಂಡು ಅದನ್ನು ಯಾವ ಯಾವ ಜಮಾಖರ್ಚು ಬಾಬ್ತಿಗೆ ಸೇರಿಸಬೇಕೆಂಬುದನ್ನು ನಮೋದಿಸುವ ಪುಸ್ತಕಕ್ಕೆ ದಿನಚರಿ ಪುಸ್ತಕ ಎಂದು ಕರೆದಿದ್ದಾರೆ.

ಆಧುನಿಕ ನಿಘಂಟುಕಾರರಾದ ಡಾ.ಕಿಟೆಲ್ ಅವರು ನಿತ್ಯ ಮಾಡುವ ಎಲ್ಲ ಕೆಲಸಗಳನ್ನು ದಾಖಲಿಸುವ ಕಛೇರಿಯ ರೋಜು (ಜರ್ನಲ್) ಪುಸ್ತಕ ಎಂಬರ್ಥದಲ್ಲಿ "The daily due observance of all rites on offical journal ಎಂದಿದ್ದಾರೆ.

ಈ ಮೇಲಿನ ಉಲ್ಲೇಖಗಳಿಂದ ದಿನಚರಿಯೆಂದರೆ ದಿನವೂ ಮಾಡಿದ ಕೆಲಸ. ಹಾಗೂ ಘಟನೆಗಳನ್ನು ಬರೆದಿಡುವ ಪುಸ್ತಕ, ದಿನವಹಿ, ಡೈರಿ ಎಂದು ಹೇಳಬಹುದಾದರೂ ಕನ್ನಡದಲ್ಲಿ ಕೃಷ್ಣದೇವರಾಯನ ದಿನಚರಿ, ಕೆಲವು ಮಠ ಮಾನ್ಯಗಳಲ್ಲಿಯ ದಿನಚರಿಗಳನ್ನು ಗಮನಿಸಿದರೆ ಐತಿಹಾಸಿಕ, ಧಾರ್ಮಿಕ ದಾಖಲೆಗಳೆಂಬರ್ಥದಲ್ಲಿ ಮಾನ್ಯತೆ ಪಡೆದುಕೊಳ್ಳುತ್ತವೆ"[೧೦೬] ಹೀಗಾಗಿ ದಿನಚರಿಗಳು ಪ್ರಾಚೀನ ಕಾಲದಲ್ಲಿ ನಮ್ಮ ಅರಸರು ಮಾಡಿದ ಧಾರ್ಮಿಕ, ರಾಜಕೀಯ ಆರ್ಥಿಕ ಕಾರ್ಯಗಳ ಮಹತ್ವ ಅಂಶಗಳನ್ನು ತಿಳಿಸುವ ದತ್ತ ಕಣಜಗಳಾಗಿ ಮೂಡಿ ಬಂದಿವೆ.

ಅದೇ ರೀತಿ ವಿಜಯನಗರ ಸಾಮ್ರಾಜ್ಯ ಸ್ಥಾಪನೆಯ ಕುರಿತಾಗಿ ತಿಳಿಸುವ ದಿನಚರಿ "...... ಶಾಲಿವಾಹನ ಶಕ ವರ್ಷಗಳು ೧೧೨೫ರ ಮೇಲೆ ಸಂದ ಪ್ರಭವ ಸಂವತ್ಸರದ ಚೈತ್ರ ಮಾಸದಲ್ಲಿ ಶುಭ ನಕ್ಷತ್ರ ಶುಭ ತಿಥಿಯಲ್ಲಿ ಮುಹೂರ್ತವ ಮಾಡಿ ಕೃಷ್ಣಪಕ್ಷದಲ ಮಾವಾಸ್ಯದ ರಾತ್ರಿಯಲ್ಲಿ ನಿಶಿಸಮಯದಲ್ಲಿ ಶಂಕು ಸ್ಥಾಪನೆಯನ್ನು ಮಾಡುವುದಕ್ಕೆ ಶಾಸ್ತ್ರಜ್ಞರು ಮಂತ್ರವಾದಿಗಳು ಜೋತಿಷರು ಕೂಡಿಕೊಂಡು ಉತ್ತರ ದಕ್ಷಿಣಗಳ ಯೇರ್ಪಡಿಸಿ ತ್ರಿಶಂಕು ಧ್ರುವಗಳನ್ನು ನೋಡಿ ತ್ರಿಪುರುಷರ ಶಂಕುಸ್ಥಾಪನೆಯ ಮಾಡಿ ಮೂಡಲು ಪಡುವಲಿಗೂ ಜಾಪಕಂಬದಲ್ಲಿ ಪ್ರತಿಷ್ಠೆಯ ಮಾಡಿ ಆ ಕಂಬವನ್ನು ಶಿರಸ್ಥಳದಲ್ಲಿ ಜಲಾಂತರವಾಗಿ ಅಗೆದು ವಾಸ್ತು ಪುರುಷನನ್ನು ಸ್ಥಾಪನೆಯ ಮಾಡುವಾಗ ಮೂರು ಸಾವಿರದ ನಾನ್ನೂರು ವರುಷ ಪರ್ಯಂತರವೂ ಲಯವಿಲ್ಲದ ಹಾಗೆ ಒಳ್ಳೆಯ ಮೂಹೂರ್ತದಲ್ಲಿ ಪ್ರತಿಷ್ಠೆಯಂ ಮಾಡಿದರು"[೧೦೭]

ಲಭ್ಯವಿರುವ ಶ್ರೀಕೃಷ್ಣದೇವರಾಯನ ದಿನಚರಿ ೬೩ ತಾಳೆ ಪತ್ರಗಳನ್ನೊಳಗೊಂಡ ೨೨" x ೪.೭" ಆಳತೆಯಲ್ಲಿದೆ. ಪ್ರತಿಯೊಂದು ಪತ್ರದಲ್ಲಿ ೯ ಸಾಲುಗಳು ಪ್ರತಿಸಾಲಿನಲ್ಲಿ ಸರಾಸರಿ ೩೫ ಅಕ್ಷರಗಳಿವೆ. ಆರಂಭದಲ್ಲಿ 'ಶ್ರೀಮತೇ ರಾಮಾನುಜಾಯನಮಃ' ಎಂಬ ಶ್ರೀ ವೈಷ್ಣವ ಸ್ತುತಿಯಿಂದ ಪ್ರಾರಂಭವಾಗುತ್ತದೆ. ಆ ಕಾಲದ ಆಡು ನುಡಿಯ ಗದ್ಯದ ಬಳಿಕೆ ಕೃತಿಯ ಸಂದರ್ಭಕ್ಕೆ ತಕ್ಕಂತೆ ರಾಜನೀತಿ ಪದ್ಯ -ಶ್ಲೋಕಗಳು ಬಂದಿವೆಯಾದರೂ, ಕೆಲವು ಕಡೆ ನೀತಿ ಪದ್ಯದ ತಾತ್ಪರ್ಯವನ್ನು ಮಾತ್ರ ಕೊಡಲಾಗಿದೆ ಎಂದು ಡಾ.ಕೆ.ರವೀಂದ್ರನಾಥ ಅವರು ತಮ್ಮ ಕನ್ನಡ ದಾಖಲು ಸಾಹಿತ್ಯ ಕೃತಿಯಲ್ಲಿ ಅಭಿಪ್ರಾಯಪಡುತ್ತಾರೆ.

ಈ ಕೃತಿಯು ಕೃಷ್ಣದೇವರಾಯನ ಆಡಳಿತ ವೈಖರಿಯನ್ನು ತಿಳಿಸುವುದರ ಜೊತೆಗೆ ಕುದುರೆ ಸೈನ್ಯ ಮತ್ತು ಕುದುರೆಯನ್ನು ಸಾಕುವ, ಪಳಗಿಸುವ, ಉಪಚರಿಸುವ ವಿವರಗಳನ್ನು ನೀಡುತ್ತದೆ. ಆದ್ದರಿಂದ ಪ್ರಸ್ತುತ ಅಧ್ಯಯನಕ್ಕೆ ಆಕರ ಸಾಮಗ್ರಿಯಾಗಿ ನಿಲ್ಲುವಲ್ಲಿ ಯಶಸ್ವಿಯಾಗಿದೆ.

........"ಕರ್ನಾಟಕ ರಾಜ್ಯ ಯೆಂಬತ್ತು ಲಕ್ಷಕ್ಕೂ ದೇವಾದಾಯ | ಬ್ರಹ್ಮಾದಾಯ | ಮಠಪುರ ಮಾನ್ಯ ಹೋಗಲಾಗಿ | ನಿಂತ ರಾಜ್ಯಕ್ಕೆ ಸಂಬಳ | ಜಿಠೆ (೩) ರಾವುತ ಕುದುರೆ ೧ ಕ್ಕೆ ಘಟ್ಟಿಗ ೧೦೦ರ ಮೇರೆಯಲ್ಲಿ ಕುದುರೆ ಸಾವಿರಕ್ಕೆ ಲಕ್ಷಸ್ಥಿತಿ| ಕುದುರೆಯಿಪ್ಪತ್ತನಾಲ್ಕು ಸಾವಿರಕ್ಕೆ ಸ್ಥಿತಿಯಿಪ್ಪತ್ತು ನಾಲ್ಕು ಲಕ್ಷವೂ| ಆನೆ ೧ಕ್ಕೆ ಸಾವಿರ ವರಹದ ಮೇರೆಯಲ್ಲಿ ಆನೆ ಘಟಸಾವಿರದ ಯಿನ್ನೂರಕ್ಕೆ | ಸ್ಥಿತಿ ಹನ್ನೆರಡು ಲಕ್ಷ ಆಳು ೧ ಕ್ಕೆ ಘಟ್ಟಿಗ ೨೦ ವರಹ ಮೇರೆಯಲ್ಲಿ ಆಳು ಸಾವಿರಕ್ಕೆ ೨೪೦೦೦ ಯಿಪ್ಪತ್ತು"[೧೮]..... ಕೃಷ್ಣದೇವರಾಯ ತನ್ನ ಆಡಳಿತ ವ್ಯವಸ್ಥೆಯಲ್ಲಿ ಆರ್ಥಿಕ ಖರ್ಚುವೆಚ್ಚವನ್ನು ಯಾವ ಯಾವ ವಲಯಕ್ಕೆ ಎಷ್ಟು ಪ್ರಮಾಣದಲ್ಲಿ ಕೊಡಬೇಕು ಎಂದು ನಿಗಧಿಪಡಿಸಿದ ವಿವರಣೆ ಇಲ್ಲಿದೆ. ಕುದುರೆ ರಾವುತರಿಗೆ ಕುದುರೆ ೧ ಕ್ಕೆ ಘಟ್ಟಿಗ ೧೦೦, ಕುದುರೆ ಸಾವಿರಕ್ಕೆ ಲಕ್ಷ, ಕುದುರೆ ಇಪ್ಪನಾಲ್ಕು ಸಾವಿರಕ್ಕೆ ಇಪ್ಪತ್ತನಾಲ್ಕು ಲಕ್ಷ ಎಂದು ವಿಭಾಗಿಸಿ ಕೊಡುವ ಪದ್ಧತಿಯನ್ನು ಹೇಳಲಾಗಿದೆ.

".....ಸಾಮಂತರ ಬಲಕ್ಕಿಂತ ಅಧಿಕವಾಗಿ ಬಲವ ಕಟ್ಟಿ | ತುರುಕರ ಮಟ್ಟ ಮಾಡಬೇಕುಯೆಂದು ಯೆಣಿಸಿದೆವು | ಯಿದಕ್ಕೆ ಯೇನು ಯೆಂದರೆ ಕೈ ಜಿತವಲ್ಲದೆ ಅವಕಾರ್ಯವಾಗದಾಗಲಾಗಿ | ಯೀಗ ಕೈಜಿತವಾಗಿ ಆನೆ ಕುದುರೆ ಕಾಲಾಳ ಸಾಲಾಳು ಕಟ್ಟಿ| ಆ ಸ್ತೋಮವ ಕೂಡಿ ಕೊಂಡ ಪಟ್ಟಣ ಪ್ರವೇಶವಾಗಬೇಕು ಯೆಂದು....

....ಅರಮನೆ ಆನೆ ಕುದುರೆ ಕಾಲಾಳು ಸಹಿತವಾಗಿ ಸಂಪಾದಿಸಿರುಯೆಂದು ಬಿನ್ನಹಂ ಮಾಡಿದುದಕ್ಕೆ | ದೊರೆ ಮನ್ನೆಯರು | ಅಮರನಾಯಕರು | ರಾವುತರು | ರಾಣುವೆಯೆಪ್ಪತ್ತೆರಡು ವಿನಿಯೋಗದವರು ವೋಲಗಕ್ಕೆ ಬನ್ನಿಯೆಂದು ಕಂದಾಚಾರದ ಕರಣಿಕರಕರೆಸಿ| ಅವರ ಕೂಡೆ ಸಿಂಹಾಸನಕ್ಕೆ | ಅಮರನಾಯಕರ ಆನೆಗಳೆಷ್ಟು | ಕುದುರೆಗಳೆಷ್ಟು ಕಾಲಾಳೆಷ್ಟು ಯೆನ್ನಲಾಗಿ ಕರಣಿಕರು ಹೇಳಿದ್ದು | ಆನೆ ಘಟಿಗಳು ನೂರು

ಕುದುರೆ ಯೆಪ್ಪತ್ತ ನಾಲ್ಕು ಸಾವಿರ । ಕಾಲ್ಬಲಲಕ್ಷ ಅರುವತ್ತು ಸಾವಿರದ ಸ್ಥಿತಿ । ಯೆಪ್ಪತ್ತಾರು ಲಕ್ಷಕ್ಕೆ ಅಮರವನ್ನಾಳುತ್ತಯಿದ್ದಾರೆಯೆಂದು ಬಿನ್ನಹಂ ಮಾಡಿದುದಕ್ಕೆ । ಅವರ ಕೂಡೆ ರಾಯರವರು । ಅಮರದ ಆಳು ಕುದುರೆ ಆನೆಗಳನ್ನು । ಯಿಂದು ನಾಲ್ಕು ಘಳಿಗೆಯೊಳಗೆ ಯೆಣಿಕೆಗೆ ಬಾರದ ಕುದುರೆ ಆನೆಗಳಿಗೂ, ಕಾಲಾಳಿಗೂ । ವೀರ ನೃಸಿಂಹರಾಯರವರು ಪಟ್ಟವ ಕಟ್ಟಿ ಕೊಂಡಾದಾರಭ್ಯಯೀವರೆಗೆ” [೧೦೯]....... ಈ ಮೇಲಿನ ಎಲ್ಲಾ ಮಾಹಿತಿಯು ರಾಜನ ಸೈನ್ಯ ವ್ಯವಸ್ಥೆ ಬಲಾಬಲವನ್ನು ಲಕ್ಷ್ಯದಲ್ಲಿಟ್ಟುಕೊಳ್ಳುವಂತೆ ಕರಣಿಕರಿಗೆ, ರಾವುತರಿಗೆ ಅಮರನಾಯಕರಿಗೆ ಮುಂತಾದವರಿಗೆ ಆಜ್ಞೆ ಮಾಡಿದ ವಿವರವನ್ನು ತಿಳಿಸುತ್ತದೆ.

“.....ಯೀಗಯಿರುವ ಆನೆ ಕುದುರೆಗಳನ್ನು ಅರಮನೆಗೆ ಬೆಲೆ ಕಟ್ಟಿಕೊಟ್ಟ ಮೇಲೆ । ತಾವು ಸಂತರಿಸಿಕೊಂಡೇವುಯೆಂದು ಬಿನ್ನಹಂ ಮಾಡಲಾಗಿ । ವೊಳಿತುಯೆಂದು ಅಮರಗಾರರ ಮೇಲಣ ನಿಲದ ಹಣವಿಗೆ। ಆನೆ ಕುದುರೆ ಬೆಲೆ ಕಟ್ಟಿ ಕೊಳ್ಳಲಾಗಿ । ಐನೂರು ಆನೆಯನ್ನು । ಹನ್ನೆರಡು ಸಾವಿರ ಕುದುರೆಯನ್ನು ।ಅರವತ್ತು ಸಾವಿರ ಕಾಲಾಳು । ದೊರೆಗಳನ್ನೂ ಅರಮನೆ ಹವಾಲಾಯಿತು । ಆನೆ ಕುದುರೆಗಳನ್ನು ಸಮ್ಮುಖದಲ್ಲಿ ನಿಲ್ಲಿಸಿ ಚಿತ್ತಬಂದವರಿಗೆ ಮನ್ನಿಸಿಯೆಂದು ಬಿನ್ನಹಂ ಮಾಡಲಾಗಿ......

.......ಕುದುರೆಗಳಿಗೂ ಕುರುಬ ರಾವುತರಿಗೂ । ಕಬ್ಬಿಲ ರಾವುತರಿಗೂ । ಕಾತಾಳಿಗೂ ಸಂಬಳವ ಬರಿಸಿ । ಆ ತರುವಾಯದಲ್ಲಿ । ರಾಯರವರು ಮದ್ದಾನೆಯನೇರಿಕೊಂಡು । ಸಾಳುವ ತಿಮ್ಮರಸಯ್ಯನ ಹಿಂದೆ ಕುಳ್ಳಿರೆ ಹೇಳಿ। ಚತುರಂಗ ಬಲವನ್ನು ಕೂಡಿಕೊಂಡು। ಪಟ್ಟಣ ಪ್ರವೇಶವಾಗಿ। ಅಪ್ಪಾಜಿ ಮೊದಲಾದಂಥವರನ್ನು ಮನೆಗೆ ಕಳುಹಿಸಿ । ಆಪ್ತರ ಕೂಡೆ । ಸಾಳುವ ತಿಮ್ಮರಸಯ್ಯನಂಥ ನಿಯೋಗಿಯಿರಲಾಗಿ । ವೊಂದು ದಿವಸದಲ್ಲೆ ಕೈಸಂಬಳದ ಬಲವ ಕಟ್ಟಬೇಕು ಅದು ಯಿಲ್ಲದೆಯಿದ್ದರೆ ಪಟ್ಟಣಕ್ಕೆ ಬಾರೆವು ಯೆಂದು ‘ಭಲ’ ವಚನವಾಗಿ ಆಡಿದ ಹೊತ್ತಿಗು ತಾಳುಮೆ ಉಂಟಾಗಿ । ಆ ಮೇರೆಗೆ ಅನುಕೂಲವ ಮಾಡಿದೆನುಯೆಂದು । ಆ ಕ್ಷಣದಲ್ಲೆ ಆನೆ ೫೦೦ ಕುದುರೆ ೧೨೦೦೦ ಕಾಲಾಳು ೬೦೦೦೦ಯಿವನ್ನೆಲ್ಲ ಸಮುಖಕ್ಕೆ ತಂದು । ಚಿತ್ತ ಬಂದವರ ವಶಕ್ಕೆ ಕೂಡಿಯೆನ್ನಲಾಗಿ । ನೋಡಿ । ಮುಂದೆ ತುರುಕಾಣ್ಯದ ಮೇಲೆ ಕಾರ್ಯವ ಮಾಡುವಂಥವರಾಗಿ । ಕರ್ನಾಟಕ ರಾವುತ ಮಾವುತರನ್ನೆ ಸಂತರಿಸಬೇಕುಯೆಂಬ ದೃಷ್ಟಿಯಿಂದ ಕುರುಬ ರಾವುತರಿಗು । ಕಬ್ಬಿಲ ರಾವುತರಿಗು । ತುಳುವ ರಾವುತರಿಗು । ಮೊರಸನಾಡ ರಾವುತರಿಗು ಹನ್ನೆರಡು ಸಾವಿರ ಕುದುರೆಗಳನ್ನು ವೆಚ್ಚಮಾಡಿ । ಆನೆ ಕುದುರೆ ರಾವುತರಿಗು ಸಂಬಳ ಸಾರಿಗೆಯನ್ನೂ । ಆ ಲಾಯದ ಕುದುರೆ ಕಡಿವಳಗಳನ್ನೂ । ಪರಾಮರಿಸುವ ಹಾಗೆ ನಾಲ್ಕು ಮಂದಿ ಪಾರು ಪತ್ಯಗಾರರನ್ನು । ನಾಲ್ಕುಮಂದಿ ಕರಣಿಕರನ್ನು । ಹದಿನಾರುಮಂದಿ ಅಂಗಚಾಲರನ್ನು ನಾಲ್ಕು ಮಂದಿ ಹಸ್ತಾಂತರದ ಹಣವ ಕಟ್ಟುವವರನ್ನೂ । ಯೇರ್ಪಾಟು ಮಾಡಿ” [೧೧೦]..... ಕೃಷ್ಣದೇವರಾಯ ತನ್ನ ಮಂತ್ರಿಯಾದ ತಿಮ್ಮರಸನೊಡನೆ ಮದ್ದಾನೆಯನ್ನೇರಿಕೊಂಡು ರಾಜ್ಯದ ಸೈನ್ಯವನ್ನು ಪರೀಕ್ಷಿಸಿ ಸೂಕ್ತ ಸಲಹೆ ಸೂಚನೆ ನೀಡಿ ಕುದುರೆಗೆ ಮತ್ತು ಕುರುಬ ರಾವುತರಿಗೆ, ಕಬ್ಬಿಲ ರಾವುತರಿಗೆ, ಕಾತಾಳಿಯವರಿಗೂ ಸಂಬಳಕೊಟ್ಟು ಅವರನ್ನು ಸತ್ಕರಿಸಿ ಸೈನ್ಯ

ಕಾರ್ಯ ಭಾರವನ್ನು ಸೂಕ್ತವಾದವರಿಗೆ ಕೊಡಿ ಎಂದು ಆದೇಶಿಸುವ ವಿವರವನ್ನು ಈ ದಿನಚರಿಯಲ್ಲಿ ಸಂಗ್ರಹಿಸಲಾಗಿದೆ.

"ಆನೆ ಕುದುರೆಗಳನ್ನು ಕ್ರಯವ ಕಟ್ಟಿಕೊಡುವಾಗ ವೊಬ್ಬರಾದರೂ ಅನ್ಯಾಯವೆನ್ನದ ಹಾಗೆ। ಅವರವರ ಸನ್ಮತದ ಮೇಲೆ ಕ್ರಯವ ಕಟ್ಟಿ ಕೊಡುವಲ್ಲಿ । ವೊಂದು ಲಕ್ಷಕ್ಕೆ ಯಿಪ್ಪತ್ತರ ಲೆಕ್ಕದಲ್ಲೂ । ಐವತ್ತು ಘಟಿಗಳಿಗೆ ಮೂವತ್ತು ಲಕ್ಷವಾಯಿತು। ಕುದುರೆ ಕ್ರಯವೊಂದು ಸಾವಿರಕ್ಕೆ ಹತ್ತು ಕುದುರೆ ಲೆಕ್ಕ। ವೊಂದು ಲಕ್ಷಕ್ಕೆ ಸಾವಿರ ಕುದುರೆಯ ಲೆಕ್ಕದಲ್ಲೂ ಹನ್ನೆರಡು ಲಕ್ಷವಾಯಿತು । ಆನೆ ಕುದುರೆಗಳಿಂದ ಮುವತ್ತು ನಾಲ್ವತ್ತು ಲಕ್ಷ ಆದಾಯವಾಯಿತು ।"[೧೧೦]...... ಆದಾಯ ನಿಜವಾದ ಮೌಲ್ಯವನ್ನು ಕರಾರುವಕ್ಕಾಗಿ ಈ ಮೇಲಿನ ಸಾಲುಗಳು ತಿಳಿಸುತ್ತವೆ. ಪ್ರಾಮಾಣಿಕತೆಯಿಂದ ರಾಜ್ಯಭಕ್ಕಸಕ್ಕೆ ಮೂಲ ಪ್ರಮಾಣದಲ್ಲಿ ಬರುವ ಆದಾಯವನ್ನು ಬಿಂಬಿಸುತ್ತದೆ.

"..........ಮೂರು ಸಿಂಹಾಸನಯೆಂಬುದು ಬ್ರಹ್ಮ ವಿಷ್ಣು ಮಹೇಶ್ವರರಾಗಿ ಯಿಹುದು । ಅದರಲ್ಲಿ ತಾರತಮ್ಯಗಳು ಆವ ರೀತಿಯಲ್ಲಿ । ಅಶ್ವಪತಿ ಕುದುರೆಗಳಿಗೆ ಅಧಿಪತಿ । ಆನೆಗಳಿಗೆ ಗಜಪತಿ ಅಧಿಪತಿ ।ಕರ್ನಾಟಕ, ಸಿಂಹಾಸನಾಧಿಪತಿ ಮನುಷ್ಯರಿಗೆಲ್ಲರಿಗೂ ಅಧಿಪತಿ ।"[೧೧೧]....

"ರಾಜ್ಯವನ್ನು ಶತ್ರುಗಳಿಂದ ರಕ್ಷಿಸಿಕೊಳ್ಳಲು ರಾಜರ ಅಪ್ಪಣೆಯಂತೆ ಪಾರುಪತ್ಯಾಗಾರರು ಎಂಟು ದಿನಗಳಿಂದಲೂ ಭಯದಿಂದ ಜಾಗರೂಕರಾಗಿ ಕೋಟೆ ಕೊತ್ತಳಗಳನ್ನು ಚೆನ್ನಾಗಿ ಮಾಡಿಸಿ । ಫಿರಂಗಿಗಳು ಜಬರ ಜಂಗಿಗಳು । ಕೈಗಲ್ಲುಗಳು । ಲಗ್ಗೆಯ ಕೊರಡುಗಳು । ಹುಲಿತಲೆಗಳು । ಕೋಟೆಯ ಹೊರಗೆ ಕುದುರೆಗಳು ।ನಿಲ್ಲುವಂತಹ ಕಲ್ಲುಗಳನ್ನು ಹಾಕಿಸುವುದನ್ನು ತಿಳಿಸಿದೆ.

...... ಕರ್ನಾಟಕದಲ್ಲಿ ಅಷ್ಟು ಕುದುರೆ ಮಂದಿ ಸಂತರಿಸುವ ಭೂಮಿಯಲ್ಲಿ । ಚತುರಂಗ ಬಲವನ್ನೂಯಿರಿಸಬೇಕು । ಯಿಂದಿಗೆ ಕೈಸಂಬಳದ ಕುದುರೆ ಹನ್ನೆರಡು ಸಾವಿರ । ಅಮರಗಾರರ ಕುದುರೆ ಯಿಪ್ಪತ್ತು ನಾಲ್ಕು ಸಾವಿರ । ಕೈಸಂಬಳದ ಆನೆ ನೂರು ಘಟಿಗಳು । ಕಾಲುಬಲ ಐದು ಲಕ್ಷ ಕೂಡಿ । ಯೀ ವಿಧದಲ್ಲಿ ಜಗಳವ ಮಾಡಿಸುವುದರಿಂದ ತುರುಕರು ಕಾರ್ಯಯೆಂಬುದೆಷ್ಟೂಯೆಂದು ಬಿನ್ನಹವ ಮಾಡಲಾಗಿ"[೧೧೨].....

.... "ಆ ಪ್ರಾಂತ್ಯದಲ್ಲಿ ಗಲ(ಭೆ) ಮಾಡದ ಗೋದಾವರಿಗೆ ಉತ್ತರ ಭಾಗದಲ್ಲಿ ಯೆಂಟು ಕುದುರೆಯವರು ಗೋಂಡಾರಣ್ಯ ವಾಗಲಾಗಿ ಆ ದಿಕ್ಕಿನಲ್ಲಿ ಆರಾದರು ಕುದುರೆಯವರು ಬರುವರು ಮೊಗಲರು । ಅವರಿವರು ಯೆಂದು ಅರಿಯರು ಯೆಂದು ಅಡವಿಯ ಮುಖಕ್ಕೆ ನಾಲ್ಕು ಕುದುರೆಯವರು । ಗಾವುದ ದಾರಿ ಸಾಗಿ ಹೋದರಾಗಲಾಗಿ । ಗೊಂಡೆಯಿಂದ । ದೊರೆಗಳಿಗೆ ಬೇಹು ಸಂಧಿಸಿ ಗಜಪತಿ ಹದಿನಾರು ಕುದುರೆಯಲ್ಲಿ ನದಿಯ ಸ್ನಾನಕ್ಕೆ ಬಂದರು । ಯೀ ಸಮಯದಲ್ಲಿ ಸುತ್ತಿಕೊಂಡರು ಹಿಡಿದು

ಕೊಳ್ಳಬೇಕುಯೆಂದು ನಾಲ್ಕು ಐದು ಸಾವಿರ ಕುದುರೆ ಥಾಳು ಡಮಾ(ಯಿ) ಹೊರಸಿಕೊಂಡು ಕಳ್ಳಮಾರ್ಗದಲ್ಲಿ ಕುದುರೆಯವರು ಬರುವ ರಭಸ ಕೇಳಿ ಷೋಡಶ ಪಾತ್ರದೊಳಗೆ ನಾಲ್ಕು ಕುದುರೆಯವರು ಯಿದಿರಾಗಿ ಹೋಗಿ ಜಗಳವ ಕೊಟ್ಟರಾಗಲಾಗಿ। ನಾಲ್ಕು ಸಾವಿರ ಕುದುರೆಯವರೂ। ನಾಲ್ಕು ಕುದುರೆಯ ಸುತ್ತಿಕೊಳ್ಳಲಾಗಿ ನಾಲ್ಕು ದಿಕ್ಕಿನಲ್ಲಿ । ನಾಲ್ಕು ಕುದುರೆಯವರು ನಾಲ್ಕು ವಿಧವಾಗಿ ವೋಡಿಸಿಯೆರಡು ಕೈಯಾರ ಕಡಿಯುತ್ತ ಹೋಗಲಾಗಿ । ತುಂಡು ತುಂಡಾಗಿ ಕುದುರೆಯೂ ರಾವುತರೂ । ಯೆರಡು ಸಾವಿರ ಕುದುರೆ ರಾವುತರೂ ಬೀಳಲಾಗಿ । ಆಮೇಲೆ । ಮೊಗಲರು ಅಷ್ಟು ಮಂದಿಯೂ ವೊತ್ತಟ್ಟಾಗಿ ನಿಲ್ಲಲಾಗಿ । ಯೀ ನಾಲ್ಕು ಕುದುರೆಯವರು ಅಳಿಸಿದರು । ಯೀ ವೊಳಗೆ । ಯೆಂಟು ಕುದುರೆಯವರು ಸಾರಿಹೋಗಿ ಯಿದ್ದವರು ಬರಲಿಲ್ಲ । ಯೆರಡು ಕುದುರೆಯವರನ್ನು ಅಲ್ಲಿಯೆ ಯಿರಿಸಿ ಆರು ಕುದುರೆಯವರು ಬಂದರಾಗಲಾಗಿ । ಆ ಆರು ಕುದುರೆಯವರ ಮೇಲೆ ಕಾಣಿಸಿಕೊಳ್ಳಲಾಗಿ । ಅವರು ತಮ್ಮ ಕೈಯಾರೆ ಕಡಿದು ಬೇಸತ್ತಂಥವರಾಗಿ । ಮೊದಲ ನಾಲ್ಕು ಕುದುರೆಯವರು ತಾವೂ ಕೂಡ ಹತ್ತು ಕುದುರೆಯವರಾಗಿ । ನದಿ ಸಮೀಪದಲ್ಲಿ ಯಿದ್ದ ಕುದುರೆಗಳನ್ನು ಕೂಡ ಹನ್ನೆರಡು ಕುದುರೆಯವರನ್ನೂ । ಜಾವಹೊತ್ತು ಜಗಳವ ಮಾಡಿ । ಮೊಗಲರು ಬಹಳ ಧ್ವನಿಯನ್ನು । ಆರ್ಭಟವನ್ನು ಮಾಡಿ । ಡಮಾನ ಟೂಕಿಸಲಾಗಿ (?) ಗೋದಾರಿಯಲ್ಲಿ ಯಿದ್ದ ಗಜಪತಿಯವರು। ಷೋಡಶ ಪಾತ್ರರಳೊಳಗೆ ನಾಲ್ಕು ಕುದುರೆಯವರನ್ನು ಕೇಳಿ। ತಮ್ಮ ಕುದುರೆಯವರನ್ನು ತೆಗೆದು ಬರಹೇಳಿ । ಹನ್ನೆರಡು ಕುದುರೆಯವರು । ನೆದಿಯವೊಳಗಿಂದ ತೆಗೆದು ಬಂದರು । ಅದು ಕಾರಣಯೆರಡು ಮೂರುಸಾವಿರ ಕುದುರೆಯವರು ಬೆಂಬಳಿಯಾಗಿ ಬರಲಾಗಿ । ಗಜಪತಿಯವರು ಕುದುರೆ ಮೇಲಣ ದೃಷ್ಟಿಯಿಂದ । ಜಗನ್ನಾಯಕರ ಯತ್ತುವುದು ಮರತು । ಕುದುರೆಯ ಮೇಲೆ ಕುಳಿತುಕೊಂಡು ಹೊಳೆಯದಾಟಿ ಕೆಲವು ದೂರ ಬಂದರು । ಅಷ್ಟರೊಳಗೆ ಆ ಕುದುರೆಯವರು ಉತ್ತರದ ತಡಿಗೆ ಬಂದು । ಕುದುರೆಗಳಿಗೆ ನೀರ ತೋರುತ್ತ ನದಿಯಲ್ಲಿ ವೋಡಿಯಾಡುತ್ತಯಿದ್ದರು । ಅವರ ನೋಡಿ ದೇವ ಪೂಜೆಯ ಪೆಟ್ಟಿಗೆಯ ವೊಳಗೆ ಸ್ವಾಮಿಯವರ ತೆಗೆದು ಕೊಳ್ಳದೆ ಬರಿಯ ಪೆಟ್ಟಿಗೆಯ ತೆಗೆದುಕೊಂಡು ಬಂದೇನುಯೆಂದು ಹೊಳೆಗೆ ಹೋಗಿ । ದೇವ ಪೂಜೆಯ ಮಾಡಿದ ತಿಟ್ಟಿನ ದಿಕ್ಕಿನಲ್ಲಿಯಿಳಿದು । ಜಗನ್ನಾಯಕರ ಯೆತ್ತಿಕೊಂಡು ಬರಲಾಗಿ । ಕಂಡು ಕುದುರೆಯವರು ರಾವುತರು ಬೆನ್ನಹತ್ತಲಾಗಿ । ಅವರನ್ನು ಕಡಿದು ಹೊಳೆಯ ದಾಟಿ ಬಂದನು । ಗಜಪತಿರಾಯರವರು ಯಿಂದು ಯೆದ್ದ ಹೊತ್ತು ಯೆಂಥದೂ । ವ್ಯರ್ಥ ಕಲಹವಾಯಿತುಯೆಂದು । ಜಗಳವ ಮಾಡುವವರು ತಮ್ಮ ಕೂಡೆ ಅರಿಕೆಯ ಮಾಡದೆ ಜಗಳವ ಮಾಡಿ ಬಹುಮಂದಿಯ । ನೋಯಿಸಿದರು ಯೆಂದು । ಆ ಹನ್ನೆರಡು ಕುದುರೆಯವರಿಗೂ । ಜಗನ್ನಾಥರ ತಂದ ಕುದುರೆಯವರಿಗೂ । ಉಡುಗೊರೆಯನ್ನು ಕೊಟ್ಟರು। ಕಡಿಮೆ ಮೂರು ಕುದುರೆಯವರು ತಮಗೆ ಜಗಳ ಸಿಕ್ಕದೆ ಹೋಯಿತುಯೆಂದು ವಿಚಾರದಿಂದ ಬರುತ್ತಿರಲಾಗಿ । ಅದರೊಳಗೆ ವೊಬ್ಬ ಪಾತ್ರನು ಗಜಪತಿಯ ಮುಂದುಗಡೆಯಲ್ಲಿ ವೊಂದು ಮರದ ನೆಳಲು ಬರುವಾಗ ಕುದುರೆಯ ಮೇಲೆ ಹೋಗುವ ರಾವುತಗೆ ಅಡ್ಡಲಾಗಿ ಯಿತ್ತಾಗಲಾಗಿ ಆ ಮರದ

ಕೊಂಬೆಯನ್ನು ತನ್ನ ‘ಹಸ್ತಕ’ದಿಂದ ಕಡಿದು ಹಾಕಿದನು । ಗಜಪತಿಯೆವರು ನೋಡಿ ಸಂತೋಷವ ಮಾಡಿ ।ಆ ಪಾತ್ರನಿಗೆ ಉಡುಗೊರೆಯನ್ನು ಕೊಟ್ಟರು । ಕಡಮೆಯ ಯೆರಡು ಕುದುರೆಯವರು ಬರುವಾಗ ಮಧ್ಯದಲ್ಲಿ ಯೆರಡಾಳು ಉದ್ದಕ್ಕೆವೊಂದು ಹುಣುಸೆ ಕೊಂಬೆ ಅಡ್ಡಲಾಗಿ ಯಿರಲಾಗಿ ತನ್ನ ಕುದುರೆಯನ್ನು। ಕಾಲಾಡಿ ಹುಲ್ಲೆಯ ಹಾಗೆ ನೆಗೆದು। ಆ ಕ್ಷಣದಲ್ಲೆ ಹುಣಸೆ । ಮರದ ಕೊಂಬೆ(ಯ)ನ್ನು ಯೆರಡು ಕೈಯಲ್ಲಿ ಹಿಡಿದು । ವೋಡುವ ಕುದುರೆಯನ್ನು ಯೆರಡು ತೊಡೆಯ ಸಂದಿಯಲ್ಲಿ ಅವುಕಿಕೊಂಡು । ಕುದುರೆಯೂ ಸಹ ಅಂತರಿಕ್ಷದಲ್ಲಿ ನೇತಾಡುತ್ತಯಿದ್ದರು । ಆ ವರ್ತಮಾನವ ಗಜಪತಿ ನೋಡಿ ಆ ಸಮೀಪದಲ್ಲಿ । ಹತ್ತಿ(ಯ) ಹೇರುಗಳು ಯಿರಲಾಗಿ । ಯಿಪ್ಪತ್ತು ಮೂವತ್ತು ಹೊರಳಿಸಿಕೊಂಡು ಬಂದು । ಕುದುರೆಯನ್ನು । ರಾವು(ತನ)ನ್ನು ಯಿಳುಹಿಕೊಂಡು ಉಡುಗೊರೆಯನ್ನು ಕೊಟ್ಟರು । ವೊಬ್ಬ ಕುದುರೆಯ ಪಾತ್ರನಿಗೆ ಬಹುಮಾನ ಯಿಲ್ಲದೆ ಯಿರಲಾಗಿ ಗೋದಾವರಿ ಕಟ್ಟು ಕಾಲುವೆ ಆಳು ಉದ್ದದಲ್ಲಿ । ಐವತ್ತು ಹೆಜ್ಜೆ ಅಡ್ಡಗಲದಲ್ಲಿ ಅಡ್ಡಲಾಗಿ ಯಿರಲಾಗಿ । ಆ ರಾವುತನು ತನ್ನ ಕುದುರೆಯ ವೋಡಿಸಿ ಆ ಕಾಲುವೆಯ ನೆಗೆಯಿಸಲಾಗಿ ನೋಡಿ । ಆತನಿಗೂ ಉಡುಗೊರೆಯ ಕೊಟ್ಟರು’’[೧೧೪] |.... ಹೀಗೆ ದಿನಚರಿಯಿಂದ, ಒಂದು ನಾಡಿನ, ಪ್ರದೇಶದ ಸಾಂಸ್ಕೃತಿಕ ವಾತಾವರಣ, ರಾಜರು ಮಾಡಿದ ಕಾರ್ಯಗಳು, ಯೋಜನೆಗಳು ಹಮ್ಮಿಕೊಂಡ ವ್ಯವಸ್ಥೆಗಳು, ಪರಿಸರ, ಯುದ್ಧದ ನೀತಿ, ಆರ್ಥಿಕ ಪರಿಸ್ಥಿತಿ, ರಾಜಕೀಯ ಸ್ಥಿತ್ಯಾಂತರಗಳು, ಜನಜೀವನ ಮುಂತಾದವುಗಳನ್ನು ತಿಳಿದುಕೊಳ್ಳಲು ಅಂದು ಆಸಕ್ತಿಯಿಂದ ರಾಜರು ದಿನನಿತ್ಯ ಬರೆದು ಇಟ್ಟ ಡೈರಿ ರೂಪದ ಬರವಣಿಗೆಗಳೇ ಇಂದು ಉಪಯುಕ್ತ ದಾಖಲೆಗಳಾಗಿ ನಮಗೆ ಅಧ್ಯಯನ ಯೋಗ್ಯವಾದ ಅಂಶಗಳಾಗಿ ಮೂಡಿ ಬಂದಿವೆ. ಜೊತೆಗೆ ಚರಿತ್ರೆಯಾಚೆಗಿನ ಮಹತ್ವದ ಅಂಶಗಳನ್ನು ತಿಳಿಯಪಡಿಸುವಲ್ಲಿ ಹೆಚ್ಚು ಮಹತ್ವವನ್ನು ಪಡೆದುಕೊಂಡಿವೆ.

ಅಡಿಟಿಪ್ಪಣಿಗಳು

೧. ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಯುದ್ಧಕಲೆ, ಡಾ.ಶ್ರೀಧರ ಎಚ್.ಜಿ. ಪುಟ ೫೨

೨. ಅಭಿನವಚಂದ್ರ ವಿರಚಿತ ಅಶ್ವಶಾಸ್ತ್ರ, ಜಿ.ಜಿ.ಮಂಜುನಾಥನ್ ಪುಟ ೧ರಿಂದ ೨ (ಪೀಠಿಕೆ)

೩. ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಯುದ್ಧಕಲೆ, ಡಾ.ಶ್ರೀಧರ ಎಚ್.ಜಿ. ಪುಟ ೫೨ರಿಂದ ೫೬

೪. ಕನ್ನಡ ಸಾಹಿತ್ಯ ಪರಿಷತ್ತು ನಿಘಂಟು, ಸಂಪುಟ-೨, ಪುಟ ೧೯೨೯-೧೯೩೦

೫. ಶ್ರೀವತ್ಸ ನಿಘಂಟು, ಡಾ.ಟಿ.ವಿ.ವೆಂಕಟಾಚಲಶಾಸ್ತ್ರಿ, ಪುಟ ೩೭

೬ ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಯುದ್ಧಕಲೆ, ಡಾ.ಶ್ರೀಧರ ಎಚ್.ಜಿ. ಪುಟ ೨೬೦ರಿಂದ ೨೬೨

೭ ಕುಮಾರವ್ಯಾಸಭಾರತ (ಸಂ) ತ.ಸು.ಶಾಮರಾಯ, ಪುಟ ೯೮

೮. ಎಪಿಗ್ರಾಫಿಯಾ ಕರ್ನಾಟಕ, ಸಂಪುಟ ೮, ೧೦-೮೦೦ A.D.

೯. ಸಮಾಲೋಕನ, ತೀ.ನಂ.ಶ್ರೀಕಂಠಯ್ಯ ಪುಟ ೨೪೫ ರಿಂದ ೨೪೮

೧೦. ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಯುದ್ಧಕಲೆ, ಡಾ.ಶ್ರೀಧರ ಎಚ್.ಜಿ. ಪುಟ ೩೬೩ ರಿಂದ ೩೬೫

೧೧. ರಾಮಚಂದ್ರ ಕವಿಯ ಅಶ್ವಶಾಸ್ತ್ರ, (ಅಪ್ರಕಟಿತ ಕೃತಿ) ಕನ್ನಡ ಅಧ್ಯಯನ ಸಂಸ್ಥೆ ಪುಟ. ೨೩

೧೨. ಅದೇ, ಪುಟ ೨೪

೧೩. ಶಾಲಿಹೋತ್ರನಮತ, ಪುಟ ೨೬೪ರಿಂದ ೨೮೯ (ಅಭಿನವಚಂದ್ರ ವಿರಚಿತ ಅಶ್ವಶಾಸ್ತ್ರಕೃತಿಯ ಅನುಬಂಧ)

೧೪. ಅಭಿನವಚಂದ್ರ ವಿರಚಿತ ಅಶ್ವಶಾಸ್ತ್ರ, ಜಿ.ಜಿ.ಮಂಜುನಾಥನ್ ಪುಟ ೪ (ಪ್ರಸ್ತಾವನೆ)

೧೫. ಕರ್ನಾಟಕ ಕವಿಚರಿತೆ, (ಸಂ) ೧ ಬಿ.ಎಂ.ಶ್ರೀ., ಪುಟ ೫೨೨

೧೬. ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿ, ಸಂಪುಟ ೪, (ಸಂ) ಹೆಚ್.ದೇವಿರಪ್ಪ, ಪುಟ ೪೯೮

೧೭. ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿ, ಸಂಪುಟ ೫. ಬಿ.ಎಸ್.ಸಣ್ಣಯ್ಯ ಪುಟ ೧೦೦

೧೮. ಅದೇ, ಪುಟ ೧೦೦

೧೯. ಅಭಿನವಚಂದ್ರ ವಿರಚಿತ ಅಶ್ವಶಾಸ್ತ್ರ, (ಸಂ) ಜಿ.ಜಿ. ಮಂಜುನಾಥನ್ (ಪ್ರಸ್ತಾವನೆ) ಪುಟ ೨೪, ೨೫

೨೦. ಅದೇ, ಪುಟ ೨೪

೨೧. ಸಮಾಲೋಕನ, ಪ್ರೊ. ತೀ.ನಂ.ಶ್ರೀ., ಪುಟ ೨೪೭

೨೨. ಅಭಿನವಚಂದ್ರ ವಿರಚಿತ ಅಶ್ವಶಾಸ್ತ್ರ, (ಸಂ) ಜಿ.ಜಿ.ಮಂಜುನಾಥನ್ ಪುಟ ೩೩-೩೪ (ಪ್ರಸ್ತಾವನೆ)

೨೩. ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿ, ಸಂಪುಟ-೫ (ಸಂ) ಬಿ.ಎಸ್.ಸಣ್ಣಯ್ಯ, ಪುಟ ೧೦೬

೨೪. ಅದೇ, ಪುಟ ೧೦೬

೨೫. ಅದೇ, ಪುಟ ೧೦೨

೨೬. ಲೋಕೋಪಕಾರಂ, (ಸಂ) ಹೆಚ್. ಶೇಷ ಅಯ್ಯಂಗಾರ್ ಪುಟ vii

೨೭. ಅದೇ, ಪುಟ xxvii

೨೮. ಕೆಳದಿ ಬಸವರಾಜ ಸಂಕಲಿಸಿದ ಶಿವತತ್ತ್ವರತ್ನಾಕರ ಸಂ.೨ (ಸಂ) ಪ್ರೊ.ಮಲ್ಲೇಪುರಂ ಜಿ.ವೆಂಕಟೇಶ ಪುಟ V (ಮುನ್ನುಡಿ)

೨೯. ಅದೇ, ಪುಟ ix

೩೦. ಇಮ್ಮಡಿ ಗುರುಸಿದ್ಧ ವಿರಚಿತ ಹಾಲಸ್ಯ ಪುರಾಣಂ, (ಸಂ) ಜಿ.ಜಿ. ಮಂಜುನಾಥನ್ ಪುಟ ೪

೩೧. ಚಂದ್ರರಾಜಕವಿ ವಿರಚಿತಂ ಮದನತಿಲಕಂ, (ಸಂ) ಆರ್.ಎಸ್.ಪಂಚಮುಖಿ, ಪುಟ ೧೩

೩೨. ಅದೇ, ಪುಟ ೧೫

೩೩. ಶರಣರ ಅನುಭಾವ ಸಾಹಿತ್ಯ, ಡಾ.ಎಚ್.ತಿಪ್ಪೇರುದ್ರಸ್ವಾಮಿ, ಪುಟ ೧೨೨

೩೪. ಸರ್ವಜ್ಞನ ವಚನಗಳು ಒಂದು ಜಾನಪದೀಯ ಅಧ್ಯಯನ, ಡಾ.ರಾಜಶೇಖರ ಜಮದಂಡಿ, ಪುಟ ೧೩೦

೩೫. ಸರ್ವಜ್ಞನ ವಚನಗಳು, ಚನ್ನಪ್ಪ ಉತ್ತಂಗಿ ಪುಟ ೯೫

೩೬. ಅದೇ, ಪುಟ ೯೫

೩೭. ಬಸವಪುರಾಣ, (ಸಂ) ಡಾ.ಪಿ.ವಿ.ನಾರಾಯಣ, ಪುಟ ೧೦೩, ೧೦೪

೩೮. ವಿರಕ್ತರಕಾವ್ಯ, (ಸಂ) ಡಾ.ನುಗುವನಹಳ್ಳಿ ಪಿ.ರತ್ನ ಪುಟ xx

೩೯. ಅದೇ, ಪುಟ ೯೭-೯೮

೪೦. ಕಾಲಜ್ಞಾನ ಸಂಗ್ರಹ ಭಾಗ- ೧, (ಸಂ) ಶ್ರೀ ಶಿವಬಸವ ಸ್ವಾಮಿಗಳು ಪುಟ ೩೮-೩೯

೪೧. ಎಮ್ಮೆ ಬಸವನ ಕಾಲಜ್ಞಾನ ಸಾಹಿತ್ಯ, (ಸಂ) ಡಾ.ಎಫ್.ಟಿ. ಹಳ್ಳಿಕೇರಿ, ಪುಟ ೩೦-೩೧

೪೨. ಅದೇ, ಪುಟ ೩೭

೪೩. ಅದೇ, ಪುಟ ೫೪, ೫೭

೪೪. ಶಾಸನಾಧ್ಯಯನ ಉಲ್ಲೇಖ, ಡಾ.ಎಸ್.ಎಂ.ಹಿರೇಮಠ, ಪುಟ ೧೦

೪೫. ಕನ್ನಡ ದಾಖಲು ಸಾಹಿತ್ಯ, ಡಾ.ಕೆ.ರವೀಂದ್ರನಾಥ ಪುಟ ೩೦

೪೬. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಡಾ.ಎಂ.ಚಿದಾನಂದಮೂರ್ತಿ ಪುಟ ೧೩

೪೭. ಅದೇ, ಪುಟ ೧೫

೪೮. ಎಪಿಗ್ರಾಫಿಯಾ ಕರ್ನಾಟಕ, ಸಂಪುಟ-೭ ಮೈಸೂರು ವಿ.ವಿ.ಮೈಸೂರು ಪುಟ ೫೬

೪೯. ಕನ್ನಡ ದಾಖಲು ಸಾಹಿತ್ಯ, ಡಾ.ಕೆ.ರವೀಂದ್ರನಾಥ ಪುಟ ೩೧

೫೦. ಕನ್ನಡ ಶಾಸನ ಪರಿಭಾಷೆ ಸಾಂಸ್ಕೃತಿಕ ಅಧ್ಯಯನ, ಡಾ.ಸಂಗೀತ ಎಸ್.ಹೊನ್ನಳ್ಳಿ ಪುಟ ೪

೫೧. ಅದೇ, ಪುಟ ೫

೫೨. ಎಪಿಗ್ರಾಫಿಯಾ ಕರ್ನಾಟಕ ಸಂಪುಟ-೩ ಮೈಸೂರು ವಿ.ವಿ. ಮೈಸೂರು, ಪುಟ ೬೩

೫೩. ಅದೇ, ಪುಟ ೧೮೩

೫೪. ಅದೇ, ಪುಟ ೨೦೧

೫೫. ಅದೇ, ಸಂ.೪, ಪುಟ ೨೦೧

೫೬. ಸಂ. ೩ ಅದೇ, ಪುಟ ೪೭೩

೫೭. ಅದೇ, ಪುಟ ೫೪೦

೫೮. ಅದೇ, ಸಂ.೫, ಪುಟ ೬೫

೫೯. ಅದೇ, ಪುಟ ೬೧

೬೦. ಅದೇ, ಪುಟ ೧೪೪

೬೧. ಅದೇ, ಪುಟ ೧೪೬

೬೨. ಅದೇ, ಪುಟ ೧೪೬

೬೩. ಅದೇ, ಪುಟ ೧೪೯

೬೪. ಅದೇ, ಪುಟ ೧೫೦

೬೫. ಅದೇ ಪುಟ ೧೬೨

೬೬. ಅದೇ, ಪುಟ ೨೯೬

೬೭. ಅದೇ, ಸಂ.೪, ಪುಟ ೪೩೩

೬೮. ಅದೇ, ಸಂ. ೫, ಪುಟ ೩೪೩

೬೯. ಅದೇ, ಸಂ. ೪, ಪುಟ ೫೬೮

೭೦. ಅದೇ, ಸಂ. ೫ ಪುಟ ೫೩೩

೭೧. ಅದೇ, ಪುಟ ೬೨೧

೭೨. ಅದೇ, ಸಂ.೭, ಪುಟ ೧೧

೭೩. ಅದೇ, ಪುಟ ೧೬

೭೪. ಅದೇ, ಸಂ. ೮ ಪುಟ ೧೦೦

೭೫. ಅದೇ, ಸಂ. ೭, ಪುಟ ೬೭

೭೬. ಅದೇ, ಸಂ. ೭, ಪುಟ ೧೩೨

೭೮. ಅದೇ, ಸಂ. ೮, ಪುಟ ೨೬೩

೭೯. ಅದೇ,ಸಂ. ೮, ಪುಟ ೨೬೬

೮೦. ಅದೇ, ಸಂ. ೭, ಪುಟ ೧೮

೮೧. ಅದೇ, ಪುಟ ೩೭೮

೮೨. ಅದೇ, ಪುಟ ೧೧

೮೩. ಅದೇ, ಪುಟ ೧೬

೮೪. ಅದೇ, ಪುಟ ೭೮

೮೫. ಅದೇ, ಸಂ. ೯, ಪುಟ ೭೯

೮೬. ಅದೇ, ಸಂ. ೧೧, ಪುಟ ೭೯

೮೭. ಅದೇ, ಪುಟ ೧೦೧

೮೮. ಅದೇ, ಪುಟ ೧೦೩

೮೯. ಅದೇ, ಪುಟ ೧೦೪

೯೦. ಅದೇ, ಸಂ. ೯, ಪುಟ ೧೭೪

೯೧. ಅದೇ ಪುಟ ೧೮೧

೯೨. ಅದೇ, ಸಂ.೧೧, ಪುಟ ೧೮೧

೯೩. ಅದೇ, ಪುಟ ೧೧೮

೯೪. ಅದೇ, ಪುಟ ೧೨೭

೯೫. ಅದೇ, ಪುಟ ೧೨೭

೯೬. ಅದೇ, ಸಂ. ೯, ಪುಟ ೩೩೪

೯೭. ಅದೇ, ಪುಟ ೧೪೮

೯೮. ಅದೇ, ಪುಟ ೧೫೮

೯೯. ಅದೇ, ಪುಟ ೪೨೪

೧೦೦. ಅದೇ, ಸಂ. ೯, ಪುಟ ೪೫೩

೧೦೧. ಅದೇ, ಸಂ. ೨, ಪುಟ ೪೮೧

೧೦೨. ಅದೇ, ಸಂ. ೨, ಪುಟ ೫೩೯

೧೦೩. ಎಫಿಗ್ರಾಫಿಯಾ ಕರ್ನಾಟಕ ಸಂಪುಟ ೪ (ನಂಜನಗೂಡು ತಾಲೂಕ) ಪುಟ ೧೮೪ರಿಂದ ೧೮೬

೧೦೪. ಇತಿಹಾಸದರ್ಶನ ಸಂಪುಟ ೨೨, (ಸಂ) ಡಾ.ಎಂ.ಜಿ.ನಾಗರಾಜ್ ಮತ್ತು ಡಾ.ಪಿ.ವಿ.ಕೃಷ್ಣಮೂರ್ತಿ ಪುಟ ೩ರಿಂದ ೪ (ಎಸ್.ಜಿ.ರಾಮದಾಸ ರೆಡ್ಡಿ ಅವರ ಲೇಖನ)

೧೦೫. ಕನ್ನಡ ದಾಖಲು ಸಾಹಿತ್ಯ, ಡಾ.ಕೆ.ರವೀಂದ್ರನಾಥ ಪುಟ ೯೬

೧೦೬. ಅದೇ, ಪುಟ ೯೭

೧೦೭. ಶ್ರೀಕೃಷ್ಣದೇವರಾಯನ ದಿನಚರಿ, (ಸಂ) ಡಾ.ಎ.ಎಸ್.ಎಸ್.ಆಚಾರ್ಯ ಪುಟ ೪

೧೦೮. ಅದೇ, ಪುಟ ೧೩

೧೦೯. ಅದೇ, ಪುಟ ೧೬

೧೧೦. ಅದೇ, ಪುಟ ೧೭

೧೧೧. ಅದೇ, ಪುಟ ೧೮

೧೧೨. ಅದೇ, ಪುಟ ೧೯

೧೧೩. ಅದೇ, ಪುಟ ೨೦, ೨೧

೧೧೪. ಅದೇ, ಪುಟ ೨೨ರಿಂದ ೨೫

ಅಧ್ಯಾಯ ೪

ಅಶ್ವಪ್ರಭೇದಗಳು, ಗುಣಸ್ವಭಾವ ಆರೈಕೆ-ಬಳಕೆ-ವಿಧಿವಿಧಾನ

೪.೧. ಪ್ರವೇಶ

೪.೨. ಅಶ್ವ ಪ್ರಭೇದಗಳು

೪.೨.೧. ಪ್ರಾಂತ ಪ್ರಭೇದಗಳು

೪.೨.೨. ವರ್ಣ ಪ್ರಭೇದಗಳು

೪.೩. ಅಶ್ವಗಳ ಜನನ ವಂಶ ಗುಣಲಕ್ಷಣಗಳು

೪.೩.೧. ಅಶ್ವಗಳ ಜನನ

೪.೩.೧.೧. ಅಮೃತ

೪.೩.೧.೨. ಭಾಷ್ಪ

೪.೩.೧.೩. ವಹ್ನಿ

೪.೩.೧.೪. ದೇವತೆ

೪.೩.೧.೫. ಅಂಡಜ

೪.೩.೧.೬. ಗರ್ಭಾಶಯ

೪.೩.೧.೭. ಸಾಮವೇದ

೪.೩.೨. ಅಶ್ವಗಳ ವಂಶ

೪.೩.೨.೧. ಬ್ರಾಹ್ಮಣ

೪.೩.೨.೨. ಕ್ಷತ್ರೀಯ

೪.೩.೨.೩. ವೈಶ್ಯ

೪.೩.೨.೪. ಶೂದ್ರ

ಅಧ್ಯಾಯ ೪

ಅಶ್ವಪ್ರಭೇದಗಳು, ಗುಣಸ್ವಭಾವ ಆರೈಕೆ-ಬಳಕೆ-ವಿಧಿವಿಧಾನ

೪.೧. ಪ್ರವೇಶ

'ಅಶ್ವ' ಎಂಬ ಪದವು ಮೂಲತಃ ಸಂಸ್ಕೃತ ಪದವಾಗಿದ್ದು, ಕನ್ನಡ ಶಾಸ್ತ್ರಕಾರರು ಎರವಲಾಗಿ ಪಡೆದುಕೊಂಡಿರುವುದನ್ನು ಸಾಹಿತ್ಯ ಅಧ್ಯಯನದಿಂದ ತಿಳಿದುಬರುತ್ತದೆ. ಪ್ರಸ್ತುತ ಅಧ್ಯಯನವು ಕನ್ನಡದಲ್ಲಿ ಕುದುರೆ ಶಾಸ್ತ್ರ ಎನ್ನುವುದಕ್ಕಿಂತ 'ಅಶ್ವಶಾಸ್ತ್ರ' ಎನ್ನುವುದೇ ಸೂಕ್ತವೆನಿಸುತ್ತದೆ. ಏಕೆಂದರೆ 'ಅಶ್ವಶಾಸ್ತ್ರ' ಸಾಹಿತ್ಯವನ್ನು ಬರೆದ ಕವಿಗಳು ಸಂಸ್ಕೃತ ಪಂಡಿತರಾಗಿದ್ದ ಕಾರಣ ಅಂದಿನ ಕಾಲದಲ್ಲಿ ರಾಜಾ ಆಸ್ಥಾನ ಪಂಡಿತರಿಗೆ ಇದು ಹೆಚ್ಚು ಮನ್ನಣೆ ಇರುವ ಹಿನ್ನೆಲೆಯಲ್ಲಿಸಂಸ್ಕೃತಕ್ಕೆ ಮಾರುಹೋದ ಶಾಸ್ತ್ರ ಪಂಡಿತರು ಆ ಸಾಹಿತ್ಯದಲ್ಲಿ ಹೆಚ್ಚು ಕೃಷಿ ಮಾಡಿದ್ದುಂಟು. ರೇವಂತ, ಶಾಲಿಹೋತ್ರ, ಬಾಚರಸ, ಸೋಮೇಶ್ವರ, ಕೆಳದಿ ಬಸವರಸ, ಅಭಿನವಚಂದ್ರ ಇವರೆಲ್ಲರೂ ಸಂಸ್ಕೃತ ಪಂಡಿತರಾಗಿದ್ದ ಕಾರಣ ಶಾಸ್ತ್ರ ಕೃತಿಗಳು ಆ ಭಾಷೆಯಲ್ಲಿ ಹೆಚ್ಚು ರಚನೆಗೊಂಡಿದೆ. ಪ್ರಸ್ತುತ ಅಧ್ಯಾಯವು ಮಹಾ ಪ್ರಬಂಧದ ಹೃದಯಭಾಗವಾಗಿದ್ದು, ಅಶ್ವಪ್ರಭೇದಗಳು, ಜನನ, ವಂಶ, ಬಣ್ಣ, ಆಕಾರ, ಅಂಗರಚನೆ, ಸ್ವಭಾವ, ಗುಣ, ಅವಗುಣಗಳು, ಸುಳಿಗಳು, ತಳಿಗಳು, ಪ್ರಕಾರಗಳು, ಶಿಕ್ಷಣ, ರೋಗಚಿಕಿತ್ಸೆ, ಬಳಕೆ ವಿಧಿವಿಧಾನ ಮುಂತಾದವುಗಳ ಕುರಿತ ಸಮಗ್ರ ಅಧ್ಯಯನವಾಗಿದೆ.

೪.೨. ಅಶ್ವ ಪ್ರಭೇದಗಳು

ಭಾರತೀಯ ಅಶ್ವ ಸಂಸ್ಕೃತಿಯ ಆಕರಗಳ ಪ್ರಕಾರ ಕುದುರೆಗಳ ಉತ್ಪತ್ತಿ ಕ್ಷೇತ್ರಗಳು ಗ್ರಂಥದಿಂದ ಗ್ರಂಥಕ್ಕೆ ಭಿನ್ನವಾಗುತ್ತ ಹೋಗಿವೆ. ಅವುಗಳಲ್ಲಿ ಪ್ರಮುಖವಾಗಿ ಶಾಲಿಹೋತ್ರನ ಅಶ್ವಶಾಸ್ತ್ರದ ಪ್ರಕಾರ ೫೪ ಕುದುರೆಯ ಉತ್ಪತ್ತಿ ಕ್ಷೇತ್ರಗಳಿದ್ದು ಅವು ಹೀಗೆ ಗುರುತಿಸಲ್ಪಟ್ಟಿವೆ.

ಆಜಾನ, ಕಾಂಭೋಜ, ಬ್ಯಾಹೀಕ, ವನಾಯುಜ, ಗಾಂಧಾರ, ಅರಟ್ಟ, ಸಿಂಧು, ಚಾಂಪೇಯ, ತೈತಿಲ, ಮೋಚಕ, ಉಪಮೋಚಕ, ತ್ರೈಗರ್ತ, ಅರ್ಜುನ, ಸಾವಿತ್ರ ಯೌಧೇಯ, ಯಾವನ, ಹ್ರಸ್ವಯಾವನ,

ತುಖಾರ, ಕಾಂದಾರ, ಪಾರ್ವತ, ಓರಸ, ಆವರ್ತ, ಕಾಶ್ಮೀರ, ಶಕಾನಕ, ಉತ್ತರಮದ್ರ, ದಕ್ಷಿಣಮದ್ರ, ಯವನಾಂತದ್ವೀಪ, ಕೈಕಯ, ಅಪರಾಂತ, ಅಂಬಷ್ಟ, ವಾಸಾಂತಕ, ಸೌವೀರ, ದಾರದ, ಸೈವಕ, ಕ್ಷುದ್ರಕ, ಐರಾವತ, ಮಾಲವ, ಆವಂತಿ, ಕಳಿಂಗ, ಮೌತುರು, ವನವಾಸ, ತ್ರಿರಿಂಗ, ಕಥನ, ಪ್ರಾವೃತಕ, ಸೌರಾಷ್ಟ್ರ, ಸಾಲ್ವ, ಕುರುಕ್ಷೇತ್ರ, ಪಾಂಚಾಲ, ಪ್ರೋಥಜ, ಕುಕ್ಕುರ, ಹ್ರಸಕುಕ್ಕುರ, ಹೈಮವತ, ಅಮವತ್ಯುತ್ತರ, ಮಾಗಧಗಳು, ಯಾವ ಯಾವ ಕ್ಷೇತ್ರಗಳಲ್ಲಿ ಕುದುರೆಗಳು ಹುಟ್ಟುತ್ತವೆಯೋ ಅದೇ ಹೆಸರಿನಿಂದ ಕರೆಯುತ್ತಾರೆ.

ಪ್ರಸ್ತುತ ಅಶ್ವಶಾಸ್ತ್ರಕಾರನಾದ ಅಭಿನವಚಂದ್ರನು ಕೊಡುವ ಕುದುರೆಗಳ ಜನ್ಮಕ್ಷೇತ್ರದ ಪಟ್ಟಿ ಶಾಲಿಹೋತ್ರನು ಕೊಡುವದಕ್ಕಿಂತ ಭಿನ್ನವಾಗಿ ಕಾಣುತ್ತದೆ. ಆತನ ಪ್ರಕಾರ ನರ್ಮದೆಯಿಂದ ಉತ್ತರಕ್ಕಿರುವ ಐವತ್ತುನಾಲ್ಕು ಕ್ಷೇತ್ರಗಳು ಕುಲ, ಬಲ, ತೇಜ, ಸ್ವರೂಪ, ಜವ, ಪ್ರಮಾಣದಲ್ಲಿ ಪರಿಪೂರ್ಣವಾಗಿ ಕಂಡುಬರುತ್ತವೆ. ಈ ಪ್ರಕಾರ

"ಬಿಸಕಾಂಭೋಜಕ ಬಾಹ್ಲೀ
ಕ ಸೈಂಧವಾರಟ್ಟ ತೈತಿಲಂ ವಾನೇಯಂ
ಪೆಸರ ಕ್ಷೇತ್ರದ ಹಯಕಾ
ಪೆಸರೆ ಪೆಸರ್ ಜಾತಿಗಳ್ ಗುಣಾಧಾರಂಗಳ್‌ಹ (೬-೭೬)

ಖರಗಂಧರ್ವಕವುರ್ ಖರೋಷ್ಠ ವಿಭವಂ ಕಾಂಭೋಜ ಜಾಳಂಧರಂ
ತುರಗಂ ಮಾಳವ ಕೊಂಗ ಕೋಶಲ ವರಾಳಂ ಬರ್ಬರಂ ತೈತಿಲಂ
ದುರಭಾನೀ ಕರಹಾಟ ಮಾಗಧ ಕಳಿಂಗಂ ಸಿಂಧು ಕೊಲ್ಲಾಪುರಂ
ತುರಗಂ ಸೇಹುಣಮಾದಿಯಾಗಲಿನಿತುಂ ಕ್ಷೇತ್ರಂಗಳೊಳ್ ಪುಟ್ಟುಗುಂ (೬-೭೭)
ವಾಯಕ ಸಂಚಕಳಮಲಜ
ನೇಯಕಮಂ ನಾಳಿದಿರ ಸಮಿನಿಯಾಯಿಕಮಾ
ಮಾಯತಮೆಂಬೀ ಪೆಸರಿಂ
ದಾಯತಮಯ್ವತ್ತು ನಾಲ್ಕು ಜಾತಿ ತುರಂಗಂ"[?] (೬-೭೮)

ಎಂದು ಹೇಳಿ ನರ್ಮದೆಯಿಂದ ದಕ್ಷಿಣಕ್ಕೆ ತೊಂಬತ್ತು ಕ್ಷೇತ್ರಗಳಲ್ಲಿ ಕುದುರೆಗಳು ಹುಟ್ಟುತ್ತವೆ. ಅವು ತೇಜ, ಕುಲ, ಜವ, ಪ್ರಮಾಣ, ಸತ್ವಗಳಲ್ಲಿ ಕನಿಷ್ಠವೆಂದು ಹೇಳಿದ್ದಾನೆ. ಈ ಪಟ್ಟಿಯಲ್ಲಿ ಕೊಲ್ಲಾಪುರ ಮತ್ತು ಸೇಹುಣ ಎನ್ನುವ ಹೆಸರುಗಳನ್ನು ಗಮನಿಸಿದಾಗ ಅವು ಕರ್ನಾಟಕದಲ್ಲಿ ಕುದುರೆ ಸಾಕಣೆ ಕೇಂದ್ರಗಳಲ್ಲಿ ಪ್ರಸಿದ್ಧಿಯಾಗಿದ್ದವು ಎಂದು ಹೇಳಬಹುದು. ಇಮ್ಮಡಿ ಗುರುಸಿದ್ಧನ ಹಾಲಸ್ಯ ಪುರಾಣದಲ್ಲಿ ಕುದುರೆಯ ಪ್ರಮುಖ ಸ್ಥಳಗಳನ್ನು ಕುರಿತು ವಿವರ ನೀಡಲಾಗಿದೆ. ಅವು ಹುಟ್ಟಿದ ಸ್ಥಳದ ಮಹತ್ವ ಮತ್ತು ಪ್ರದೇಶದ

ಪ್ರಾಚೀನತೆ, ಪರಿಸರ ಮುಂತಾದವುಗಳ ಮೇಲೆ ಅವಲಂಬಿತವಾಗಿದೆ. ಹಾಗಾಗಿ ಕುದುರೆಯ ಜನನಕ್ಕೆ ಕಾರಣವಾದ ಪ್ರಮುಖ ಅಂಗಗಳನ್ನು ಗುರುತಿಸಿದ್ದಾನೆ.

"ಇವುಕೇಳ್ ಕಾಂಭೋಜಂಗಳಿ
ವವಗಡದವು ಮತ್ತೆ ಬಾಹ್ಲಿಕಂಗಳಿವೈ ಭೂ
ಧವ ವಾಸಂತಿಕ ಜಂಗಳಿ
ವವಿರತ ಸೌವೀರಜಂಗಳಿವು ಮಾಳವದೊಳ್ (೧೧-೬೭)

ಜನಿಸಿದ ತುರಗಂಗಳ ತುಳ
ವನವೋದಯ ವಾಜಿವೃಂದಮಿದುಮೆ ವನಾಯೂ
ದೃನತುರಗವಾರಮಿದು ಸ
ಜ್ಜನನುತ ಗಾಂಧಾರದೇಶ ಜಂಗಳಿವೈ ಕೇಳ್ (೧೧-೬೮)

ಆರಟ್ಟಸಂಭವಂಗಳಿ
ವಾರಯ್ ಸಿಂಧೂದ್ಭವಂಗಳಿವು ಯವನಂಗಳ್
ಧೀರನೆಯಿವುಕೇಳ್ ಕುಂತಳ
ಚಾರುತುರಂಗಂಳಿವು ಮನೋಗಾಮಿಗಳೈ (೧೧-೬೯)

ಪರ್ವತದ ದೇಶಜಂಗಳಿ
ವುರ್ವಿಗೆ ಸಿದ್ಧಂಗಳಿವಾ ಕಾಶ್ಮೀರಂಗಳ್
ಪರ್ವಿದ ಸದ್ವೀಪಾಂತರ
ದುರ್ವಿದ ವಾಜಿಗಳವೈ ಜಯಪ್ರದಗತಿಗಳ್ (೧೧-೭೦)

ಕೈಕಯಜಂಗಳಿವೈ ಸಂ
ದಾಕಾರ ಕ್ಷೇತ್ರ ಸತ್ಕಳಿಂಗಯುಗಂ ತಾಂ
ಭೂಕಾಂತ ಕೇಳ ಸೌರಾ
ಷ್ಟ್ರಾ ಕಮನೀಯಾಶ್ವಜಾತಿಯೊಳ್ ಬೆರಸುತಣಂ (೧೧-೭೧)

ಹಿಮನಗಜಂಗಳಿವುದ್ಯ
ತ್ಸುಮಗಧಜಂಗಳಿವುಮೆ ಪಾಂಚಾಲಂಗಳಿವೈ
ಸಮುಚಿತ ಸಾತ್ವೀಯಂಗಳಿ
ವಮರ್ದನೆ ಮಂದರಗಿರೀಂದ್ರ ಜಾತಂಗಳಿವೈ"[೨] (೧೧-೭೧)

ಕಾಂಭೋಜ, ಬಾಹ್ಲಿಕ, ವಾಸಂತಿಕ, ಸೌವೀರ ಮಾಳವ ಮುಂತಾದ ಪ್ರದೇಶಗಳ ಐದು ಜಾತಿಯ ಕುದುರೆಗಳು ಹಾಗೂ ತುಳು ದೇಶದಲ್ಲಿ ಜನಿಸಿದ ಹೊಸ ಬಗೆಯ ವೃಂದಗಳಿಂದ ಜನಿಸಿದ ವನಾಯು, ಗಾಂಧಾರದೇಶದಲ್ಲಿ ಜನಿಸಿದ ಕುದುರೆಗಳು ಉತ್ತಮವಾದ ಒಳ್ಳೆಯ ಕುದುರೆಗಳು ಹಾಗೆಯೇ ಅರಟ್ಟ, ಸಿಂಧೂದೇಶ, ಕುಂತಳ ಪ್ರದೇಶದಲ್ಲಿ ಜನಿಸಿದ ಕುದುರೆಗಳು ಧೈರ್ಯಶಾಲಿಗಳಾಗಿರುತ್ತವೆ. ಮನೋಧೈರ್ಯವನ್ನು ಹೊಂದಿರುವ ಇವು ಯುದ್ಧದಲ್ಲಿ ಉಪಯುಕ್ತವಾದವುಗಳು.

ಪರ್ವತದೇಶದಲ್ಲಿ ಜನಿಸಿದ ಕುದುರೆಗಳು ಹಾಗೂ ಕಾಶ್ಮೀರದ ಪೂರ್ವಪ್ರದೇಶದಲ್ಲಿ, ಸದ್ವೀಪದಲ್ಲಿ ಹುಟ್ಟಿದ ಕೆಟ್ಟ ವಾಜಿಗಳಿರಲು ಜಯವನ್ನು ತಂದುಕೊಡುತ್ತವೆ. ಅಲ್ಲದೆ ಉತ್ತಮವಾದ ಗತಿಯನ್ನು ಹೊಂದಿರುತ್ತವೆ. ಕೈಕಯ, ಸಂದಾಕಾರ ಕ್ಷೇತ್ರ, ಸೌರಾಷ್ಟ್ರದಲ್ಲಿ ಜನಿಸಿದ ಕಮನೀಯಾಶ್ವ ಜಾತಿಯ ಕುದುರೆಗಳು ಹಾಗೂ ಹಿಮನಗರ, ಮಗಧ, ಪಾಂಚಾಲ, ಸಾಲ್ವೇ ಮಂದರಗಿರಿಗಳಲ್ಲಿ ಜನಿಸಿದ ಐದು ಜಾತಿಯ ಕುದುರೆ ಉತ್ತಮವಾದವುಗಳು. ಆಯಾ ಪ್ರದೇಶದಲ್ಲಿ ಜನಿಸಿದ ಕುದುರೆಗಳು ಯಾವ ರೀತಿಯ ಬುದ್ಧಿ, ವೇಗ, ಸ್ವಭಾವ, ಚಿಂತನೆ, ಗುಣಲಕ್ಷಣ, ಮುಂತಾದವುಗಳ ಕುರಿತು ವಿವರಿಸಿ, ಕುದುರೆಯ ಪಾವಿತ್ರ್ಯತೆಯನ್ನು ವರ್ಣನೆ ಮಾಡಲಾಗಿದೆ.

ಅಭಿನವಚಂದ್ರ ೫೪ ಕುದುರೆಗಳೆಂದು ಹೆಸರಿಸಿ ಅವುಗಳ ಪಟ್ಟಿಯನ್ನು ಕೊಟ್ಟು ವಿವರಿಸಲು ಹೋಗುವುದಿಲ್ಲ. ಮಾನಸೋಲ್ಲಾಸಕಾರ ಕುದುರೆಯ ಜಾತಿಗಳು ೬೫ ಎಂದು ಹೇಳಿ, ೩೬ನ್ನು ಮಾತ್ರ ಗುರುತಿಸಿ ೨೬ನ್ನು ಗುರುತಿಸದೇ ಇವು ಅಷ್ಟು ಉಪಯುಕ್ತವಾದವುಗಳಲ್ಲವೆಂದು ಹೇಳಿ ಅಷ್ಟಕ್ಕೆ ಬಿಡುತ್ತಾನೆ. ಅದೇ ರೀತಿ ಶಾಲಿಹೋತ್ರನನ್ನು ಅನುಸರಿಸಿ ಮುಂದೆ ಬಂದ ಅನೇಕ ಶಾಸ್ತ್ರಕಾರರು ಕುದುರೆಯ ಪ್ರಕಾರಗಳ ಬಗ್ಗೆ ಅಷ್ಟೊಂದು ಆಸಕ್ತಿಯನ್ನು ತೋರಲಿಲ್ಲವೆಂದು ಹೇಳಬೇಕಾಗುತ್ತದೆ. ಮುಮ್ಮಡಿ ಕೃಷ್ಣರಾಜ ಒಡೆಯರು ಸೌಗಂಧಿಕಾ ಪರಿಣಯ ಕೃತಿಯಲ್ಲಿ ಕುದುರೆ ಸಮಸ್ತತೆಯನ್ನು ಸಾರಾಂಶ ರೂಪದಲ್ಲಿ, ರಗಳೆಯಂತೆ ಚಿತ್ರಿಸುತ್ತಾ ಹೋಗಿದ್ದಾರೆ. ಹಾಗೆ ನೋಡಿದರೆ ಕುದುರೆಗಳ ಪ್ರಕಾರ ಕುರಿತು ವಿವರವಾಗಿ ಸಂಪೂರ್ಣ ಮಾಹಿತಿಯನ್ನು ನೀಡಿದ ಪ್ರಸಿದ್ಧ ಶಾಸ್ತ್ರಕಾರ ಶಿವತತ್ತ್ವರತ್ನಾಕರವನ್ನು ಬರೆದ ಕೆಳದಿ ಬಸವರಾಜ ಎಂದು ಹೇಳಬೇಕಾಗುತ್ತದೆ.

೪.೨.೧. ಪ್ರಾಂತ ಭೇದಗಳು

ಕೆಳದಿ ಬಸವರಾಜ ತನ್ನ ಪ್ರಸಿದ್ಧ ಶಾಸ್ತ್ರ ಕೃತಿಯಾದ ಶಿವತತ್ತ್ವರತ್ನಾಕರದಲ್ಲಿ ಅಶ್ವಗಳ ಜಾತಿ, ಲಕ್ಷಣ, ಪ್ರಕಾರಗಳು, ಗುಣಲಕ್ಷಣಗಳ ಜೊತೆಗೆ ಅವುಗಳ ಸ್ವಭಾವವನ್ನು ಕುರಿತು ಯತಾರ್ಥವಾದ ಮಾಹಿತಿಯನ್ನು ನೀಡುತ್ತಾನೆ. ಪ್ರಾಂತಭೇದಗಳಿಂದಾಗುವ ಲಕ್ಷಣಗಳನ್ನು ನಿರೂಪಿಸುತ್ತಾ. "ಕಾಂಭೋಜ, ಬ್ಯಾಹೀಕ, ವನಾಯುಜ, ಆರಟ್ಟ, ಗಾಂಧಾರ, ಚಾಂಪೇಯ, ಸೈಂಧವ, ತೈತಿಲ, ಪಾಟಲೀಪುತ್ರ, ಮೇಚಕ, ಉಪಮೇಚಕ, ಕುಲಜ, ಉಪಕುಲಜ, ತ್ರೈಗರ್ತ, ಆರ್ಜುನೇಯಕ, ಸಾವಿತ್ರೇಯ, ಯೌಧೇಯ, ಯಾವಂತ್ಯ, ಯಾವನ,

ಹ್ರಸ್ವಯಾವನ, ಸುಖಾರ, ಕಾಂದರೇಯಕ, ವಾರ್ಷ್ಮತೇಯ, ಆವಂತ್ಯ, ರಸಕಾಶ್ಮೀರ, ಸಾಕಾನಕ, ಪಾರ್ವತೇಯ, ದಕ್ಷಿಣ ಮಾದ್ರೇಯ, ಉತ್ತರ ಮಾದ್ರೇಯ, ನಾದೇಯ ದ್ವೀಪ್ಯ, ಕೈಕೇಯ, ಅಪರಾಂತ, ವಸಂತಕ, ಸೌವೀರ, ದಾರದ, ಸೈಂಧಿಕಾ, ಕ್ಷುದ್ರಕ, ಆವರ್ತಕ, ಕಾಲಿಂಗ, ಮೌಕುಲ, ಐರಾವತ, ವಾನವಾಸ್ಯ, ತ್ರಿಲಿಂಗ, ಕ್ರಥನ, ಸುರಾಷ್ಟ್ರಜ ಉಪಾವೃತ್ತ, ಸಾಲ್ವೇಯ ಕುರುಕ್ಷೇತ್ರೋದ್ಭವ, ಪಾಂಚಾಲ, ವಾಚ್ಛಾಲ, ಆಭೀರ ಸಂಭವ, ಹೀಗೆ ೫೪ ಕುದುರೆಗಳು ಎಂದೂ ಹೇಳಿದ್ದರೂ ಇಲ್ಲಿ ೫೨ ಕುದುರೆಗಳ ಹೆಸರು ಮಾತ್ರ ಇದೆ. ಇದೇ ರೀತಿಯ ತೊಂದರೆಯನ್ನು ಮಾನಸೋಲ್ಲಾಸಕಾರನಲ್ಲಿಯೂ ಕಾಣಬಹುದಾಗಿದೆ.

ಕೆಳದಿ ಬಸವರಾಜನು ಕುದುರೆಗಳ ಹೆಸರನ್ನು ಸೂಚಿಸಿ ಅಷ್ಟಕ್ಕೆ ನಿಲ್ಲದೆ ಅವುಗಳ ಲಕ್ಷಣಗಳನ್ನು ಒಂದಂದಾಗಿ ಈ ಕೆಳಗಿನಂತೆ ವಿವರಿಸಿದ್ದಾನೆ.

ಕಾಂಭೋಜ ಅಶ್ವದ ಕುರಿತು ಶ್ಲೋಕ ಒಂದರಲ್ಲಿ

ಕಾಂಭೋಜಾ ಸಮಹಾಲಲಾಟ ಜಘನಸ್ಕಂದಾ ಮಹಾವಕ್ಷಸೋ ದೀರ್ಘಗ್ರೀವಮುಖಾ
ಮಹಾಬಲಜವಾ ಹ್ರಸ್ವಾಂಡ ಮೇಢ್ರಾಸನಾಃ ।
ಶ್ರೀಮಂತಶ್ಚ ಸಮನ್ವಿತಾಶ್ಚ ಚರಣೈರ್ದೀರ್ಘೈಃ ಸುಜಾತೈರ್ಭುಜೈಃ ಸರ್ವವ್ಯಂಜನ
ಪೂಜಿತಾ ದೃಢಶಪಾರ್ಶ್ವೈಢೂರ್ಯನೇತ್ರಾಶ್ಚತೇ (೧೦)
ಶ್ವೇತಾಶ್ಚ ಶೋಣಶ್ಚ ಭವಂತ್ಯದೀನಾ ಸಕೃಷ್ಣವರ್ಣಾತಿವಿವರ್ಣಕಾಶ್ಚ ಹ್ರಸ್ವೇಶ್ಚ ಕೂರ್ಚೈರ್ಮೃ
ದುರೋಮಕೇಶಾ ಹ್ರಸ್ವೇನ ಪುಷ್ಮೇನ ಸವರ್ಷ್ಮವಂತಃ (೧೧)
ಸುಸಂಹತಾಂಗಾಃ ಪ್ರಿಯದರ್ಶನಾಸ್ತೇ ನಿತ್ಯಂ ಚ ಭರ್ತುರ್ವಶಗಾ ಮನೋಜ್ಞಾಃ
ತೇಜಸ್ವಿನಃ ಸತ್ತ್ವಯುತಾಃ ಸುಶೀಲಾಃ ಶ್ರೇಷ್ಠಾಶ್ಚ ರೂಪೇಣ ಕುಲೇನದೃಪ್ತಾಃ
ಸಮವೃತ್ತಜಾನುಜಂಘಾ ವೃತ್ತೋರುಹ್ರಸ್ವಕುಕ್ಷಿಕಖುರಾಃ। ಪೀನಸ್ತನುಲಾಂಗೂಲಾಃ
ಸುಸ್ನಿಗ್ಧಾಃ ಶಂಕುಕರ್ಣಾಶ್ಚ (೧೨)
ಸಮಹಾಸೃಕ್ಕಪ್ರೋಥಾ ಮಹೋದರಾಸ್ತೇ ಮಹೋತ್ಸಾಹಃ। ಪ್ರತ್ಯಶ್ವಂ ಬಡಬಾಮಪಿ
ದೃಷ್ಟಾತೇನೈವ ಹೇಷಂತೇ
ಸ್ಪಷ್ಟಮುಖಾಃ ಸ್ಥಿರನಾದಾಃ ಸ್ವಾಮಿಹಿತಾಸ್ತೇ ಸುಪಾರ್ಷ್ಣಯಃ ಶೂರಾಃ। ಸುಖಸಂಚಾರಾ ವಾಹಾಃ
ಕಾಂಭೋಜಾಸ್ತೇ ಸಮಾಖ್ಯಾತಾಃ"[೩] (೧೩)

ಕಾಂಭೋಜ ಜಾತಿಯಲ್ಲಿ ಹುಟ್ಟಿದ ಅಶ್ವಗಳಿಗೆ ವಿಶಾಲವಾದ ಹಣೆ, ಹಿಂಭಾಗ, ಹೆಗಲು, ಎದೆ ಭಾಗಗಳು ಇರುತ್ತವೆ. ನೀಳವಾದ ಕೊರಳು ಮತ್ತು ಮುಖ ಗಿಡ್ಡವಾದ ಅಂಡ, ಮೇಢ್ರ (ಜನೇಂದ್ರಿಯ) ಮತ್ತು ಆಸನ ಇರುತ್ತವೆ ಎಂದು ಹೇಳಿ, ದೀರ್ಘವಾದ ಕಾಲುಗಳು, ಸೊಗಸಾದ ಭುಜ, ದೃಢವಾದ ಗೊರಸುಗಳು, ವೈಢೂರ್ಯದಂತೆ ಹೊಳೆಯುವ ಕಣ್ಣುಗಳು ಇದ್ದು, ಸರ್ವ ಲಕ್ಷಣ ಸಂಪನ್ನವಾಗಿರುವ

ಕಾಂಭೋಜಾಶ್ವಗಳು ಅಶ್ವಕುಲದಲ್ಲೇ ಅತ್ಯಂತ ಶ್ರೇಷ್ಠವೆಂದು ಪ್ರಸಿದ್ಧಿ ಪಡೆದಿವೆ. ಇದರ ಕುರಿತು ಭಾಸನ ವಿರಚಿತ ಕೃತಿಯೊಂದರಲ್ಲಿ 'ಕಾಂಭೋಜಾಶ್ವಗಳನ್ನು ದಾನ ಮಾಡಲೇ ಎನ್ನುತ್ತಾನೆ ಕರ್ಣ' ಎಂಬ ವಿಚಾರ ಬರುತ್ತದೆ. ಇದರಿಂದ ಕುದುರೆಯ ಮಹತ್ವ ಮತ್ತು ಪ್ರಾಚೀನತೆಯ ಕಲ್ಪನೆ ಮೂಡುತ್ತದೆ. ಈ ಕೃತಿ ಕ್ರಿ.ಶ. ೨ನೇ ಶತಮಾನದ್ದಾಗಿದ್ದು, ಆ ಹೊತ್ತಿಗಾಗಲೇ ಭಾರತದಲ್ಲಿ ಕುದುರೆಗಳು ಪ್ರಸಿದ್ಧಿಯನ್ನು ಪಡೆದುಕೊಂಡಿದ್ದವು. ಅಶ್ವಗಳು ಬಲಶಾಲಿ, ವೇಗಶಾಲಿಗಳಾಗಿದ್ದು, ಇವುಗಳ ಬಣ್ಣ ಬಿಳಿ, ಕೆಂಪು, ಕಪ್ಪು ಮತ್ತು ಮಾಸಲು ಬಣ್ಣ, ಗಿಡ್ಡನೆಯ ಗಡ್ಡ, ಮೃದುರೋಮ, ಚಿಕ್ಕಪೃಷ್ಠ, ಎತ್ತರದ ನಿಲುವು, ಅಂಗಶುದ್ಧಿ, ಸುಂದರಾಕಾರ, ಯಜಮಾನನಿಗೆ ಬೇಗನೆ ವಶವಾಗುವಿಕೆ, ಆದಟಿಲ್ಲದ ಸೌಮ್ಯಗುಣ, ತೇಜಸ್ಸು, ಸತ್ತ್ವಗಳಿಂದ ಕೂಡಿರುವ ಈ ಅಶ್ವಗಳು ರೂಪಕುಲಗಳಲ್ಲಿ ಶ್ರೇಷ್ಠವೆನಿಸಿವೆ.

ಕಾಂಭೋಜಾಶ್ವ: ಸಮವಾದ ಮೊಣಗಂಟು, ಹಿಮ್ಮಡಿ, ತೊಡೆಭಾಗ, ಗುಂಡಾದ ಗೊರಸುಗಳು, ಪುಷ್ಟವಾದ ದೇಹ, ದಪ್ಪಗಿರುವ ಬಾಲ, ಮೊನಚಾದ ಕಿವಿಗಳು ಇರುವ ಈ ಕುದುರೆಗಳು ತುಂಬಾ ಸ್ನೇಹಶೀಲವಾದವುಗಳು. ಮಹೋದರಗಳೂ, ಉತ್ಸಾಹಶಾಲಿಗಳೂ ಆಗಿವೆ. ಇನ್ನೊಂದು ಕುದುರೆ ಹೆಣ್ಣು ಕುದುರೆಯನ್ನು ಕಂಡಾಗ ಕೆನೆಯುವುದಿಲ್ಲ. ತಿದ್ದಿತೀಡಿದ ಮುಖ ಲಕ್ಷಣ. ಗಂಭೀರನಾದ, ಸ್ವಾಮಿಹಿತಕಾರಿತ್ವ, ಪರಾಕ್ರಮ, ಒಳ್ಳೆ ಸಂಚಾರವುಳ್ಳವು ಕಾಂಭೋಜಾಶ್ವಗಳಾಗಿವೆ.

ಬ್ಲಾಹೀಕಾಶ್ವಗಳ ಕುರಿತಂತೆ ನೋಡುವುದಾದರೆ ಇವು "ಕಾಂಭೋಜಾಶ್ವಗಳಂತೆಯೇ ಅಂಗಸೌಷ್ಠವ, ಬಣ್ಣ, ರೂಪವುಳ್ಳವು. ಒಂದು ಗಮನಿಸಬೇಕಾದ ವ್ಯತ್ಯಾಸವೆಂದರೆ ಇವು ಸ್ವಲ್ಪ ದೀರ್ಘದೇಹಗಳನ್ನು ಹೊಂದಿದ್ದು, ನೀಳವಾದ ಹಿಂಭಾಗವುಳ್ಳವು. ಅಂಗಾಂಗಗಳ ಪರಿಣಾಹ (ಅಗಲ) ಹರವಿನಲ್ಲಿ ಸ್ವಲ್ಪ ಚಿಕ್ಕವು. ಆದರೆ ತುಂಬು ದೇಹಿಗಳೂ, ಚಂಚಲವಾದ ಹಿಂಭಾಗವುಳ್ಳವೂ, ದೀರ್ಘವಾದ ಕತ್ತು ಮತ್ತು ಮುಖವುಳ್ಳವೂ ಆಗಿವೆ. ತೀಕ್ಷ್ಣ ನೋಟದಿಂದ ಕೂಡಿರುವ ಇವು ಶೌರ್ಯ ಸಂಪನ್ನವೂ ಆಗಿವೆ. ಧೈರ್ಯಶಾಲಿಗಳು, ರೋಷವುಳ್ಳವು, ಹಲ್ಲು ಕಡಿಯುವ ಸ್ವಭಾವವನ್ನು ಹೊಂದಿದ್ದು, ಜೇನು ಬಣ್ಣದಿಂದ ಕೂಡಿರುತ್ತವೆ. ಇವು ಶೌರ್ಯ ಗುಣದಿಂದಾಗಿ ಎಂಥ ಸಂಕಷ್ಟ ಕಾಲದಲ್ಲಿಯೂ ಕೆಳಗೆ ಬಿದ್ದ ರಾವುತನನ್ನು ಬಿಡದೆ ಕಾಯುವ ವಿಶೇಷಗುಣವುಳ್ಳವು ಇದು ಈ ಕುದುರೆಯ ಪ್ರಮುಖ ವೈಶಿಷ್ಟ್ಯವೂ ಹೌದು ಗುಣ ಸ್ವಭಾವವು ಹೌದು.

'ವನಾಯುಜಾಶ್ವಗಳು' -ಮಧ್ಯಮ ಪ್ರಮಾಣವುಳ್ಳ, ದಷ್ಟಪುಷ್ಟವಾಗಿರುವ, ಅಂಗಸೌಷ್ಠವುಳ್ಳ, ಸುಂದರ ಕಣ್ಣುಗಳುಳ್ಳವಾಗಿದ್ದು, ಇವು ಗಿಡ್ಡದಾದ ಅಂಡ, ಮೇಢ್ರಗಳಿಂದ ಕೂಡಿರುತ್ತವೆ. ಕಿವಿಗಳು ಮೊನಚಾಗಿದ್ದು, ಲಘುವೂ, ಪ್ರಚಂಡವೂ, ಚುರುಕಿನ ಸ್ವಭಾವವುಳ್ಳವೂ, ಧೈರ್ಯಶಾಲಿಗಳು ಆಗಿರುತ್ತವೆ. ಮುಂಭಾಗದಲ್ಲಿ ಎತ್ತರವಾಗಿಯೂ, ಹಿಂಭಾಗದಲ್ಲಿ ಗಿಡ್ಡದಾಗಿಯೂ ಇದ್ದು, ದಪ್ಪಪಾದಗಳನ್ನು, ದೃಢವಾದ ಕುಷ್ಟಿಕಗಳನ್ನು ಹೊಂದಿದ್ದು, ಬಹುಮಟ್ಟಿಗೆ ಕಪ್ಪು ಬಣ್ಣದಿಂದಿದ್ದು ಮಹಾಸತ್ತ್ವಶಾಲಿಗಳಾಗಿರುತ್ತವೆ. ಉಪಾಂಡದಲ್ಲಿ

ವಿಚಿತ್ರವಾಗಿ ದೀರ್ಘವಾಗಿದ್ದು, ಕೆನೆಯುವಾಗ ಮೇಕೆ, ಆನೆಗಳಂತೆ ಸದ್ದು ಮಾಡುತ್ತವೆ. ಸಂದೇಹವಿಲ್ಲದ ನಡವಳಿಕೆ, ಸತ್ತ್ವ, ತೇಜಸ್ಸು, ಬಲಗಳನ್ನು ಹೊಂದಿರುವುದು ಇವುಗಳ ಪ್ರಮುಖ ವೈಶಿಷ್ಟ್ಯ.

'ಗಾಂಧಾರ' ಜಾತಿ- ಈ ಕುದುರೆಗಳು ವನಾಯುಜದ ಒಂದು ಉಪಜಾತಿಯಾಗಿದ್ದು, ಇವು ಕಪ್ಪು, ಕೆಂದು, ಮಾಸಲು, ಹೊಗೆಬಣ್ಣ, ಜಿಂಕೆಯಬಣ್ಣ, ಶ್ಯಾಮಲವರ್ಣ ಹೀಗೆ ಅನೇಕ ಬಣ್ಣಗಳಿಂದ ಕೂಡಿದ್ದು, ಉತ್ತಮ ಮೈಕಟ್ಟಿನಿಂದಲೂ, ಅಂಗಸೌಷ್ಠವದಿಂದಲೂ ಶೋಭಿಸುತ್ತವೆ. ದೃಢವಾದ ಹಿಂಭಾಗ, ದಪ್ಪಕೇಸರ, ವಿಷಮವಾದ ಅಂಡಭಾಗ, ಉದ್ದನೆಯಮುಖ, ಮೈ ಇರುವ ಈ ಜಾತಿಯ ಕುದುರೆಗಳು ತೀವ್ರ ಉತ್ಸಾಹಶಾಲಿಗಳಾಗಿದ್ದು, ಗರ್ವಿಷ್ಠವೂ ಆಗಿರುತ್ತವೆ.

ಅರಟ್ಟ- ಈ ಜಾತಿಯ ಅಶ್ವಗಳು ಗಿಡ್ಡದಾದ ಹಿಂಭಾಗ, ಎತ್ತರವಾದ ಮುಂಭಾಗ, ಲಕ್ಷಣವಾದ ಮುಖ, ಶುಭದೃಷ್ಟಿ, ಮೃದುಸುಂದರವಾದ ರೋಮ, ತೆಳ್ಳಗಿನ ಬಾಲ, ತೆಳು ಚರ್ಮ ಮೊನಚಾದ ಗಿಡ್ಡಕಿವಿ, ಮೃದುವಾದ ಕುತ್ತಿಗೆ, ತುಂಬಿದ ಮೈ, ಸ್ಥಿರವಾದ ಹೆಜ್ಜೆ, ಉತ್ತಮ ಕುಷ್ಠಿಕ (ಒಳಕಾಲ್ಬೆರಳು) ಬಹುಮಟ್ಟಿಗೆ ಕೆಂಬಣ್ಣದಿಂದ ಕೂಡಿದ್ದು, ಕಪ್ಪುವರ್ಣ ಮತ್ತು ಇತರ ವರ್ಣಗಳೂ ಹೊಂದಿವೆ. ಮಹಾವೇಗಶಾಲಿಗಳೂ, ಪರಾಕ್ರಮಿಗಳೂ, ಅದಟಿಲ್ಲದ ಈ ಅರಟ್ಟ ಕುಲದ ಕುದುರೆಗಳು ಅತ್ಯಂತ ಬಲಶಾಲಿಗಳಾಗಿರುವುದು ಇವುಗಳ ಪ್ರಮುಖ ಗುಣಲಕ್ಷಣವಾಗಿದೆ.

ಚಾಂಪೇಯಾಶ್ವಗಳು-ಗುಂಡಾದ ಹೆಗಲು, ಹಿಂಭಾಗ, ಜಿಂಕೆಯಂಥ ಜಂಘೆಗಳು (ಮೊಣಗಂಟು) ತೆಳುವಾದ ಒಳ್ಳೆಯ ಗಾತ್ರವುಳ್ಳ ಈ ಕುದುರೆಗಳು ಸುಗಂಧಿಗಳೆಂದೂ ಪ್ರಸಿದ್ಧವಾಗಿವೆ. ಉತ್ತಮ ರೋಮ, ದಪ್ಪಕಣ್ಣು, ಹಣೆ, ಕುತ್ತಿಗೆಯ ಹಿಂಭಾಗ, ಸ್ಥಿರಪಾದ, ಕುಷ್ಠಿಕವುಳ್ಳ ಈ ಕುದುರೆಗಳು ಬಲಶಾಲಿಗಳೂ, ವೇಗವುಳ್ಳವೂ, ಸಾರವುಳ್ಳವೂ, ತೇಜಸ್ಸುಳ್ಳವೂ ಆಗಿದ್ದು, ಅಂಗ ಸೌಷ್ಠವದಲ್ಲಿ ಉತ್ತಮವಾಗಿರುತ್ತವೆ.

'ಸೈಂಧವಾಶ್ವ'ಗಳಿಗೆ ಸ್ಥಿರಪಾದ, ವಿಶಾಲವಾದ ಹಿಂಭಾಗ; ಉದ್ದನೆಯ ಕತ್ತು, ಮುಖ, ದಪ್ಪಕಣ್ಣು, ತೆಳುವಾದ ಕೇಸರ, ಮೊನಚಾದ ಕಿವಿ (ಶಂಕುಕರ್ಣ), ತೆಳುಚರ್ಮ ಇರುತ್ತವೆ. ಬೃಹತ್ ಕಾಯ ಮತ್ತು ಉತ್ಸಾಹಶೀಲತೆಯೂ ಉಂಟು. ತೆಳುವಾದ ತುದಿಬಾಯಿ, ದೊಡ್ಡಮೂಗಿನ ಹೊರಳೆ, ಉದ್ದನೆಯ ಜನನೇಂದ್ರಿಯ ಸೈಂಧವಾಶ್ವಗಳ ವಿಶೇಷ ಲಕ್ಷಣವಾಗಿದೆ.

'ತೈತಿಲ' ಜಾತಿಯ ಕುದುರೆಗಳಿಗೆ ದಪ್ಪಕೊರಳು, ಹೆಗಲು, ಗಲ್ಲ ಇದ್ದು, ಬಾಲ, ರೋಮಗಳು ಮಂದವಾಗಿರುತ್ತವೆ. ಇವುಗಳು ಬುದ್ಧಿಯಿಂದ ಮಂದವಾಗಿದ್ದು, ಸ್ಥೂಲವಾದ ಜನನೇಂದ್ರಿಯ, ಕಣ್ಣು, ಪುಷ್ಟದೇಹ, ಎತ್ತರವಾದ ಕುತ್ತಿಗೆ ಇರುವ ಈ ಅಶ್ವಗಳು ಬಲ ಶಾಲಿಗಳೂ ವೇಗವುಳ್ಳವೂ ಆಗಿರುತ್ತವೆ. ಉತ್ತಮ ಮೈಕಟ್ಟು, ಲಘುತ್ವ, ದೃಢಪಾದಗಳು, ಚೆಂದದ ಕುಷ್ಠಿಕೆಗಳು, ವಿಶಾಲವಾದ ಹಣೆ, ಎದೆ, ಹಿಂಭಾಗ, ದೊಡ್ಡಕಣ್ಣು (ದೂರನೋಟದ ಸಾಮರ್ಥ್ಯ) ಇವು ತೈತಿಲಾಶ್ವಗಳ ಲಕ್ಷಣಗಳು. ಸತ್ತ್ವಶಾಲಿಗಳೂ, ಕಷ್ಟಸಹಿಷ್ಣುಗಳೂ ಆಗಿದ್ದರೂ ಹಸಿವು ನೀರಡಿಕೆಯನ್ನು ಇವು ತಡೆಯಲಾರದ ಗುಣ ಸ್ವಭಾವ ಹೊಂದಿವೆ.

'ಪಾಟಲೀಪುತ್ರಾಶ್ವ'ಗಳು ಅನೇಕ ಬಣ್ಣಗಳಿಂದ ಕೂಡಿರುತ್ತವೆ. ಒಳ್ಳೆಯ ಅಂಗಸೌಷ್ಠವ, ಕಪ್ಪುಬಣ್ಣ, ಸ್ಥೂಲವಾದ ಎದೆ, ಮೊನಚಾದ ತುದಿ, ನಲುಗದ ಕಿವಿ, ತಿಳಿಯಾದ ಮುಖ, ವಿಶಾಲವಾದ ಹಿಂಭಾಗವುಳ್ಳ ಈ ಅಶ್ವಗಳದ್ದು ಅದಟುತನ ಹೆಚ್ಚು. ನೀಳವೂ, ವಿಶಾಲವೂ ಆದ ಕಮಾನಿನಂತೆ ಬಾಗಿದ ಕತ್ತು, ದೊಡ್ಡ ಹೆಗಲು, ವಿಶಾಲವಾದ ಬೆನ್ನು, ತೆಳುವಾದ, ವೃತ್ತಾಕಾರದ ತೊಡೆ, ಕಾಲುಗಳು ಚಿಕ್ಕದಾದ ಕುಪ್ಪಿಕೆ, ಬಾಲ, ತೆಳುಸೊಂಟ, ಸಾಧಾರಣ ಗಾತ್ರದ ಹೊಟ್ಟೆ, ತುಂಬುರೋಮ, ತುಂಬುಮೈ, ಕರ್ಕಶವಲ್ಲದ ಸ್ವಭಾವ ಇವುಗಳಿಂದ ಕೂಡಿರುತ್ತವೆ.

'ಮೇಚಕಾಶ್ವ'ಗಳಿಗೆ ಮೆದುವಾದ ಬೆನ್ನಿರುತ್ತವೆ. ಇವು ಗಂಭೀರ ಸ್ವಭಾವವುಳ್ಳವು. ಸತ್ತ್ವ, ಬಲ, ತೇಜಸ್ಸುಗಳಲ್ಲಿ ಮಧ್ಯಮ ವರ್ಗಕ್ಕೆ ಸೇರುತ್ತವೆ. ಇನ್ನೂ 'ಉಪಮೇಚ'ಕಾಶ್ವಗಳಿಗೆ ಗಿಡ್ಡವೂ, ದಪ್ಪವಾದ ಬಾಲ ಕೂದಲಿರುತ್ತವೆ. ಮೃದುಮೈ, ದುರ್ಬಲವಾದ ಗೊರಸು, ತೆಳುದೇಹ, ಉತ್ತಮವಾದ ಕುಪ್ಪಿಕೆ, ಎತ್ತರವಾದ ತಲೆ, ಕತ್ತು, ಗಿಡ್ಡ ಎದೆ ಭಾಗ ಇರುವ ಇವುಗಳ ಲಕ್ಷಣ. ಹೀನ ಮುಖವುಳ್ಳವು, ವಿಕಾರವಾದ ಕಣ್ಣಿರುತ್ತವೆ. ಇವು ಈ ಕುದುರೆ ಲಕ್ಷಣಗಳಾಗಿವೆ.

'ಕುಲಜಾಶ್ವ' -ಈ ಜಾತಿ ಕುದುರೆಗಳು ನೀಳವಾದ ಬೆನ್ನು, ಹೆಗಲು, ಬಾಲ, ಕೂದಲು, ಮುಖ, ಗಿಡ್ಡದಾದ ಜನನೇಂದ್ರೀಯ, ತೆಳ್ಳನೆಯ ಸೊಂಟ, ದುಂಡಗಿನ ಕೊರಳು, ಉತ್ತಮ ಕುಪ್ಪಿಕೆ, ಸೂಕ್ಷ್ಮ ಚರ್ಮ ಮತ್ತು ಕೇಸರ, ತೆಳುವಾದ ಎದೆ ಭಾಗದಿಂದ ಕೂಡಿದ್ದು, ಈ ಅಶ್ವಗಳು ಆಲಸ್ಯ ಗುಣಗಳನ್ನು ಹೊಂದಿರುತ್ತವೆ.

'ಉಪಕುಲಜಾಶ್ವ' -ಇವು ಗಿಡ್ಡವಾಗಿದ್ದು, ತೆಳ್ಳನೆಯ ಕತ್ತು, ತೊಡೆಭಾಗ, ಕುಪ್ಪಿಕೆವುಳ್ಳವು. ಉದ್ದನೆಯ ಬಾಲ, ರೋಮ, ನೀಳ ಹೆಗಲು, ವಿಶಾಲ ಎದೆ ಇತ್ಯಾದಿ ಲಕ್ಷಣಗಳಿಂದ ಕುಲಜಗಳೊಡನೆ ಸೌಮ್ಯಹೊಂದಿದ್ದರೂ, ಅವುಗಳಿಗಿಂತ ಕೊಂಚ ನೀಳಕಾಯಗಳಾಗಿರುತ್ತವೆ.

ಅಲ್ಪಬಲ, ತೇಜಸ್ಸು, ಸತ್ತ್ವ, ಪರಾಕ್ರಮದಿಂದ ಕೂಡಿದ ಈ ಅಶ್ವಗಳು ಪೆಡಸಾಗಿರುವವು ಇವುಗಳಿಗೆ ಸೊಂಟಭಾಗ ಕಿರಿದಾಗಿರುತ್ತದೆ.

'ತ್ರೈಗರ್ತ' ಕುದುರೆಗಳು ಬಲಶಾಲಿಗಳಾಗಿದ್ದು ಇವು ಪೆಡಸಾಗಿರುವುದಿಲ್ಲ. ಗಿಡ್ಡಕತ್ತು, ವಿಶಾಲ ಎದೆ, ಒರಟು ಬಾಲ, ಕೇಸರವುಳ್ಳವು ಬಹುಮಟ್ಟಿಗೆ ಮೊಲದಂತೆ ತೊಡೆ, ಮುಖ, ಬಾಲ, ಕೇಸರವುಳ್ಳವು ಕೋಪವುಳ್ಳವು, ಶೌರ್ಯವಿಲ್ಲದವಾಗಿದ್ದು ಸವಾರರಿಗೆ ಅಷ್ಟೇನೂ ಸುಲಭವಾದವುಗಳಲ್ಲ.

ಆರ್ಜುನೇಯಾಶ್ವಗಳು-ಇವು ವಿಶಾಲ ಎದೆ, ದಪ್ಪಕಣ್ಣು, ಕೇಸರವುಳ್ಳವು. ಉತ್ತಮ ಕುಪ್ಪಿಕೆ; ಸುಂದರ ಮುಖ, ಉದ್ದನೆಯ ಮೇಢ್ರ, ವಿಶಾಲವಾದ ಹೆಗಲು, ಉದ್ದ ಕುತ್ತಿಗೆ, ಕಪ್ಪು ಮತ್ತು ಇತರ ಸುಂದರ ಬಣ್ಣಗಳನ್ನು ಹೊಂದಿದ್ದು, ವೇಗಶಾಲಿಗಳೂ, ಕ್ರೂರ ಸ್ವಭಾವವನ್ನು ಹೊಂದಿವೆ.

'ಸಾವಿತ್ರೇಯಾ' ಈ ಕುದುರೆಗಳು ಗಿಡ್ಡ ಬೆನ್ನು, ಹರವಾದ ಹಿಂಭಾಗವುಳ್ಳವಾಗಿದ್ದು ದೃಢತೆಯನ್ನು ಹೊಂದಿರುತ್ತವೆ. ಕೆಟ್ಟದಾದ ಸೊಟ್ಟಮೂತಿ, ದಪ್ಪವಾದ, ಉದ್ದವಾದ ಬಾಲ ಕೇಸರಗಳು, ಜಿಂಕೆಯಂತೆ ಗೊರಸುಳ್ಳವು. ಸ್ಥಿರ ಮಾಂಸವುಳ್ಳವು ಮತ್ತು ಸುಗಂಧಿಯಾಗಿರುವ, ಕೆಲವು ಮೆದು ಮೈ, ಸುಂದರ ಕಣ್ಣು, ವಿಶಾಲಪಾದ, ನೀಳತೊಡೆ, ಹೆಗಲು, ಬೆನ್ನು ವಿಶಾಲವಾದ ಎದೆ ಇರುತ್ತವೆ. ಇವು ವೇಗಶಾಲಿ, ಸತ್ತ್ವಶಾಲಿ, ಶೌರ್ಯಶಾಲಿಗಳಾಗಿರುತ್ತವೆ.

'ಯೌಧೇಯಾಶ್ವ' ಇವುಗಳಿಗೆ ಗಿಡ್ಡ ಕಿವಿ ಮತ್ತು ತುಟಿಗಳಿರುತ್ತವೆ. ಬಲ, ತೇಜಸ್ಸು ಮತ್ತು ಕಾರ್ಯಕ್ಷಮತೆ ಉಳ್ಳವು. ಎತ್ತರವಾದ, ಸುಪುಷ್ಟ ಕತ್ತು, ಗುಂಡಾದ ಸೊಂಟ, ಎದೆ ಭಾಗ, ಕುಕ್ಷಿಕೆಗಳಿರುತ್ತವೆ. ನೀಳವಾದ ಬಾಲ, ಕೂದಲು, ಉತ್ತಮವಾದ ಗೊರಸುಗಳಿದ್ದು, ತೆಳು ಕಂದು ಬಣ್ಣದಿಂದ ಕೂಡಿರುತ್ತದೆ. ಗುಂಡುಮುಖ, ವಿಶಾಲ ಎದೆ, ತೆಳುಚರ್ಮ, ಸೂಕ್ಷ್ಮರೋಮ, ಮಗ್ನಸಂಧಿ ಉತ್ತಮ ಅಂಗಸೌಷ್ಠವ ಇರುತ್ತವೆ. ಈ ಜಾತಿಯ ಅಶ್ವಗಳು ಹಟಮಾರಿಗಳಾಗಿರುತ್ತವೆ. ಈ ಎರಡೂ ಜಾತಿಯವು ಭಾರಹೊರುವುದರಲ್ಲಿ ಮಾರ್ಗಕ್ರಮಣದಲ್ಲಿ ಶೀಘ್ರಗತಿ ಉಂಟು.

'ಯಾವನಾಶ್ವ' ಸುಂದರವಾದ ಹಣೆ, ಸೊಗಸಾಗ ಕಣ್ಣು, ಉತ್ತಮ ಮೈಕಟ್ಟು, ತೆಳುವಾದ ಬೆನ್ನು, ನೀಳಮುಖ, ತೆಳುಚರ್ಮ, ಸೂಕ್ಷ್ಮರೋಮ, ತುದಿನಲುಗದ ಕಿವಿ ಇತ್ಯಾದಿ ಲಕ್ಷಣ ಹೊಂದಿರುವ ಇವು ಮೆಲ್ಲಗೆ ಚಲಿಸುತ್ತವೆ. ಕೆಲವು ಕುದುರೆಗಳು ಉತ್ತಮವಾದ ಬೆನ್ನು, ಹಿಂಭಾಗ, ಎದೆ, ಎತ್ತರದ ನಿಲುವು, ವಿವಿಧ ವರ್ಣಗಳಿಂದ ಕೂಡಿದ್ದು, ಮೋಹಕವಾಗಿರುವುದಷ್ಟೇ ಅಲ್ಲದೇ ಬುದ್ಧಿಶಾಲಿಗಳು ಆಗಿರುತ್ತವೆ. ಉತ್ತಮವಾದ ಗೊರಸುಗಳಿರುವ ಇವು ಅತ್ಯಂತ ಬಲಶಾಲಿಗಳು, ಗಂಭೀರ ಸ್ವಭಾವ, ಸತ್ತ್ವ ತೇಜಸ್ಸುಳ್ಳವು; ಸ್ಥಿರವಾದ ಮತ್ತು ಶೀಘ್ರಗಾಮಿಗಳು ಎಲ್ಲ ವಿಧವಾದ ಕಾರ್ಯ ಕ್ಷಮತೆವುಳ್ಳ ಯಾವನಾಶ್ವಗಳು ದುಂಡಗಿನ ಮುಖ ಮತ್ತು ನೀಳವಾದ ಮುಂಗಾಲುಗಳಿಂದ ಕೂಡಿರುತ್ತವೆ.

'ಯಾವನ ವಾಮನಾಶ್ವಗಳು' ಸ್ವಾಭಾವಿಕವಾಗಿ ಗಿಡ್ಡದಾದ ದೃಢದೇಹ, ಉತ್ತಮ ಅಂಗಸೌಷ್ಠವ ಹೊಂದಿದ್ದು ಇವು ಮನೋಹರವಾಗಿರುತ್ತವೆ. ಸತ್ತ್ವಶಾಲಿಗಳೂ, ಬಲಶಾಲಿಗಳೂ ಆಗಿರುತ್ತವೆ. ಉತ್ತಮ ವರ್ಣ, ಸುಂದರವಾದ ಗೊರಸು, ದಷ್ಟಪುಷ್ಟ ಮೈ, ಸುಂದರರೋಮ, ಬಾಲ ಇವು ನೋಡಲು ಪ್ರಿಯವಾಗಿರುತ್ತವೆ. ಕಠಿಣವೂ, ತುಂಟ ಸ್ವಭಾವದವೂ ಆಗಿದ್ದು ಬುದ್ಧಿಶಾಲಿಗಳಾಗಿರುತ್ತವೆ.

'ಸುಖಾದಾಶ್ವಗಳು' ಬೃಹದ್ದೇಹಿಗಳಾದ ಇವು ವೇಗಶಾಲಿಗಳೂ, ಸತ್ವಶಾಲಿಗಳೂ ಆಗಿವೆ. ಭಾರ ಹೊರಬಲ್ಲ, ದೀರ್ಘಪ್ರಯಾಣ, ಕ್ಲೇಶವನ್ನು ಸಹಿಸಬಲ್ಲ, ವಿಶಾಲವಾದ ಎದೆಭಾಗ ಮತ್ತು ಹೊಟ್ಟೆಯಿಂದ ಕೂಡಿದ್ದು, ಎತ್ತಿನಂತೆ ಆಕಾರವುಳ್ಳವು, ಸ್ಥಿರಬುದ್ಧಿ, ಸನ್ನಡತೆ, ಆತ್ಮಗೌರವ ಇವುಗಳ ವಿಶೇಷ ಲಕ್ಷಣಗಳು. ವಿವಿಧ ವರ್ಣವುಳ್ಳ, ಹರವಾದ ಹಿಂಭಾಗವುಳ್ಳ, ದೃಢಪಾದ, ಸುಕುಕ್ಷಿಕ ಮತ್ತು ದೃಢವೂ, ಸಮಾನವೂ ಆದ ಗೊರಸುಗಳಿಂದ ಕೂಡಿರುತ್ತವೆ. ಅಲ್ಲದೇ ಮಹಾಪರಾಕ್ರಮಿಗಳು ಆಗಿರುತ್ತವೆ.

'ವಿಷಮೇಯಾಶ್ವ' -ಇವುಗಳನ್ನು ಅತ್ಯಂತ ಸೂಕ್ಷ್ಮಕೇಶಗಳಿಂದಲೇ ಗುರುತಿಸಬಹುದು. ತೆಳುಹೊಟ್ಟೆ, ದುಂಡಾದ ಮಧ್ಯಭಾಗ, ಹರವಾದ ಎದೆ, ಲಘುವಾದ ನಡೆ, ದಟ್ಟರೋಮ, ಸಾಮಾನ್ಯವಾಗಿ ಬಿಳಿ ಮತ್ತು ಗೌರವರ್ಣ ಹೊಂದಿರುವದು ಈ ಕುದುರೆಯ ಪ್ರಮುಖ ಗುಣಲಕ್ಷಣ.

'ಕಾಂದರೇಯಾಶ್ವ' -ಒಳ್ಳೆಯ ಮೈಕಟ್ಟು, ಎತ್ತರ ದೃಢವಾದ ಕಾಲು, ಉತ್ತಮ ಕುಷ್ಟಿಕೆ, ಒರಟಾದ ಚರ್ಮ, ಸೂಕ್ಷ್ಮರೋಮ, ದಪ್ಪಬಾಲ ಮತ್ತು ಕೇಸರ, ಕೋಪ ಇಲ್ಲದಿರುವುದು, ಉತ್ತಮ ನಡಾವಳಿಕೆ ಇದು ಇವುಗಳ ಲಕ್ಷಣವಾಗಿದೆ.

'ವಾರ್ಷ್ಮತೇಯಾಶ್ವ' -ಬಿಲ್ಲಿನಂತೆ ಬಾಗಿದ ಕತ್ತು, ಗಿಡ್ಡದೇಹ, ಗಿಡ್ಡ ಕುಷ್ಟಿಕೆ, ಸಮವಾದ ಹಿಂಭಾಗ, ಸ್ಥಿರವಾದ ಮುಂಭಾಗ, ತೆಳುಹೊಟ್ಟೆ, ಗಿಡ್ಡಬೆನ್ನು, ಬಿಗಿಯಾದ ಮೈ ಮತ್ತು ಉತ್ತಮ ನಡಾವಳಿಕೆಯನ್ನು ಪಡೆದಿರುವದು ಈ ಕುದುರೆಯ ಲಕ್ಷಣ.

'ವಿಷಮೇಯಗಳು ಹಾಗೂ ಆವಂತಾಶ್ವಗಳು' -ಸ್ಥೂಲವಾದ ಅಂಗವುಳ್ಳ ದೃಢಕುಷ್ಟಿಕೆ, ದಷ್ಟ ಪುಷ್ಟವಾಗಿದ್ದರೂ ಹೊಟ್ಟೆಯೇ ಕಾಣಿಸುವುದಿಲ್ಲ. ಇವು ಸುಬದ್ಧವಾದ ಹೆಗಲು ಮತ್ತು ತಲೆಯುಳ್ಳವು. ಕೆಂಬಣ್ಣವುಳ್ಳ; ಸತ್ತ್ವಶಾಲಿಗಳು, ದುಂಡಾದ ಸೊಂಟ, ಹರವಾದ ಎದೆ, ಸೂಕ್ಷ್ಮರೋಮ, ದೊಡ್ಡ ಹಿಂಭಾಗ, ದೃಢವಾದ ದೊಡ್ಡ ಮೊಣಗಂಟು, ತೊಡೆ, ಕುಷ್ಟಿಕೆ, ಇವು ಆವಂತ್ಯಾಶ್ವಗಳ ಗುಣಲಕ್ಷಣಗಳಾಗಿವೆ.

'ಔರಸಾಶ್ವ' -ಬಿಳಿ ಬಣ್ಣ ಮತ್ತು ಆಸುಪಾಸಿನ ಬಣ್ಣದಿಂದ ಕೂಡಿ, ಉಳಿದ ಲಕ್ಷಣಗಳನ್ನು ಹೊಂದಿರುವಂತ ಅಶ್ವಗಳೇ ಔರಸಾಶ್ವಗಳು.

'ಕಾಶ್ಮೀರಾಜಾಶ್ವಗಳು' -ಎತ್ತರದ ನಿಲುವಿನಿಂದ ಕೂಡಿದ್ದು, ತೇಜಶ್ಶಾಲಿಗಳು; ಶುಭ ಲಕ್ಷಣಗಳಿಂದ ಪರಾಕ್ರಮಿಗಳೂ, ಕಾರ್ಯಸಾಧಕಗಳೂ, ಶುದ್ಧವಾಗಿರುವವೂ ಆಗಿದ್ದು, ಉತ್ತಮ ರೋಮ, ತೆಳುಚರ್ಮ, ಒಂಟೆಯಂತೆ ಎತ್ತರದ ಮುಖ, ಅಂಗಾಂಗ ಶುದ್ಧಿ, ಬಿಗಿಮೈಕಟ್ಟು, ಶೌರ್ಯ, ಬಲ, ದೃಢವಾದ, ಆತ್ಮಗೌರವವುಳ್ಳ, ಕೆಂಬಣ್ಣ ಮತ್ತು ಅದರ ಆಸುಪಾಸಿನ ಬಣ್ಣವನ್ನು ಹೊಂದಿರುತ್ತವೆ.

ಸಕಾನಕಾಶ್ವಗಳು' - 'ಸಕಾ' ಎಂಬುದೊಂದು ದೊಡ್ಡನದಿ. ಸಮೃದ್ಧ ಜಲದಿಂದ ಕೂಡಿದ ಇದರ ದಡಗಳಲ್ಲಿ 'ಯವ' ಧಾನ್ಯವನ್ನು ಯಥೇಚ್ಛವಾಗಿ ಬೆಳೆಯುತ್ತಿದ್ದರು. ಈ ನದಿಯ ತೀರ ಪ್ರದೇಶಗಳಲ್ಲಿ ಹುಟ್ಟಿದ ಅಶ್ವಗಳೇ ಸಕಾನಕಾಶ್ವಗಳು. ಮುಂಭಾಗದಲ್ಲಿ ಬಹು ಉನ್ನತವಾಗಿಯೂ, ಹಿಂಭಾಗದಲ್ಲಿ ಸ್ವಲ್ಪ ಮಾತ್ರ ಎತ್ತರವಾಗಿಯೂ ಇರುತ್ತವೆ. ತೆಳ್ಳನೆಯ, ನೀಳವಾದ, ಚಪಲವಾದ ಕುತ್ತಿಗೆ, ನೀಳಬಾಲ, ಕೇಸರವುಳ್ಳವು. ಇನ್ನೊಂದು ಕುದುರೆ ಕಂಡಾಕ್ಷಣ ಕೆನೆಯುತ್ತವೆ. ತುದಿನಲುಗದ ಕಿವಿ, ಸ್ಪಷ್ಟವಾದ ರೇಖೆಗಳುಳ್ಳಬಾಯಿ, ತೆಳ್ಳನೆಯ ದುಂಡಾದ ಮುಖ, ನೀಳ ಕೂದಲು, ದೀರ್ಘಾಂಗಗಳು, ಇಳಿಬಿದ್ದ ಹೊಟ್ಟೆ ಮತ್ತು ಜಘನವುಳ್ಳವು ಸಕಾನಕಗಳು ಅಲ್ಲದೆ ಸುಪುಷ್ಟಮೈ, ಹರವಾದ ಹಿಂಭಾಗದಿಂದ ಕೂಡಿರುತ್ತವೆ.

'ಪಾರ್ವತೇಯಾಶ್ವ' -ಇವುಗಳಿಗೆ ತೆಳುವಾದ ಕುತ್ತಿಗೆ, ದೊಡ್ಡಜಘನ ಮತ್ತು ಎದೆ ಭಾಗ ಇರುತ್ತವೆ. ವಿಧ್ವಸ್ತ (ಜರ್ಜರಿತ)ವಾದ ಬೆನ್ನು, ಮೈ, ನೀಳಬಾಲ, ಕೇಸರವುಳ್ಳವು. ದೃಢಪಾದವುಳ್ಳ ಇವು ವೇಗಶಾಲಿಗಳೂ, ಬಲಶಾಲಿಗಳೂ, ಮುನ್ನುಗ್ಗುವ ಸ್ವಭಾವಹೊಂದಿದ್ದು, ಧೈರ್ಯಶಾಲಿಗಳಾಗಿರುತ್ತವೆ.

'ಮಾದ್ರೇಯಾಶ್ವ' -ಮಾದ್ರೇಯದಲ್ಲಿ ದಕ್ಷಿಣ ಮಾದ್ರೇಯ, ಉತ್ತರ ಮಾದ್ರೇಯ ಎಂದು ಎರಡು ಪ್ರಕಾರಗಳಿವೆ. ದಕ್ಷಿಣೋತ್ತರ ಮಾದ್ರೇಯಗಳು ನೀಳ ಬಾಲವನ್ನೂ, ಕೇಸರವನ್ನೂ ಹೊಂದಿರುತ್ತವೆ. ಇವುಗಳಿಗೆ ಅಗಲವಾದ ಕೊರಳು, ದೊಡ್ಡ ಕಿವಿ ಇದ್ದು, ಶೀಘ್ರ ಗಮನವಿದ್ದರೂ ಕಾರ್ಯಸಾಧಕಗಳಲ್ಲ, ಒಳ್ಳೆತನವೂ ಇಲ್ಲ, ಸುಲಭವಾಗಿ ಅಂಕೆಗೆ ಒಳಪಡುವುದಿಲ್ಲ. ಕೆಟ್ಟ ನಡತೆಯುಳ್ಳವು ಸಾಮಾನ್ಯವಾಗಿ ಜೇನು ಕಂದು ಬಣ್ಣವುಳ್ಳ, ಕಪ್ಪು ಬಣ್ಣದವೂ ಇರುತ್ತವೆ. ದೃಢವಾದ ಪಾದ ಮತ್ತು ಗೊರಸುಳ್ಳವು. ದಕ್ಷಿಣ ಮಾದ್ರೇಯಾಶ್ವಗಳದ್ದೂ ಇದೆ ಲಕ್ಷಣ. ಒಂದು ವ್ಯತ್ಯಾಸವೆಂದರೆ ಇವು ಲಘುಚಾರಿಗಳು ಆದರೆ ಶೀಘ್ರಗಾಮಿಗಳಲ್ಲ.

'ಆಯಾದ್ವೀಪಜಾತ' -ಇರಾವತೀ, ವಿಪಶಾ, ಶತದ್ರು, ಚಂದ್ರಭಾಗಾ, ನದಿಗಳ ದ್ವೀಪಗಳಲ್ಲಿ ಜನಿಸಿದ ಕುದುರೆಗಳು ಆಯಾದ್ವೀಪಜಾತಗಳೆಂದು ಕರೆಯುತ್ತಾರೆ. ಚಿತ್ರಸ್ಥಾ, ಸರಸ್ವತೀನದೀ ತೀರಗಳಲ್ಲಿ ಹುಟ್ಟುವವು 'ನಾದೇಯ' ಕುದುರೆಗಳೆಂದು ತಿಳಿಯಬೇಕು. ಇವು ಶುಭ ಲಕ್ಷಣಗಳಿಂದ ಕೂಡಿರುತ್ತವೆ.

'ದ್ವೀಪಜಹಯಗಳು' -ನೀಳ ಕುತ್ತಿಗೆ, ಎತ್ತರದ ಮುಖ, ಸುಂದರಬಾಲ, ಆಕರ್ಷಕವಾದ ಜಘನ, ಸೊಗಸಾದ ಕಣ್ಣುರೆಪ್ಪೆಯುಳ್ಳ ಗುಣಲಕ್ಷಣವನ್ನು ಹೊಂದಿರುತ್ತವೆ.

'ಕೇಕಯಾಶ್ವ' -ಎತ್ತರದ ನಿಲುವು, ದೊಡ್ಡ ಮುಖ ಮತ್ತು ಮೂಗಿನ ಹೊರಳೆಗಳುಳ್ಳವು, ನೀಳ ಕುತ್ತಿಗೆ, ನೀಳಬಾಲ, ಕೇಸರವುಳ್ಳವು, ದೀರ್ಘವಾಗಿ ಉಸಿರಾಡುತ್ತವೆ. ದೃಢವಾದ ಪಾದದಿಂದ ಕೂಡಿದ್ದು, ಯಾವನಾಶ್ವಗಳ ಲಕ್ಷಣವನ್ನು ಹೋಲುತ್ತವೆ.

'ಅಪರಾಂತಾಶ್ವಗಳು' -ಇವು ಆರೋಗ್ಯಶಾಲಿಗಳೂ, ದೊಡ್ಡ ಹೆಗಲುಳ್ಳವೂ, ಬಲಶಾಲಿಗಳೂ, ದುಂಡಗಿನ ಕೊರಳುಳ್ಳವೂ ವಕ್ರವೂ ಆಗಿರುತ್ತವೆ. ವಿಶಾಲಎದೆ, ದೊಡ್ಡಪಕ್ಕೆ, ಉದ್ದಕಿವಿ, ಉದ್ದವಾದಮೇಢ್ರ, ದುಂಡುಗಲ್ಲ, ತೊಡೆ, ಹೊಟ್ಟೆಯುಳ್ಳವು; ಅಪರಾಂತದಲ್ಲಿ ಹುಟ್ಟುವುದರಿಂದ ಅದೇ ಹೆಸರಿನಿಂದ ಕರೆಯಲಾಗಿದೆ.

'ವಾಸಂತಕಾಶ್ವ' -ನೀಳವಾದ ಕುತ್ತಿಗೆ, ಮುಖವುಳ್ಳವು, ಪರಾಕ್ರಮಿಗಳಾಗಿರುತ್ತವೆ. ತೆಳುಹೊಟ್ಟೆ, ಗಿಡ್ಡಬೆನ್ನು, ಕಿವಿ ಮತ್ತು ಗಿಡ್ಡವಾದ ಶಿಶ್ನವುಳ್ಳವು, ಇವು ಸೂಕ್ಷ್ಮ ಸ್ಪರ್ಶವುಳ್ಳವು; ಶಾಂತವಾಗಿರತಕ್ಕವು. ದೃಢಪಾದ, ಸುಕುಷ್ಟಿಕವುಳ್ಳವು, ಹರವಾದ ಎದೆ, ಚುರುಕುತನ, ದೊಡ್ಡಹಿಂಭಾಗ, ಹಳದಿ ಮಿಶ್ರಿತ ಕೆಂದು ಬಣ್ಣ, ಅದಟುತನ ಇವು ಈ ಕುದುರೆಯ ಲಕ್ಷಣ.

'ಸೌವೀರಕಾಶ್ವ' -ತಾಳ್ಮೆಯುಳ್ಳವು ಗಿಡ್ಡಬೆನ್ನು, ದೃಢದೇಹ, ದರ್ಪ, ಎತ್ತರದ ನೆಗೆತ ಇವುಗಳ ಲಕ್ಷಣ. ಸುಲಭವಾಗಿ ವಶವಾಗುವಂತಹವು. ಶೀಘ್ರಗಾಮಿಗಳು, ಭಾರವಾಹಿಗಳು, ದಾರಿಯನ್ನು ಕ್ರಮಿಸುವಲ್ಲಿ ಸಮತೆಯುಳ್ಳ ಪೂರ್ಣವಾದ ಸರ್ವಾಂಗಗಳನ್ನು ಹೊಂದಿರುತ್ತವೆ.

'ದರದಾಶ್ವ' -ಇವುಗಳಿಗೆ ಗಿಡ್ಡ ಹಿಂಭಾಗ, ಚಿಕ್ಕಗಡ್ಡ, ಮಂದಬುದ್ಧಿ, ದೊಡ್ಡಹೊಟ್ಟೆ, ತಲೆ, ಹೆಗಲುಳ್ಳವು, ಮಹಾಕಾಯಗಳೂ, ಮಹಾಬಲಿಗಳೂ, ಅಪಾರವಾದ ನಡಿಗೆಯುಳ್ಳವೂ ಆಗಿದ್ದು, ದೃಢಪಾದ, ಚಿಕ್ಕಕಣ್ಣು, ಬೆನ್ನು ಮತ್ತು ಬಾಲ ಇರುವ ವೇಗಶಾಲಿಗಳು ಮತ್ತು ಸಾರವತ್ತಾಗಿದ್ದು, ಇವು ಬಣ್ಣ ಬಣ್ಣವಾಗಿಯೂ ಕಾಣುತ್ತವೆ.

'ಸೈಂಧಿಕಾಶ್ವ' -ದಪ್ಪನೆಯ ಬಾಲ, ರೋಮ ಮತ್ತು ಚರ್ಮ ಇರುತ್ತದೆ. ಭಯಂಕರವಾಗಿದ್ದು, ಬಲಶಾಲಿಗಳೂ, ವೇಗವುಳ್ಳವೂ ಆಗಿರುತ್ತವೆ. ಗಿಡ್ಡಹೊಟ್ಟೆ, ಜಂಘಾ, ಇವುಗಳ ಪ್ರಮುಖ ಲಕ್ಷಣ.

'ಕ್ಷುದ್ರಕಾಶ್ವ' -ಎತ್ತರವಾದ ನಿಲುವುಳ್ಳ ಇವು ಬಲಶಾಲಿಗಳೂ, ವೇಗಿಗಳು ಆಗಿದ್ದು, ದೊಡ್ಡಗಾತ್ರದ ಹೊಟ್ಟೆ, ಹೆಗಲು, ಎದೆ ಇದ್ದು, ಸೌಮ್ಯವಾಗಿರುತ್ತವೆ. ವೈಶಾಲ್ಯವುಳ್ಳ, ಪ್ರಸಿದ್ಧವಾಗಿರತಕ್ಕವುಗಳು ಉದ್ದನೆಯ ಕಿವಿ, ಮತ್ತು ಜನನೇಂದ್ರಿಯ, ಸುಂದರವಾದ ಗೊರಸುಗಳನ್ನು ಹೊಂದಿರುತ್ತವೆ.

'ಮಾಲವೇಯಾಶ್ವ' -ಎತ್ತರದ ನಿಲುವು, ವಿಶಾಲವಾದ ಹಿಂಭಾಗ, ಆಸನವುಳ್ಳವು, ನೀಳವಾದ ಮುಂದೇಹ, ಕೆಂಬಣ್ಣ, ಇಳಿಬಿದ್ದ ತುಟಿ, ಕಿವಿ, ಗಿಡ್ಡದಾದ ಕೊರಳುಳ್ಳ ಇವು ದರ್ಪವುಳ್ಳವು ಮಹಾಬಲಶಾಲಿಗಳು ಮತ್ತು ಮನೋಹರವಾಗಿದ್ದು, ತೇಜಸ್ವಿಗಳೂ, ವೇಗಶಾಲಿಗಳೂ ಆಗಿರುತ್ತವೆ.

'ಐರಾವತಾ' -ದಪ್ಪನೆಯ ಒರಟಾದ ಕಿವಿಗಳುಳ್ಳವು. ಮಂದ ಇಲ್ಲವೇ ಮಧ್ಯಮವಾದ ಓಟವುಳ್ಳ, ಇವು ದಪ್ಪನೆಯ ರೋಮ, ಮೂಳೆ, ಬಾಲವುಳ್ಳ, ವಿಷಮವಾದ ಅಂಗವುಳ್ಳ, ದೃಢವಾದ ಗೊರಸು, ಗೌರವರ್ಣವಿದ್ದರೂ, ಸತ್ತ್ವಹೀನವೂ, ತೇಜೋಹೀನವೂ ಆಗಿರುತ್ತವೆ. ಇವುಗಳ ಮೂಳೆ, ಮಾಂಸ, ಚರ್ಮ ಎಲ್ಲವೂ ಸ್ಥೂಲವಾಗಿರುತ್ತವೆ.

'ಆವರ್ತಕಾಶ್ವ' -ದಕ್ಷಿಣ ದೇಶದ ಈ ಕುದುರೆಗಳಿಗೆ ಉದ್ದನೆಯ ಕಿವಿ ಮತ್ತು ದೊಡ್ಡದನಿ, ದೊಡ್ಡಗಾತ್ರ, ಚಲನಶೀಲವಾದ ಕೊರಳು, ದೊಡ್ಡ ಜಘನ, ಎದೆಭಾಗ ದಪ್ಪಮುಖ, ತೆಳುಪಕ್ಕೆ, ಒಳ್ಳೆಯ ನಡತೆ ಮತ್ತು ಕುಳ್ಳಗಿರುವಿಕೆ ಆವರ್ತಕಾಶ್ವಗಳ ಲಕ್ಷಣಗಳು, ನೀಳ ಕೂದಲು, ಮೃದುವಾದ ತಳಭಾಗ, ಮಧ್ಯಮವಾದ ಸಾರ ಮತ್ತು ವೇಗ, ಸೌಮ್ಯತೆ ಮತ್ತು ಸತ್ತ್ವಹೀನತೆ ಇವುಗಳೂ ಕೂಡ ಲಕ್ಷಣಗಳೇ ಆಗಿವೆ.

'ಕಾಲಿಂಗಾಶ್ವ' -ಇವುಗಳಿಗೆ ದಪ್ಪಪಾದ, ದೊಡ್ಡಕಿವಿ, ದೃಢವಾದ ಗೊರಸುಗಳಿರುತ್ತವೆ. ದೇಹ ಗಿಡ್ಡದಾಗಿದ್ದರೂ, ಎತ್ತರದ ಕೊರಳು, ಉಬ್ಬಿದಮುಖ, ಉದ್ದನೆಯ ಶಿಶ್ನ ಇರುತ್ತವೆ. ಅಲ್ಪತೇಜಸ್ಸು, ವೇಗ, ಬಲವುಳ್ಳವು ಈ ಕಾಲಿಂಗಾಶ್ವಗಳು.

'ಮೌಕುಲಾಶ್ವ' -ದಪ್ಪರೋಮ, ಒರಟು ಬುದ್ಧಿ, ಕೋಪ ಇರುತ್ತವೆ. ಇವು ಸೋಮಾರಿಗಳಾಗಿದ್ದು ಗಿಡ್ಡನೆಯ ಬೆನ್ನು, ಮೈ, ಹಿಂಭಾಗ ದಪ್ಪನೆಯ ಕುಷ್ಟಿಕ, ಮೊಣಗಂಟು ಉಳ್ಳವು, ಅಲ್ಪಬಲವುಳ್ಳವೂ ಹೆದರುವ ಪ್ರಕೃತಿಯುಳ್ಳವೂ, ಬುದ್ಧಿಹೀನವೂ, ಅಲ್ಪ ತೇಜಸ್ವಿಗಳೂ ಆಗಿರುತ್ತವೆ. ದೊಡ್ಡ ಆಸನ, ನಿರುತ್ಸಾಹ ಇವು ಮೌಕುಲಾಶ್ವಗಳ ಲಕ್ಷಣ. ದಾಕ್ಷಿಣಾತ್ಯ ಕುದುರೆಗಳಿಗೆ ವಾನವಾಸಿಕಗಳೆಂದು ಹೆಸರು. ಕುಳ್ಳ, ಬೆನ್ನು, ತೊಡೆ, ಹಿಂಭಾಗವುಳ್ಳವು. ಮುಂದೇಹ ಲಕ್ಷಣವಾಗಿದ್ದರೂ, ಹಿಂಭಾಗ ವಿಕೃತವಾಗಿರುತ್ತದೆ. ದೃಢವಾದ, ತಾಳ್ಮೆ ಮತ್ತು ಮಂದ ಬುದ್ಧಿಯುಳ್ಳವು, ಮಧ್ಯಮಶಕ್ತಿ, ಅಲ್ಪವೇಗ ಮತ್ತು ಸಾಮಾನ್ಯ ತೇಜಸ್ಸು ಈ ಕುದುರೆಗಳ ಪ್ರಮುಖ ಲಕ್ಷಣ.

'ತ್ರೈಲಿಂಗಾಶ್ವ' -ಇವು ಕ್ರೋಧನಗಳು. ಹಂದಿಯಂತೆ ಸ್ವರವುಳ್ಳವು, ಹರವಾದ ಎದೆ, ದೊಡ್ಡ ಹೆಗಲು, ಹಿಂಭಾಗದಲ್ಲಿ ಬಿಗಿ ಮೈಕಟ್ಟು, ದೃಢವಾದ ಕುಷ್ಟಿಕೆ ಮತ್ತು ಪಾದವುಳ್ಳವುಗಳು.

'ಕ್ರೋಧನಾಶ್ವ' -ಈ ಜಾತಿಯ ಕುದುರೆಗಳು ನೀಳಕಿವಿ, ನೀಳತುಟಿ, ಹಿಂಭಾಗಗಳಿಂದ ಕೂಡಿದ್ದು, ಮುಂಭಾಗ ಎತ್ತರವಾಗಿ, ಹಿಂಭಾಗ ವಿಕೃತವಾಗಿರುತ್ತದೆ. ಇವುಗಳಿಗೆ ಆಕರ್ಷಕ ಬಣ್ಣವಿಲ್ಲ, ಇವು ಅಲ್ಪ ತೇಜಸ್ವಿಗಳು, ಕಠಿನಗಾತ್ರ, ದೊಡ್ಡಹೊಟ್ಟೆ, ದಪ್ಪಕುಷ್ಟಿಕೆ, ಬಾಲ ಈ ಅಂಶಗಳು ಪ್ರಮುಖ ಗುಣಲಕ್ಷಣವಾಗಿವೆ.

'ಸೌರಾಷ್ಟ್ರ' -ಈ ಕುದುರೆಗಳಿಗೆ ಸ್ಥೂಲಪಾದ, ದೃಢರೋಮ ಮತ್ತು ಹಿಮ್ಮಡಿ ಇರುತ್ತವೆ. ನೀಳವೂ, ಅಗಲವೂ ಆದ ತೊಡೆ ಮತ್ತಿತರ ಅಂಗವುಳ್ಳವು, ಮುಂದಿನಿಂದ ನೋಡಿದರೆ ತುಂಬ ಮನೋಹರವಾಗಿರುತ್ತವೆ. ಹಿಂದಿನಿಂದ ಅಷ್ಟೇ ವಿಕೃತವಾಗಿದ್ದು, ದಪ್ಪ ಮೊಣಗಂಟು, ತೊಡೆ ಮತ್ತು ಕುಷ್ಟಿಕೆಗಳಿರುತ್ತವೆ. ಇವುಗಳಿಗೆ ಸುಂದರವಾದ ಪಾದಗಳಿದ್ದು, ಬಿಗಿಮೈ ಕಟ್ಟಿಲ್ಲದ ಇವು ಸೌರಾಷ್ಟ್ರ ಅಶ್ವಗಳು ಎಂದು ಕರೆಯಿಸಿಕೊಳ್ಳುತ್ತವೆ.

'ಉಪಾವೃತ್ತಾಶ್ವ' -ಇವು ವೇಗಶಾಲಿಗಳಲ್ಲ, ದಪ್ಪನೆಯ ಬಾಲ, ಹೊಟ್ಟೆಯುಳ್ಳವು, ದೊಡ್ಡಕಿವಿ, ಕಂಪಿಸುವ ಹೆಗಲು, ಜೋಲು ಬೀಳುವ ತುದಿಬಾಯಿ, ಅಂಡ, ಮೇಢ್ರ, ದೊಡ್ಡಹಿಂಭಾಗ, ಗಿಡ್ಡದೇಹ, ದೃಢವಾದ ತೊಡೆ ಮತ್ತು ಬಿಗಿ ಮೈಕಟ್ಟು ಹೊಂದಿದ್ದು, ಬಹುಮಟ್ಟಿಗೆ ಇವು ಹಳದಿ ಕಣ್ಣುಳ್ಳವುಗಳಾಗಿವೆ.

'ಸಾಲ್ವೇಯಾಶ್ವ' -ಈ ಹೆಸರಿನ ಕುದುರೆಗಳಿಗೆ ಸ್ಥಿರವಾದ ದೇಹ, ಗಿಡ್ಡನೆಯ ಹೊಟ್ಟೆ ಇರುತ್ತವೆ. ದುಂಡಗಿನ ನೀಳವಾದ, ವಿಧ್ರುಗ್ರೀವ (ಕಂಪನಶೀಲ) ದೀರ್ಘಕರ್ಣ, ಹರವಾದ ಎದೆ, ತೆಳ್ಳನೆಯ ಬಾಲ ಕೇಸರ ಇರುತ್ತವೆ. ವಿಕೃತವಾದ ಹಿಂಭಾಗ ಮತ್ತು ಒರಟುತನದಿಂದ ಕೂಡಿರುತ್ತವೆ. ತೆಳುವಾದ ಚರ್ಮ ಇದ್ದರೂ ಬುದ್ಧಿಯ ಮಟ್ಟ ಅಷ್ಟಕ್ಕಷ್ಟೇ ಇರುತ್ತದೆ.

'ವೇಸರ' -ಕುರುಕ್ಷೇತ್ರದಲ್ಲಿ ಹುಟ್ಟಿದ ಈ ಕುದುರೆಗಳು ಚಂಚಲವಾದ ಮುಂದೇಹ, ತೆಳುವಾದ ಹಿಂಭಾಗ, ಚೆನ್ನಾದ ಬೆನ್ನು ಮತ್ತು ಹೆಗಲಿರುವ ಈ ವೇಸರಗಳು ಭಾರ ಹೊರಲಾರವು. 'ಪಾಂಚಾಲ' ಜಾತ ವೇಸರಗಳು ನೀಳಮುಖ, ಸ್ಥೂಲ ಅಂಗ, ದೊಡ್ಡ ಹೊಟ್ಟೆ, ಬಾಗಿದ ಅಗಲವಾದ ಬೆನ್ನು, ಮೃದುಮೈ,

ಮತ್ತು ಅಲ್ಪ ತೇಜಸ್ಸು, ಚೆನ್ನಾಗಿ ನೆಲೆನಿಂತ ಹಿಂಗಾಲುಗಳು, ವಿಷಮವಾದ ದೃಢವಾದ ಮುಂಗಾಲುಗಳು ಪಾಂಚಾಲ ವೇಸರಗಳ ಲಕ್ಷಣ. ಇವುಗಳಿಗೆ ಎಲ್ಲ ಅಂಗಗಳೂ ಸ್ಥೂಲವಾಗಿರುತ್ತವೆ.

'ವಾರ್ಹ್ಯಲಾಶ್ವ' -ನೀಳ ಬೆನ್ನು, ತೆಳುಹೊಟ್ಟೆ, ಇಳಿಬಿದ್ದ ತುದಿಬಾಯಿ ಮತ್ತು ಕಿವಿ, ದೊಡ್ಡಮುಖ ಮತ್ತು ಕೊರಳು ಉಬ್ಬಿದ ಗಾತ್ರ, ಪುಷ್ಪ ಅಂಗಸೌಷ್ಮವ, ದೃಢತೆ, ಮಂದ ತೇಜಸ್ಸು ಮತ್ತು ಅಲ್ಪವೇಗವುಳ್ಳವು ವಾರ್ಹ್ಯಲಾಶ್ವಗಳು.

'ಆಭೀರಜ ಮತ್ತು ಕುಕುರ' -ಕುಕುರ ಎಂಬುದು ಒಂದು ದೇಶದ ಹೆಸರು. ಇದನ್ನು 'ದಶಾರ್ಹ' ಎಂದು ಪುರಾಣಗಳಲ್ಲಿ ಉಲ್ಲೇಖಗೊಂಡಿರುವುದು ತಿಳಿದು ಬರುತ್ತದೆ. ಮೇಲ್ಮುಖವಾದ ಕಿವಿಗಳು ಸೂಕ್ಷ್ಮಮುಖವುಳ್ಳವು, ವೇಗಶಾಲಿಗಳಾಗಿ ಸದಾ ಆನಂದದಿಂದ ಇರುತ್ತವೆ. ದುಷ್ಟ ಆಕಾರವಿರುವ ಇವುಗಳನ್ನು ಸುಲಭವಾಗಿ ವಶಪಡಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಇನ್ನೂ ಮತ್ತ್ಯೋಚಕ, ಆಶ್ಮಕೇಯ, ಮಲಂಕ, ಚಕೋರಕ, ವೈದರ್ಭ, ಇವು ಶ್ವೇತಗಿರಿಯಲ್ಲಿ ಜನಿಸಿದವುಗಳಾಗಿದ್ದು, ಹಿಮವತ್ ಪೂರ್ವ ದಕ್ಷಿಣದಲ್ಲಿ ಹುಟ್ಟಿದವು. ಸಾಮೇಯ, ಉತ್ತರ ಸಾಮೇಯಗಳೆಂದು ಹೆಸರು ಪಡೆದಿವೆ. ಶಾಸ್ತ್ರಕಾರನಾದ ಕೆಳದಿ ಬಸವರಾಜನು ಗ್ರಂಥವಿಸ್ತಾರ ಭಯದಿಂದ ಇವುಗಳ ಲಕ್ಷಣವನ್ನು ಹೇಳದೆ ಬಿಟ್ಟಿರುವೆನು ಎಂದು ಸ್ಪಷ್ಟಪಡಿಸಿದ್ದಾನೆ."[೪]

ಸುದೀರ್ಘವಾದ ವಿವರಣೆಯನ್ನು ನೀಡಿರುವ ಕೆಳದಿಬಸವರಾಜನು ನಿಜವಾಗಿಯೂ ಶ್ರೇಷ್ಠ ಶಾಸ್ತ್ರಕಾರ, ಏಕೆಂದರೆ ಒಂದು ಪ್ರಾಣಿಯ ಕುರಿತು ಅದು ಜನಿಸುವ ಪ್ರದೇಶದಿಂದ ಹಿಡಿದು ಅದರ ಗುಣಸ್ವಭಾವ, ನಡತೆ, ಹಾವಭಾವ, ಬಣ್ಣ, ಆಕಾರ ದೇಹವಿಸ್ತಾರ ಇವೆಲ್ಲವುಗಳ ಪರಿಪೂರ್ಣ ಮಾಹಿತಿ ಹೊಂದಿರುವುದನ್ನು ನೋಡಿದರೆ ಹಯಶಾಸ್ತ್ರ ಪರಿಣಿತ ತತ್ವಜ್ಞಾನಿ ಎಂಬುದರಲ್ಲಿ ಸಂಶಯವೇ ಇಲ್ಲ. ಪ್ರಾಣಿಯನ್ನು ಸಾಕುವ, ಪಳಗಿಸುವ, ಉಪಚರಿಸುವ ಎಲ್ಲಾ ಬಗೆಯ ಜ್ಞಾನ ಸಾಗರದಂತಿರುವ ಶಿವತತ್ತ್ವ ರತ್ನಾಕರಕಾರ ತನ್ನ ಕೃತಿಯ ಮೂಲಕ ಕುದುರೆಶಾಸ್ತ್ರದ ವಿಚಾರವನ್ನು ಎಲ್ಲ ಓದುಗರ ವಿಷಯ ಜ್ಞಾನ ಹಂಚಿಗೆ ಕಾರಣೀಕರ್ತನಾಗಿದ್ದಾನೆ. ಕುದುರೆಯ ವಂಶ. ಜಾತಿ, ಲಕ್ಷಣಗಳನ್ನು ವಿರಳ ವಿರಳವಾಗಿ ತಿಳಿಸಿದ ಪ್ರಮುಖ ಶಾಸ್ತ್ರಕಾರ ಎಂದು ಹೇಳಬಹುದು.

೪.೨.೨. ವರ್ಣಭೇದಗಳು

ಕುದುರೆಯನ್ನು ಬಿಳಿ, ಕಪ್ಪು, ನಸುಗೆಂಪು, ಹಳದಿ ಎಂಬ ನಾಲ್ಕು ವರ್ಣಗಳಿಂದ ಮಾತ್ರ ಗುರುತಿಸಿ ಅವು ಶುದ್ಧವರ್ಣಗಳು, ಉಳಿದವು ಮಿಶ್ರವರ್ಣಗಳು ಎಂದು ಶಾಸ್ತ್ರಕಾರರು ಅಭಿಪ್ರಾಯಪಟ್ಟಿದ್ದಾರೆ. ಅವುಗಳ ಭೇದಗಳನ್ನು ಅರಿತು ವಿವಿಧ ಬಗೆಯ ಹೆಸರುಗಳಿಂದ ಕರೆಯುತ್ತಾರೆ. ಅವು ಈ ಕೆಳಗಿನಂತೆ ಹರವು ಪಡೆದುಕೊಂಡಿವೆ.

"ಕುದುರೆಯ ಕೂದಲು, ಬಾಲ, ಮೈಗೂದಲು, ಚರ್ಮ, ಗೊರಸುಗಳು ಇವೆಲ್ಲವು ಬೆಳ್ಳಗಿದ್ದರೆ ಅಂಥ ಕುದುರೆಯನ್ನು 'ಕರ್ಕ' ಎಂದು ಕರೆಯುತ್ತಾರೆ. ಇದು ವಿಪ್ರಜಾತಿಯ ಕುದುರೆ. ಈ ಮೇಲೆ ತಿಳಿಸಿದಂತೆ

ದೇಹದ ಎಲ್ಲಾ ಅಂಗಗಳು ಬೆಳ್ಳಗಿದ್ದು, ಚರ್ಮದ ಬಣ್ಣ ಮಾತ್ರ ಕಪ್ಪಾಗಿದ್ದರೆ ಅಂಥ ಕುದುರೆಗೆ 'ಕತ್ತಲ' ಎಂದು ಹೆಸರು. ಮೈಗೂದಲು, ತಲೆಯ ಕೇಶ, ಬಾಲ, ಚರ್ಮ, ಗೊರಸು ಇವೆಲ್ಲವೂ ಕಪ್ಪಾಗಿದ್ದರೆ ಅದನ್ನು 'ಕಾಲ' ಎನ್ನುವರು. ಇದು ಶೂದ್ರ ಜಾತಿಗೆ ಸೇರಿದ್ದು, ಹೆಚ್ಚಿನ ಶೌರ್ಯವನ್ನು ಪಡೆದಿರುವದು. ಕೇಶದಿಂದ ಬಾಲದವರೆಗಿನ ಎಲ್ಲ ಅಂಗಗಳೂ ನಸುಗೆಂಪು (ರೋಹಿಕ) ವರ್ಣದಿಂದ ಕೂಡಿದ್ದರೆ ಅದನ್ನು 'ಕಪಾಹ' ಎಂದು ಕರೆಯುವರು. ಇದು ಕ್ಷತ್ರಿಯ ಜಾತಿಗೆ ಸೇರಿದ್ದು, ಕೇಶಗಳು, ರೋಮಗಳು, ಬಾಲದ ಕೂದಲುಗಳು ಎಲ್ಲವೂ ಚಿನ್ನದ ಬಣ್ಣದಿಂದ ಕೂಡಿದ್ದರೆ 'ಸೇರಾಹ' ಎಂದು ಹೆಸರು. ಇದು ವೈಶ್ಯಜಾತಿಗೆ ಸೇರಿದ್ದು ಎಂದು ಹೆಸರಿಸಲಾಗಿದೆ.

ಬಿಳಿ ಹಾಗೂ ನಸುಗೆಂಪು ಬಣ್ಣದ ರೋಮಗಳು ಮಿಶ್ರಿತವಾಗಿದ್ದು, ಮುಖ, ಕಾಲು, ಬಾಲ ಮತ್ತು ಕೇಶ (ತಲೆಗೂದಲು) ನಸುಗೆಂಪು ಬಣ್ಣವಾಗಿದ್ದರೆ 'ಚೋರ'ನೆಂದು, ಕೇಶ, ಬಾಲ, ಕಾಲು ಮತ್ತು ಮುಖಗಳು ಕಪ್ಪಗಿದ್ದು, ರೋಮಗಳು (ಮೈಕೂದಲು) ಬಿಳಿ ಮತ್ತು ಕಪ್ಪು ಮಿಶ್ರಿತವಾಗಿದ್ದರೆ 'ನೀಲ'ನೆಂದು, ಪಾದರಿ ಹೂವಿನ ಬಣ್ಣವನ್ನು ಹೊಂದಿ, ನಲಕಗಳಲ್ಲಿ ಕಪ್ಪಾಗಿದ್ದು, ಕಪ್ಪು ಗಂಟುಗಳುಳ್ಳ ಕುದುರೆಗೆ 'ಕಪಾಹ' ಎನ್ನುವರು. ಇದು ಯುದ್ಧದಲ್ಲಿ ಜಯವನ್ನು ತಂದುಕೊಡುತ್ತದೆ. ಮಧುಕವೃಕ್ಷದ ತೊಗಟೆಯ ಬಣ್ಣವನ್ನುಳ್ಳ ಕುದುರೆಯನ್ನು 'ಮೋಹ' ಎಂದೂ ,ಮಾಗಿದ ನೇರಿಳೆ ಬಣ್ಣದ ಕುದುರೆಯನ್ನು 'ಜಂಬ'ವೆಂದೂ, ಕೇಶ ಬಾಲಗಳಲ್ಲಿ ಹಳದಿ ಬಣ್ಣವಿರುವ ಲೋಹಿತ ವರ್ಣದ ಕುದುರೆ 'ಹರಿತ'ವೆಂದೂ, ಔದುಂಬರ (ಅತ್ತಿಹಣ್ಣು) ವರ್ಣದ ಕುದುರೆಯನ್ನು 'ಉಂದೀರ' ಎಂದೂ ಕೇಶ, ಕೇಸರ, ಬಾಲ ಮೊಳಕಾಲಿನ ಕೆಳಗಿನ ಭಾಗಗಳು ಕಪ್ಪಾಗಿದ್ದು, ಉಳಿದ ಎಲ್ಲ ಅಂಗಗಳೂ ಲೋಹಿತ (ನಸುಗೆಂಪು) ಅಥವಾ ಪೀತ (ಹಳದಿ) ಬಣ್ಣವಾಗಿದ್ದರೆ 'ಉರಾಹ'ವೆಂದೂ ಕೇಶ, ಕೇಸರ, ಬಾಲ, ಮೊಳಕಾಲಿನ ಕೆಳಗಿನ ಭಾಗಗಳು ಶೋಣವರ್ಣವಿದ್ದು, ಎಲ್ಲಾ ಅಂಗಗಳು ಉಜ್ಜ್ವಲವಾಗಿದ್ದರೆ, ಬೆನ್ನಿನಲ್ಲಿ ಕೆಂಪು ರೇಖೆಗಳಿರಲು ಅಂಥ ಕುದುರೆಗೆ 'ಕಂಠಿಕರ್ಣ' ಅಥವಾ 'ಮಂಠವರ್ಣ' ಎಂದು ಹೆಸರಿಸಲಾಗಿದೆ.

ಮೈಯಲ್ಲಿ ಯಾವುದೇ ಬಣ್ಣವಿದ್ದರೂ, ಮುಖ ಮತ್ತು ನಾಲ್ಕು ಕಾಲುಗಳು ಬಿಳಿಯ ವರ್ಣವಾಗಿದ್ದರೆ, ಆ ಕುದುರೆಯನ್ನು ಸೋಮೇಶ್ವರ 'ಪಂಚಕಲ್ಯಾಣ' ಎಂದು ಕರೆದಿರುವನು. ಕೂದಲು, ಮುಖ, ಬಾಲ, ಬೆನ್ನಿನ ಮೂಳೆಯ ಮೇಲ್ಭಾಗ ಮತ್ತು ನಾಲ್ಕು ಕಾಲುಗಳು ಪಾಂಡುರ (ಬಿಳಿ ಮತ್ತು ಹಳದಿ) ಬಣ್ಣದಿಂದ ಕೂಡಿರಲು 'ಅಷ್ಟಮಂಗಳ'ವೆಂದೂ ಕರೆಯಲಾಗಿದೆ. ಇದು ಎಲ್ಲಾ ಕಾರ್ಯಗಳಿಗೂ ಪ್ರಶಸ್ತವಾದ ಕುದುರೆ. ಕುದುರೆಯ ನಾಲ್ಕು ಕಾಲುಗಳೂ ಬಿಳುಪಾಗಿದ್ದರೆ ಅಥವಾ ಎರಡು ಪಾದಗಳಾದರೂ ಬಿಳುಪಾಗಿದ್ದರೆ, ಹಾಗೂ ಮುಖದಲ್ಲಿ ಬಿಳಿಯ ನಾಮದ ಗುರುತಿದ್ದರೆ 'ಧೌತಪಾದ'ವೆಂದೂ ಕರೆಯಲಾಗಿದೆ. ಇದು ಸಹ ಉಪಯುಕ್ತವಾದ ಉತ್ತಮ ಕುದುರೆ. ಬೇರೆ ಬೇರೆ ಸ್ಥಾನಗಳಲ್ಲಿ ವಿಶಾಲವಾದ ಬಿಳಿಯ ಪಟ್ಟೆಗಳಿದ್ದು ಶೋಭಿಸುವ ಕುದುರೆ ಯಾವುದೇ ಬಣ್ಣದ್ದಾದರೂ 'ಹಲಾಹ' ಎಂದು ಕರೆಯಲ್ಪಡುತ್ತದೆ. ಹಾಗೆಯೇ ಯಾವ

ಬಣ್ಣದೇ ಆದರೂ ಅದರ ಪಕ್ಕೆಗಳಲ್ಲಿ ಬಿಳಿಯ ಚುಕ್ಕೆಗಳ ಸಮೂಹವಿದ್ದರೆ ಅದಕ್ಕೆ 'ತರಂಜ' ಎನ್ನುವರು. ಬಿಳಿಯ ಕುದುರೆಗೆ ಮೈಯ ಎಲ್ಲ ಕಡೆಗೂ ದೊಡ್ಡ ಹಾಗೂ ಸಣ್ಣ ಕಪ್ಪು ಬಣ್ಣದ ಚುಕ್ಕೆಗಳು ಕಂಡು ಬಂದರೆ ಪಿಂಗಳವೆಂದೂ, ಎಲ್ಲ ಅಂಗಗಳಲ್ಲಿ ಬಿಳುಪಾಗಿರುವ ಕುದುರೆಗೆ 'ಶ್ಯಾಮಲ' (ನಸುಗಪ್ಪು) ವರ್ಣದ ಮಂಡಲಗಳು ಇದ್ದರೆ, ಅದನ್ನು ಕೆಲವರು 'ಬಹುಲ'ವೆಂದೂ ಮತ್ತೆ ಕೆಲ ವಿದ್ವಾಂಸರು 'ಮಲಿನ'ವೆಂದು ಕರೆದಿರುವುದುಂಟು."[11]

ಹೀಗೆ ಮೂರನೆಯ ಸರ್ವಜ್ಞ ಸೋಮೇಶ್ವರ ಕುದುರೆಯ ಮಿಶ್ರವರ್ಣಗಳಿಂದ ಅವುಗಳ ಪ್ರಭೇದಗಳನ್ನು ಗುರುತಿಸಿ ವಿಶಿಷ್ಟ ಹೆಸರುಗಳಿಂದ ಕರೆದಿದ್ದಾನೆ. ದಿನನಿತ್ಯ ಜೀವನದಲ್ಲಿ ಮನುಷ್ಯನ ದೇಹದ ಅಂಗಾಂಗ ರಚನೆಯಿಂದ 'ನಿಕ್'ನೇಮ್'ಗಳಿಂದ ಕರೆಯಲಾಗುತ್ತಿದೆ. ಉದಾ. ಕಪ್ಪಾಗಿದ್ದರೆ ಕರಿಯ ಎಂದೂ, ಕೆಂಪಾಗಿದ್ದರೆ, ಕೆಂಪ. ದೇಹ ಬಡಕಲಾಗಿದ್ದರೆ ಕಡ್ಡಿಯೆಂದೂ, ಗಿಡ್ಡವಾಗಿದ್ದರೆ ಕುಳ್ಳ, ಎತ್ತರವಾಗಿದ್ದರೆ ಲಂಬ ಹೀಗೆ ಅನೇಕ ಹೆಸರುಗಳಿಂದ ಕರೆಯುವಂತೆ ಶಾಸ್ತ್ರಕಾರರು ಕುದುರೆಯ ವರ್ಣ, ಆಕಾರ, ಅಂಗಾಂಗಗಳ ರಚನೆಯನ್ನು ಅರಿತು ಅಧ್ಯಯನ ಮಾಡಿ ವಿವಿಧ ಹೆಸರುಗಳಿಂದ ಪ್ರಾಣಿಗಳನ್ನು ಗುರುತಿಸಿದ್ದಾರೆ.

ಕೆಳದಿಬಸವರಾಜನು ಅಶ್ವಗಳ ಪ್ರಭೇದಗಳನ್ನು ಕುರಿತು ವಿಶ್ಲೇಷಿಸುತ್ತಾ ಅವುಗಳ ಲಕ್ಷಣಗಳಿಗನುಗುಣವಾಗಿ ಕುದುರೆಯ ಹೆಸರುಗಳನ್ನು ಸೂಚಿಸಿದ್ದಾನೆ. ಮುಖ, ಕಾಲು, ಬಾಲ, ಕೇಶ ಇವುಗಳಲ್ಲಿ ಲೋಹಿತವರ್ಣವನ್ನು ಹೊಂದಿದ್ದರೆ 'ಭೋರ'ನೆಂದೂ, ಶೇಫ, ಬಾಲ, ಪಾದಗಳು ಹಾಗೂ ತುಂಡದಲ್ಲಿ ಮೋಚಕ ವರ್ಣ ಈ ಲಕ್ಷಣವುಳ್ಳ ಕುದುರೆಗೆ 'ರುರು'ವೆಂದೂ, ಬಿಳುಪು ಹಾಗೂ ಕಪ್ಪು ಬಣ್ಣ ಮಿಶ್ರಿತವಾದ ರೋಮಗಳಿಂದ ಕೂಡಿದ ಅಶ್ವಕ್ಕೆ 'ನೀಲ'ವೆಂದೂ, ಪಾಟಲೀ ಪುಷ್ಪದಂತೆ (ನೀಲಿ) ಬಣ್ಣವುಳ್ಳ ಮಧೂಕವಲ್ಕಲ(ನಾರುಮಡಿಬಟ್ಟೆ)ದ ಛಾಯೆಯುಳ್ಳದ್ದು 'ಮೇಘ', ಪಕ್ವವಾದ ಜಂಬೂಫಲದ ಛಾಯೆ (ನೀಲಕಪ್ಪು) ಹೊಂದಿದ್ದು 'ಜಂಜ್ವ'ವೆಂದೂ, ಕೇಶಗಳು ಹಾಗೂ ಬಾಲದಲ್ಲಿ ಹಳದಿ ವರ್ಣವನ್ನು ಹೊಂದಿದ್ದರೆ 'ಹರಿತ' ವೆಂದೂ, ಕೇಶ ಹಾಗೂ ಬಾಲಗಳಲ್ಲಿ ಲೋಹಿತ ಕೆಂಪು ಬಣ್ಣವನ್ನು ಹೊಂದಿರುವ ಕುದುರೆಗೂ ಸಹ 'ಹರಿತ' ಎನ್ನುವರು. 'ರುಚಿರ' ಎಂಬ ಅಶ್ವವಿಶೇಷ -ಉದುಂಬರ (ಅತ್ತಿಹಣ್ಣಿಗೆ) ಸಮಾನವಾದ ಕಾಂತಿಯನ್ನುಳ್ಳ ಕುದುರೆಗೆ 'ರುಚಿರ'ವೆಂದೂ, ಕೇಶ, ಕೇಸರ, ಬಾಲ ಜಾನುವಿನ ಕೆಳಭಾಗ, ಮೋಚಕ ಹಾಗೂ ಎಲ್ಲಾ ರೋಮಗಳು ಪೀತ (ಹಳದಿ) ಬಣ್ಣವಾಗಿದ್ದರೆ 'ಸುಮನಾ'ವೆಂದೂ, ಮೈಯಲ್ಲ ಬಿಳುಪಾಗಿದ್ದು, ಒಂದು ಕಿವಿ (ಎಡ ಅಥವಾ ಬಲ) ಮಾತ್ರ ಕಪ್ಪಾಗಿದ್ದರೆ ಅಂತಹ ಕುದುರೆಯನ್ನು 'ಶ್ಯಾಮಕರ್ಣ' ಎಂದು ಹೇಳಲಾಗಿದೆ. ಇದು ಅಶ್ವಮೇಧ ಯಾಗಕ್ಕೆ ಅತ್ಯಂತ ಯೋಗ್ಯ ಕುದುರೆ ಎಂದು ಬಣ್ಣಿಸಲಾಗಿದೆ. ಯಾವ ಕುದುರೆಯ ನಾಲ್ಕು ಪಾದಗಳು ಹಾಗೂ ಮುಖದ ಮಧ್ಯಭಾಗವು ಬಿಳುಪುವರ್ಣದಿಂದ ಕೂಡಿದೆಯೋ ಅದು ಪಂಚಕಲ್ಯಾಣ. ಇದಕ್ಕೆ ಕಲ್ಯಾಣ ಪಂಚಕ ಎಂದೂ ಸಹ ಕರೆಯುವರು ಇದು ಅಶ್ವವಿಶೇಷ. ಈ ಕುದುರೆಯನ್ನು ಸಾಕಿದ ಯಜಮಾನನಿಗೆ ಯಾವಾಗಲೂ ಮಂಗಳವನ್ನು ಉಂಟು ಮಾಡುತ್ತದೆ.

"ಕೂದಲುಗಳು, ಮುಖ, ಬಾಲ, ಹೃದಯಭಾಗ (ವತ್ಸ) ಪಾದ (ನಾಲ್ಕು ಪಾದಗಳು) ಹೀಗೆ ಎಂಟು ಸ್ಥಾನಗಳಲ್ಲಿ ಶ್ವೇತವರ್ಣವನ್ನು ಹೊಂದಿರುವ ಅಶ್ವವು 'ಅಷ್ಟಮಂಗಲ' ಎನ್ನುವ ಅಶ್ವ ವಿಶೇಷ ಎಂದು ಅತ್ಯಂತ ಸುಂದರವಾದ ಉತ್ತಮ ಕುದುರೆಯೆಂದು ಹೇಳುತ್ತಾರೆ. ಯಾವ ಕುದುರೆಯು ಮುಖದಲ್ಲಿ ಚಂದ್ರನ ರೀತಿಯ ಚಿಹ್ನೆಯನ್ನು ಹೊಂದಿದೆಯೋ ಹಾಗೂ ಜಂಬೂಫಲದಂತೆ, ಆಕೃತಿಯನ್ನು ಹೊಂದಿದೆಯೋ ಹಾಗೂ ಬಿಳಿಯ ಪಾದಗಳನ್ನು ಹೊಂದಿದ್ದ ಕುದುರೆಗೆ 'ಮಲ್ಲಿಕಾಕ್ಷ' ಎಂದು ಗೌರವಿಸಲಾಗುತ್ತದೆ. ಮುಖವು ಕಮಲದಂತೆ ಇದ್ದು ಎರಡು ಅಥವಾ ಅದಕ್ಕಿಂತ ಹೆಚ್ಚಿನ ಪಾದಗಳಲ್ಲಿ ಬಿಳುಪಾದ ವರ್ಣವನ್ನು ಹೊಂದಿದ್ದರೆ ಅದು ಧೌತಪಾದ, ಶರೀರದ ವರ್ಣವು ಯಾವುದೇ ಆಗಿರಲಿ, ಶರೀರದ ಮೇಲೆ ಅಲ್ಲಲ್ಲಿ ಬಿಳಿ ಪಟ್ಟೆಗಳು ಇದ್ದರೆ ಅಂತಹ ಅಶ್ವವು 'ಹಲಾಭ' ಎಂದು ಗುರುತಿಸಿಕೊಳ್ಳುತ್ತದೆ. ಶರೀರದ ಒಂದು ಪಾರ್ಶ್ವದಲ್ಲಿ ಬಿಳಿಯ ಬಿಂದುಗಳ ಸಮೂಹ ಇದ್ದು, ಶರೀರದ ವರ್ಣವು ವಿವಿಧ ರೀತಿಯದಾಗಿದ್ದರೆ ಅದನ್ನು 'ಕರಂಜ' ಎಂದು ಪರಿಗಣಿಸಲಾಗುತ್ತದೆ. ಇದರ ಶರೀರದ ಬಣ್ಣ ಯಾವುದೇ ಆಗಿದ್ದರೂ ಬಿಳಿಯ ಶರೀರವಾಗಿದ್ದು, ಶರೀರದ ಮೇಲೆಲ್ಲಾ ಕಪ್ಪು ಬಣ್ಣದ ದೊಡ್ಡ ಅಥವಾ ಸಣ್ಣ ಚುಕ್ಕೆಗಳು ಇದ್ದರೆ ಅದನ್ನು 'ಬಿಂಬಕ' ವೆಂದೂ, ಒಂದೇ ಬಣ್ಣವು ಶರೀರವೆಲ್ಲಾ ವ್ಯಾಪಿಸಿದ್ದು ದಟ್ಟವಾಗಿ ಸ್ನಿಗ್ಧವಾಗಿ ಇದ್ದು ಅಥವಾ ಒಂದಕ್ಕಿಂತ ಹೆಚ್ಚಿನ ಬಣ್ಣಗಳು ಸೇರಿ ಸ್ನಿಗ್ಧವಾಗಿದ್ದರೆ 'ಸ್ನಿಗ್ಧ' ವಿಶೇಷ ಎನ್ನುವರು. ಇಂತಹ ಅಶ್ವವು ವರ್ಣ ವಿಶೇಷಗಳಿಂದ ಉಂಟಾಗುವ ಇತರೆ ದೋಷಗಳನ್ನು ತೊಡೆದು ಹಾಕುತ್ತವೆ. ಕುದುರೆಯ ಶರೀರವೆಲ್ಲವೂ ಬಿಳುಪಾಗಿದ್ದು, ಪಾದಗಳು ಮಾತ್ರ ಕಪ್ಪಾಗಿದ್ದು, ಅದು ತನ್ನ ರೂಪಿನಿಂದ 'ಯಮದೂತ' ಎನ್ನುವ ಸಂಜ್ಞೆಯನ್ನು ಹೊಂದಿ ಬಿಟ್ಟು ಬಿಡಲು ಯೋಗ್ಯವಾಗಿರುತ್ತದೆ. ಕುದುರೆಯ ಬಾಲ, ಮುಖಗಳು ಹೀನವರ್ಣದಿಂದ ಕೂಡಿದ್ದು, ಮುಖ ಬಾಲಗಳು ಪರಸ್ಪರ ಭಿನ್ನವರ್ಣವಾಗಿದ್ದರೆ ಅಂತಹ ಅಶ್ವವು ನಿಂದಿತವಾಗಿದ್ದು ತ್ಯಾಜ್ಯವಾಗಿರುತ್ತದೆ."[೬]

ಬಿಳಿ, ಕೆಂಪು, ಹಳದಿ ಕಪ್ಪು ಈ ನಾಲ್ಕು ವರ್ಣದೊಳಗೆ ಒಂದು ವರ್ಣ ಒಳ್ಳೆಯದು. ಈ ಬಾಲ ಕಾಲದ ಕುದುರೆ ಉತ್ತಮವೆಂದು ಶರತ್ಕಾಲದ ಮುಗಿಲಿನ, ಹಸುವಿನ ಹಾಲಿನ ಬಿಳಿಯಾನೆಯ, ಹಿಮವಂತ ಪರ್ವತದ ಬೆಳ್ದಾವರೆಯ ಹೂವಿನ ಹಾಗೆ ಸರ್ವಾಂಗವೂ ಬಿಳಿದಾಗಿ ಇರುವ ಕುದುರೆಯನ್ನು 'ಶ್ವೇತಾಶ್ವ'ವೆಂದು ಕರೆಯುವರು. ಬಿಂದುಗೆಯ ಹೂವು, ಚಂದ್ರ, ಹವಳ, ಉದಯದಲ್ಲಿ ಮೂಡುವ ಸೂರ್ಯ ಇವರೋಪಾದಿಯ ಕೆಂಪು ಸರ್ವಾಂಗವಾದರೆ ಆ ಕುದುರೆಯನ್ನು ಶೋಣವೆಂದೆನ್ನುವರು. ಬಾಗೆಯ ಹೂವಿನ, ಕಕ್ಕೆಯ ಹೂವಿನ, ಹೊಂದಾವರೆಯ ಹೂ, ಹೊನ್ನಬಣ್ಣದ ಹಾಗೆ ಅರಿಸಿನ ಬಣ್ಣದಂತಿರುವ ಕುದುರೆಯನ್ನು ಹರಿಜ್ಜಳನೆಂದು ಕರೆಯಲಾಗಿದೆ. ಕನ್ನೈದಿಲ ಹೂವು, ತುಂಬಿಯ ವರ್ಣದ ಕುದುರೆಯನ್ನು 'ಕೈರ'ನೆಂದು ಕರೆಯುವರು. ಬಿಳಿ, ಕೆಂಪು, ಹಳದಿ ಕಪ್ಪು ಈ ನಾಲ್ಕು ವರ್ಣದ ಕುದುರೆಗಳು ಉತ್ತಮ. ಇನ್ನೂ ಬೇರೆ ಮಿಶ್ರವರ್ಣಗಳುಳ್ಳ ಕುದುರೆಗಳನ್ನು ಉತ್ತಮವೆಂದೂ ಬಣ್ಣಿಸಲಾಗಿದೆ. ಮುಖ, ಬೀಜ, ತಿಕ ಈ ಮೂರು

ಸ್ಥಾನವೂ ಬಿಳಿಯ ಕುದುರೆಯಲ್ಲಿ ಕಪ್ಪಾಗಿರಲು ಆ ಕುದುರೆಯನ್ನು ಕರ್ಣನೆಂದು, ಕರಿಯ ಕುದುರೆಗೆ ಮುಖ, ಬೀಜ, ತಿಕ ಈ ಸ್ಥಾನಗಳು ಬಿಳಿದಾಗಿ ಇದ್ದರೆ ಅಂತಹ ಕುದುರೆಯನ್ನು ಕರ್ಣನೆಂದು ಕರೆಯುವರು. ಬಿಳಿಯ ಕುದುರೆಯ ಮೈಯಲ್ಲಿ ತೊನಚಿಹರಿದ ಹಾಗೆ ಸುಳಹ ಸುಳುಹಾಗಿ ಅದರ ಅಂಡ ಕಪ್ಪಾಗಿರಲು, ಕೆಂಪಾಗಿ ಕಂಡರೆ ಆ ಕುದುರೆಯನ್ನು 'ಕುಕ್ಕುಟಾಖ್ಯ'ವೆಂದೂ, ಬಿಳಿಯ ಕುದುರೆಯ ಬಾಲವೂ, ಉರವೂ ಕಗ್ಗಿಯಿದ್ದರೆ ಆ ಕುದುರೆಯನ್ನು ನೀಳ್ಪಳನೆಂದು, ಬಿಳಿಯ ಕುದುರೆಯ ಕಿವಿಗಳು ಕಪ್ಪಾಗಿರಲು ಕೆಂಪಾಗಿ ಕಂಡರೆ ಶ್ಯಾಮವರ್ಣವಾಗಿ ಗೋಚರಿಸಿದರೆ ಅಂತಹ ಕುದುರೆಯನ್ನು 'ಶ್ಯಾವ'ಂದು, ಬಿಳಿಯ ಕುದುರೆಯ ಬಾಲದ ಮೊಳೆಗಳು ಬಿಳಿದು, ಮೈ, ಕಪಿಲವರ್ಣವಾದ ಕುದುರೆಯು 'ಬೇರ'ನೆಂದು, ಬಿಳಿಯ ಕುದುರೆಯ ಉರ, ಗಲ್ಲ, ವಳಯ, ಅಂಡ, ಕಣ್ಣು, ಖುರ, ಮುಸುಳಿ, ಇವೆಲ್ಲವೂ ಕಪ್ಪಾಗಿರಲು ಅಂತಹ ಅಶ್ವವನ್ನು 'ಇಂದ್ರಾಶ್ವ'ವೆಂದು ಕರೆಯಲಾಗಿದೆ. ಕೈರನಾಗಲಿ, ಪವಳನಾಗಲಿ ಅದರ ನೊಸಲಲ್ಲಿ ಅರಳಿಯ ಎಲೆಯ ಹಾಗೆ ಬಿಳಿದಾಗಿ ಇರಲು 'ತಿಲಕ'ನೆಂದು, ಆ ಕೈರ ಪವಳನ ಮುಖ ಬಿಳ್ಪಾಗಿ ಇರಲು ಅದನ್ನು ಬೊಟ್ಟನೆಂದು, ಭೃಂಗ ವರ್ಣದಿಂದ ಕೂಡಿ ದೇಹದ ಎಲ್ಲ ಅಂಗಾಂಗಗಳು ಕಂಡರೆ ಮತ್ತು ಕೊಂಗ, ಕೊಂಗನ ಹಾಗೆ ಹಣೆಯು ಬಿಳುಪಾಗಿ ಚಂದ್ರನನ್ನು ನೆನಪಿಸುವಂತಿದ್ದರೆ 'ಕಾರುರಗ'ವೆಂದೂ, ಕುದುರೆಯ ಮೈ ಮುತ್ತಕದ ಹೂವಿನ ಛಾಯೆಯಂತಿರಲು ಅದನ್ನು 'ಕುಂಕುಮ ಬೋರ'ನೆಂದು, ಮೈಯೆಲ್ಲ ಬಳಿದು, ಕೆಂಪು ಬಣ್ಣದಿಂದ ಕೂಡಿರಲು 'ಉಜ್ವಳ ಬೋರ'ನೆಂದೂ, ಬಿಳಿಯಕುದುರೆಯ ಮೈಯ ಮೇಲೆಲ್ಲ ಹಲವು ವರ್ಣದ ಛಾಯೆಯಾಗಿರಲು ಅದನ್ನು 'ಮಂಗಳಬೋರ'ನೆಂದು ಕರೆಯುವರು. ಕುದುರೆಯ ಮೈ ಕನ್ನೈದಿಲ ಹೂವಿನ ಬಣ್ಣವಾಗಿ ಇರಲು ನೀಲನೆಂಬುವರು. ಆ ವರ್ಣದ ಮೈಯೆಲ್ಲಾ ನರೆತುಂಬಿ ಇದ್ದರೆ 'ನೀಲಬೋರ'ವೆಂದೂ, ಕರಿದಾಗಿ, ನೀಲವರ್ಣವಾಗಿ, ಖುರವಳಯ ತೊಡೆಗಳು ಬಹಳ ಕಪ್ಪಾಗಿರಲು ಅದನ್ನು 'ಕೈರ'ನೆಂದು ಕರೆಯಲಾಗಿದೆ.

ಕುದುರೆಯ ಮೈಯೆಲ್ಲವು ಬಹಳ ಕಪ್ಪಾಗಿ ಕಾಣಲು, ಅಲ್ಲಲ್ಲಿ ಬಿಳಿದಾಗಿ ಇದ್ದರೆ ಅದನ್ನು 'ಕಾರಳಗ'ನೆಂದು, ಆ ವರ್ಣದ ಕುದುರೆಯ ಮೈಯು ಬಿಳುಪಿನೊಳಗೆ ಕೆಂಪುಗಳು ಒಡವೆರಿದಿರಲು ಅದನ್ನು 'ಕೇಸಳಗ'ನೆಂದು, ಬಿಳಿಯ ಕುದುರೆಯ ಮೈಯಲ್ಲಿ ಅಲ್ಲಲ್ಲಿಗೆ ಅರಿಸಿನ ವರ್ಣದಿಂದ ಕಾಣಿಸಲು ಅಂತಹ ಕುದುರೆಯನ್ನು 'ಸಂಪಳಗ'ನೆಂದು, ಆ ಬಿಳಿಯ ಕುದುರೆಯ ಮೈಯಲ್ಲಿ ಅಲ್ಲಲ್ಲಿಗೆ ಪಾದರಿಯ ಪುಷ್ಪ ವರ್ಣವಾಗಿ ಇರಲು ಅದನ್ನು 'ಬೋರಳಗ'ನೆಂದು ಕರೆಯಲಾಗಿದೆ. ಅದರಂತೆ ವಿಶಿಷ್ಟತೆಯಿಂದ ಕೂಡಿರುವ ಕುದುರೆಯನ್ನು ಕೆಳಗಿನ ಪದ್ಯ ಹೀಗೆ ವರ್ಣಿಸುತ್ತದೆ.

"ವದನದೊಳಂ ನಾಲ್ಕುಂ ಪಾ
ದದೊಳಂ ಬೆಳ್ಪಾಗೆ ಪಂಚಕಲ್ಯಾಣಂ ಬಾ
ಲದೊಳು ರದೊಳಂತೆ ತಾಂ ಕೇ
ಶದೊಳತಿ ಬೆಳ್ಪಾದೊಡಶ್ವಮಂಗಲನಕ್ಕುಂ"[೭] (೨-೧೯)

ಕುದುರೆಯ ನಾಲ್ಕು ಕಾಲು, ಮುಖವೂ ಬಿಳ್ಪಾಗಿರಲು ಅಂತಹ ಕುದುರೆಯನ್ನು ಪಂಚಕಲ್ಯಾಣವೆಂದು ಕರೆಯಲಾಗಿದೆ. ಅಲ್ಲದೇ ಬಾಲ ಉರವಳಯವಿವು ಬಿಳಿದಾಗಿರಲು ಅದನ್ನು 'ಮಂಗಳ'ವೆಂದು ಗುರುತಿಸಲಾಗಿದೆ. ಖುರ, ಕಣ್ಣು, ಮುಸುಳಿ, ಮುಖ ಕರಿದಾಗಿ ಬಾಲ, ಮೈ, ಮೂಗೂ ಬಿಳಿದಾಗಿ ಇರಲು ಅದನ್ನು 'ನೋಕ್ಕಾಹ'ವೆಂದು, ಯಲಚಿಯ ತನಿವಣ್ಣಿನ ಮರ್ಯಾದೆಯಲ್ಲಿ ಕುದುರೆಗೆ ಬೆನ್ನ ನೆಟ್ಟಲುವಿಡಿದು ಬಾಲಪರಿಯಂತರ ಒಂದೊಂದು ರೇಖೆ ಕರಿದಾಗಿ ಇರಲು, ಕೆಂಪಾಗಿರಲು ಅದನ್ನು 'ಕಣ್ಣವಲ್ಲಿ'ವೆಂದೂ, ಬಿಳಿದಿನೊಳಗೆ ಎಳೆಮಾದಳದ ಛಾಯೆಯನ್ನು ಹೊಂದಿರುವ ಪಾರಿವಾಳದ ಕುದುರೆಯನ್ನು 'ಕರ್ಪತ'ನೆಂದು ಆ ಬಣ್ಣದ ಮೈಯ ಕುದುರೆಗೆ ಬಟಾಬುಟುವಾಗಿ ಬಿಳಿದಿರಲು ಅದನ್ನು 'ಯವಟನೆ'ಂದು, ಬಾಲವಳಿಯ ಕಾಲು, ಕಣ್ಣು ಇವು ಕಪ್ಪಾಗಿ ಹಣ ಮೈ ಯಲಚಿಯಕಾಯ ವರ್ಣದಲ್ಲಿ ಮೂರು ನಾಲ್ಕು ಠಾವಿನಲ್ಲಿ ರಕ್ತವರ್ಣವಾಗಿ ಇದ್ದರೆ ಅದನ್ನು ರಕ್ತಕಾಮಾಂಕಿಯೆಂದು, ಕುದುರೆಯ ಮೈಯೆಲ್ಲವೂ ಎಳ್ಳು ಅಕ್ಕಿಯೂ ಬೆರದ ಹಾಗೆ ಇರಲು ಅದನ್ನು 'ಕನ್ನೀಲ'ನೆಂದು, ಖುರ, ಕಣ್ಣು ಮುಖ ವಳಯ ಕದಪು, ಕಂಕುಳು, ಉರ, ಈ ಸ್ಥಾನಗಳಲ್ಲಿ ಬಿಳಿ ನೊರೆಯ ಹಾಗೆ ಇರಲು ಅದನ್ನು ಗಂಗೆವಾಳಿಯೆಂದು, ಬಾಲ, ಮೈ, ಕಾಲು ಕಪ್ಪಾಗಿ, ಕೆಂಪಾಗಿ, ಬಿಳಿದಾಗಿ ಇರಲು ಆ ಕುದುರೆಯನ್ನು 'ಚಕ್ರವಾಕ'ನೆಂದೂ, ಸಿಂಹದ ಕೂದಲ ವರ್ಣದ ಮೈಯ್ಯ ಕುದುರೆ ವಳಯ, ಬಾಲ, ಅಂಡ, ಮುಖ, ಎಲ್ಲವೂ ಕೆಂಪಾಗಿ ಇರಲು ಅದನ್ನು ಸಿಂಹಪೋತನೆಂದು, ಬಿಂದುಗೆಯ ಹೂವಿನ ವರ್ಣ ಅಶೋಕೆಯ ವರ್ಣ, ಕೆಂದಾವರೆಯ ವರ್ಣ ಇವು ಬಿಳಿಯ ಕುದುರೆಯಲ್ಲಿ ಮುಂದೆ ಕೇಸರವಾಗಿರಲು ಉತ್ತಮವೆಂದೂ, ಕುದುರೆಯ ಮೈವರ್ಣ ಬಿಳಿಯ ಸಾಸುವೆಯ ಹಾಗೆ ಇರಲು ಅದನ್ನು 'ಸಿದ್ಧಾರ್ಥ'ನೆಂದು, ಆವರ್ಣ ಪೂರ್ವಾಪರದಲ್ಲೂ ಬೇರೆ ಬೇರೆಯಾಗಿ ತೋರಲು ಆ ಕುದುರೆ ಉತ್ತಮವೆಂಬುವರು.

ಹೆಚ್ಚಿನ ಸಮೂಹದ ಛಾಯೆಯ ಕುದುರೆಯನ್ನು 'ಇಂದಿರ'ನೆಂದೂ, ಆ ಬಣ್ಣದ ಕುದುರೆಯ ಮೈಯಲ್ಲಿ ಸೂಜಿಕಲ್ಲು, ಕಗ್ಗಲ್ಲ ವರ್ಣದ ವಳಿಯು ಬಿಳಿಯಾಗಿರಲು ಅದನ್ನು ಪುಸಾಹನೆಂದು ಹೀಗೆ ನಾನಾ ಬಣ್ಣದ ಹಸುವಿನ ವರ್ಣದ ಕುದುರೆಗಳನ್ನು, ಪಕ್ಷಿಗಳ ವರ್ಣದ, ಮೃಗ ವರ್ಣದ ಕುದುರೆಗಳನ್ನು ಹೆಸರಿನಲ್ಲಿ ಕರೆಯುತ್ತಿರುವುದು ಪ್ರಮುಖವಾದ ಅಂಶವಾಗಿದೆ.

೪.೩. ಅಶ್ವಗಳ ಜನನ-ವಂಶ-ಗುಣಲಕ್ಷಣಗಳು

೪.೩.೧. ಅಶ್ವಗಳ ಜನನ

ಮುಮ್ಮಡಿ ಕೃಷ್ಣರಾಜ ಒಡೆಯರು ಸೌಗಂಧಿಕಾ ಪರಿಣಯದಲ್ಲಿ ಕುದುರೆ ಜನನದ ಕುರಿತು ೧೬ನೇ ಅಶ್ವಾಸದಲ್ಲಿ ಈ ರೀತಿ ವಿವರಿಸುತ್ತಾರೆ. "ಅರಟ್ಟದೇಶದಲ್ಲಿ ಹುಟ್ಟಿದ ಅಶ್ವಗಳು ಪ್ರಸಿದ್ಧವಾದವುಗಳು. ಉತ್ತಮವಾದ ಸುಳಿಗಳು. ಜಾತಿ, ಗತಿವಿಶೇಷಗಳಿಂದ ಕೂಡಿದ್ದು, ಅಮೃತದಿಂದ, ಭಾಷ್ಪ, ಅಗ್ನಿ, ದೇವತೆ ಅಂಡ, ಗರ್ಭ, ಸಾಮವೇದದಿಂದ ಹೀಗೆ ಏಳು ಅಶ್ವಗಳ ಉತ್ಪತ್ತಿಸ್ಥಾನವೆಂದು ಹೇಳಿ ಅದರಂತೆ ಪೂರ್ವದಲ್ಲಿ

ಕ್ಷೀರ ಸಮುದ್ರದಿಂದ ಉಚ್ಛೈಃಶ್ರವಸ ಎಂಬ ಹೆಸರುಳ್ಳ ಅಶ್ವ ಹುಟ್ಟಿ, ಬ್ರಹ್ಮದೇವನ ಮುಖದಿಂದ, ಅಗ್ನಿಯ ನಾಲಿಗೆಯಿಂದ, ಹಸ್ತಗಳಲ್ಲಿ ಭಾಷ್ಪೋದಕಗಳು ಸ್ರವಿಸಿದವು. ಆ ಭಾಷ್ಪೋದಕಗಳಿಂದ ಮೂರು ಅಶ್ವಗಳು ಜನಿಸಿದವು. ಪದ್ಮೋತ್ಪನ್ನನಾದ ಬ್ರಹ್ಮನಿಂದ, ಹೋಮ ಮಾಡುವಾಗ ಅಗ್ನಿಯಿಂದ ಹುಟ್ಟಿದ ಅಶ್ವ, ಅಗ್ನಿಜನ್ಯವಾದದ್ದು, ಹಾಗೆಯೇ ಇಂದ್ರಾದಿ ದಿಕ್ಪತಿಗಂಧ ಎಂಟು ದಿಕ್ಕುಗಳಲ್ಲಿ ಎಂಟು ಅಶ್ವಗಳ ಜನನವಾದವು. ದೇವತೆಗಳಿಂದ ಪೂರ್ವದಲ್ಲಿ ಅಶ್ರುನಾಮಕಳಾದ ದೇವಸ್ತ್ರೀಯು, ಬ್ರಹ್ಮದೇವನು ಕೂಡಾ ಲಕ್ಷ್ಮೀಯ ತಪೋವನದ ಸಮೀಪ ಪರಸ್ಪರ ಶಾಪಗಳಿಂದ ಮೊಸಳೆಯ ರೂಪ ತಾಳಿದಳು. ಬ್ರಹ್ಮದೇವ ಘೂಕರೂಪ ತಾಳಲು ಇವರೀರ್ವರು ಪರಸ್ಪರ ಶಾಪಯುಕ್ತರಾಗಲು ಅವರಿಂದ ಅಂಡಗಳು ಜನಿಸಿದವು. ಅಂಡಜನ್ಯವಾದ ಅಶ್ವಸೃಷ್ಟಿಯಿಂದ ಸ್ತ್ರೀ ಪುರುಷಾಶ್ವ ಸಂಬಂಧದಿಂದುಂಟಾದ ಅಶ್ವಸೃಷ್ಟಿಯ ಗರ್ಭ ಸಂಭವವಾಯಿತು. ಬ್ರಹ್ಮದೇವನು ಸೃಷ್ಟಿಕಾಲದಲ್ಲಿ ಸಾಮವೇದದಿಂದ ಅಶ್ವಗಳು ಜನಿಸಿದವು. ಅವೇ ಈ ಏಳು ಅಶ್ವತ್ಪತ್ತಿಯ ಪ್ರಕಾರಗಳು. ಋಷಿಗಳು ಹೇಳುವ ಪೂರ್ವದಲ್ಲಿ ಬ್ರಹ್ಮದೇವನ ಬೆವರಿನಿಂದ, ಭಸ್ಮದಿಂದ, ಗರ್ದಭಗಳು ಹುಟ್ಟಿದವೆಂದು ವಿದ್ವಾಂಸರು ಗುರುತಿಸುತ್ತಾರೆ. ಆ ಗರ್ದಭಗಳಿಂದ ಅಶ್ವಯೋನಿಗಳಲ್ಲಿ ಜನಿಸಿದ ಜಾತಿ ವಿಶೇಷ ಅಶ್ವಗಳೆನಿಸುವವು. ಈ ಅಶ್ವಕರಗಳಿಂದ ಹೆಣ್ಣು ಕುದುರೆಗಳು ಹುಟ್ಟಿದವು ಅದನ್ನು 'ಗೌರಿಖರ'ವೆಂದೂ ಕರೆಯಲಾಗಿದೆ. ಗೌರೀಖರದಿಂದ ಹೆಣ್ಣು ಕುದುರೆ ಹುಟ್ಟಿದ 'ಮುಕುಬ', ಆ ಮುಕುಬವೆಂಬ ಸ್ತ್ರೀಗರ್ಭದಲ್ಲಿ ಮುಕುಬವೆಂಬ ಗರ್ದಭದಿಂದ ಕಿಂಷಷ್ಮ. ಆ ಕಿಂಷಷ್ಮದಿಂದ ಹೆಣ್ಣು ಕುದುರೆಗಳಲ್ಲಿ ಜನಿಸಿದ ಸಿದ್ದು ಪುನಃಖರ ಎಂದು ಗುರುತಿಸಲಾಗಿದೆ.

ಪೂರ್ವದಲ್ಲಿ ಅಶ್ವಗಳು ಪಕ್ಷಗಳಿಂದ ಕೂಡಿ ಆಕಾಶದಲ್ಲಿ ಸಂಚರಿಸುತ್ತಿರುವಾಗ, ಅವುಗಳನ್ನು ನೋಡಿದ ಇಂದ್ರನು ಶಾಲಿಹೋತ್ರನೆಂಬ ಋಷಿಯಗೆ ಆದೇಶ ಮಾಡುತ್ತ, ಈ ಕುದುರೆಗಳು ನಿನ್ನ ಸ್ವಾಧೀನದಲ್ಲಿದ್ದು ಮಹತ್ವವನ್ನು ಪಡೆಯುವಂತೆ ಇವುಗಳ ರೆಕ್ಕೆಗಳನ್ನು ಕತ್ತರಿಸಲು ತಿಳಿಸಿದನು. ಆಗ ಋಷಿಯು ಐಷೀಕಾಸ್ತ್ರದಿಂದ ಕುದುರೆಗಳ ರೆಕ್ಕೆಯನ್ನು ಕತ್ತರಿಸಿದನು. ಶಾಲಿಹೋತ್ರ ಋಷಿಯು ನಿಮ್ಮ ಪಕ್ಷವೇಗಕ್ಕೆ ಸಮಾನವಾದ ವೇಗವು ಪಾದಗಳಿಗೆ ಉಂಟಾಗಲಿ ಎಂದು ಆ ಕುದುರೆಗಳಿಗೆ ವರವಕೊಟ್ಟನು. ಇಂದ್ರಾದಿ ದೇವತೆಗಳಿಗೂ, ಭೂಪತಿಗಳಿಗೂ ಕೂಡ ಪೂಜ್ಯ ವಾಹನಗಳಾಗಿ ಇರಲು ಹೇಳಿ, ಯಾವ ದೊರೆಯು ಅನ್ನಪಾನಗಳಿಂದ ನಿತ್ಯವು ನಿಮಗೆ ಪುಷ್ಟಿಯನ್ನುಂಟು ಮಾಡುವನೋ ಆ ರಾಜನು ಸರ್ವದೇಶಗಳಲ್ಲಿ ವಿಜಯ ಪಡೆಯುವನು ಎಂದು ಹೇಳಲು, ಆ ಅಶ್ವಗಳು ಭೂ ಲೋಕಕ್ಕೆ ಬಂದು ಭೂಪಾಲಕರಿಗೆ ವಾಹನತ್ವವಾಗಿ ತಮ್ಮನ್ನು ರಕ್ಷಿಸುವ ಭೂಪಾಲಕರಿಗೆ ಉಪಕಾರ ಮಾಡುತ್ತ ಧರ್ಮ, ಅರ್ಥ, ಕಾಮಮೋಕ್ಷಗಳೆಂಬ ಪುರುಷಾರ್ಥಗಳನ್ನು ಸಾಧಿಸಿದವು"[೯] ಎಂದು ವಿವರಿಸಲಾಗಿದೆ.

ಅಶ್ವಗಳ ಉತ್ಪತ್ತಿಗೆ ಪ್ರಮುಖವಾಗಿ ಏಳು ಸ್ಥಾನಗಳನ್ನು ನಿರ್ದೇಶಿಸಲಾಗಿದೆ. ೧. ಅಮೃತದಿಂದ ೨. ಭಾಷ್ಪ (ಕಣ್ಣೀರು) ೩. ವಹ್ನಿ (ಬೆಂಕಿ) ೪. ದೇವತೆ ೫. ಅಂಡ (ಮೊಟ್ಟೆ) ೬. ಗರ್ಭಾಶಯ ೭. ಸಾಮವೇದ

೪.೩.೧.೧. ಅಮೃತ : ಹಿಂದೆ ಸಮುದ್ರಮಂಥನಕ್ಕೆ ಸಂಬಂಧಿಸಿದ ಪೌರಾಣಿಕ ಘಟನೆಗಳು ಕಂಡುಬರುತ್ತವೆ. ಅಮೃತ (ಕ್ಷೀರ) ಸಾಗರದಿಂದ ಅಮೃತದ ಜೊತೆಗೆ 'ಉಚ್ಚೈಃಶ್ರವಸ್' ಎಂಬ ಕುದುರೆಯು ಹುಟ್ಟಿ ಬಂದಿತು. ಅದೊಂದೇ ಅಮೃತ ಸಂಭವವಾದ ಅಶ್ವ. ಪುರಾಣ ಕಥೆಯಲ್ಲಿ ಬರುವಂತೆ ದೇವತೆಗಳು ದಾನವರು ಸೇರಿಕೊಂಡು ಸಾವನ್ನು ಗೆದ್ದು, ನಿತ್ಯಯೌವನವನ್ನೂ ಕೊಡುವ ಔಷಧ ವಿಶೇಷವಾದ ಅಮೃತಕ್ಕಾಗಿ ಪ್ರಯತ್ನಿಸಿದರು. ಚತುರ್ಮುಖ ಬ್ರಹ್ಮನ ಸಲಹೆಯಂತೆ ವಿಶ್ವದಲ್ಲಿ ಇರುವ ಎಲ್ಲಾ ಔಷಧಿ ಮೂಲಿಕಾ ವಿಶೇಷಗಳನ್ನು ಕ್ಷೀರ ಸಮುದ್ರದಲ್ಲಿ ಹಾಕಿ, ಮಂದರ ಪರ್ವತವನ್ನು ಕಡೆಗೋಲನ್ನಾಗಿ ಮಾಡಿಕೊಂಡು 'ವಾಸುಕಿ' ಎಂಬ ಸರ್ಪವನ್ನು ಕಡೆಯುವ ಹಗ್ಗವನ್ನಾಗಿ ಮಾಡಿಕೊಂಡು ದೇವತೆಗಳೂ, ದಾನವರೂ ಸಹ ಅಮೃತ (ಕ್ಷೀರ) ಸಾಗರದ ಮಂಥನವನ್ನು ಮಾಡಿದರು. ಆಗ ಕ್ಷೀರ ಸಾಗರದ ಅಡಿಯಲ್ಲಿ ಅಮೃತದ ಜೊತೆಗೆ ಇದ್ದ ನಾನಾ ಪದಾರ್ಥಗಳು ಒಂದೊಂದಾಗಿ ಹೊರಗೆ ಬರಲಾರಂಭಿಸಿದವು. ಇವುಗಳಲ್ಲಿ ಉಚ್ಚೈಃ ಶ್ರವಸ್ ಎಂಬ ಅಶ್ವವೂ ಒಂದು ಈ ಅಶ್ವವನ್ನು ಇಂದ್ರನು ತನ್ನ ಭಾಗಕ್ಕೆ ಪಡೆದುಕೊಂಡನು ಎಂಬ ವಿಚಾರ ಬರುತ್ತದೆ.

೪.೩.೧.೨. ಭಾಷ್ಪ : ಯುಗದ ಆದಿಯಲ್ಲಿ ಚತುರ್ಮುಖ ಬ್ರಹ್ಮನ ವದನದಿಂದ ಹಾಗೂ ಜಾತವೇದಾಗ್ನಿಯ ಜಿಹ್ವೆ(ನಾಲಿಗೆ)ಯಿಂದ ಭಾಷ್ಪ ಬಿಂದುಗಳು ಅವರ ಕೈಗಳಲ್ಲಿ ಬಿದ್ದವು. ಈ ಭಾಷ್ಪ ಬಿಂದುಗಳಿಂದ ಮೂರು ಮೂರು ಕುದುರೆಗಳು ಹುಟ್ಟಿದವು. ಇವನ್ನು ಭಾಷ್ಪಜ ಕುದುರೆಗಳು ಎಂದು ಹೆಸರಿಸಲಾಗಿದೆ.

೪.೩.೧.೩. ವಹ್ನಿ : ಸರಸೀರುಹ(ಕಮಲ)ದಲ್ಲಿ ಹುಟ್ಟಿದ ಹಾಗೂ ಅದರಲ್ಲಿ ಹವನ ಮಾಡುವುದರಿಂದ ಪ್ರವೃದ್ಧವಾದ ಹುತಾಶನ(ಬೆಂಕಿ)ಯಿಂದ ಹಿಂದೆ ಕುದುರೆಗಳು ಹುಟ್ಟಿದವು ಎಂಬ ವಿಚಾರ ಬರುವುದು. "ಕಮಲದಲ್ಲಿ ಹುಟ್ಟಿದ ಬೆಂಕಿ" ಅದರಲ್ಲಿ 'ಹವನ' ಅದರಿಂದ "ಪ್ರವೃದ್ಧವಾದ ಹುತಾಶನ" -ಇವು ಅಲೌಕಿಕವಾದ ವಿಷಯಗಳು. ಬಹುಶಃ ಇವು ಯೋಗಶಾಸ್ತ್ರ ತಂತ್ರ ಶಾಸ್ತ್ರಗಳಿಗೆ ಸಂಬಂಧಿಸಿದ ಅಧಿದೈವಿಕ ವಿಷಯಗಳಾಗಿರುತ್ತವೆ.

೪.೩.೧.೪. ದೇವತೆ : ಇಂದ್ರಾದಿ ಅಷ್ಟದಿಕ್ಪಾಲಕರು (ಎಂಟೂ) ದಿಕ್ಕುಗಳಲ್ಲಿ ವ್ಯಾಪಿಸಿದಾಗ ಅದರ ಮೂಲಕ ಅಶ್ವಗಳು ಉತ್ಪನ್ನವಾದವು. ಇದು ಬ್ರಹ್ಮ ಸೃಷ್ಟಿಯಂತೆಯೇ ಇದೆ. ಈ ಅಶ್ವಗಳನ್ನು ದೇವತಾ ಸಂಭವವಾದ ಅಶ್ವಗಳೆಂದು ಹೇಳಲಾಗಿದೆ. ದೇವತಾಜಲಶ್ವ. ಅಷ್ಟದಿಕ್ಪಾಲಕರು ಇಂದ್ರ, ಅಗ್ನಿ, ಯಮ, ನಿಋತಿ, ವರುಣ, ಕುಬೇರ, ಈಶಾನ, ವಾಯು ಪ್ರಮುಖವಾದ ದೇವತೆಗಳು.

೪.೩.೧.೫. ಅಂಡಜ : ಪ್ರಜಾಪತಿ ಹಾಗೂ ಲಕ್ಷ್ಮೀ ಇವರಿಬ್ಬರೂ ಪರಸ್ಪರರ ಶಾಪದ ಪರಿಣಾಮವಾಗಿ, ತಪೋವನದ ಸಮೀಪದಲ್ಲಿ ಉಲೂಕ (ಗೂಬೆ) ಹಾಗೂ ಜಿಂಕೆ (ಮೃಗೀ) ರೂಪಗಳನ್ನು ಹೊಂದಿದರು.

ಇದರ ಅಂಡ (ಮೊಟ್ಟೆ)ಗಳ ಫಲವಾಗಿ ಹುಟ್ಟಿದ ಕುದುರೆಗಳೇ ಅಂಡಜ ಅಶ್ವಗಳು.

೪.೩.೧.೬ ಗರ್ಭಾಶಯ : ಗಂಡು ಹೆಣ್ಣು ಕುದುರೆಗಳ ಸಂಯೋಗದಿಂದ ಹುಟ್ಟುವ ಕುದುರೆಯು ಗರ್ಭಜ ಅಶ್ವವಾಗಿದೆ. ಪ್ರಸ್ನಕಾ ಎಂಬುದಕ್ಕೆ ಕೋಶದಲ್ಲಿ ಪ್ರಸೂಕಾ = ಹೆಣ್ಣು ಕುದುರೆ ಎಂಬ ಪದವಿದೆ. ಪ್ರಸ್ನಕಾ ಎಂಬ ಪದ ಇಲ್ಲ. ಯೋಗ = ಸಂಯೋಗ, ಕೂಡುವಿಕೆ ಎಂದು ತಿಳಿದು ಕೊಳ್ಳುವುದು ಸೂಕ್ತವಾದ ವಿಚಾರವಾಗಿದೆ.

೪.೩.೧.೭. ಸಾಮವೇದ : ಸೃಷ್ಟಿಕರ್ತನು ಸೃಷ್ಟಿಯ ಆದಿಯಲ್ಲಿ ಸಾಮವೇದಗಳಿಂದ ಅಶ್ವಗಳನ್ನು ಸೃಷ್ಟಿಸಿದನು. ಇದರಿಂದ ವೇದಗಳು ಎಲ್ಲಾ ಸೃಷ್ಟಿಗೂ ಮೂಲವೆಂದು ತಿಳಿಯಲಾಗಿದೆ. ಹೀಗಿದ್ದರೂ ಸಾಮವೇದಕ್ಕೆ ಕುದುರೆಗಳ ಸಂಬಂಧವನ್ನು ಇಲ್ಲಿ ವಿಶೇಷವಾಗಿ ಕಲ್ಪಿಸಲಾಗಿದೆ. ಈ ರೀತಿಯಾಗಿ ಏಳು ವಿಧದ ಅಶ್ವೋತ್ಪತ್ತಿಯನ್ನು ಕುರಿತು ವಿವರಿಸಲಾಗಿದೆ.

'ಖರ'ಗಳು ಬೆವರಿನ ನೀರಿನಿಂದ ಕೂಡಿದ ಭಸ್ಮದಿಂದ ಉತ್ಪನ್ನವಾದವು ಎಂದು ಪೂರ್ವಾಚಾರ್ಯರು ತಿಳಿಸುತ್ತಾರೆ. ಅಶ್ವೋತ್ಪತ್ತಿಯ ಪ್ರಸಂಗದಿಂದ ಖರ (ಕತ್ತೆ ಗರ್ಧಭ) ಇವುಗಳ ಉತ್ಪತ್ತಿಯನ್ನು ಹೇಳುತ್ತಾನೆ. 'ಭಸ್ಮ' ಹಾಗೂ 'ಬೆವರಿನನೀರು' ಇವುಗಳ ಬಗ್ಗೆ ಯಾವುದೇ ಸೂಚನೆಯಿಲ್ಲದ ಕಾರಣ 'ಖರ' ಎಂಬ ಶಬ್ದವು ಹೇಸರಗತ್ತೆ ಎಂಬ ಅರ್ಥದಲ್ಲಿ ಬಳಕೆಯಾಗುತ್ತದೆ. ಊರು ಕತ್ತೆಗಳು ಎಂಬ ಅರ್ಥದಲ್ಲಿಯೂ ಸಾಹಿತ್ಯದಲ್ಲಿ ಬಳಕೆಯಾಗಿದೆ. ರಾಮಾಯಣದಲ್ಲಿ ಖರನೆಂಬ ರಾಕ್ಷಸನ ಹೆಸರು ಬಂದಿದೆ. (ಅರಣ್ಯಕಾಂಡ) ಯುದ್ಧಕಾಂಡದ ವರ್ಣನೆಗಳಿಂದ ಯುದ್ಧದ ರಥಗಳನ್ನು ಎಳೆಯಲು ರಾಕ್ಷಸರು ಹೇಸರಗತ್ತೆಗಳನ್ನು ಬಳಸುತ್ತಿದ್ದರೆಂದು ತಿಳಿದು ಬರುತ್ತದೆ. 'ಖರ'ಗಳು ಸ್ವಯೋನಿ ಸಂಭೂತವಾದವು. ಹೆಣ್ಣು ಕುದುರೆಯಲ್ಲಿ ಗಂಡು ಖರದಿಂದ ಹುಟ್ಟಿದ ಖರವು 'ಅಶ್ವತರ' ಎಂಬ ಹೆಸರಿನ ಖರ. 'ಪ್ರಸೃಕಾ' ಅಶ್ವದಲ್ಲಿ (ಗಂಡು) ಖರದಿಂದ ಉತ್ಪತ್ತಿಯಾದ ಖರವು 'ಗೌರೀ' ಖರವೆಂದು ಹೇಳಲಾಗುತ್ತದೆ. 'ವಡವಾ'ದಲ್ಲಿ 'ಕಿಣ' ಎಂಬ ಜಾತಿಯ ಖರದಿಂದ ಹುಟ್ಟಿದ ಖರವು 'ಮುಕುಬ' ಖರವೆಂದು ಹೇಳಲಾಗುತ್ತದೆ. (ಹೆಣ್ಣು) 'ಮುಕುಬ'ದಲ್ಲಿ 'ಕಿಣ' ಖರದ ಸಂಯೋಗದಿಂದ ಹುಟ್ಟಿದ ಖರವು 'ಕಿಂಪಷ್ಮ' ಖರ ಎಂದು ಹೇಳಿ (ಗಂಡು) ಕಿಂಪಷ್ಮದಿಂದ (ಹೆಣ್ಣು) ಪ್ರಸೃಕಾದಲ್ಲಿ ಹುಟ್ಟಿದ ಖರವು 'ಪರ' ಎಂಬ ಖರವೆಂದು ಹೇಳುತ್ತಾರೆ. ಪ್ರಾಚೀನ ಭಾರತದಲ್ಲಿ ಮಿಶ್ರ ತಳಿ/ಸಂಕೀರ್ಣ ತಳಿ ಅಶ್ವಗಳ, ಖರಗಳ ಅಭಿವೃದ್ಧಿಯ ಜ್ಞಾನವಿದ್ದು, ಇಂದಿಗೂ ರೇಸು ಕುದುರೆಗಳ ವಂಶಾವಳಿಯನ್ನು ಗುರುತಿಸಿ ಕುದುರೆಯ ಲಕ್ಷಣ, ಸಾಮರ್ಥ್ಯಗಳನ್ನು ಪ್ರಾಚೀನ ಭಾರತೀಯ ಅಶ್ವ (ಪ್ರಾಣಿ) ಶಾಸ್ತ್ರಕಾರರು ವಂಶಾವಳಿಯ ಪ್ರಾಮುಖ್ಯತೆಯನ್ನು, ಮಿಶ್ರತಳಿ ಬೆಳವಣಿಗೆಯಿಂದ ಆಗಬಹುದಾದ ಪರಿಣಾಮ ಪ್ರಯೋಜನಗಳ ಬಗ್ಗೆ ತಿಳುವಳಿಕೆಯನ್ನು ಹೊಂದಿದ್ದರು. ರೇಣ, ಮುಕುಬ, ಅಶ್ವತರ, ಕಿಂಪಷ್ಮ, ಖರ -ಈ ಉಪಜಾತಿಗಳನ್ನು ಇಂದಿನ ಹೇಸರಗತ್ತೆ/ಕತ್ತೆಗಳಲ್ಲಿ ಗುರುತಿಸಲು ಸಾಧ್ಯವಾಗುತ್ತದೆಯೇ

ಎಂಬ ಅಂಶವನ್ನು ಪ್ರಾಣಿಶಾಸ್ತ್ರಜ್ಞರು ಪರಿಶೀಲಿಸಬೇಕು. ಇದರಿಂದ ಕುದುರೆಯ ಜನನದ ಬಗ್ಗೆ ವಿಪುಲವಾದ ಮಾಹಿತಿ ದೊರೆಯುತ್ತದೆ.

ಹಿಂದೆ ಅಶ್ವಗಳಿಗೆ ರೆಕ್ಕೆಗಳು ಇದ್ದು, ಇದರಿಂದಾಗಿ ಅವು ಆಕಾಶದಲ್ಲಿ ಸಂಚಾರ ಮಾಡುವ ಶಕ್ತಿಯನ್ನು ಹೊಂದಿದ್ದು, ಆಕಾಶಗಾಮಿಯಾದ ಕುದುರೆಗಳನ್ನು ಇಂದ್ರನು ಶಾಲಿಹೋತ್ರನೆಂಬ ಮುನಿಗೆ ಈ ರೀತಿಯಾಗಿ ಆದೇಶ ನೀಡಿದನು. 'ಎಲೈ ಶಾಲಿಹೋತ್ರ ಮುನಿಯೇ, ನೀನು ಈ ಕುದುರೆಗಳ ಪಕ್ಷ(ರೆಕ್ಕೆ)ಗಳನ್ನು ಕತ್ತರಿಸು, ಇದರಿಂದ ಇವು ನಿನಗೆ ವಾಹನವಾಗಲಿ ಎಂದು ಹೇಳಿದನು. ಇಂದ್ರನ ಪ್ರಾರ್ಥನೆಯಂತೆ ಶಾಲಿಹೋತ್ರನು ಕುದುರೆಗಳ ರೆಕ್ಕೆಗಳನ್ನು ಕತ್ತರಿಸಿದನು. ಅಶ್ವಗಳ ಪ್ರಾರ್ಥನೆಯಂತೆ, ಮುನಿಯ ಅನುಗ್ರಹದಿಂದ ಕುದುರೆಗಳ ಕಾಲುಗಳಲ್ಲಿ ರೆಕ್ಕೆಗಳಿಗೆ ಇದ್ದ ವೇಗ ಪ್ರಾಪ್ತಿಯಾಯಿತು. ಇದರಿಂದ ಇಂದ್ರಾದಿ ದೇವತೆಗಳ ವಾಹನತ್ವವೂ ಪ್ರಾಪ್ತವಾಯಿತು. ಪುರಾಣಗಳಲ್ಲಿ ಪರ್ವತಗಳಿಗೆ ರೆಕ್ಕೆಗಳಿದ್ದು, ಅವನ್ನು ಇಂದ್ರನು ಕತ್ತರಿಸಿದ ಕಥೆಯೊಂದು ಬರುತ್ತದೆ. ಇಲ್ಲಿ ಇಂದ್ರನು ಪಕ್ಷಚ್ಛೇದ ಕಾರ್ಯವನ್ನು ಬೇರೊಬ್ಬ ಮುನಿಗೆ ವಹಿಸಿದ್ದಾನೆ. ಜಾನಪದ ಕಥೆಗಳಲ್ಲಿ ರೆಕ್ಕೆಗಳಿದ್ದು ಹಾರುವ ಕುದುರೆಯ ಕಲ್ಪನೆ ವ್ಯಾಪಕವಾಗಿ ಬಳಕೆಯಾಗುತ್ತದೆ. ಅಲ್ಲಲ್ಲಿ ಸಿಗುವ ಉಲ್ಲೇಖಗಳಿಂದ ಕೆಲವು ಆನೆಗಳಿಗೂ, ಸರ್ಪಗಳಿಗೂ ಸಹ ರೆಕ್ಕೆಗಳು ಇದ್ದವೆಂದು ತಿಳಿದು ಬರುತ್ತದೆ. ಇಂದ್ರನು 'ಉಚ್ಚೈಃಶ್ರವ' ಕುದುರೆಯನ್ನು ಬಿಟ್ಟು ಬೇರೆ ಕುದುರೆಯನ್ನು ವಾಹನವಾಗಿ ಬಳಸಿಕೊಂಡ ಉಲ್ಲೇಖ ಕಂಡು ಬರುವುದಿಲ್ಲ. ಬಹುಶಃ ಕುದುರೆಗಳು ನೆಲದ ಮೇಲೆ ಹಕ್ಕಿಗಳಂತೆ ಓಡುತ್ತವೆ ಎಂಬ ಸಾಮರ್ಥ್ಯವನ್ನೂ ತರಲು ಈ ಪ್ರಸಂಗ ಇಲ್ಲಿ ಬಂದಿರಬಹುದು. ಇಂದ್ರನಿಗೆ ಪ್ರೀತಿಯನ್ನೂ ಉಂಟುಮಾಡಲು ಶಾಲಿಹೋತ್ರ ಮುನಿಯು ಇಷೀಕಾಸ್ತ್ರದಿಂದ ಅಶ್ವಗಳ ಪಕ್ಷಗಳನ್ನೂ ಕತ್ತರಿಸಿದನು. ನಂತರ ಅಶ್ವಗಳ ಕೋರಿಕೆಯಂತೆ ಮುನಿಯು ಅವುಗಳಿಗೆ ಈ ರೀತಿಯಾಗಿ ವರವನ್ನೂ ಕರುಣಿಸಿದನು. ನಿಮಗೆ ಪಕ್ಷ(ರೆಕ್ಕೆ)ಗಳಲ್ಲಿ ಇದ್ದವೇಗವು (ಬಲ) ನಿಮ್ಮ ಪಾದಗಳಲ್ಲಿ ಉಂಟಾಗಲಿ, ಇನ್ನು ಮುಂದೆ ನೀವು ಇಂದ್ರಾದಿ ದೇವತೆಗಳಿಗೆ ವಾಹನವಾಗಿರುವಿರಿ. ಹಾಗೂ (ಭೂಲೋಕದಲ್ಲಿ) ರಾಜರ ಗೌರವದಿಂದ ನೋಡಲ್ಪಡುತ್ತೀರಿ. ಯಾವ ರಾಜನು ನಿಮ್ಮನ್ನು (ಅಶ್ವಗಳನ್ನು) ಅನ್ನ ಪಾನಾದಿಗಳಿಂದ ಸುಪುಷ್ಟವಾಗಿ ಇಟ್ಟುಕೊಳ್ಳುತ್ತಾನೋ ಅಂತಹ ರಾಜನ ಸರ್ವತ್ರ ಜಯವನ್ನು ಹೊಂದುವವನಾಗುತ್ತಾನೆ. ಈ ರೀತಿಯಾಗಿ ವರಪ್ರಧಾನದ ನಂತರ ಅಶ್ವಗಳು ಭೂಮಿಯಲ್ಲಿ ರಾಜರ ವಾಹನಗಳಾಗಿವೆ ಹಾಗೂ ರಾಜರುಗಳಿಗೆ (ಅಶ್ವಗಳ ಒಡೆಯರಿಗೆ) ತಮಗೆ ಮಾಡಿದ ಉಪಾಕರಕ್ಕೆ ಪ್ರತಿಯಾಗಿ ಧರ್ಮ-ಅರ್ಥ-ಕಾಮಗಳನ್ನು ಸಾಧಿಸಿಕೊಡುತ್ತಿವೆ.

೪.೩.೨. ಅಶ್ವಗಳ ವಂಶ

ಅಶ್ವಗಳಲ್ಲಿ ಚಾತುರ್ವರ್ಣವನ್ನು ಗುರುತಿಸುವುದು ಬಹಳ ಕಠಿಣವಾದ ಕೆಲಸ. ಆದರೂ ಸಹ ಈ ಲಕ್ಷಣಗಳನ್ನು ಇಲ್ಲಿ ಸೂಚಿಸಲಾಗಿದೆ.

೪.೩.೨.೧. ಬ್ರಾಹ್ಮಣ : "ಸಂಯಮಶೀಲವಾದ, ಶೀಲಚಾರಿತ್ರ್ಯವನ್ನು ಹೊಂದಿರುವ ಶುದ್ಧಾಚಾರದಿಂದ ಕೂಡಿರುವ, ಸೌಂದರ್ಯ ಸಂಪತ್ತು(ಲಕ್ಷ್ಮೀ)ಗಳಿಂದ ಕೂಡಿರುವ ಸ್ವಭಾವದಿಂದ ಧೈರ್ಯಶಾಲಿ, ಎಲ್ಲಾ ಕುದುರೆಗಳಿಗೂ ಮಿತ್ರ ಸ್ವಭಾವದಿಂದ ಇರತಕ್ಕಂತಹ, ದೇವಗಂಧರ್ವ ಸತ್ತ್ವವನ್ನು ಹೊಂದಿ, ಅವರ ಆಚಾರಕ್ಕೆ ಹೋಲಿಕೆಯಾದ ಆಕಾರವುಳ್ಳ, ಅರ್ಜುನರವರ್ಣ, ಅರುಣವರ್ಣ ಅಥವಾ ಜೇನಿನ ಹಳದಿ ಬಣ್ಣಕ್ಕೆ ಸಮಾನವಾದ ಶರೀರದ ಬಣ್ಣವನ್ನು ಹೊಂದಿರುವಂತಹವು. ಅಶ್ವಗಳ ಶರೀರದ ವಾಸನೆಯು ಜೇನಿನ ಹಳದಿ ಬಣ್ಣಕ್ಕೆ ಸಮಾನವಾದ ಶರೀರದ ಬಣ್ಣವು, ಉಶೀರ, ತುಪ್ಪ, ಅರಳು ಇವುಗಳ ವಾಸನೆಯನ್ನು ಹೋಲುತ್ತವೆ. ಈ ಕುದುರೆಗಳು ಹಾರ, ಗಂಧ, ಪಾಯಸ, ತುಪ್ಪ ಆಸಕ್ತಿಯನ್ನು ಹೊಂದಿರುತ್ತವೆ.

೪.೩.೨.೨. ಕ್ಷತ್ರಿಯ : ಇವು ತೇಜಸ್ವಿಗಳು, ಧೀರ ಸ್ವಭಾವ, ಮತ್ತು ಶೀಘ್ರಕೋಪಗೊಳ್ಳುವ ಸ್ವಭಾವ (ಶರೀರ) ಸತ್ತ್ವ(ಬಲ)ವನ್ನು ಹೊಂದಿರುವವು. ಶೂರ ಇವುಗಳ ಶಬ್ದವು ಬಹಳ ಹೆಚ್ಚಿನದ್ದಾಗಿರುತ್ತದೆ. ಇವು ತೀಕ್ಷ್ಣ ಸ್ವಭಾವದವು. ಶರೀರದಿಂದ ಹಾಗೂ ಬಲದಿಂದ ದೊಡ್ಡದಾಗಿರುತ್ತವೆ. ಯಕ್ಷ- ಗಂಧರ್ವ ಇಂತಹ ದೇವಯೋನಿಗಳ ಸತ್ತ್ವವನ್ನು ಹೊಂದಿ ಅವರ ಆಚಾರಕ್ಕೆ ಹೋಲಿಕೆಯಾಗುತ್ತವೆ. ಬಿಳಪು ಅಥವಾ ಕಪ್ಪು ಬಣ್ಣದ್ದಾಗಿರುತ್ತವೆ. ಒಳ್ಳೆಯ ಬಣ್ಣ, ಸುಗಂಧ ಹೂವಿನಂತೆ ಶರೀರದ ವಾಸನೆಯನ್ನು ಹೊಂದಿರುವ ಇವು ಪುಣ್ಯವಾದವುಗಳು. ಕಣ್ಣು, ಮಲ್ಲಿಕಾ, ಪುಷ್ಪ ಅಥವಾ ಶ್ರೇಷ್ಠವಾದ ಮಣಿಗಳಿಗೆ ಹೋಲಿಕೆಯಾಗುವಂತೆ ಇದ್ದು. ಅಶ್ವಗಳ, ಅವಯವಗಳು ಸ್ಫುಟವಾಗಿ ಗುರುತಿಸಲು ಸಾಧ್ಯ.

೪.೩.೨.೩. ವೈಶ್ಯ : ಬಿಸಿಲು, ಮಳೆ, ಗಾಳಿ ಇವುಗಳನ್ನು ಸಹಿಸಿಕೊಳ್ಳಬಲ್ಲ ಶರೀರ ಶಕ್ತಿಯುಳ್ಳಂತಹ, ಸ್ಥಿರವಾಗಿ ನಿಂತು ಭಾರವನ್ನೂ ಹೊರಲು ಸಮರ್ಥವಾದವುಗಳು. ಸಂತೋಷ ದುಃಖ ಎಂಬ ಭಾವನೆಗಳಿಗೆ ದೂರವಾದವುಗಳು. ಹಾಗೆಯೇ ಮಧ್ಯಮ ವೇಗದಲ್ಲಿ ಪ್ರಮಾಣಿಸಬಲ್ಲ ಸಾಮರ್ಥ್ಯ. ಪಾನ (ಸುರೆ) ಇದರಲ್ಲಿ ಆಸಕ್ತಿಯನ್ನು ಹೊಂದಿರುವುದು. ಕ್ರೌಂಚ ಪತ್ರದಂತೆ ಕೆಂಪು ಬಣ್ಣ ಹೊಂದಿರುತ್ತದೆ. ಇವುಗಳ ಶರೀರದ ವಾಸನೆಯು ಟಗರು, ವಾನರ ಇವುಗಳ ಶರೀರದ ವಾಸನೆಯಂತೆ ಇದ್ದು, ರಾಕ್ಷಸರ ಸತ್ತ್ವ, ವಿಶೇಷದಿಂದ ಕೂಡಿದ್ದು ಜಿತೇಂದ್ರಿಯ ಸ್ವಭಾವವನ್ನು ಹೊಂದಿರುತ್ತವೆ.

೪.೩.೨.೪. ಶೂದ್ರ : ಅಶುದ್ಧವಾದ ಆಚಾರದಿಂದ, ಅಪ್ರಶಸ್ತವಾದ ಗುಣಗಳಿಂದ ಲಕ್ಷಿಸಲ್ಪಡುತ್ತವೆ. ಇವು ಬೇರೊಬ್ಬರು (ಇನ್ನೊಂದು ಪ್ರಾಣಿ ಅಥವಾ ಅಶ್ವ) ತಿಂದು ಉಳಿಸಿದ (ಎಂಜಲು ಮಾಡಿದ) ಆಹಾರವನ್ನು ತಿನ್ನುತ್ತವೆ. ಅಶುದ್ಧವಾದ ಆಹಾರವನ್ನು ಸಹ ಬಿಡದೆ ತಿನ್ನುತ್ತವೆ. ತನ್ನ ಪಾಲಕ, ಒಡೆಯನನ್ನು ಸಹ ಒದೆಯುತ್ತವೆ. ಧ್ವನಿಯು ಒಡೆದ ಮರದ ತುಂಡಿನಿಂದ ಹೊರಡುವ ನಾದದಂತೆ ಇರುತ್ತವೆ. ಶರೀರದ ವಾಸನೆಯು ಕಾಗೆಯ ವಾಸನೆಯಂತೆ ಇರುತ್ತದೆ. ಈ ಕುದುರೆಗಳು ಪಿಶಾಚಿಯೋನಿಗಳ ಸತ್ತ್ವವನ್ನು ಹೊಂದಿರುತ್ತವೆ. ಇಂತಹ ಅಶ್ವಗಳು ಅಧಮಾಶ್ವಗಳ ಗುಂಪಿಗೆ ಸೇರುತ್ತವೆ."[7]

ಹೀಗೆ ಶಾಸ್ತ್ರಕಾರರು ಚತುರ್ವರ್ಣಗಳಿಂದ ಕೂಡ ಕುದುರೆ ಲಕ್ಷಣಗಳನ್ನು ಗುರುತಿಸಿ ಅವುಗಳ ನಡಾವಳಿಕೆಯನ್ನು ಚಿತ್ರಿಸಿದ್ದಾರೆ. ಇದು ಅಷ್ಟೊಂದು ಉಪಯುಕ್ತವಲ್ಲದಿದ್ದರೂ ವೇದಕಾಲದ ಸಾಮಾಜಿಕ ಪರಿಸ್ಥಿತಿಯನ್ನು ಲಕ್ಷ್ಯದಲ್ಲಿಟ್ಟುಕೊಂಡು ಗುರುತಿಸುವುದು ಸತ್ಯ.

೪.೩.೩. ಅಶ್ವಗಳ ಗುಣ ಲಕ್ಷಣಗಳು

೪.೩.೩.೧. ಜಾತಿ-ಲಕ್ಷಣ : ಸರ್ವಜ್ಞ ಸೋಮೇಶ್ವರನು ತನ್ನ ಮಾನಸೋಲ್ಲಾಸ ಕೃತಿಯ ಚತುರ್ಥ ವಿಂಶತಿ ತುರಗವಾಹ್ಯಾಲೀ ವಿನೋದ-೪ರಲ್ಲಿ ಹಯಾಧ್ಯಕ್ಷ(ಕುದುರೆಗಳ ಮೇಲ್ವಿಚಾರಣೆಯನ್ನು ನೋಡಿಕೊಳ್ಳುವ ಕಾಸ್ತಾರ)ನನ್ನು ಕರೆಸಿ ಕುದುರೆಗಳನ್ನು ತರಲು ಅಪ್ಪಣೆ ಮಾಡಿ, ತಂದ ಕುದುರೆಯನ್ನು ದೊರೆಯಾದವನು ನೋಡಿ ಅವುಗಳ ದೇಶ, ಹೆಸರು ಮುಂತಾದ ಭೇದಗಳನ್ನು ಗಮನಿಸಿ ಅವುಗಳ ಜಾತಿಯನ್ನು ಪರೀಕ್ಷೆ ಮಾಡಬೇಕು ಎಂಬ ವಿಚಾರವನ್ನು ವ್ಯಕ್ತಪಡಿಸುತ್ತಾ, ಕುದುರೆಗಳು ಶ್ರೇಷ್ಠ, ಮಧ್ಯಮ, ಕನಿಷ್ಠ ಎಂಬ ವಿಭಾಗಗಳಿಗೆ ಸೇರಿಸಿ ಎಂಟು ಅಂಶಗಳನ್ನು ಮುಂದಿಡುತ್ತಾನೆ. ಅವುಗಳು ಇಂತಿವೆ.

"ಆವರ್ತ(ಸುಳಿ), ವರ್ಣ (ಬಣ್ಣ) ಸತ್ತ್ವ(ಶಕ್ತಿ), ಛಾಯಾ(ಕಾಂತಿ), ಗಂಧ (ವಾಸನೆ), ಗತಿ(ನಡಿಗೆ), ಸ್ವರ(ಕೂಗುವಧ್ವನಿ), ಮತಲ್ತಿ ಆಕಾರ (ಆಕೃತಿ) ಎಂದು ಹೇಳಿ ಇವುಗಳ ಸಹಾಯದಿಂದ ಕುದುರೆಯ ಜಾತಿ ಲಕ್ಷಣಗಳನ್ನು ಗುರುತಿಸಿದ್ದಾನೆ. ಕಾಂಭೋಜ, ಯವನ, ತೇಜೀ, ಬ್ಲಾಹೀಕ, ಅತಲ, ತೋಖ್ಖಾರಕ (ತೋಕ್ಖಾರಕ) ಕೇಕಾಣ ಎಂಬ ಏಳು ಬಗೆಯ ಕುದುರೆಗಳು ಉತ್ತಮೋತ್ತಮ ಎಂದೂ, ಪೋದ್ದಾರ, ಕಾಂದಲೇಯ, ಯೌಧೇಯ, ವಾಯಪೇಯಕ, ವನಾಯುಜ, ಪಾರಸೀಕ ಎಂಬ ಆರು ಕುದುರೆಯು ಉತ್ತಮವೆಂದೂ, ತೈತ್ತಿಲ, ವತ್ಸ, ಕಾಂಧಾರ(ಗಾಂಧಾರ), ವಾಮತೇಯ, ಸೈಂಧವ, ಸಾವಿತ್ರ, ಪಾರ್ವತೇಯ, ಕಾಶ್ಮೀರ, ಸಾಂವತೀಯಕ, ತೇಜ, ಕುಲಜ, ನೀಹಾರ, ಸಾರಸ್ವತ, ತುರುಷ್ಕ ಎಂಬ ಹದಿನಾಲ್ಕು ಬಗೆಯ ಕುದುರೆಗಳು ಮಧ್ಯಮವೆಂದು ಹೇಳಿ, ಮೇದಕ, ಆರ್ಜುನೇಯ, ತ್ರೈಗರ್ತ, ಗುರ್ಜುರ, ರಾಜಸ, ಆವಂತ್ಯ, ಸೌರಾಷ್ಟ್ರ, ಪಾರಿಯಾತ್ರ, ಸಹಾರಕ ಹಾರಕ ದುಗ್ಧವಾಟ(ದುಗ್ಧ-ವಾಟ), ಸ್ತಬ್ಧವಾಟಿ ಎಂಬ ಹನ್ನೆರಡು ಬಗೆಯ ಕುದುರೆಗಳು ಕನಿಷ್ಠ ಎಂಬ ನಿರ್ಧಾರಕ್ಕೆ ಬರುತ್ತಾನೆ. ನಂತರ ಸ್ತಬ್ಧವಾಟಿ ಎಂಬ ಕುದುರೆ ಉತ್ಪನ್ನವಾದದ್ದು. ಇದನ್ನು (ಪಳಗಿಸಲು) ಅತಿಕಷ್ಟವಾಗುವುದೆಂದು ಹೇಳುತ್ತ ರಾಜ ಮಹಾರಾಜರು ತಿಳಿದು ಕೊಳ್ಳಬಹುದಾದ (ಇನ್ನೂ) ಇಪ್ಪತ್ತಾರು ಪ್ರಕಾರದ ಕುದುರೆಗಳು ಇವೆ. ಆದರೆ ಕಲಿಯುಗದಲ್ಲಿ ಅವು ಹುಟ್ಟುವುದಿಲ್ಲವಾದ್ದರಿಂದ ಅವನ್ನು ನಾನು ಇಲ್ಲಿ ಪರಿಗಣಿಸಿಲ್ಲ ಎಂದಿರುವನು."[೧೦] ಪ್ರಾಚೀನ ಕಾಲದಲ್ಲಿ ಕುದುರೆಗಳ ಸಂತಾನ ಅಗಾಧ ಪ್ರಮಾಣದಲ್ಲಿತ್ತು. ಮಾನವನು ಯಂತ್ರಗಳನ್ನು ಕಂಡುಕೊಂಡ ಮೇಲೆ ಅವುಗಳ ಬಳಕೆ ಕಡಿಮೆಯಾದದ್ದರಿಂದ ಅವುಗಳ ಸಂತತಿಯಲ್ಲಿ ಗಣನೀಯವಾಗಿ ಇಳಿಮುಖವಾಗುತ್ತ ಬಂದಿತು. ಕಾರಣ ಸಂತಾನ ಅಭಿವೃದ್ಧಿಯಲ್ಲಿ ಮಾಡಬೇಕಾದ ಕಾರ್ಯಗಳನ್ನು ಮಾಡದೆ ನಿರ್ಲಕ್ಷ ತೋರಿದ

ಪರಿಣಾಮವಾಗಿ, ಪಾಲನೆ, ಪೋಷಣೆ ಮಾಡದೆ ಇರುವುದು, ಆಹಾರ ಇನ್ನಿತರ ಸೌಲಭ್ಯಗಳು ಯೋಗ್ಯ ರೀತಿಯಲ್ಲಿ ಸಿಗದ ಕಾರಣ ಅವುಗಳ ಸಂತತಿ ನಸಿಸಿ ಹೋಗಿರುವ ಸಾಧ್ಯತೆ ಹೆಚ್ಚು ಕಂಡು ಬರುತ್ತದೆ.

ಕುದುರೆಯ ಲಕ್ಷಣವನ್ನು ಕುರಿತು ಶಾಲಿಹೋತ್ರನಿಂದ ಹಿಡಿದು ಹಿರಿಯಣ್ಣ ಕವಿಯವರೆಗೂ ಅನೇಕ ಶಾಸ್ತ್ರಕಾರರು, ಪಂಡಿತರು, ಆಸ್ಥಾನ ಕವಿಗಳು ತಮ್ಮ ಕೃತಿಕಾವ್ಯಗಳಲ್ಲಿ ಕುದುರೆ ಲಕ್ಷಣದ ಬಗ್ಗೆ ಮಾಹಿತಿಯನ್ನು ನೀಡುತ್ತಾ ಬಂದಿದ್ದಾರೆ. ಸದಾಶಿವನೀತಿಯಲ್ಲಿ ತುರಗಲಕ್ಷಣ ಕುರಿತು ಮಹತ್ವದ ಅಂಶಗಳನ್ನು ಚರ್ಚಿಸಲಾಗಿದೆ. ಉದಾ.

"ತನು ಗತಿಸುಳಿಗಳು ಗಂಧ
ಧ್ವನಿ ಸತ್ವವು ಕಾಂತಿ ವರ್ಣವಿದುಮಷ್ಟ ವಿಧಂ
ಘನವಾದ ತುರಗ ಕಾಯದೊ
ಳನಿತುಂ ಶುಭಮಶುಭ ಮೆಂಬುದಿದುಮು ಭಯವಿಧಂ"[೧೧] (೧)

ಶಾಸ್ತ್ರಕಾರ ಎಂಟು ಪ್ರಕಾರದಿಂದ ಕುದುರೆಯ ಲಕ್ಷಣವನ್ನು ಗುರುತಿಸಿ ತನು, ಗತಿ, ಸುಳಿ ಗಂಧ, ಧ್ವನಿ, ಸತ್ವ, ಕಾಂತಿ, ವರ್ಣಗಳಿಂದ ಮಹತ್ವದ ಅಂಶಗಳನ್ನು ಶುಭ ಅಶುಭದಿಂದ ವಿವರಿಸಿದ್ದಾನೆ.

"ತುರಗದ ಜಾತಿಯು ನಾಲ್ಕುಂ
ನೆರೆ ವಿಪ್ರ ಕ್ಷತ್ರ ವೈಶ್ಯ ಶೂದ್ರದ ಪೆಸರಿಂ
ಅರಿವದು ಮೊದಲೆರಡುತ್ತಮ
ತರುವಾಯದಿ ಮಧ್ಯಮಂ ಕನಿಷ್ಠವೆನಿಕ್ಕುಂ"[೨] (೨)

ಜಾತಿಯಿಂದ ಕುದುರೆಯನ್ನು ಗುರುತಿಸಿ ವಿಪ್ರ (ಬ್ರಾಹ್ಮಣ) ಕ್ಷತ್ರಿಯ, ವೈಶ್ಯ, ಶೂದ್ರ ಎಂದು ನಾಲ್ಕು ಭಾಗವಾಗಿ ವಿಭಾಗಿಸಿ ಮೊದಲ ಎರಡು ಅಂದರೆ ಬ್ರಾಹ್ಮಣ, ಕ್ಷತ್ರಿಯ ಕುದುರೆಗಳು ಉತ್ತಮವೆಂದೂ, ವೈಶ್ಯ ಮಧ್ಯಮ, ಶೂದ್ರ ಕನಿಷ್ಠವೆಂದು ವಿವರಿಸಲಾಗಿದೆ. ಬಿಳಿಯ ಬಣ್ಣವನ್ನು ಹೊಂದಿರುವ ಕುದುರೆಯು ವಿವೇಕವುಳ್ಳದ್ದು. ದಯಾನ್ವಿತವಾದದ್ದು. ವಿಪ್ರ (ಬ್ರಾಹ್ಮಣ) ಕೆಂಪು, ಬಿಳಿ ಕ್ಷತ್ರಿಯ, ಹಳದಿಯು ದುರ್ಗುಣಿ, ವೈಶ್ಯ ಬಳಲು ಅಂಜುವದು, ಕರಿದು ಶೂದ್ರವೆಂದೂ ಹೇಳಲಾಗಿದೆ. ವರು ಜಿಹ್ವ ಪ್ರಮುಖವಾದ ಎರಡು ತೋಳು (ಬಾಹು) ಶಿರ, ಜಂಘಾ, ಪಾರ್ಶ್ವವಾಗಿರುವ ಸದ್ರೀವಾದ ಕುದುರೆಗಳು ಇರಲು ಉತ್ತಮ. ಗುದ, ಮೇಢ್ರ, ಕರ್ಣ, ಮೃದುರೋಮ, ಅಂಡ, ಜಂಘೆ, ಬಾಲದ ದಂಡ, ಕುದುರೆಯೊಳೆಂಟು ಇದ್ದು ಗುದೆ ಕಿರಿದಾಗಿದುರೆ ಉತ್ತಮ.

"ಕಿವಿಕಂಠ ಬಾಲ ಸಣ್ಣವು
ವಿವರಿಸೆ ಉರ ಖುರವು ನೇತ್ರ ಅಂಗಸ್ಥೂಲಂ

ತವೆಮೃದು ರೋಮವು ಭ್ರೂಲತೆ
ಯವೆ ಸಣ್ಣವು ದೀರ್ಘಮುಖದ ಅಶ್ವೋತ್ತಮವೂ"[೧೩]

ಕಿವಿ, ಕಂಠ, ಬಾಲ ಕಿರಿದಾಗಿದ್ದು, ಉರ, ಖುರವು ನೇತ್ರ, ಅಂಗಸ್ಥೂಲ, ತವೆ ಮೃದುರೋಮವು ಭ್ರೂಲತೆಯೂ, ಕಿರಿದಾಗಿಯೂ, ದೀರ್ಘವಾದ ಮುಖವುಳ್ಳ, ಕುದುರೆಯು ಅಶ್ವಗಳಲ್ಲಿಯೇ ಉತ್ತಮವಾದದ್ದು.

ಉದರ, ಕಟಿ, ಬೆನ್ನು, ವಕ್ಷ, ಪಾದ, ಹಣೆ, ಸ್ಕಂದ, ಕಣ್ಣುಗಳು ವಿಸ್ತೀರ್ಣವಾಗಿ ಉದಯಿಸಿದರೆ ಹೆಚ್ಚು ಬಲಪ್ರಾಪ್ತಿಯಾಗುತ್ತದೆ. ಹಾಗೆಯೇ ತುರಗದ ಖುರದಿಂದ ಸ್ಕಂಧಕ್ಕೆ ಪರಿಮಿಯ ನೂರು ಅಂಗುಲ, ಮಾನವತದಿಂದೆಂಟು ಕಡೆಯು ಮಧ್ಯಮವಾಗಿರಲು ಆ ಕುದುರೆಯು ಗುರುವೆನಿಸಿಕೊಳ್ಳುವುದು. ಮುಖವು ಮೂವತ್ತೆರಡು ಅಂಗುಲ, ಮಿತ ಕೊರಳು ಐವತ್ತಾರು. ಉರ, ಟೊಂಕ, ಬೆನ್ನು, ಮೊಗಸಮವಾಗಿದ್ದು ಖುರ, ಕರ್ಣಗಳು ಏಳು ಬೆರಳು ಉತ್ತಮವಾಗಿದ್ದು, ಗಲ್ಲ, ಬೆರಳು, ನೆರೆ, ಜಂಘೆಯ ಮಿತಿಯೊಳಗೆ ಇಪ್ಪತ್ತೆರಡಂಗುಲ ಇರಲು ಉತ್ತಮ. ಕಡಿಮೆ ಅಂದರೂ ಮಧ್ಯಮ ಪ್ರಮಾಣದಲ್ಲಿರುತ್ತದೆ.

"ಕರಿ ಹಂಸ ಸಿಂಹ ಚಕ್ರವು
ಶರಗತಿ ಸಮ ಪಂಚಧಾರೆಯಿರಲುತ್ತಮವೂ
ಚರಣಗಳುರವಂ ಮುಟ್ಟಲು
ತುರಗವು ಅತ್ಯಧಿಕ ಕೇಳು ಗುರುನಂದೀಶಾ"[೧೪] (೧೧)

ಆನೆ, ಹಂಸ, ಸಿಂಹ ಚಕ್ರವುಳ್ಳ ಶರ, ಗತಿ, ಸಮ, ಪಂಚಧಾರೆಯಿಂದಲೂ ಉತ್ತಮ ಚರಣಗಳು ಮುಟ್ಟಲು ತುರಗವು ಅತ್ಯಧಿಕವಾದದ್ದು ಎಂದು ವಿವರಿಸಿ. ವಿಪ್ರ, ಕ್ಷತ್ರ, ವಾಜಿಗೆ ಪರಿಮಳ ಬೆವರಿನಿಂದಲೂ, ಶ್ವಾಸದಲ್ಲಿ, ಧರೆಯೊಳಗೆ ವೈಶ್ಯ, ಶೂದ್ರದ ಕುದುರೆಗಳು ದುರ್ಗಂಧವೆಂದು ವಿದ್ವಾಂಸರು ತಿಳಿದುಕೊಳ್ಳಬೇಕು ಎಂದು ಸದಾಶಿವರಾಯ ಅಭಿಪ್ರಾಯಪಡುತ್ತಾನೆ.

"ಹಯರವ ಹ್ರೂಂ ಕಾರುತ್ತಮ
ಜಯಕರ ಹ್ರೀಂಕಾರವಿರಲು ಮಧ್ಯಮವಕ್ಕುಂ
ಭಯಸೂಚಕ ಹ್ರಾಂ ಕಾರವು
ನಿಯಮವ ಮೀರಿದ ವಿಕಾರ ಧ್ವನಿಯತ್ಯಧಮಂ"[೧೫] (೧೩)

ಕುದುರೆಯು ಹ್ರೂಂಕಾರ ಮಾಡಿದರೆ ಉತ್ತಮ, ಜಯಕಾರ ಮಾಡುವ ಸಂದರ್ಭದಲ್ಲಿ ಹ್ರೀಂಕಾರ ಮಾಡಲು ಮಧ್ಯಮ. ಭಯ ಸೂಚಕ ಹ್ರಾಂ ಕಾರ ಮಾಡಿದರೆ ನಿಯಮವನ್ನು ಮೀರಿದ ವಿಕಾರ ಧ್ವನಿಯುಳ್ಳ

ಕುದುರೆ ಅಧಮವಾದದ್ದು ಎಂದು ವಿವರಿಸುತ್ತಾನೆ. ಮುತ್ತು, ಮಣಿ, ಪುಷ್ಯರಾಗದ ಉತ್ತಮ ಪ್ರಭೆಯುಳ್ಳ ಕುದುರೆ ಮಂಗಳಕರವಾದದ್ದು ಮತ್ತೆಳೆ, ನೀಲದ, ಹವಳದ ಗೊತ್ತಿನ ಕಾಂತಿಗಳನ್ನು ಹೊಂದಿದ್ದರೆ ಅಶುಭ, ಅಶ್ರುಗಳೊಳಗೆ ಮನಿ, ವಿಪ್ರ, ವಾಯು, ವರುಣ, ಧನಪತಿ, ಗಂಧರ್ವ ಸುರಪಸತ್ವ ಕುದುರೆ ಅನುಪಮವಾದದ್ದು; ಅತ್ಯುತ್ತಮವಾದುದೆಂದು ಹೇಳಲಾಗಿದೆ.

೪.೩.೩.೨. ಆಯುಷ್ಯ ಲಕ್ಷಣ : ಅಶ್ವಶಾಸ್ತ್ರವೆಂಬ ಸಮುದ್ರದಲ್ಲಿ ಸಿಂಹದತ್ತನು ಹೇಳಿದ ಕೃತಿಯ ಲಕ್ಷಣವನ್ನು ಆಧಾರವಾಗಿಟ್ಟುಕೊಂಡು ರೇವಂತನನ್ನು ಅನುಸರಿಸಿ ಕನ್ನಡದಲ್ಲಿ ಅಶ್ವಶಾಸ್ತ್ರವನ್ನು ಹೇಳುತ್ತೇನೆ ಎಂದಿರುವ ಅಭಿನವಚಂದ್ರ ಪ್ರಾಚೀನತೆಯನ್ನು ಗುರುತಿಸುವಲ್ಲಿ ಆದಿಯಲ್ಲಿ ಬ್ರಹ್ಮದೇವರ ಆನಂದಾಶ್ರುಗಳಲ್ಲಿ ಹುಟ್ಟಿದ ಕುದುರೆಗಳನ್ನು ಅಗ್ನಿಸಂಭವಗಳೆಂದು, ದೇವರು ಮತ್ತು ರಾಕ್ಷಸರೂ ಕೂಡಿ ಸಮುದ್ರದಲ್ಲಿ ಅಮೃತವನ್ನು ಕಡೆಯುವಾಗ ಹುಟ್ಟಿದ ಕುದುರೆಗಳನ್ನು ಅಮೃತಸಂಭವಗಳೆಂದು, ಹುಲ್ಲೆಗಳು ಗೂಗೆಗಳ ಸಂಯೋಗದಲ್ಲಿ ಮೊಟ್ಟೆಗಳಾಗಿ ಹುಟ್ಟಿದ ಕುದುರೆಗಳನ್ನು ಉಳೂಕ ಸಂಭವಗಳೆಂದೂ ಕರೆದಿರುವುದು ಕಂಡು ಬರುತ್ತದೆ. ಶಾಸ್ತ್ರಕಾರ ಈ ಎಲ್ಲ ಹೇಳಿಕೆಗಳನ್ನು ಹೇಳುವುದರ ಜೊತೆಗೆ ಕುದುರೆಗೆ ಇರುವ ಒಟ್ಟು ಆಯುಷ್ಯವನ್ನು ಈ ರೀತಿಯಾಗಿ ಖಚಿತಪಡಿಸಿದ್ದಾನೆ.

> "ಪರಮಾಯುಷ್ಯಂ ಮೂವ
> ತ್ತೆರಡಬ್ದಂ ಮೂಱು ವರುಷದಿಂ ದ್ವಾದಶವಾ
> ಸರ ಮುಮರಳ್ತಿಂಗಳೊಳುಂ
> ಪರಿವರ್ತಿಕುಮಾಂದೆ ಸಂದಸಂದಂಶಂಗಳ"[೧೯] (೧-೩೦)

ಕುದುರೆಗಳಿಗೆ ಪರಮಾಯುಷ್ಯ ಮುವತ್ತೆರಡು ವರ್ಷ, ಎರಡು ತಿಂಗಳು, ಹನ್ನೆರಡು ದಿನಗಳು ಎಂಬುದು ಮೇಲಿನ ಸಾಲುಗಳಿಂದ ವಿಧಿತವಾಗುತ್ತದೆ.

ಕುದುರೆಯನ್ನು ಪ್ರಮುಖವಾಗಿ ಒಟ್ಟು ಐದು (೫) ಸ್ಥಾನಗಳಿಂದ ಗುರುತಿಸಬಹುದು. ಮುಖ, ಕೊರಳು, ಕಂಠ, ಹೆಗಲು, ಉರಗಳೆಂದು, ಅಲ್ಲದೆ ಕುದುರೆಯ ಠಾವಿನಲ್ಲಿ ಲಕ್ಷಣವನ್ನು ನೋಡಬಹುದು. ಕುದುರೆಯ ಹೊಟ್ಟೆಯಲ್ಲಿ ೬, ಹೊಕ್ಕುಳಲ್ಲಿ ೭, ತಿಕದಲ್ಲಿ ೮, ತೊಡೆಯಲ್ಲಿ ೯, ಕಾಲಲ್ಲಿ ೧೦ ಈ ರೀತಿಯಲ್ಲಿ ಹತ್ತು ದಿಕ್ಕು ಮತ್ತು ಹತ್ತು ಸ್ಥಲಗಳಲ್ಲಿ ಒಳ್ಳೆಯ ಹಾಗೂ ಕೆಟ್ಟ (ಕಷ್ಟದ) ರೇಖೆಗಳನ್ನು ತಿಳಿದುಕೊಳ್ಳಬಹುದು. ಕುದುರೆಯ ಮೈಯ್ಯಿ, ಕಣ್ಣು, ಸತ್ವ, ವರ್ಣ, ನಡೆ, ಧ್ವನಿ, ರೂಪು ಗುಣ ಈ ೮ ವಿಧಗಳನ್ನು ಅರಿಯಬಹುದು.

ಕುದುರೆಯ ಶರೀರ ಮತ್ತು ದೇಹದ ಅಂಗಾಂಗಗಳಿಂದ ಒಳ್ಳೆಯ ಮತ್ತು ಕೆಟ್ಟತನವನ್ನು ಗುರುತಿಸುವ ಪ್ರಯತ್ನ ಇಲ್ಲಿ ಮಾಡಲಾಗಿದೆ.

ಶರೀರದ ರೂಪ ಬಣ್ಣದಿಂದಾಗಿ ಆಯತ, ಮುಖ ತೆಳುವಾಗಿದ್ದರೆ ಉತ್ತಮ. ಬಾಯಿಯಲ್ಲಿ ತಾವರೆಯ ಪುಷ್ಪದ ಪರಿಮಳದಿಂದ ಕೂಡಿದ್ದರೆ ಉತ್ತಮ. ಕುದುರೆಯು ಕದಪು ಬಣ್ಣವನ್ನು ಹೊಂದಿದ್ದು ನುಣುಪಾಗಿದ್ದು ಹಲ್ಲು ನೊರೆಯ ಹಾಗೆ ಇದ್ದು, ತಾಳುಗೆ ರಕ್ತ ವರ್ಣವಾಗಿರಲೂ ಉತ್ತಮ. ಕುದುರೆಯ ಮೊಲೆಗಳು ತೆರೆಯಾಗಿ, ಸೆರೆಯಾಗಿ, ನೀಳಾಗಿ ಇದ್ದರೆ ಮೂವತ್ತೆರಡು ವರುಷ ಆಯುಷ್ಯ ಉಂಟು. ಕದಪು ನುಣುಪಾಗಿ ರೇಖೆಗಳು ವಿರಾಜಿಸುತ್ತಾ ವಂಶಾಂತರವಾಗಿ ಗಂಭೀರತೆಯನ್ನು ಹೊಂದಿದ್ದರೆ ಉತ್ತಮ. ಕುದುರೆಯ ನಾಲಿಗೆ ದಪ್ಪವಲ್ಲದೆ ನೀಳವಾಗಿ ನಯವಾಗಿ, ನುಣ್ಪಾಗಿ, ತೆಳುವಾಗಿ, ಕಿರಿದಾಗಿದ್ದು ಹಲ್ಲುಗಳು ಧವಳವಾಗಿರಲು ಅಂತಹ ಕುದುರೆಯನ್ನು ಉತ್ತಮವೆಂದೂ, ದಾಡೆ ಮೃದುವಾಗಿ, ನಯವಾಗಿ ಹಾಡೆಯ ಸಂಧಿಗಳು ಕೆದರಿದ ಹಾಗೆಯೇ ಇದ್ದರೆ ಉತ್ತಮ. ಕಣ್ಣುಗಳು ಅಂದಳದ ಹಾಗೆ ಪಾದರಿಯ ಹೂವಿನ ರೇಖೆಗಳು ರಕ್ತವರ್ಣವಾಗಿ, ಗುಂಜಿವರ್ಣವಾಗಿ ರೇಖೆಗಳಿದ್ದರೆ ಉತ್ತಮ. ಕುದುರೆಯ ಕಣ್ಣು ಹುಲ್ಲೆಯ, ನವಿಲ, ಗೌಜಿನ, ಹೆಣ್ಣಾನೆಯ, ಗಿಳಿಯ, ಕ್ರೌಂಚೆಯ, ಹಂಸೆಯ, ಕಣ್ಣಿನ ಮರಿಯಾದೆಯಲ್ಲಿದ್ದರೆ ಉತ್ತಮ. ಕುದುರೆಗೆ ಮೂಗಿನ ಹೊಳ್ಳೆಗಳು ಉದ್ದವಾಗಿ ನೊಸಲು ಕನ್ನಡಿಯ ಮರಿಯಾದೆಯಲ್ಲಿ ನಿರ್ಮಲವಾಗಿದ್ದು, ಪ್ರೋತ್ಥರೇಖೆ ಅರಳಿದ ತಾವರೆಯ ಹೂವಿನ ಮರಿಯಾದೆಯಲ್ಲಿ, ಮೂಗಿನ ಹೊಳ್ಳೆಗಳು ಇದ್ದರೆ ಉತ್ತಮ. ಕೊರಳು ನೀಳವಾಗಿ ದುರ್ಮಾಂಸಗಳಿಲ್ಲದೆ ವಳೆಯದ ಕೂದಲುಗಳು ಕುರುಳಾಗಿ, ಮೃದುವಾಗಿ, ನಯವಾಗಿದ್ದರೆ ಒಳ್ಳೆಯದು. ನವಿಲ ಕೊರಳ ಮರಿಯಾದೆಯಲ್ಲಿ, ಎರಡು ಕಡೆಯಲ್ಲಿ ನೇವರಿಸಿದ ಹಾಗೆ ಕೋಮಲವಾಗಿ ಬಲದ ಕಡೆಯಾದರೆ ಉತ್ತಮ. ಕಿವಿಗಳು ತೆರೆಯಿಲ್ಲದೆ, ನರೆಯಿಲ್ಲದೆ ಸಣ್ಣದಾಗಿ, ತೆಳುಪಾಗಿ, ಮೊನೆಯಾಗಿ ನುಣುಪಾಗಿದ್ದು ಕದಪುಗಳು ನಿರ್ಮಲವಾಗಿರಲು ಉತ್ತಮವೆಂದೂ, ಕುದುರೆಯ ತಿಕ ಸೇರಿಸಿದ ಹಾಗೆಯಿದ್ದು ಎರಡು ಕಡೆಯ ಕೆಲಗಳು ಹಂಗೆಯ ಮರಿಯಾದೆಯಲ್ಲಿ ಉರ ಬರವಾಗಿರಲೂ ಉತ್ತಮ. ದಾಡೆ ಕಳಿಯಾಗಿ ಕಂಕುಳಮಾಂಸ ಪೂರಾಯವಾಗಿ, ತೊಡೆ ಕದಪುಗಳು ಪೂರಾಯವಾಗಿರಲು ಒಳ್ಳೆಯದು. ಕುಪ್ಪಿಗೆ ಗುಡ್ಡವಾಗಿ ತೊಡೆ ಯುದ್ಧವಾಗಿ, ಕಾಲುಗಳು ಕೋಮಲವಾಗಿ ಗುಡ್ಡವಾಗಿದ್ದು, ಸಣ್ಣನಾದರೆ ಲೇಸೆಂದು ತಿಳಿಯಬೇಕು. ಕುದುರೆಯ ಮೈಯೆಲ್ಲವೂ ಒಂದೆ ಬಣ್ಣವಾಗಿ ಖುರ ಸೇರಿದಾಗಿ ಆ ಖುರದಲ್ಲಿ ಕ್ಷೀರಿಕೆಯು ಮಾಡುಕೆಗಳಿರಲು ಉತ್ತಮ. ಹಾಗೆಯೇ ಕುದುರೆಯ ಬರಿಯು ನೆಟ್ಟಲುಗಳು ಕಾಣಿಸದೆ ಹಿಂದೆ ಎರಡು ಗುಂಬವೆನಿಸಿದ ಮರಿಯಾದೆಯಲ್ಲಿ ತೋರೆ ಆ ಕುದುರೆ ಹುಟ್ಟಿದ ಮನೆಗೂ, ಆ ಕುದುರೆ ಕಟ್ಟಿದ ಮನೆಗೂ ಒಳ್ಳೆಯದು. ಬಾಲ ಕಿರಿದಾಗಿ ಹೊಳೆಯುತ್ತ ಮೃದುವಾಗಿ, ಸಣ್ಣದಾಗಿ ಕೂದಲುಗಳಾಗಿ ತೊಡೆಯೊಳಗೆ ಅಡಗಿಕೊಂಡು ತೆರಪಾಗಿ ಇದ್ದರೆ ಉತ್ತಮ. ತೊಡೆಗಳು ಕೊಂಕಾಗಿ, ತೆಳುವಾಗಿ ಒಂದನೊಂದು ಹೊದ್ದದೆ ಖುರ ಶುದ್ಧವಾಗಿ ಕಾಣಕಾಲು ಸಣ್ಣದಾಗಿರಲು ಉತ್ತಮ.

ಕುದುರೆಯ ತಿಕ ತಾಮಸವಲ್ಲದೆ ಬಟುವಾಗಿ, ಗಂಭೀರವಾಗಿ ರೋಮಗಳು ಇಲ್ಲದೆ ಇದ್ದರೆ ಉತ್ತಮ. ಅಲ್ಲಿ ಕೂದಲು ಬಹಳ ಹುಟ್ಟಿದರೂ, ನೀಳವಾಗಿ ಇದ್ದರೂ ಉತ್ತಮವಲ್ಲವೆಂದು ಅಶ್ವಶಾಸ್ತ್ರಕಾರರು

ಅಭಿಪ್ರಾಯ ಪಡುತ್ತಾರೆ. ಕುದುರೆಯ ಹೊಟ್ಟೆ ಸಮನಾಗಿ ಬಟುವಾಗಿದ್ದು, ಅದರ ಪ್ರಜಾಪತಿ ಎಮ್ಮತ್ತದ ಅರಳಿದ ಹೂವಿನ ತೆರನಾಗಿ ಅದರ ತುದಿ ಇರಲು ಉತ್ತಮ. ಹಾಗೆಯೇ ಅರುಣವರ್ಣವಾಗಿ ಇದ್ದರೂ ಉತ್ತಮ. ಶಾಸ್ತ್ರಕಾರ ಪಟ್ಟದ ಕುದುರೆಯ ಲಕ್ಷಣವನ್ನು ಮುಂದುವರೆದು ಹೀಗೆ ಗುರುತಿಸಿದ್ದಾನೆ.

"ಆಯತ ಸಂಸ್ಥಾನ ಬೃಹ
ತ್ಕಾಯಂ ತೇಜಸ್ವಿ ಭದ್ರಮನನ ನಿಲ ಜವಂ
ತೋಯಧರ ನಿಸ್ವನಂ ದೀ
ರ್ಘಾಯು ಯುತಂ ರಾಜಪೂಜಿತಂ ಲಲಿತಹಯಂ"[೧೭] (೧-೫೬)

ಈ ಮೇಲಿನ ಸಾಲುಗಳಿಂದ ಅರಿತುಕೊಳ್ಳುವುದೇನೆಂದರೆ, ಕುದುರೆಯನ್ನು ನೋಡಿದರೆ ಆಯುತವಾಗಿ, ದೊಡ್ಡದಾಗಿ, ಕಾಂತಿಯುಳ್ಳ, ಉಚಿತವುಳ್ಳ ಮನವಾಗಿ, ವಾಯುವೇಗವಾಗಿ, ಸಿಡಿಲಧ್ವನಿಯಾಗಿ, ನೆಜಿ ಯಾಯುಷ್ಯವುಳ್ಳ ಕುದುರೆ ಪಟ್ಟಗಟ್ಟಲಿಕ್ಕೆ ಯೋಗ್ಯವಾದದ್ದು ಎಂಬ ವಿಚಾರ ಹೊರಡುತ್ತದೆ.

ಕುದುರೆಗಳಿಗೆ ಕಡವನಿಗೂ, ಗೋಳಿಗೆಗೂ ಲಕ್ಷಣ ಒಂದೇ ಪ್ರಕಾರವಾಗಿದ್ದು, ಗೋಳಿಗೆಗೆ ಯೋನಿಯೂ ಕಡವೆಗೆ ಮೊಲೆಯೂ ನೋಡಿಕೊಂಡರೆ ಒಳ್ಳೆಯದೆಂದು ತಿಳಿಯಪಡಿಸುತ್ತಾ ಗೋಳಿಗೆಗೆ ಉರವೂ, ನೊಸಲೂ, ತಿಕವೂ, ದೊಡ್ಡದಾಗಿ ಇದ್ದು, ಯೋನಿ ಹಿರಿದಾಗಿ, ನುಣುಪಾಗಿ, ಕಾಲು, ಹುಲ್ಲೆಯ ಕಾಲಾಗಿ, ಮರಿಯಾದೆಯಾಗಿರಲು ಉತ್ತಮ. ಗೋಳಿಗೆಗೆ ಆಡಿನ ಮೊಲೆಯ ಹಾಗೆ ನೀಳವಿರಲು ಕುರಿಯ ಮೊಯ ಸೆಟೆದಿದ್ದರೆ ಆ ಕುದುರೆಯನ್ನು ಆಳುವವನಿಗೆ ನೋವು, ದುಃಖ ಸಾವು ಉಂಟಾಗುತ್ತದೆ ಎಂದು ಶಾಸ್ತ್ರಕಾರರ ಅಭಿಮತ. ಗೋಳಿಗೆಯ ಮೊಲೆಯ ಮೊದಲು ಅಗಲವಾಗಿ ತುದಿಬಟ್ಟೆತಾಗಿ ನುಣುಪಾಗಿ ಎರಡು ಮೊಲೆಯೂ ನೇರವಾಗಿ ಹಾಲು ಝಲ್ಲನೆ ಸುರಿಯಲು ಅಂತಹ ಗೋಳಿಗೆ ಉತ್ತಮವೆಂದು ಕರೆಯಲಾಗಿದೆ.

ಹೀಗೆ ಸರ್ವಾಂಗ ಪರೀಕ್ಷಾ ವಿಧಾನದಿಂದ ಕುದುರೆಯ ಆಯುಷ್ಯ ಮತ್ತು ಅದರ ದೇಹದ ವಿವಿಧ ಅಂಗಾಂಗ ಪರಿಕರಗಳ ಮೂಲಕ ಲಕ್ಷಣಗಳನ್ನು ಗುರುತಿಸಿ ಉತ್ತಮವಾದ ಲಕ್ಷಣಗಳನ್ನು ಮತ್ತು ಕುದುರೆಯ ಮಹತ್ವವನ್ನು ಬೆಳಕಿಗೆ ತರುವ ಪ್ರಯತ್ನ ಮಾಡಲಾಗಿದೆ.

೪.೩.೩.೩. ಶಾರೀರಿಕ ಲಕ್ಷಣ : "ಗ್ರೀಷ್ಮ ಋತುವಿನಿಂದ ಹಿಡಿದು ಮಳೆಗಾಲದವರೆಗೆ ಅಶ್ವಗಳು ತೆಗೆದುಕೊಳ್ಳುವ ಆಹಾರ ಭೇದಗಳಿಂದ ಶರೀರದಲ್ಲಿ ಉಂಟಾಗುವ ವಾತ, ಕಫ, ಪಿತ್ತ ಪ್ರಕೃತಿ ಭೇದಗಳು ಹಾಗೂ ಶಾರೀರಿಕ ಸನ್ನಿವೇಶವಿರುವಾಗ ಹುಟ್ಟುವ ಅಶ್ವಸಂತತಿಯ ಲಕ್ಷಣ. ಆಯುರ್ವೇದದ ದೃಷ್ಟಿಕೋನದಿಂದ ಪ್ರತಿ ಪ್ರಾಣಿಯೂ ತೆಗೆದುಕೊಳ್ಳುವ ಆಹಾರವು ಕಫ-ವಾತ-ಪಿತ್ತ ಎಂಬ ಮೂರು ಶರೀರದ ಪ್ರಕೃತಿ ತತ್ತ್ವಗಳನ್ನು ಪ್ರಭಾವಿತಗೊಳಿಸುತ್ತವೆ. ಈ ಅಂಶಗಳು ಸಮಸ್ಥಿತಿಯಲ್ಲಿದ್ದಾಗ ಆರೋಗ್ಯ. ವಿಷಮಸ್ಥಿತಿಯಲ್ಲಿದ್ದರೆ ಅನಾರೋಗ್ಯ. ಗ್ರೀಷ್ಮಕಾಲದ ಕೊನೆಯ ಭಾಗದಲ್ಲಿಯೂ, ಮಳೆಗಾಲದ ಆರಂಭ

ಕಾಲದಲ್ಲಿಯೂ ಗಂಡು-ಹೆಣ್ಣು ಕುದುರೆಗಳು ನಿಸ್ಸಾರವಾದ ಒಣಗಿದ ಎಲೆ, ಹುಲ್ಲು, ಹೊಟ್ಟು ಇವುಗಳ ಸೇವನೆಯಿಂದ ವಾತ ಶರೀರ ಉಳ್ಳವು ಎಂದು ಗುರುತಿಸಲಾಗಿದೆ. ಇಂತಹ ಕುದುರೆಗಳನ್ನು 'ವಾತಿಕ ಹಯ'ವೆಂದು ಕರೆಯಲಾಗಿದೆ. ಎಂದರೆ ವಾತ ಪ್ರಧಾನ ಶರೀರವುಳ್ಳ ಕುದುರೆಗಳು ಹುಟ್ಟುತ್ತವೆ. ಈ ಕುದುರೆ ಲಕ್ಷಣ ಹೆಸರಿಗೆ ತಕ್ಕಂತೆ ವಾತ ಶರೀರ. ಸುಂದರವಾದ ರೂಪವನ್ನು ಹೊಂದಿರುವುದಿಲ್ಲ. ವಿಕೃತವಾಗಿದ್ದು. ಒರಟು ಕೂದಲು ಹೊಂದಿರುತ್ತವೆ. ತೆಳ್ಳಗಿನ ಶರೀರ, ಚಂಚಲತೆ, ಅಶುಚಿಸ್ವಭಾವ, ಚೆನ್ನಾಗಿ ನಿದ್ದೆ ಮಾಡುವ ಗುಣ, ಕೆಟ್ಟಬುದ್ಧಿ ಹೊಂದಿರುತ್ತವೆ.

ಮಳೆಗಾಲದ ಆರಂಭ ಹಾಗೂ ಹೇಮಂತಕಾಲದ ಪ್ರಾರಂಭದಲ್ಲಿ ಕುದುರೆಗಳಿಗೆ ಪಿತ್ತ ಪ್ರಕೃತಿ ಉಂಟಾಗುತ್ತದೆ. ಇದರ ಪರಿಣಾಮ ಪಿತ್ತಪ್ರಕೃತಿ ಶರೀರ ಹೊಂದಿದ್ದು, ಸೂರ್ಯನ (ಎಳೆ) ಕಿರಣಗಳಿಂದ ಮೈಯನ್ನು ಕಾಯಿಸಿಕೊಳ್ಳುವ ಕುದುರೆಗಳು ಹೆಚ್ಚಾಗಿ ಯವಸವನ್ನು ತಿನ್ನುತ್ತವೆ. ಶರೀರದ ಬಣ್ಣವು ಪಿತ್ತಾಳೆಯಿಂದ ಹಳದಿ ಬಣ್ಣಕ್ಕೆ ತಿರುಗುತ್ತದೆ. ಇಂತಹ ಸಮಯದಲ್ಲಿ ಅಶ್ವಗಳ ಯೋಗದಿಂದ ಹುಟ್ಟುವ ಕುದುರೆಯ ಲಕ್ಷಣ ತೀಕ್ಷ್ಣಸ್ವಭಾವ, ನೀರಿನಲ್ಲಿ ಹೆಚ್ಚಿನ ಆಸಕ್ತಿ, ತಾಲು ಪ್ರದೇಶ ಕೆಂಪಾಗಿದ್ದು, ಕುದುರೆಗಳು ಚುರುಕು ಬುದ್ಧಿಯನ್ನು ಹೊಂದಿರುತ್ತವೆ. ಹೆಚ್ಚಿಗೆ ಆಹಾರವನ್ನು ತಿನ್ನುತ್ತವೆ. ಅತ್ಯಂತ ಕೋಪಶೀಲವಾದ ಗುಣ ಹೊಂದಿರುವ ಇವು ಉತ್ತಾನವೇದಿಗಳಾಗಿರುತ್ತವೆ. ಇದು ಪಿತ್ತ ಪ್ರಕೃತಿಯ ಅಶ್ವಲಕ್ಷಣವಾಗಿದೆ.

ಅಶ್ವಗಳಿಗೆ ಶ್ಲೇಷ್ಮ (ಕಫ) ಪ್ರಕೃತಿ ಉಂಟಾಗುವ ಕಾಲ ಹಾಗೂ ಅದರ ಪರಿಣಾಮ ಶಿಶಿರ ಋತುವಿನ ಕಾಲದಲ್ಲಿ ಹುಟ್ಟುವ ಶ್ಲೇಷ್ಮ ಪ್ರಕೃತಿ ಹಯದ ಲಕ್ಷಣ-ಬಲ-ಮಾಂಸ ಇವುಗಳಿಂದ ಕೂಡಿದ್ದು, ಚಟುವಟಿಕೆಯಿಂದಿದ್ದು ದೊಡ್ಡ ಪ್ರಮಾಣದ ಶರೀರ, ಬಲ, ಕಷ್ಟಸಹಿಷ್ಣುತೆ, ಬುದ್ಧಿಯುಳ್ಳದ್ದು, ರೋಗರಹಿತವಾದ ಶರೀರ ನೋಡಲು ಸುಂದರವಾಗಿದ್ದು ಗಂಭೀರ ಸ್ವಭಾವ ಇವು ಕಫ ಪ್ರಕೃತಿಯ ಲಕ್ಷಣ."[೧೮]

ಶರೀರವು ವ್ಯಕ್ತಿಯ ಬದುಕನ್ನು ನಿರ್ಧರಿಸುತ್ತ, ಸದೃಢವಾದ ದೇಹ ಹೆಚ್ಚುಕಾಲ ಬಾಳುತ್ತದೆ. ಇದನ್ನರಿತ ಶಾಸ್ತ್ರಕಾರರು ಕುದುರೆಯ ಹೊಕ್ಕಳಲ್ಲಿ. ನಾಭಿಯಿಂದಲೂ, ಹಲ್ಲುಗಳಿಂದಲೂ ನಾರುತ್ತಿರಲು, ಒಂದು ವರ್ಷ ಬದುಕುವುದು. ದವಡೆ, ನಾಲಿಗೆ, ಹಲ್ಲುತುದಿ, ಕಣ್ಣುಗಳು ಎವೆಯ ಮುಚ್ಚದಿದ್ದರೆ ಎರಡು ವರ್ಷ, ಬಾಗದಕೊರಳು, ದಪ್ಪವಾದ ಮೊಣಕಾಲು, ಹಲ್ಲು ಕಣ್ಣುಗಳು ನಾರುತ್ತ, ಕೀಳುಗಣ್ಣುಲಿ ಕೊಳೆನಾರುತ್ತ ಇರಲು ಮೂರು ವರ್ಷ, ಕುದುರೆಗೆ ತಾಳುಗೆ ಸಮವಾಗಿ ಇಲ್ಲದೆ ಗತ್ರವನ್ನು ಬಹಳವಾಗಿ ಬಿಡುವುದೆ, ಅಲ್ಪ ಸ್ವಲ್ಪವಾಗಿ ಬಿಡಲು, ಹಣೆಯು ಸಣ್ಣದಾಗಿ ಬರುತ್ತಿರಲು ನಾಲ್ಕು ವರ್ಷ, ಕುದುರೆ ಸಣ್ಣದಲ್ಲದೆ ಒಗಿದ ಎದೆ ಇರಲು ಅಧಿಕವಾಗಿ ತೋರುತ್ತಿರಲು ಹಲ್ಲುಗಳು ಹತ್ತಾದೊಡೆ, ಧ್ರುವಗಳು ಸ್ಥಾನಾರು ಇಲ್ಲದಿದ್ದೊಡೆ ಐದು ವರ್ಷ, ಹೀನ ಧ್ರುವನ್ನು ಮುಸುಳಿಯಲ್ಲಿ ಮೂರು ರೇಖೆಯುಳ್ಳ, ಧ್ಯಾನಿಸುತ್ತಲಿದ್ದು, ತಲೆದೂಗುವುದು, ಅಂಡದಲ್ಲಿ ಸುಳಿಯುಳ್ಳ ಆ ಕುದುರೆ ಆರುವರ್ಷ, ಎದೆಯಲ್ಲಿ ಸುಳಿಯಿದ್ದು, ಬೆಕ್ಕಿನ

ಕಣ್ಣಿನ ಹಾಗೆ ಕಣ್ಣು ನೀಳವಾಗಿ ಅಂಡವಿದ್ದ ಕುದುರೆ ಏಳು ವರ್ಷ, ಕೋಪದಿಂದ ಅಟ್ಟಿ ತಿನ್ನದೆ ಕಂಗಳು ಬಿಟ್ಟು ಅರಳಿಸುವಡೆ ಮುಚ್ಚುತ್ತಿರಲು ಹೊಕ್ಕುಳನೆತ್ತಿ, ತೊಡೆಗಳನೆತ್ತಿ ನಡುವೆ ಛಿದ್ರವಿಲ್ಲದೆ ಇರಲು ಎಂಟು ವರ್ಷ, ಮೇಲಣ ತುಟಿಯು ಮೂಲ ಪ್ರಿಯವಾಗಿ ಇದ್ದು, ಕಂದದಲ್ಲಿ ಸುಳಿ ಇರಲು ಒಂಬತ್ತು ವರ್ಷ. ಬಿಳಿದು ಕೂಡಿದ ಮಿಶ್ರಿತ ಕೊಳಗಗಳು, ಎವೆ ಮುಚ್ಚದ ಕಣ್ಣು, ವಿಭ್ರಾಂತವಾಗಿದ್ದು ಮನಸ್ಸು ಅಡಗಿದ್ದ ಗುದವಳಯದ ಕುದುರೆ ಹತ್ತು ವರ್ಷ, ಕಡುರೋಮದ ವಿಛ್ಛಾಯೆ ಕಡುಮನಸಿನ ಶೀಘ್ರದ ನಡೆಯ ಕಾಲಜಡವಾದರೆ ಹನ್ನೊಂದು ವರ್ಷ, ಮುಖ ಹವಳವಾಗಿ ಇದ್ದು, ಮೈ ಕೂದಲು ಹೊಳೆಯುತ್ತ ಮುಂಗಾಲುಗಳು ಗಾತ್ರವಾಗಿ ಇದ್ದು, ಕಿವಿಗಳು ಉದ್ದವಾಗಿ ಇರಲು ಆ ಕುದುರೆ ಹನ್ನೆರಡು ವರ್ಷ, ಕತ್ತೆಯ ಕಣ್ಣಿನ ಹಾಗೆ ಕಣ್ಣು, ಮೃದುವಾದ ಮೈ, ಖುರ, ನಾಲುಗೆ, ತುಟಿ ಇವು ಅಲತಿಗೆಯ ರಸದ ಹಾಗೆ ಕಾಂತಿಯಾಗಿರಲು ಹದಿಮೂರು ವರ್ಷ, ಕಾಲುದಾಡೆ ವಳೆಯ ಈ ಮೂರು ಸ್ಥಾನವು ದೊಡ್ಡದಾಗಿ ನಿರ್ಮಾಂಸವಾಗಿ ಬಾಗದ ಕಂದ, ಮೂಗು, ಖುರವು ಹಿತಸಿತವಾಗಿ ಇರಲು ಹದಿನಾಲ್ಕು ವರ್ಷ.

ಪ್ರಜಾಪತಿಯು ಖುರಮು ದೊಡ್ಡದಾಗಿ ಕಾಲು, ಕೊರಳು ಉದ್ದವಾಗಿ ದೆಸೆದೆಸೆಗೆ ನೋಡುತ್ತ ಚಪಲವುಳ್ಳ ಕುದುರೆ ಹದಿನೈದು ವರ್ಷ, ಆಯತವಾಗಿ ದೊಡ್ಡ ಶರೀರವಾಗಿ ಹೊರವಾರು ತೆರಪಾಗಿ, ಹೊಟ್ಟೆ ತೆರಪಾಗಿ, ಕಣ್ಣು ವೈಡೂರ್ಯದ ಹಾಗೆ ಇರಲು ಹದಿನಾರು ವರ್ಷ, ಉದ್ದವಾಗಿರುವ ಕೊರಳನಾಳವು, ಅತಿ ಗಂಭೀರವಾಗಿ, ದೀರ್ಘವಾದ ಧ್ವನಿಯುಳ್ಳ, ಗೋಳಿಗೆಯ ಕಂಡೊಡೆ ಹರುಷವಿರುವ ಕುದುರೆ ಹದಿನೇಳು ವರ್ಷ, ಖುರಗಳು ಸಣ್ಣದಾಗಿ, ಹಲ್ಲುಗಳು ಕೋಮಲವಾಗಿ ವಜ್ರದ ಧವಳ ಕಾಂತಿಯಾಗಿ, ಮೇಘದ ಗಂಭೀರ ಧ್ವನಿಯುಳ್ಳ ಕುದುರೆ ಹದಿನೆಂಟು ವರ್ಷ, ನೀಳವಾಗಿ ಪ್ರಜಾಪತಿಯವುಳ್ಳ, ಸಮವಾಗಿ ಆಯತವಾದ ಶರೀರ ಹೊಟ್ಟೆ ನಯವಾಗಿದ್ದು, ನಿರ್ಮಲವಾಗಿ ತೋರುವ ಕಾಂತಿಯುಳ್ಳ ಕುದುರೆ ಹತ್ತೊಂಬತ್ತು ವರ್ಷ, ಕಿವಿಗಳು ಕಿರಿಯವಾಗಿದ್ದು, ಮೈನುಣ್ಣಾಗಿ ದನಿ ಹೆಚ್ಚಾಗಿಚ್ಚುತ್ತ ದೊಡ್ಡದಾಗಿ ಒಪ್ಪುವ, ರೂಪ ದೊಡ್ಡ ಹೊಟ್ಟೆಯಾದ ಕುದುರೆ ಇಪ್ಪತ್ತು ವರ್ಷ, ಕಿವಿ ಮೂಗು ದೊಡ್ಡದಾಗಿ, ಹೊಟ್ಟೆ ಪ್ರಜಾಪತಿ, ಕಾಲು ಇವೆಲ್ಲವು ದೊಡ್ಡದಾಗಿ ಇರಲು ಇಪ್ಪತ್ತೆರಡು ವರ್ಷ, ಮೂಗಿನಲ್ಲಿ ಎಂಟು ರೇಖೆಯನುಳ್ಳ, ಅಧಿಕ ಗುಣವನುಳ್ಳ, ತೇಜವುಳ್ಳ, ಗಂಭೀರ ಸ್ವರನುಳ್ಳ ಕುದುರೆ ಇಪ್ಪತ್ತು ಮೂರು ವರ್ಷ, ನವದ್ವಾರಗಳು ದೊಡ್ಡವಾಗಿ, ಪ್ರಜಾಪತಿಯು ಚಿಕ್ಕದಾಗಿ, ಹಲ್ಲು ಸಣ್ಣವಾಗಿ, ಪಿಂಗಳಾಕ್ಷನಾಡೆ ಇರಲು ಇಪ್ಪತ್ತನಾಲ್ಕು ವರ್ಷ, ಗುಣವಂತನು ಮಹಾಸತ್ವವುಳ್ಳ, ಹಲ್ಲು, ಸತ್ವ ರಕ್ತವರ್ಣವಾದ ಕುದುರೆ ಇಪ್ಪತ್ತೈದು ವರ್ಷ, ನೊಸಲಸುಳಿ, ಎಡಕ್ಕೆ ಒತ್ತಿದ್ದು ಶಿರವು ಉನ್ನತವಾಗಿ ಇರಲು ಇಪ್ಪತ್ತಾರು ವರುಷಕ್ಕೆ, ಗುದನೀಳವಾಗಿ ಮುಸುಡಿ ಅದ್ದಿ ನೀರು ಕುಡಿದರೆ ಅದು ಲಕ್ಷಣವಾದದ್ದು ಇಪ್ಪತ್ತೇಳು ವರ್ಷ, ಹರುಷದಿಂದ ಉಳಿವುದು. ಕಾಲು ನೀಳವಾಗಿ ಇರಲು ಕಿವಿಯನಾಳ ತೆರಪಾಗಿ ಇರಲು ಇಪ್ಪತ್ತೆಂಟು ವರ್ಷ, ಕಿವಿಗಳೆರಡು ನಿಲಿಸಿದ ಹಾಗೆ ಇದ್ದು, ಅಂಡಗಳು ರೂಕ್ಷಗಳು ನೀಳವಾಗಿ ಇದ್ದರೆ ಇಪ್ಪತ್ತೊಂಬತ್ತು ವರ್ಷ. ಬೆನ್ನು ಪ್ರಜಾಪತಿಯು

ಕಿರಿದಾಗಿ ಇರಲು ಕಿವಿ ಶಾಮವರ್ಣವಾಗಿ ಇದ್ದು, ಧ್ವನಿಯು ಮೂಗಿನ ಹೊಳ್ಳೆಯು ಹಿರಿದಾಗಿ ಇರಲು ಮೂವತ್ತು ವರ್ಷ. ಕೊರಳಲ್ಲಿ ಗಂಗೆದೊಗಲಾಗಿ ಇರಲು ಅದಕ್ಕೆ 'ಗಂಗವಾರಿ' ಎನ್ನುವರು ಅದು ಮೂವತ್ತೊಂದು ವರ್ಷ, ಧ್ವನಿಯೋಪಾದಿಯಲ್ಲಿರಲು ಮೂವತ್ತೆರಡು ವರ್ಷ"[೯] ಹೀಗೆ ಕುದುರೆಯ ದೇಹದ ವಿವಿಧ ಭಾಗಗಳ, ಅಂಗಾಂಗಗಳ ಗುಣಗಳನ್ನು ಅರಿತು ಶಾಸ್ತ್ರಕಾರರು ಪ್ರಾಣಿಯು ಬದುಕುವ ರೀತಿ ನಡೆತೆಯನ್ನು ಗುರುತಿಸಿ ಅದಕ್ಕೆ ಇಂತಿಷ್ಟೇ ವರ್ಷಕ್ಕೆ ಮರಣ ಬರುತ್ತದೆ ಎಂಬುದನ್ನು ಮನದಟ್ಟು ಮಾಡಿಕೊಟ್ಟಿದ್ದಾರೆ. ಇಂತಹ ಆಲೋಚನೆ, ಅಧ್ಯಯನಗಳಿಂದ ಮನಶಾಸ್ತ್ರೀಯ ಅಧ್ಯಯನ ವ್ಯಾಪ್ತಿಗೆ ಶಾಸ್ತ್ರಕಾರ ನಿಲುವು ಹೆಚ್ಚು ಇತ್ತು ಎಂಬುದನ್ನು ಮರೆಯುವಂತಿಲ್ಲ. ಇದರಿಂದ ಉಪಯುಕ್ತ ಪ್ರಾಣಿಯಾದ ಕುದುರೆಯ ಬಗ್ಗೆ ಜನಸಮುದಾಯಕ್ಕೆ ತಿಳಿಯಪಡಿಸುವ ಉದ್ದೇಶ ಅಧ್ಯಯನ ಮಾಡುವುದರಿಂದ ಕಂಡುಕೊಳ್ಳಲಾಗಿದೆ.

೪.೩.೩.೪. ರೇಖೆಯ ಲಕ್ಷಣ : "ಒಂದು ಬೆರಳಳವಿಯೊಳು ನೀಳ್ದೊಂದಳವಿಯೊಳೂರ್ಧ್ವ ರೇಖೆಗಳು ಆಗಿದ್ದರೆ ಒಂದು ವರ್ಷ ಆಯುಷ್ಯ, ಪ್ರೊಥರೇಖೆ ಅಸಿಯನಾಗಿ, ನೀಳವಾಗಿ ದೂರವಾಗಿ ತೋರಿದೊಡೆ ಶುಭದಿಂದ ಎರಡು ವರ್ಷ, ಕುದುರೆಯ ಮರಿಗೆ ಫ್ರೋಥರೇಖೆ ಎರಡು ಸಣ್ಣದಾಗಿ ಮುರಿದು ಅಡ್ಡಲಾಗಿ ಇರಲು ಆ ಕುದುರೆ ಕಿಚ್ಚಿನ ದೆಸೆಯಿಂದ ಮೂರು ವರ್ಷ, ಪ್ರೋಥರೇಖೆ ಎರಡು ಎಡದ ಕಡೆಗೆ ಉರುಗಿದ್ದಡೆ ಗಳರೋಗದಿಂದ ನಾಲ್ಕು ವರ್ಷ, ಪ್ರೋಥದಲ್ಲಿ ಎರಡು ಅಸಿಯ ರೇಖೆಗಳಾಗಿ ಎಡದ ಕಡೆಗೆ ತುದಿಯಿಂದ ಇಳಿದಿದ್ದರೆ ಮೃಗಜೃಂನೆಂಬ ರೋಗದಿಂದ ಐದು ವರ್ಷ, ಕುದುರೆಗೆ ಪ್ರೋಥರೇಖೆ ಎರಡಂಗುಲ ಪ್ರಮಾಣದಲ್ಲಿ ನೀಳವಾಗಿ ಮಧ್ಯದಲ್ಲಿ ರೇಖೆಗಳಾಗಿ ಇರಲು ಆರು ವರ್ಷ, ಪ್ರೋಥರೇಖೆ ಎರಡು ಬೆರಳ ನೀಳದ್ದು ಮೇಲಕ್ಕೆ ಇರಲು ಏಳು ವರ್ಷ, ಪ್ರೋಥದಲ್ಲಿ ಎರಡು ರೇಖೆ ಮೇಲಕ್ಕೆ ಮೂರು ಬೆರಳುದ್ದ ಎರಡು ರೇಖೆಗಳಾಗಲು ಮಹಾತಾಪದಲ್ಲಿ ಎರಡನೆಯ ವರ್ಷಕ್ಕೆ ಪ್ರೋಥರೇಖೆಗಳೆರಡು ತೋರಲಾಗಿ ನಡುಸಣ್ಣದಾಗಿ ಎರಡು ಒಂದೇ ಮರ್ಯಾದೆಯಾಗಿರಲು ವಾತಶೂಲಿಯಿಂದ ಒಂಭತ್ತು ವರ್ಷ, ಪ್ರೋಥರೇಖೆಗಳು ಮೊದಲು ಈ ಹೇಳಿದ ಮರ್ಯಾದೆಯಾಗಿ ಆದ್ಯಂತ ಪರ್ಯಂತರವಾಗಿ ಇರಲು ಹತ್ತು ವರ್ಷಕ್ಕೆ ಮನ್ನೆಯ ಶುಭದಿಂದ ಸಾಯುವದು, ಆ ಮರ್ಯಾದೆಯಲ್ಲಿ ಪ್ರೋಥರೇಖೆಗಳು ಸಣ್ಣದಾಗಿ ಎರಡು ರೇಖೆಯು ತುಂಬಿರಲು ಶೂಲಿಯಿಂದ ಹಗಲಲ್ಲಿ ಹನ್ನೊಂದು ವರ್ಷ, ಪ್ರೋಥರೇಖೆ ಎರಡು ಬೆರಳ ನೀಳವಾಗಿ ಎಡದ ಕಡೆಯಲ್ಲಿ, ಮಧ್ಯದಲ್ಲಿ ರೇಖೆಯಾಗಿರಲು ಹನ್ನೆರಡು ವರುಷ ರೂಕ್ಷಾವರ್ತದಿಂದ ಮರಣ ಹೊಂದುವದು.

ಪ್ರೋಥರೇಖೆಗಳು ಸಣ್ಣದಾಗಿ ಮೂರು ರೇಖೆಗಳು ಇದ್ದರು ಅವು ತೋರವಾಗಿ ಪ್ರೋಥದ ನಡುವೆ ನೀಳವಾಗಿರಲು ಮೇಲಸುರಿಂದ ಹದಿಮೂರು ವರ್ಷ, ಪ್ರೋಥರೇಖೆ ಎರಡು ರೇಖೆಯ ಹಾಯ್ದು ಎರಡು ಅಡ್ಡರೇಖೆ ಪದ್ಮದ ಹಾಗೆ ಇರಲು, ಮಹಾ ಹುಯ್ಯಲಲ್ಲಿ ಹದಿನಾಲ್ಕು ವರ್ಷ, ಪ್ರೋಥರೇಖೆ ಎರಡು ನೀಳವಾಗಿ ಇರಲು, ಪ್ರೋಥಮಧ್ಯದಲ್ಲಿ ಎಳ್ಳಿನ ಪ್ರಮಾಣ ತುದಿಯಲ್ಲಿಯಿರಲು, ಬಹಳವಾಗಿದ್ದರೆ ಒಡೆಯನಿಗೆ

ಆಯುಷ್ಯವನ್ನುಂಟು ಮಾಡುವದು. ಕುದುರೆಯನಾಳುವ ಅರಸ ಕುಲವೃದ್ಧಿಯೂ, ಧನವೃದ್ಧಿಯೂ, ಧಾನ್ಯವೃದ್ಧಿಯೂ ಸಂಪತ್ತು ವಿಜಯಲಕ್ಷ್ಮೀ ಪತಿತ್ವವು ದೇಶಕ್ಕೊಡೆಯನಾಗಿ ಬದುಕುವನು. ಕುದುರೆಯನ್ನು ಎರುವುದರಿಂದ ಸಾವು ಅಹುದಾಗಿ ಆಯುರೇಖೆಯೆಬೇಕು ಆ ಲಕ್ಷಣದ ಕುದುರೆ ವಾತದಿಂದ ಹದಿನೈದು ವರ್ಷ, ಆ ಮರ್ಯಾದೆ ರೇಖೆಗಳು ಪ್ರೋತ್ಸಾಂತರ ಪರಿಯಂತರ ಇರಲು ವಾತದಿಂದ ಹದಿನೇಳು ವರ್ಷ ಆ ಮರ್ಯಾದೆ ರೇಖೆಗಳು ಇಲ್ಲದೆ ಪ್ರೋಥಮಧ್ಯದಲ್ಲಿ ಆದರೆ ಆ ಕುದುರೆ ಮೂತ್ರ ಕೃಚ್ಛ್ರಯಿಂದ ಹದಿನಾರು ವರ್ಷಕ್ಕೆ ಸಾಯುವುದು."[೨೦]

ಕುದುರೆ ಗಡುವನಾದರೆ, ಗೋಳಿಗೆಯಾದರೂ ಪ್ರೋಥರೇಖೆಗಳು ಮೇಲಕ್ಕಿರಲು ಆ ಕುದುರೆ ಹದಿನೆಂಟು ವರ್ಷ ಹಾವಿನ ದೋಷದಿಂದ ಸಾಯುವದು. ಎರಡು ಹಸ್ತದಲ್ಲಿ ಎರಡೂ ಊರ್ಧ್ವರೇಖೆಯಾಗಿ ಪ್ರೋಥ ಮಧ್ಯದಲ್ಲಿ ನಾಲ್ಕು ರೇಖೆಗಳು ಇರಲು ಹದಿನೆಂಟು ವರ್ಷ, ಸರ್ಪದ ದೋಷದಿಂದ ಅಂಡದಲ್ಲಿ ನಾಲ್ಕು ರೇಖೆಗಳು ಇದ್ದರೆ ಅದು ಶ್ರೋಣಿತವಾತದಿಂದ ಹತ್ತೊಂಬತ್ತು ವರ್ಷ, ಪ್ರೋಥರೇಖೆಗಳು ಸಣ್ಣದಾಗಿ ನೇರವಾಗಿ ಒಟ್ಟಿತಾಗಿ ಮಿಂಚುತ್ತಾ ನಾಲ್ಕು ರೇಖೆಗಳಾಗಿ ಇರಲು, ಅದು ಲದ್ದಿಗತ್ತ ವ್ಯಾಧಿಯಿಂದ ಇಪ್ಪತ್ತನೆಯ ವರ್ಷಕ್ಕೆ, ಕುದುರೆ ಆ ಮರ್ಯಾದೆಯ ಐದು ರೇಖೆಗಳು ಪ್ರೋಥದಲ್ಲಿಯೂ, ಅಂಡದಲ್ಲಿಯೂ ಇರಲು ಅದು ವಾತವೆಂಬ ಸಮುದ್ರದಲ್ಲಿ ಮುಳಗಿ ಇಪ್ಪತ್ತೊಂದನೆಯ ವರ್ಷಕ್ಕೆ ಸಾಯುವದು. ಕುದುರೆಯ ಆ ಮರ್ಯಾದೆಯ ಕುರುಹು ಪ್ರೋಥರೇಖೆಗಳಾಗಿ ಇದ್ದರೆ, ಅದು ಊರ್ಧ್ವರೇಖೆಯಾದರೆ ಇಪ್ಪತ್ತು ಮೂರು ವರ್ಷ, ಆನೆಯ ಕೊಂಬಿನ ಗಾಯದಿಂದ ಅಳಿಯುವದು. ಕುದುರೆಯ ಮುಸುಡಿನಲ್ಲಿ ಮಿನೋಪಾದಿಯಲ್ಲಿ ಆಮೆಯ ಮರ್ಯಾದೆಯ ರೇಖೆಗಳು ಇದ್ದರೆ ಇಪ್ಪತ್ತುನಾಲ್ಕು ವರ್ಷಕ್ಕೆ, ರಾಕ್ಷಸಿಯ ದೆಸೆಯಿಂದ ಸಾಯುವದು. ಮೂಗಿನಲ್ಲಿ ತಾವರೆಯ ನೈದಿಲ ಹೂವಿನ ಮರ್ಯಾದೆಯ ರೇಖೆಗಳಿರಲು ಮುಖದ್ರೋಣಿಯಿಂದ ಇಪ್ಪತ್ತೈದು ವರ್ಷ, ಪ್ರೋಥರೇಖೆ ವೇದಿಯ ಹಾಗೆ ಇದ್ದರೆ ಪತಿಗೆ ಅನಂತೈಶ್ವರ್ಯ ಪ್ರಾಪ್ತಿಯಾಗುವದು. ಆ ಕುದುರೆಗೆ ರಸೋದಯದಿಂದ ಇಪ್ಪಾತ್ತಾರು ವರ್ಷ, ಪ್ರೋಥರೇಖೆಯ ಮರ್ಯಾದೆಯ ರೇಖೆಯಿದ್ದರೆ ಅದನ್ನಾಳುವವನು ಅರಿಯಜೈಯಿಸುವನು ಆ ಕುದುರೆಯು ಹಾವಿನದೆಸೆಯಿಂದ ಇಪ್ಪತ್ತೇಳು ವರ್ಷ, ಪ್ರೋಥರೇಖೆ ಬಿಲ್ಲಿನ ಹಡಗಿನ ಹಾಗೆ ಶಂಖದ ರೂಪದಲ್ಲಿ ರೇಖೆಗಳು ಇದ್ದರೆ, ಅದರ ಪತಿ ಲಕ್ಷ್ಮಿಗೆ ಪತಿಯನು ಆ ಕುದುರೆ ಜ್ವರಸಂತಾಪದಿಂದ ಇಪ್ಪತ್ತೆಂಟು ವರ್ಷ, ಪ್ರೋಥರೇಖೆಗಳು ಧ್ರುವರೂಪಾಗಿ, ಧ್ರುವ ವೇಷವಾಗಿ ಇದ್ದರೆ ಒಡೆಯರಿಗೆ ಬಯಸಿದ ಸಿದ್ಧಿಯು ಉಂಟಾಗುವುದು. ಆ ಕುದುರೆ ವ್ಯಾಧಿಯಿಂದ ಇಪ್ಪತ್ತೊಂಬತ್ತು ವರ್ಷ, ಕುದುರೆಯ ಮುಸುಡಿನಲ್ಲಿ ಕಲ್ಪವೃಕ್ಷ, ಕನ್ನಡಿ, ಪ್ರದಕ್ಷಿಣ ಬದಿಗೆಯ ಚಂದ್ರ, ರಂಗವಾಲಿ ಈ ಪ್ರಕಾರದ ರೇಖೆಗಳು ಇದ್ದರೆ ಸೌಭಾಗ್ಯವಾಗುವ ಆ ಕುದುರೆಗೆ ಮೂವತ್ತು ವರ್ಷ, ಆ ಲಕ್ಷಣದ ಪ್ರೋಥರೇಖೆಯ ನಾಳುವವರಿಗೆ ಧನವು, ಧಾನ್ಯವು, ಶತ್ರು ಜಯವು, ಪರಸ್ತ್ರೀಯರು, ಮಕ್ಕಳು ಒಡಹುಟ್ಟಿದವರು ಸಹಾ ಸಕಲ ಸಂಪದವನು ಅನುಭವಿಸುವರು. ಕುದುರೆಯ ಪ್ರೋಥರೇಖೆಗಳು ಹರಿಯ

ಚಕ್ರದ ಹಾಗೆ ಇದ್ದರೆ ಮಹಾಲೇಸು. ಆ ಲಕ್ಷಣದ ಕುದುರೆಯನ್ನಾಳುವ ಅರಸು ಹುಯ್ಯಲಿಲ್ಲ ಹಗೆಯಜೈಸಿ ರಾಜ್ಯವನ್ನು ಸುಖದಿಂದ ಆಳುವನು."[೨೧]

ಕುದುರೆಯ ಎರುಡ ಕೆಲದೊಳಗಿನ ಲಕ್ಷಣಗಳನ್ನು ಅಶ್ವಶಾಸ್ತ್ರಕಾರ ಅಭಿನವಚಂದ್ರ ಈ ರೀತಿಯಾಗಿ ಹೇಳಿದ್ದಾನೆ. "ಸ್ವರದಿಂದ, ಅಜಿನದಿಂದ, ಕರದಿಂದ, ಚೇಷ್ಟೆಯಿಂದ, ಹಲ್ಲಿನ ತುದಿಯಿಂದ, ಕೂದಲುಗಳಿಂದ ಕುದುರೆಯ ಆಯುಷ್ಯವನ್ನು ಗುರುತಿಸಿದ್ದಾನೆ. ಕುದುರೆಯ ತಲೆಯಕೂದಲು, ಖುರ, ಮೈ, ಹಲ್ಲು ಇವುಗಳನ್ನರಿತು ನಿರ್ಣಯಿಸುವುದು. ಸಮ್ಮಿಕೆಬಟ್ಟು, ಖುರ, ಮೃದುವಾದ ಕೂದಲು ಸರಿಯಿರಲು ಎರಡು ತಿಂಗಳಾಯುಷ್ಯವೆಂದು, ನಡುವಣ ಹಲ್ಲು ಹುಟ್ಟಿದರೆ ಬೇರೂರಿದರೆ ಸುಸ್ವರದಿಂದ ಹುಂಕರಿಸಲು ಕಾಂತಿಯಾಗಿದ್ದ ಮೈಯು ಮೂರುತಿಂಗಳು, ಸಂದಂಶ ವೆಗ್ಗಳವಾಗಿ ನಡುವೆ ಒಂದು ಇದ್ದರೆ ರತಿಪ್ರಿಯನಾಗಿರಲು, ಶೃಂಗಾರವುಳ್ಳ ಮೈಯಲ್ಲಿ ಕಪ್ಪಾಗಿದ್ದರೆ ನಾಲ್ಕು ತಿಂಗಳು, ಅಲ್ಪವಾಗಿ ಪರಿಪಕ್ವಗಳು ಹುಟ್ಟಿ, ನಡುತಿಂಗಳಲ್ಲಿ ಹಲ್ಲುಗಳು ಗಾತ್ರವಾಗಿ ತೋರಿದರೆ ಆರು ತಿಂಗಳು, ಹಲ್ಲುಗಳು ಸಣ್ಣವಾಗಿ, ಮೈ ದೊಡ್ಡದಾಗಿ ಅದರ ಸಂದಂಶಗಳು ಹಾಲಿನಂತೆ ಬಿಳಿಯಾಗಿರಲು ಏಳು ತಿಂಗಳು, ಮೈಕಾಂತಿ ನಿರ್ಮಲವಾಗಿ ಪ್ರದೇಶಂಗಳು ಶೃಂಗಾರವಾಗಿ ಬಿಳಿದಾಗುತ್ತಿರಲು ಹಲ್ಲುಗಳು ಇದ್ದರೆ ಎಂಟು ತಿಂಗಳು, ಮಧ್ಯದಲ್ಲಿ ಅತಿಬಿಳಿದಾಗಿದ್ದರೆ, ಉತ್ತಮ ಮಧ್ಯಮಯೆಂಬ ಎರಡೂ ಬಿಳಿದಾಗಿ ಕುಟ್ಟಿಕೆ ಕೂರ್ಚೆಯ ರೋಮಗಳು ಉದ್ದವಾಗಿದ್ದರೆ ಒಂಬತ್ತು ತಿಂಗಳು, ಉರವು ಹನಿಬೆಯಲ್ಲಿ ಕೆಂಪಾಗಿ, ಕೆಳಗಣ ಕಡೆಯ ಎರಡು ಹಲ್ಲುಗಳು ಅತಿ ಬಿಳಿಯಾಗಿರಲು ಹನ್ನೊಂದು ತಿಂಗಳು, ಹಲ್ಲುಗಳು ಪ್ರಕಾಶವಾಗಿ, ಉದ್ದವಾಗಿ, ಸಂಪೂರ್ಣವಾಗಿ ಹುಟ್ಟಿದ್ದು, ತಲೆಯ ಕೂದಲು ಪರಿಪಕ್ವವೂ ಅತಿ ಬಿಳಿದಾಗಿದ್ದರೆ ಒಂದು ವರ್ಷವೆಂದೂ, ಮೈಕಾಂತಿಯೂ, ಕೂದಲು ಉದ್ದವಾಗಿ, ಅಳಿಲೆಕಾಯಿ ಕಪ್ಪಿನಂತೆ ಹಲ್ಲುಗಳು ಹುಟ್ಟಿ, ಕುಳಿಯಾಗಿ ಇರಲು ಎರಡು ವರ್ಷವೆಂದೂ, ಮೊದಲ ಹಲ್ಲುಗಳು ಹಾಲಿನ ಹಾಗೆ ಕಷಾಯವರ್ಷವಾಗಿ, ದಟ್ಟವಾಗಿ, ಕಾಂತಿಯಾಗಿ, ನರೆಯಾಗಿ, ದೊಡ್ಡದಾಗಿ, ಸುಕುಮಾರತೆಯಾಗಿ ಇರಲು, ಉತ್ತಮ. ಹಲ್ಲುಗಳು ಮೊನೆಯಾಗಿ, ಸಣ್ಣದಾಗಿ ಇಲ್ಲದೆ ಇದ್ದರೆ ಮೊದಲಲ್ಲಿ ರೇಖೆಗಳು ರಂಜಿಸದೆ ಇರಲು ನೀರ ಬೊಬ್ಬುಳಿಕೆಗಳು ಹಾಗೆ ಹೊಗೆವರ್ಣವಾಗಿ ಇದ್ದರೆ ಬಂಧನವಾಗುವುದು. ಎರಡುವರೆ ವರ್ಷವಾದಾಗ ಹಲ್ಲು ಬರೆ ಸಂದಂಶವಾಗಿರಲು ಮೈನುಣ್ಪು ಹುಟ್ಟುವುದು, ಮೈಯ ಕೂದಲುಗಳು ಸರಿಸಮವಾಗಿ ಪಸರಿಸುವುದು (ವಿಸ್ತರಿಸುವುದು).

ಕುದುರೆ ಬಿದ್ದು ಏಳುವ ಸಂದಂಶವೆರದು ಮೈದಟ್ಟವಾಗಿ ಮಿಂಚು ಹುಟ್ಟಿ, ಕೂದಲು ತುಂಬ ಹುಟ್ಟಿ ಮಾಂಸ ಪೂರಾಯವಾಗಿ, ಅತಿ ಸತ್ವವಾಗಿರಲು ಮೂರು ವರುಷಕ್ಕೆ ಹುಟ್ಟುವುದು. ಮೂರು ವರುಷಕ್ಕೆ ನಡುವಣ ಹಲ್ಲುಗಳು ಹುಟ್ಟಿ ನುಣ್ಪಾಗಿ ಮೈಯ ಕೂದಲುಗಳು ಹುಟ್ಟಿ, ಇಂದ್ರಿಯಗಳು ಮೊದಲಾದ ಸತ್ವವೆಲ್ಲವೂ ಲಭಿಸುವವು. ನಡುವಣ ಹಲ್ಲು ಸಂಪೂರ್ಣವಾಗಿ ಹುಟ್ಟಿ ಕಾಂತಿಯಿಂದಲೂ, ವೇಗದಿಂದಲೂ, ರೂಪದಿಂದಲೂ ಹೆಚ್ಚಿದ್ದು, ಚಪಲತೆಯಾಗಿ ಇರಲು ನಾಲ್ಕು ವರ್ಷವೆಂದೂ, ಕುದುರೆಗೆ ನಾಲ್ಕುವರೆ

ವರ್ಷವಾದರೆ ಕಾಂತಿಯು, ಧೃತಿಯು ಪರಿಪಕ್ವವಾಗಿ, ಹಲ್ಲು ತುದಿಯಲ್ಲಿ ಕುಳಿಯಾದರೆ ಐದುವರ್ಷಕ್ಕೆ ಹುಟ್ಟುವವು ವ್ಯಂಜನಗಳು."[೨೨]

ಕುದುರೆಯ ಪ್ರಾಯವನ್ನು, ಹುಟ್ಟನ್ನು ಅದರ ಶರೀರವ ನೋಡಿ ಆಯುಷ್ಯವನ್ನು ಹೇಳುವುದು. ಕುದುರೆಯು ತುಂಬು ಬಿಗಿದು ತೋರುವ ವರ್ಣವಾಗಿ ಕಂದು, ಮುಖ, ತಲೆಯ ಕೂದಲು ಸತ್ವವಾಗಿ ಪಚ್ಚಳವು, ಎದೆಯು ಉಬ್ಬಿ ದೊಡ್ಡದಾಗಿರಲು ಪ್ರಾಯವನ್ನು ಅರಿತ ಅದಕ್ಕೆ 'ರಂಜಿತವೆಂದು' ಕರೆಯುವರು. ಪಿರಿದಾದ ದನಿಯಿಂದ ಸುಳಿವುದರಿಂದ ಕಾಲು ಉದ್ದವಾಗಿ, ಸುಸಂಗತವಾಗಿ ಮೈಯು ಸುಶಿರಾಂತರವೆಲ್ಲ ದೊಡ್ಡದಾಗಿದ್ದರೆ ಅದನ್ನು ದೀರ್ಘರಂಜಿತವೆಂದು, ಕಿವಿಯೂ, ಪ್ರಜಾಪತಿಯೂ, ಅತಿ ಕಿರಿದಾಗಿ, ಚಪಲವು ಕಾಲುಮುಖವು ಮೈಯು ಸಣ್ಣದಾಗಿ, ವಾಯುವೇಗದ ಮನವನುಳ್ಳ ಕುದುರೆ ಪರಮಾಯುಷ್ಯದಿಂದ ಸಂಪೂರ್ಣವಾಗಿ ಬದುಕುವುದು.

ಕುದುರೆಯ ತುದಿಗಿವಿಯ ಕೊಯಿದರೆ ಇಂದ್ರಗೋಪದ, ಅರಣವರ್ಣವಾಗಿ ನೆತ್ತರು (ರಕ್ತ) ಸುರಿಯುತ್ತಿರಲು ದೀರ್ಘಜೀವಿಯಾಗಿ ಬದುಕುವುದು, ರಕ್ತ ಸುರಿಯದೆ ಇದ್ದರೆ ಅಲ್ಪ ಆಯುಷ್ಯವೆಂದು, ಕುದುರೆಯ ಸ್ಥಾನವೆಲ್ಲವು ವ್ಯಕ್ತವಾಗಿ ನಾಲ್ಕು ಮುಖವು, ಶಿರವು ರಂಧ್ರವಾಗಿ ಇರಲು ಆ ಕುದುರೆಯ ನೆರೆ ಆಯುಷ್ಯವಾಗಿ ಬದುಕುವುದು. ಕುದುರೆಯು ಆಲಸದೆ, ಹಿರಿದಾಗಿ ಮೆಯುದರಿಂದ ಮುಸುಡನು (ಮೂತಿ) ಬಲದಲ್ಲಿ ಅದ್ದಿ ನೀರಕುಡಿಯುವುದು ಮತ್ತು ನೆಲದ ಮೇಲೆ ಮಲಗುವಾಗ, ಹೊರಳುವಾಗ, ಎಡ ಮಗ್ಗುಲ ಮಲಗುವದು ಈ ಪ್ರಕಾರದ ಲಕ್ಷಣಗಳುಳ್ಳ ಕುದುರೆ ಪರಮಾಯುಷ್ಯವಾಗಿ ಪೂರ್ತಿಯಾಗಿ ಬದುಕುವುದು. ಹುಂಕರಿಸುವಾಗ ಕತ್ತೆಯ ಧ್ವನಿಯ ಹಾಗೆ ನೆಲಬಿರಿವಂತೆ ಇರಲು ಕಷ್ಟ. ಹುಂಕರಿಸುವಾಗ ಕಂದ ಉಬ್ಬಿದರೆ, ಕಾಮಾತುರನಾದರೆ ಆ ತುರಗ ಪರಮಾಯುಷ್ಯ ಸಂಪೂರ್ಣವಾಗಿ ಬದುಕುವದು. ಕುದುರೆಯ ಮರಿಯು ಭಾಗವಿಷ್ಟಯೆಂಬ ಕರಣಕ್ಕೆ ಮೂವತ್ತುಗಳಿಗೆ ಉಂಟು. ಅದರ ಒಳಗೆ ನಿಂತಗಳಿಗೆ ಎಷ್ಟು ಗಳಿಗೆ ಇರುವುದು ಅಷ್ಟು ವರ್ಷ ಪರಿಯಂತರ ಆ ಮರಿ ಬದುಕುವದು.

ಬಲ್ಲಂಥವರಿಗೆ ಕುದುರೆಯ ಆಯುಷ್ಯದ (ಹೀನ) ಕೆಟ್ಟ ಪರಿಣಾಮವನ್ನು ಹೇಳಿದ್ದಾನೆ. ಮನುಷ್ಯನಿಗೆ ಆಯುರೇಖೆ ಕೈಯಲ್ಲಿ ಕುದುರೆಗೆ ಆಯುರೇಖೆಯು ಪ್ರೋಥದಲ್ಲಿ ಅರಿತು ಹೇಳುವುದು "ಅತಿ ಗೂಢವು ಅತಿರಹಸ್ಯವು ಅತಿಶಯವುಳ್ಳಂತಹವನಿಗೆ ಶಿಷ್ಯನಿಗಾಗಲಿ, ಮಗನಿಗಾಗಲಿ, ಉಳಿದವರಿಗೆ ಹೇಳಲಾಗದು ಎಂದು ಶಾಸ್ತ್ರಕಾರರು ತಿಳಿಸುತ್ತಾರೆ".[೨೩]

೪.೩.೩.೫. ವಾತ-ಪಿತ್ತ ಲಕ್ಷಣ : "ಕುದುರೆಯ ಗರ್ಭ ವರುಷಕಾಲ ಶರತ್ಕಾಲ ಈ ನಾಲ್ಕು ತಿಂಗಳಲ್ಲಿಯಾದರೆ ವಾತದೇಹವಾಗುವುದು. ಹೇಮಂತ, ಶಿಶಿರಋತುವಿನಲ್ಲಿ ಗರ್ಭವಾದರೆ ಪೈತ್ಯದೇಹ, ವಸಂತಋತು, ಗ್ರೀಷ್ಮ ಋತ ಈ ನಾಲ್ಕು ತಿಂಗಳಲ್ಲಿ ಗರ್ಭನಿಂತರೆ ಶ್ಲೇಷ್ಮ ಪ್ರಕೃತಿಯಾಗಿ ಮರಿ ಹುಟ್ಟುವದು.

ಶ್ರಾವಣ, ಭಾದ್ರಪದ, ಆಶ್ವೀಜ, ಕಾರ್ತಿಕ ಈ ನಾಲ್ಕುತಿಂಗಳಲ್ಲಿ ಗರ್ಭವಾದರೆ ವಾತ, ಮಾರ್ಗಶಿರ, ಪುಷ್ಯ, ಮಾಘ, ಫಾಲ್ಗುಣ ಈ ನಾಲ್ಕುತಿಂಗಳ ಗರ್ಭಪೈತ್ಯ, ಚೈತ್ರ, ವೈಶಾಖ, ಜೇಷ್ಠ, ಆಷಾಢ ಈ ನಾಲ್ಕುತಿಂಗಳ ಗರ್ಭ, ಶ್ಲೇಷ ಪ್ರಕೃತಿಯಾಗಿ ಹುಟ್ಟುವವು. ತಂದೆ ತಾಯಿಗಳು ಬೇರೆ ಪ್ರಕೃತಿ ಇದ್ದುದರಿಂದ ಋತುಗಳು ಎರಡು ಕೂಡಿ ಆಹಾರವೆರಡು ಬಗೆಯಾದುದರಿಂದ ಕುದುರೆ ಎರಡೆರಡು ಪ್ರಕೃತಿಯಾಗಿ ಹುಟ್ಟುವವು. ಭಯ, ಭೀತ, ಬಲಹೀನ ಚಲಚಿತ್ತ ಬಡವಾಗಿ ಇದ್ದು ಸುಖಿಯಿಲ್ಲದೆ, ಉಪ್ಪು, ಹಿಳಿಯ ಮೇಲೆ ವ್ಯಾಮೋಹವುಳ್ಳ ಈ ತರಹದ ಗುಣಗಳನ್ನು ಹೊಂದಿರುವ ಕುದುರೆ ವಾತ ಪ್ರಕೃತಿಯೆಂದು, ನೀರು ನೆಳ ವಟ್ಟೆಯಾದ ಆಹಾರಗಳು, ಖಾರ, ಕಹಿ, ರಸಾಹಾರಗಳನ್ನು ಸೇವಿಸುವ ಈ ಗುಣಗಳನ್ನು ಹೊಂದಿರುವ ಕುದುರೆಯು ಶ್ಲೇಷ್ಮ ಪ್ರಕೃತಿಯೆಂದು, ಮೈಯ ಕೂದಲು ಒತ್ತಲದೆ ಸೂಕ್ಷ್ಮವಾಗಿ ಇದ್ದು ಹಗಲು ಕಿಚ್ಚು ಇರುಳು ದೀಪವಾದರೆ ಆ ಬೆಳಕಿನಲ್ಲಿ ಹುಲ್ಲನ್ನು ಬಹಳ ತಿನ್ನುವುದು ಅದಕ್ಕೆ ಪರಶಿಖಾಂಗವೆಂದು, ಕಲಿಖಾರ, ಕಹಿಗೆ ಪ್ರಿಯವಾದದ್ದು, ಸತ್ವವುಳ್ಳ ಅಲ್ಪಾಹಾರ, ಮಂದಗಮನ, ಕಾಂತಿಯುಳ್ಳ, ಸೈರಣೆಯುಳ್ಳ, ಬಲ ಸ್ಥಿರವುಳ್ಳ ಈ ಗುಣದ ಕುದುರೆ ಶ್ಲೇಷ್ಮ ಪ್ರಕೃತಿ ಎಂದೂ, ಸನ್ನಿಗೆ ಅಮ್ಮದ, ಗಾಳಿಯ ನೆನೆಸದ, ಸೀ ಮೇಲೆ ಪ್ರೀತಿಯನ್ನುಳ್ಳ ಷಡುರಸ ಪ್ರೇಮಿಯಾದ ಕುದುರೆ ಸಮ ಪ್ರಕೃತಿಯುಳ್ಳದ್ದು.

ವಾತಕ್ಕೆ -ಕರಿದು, ಅರುಣವರ್ಣ, ಬಿಳಿ -ಶ್ಲೇಷ್ಮಕ್ಕೆ, ಅರಿಸಿನ ವರ್ಣ, ಕೆಂಪು -ಪೈಯಿತ್ಯಕ್ಕೆ ಇವು ಎಲ್ಲಾ ವರ್ಣಗಳಿರಲು ದೋಷ ಪ್ರಕೃತಿಯೆಂದು ಐಶ್ವರ್ಯವುಳ್ಳ, ಮತಿಯುಳ್ಳ, ಚಿರಾಯುವನುಳ್ಳ, ಮನೋಹರವಾದ ಸತ್ವವುಳ್ಳ, ಬಾಯಲ್ಲಿ ಮೃದುವನುಳ್ಳ, ಈ ಗುಣಗಳ ಕುದುರೆ ಸತ್ವಗುಣವುಳ್ಳದ್ದು, ಅತಿಕೋಪ, ದುಃಖ, ಅತಿಬಡವು, ಅಲ್ಪಆಯುಷ್ಯ, ಚಪಲ ಈ ಗುಣಗಳನ್ನುಳ್ಳ ಕುದುರೆಗೆ ರಾಜಸಗುಣವೆಂದು, ಮತಿಹೀನ, ಮಹಾಆಲಸ್ಯ, ಅತಿ ನಿದ್ರೆಯುಳ್ಳ ವ್ಯಾಧಿಸ್ಥ ಈ ಗುಣಗಳನ್ನು ಹೊಂದಿರುವ ಕುದುರೆಗೆ ತಮೋಗುಣ ಎಂದು ಕರೆಯಲಾಗಿದೆ."[೨೨]

ಕುದುರೆಯ ಗುಣಲಕ್ಷಣಗಳನ್ನು ಋತುಗಳ ಹಿನ್ನಲೆಯಲ್ಲಿ, ಮಾಸಗಳ ಹಿನ್ನೆಲೆಯಲ್ಲಿ ಅವು ಹೊಂದಿರುವ ಪ್ರಕೃತಿಯನ್ನು ಅರಿತುಕೊಳ್ಳಬಹುದು.

ಅಶ್ವಗಳಲ್ಲಿ ಎಂಟು ವಿಧವಾದ ಲಕ್ಷಣಗಳು ಇವೆ. ಅವುಗಳ ಕುರಿತು ಶಾಸ್ತ್ರಕಾರರು ೧. ಶರೀರ ಲಕ್ಷಣ, ೨. ರೋಮಲಕ್ಷಣ, ೩. ಛಾಯಾಲಕ್ಷಣ (ಕಾಂತಿ) ೪. ಗತಿಲಕ್ಷಣ ೫. ಶರೀರ (ಮುಖ) ಗಂಧ ಲಕ್ಷಣ ೬. ಸ್ವರ ಲಕ್ಷಣ ೭. ವರ್ಣ (ಬಣ್ಣ) ೮. ಸತ್ವ ಲಕ್ಷಣ (ಬಲ)

೪.೩.೩.೬. ಶರೀರ ಲಕ್ಷಣ : "ತುಟಿಗಳು ಸಂಪೂರ್ಣವಾಗಿ ತಾಮ್ರ (ಕೆಂಪು) ವರ್ಣದ್ದಾಗಿದ್ದು, ಪುಷ್ಪವಾಗಿದ್ದು, ಚರ್ಮವು ಮೃದುವಾಗಿದ್ದು, ಸುಳಿಗಳು (ಗಂಟುಗಳು ವಿಕಾರಗಳು) ಇರಬಾರದು. ನಾಲಗೆಯು ಕೆಂಪು ಬಣ್ಣದ್ದಾಗಿರಬೇಕು. ಶರೀರವು ಕೃಶವಾಗಿದ್ದು, ತಾಲು ಭಾಗವು ರಕ್ತವರ್ಣದ್ದಾಗಿರಬೇಕು. ಹಲ್ಲುಗಳು

ಒತ್ತಾಗಿ ಇದ್ದು ಗಟ್ಟಿಯಾಗಿ ಸಮಪ್ರಮಾಣದಲ್ಲಿದ್ದು ಕಾಂತಿಯಿಂದ ಕೂಡಿರಬೇಕು. 'ಹನು' ಭಾಗವು ಅತಿ ದೀರ್ಘವೂ ಅಲ್ಲದೆ, ಅತಿ ಹ್ರಸ್ವವೂ ಅಲ್ಲದೆ ಮಾಧ್ಯಮ ಪ್ರಮಾಣದಲ್ಲಿರಬೇಕು. ಕಣ್ಣುಗಳು ಸುಸ್ನಿಗ್ಧ ದೃಷ್ಟಿಯಿಂದ ಕೂಡಿದ್ದು ರೆಪ್ಪೆಗಳು ಮೃದುವಾಗಿರಬೇಕು. ಕಣ್ಣುಗಳು ವಿಶಾಲವಾಗಿದ್ದು, ಜೇನು ಕೆಂಪಿನ ಬಣ್ಣದಲ್ಲಿದ್ದು ಪ್ರಸನ್ನವಾಗಿರಬೇಕು. ಅಶ್ವದ ಕಣ್ಣುಗಳ ಹೋಲಿಕೆಯು ಕಂಪಿಜಲ (ಪಕ್ಷಿವಿಶೇಷ) ಕುರಂಗ (ಜಿಂಕೆ) ಇಭ (ಆನೆ) ಕ್ರೌಂಚ (ಪಕ್ಷಿ) ಟಿಟ್ಟಿಭ (ಪಕ್ಷಿ) ಉಷ್ಟ್ರ (ಒಂಟೆ) ಮಯೂರ (ನವಿಲು) ಇವುಗಳ ಕಣ್ಣುಗಳಿಗೆ ಹೋಲಿಕೆಯಾದರೆ ಆ ಬಗೆಯ ಅಶ್ವಗಳು ಉತ್ತಮ ಲಕ್ಷಣವೆಂದು ಹೇಳಲಾಗುತ್ತದೆ. ಕುದುರೆಯ ಲಲಾಟವು ಆವರ್ತ ಆಕೃತಿಯಿಂದ ಕೂಡಿದ್ದು ವಿಶಾಲವಾಗಿರಬೇಕು. ಇದು ಶುಭ ಶಿರೋಭಾಗವು ಸಮಪ್ರಮಾಣ, ವೃತ್ತ ಸ್ವರೂಪ ಅಥವಾ ಎರಡು ಆವರ್ತಗಳಿಂದ ಕೂಡಿದ್ದರೂ ಶುಭ.

ಕಿವಿಗಳು ಹ್ರಸ್ವವಾಗಿ, ಶರೀರದಲ್ಲಿ ತೀಕ್ಷ್ಣತೆ, ಕತ್ತು ದೃಢವಾಗಿ, ದೀರ್ಘವಾದ ಚೆನ್ನಾಗಿ ಮಧ್ಯಭಾಗಕ್ಕೆ ಸೇರಿಕೊಳ್ಳುವಂತೆ ಕುಂಚನ ಸ್ವಭಾವ ಆಗಿರಬೇಕು. ಇದನ್ನು ಉತ್ತಮ ಲಕ್ಷಣವೆಂದು ಕರೆಯುತ್ತಾರೆ. ಕುದುರೆಯ ಕೇಸರಗಳು ಜಟೆಗಳಂತೆ ಗಂಟುಗಳಿಲ್ಲದೆ ದೀರ್ಘವಾಗಿರಬೇಕು. ಕುದುರೆಯ ಬೆನ್ನು ಶುಭವಾದ ಆವರ್ತದಿಂದ ಕೂಡಿದ್ದು ದೃಢವಾಗಿರಬೇಕು. ವಕ್ಷಸ್ಥಳವು ವಿಶಾಲವೂ, ದೀರ್ಘವೂ ಆಗಿರಬೇಕು. ಭುಜ ಸಂಧಿಗಳು (ಕಕ್ಷ) ದೀರ್ಘವೂ, ಉನ್ನತವೂ ಆಗಿರಬೇಕು. ತೊಡೆಗಳು ವೃತ್ತಾಕಾರವಾಗಿರಬೇಕು ಕೈಗಳು (ಮುಂಗಾಲು) ಸಮಪ್ರಮಾಣದ್ದಾಗಿದ್ದು, ಜಾನ ಪ್ರದೇಶವು ಗೂಢವಾಗಿ, ಜಂಘಾಸ್ಥಾನವು ವೃತ್ತಾಕಾರದಲ್ಲಿದ್ದು, ಮಾಂಸ ರಹಿತವಾಗಿರಬೇಕು. ಎಂದರೆ ಮೂಳೆಗಟ್ಟಿಯಾಗಿರಬೇಕು. ಕೂರ್ಚಸ್ಥಾನವು ಗ್ರಂಥಿ, ವ್ರಣ ಇವುಗಳಿಂದ ದೂರವಾಗಿದ್ದು ಸುಗಂಧಯುತವಾಗಿರಬೇಕು.

ಕುದುರೆಗಳ ಗೊರಸುಗಳು ಗುಂಡನೆಯ ಆಕೃತಿಯಿಂದ ಕೂಡಿದ್ದು. ದಪ್ಪನೆ, ದೃಢವಾಗಿ ಇದ್ದು, ಖುರಗಳು ಒಂದು ಪಾರ್ಶ್ವದಲ್ಲಿ ಅತ್ಯಂತ ಉನ್ನತವಾಗಿ, ದೀರ್ಘವಾಗಿ, ದೃಢವಾಗಿ, ಸಮಪ್ರಮಾಣ ದ್ದಾಗಿಯೂ ಇರಬೇಕು. ಜಠರ ಪ್ರದೇಶವು ವರ್ತುಲಾಕಾರದಲ್ಲಿದ್ದು, ಜೋತುಬೀಳದೆ ದೃಢವಾಗಿರಲು, ಪೃಷ್ಠಪ್ರದೇಶವು ಸಮವಾಗಿದ್ದು, ಹೆಚ್ಚು ದೀರ್ಘವಾಗಿಲ್ಲದೆ ಕೊಂಚ ಮಾತ್ರ ಬಗ್ಗಿದಂತೆ ಇದ್ದು, ಕಟಿಭಾಗವು ಉನ್ನತವಾಗಿದ್ದು ವರ್ತುಲಾಕೃತಿಯಲ್ಲಿ ಇರಬೇಕು. ಕುದುರೆಯ ಹಿಂಭಾಗವು ಮೃದುವಾಗಿ ಎತ್ತರವಾಗಿ, ಬಾಲವು ಮೃದುವಾದ, ಒತ್ತಾಗಿ ಬೆಳೆದ ಕೂದಲುಗಳಿಂದ ಕೂಡಿದ್ದರೆ ಅದು ಉತ್ತಮ. ವೃಷಣಗಳು ಬಿಲ್ವಪತ್ರದ ಕಾಯಿಯ ಪ್ರಮಾಣಕ್ಕೆ ಮೀರದಂತೆ ಇದ್ದು, ಸಮಪ್ರಮಾಣ, ವೃತ್ತಾಕಾರ, ರೋಮರಹಿತವಾಗಿದ್ದು. ಲಿಂಗವು ಕಪ್ಪು ಬಣ್ಣವನ್ನು ಹೊಂದಿರಬಾರದು. ಹಾಗೂ ಹ್ರಸ್ವಪ್ರಮಾಣದ್ದಾಗಿದ್ದು. ಸಕ್ಥಿ (ತೊಡೆ) ಪ್ರದೇಶವು ಗುಂಡಾಗಿಯೂ, ಸ್ವಲ್ಪ ಬಗ್ಗಿದಂತೆ ಇದ್ದು, ಶುಭಲಕ್ಷಣಗಳಿಂದ ದೂರವಾದ ಅಶ್ವದ ಶರೀರವು ಶುಭಕರವಲ್ಲ. ಮೇಲೆ ಹೇಳಿದ ಎಲ್ಲಾ ಶುಭಲಕ್ಷಣಗಳೂ ಸಹ ಹೆಣ್ಣು ಕುದುರೆಗೂ ಅನ್ವಯಿಸುತ್ತವೆ. ಇದರಲ್ಲಿ ಕೆಲವು

ವಿಶೇಷತೆ ಇದ್ದು, ವಡವಾದ ಯೋನಿಯೂ, ತುಟಿಗಳು, ಸ್ಥಿರವಾದ, ದೀರ್ಘವಾದ, ಸಮಾಕೃತಿಯು, ವಿಶಾಲವಾದವೂ ಆಗಿರಬೇಕು. ಇದನ್ನು ಶುಭಲಕ್ಷಣವೆಂದು ಮುನಿಗಳು ತಿಳಿಸಿದ್ದಾರೆ.

ಇಪ್ಪತ್ನಾಲ್ಕು ಅಂಗುಲ ಪ್ರಮಾಣಕ್ಕೆ ಒಂದು 'ಹಸ್ತ' ಪ್ರಮಾಣವೆಂದು ಹೇಳಲಾಗಿದೆ. ಉತ್ತಮಾಶ್ವದ ಪ್ರಮಾಣ ಮೂವತ್ತೆರಡು ಅಂಗುಲ ಪ್ರಮಾಣ. ಮಾಧ್ಯಮಾಶ್ವದ ಮುಖದ ಪ್ರಮಾಣ ಎರಡು ಅಂಗಲ ಎಂದು ತಿಳಿದುಕೊಳ್ಳಬೇಕು ಎಂಬುದು ಶಾಸ್ತ್ರಕಾರರ ಅಭಿಮತ. ಕನಿಷ್ಠಾಶ್ವದ ಮುಖದ ಪ್ರಮಾಣ ಇದಕ್ಕಿಂತ ಎರಡು ಅಂಗುಲ ಕಡಿಮೆ. ಇಪ್ಪತ್ತೆಂಟು ಅಂಗುಲ ಉತ್ತಮಾಶ್ವದ ಗ್ರೀವಾ ಕತ್ತಿನ ಅಳತೆಯು ಐವತ್ತಾರು ಅಂಗುಲ ಪ್ರಮಾಣವಾಗಿರುತ್ತದೆ. ಮಧ್ಯಮಾಶ್ವದ ಕುದುರೆಯ ಕತ್ತಿನ ಉದ್ದ ನಲವತ್ತಾರು ಅಂಗುಲ ಪ್ರಮಾಣ, ಕನಿಷ್ಠ ಅಶ್ವದ ಗ್ರೀವಾ ಅಳತೆಯು ಮೂವತ್ತಾರು ಅಂಗುಲ ಪ್ರಮಾಣವಾಗಿರುತ್ತದೆ. ಮೇಲೆ ಮುಖದ ಪ್ರಮಾಣವು ಯಾವ ರೀತಿ ನಿರ್ದಿಷ್ಟವಾಗಿದೆಯೋ ಅದೇ ಪ್ರಮಾಣದಲ್ಲಿ ಎದೆ-ಪೃಷ್ಠ-ಕಟಿ ಭಾಗಗಳ ಪ್ರಮಾಣವನ್ನು ಉತ್ತಮ-ಮಧ್ಯಮ-ಅಧಮ ಅಶ್ವಗಳಿಗೆ, ಕಿವಿಗಳು ಏಳು ಅಂಗುಲ ಪ್ರಮಾಣ, ತಾಲವು ಆರು ಅಂಗುಲ ಪ್ರಮಾಣ, ಜಾನು -ಪೃಥು -ದಂಡ. ಇವು ಇಪ್ಪತ್ತು ಅಂಗುಲ ಪ್ರಮಾಣ.

ಉತ್ತಮಾಶ್ವದ ಜಂಘಾಭಾಗ ಮೂವತ್ತೆರಡು ಅಂಗುಲ ಪ್ರಮಾಣ ಇದ್ದು, ಮಧ್ಯಮಾಶ್ವಕ್ಕೆ ಈ ಪ್ರಮಾಣ ಹದಿನೆಂಟು; ಕನಿಷ್ಠಾಶ್ವಕ್ಕೆ ಈ ಪ್ರಮಾಣ ಹದಿನಾಲ್ಕು ಅಂಗುಲ. ಉತ್ತಮಾಶ್ವದ ಖುರದ ಪ್ರಮಾಣ ಏಳು ಅಂಗುಲವೆಂದು ಪಂಡಿತರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಮಾಧ್ಯಮಾಶ್ವಕ್ಕೆ ಈ ಪ್ರಮಾಣ ಆರು ಅಂಗುಲ, ಕನಿಷ್ಠಾಶ್ವಕ್ಕೆ ಐದು ಅಂಗುಲ. ಉತ್ತಮಾಶ್ವದ ಉತ್ಸೇಧದ ಪ್ರಮಾಣ ನಾಲ್ಕು ಹಸ್ತಗಳು. ಇದಕ್ಕಿಂತ ಅರ್ಧಹಸ್ತ ಕಡಿಮೆ. ಮಧ್ಯಮಾಶ್ವದ ಪ್ರಮಾಣ ನಾಲ್ಕು ಹಸ್ತ. ಅಧಮ ಅಶ್ವದ ದೈರ್ಘ ಮೂರು ಹಸ್ತ ಪ್ರಮಾಣ. ಕುದುರೆಯ ಎತ್ತರವನ್ನು ಅಳೆಯಬೇಕಾದರೆ ಗೊರಸುಗಳ ಮೂಲದಿಂದ ಬಾಲದ ತುದಿಯವರೆಗೆ ಮೇಲಿನಿಂದ ಕೆಳಕ್ಕೆ ಅಳೆಯಬೇಕು. ಗೊರಸಿನ ಮೂಲದಿಂದ ಕುದುರೆಯ ಡುಬ್ಬದವರೆಗೆ ನೆಲದಿಂದ ಮೇಲಕ್ಕೆ ಅಳೆಯಬೇಕು. ಮೂಲತಃ ನಾಲ್ಕು ವರ್ಣಗಳು ಮಾತ್ರ ಇದ್ದು, ಬಿಳುಪು, ಕಪ್ಪು, ಅರುಣವರ್ಣ ಹಾಗೂ ಹಳದಿ ಇವು ಶುದ್ಧವರ್ಣಗಳು. ಇವುಗಳ ಮಿಶ್ರಣದಿಂದ ಅನೇಕ ವಿಧವಾದ ವರ್ಣಗಳು ಉಂಟಾಗುತ್ತವೆ. ಶಂಖದಂತೆ ಬಿಳುಪಾದ ಕೇಶಗಳು, ಬಾಲ, ರೋಮಗಳು, ಚರ್ಮ, ಗೊರಸುಗಳು ಇವನ್ನು ಹೊಂದಿರುವುದು ವಿಪ್ರಜಾತಿಯ ಶುದ್ಧಾಶ್ವ ಎಂದು ಹೇಳಲಾಗಿದೆ. ಈ ಮೇಲೆ ಹೇಳಿದಂತೆ ಎಲ್ಲವೂ ಬಿಳುಪಾಗಿರುವ ಆದರೆ ಚರ್ಮವು ಮಾತ್ರ ಕಪ್ಪು ವರ್ಣದ್ದಾಗಿದ್ದರೆ ಅದು 'ಕರ್ತಲ' ಎಂಬ ಸಂಜ್ಞೆಯ ಶುದ್ಧಾಶ್ವದ ಪ್ರಭೇದ. ರೋಮಗಳು, ಕೇಶಗಳು, ಬಾಲ, ಚರ್ಮ ಹಾಗೂ ಗೊರಸುಗಳು ಕಪ್ಪು ಬಣ್ಣವನ್ನು ಹೊಂದಿದ್ದರೆ 'ಕಾಲ' ಎಂದು ಗುರುತಿಸಿ ಶುದ್ಧಾಶ್ವವೆಂದು ಹೇಳಲಾಗುತ್ತದೆ. ಇದಕ್ಕೆ ಹೆಚ್ಚಿನ ಶೌರ್ಯವಿದ್ದು, ಕೇಶಗಳಿಂದ ಹಿಡಿದು ಬಾಲದವರೆಗಿನ ಶರೀರದ ಎಲ್ಲಾ ಅಂಗಗಳೂ ಲೋಹಿತ ವರ್ಣವಾಗಿದ್ದು ಅದನ್ನು 'ಕುಂಜಾಭ' ಎಂದು ಹೆಸರಿಸಿ ಕ್ಷತ್ರಿಯ ಶುದ್ಧಾಶ್ವವೆಂದೂ, ಕೇಶಗಳಿಂದ

ಹಿಡಿದು ಬಾಲದವರೆಗಿನ ಶರೀರದ ಎಲ್ಲಾ ಅಂಗಗಳೂ ಸಹ ಕಾಂಚನ ವರ್ಣವಾಗಿದ್ದು ಇದನ್ನು ಶೇರಭ ಹೆಸರಿನ ವೈಶ್ಯಜಾತಿಯ ಶುದ್ಧಾಶ್ವವೆಂದು ಕರೆಯಲಾಗಿದೆ."[೨೫]

೪.೩.೩.೭.. ಛಾಯೆ ಲಕ್ಷಣ : ಕುದುರೆಯ ನಾನಾ ಲಕ್ಷಣಗಳಿಂದ ಛಾಯೆಯನ್ನು ಗುರುತಿಸುವುದು

"ತೋಯವಿಷ ಸೌಂದರಾಗ್ನಿ
ಚ್ಛಾಯಾತ್ರಿತಯಂಗಳುತ್ತಮಂ ಪವನ ನಭ
ಚ್ಛಾಯೆಗಳೆರಡುಂ ವಾಜಿಗ
ನಾಯುಷ್ಯಕರಂ ಕರಂ ಮಹಾದೋಷಕರಂ"[೨೬] (೩-೪೬)

ಭೂಮಿಯ ನೀರಿನ, ಅಗ್ನಿಯ ಛಾಯೆಯನುಳ್ಳ ಕುದುರೆ ಆಯುಷ್ಯವುಂಟು ಅದು ಉತ್ತಮವಾದದ್ದು. ವಾಯು ಆಕಾಶದ ಛಾಯೆಯನುಳ್ಳ ಕುದುರೆ ಅಲ್ಪಾಯುಷ್ಯ ಕಷ್ಟವೆಂದು, ಕುದುರೆಯ ಮೈಯೆಲ್ಲ ನಾನಾವರ್ಣವಾಗಿ, ಸ್ಥಿರವಾಗಿ, ಹೊಳಪಾಗಿ ತೋರಲು ಅದನ್ನು ಭೂ ಛಾಯೆ ಎಂಬುದು ಉತ್ತಮ. ತಿಳಿನೀರಿನ ಬಿಳಿಯ ತಾವರೆಯೆಲೆಯ ಕಾರ್ಮುಗಿಲ ಇರುವ ವರ್ಣದಲ್ಲಿ ಹೊಳಪುನುಳ್ಳ ಬಣ್ಣದ ಕುದುರೆ ಜಲಚ್ಛಾಯೆ ಉತ್ತಮ. ಹವಳದ, ಚಿನ್ನದ, ಮೂಡುವ ಸೂರ್ಯನ ಪದ್ಮರಾಗದ ನೇರಿಲದೋರೆವಣ್ಣಿನ ಇವರೋಪಾದಿಯ ಕಾಂತಿಯನುಳ್ಳ ಬಣ್ಣದ ಕುದುರೆ ಅಗ್ನಿಚ್ಛಾಯೆ ಉತ್ತಮ. ಕುದುರೆಯ ಮೈಯರೋಮಗಳು ಕೆದರಿಕೊಂಡು ಜೋಗುಗಳಾಗಿ ಕುರುಳಿನ ಹಾಗೆ ಡೊಂಕಾಗಿ ನಿಬಿಡವಾಗಿ ಇದ್ದರೆ ಆ ಕುದುರೆಯನ್ನು 'ಮರುತಚ್ಛಾಯೆ'ಯೆಂದು ಕರೆಯುವದು ಅದು ಕಷ್ಟ. ಬತ್ತಿದ, ಮೈವಣಗಿ ಇರುವ ಕಗ್ಗಿದ ವರ್ಣಗಳಾಗಿ ತೋರಿದರೆ 'ವ್ಯೋಮಚ್ಛಾಯೆ' ಕಷ್ಟವೆಂದೆನ್ನುವರು. ಕುದುರೆಯ ಹಣೆಯಲ್ಲಿ ಅಲಂಕರಿಸಿದ ಹಾಗೆ ನೀಳವಾಗಿ ಮೂರುಸುಳಿ ಇದ್ದರೆ 'ನಿಶ್ರೇಣಿಕ'ಮೆಂಬುವುದು ಉತ್ತಮ. ಸ್ಥಾನ, ಪುಷ್ಪ, ವ್ಯಕ್ತ, ಅವಸಾನ ಎಂಬ ನಾಲ್ಕು ಸ್ಥಾನದಲ್ಲಿ ಕುರುಹುವೆಡೆಗು ಶುಭ-ಅಶುಭವೆಂದು ಹೇಳಿರುವರು. ಸೂರ್ಯನ ಕಿರಣಗಳನ್ನು ಮುಗಿಲು ಮುಚ್ಚಿ ಇರುವ ಹಾಗೆ, ಕುದುರೆಯ ಲಕ್ಷಣಗಳನ್ನು ಛಾಯೆ ಮುಸುಕಿಕೊಂಡು ಇರುವುದು. ಹೀಗೆ, ಪುಷ್ಪ, ಗಂಧ, ಕಿರಣ, ಧ್ವನಿ, ನಡೆ ಪ್ರಭಾವ ವರ್ಣಗಳಿಂದ ಛಾಯೆಯನ್ನು ಹೇಳಬಹುದು.

೪.೩.೩.೮. ಗತಿ ಲಕ್ಷಣ : "ಅಶ್ವಗಳ ನಡಿಗೆ(ಗತಿ)ಯು ಇತರ ಪ್ರಾಣಿಗಳ ಗತಿಯೊಂದಿಗೆ ಹೋಲಿಸಲ್ಪಟ್ಟು ಶುಭಾಶುಭ ಸ್ವರೂಪ ತಿಳಿಸುತ್ತವೆ. ಅಶ್ವದ ಗತಿಯು -ಸಿಂಹ, ಹುಲಿ, ಆನೆ, ಹಂಸ, ನವಿಲು, ಶರಭ, ಎತ್ತು, ಶಾಖಾಮೃಗ, ಉಷ್ಟ್ರ ಇವುಗಳ ಗತಿಗೆ ಹೋಲಿಕೆಯಾಗದಿದ್ದರೆ ಅಂತಹ ಅಶ್ವಗಳು ತಮ್ಮ ಯಜಮಾನನಿಗೆ ಸಮೃದ್ಧಿಯನ್ನು ಉಂಟು ಮಾಡುತ್ತವೆ. ಅದೇ ರೀತಿ ಅಶ್ವದ ಗತಿಯು ವಿಷಮತೆಯಿಂದ ಕೂಡಿದ್ದರೆ, ಸ್ಖಲನದಿಂದ ಕೂಡಿದ್ದು, ನೋಡಲು ಸೌಷ್ಠವ ಗಾಂಭೀರ್ಯಗಳಿಂದ ಇಲ್ಲದೆ ವಿಕಟವಾಗಿದ್ದು, ಇಂತಹ ಅಶ್ವಗಳು ಸಂಕೀರ್ಣವಾಗಿರುವ ಗತಿಯ ತ್ಯಾಜ್ಯವಾಗಿರುತ್ತವೆ. ಅಕ್ಷಿ ಮೊದಲಾದ ಸ್ಥಾನಗಳಲ್ಲಿ

ಉಂಟಾಗುವ ಗಂಧದ ಲಕ್ಷಣದಿಂದ ಅಶ್ವಗಳ ಉತ್ತಮತ್ವ, ಅವರತ್ವ ನಿರ್ಧಾರವಾಗುತ್ತದೆ. ಅಶ್ವಗಳ ಶರೀರದಲ್ಲಿ ಅಕ್ಷಿ(ಕಣ್ಣು), ಆನನ(ಮುಖ), ಕರ್ಣ(ಕಿವಿ), ನಾಸಿಕಾ(ಮೂಗು), ಸ್ವೇದ(ಬೆವರು), ಮೂತ್ರ, ಪುರೀಷ (ಮಲ) ಈ ಸ್ಥಾನಗಳಲ್ಲಿ ಶುಭಗಂಧ (ವಾಸನೆಯು) ಉಂಟಾದರೆ ಅಂತಹ ಅಶ್ವಗಳು ಶುಭ ಲಕ್ಷಣ ಕುದುರೆಗಳೆಂದು ಕರೆಯುವರು. ಶುಭಗಂಧ ಅರ್ಜುನ(ವೃಷ; ಪುಷ್ಪ ವಿಶೇಷ), ಕದಂಬ(ಪುಷ್ಪ), ಕುಟಜ (ಮಲ್ಲಿಗೆ), ಘೃತ (ತುಪ್ಪ) ಬಿಲ್ವ, ಕ್ಷೀರ ಇವುಗಳ ವಾಸನೆಯನ್ನು ಹೊಂದಿರುವಂತಹವುಗಳು. ಅಶ್ವಗಳ ಹೇಷಾರದ ಶಬ್ದವು ಈ ಪ್ರಾಣಿಗಳ ಶಬ್ದಕ್ಕೆ ಹೋಲಿಕೆಯಾದರೆ ಅವು ಶುಭ ಲಕ್ಷಣ. ವೀಣೆಯಧ್ವನಿ, ಕೊಳಲಿನಧ್ವನಿ, ಮೃದಂಗ ದುಂದುಭಿ, ಗಜ, ಕ್ರೌಂಚಪಕ್ಷಿ, ಸಿಂಹ, ವ್ಯಾಘ್ರ ಅಶ್ವಗಳ ಹೇಷಾರದ ಶಬ್ಧವಾಗಿದ್ದರೆ ಅಶುಭ ಲಕ್ಷಣ, ಹಾಗೆಯೇ ವಿಚ್ಛಿನ್ನ (ಒಡಕುಶಬ್ದ) ತನು (ಹೀನಸ್ವರ) ಹಾಗೂ ಗದ್ಗದ (ಅಳುವಿಕೆಯ ಸ್ವರಕ್ಕೆ ಹೋಲಿಕೆ). ಪುರುಷ (ಒರಟಾದ) ದುರ್ದುರ (ಕಿವಿ ಚುಚ್ಚುವಂತಹದ್ದು, ಕಪ್ಪೆಯ ಶಬ್ದದಂತೆ) ವಿಸ್ವರ ಕ್ರೋಡ (ಹಂದಿ) ಉಷ್ಟ್ರ (ಒಂಟೆ) ಈ ರೀತಿ ಅಶುಭ ಸ್ವರವುಳ್ಳ ಅಶ್ವಗಳು ಒಡೆಯನ ಸಂಪತ್ತನ್ನು ನಾಶಮಾಡುತ್ತವೆ.

ಬ್ರಹ್ಮ, ಈಶ್ವರ, ವಾಸವ, ಕುಬೇರ, ಪರೇತರಾಜ, ಗಂಧರ್ವ, ಪಾಶಧರ ಈ ದೇವತೆಗಳ ಸತ್ವಕ್ಕೆ ಹೋಲಿಕೆಯಾಗುವ ಸತ್ವವುಳ್ಳ, ಅಶ್ವಗಳು ಉತ್ತಮವಾಗಿದ್ದು. ರಾಕ್ಷಸ, ಅಸುರ, ಪಿಶಾಚಿ ಪಿತೃಗಳು, ದ್ವಿಜಿಹ್ವ (ಹಾವು, ಪಕ್ಷಿ) ಈ ರೀತಿಯಾದ ಸ್ವಭಾವ, ಸತ್ವಗಳನ್ನು ಹೊಂದಿರುವ ಅಶ್ವಗಳು ಮಲಿನವಾಗಿದ್ದು ಮಧ್ಯಮದರ್ಜೆಯದವುಗಳಾಗಿರುತ್ತವೆ. ಉತ್ತಮವಾದ ವರ್ಣ, ಆವರ್ತ, (ಶರೀರ) ಪ್ರಭೆ, ಅಂಗಸ್ವರ, ಗತಿ, ಸತ್ತ್ವಗಂಧ, ಒಳ್ಳೆಯ ಆಚಾರ, ಅಭಿಜಾತ್ಯ, ವಿನಯ ಗುಣ ಇವೆಲ್ಲವುಗಳಿಂದ ಕೂಡಿದ ದೇವ ಸತ್ತ್ವದ ಅಶ್ವಗಳು ಇವು ಪ್ರಮುಖವಾದವುಗಳು. ಗಂಧರ್ವ, ರಾಕ್ಷಸ ಮುನಿಗಳು, ಯತಿಗಳು ಈ ರೀತಿಯ ಸತ್ವಾಂಶಗಳನ್ನು ಹೊಂದಿರುವ ಅಶ್ವಗಳು ಉತ್ತಮ. ಜೊತೆಗೆ ಇವುಗಳಿಗೆ ಭಿನ್ನವಾಗಿ ಹೀನಸತ್ವ, ಅಶುಚಿ ಸ್ವಭಾವ, ಕಲಹದಲ್ಲಿ ಆಸಕ್ತಿ, ಹೆದರಿಕೆಯ ಸ್ವಭಾವ ಇವು ವರ್ಜ್ಯವಾದ ಅಶ್ವಗಳು."[೨೭]

"ಶುಭವಾದ ವರ್ಣ, ಆವರ್ತ, ಗಂಧ, ಸ್ವರ, ಸತ್ತ್ವ ಮತ್ತು ಆಕಾರಗಳಿಂದ ಕೂಡಿದ ಕುದುರೆಗಳು ಶುಭವನ್ನು ತಂದು ಕೊಡುತ್ತವೆ. ಮುಖ, ಕಾಲುಗಳಲ್ಲಿ ಮಾಂಸ ಕಡಿಮೆಯಿದ್ದು, ಎದೆ ಮತ್ತು ತ್ರಿಕಭಾಗದಲ್ಲಿ ವಿಸ್ತಾರ ಹೊಂದಿ ಜಘನ-ಭುಜಗಳಲ್ಲಿ ಪೀನತ್ವವನ್ನೂ ಬೆನ್ನು, ಕಿವಿಗಳಲ್ಲಿ ಹ್ರಸ್ವವನ್ನೂ ಹೊಂದಿ, ಕುತ್ತಿಗೆ-ಸೊಂಟಗಳಲ್ಲಿ ದುಂಡಾಗಿದ್ದು, ಜಿಂಕೆಯಂತೆ ಕಣ್ಣನ್ನು ಹೊಂದಿರುವ, ಹೆಚ್ಚಿನ ವೇಗವನ್ನೂ, ಶಕ್ತಿಯನ್ನೂ ಪಡೆದಿರುವ ಕುದುರೆಗಳು ರಾಜರಿಗೆ ಉಚಿತವಾದ ಅಶ್ವಗಳು. ಈ ರೀತಿಯ ಗುಣಗಳಿಂದ ಕೂಡಿದ ಕುದುರೆಗಳಿಗೆ ಅಶ್ವವಾಹಕ ರಾವುತರಿಂದ ತರಬೇತಿ ಕೊಡಿಸಬೇಕು. ಉಬ್ಬಿದ ಭುಜ, ಉನ್ನತವಾದ ಕತ್ತುಗಳನ್ನು ಹೊಂದಿರುವ ಲೋಹ ಸ್ಪರ್ಶವಾದಾಗ ಲಾಲಾರಸವನ್ನು ಸುರಿಸುವ, ಹಿಂದಿನ ಕಾಲುಗಳು ಸ್ವಲ್ಪ ಚಿಕ್ಕದಾಗಿರುವ, ವೇಗವಾಗಿ ದಾರಿಯನ್ನು ಸವೆಸುವ, ಹೆಗಲನ್ನು ಮುಟ್ಟುವಂತಹ ಪ್ರೋಥವನ್ನುಳ್ಳ,

ಕಡಿವಾಣವನ್ನು ಎಳೆದಾಗ ಆ ಕಾಲನ್ನು ಮುಂದೆ ಇಡುವ, ಪ್ರಚೋದಿಸಿದಾಗ ಶೀಘ್ರವಾಗಿ ಓಡುವ, ಹಿಡಿದಾಗ ಸುಖವಾಗಿ ನಿಲ್ಲುವ, ಜಯಘಂಟೆಗಳ ಶಬ್ದದಿಂದಲೂ ಅನೇಕ ಕುದುರೆಗಳ ಗೊರಸಿನ ಧ್ವನಿಯಿಂದಲೂ ಆನೆ, ಒಂಟೆಗಳ ಸಾಮಿಪ್ಯದಿಂದಲೂ ಹೆದರದಿರುವ, ಸುಶೀಕ್ಷಿತವಾದ ಉತ್ತಮ ಕುದುರೆಗಳನ್ನು ತೆಗೆದುಕೊಂಡು ಆನೆಯ ದಂತದಿಂದ ನಿರ್ಮಿತವಾದ ಜೀನಿನಿಂದ ಅವನ್ನು ಸಜ್ಜುಗೊಳಿಸಬೇಕು.

ಪರ್ಯಾಣವನ್ನು (ಕುದುರೆಯ ಮೇಲೆ ಸವಾರರು ಕುಳಿತುಕೊಳ್ಳಲು ಅನುಕೂಲವಾಗುವ ಜೀನು ಎಂಬ ಆಸನವನ್ನು) ಚಿನ್ನದ ಪಟ್ಟಿ ಒಡವೆಗಳಿಂದಲೂ, ಮುತ್ತು-ಮಾಣಿಕ್ಯಗಳಿಂದಲೂ ಅಲಂಕಾರ ಮಾಡಿ, ಹುಲಿಯ ಚರ್ಮಕ್ಕೆ ಪೋಣಿಸಿದ ಬಟ್ಟೆಯ ಪಟ್ಟಿಗಳಿಂದ ಶೋಭಿಸುವ, ಕುದುರೆಯ ಎದೆ ಕಟ್ಟಿದ, ಬಾಲಕ್ಕೆ ಕಟ್ಟಿದ, ನಾನಾವರ್ಣಗಳಿಂದ ಶೋಭಿಸುವ ಅಲಂಕಾರಗಳನ್ನು ಮಾಡಿ ನಂತರ ಎರಡು ಪಕ್ಕಗಳಲ್ಲಿಯೂ ತೂಗಾಡುವಂತೆ ಒಂಟೆಯ ಕೂದಲಿನಿಂದ ಮಾಡಲ್ಪಟ್ಟ ಪಟ್ಟಿಗಳಿಂದಲೂ, ಚಿನ್ನದ ಬಳೆಗಳಿಂದಲೂ, ಕಾಲುಬಳೆಗಳಿಂದಲೂ ಅಶ್ವವನ್ನು ಅಲಂಕರಿಸಬೇಕು. ಆಕರ್ಷಣೆಯನ್ನು ಹೆಚ್ಚಿಸುವ, ಸೊಗಸಾದ ಮತ್ತು ಮಧ್ಯದಲ್ಲಿ ಉಜ್ವಲ್ಪಟ್ಟ ಚಿನ್ನದ ಕಂಠಿಕೆಗಳಿಂದ ಅಶ್ವದ ಮುಖವನ್ನು ಅಲಂಕರಿಸಿ, ತಲೆಯ ಭಾಗದಲ್ಲಿರುವ ಬಟ್ಟೆಯ ಪಟ್ಟಿಗೆ -ಕಪೋಲಗಳ ಬಿಳಿ ಕಡಿವಾಣ ಸೇರಿಕೊಳ್ಳುವಲ್ಲಿ ಬೆಳ್ಳಿಯಿಂದ ಮಾಡಿರುವ, ಶೋಭಿಸುವ ಲಾಲಿಗಳಿಂದ ಅಶ್ವವನ್ನು ಅಲಂಕರಿಸಿ, ರತ್ನ ಕಾಂಚನಗಳಿಂದಲೂ, ಮುತ್ತಿನ ಮಾಲೆಗಳಿಂದಲೂ ಕೂಡಿ, ಹುಲಿಯ ಬಾಲದಂತೆ ಶೋಭಿಸುವ ನಿಬಂಧಕ ಎಂಬ ಅಲಂಕಾರದಿಂದ ಅಶ್ವ ವಿರಾಜಿಸಬೇಕು. ನವಿಲಿನ ಗರಿಯ ಅಲಂಕಾರದಿಂದ, ಶಂಖದ ಮಣಿಗಳಿಂದ ಗುಂಡಾಗಿರುವ ಚಿನ್ನದ ಶೃಂಖಲೆಗಳಿಂದ ಚೆನ್ನಾಗಿ ಹೊಳೆಯುವ ಕೆಂಪುಮಣಿಗಳಿಂದಲೂ ಕುದುರೆಯನ್ನು ಅಲಂಕಾರ ಮಾಡಿ ಪಾದುಕೆಗಳಿಂದ, ಚಿನ್ನದ ಸಣ್ಣ ಘಂಟೆಗಳಿಂದ ಕೂಡಿದ ಪದಕಗಳು ಕುದುರೆಯ ಕತ್ತನ್ನು ಅಲಂಕರಿಸಿ ಕುಂಕುಮದಿಂದ ಲೇಪನಮಾಡಿ, ಛತ್ರ, ಚಾಮರಗಳಿಂದ ಸಹಿತವಾಗಿ, ಮುಂದೆ ಕಹಳೆಗಳು ಬಾಜಿಸುತ್ತಿರಲು ಕುದುರೆಗಳನ್ನು ವೈಹಾಳಿಗೆ ಕಳಿಸಬೇಕು, ನಂತರ ದೊರೆಯೂ ಅಲ್ಲಿಗೆ ಹೋಗಬೇಕು.

ವೀರನೂ ಕುದುರೆ ಸವಾರಿಯಲ್ಲಿ ವಿಶಾರದನೂ, ಬಣ್ಣಬಣ್ಣದ ಬಟ್ಟೆಯಿಂದ ರುಮಾಲು ಕಟ್ಟಿಕೊಂಡಿರುವವನೂ, ಹಳದಿ ಬಣ್ಣದ ಕಂಚುಕವನ್ನು, ಸುಂದರವಾದ ಚಿನ್ನದ ಸರಪಳಿಯನ್ನು ಎದೆಯಲ್ಲಿ ಧರಿಸಿರುವವನೂ, ಎರಡು ಕಿವಿಗಳಲ್ಲೂ ಬಂಗಾರದ ಆಭರಣಗಳನ್ನು ಧರಿಸಿ ಶೋಭಿಸುವವನೂ ಆಗಿರುವಂತ ದೊರೆಯು ಅಶ್ವವಾಹ್ಯಲಿಗೆ ಬರಬೇಕು. ಅಶ್ವವಿದ್ಯೆಯನ್ನು ಕಲಿತು, ಶ್ರಮಸಹಿಷ್ಣುಗಳಾಗಿರುವವರೂ, ಅಶ್ವಹೃದಯವನ್ನು ಕಲಿತ ದಕ್ಷರೂ, ದೃಢವಾದ ಕೈಗಳನ್ನುಳ್ಳವರೂ, ದೃಢಾಸನರೂ, ವೀಥೀ ಮಂಡಲ ಧಾರೆಗಳಲ್ಲಿ ಸಂಚಾರ ಚತುರರೂ, ಅನುರೂಪ ಅಲಂಕಾರ ಮಾಡಿಕೊಂಡಿರುವವರೂ ಆದ ಅಶ್ವಾರೋಹಿಗಳನ್ನು ದೊರೆಯು ಎರಡು ಪಂಗಡಗಳಲ್ಲಿ ವಿಭಾಗ ಮಾಡಿ, ರಾಜನು ತನ್ನ ಪಕ್ಕದಲ್ಲಿ ಎಂಟು ಜನರನ್ನು ಇರಿಸಿಕೊಂಡು ಇನ್ನೊಂದು ಪಕ್ಷಕ್ಕೆ ಎಂಟು ಜನರನ್ನು ಕಳಿಸಿ, ಅಂತಃಪುರದ ಸ್ತ್ರೀಯರು, ರಾಜಕುಮಾರರು,

ಸಚಿವರು, ಅಮಾತ್ಯರು, ಮಂತ್ರಿಗಳು ಮತ್ತು ಇತರ ರಾಜಯೋಗ್ಯ ಜನರಿಂದ ಸಮನ್ವಿತನಾಗಿ ದೊರೆಯು ಸುಖಾಸನವಾದ ಕುದುರೆಯ ಮೇಲೆ ಪ್ರಿಯೆಯೊಡನೆ ಕುಳಿತು, ವಾಹ್ಯಾಲಿಗೆ (ಅಶ್ವಕ್ರೀಡಾಭೂಮಿಗೆ) ಬಂದು ಪ್ರವೇಶ ಮಾಡಿ ಜೊತೆಯಲ್ಲಿ ಬಂದವರನ್ನೂ ಒಳಗೆ ಪ್ರವೇಶ ಮಾಡಿಸಿ ಮೊದಲೇ ಸಿದ್ಧಪಡಿಸಿದ್ದ ಮಂಟಪದಲ್ಲಿ ಸ್ಥಾನಕ್ಕೆ ಅನುಗುಣವಾಗಿ ಅವರನ್ನು ಕುಳ್ಳಿರಿಸಬೇಕು. ನಂತರ ರಾಜನು ದಿವ್ಯವಾದ ಕಾಂಭೋಜ ದೇಶದ ಕುದುರೆಯನ್ನು ತಾನು ಏರಿ ಕುಳಿತುಕೊಳ್ಳಬೇಕು. ದ್ವಾರಗಳ ನಂತರ ಮೂರು ಧನ್ವಂತರಗಳಷ್ಟು ದೂರದಲ್ಲಿ ಎರಡು ತೋರಣಗಳಿರಬೇಕು. ತೋರಣ ಸ್ತಂಭಗಳ ಮಧ್ಯದ ಅಂತರ ನಾಲ್ಕು ಧನ್ವಂತರಗಳಷ್ಟು ಇದ್ದು, ಎರಡು ಪಂಗಡಗಳ ಜಯಪರಾಜಯಗಳನ್ನು ನಿರ್ಣಯಿಸಲು ಚೆಂಡಿನ ನಿಷ್ಕಾಸಗಳನ್ನು ಮಾಡಿ ಎಣಿಸಬೇಕು. ಯಾರು ಚೆಂಡಿನ ನಿಷ್ಕಾಸಗಳನ್ನು ಸಾಧಿಸುವರೋ ಅವರಿಗೆ ಜಯವಾಗುವುದು. ಈ ಆಟಕ್ಕಾಗಿ ಉಪಯೋಗಿಸುವ ಗೇದ್ದಿಕಾ (ಗೇಡಿಕಾ, ಗ್ರೇಡಿಕಾ) ಎಂಬ ಕೋಲುಗಳು ಬೆತ್ತದಿಂದ ತಯಾರಾಗಿದ್ದು ಇವುಗಳ ತುದಿಯು ವಕ್ರವಾಗಿ ಕುಂಡಲಿತವಾಗಿರಬೇಕು. ಈ ಗೇದ್ದಿಕೆಗಳು ನಸುಗೆಂಪು ಬಣ್ಣದ ಚರ್ಮದಿಂದ ಸುತ್ತಲ್ಪಟ್ಟವಾಗಿದ್ದು, ಅವುಗಳ ಮುಖಭಾಗ (ತುದಿಯಲ್ಲಿ) ಕಪ್ಪು ಚರ್ಮದಿಂದ ಆವೃತವಾಗಿರಬೇಕು. ಒಂದು ಧನುಸ್ಸಿನಷ್ಟು ಉದ್ದವಾಗಿರುವ ಈ ಗೇದ್ದಿಕೆಗಳ ಅಗಲ ಐದು ಅಂಗಲಗಳಷ್ಟಿರಬೇಕು.

ಎರಡೂ ಪಕ್ಷಗಳ ಸವಾರರು ಶೋಭಿಸುವ ಚಿನ್ನದ ಪಟ್ಟಗಳಿಂದಲೂ, ರತ್ನಗಳಿಂದಲೂ ಅಲಂಕೃತರಾಗಿ, ಗೇದ್ದಿಕೆಗಳನ್ನು ಹಿಡಿದು, ತಮ್ಮ ತಮ್ಮ ಕುದುರೆಗಳನ್ನೇರಿ ತಮ್ಮ ತೋರಣದ ಬಳಿಗೆ ಹೋಗಿ ನಿಲ್ಲಬೇಕು. ಪಾರಿಭದ್ರಕ ಎಂಬ ಮರದಿಂದ ಚೆಂಡನ್ನು ತಯಾರಿಸಿರಬೇಕು. ಅದು ಗುಂಡಾಗಿಯೂ, ಚರ್ಮದಿಂದ ಸುತ್ತಲ್ಪಟ್ಟು. ಕೆಂಪು ಬಣ್ಣದಿಂದಾಗಿ ನೋಡುವ ಜನರ ಕಣ್ಣಿಗೆ ರಂಜನೆಯನ್ನು ಮಾಡುವ ಹಾಗೆಯು ಭವ್ಯವಾಗಿಯೂ ಇರಬೇಕು. ದುವಾಲಿಯಿಂದ ಕುದುರೆಯನ್ನು ಪ್ರೇರಿಸಿ ಒಬ್ಬ ಆಟಗಾರನು ಗೇದ್ದಿಕೆಯ ತುದಿಯಿಂದ ಭೂಮಿಯ ಮೇಲಿರುವ ಚೆಂಡನ್ನು ಪ್ರತಿಸ್ಪರ್ಧಿಗಳ ತೋರಣದ ಕಡೆಗೆ ಹೊಡೆಯಬೇಕು. ಅವನ ಕಡೆಯವರು ಅವನನ್ನು ಅನುಸರಿಸಬೇಕು. ಪ್ರತಿಪಕ್ಷದವರು ಅವರಿಗೆ ಅಡ್ಡಬರಬೇಕು.

ಹಾಗೆ ಅವರಲ್ಲೊಬ್ಬನು ವೇಗವಾಗಿ ಕುದುರೆಯನ್ನು ಓಡಿಸುತ್ತಾ ಬಂದು, ಚೆಂಡನ್ನು ಗೇದ್ದಿಕೆಯಿಂದ ಬಲವಾಗಿ ಹೊಡೆದು ಅದನ್ನು ಹಿಂದಿರುಗಿಸಬೇಕು. ಅವನ ಪ್ರತಿಸ್ಪರ್ಧಿಗಳಲೊಬ್ಬನು ಚೆಂಡನ್ನು ಮತ್ತೆ ಹಿಂದಕ್ಕೆ ತಿರುಗಿಸಬೇಕು. ಹೀಗೆ ಪರಸ್ಪರ ಸಂಘರ್ಷದಿಂದ ಹಿಂದೆ ಮುಂದೆ ಆಟವಾಡುತ್ತ ಅವರು ಚೆಂಡನ್ನು ಅನೇಕ ಹೊಡೆತಗಳಿಂದ ಅಲ್ಲೂ ಇಲ್ಲೂ ಓಡಾಡಿಸುತ್ತಾರೆ. ಒಬ್ಬನು ಮುಂದೆ ಹೋಗುವಂತೆ ಹೊಡೆದರೆ, ಇನ್ನೊಬ್ಬನು ಹೊರಗೆ ಹೋಗುವಂತೆ ಹೊಡೆಯುತ್ತಾನೆ. ಗೇದ್ದಿಕೆಯ ತುದಿಯಿಂದ ಚೆಂಡನ್ನೆತ್ತಿ ಇನ್ನೊಬ್ಬನು ಆಕಾಶದಲ್ಲಿ ಹಾರುವಂತೆ ಹೊಡೆಯುತ್ತಾನೆ.

ಆಕಾಶದಲ್ಲಿ ಹಾರಿ ಬರುತ್ತಿರುವ ಚೆಂಡನ್ನು ಒಬ್ಬ ಸವಾರನು ಗೇದ್ದಿಕೆಯ ತುದಿಯಿಂದ ಹಿಡಿದು ನಿಲ್ಲಿಸಿದಾಗ, ಇನ್ನೊಬ್ಬ ಆಟಗಾರನು ಅಲ್ಲಿಂದ ಅದನ್ನು ಕಸಿದು ಆಕಾಶದಲ್ಲಿ ಮತ್ತೆ ಹಾರುವಂತೆ

ಹೊಡೆಯುತ್ತಾನೆ. ಹೀಗೆ ಗುಂಪಿನಲ್ಲೆಲ್ಲರೂ ಚೆಂಡನ್ನು ಹೊಡೆಯುತ್ತ ಭೂಮಿಯಲ್ಲೂ, ಆಕಾಶದಲ್ಲೂ ಅದನ್ನು ಓಡಾಡಿಸಿ ತೋರಣದ ಒಳಗೆ ತೋರಿಸಿ ಹೊರಗೆ ಕಳಿಸಿದರೆ ಹಾಗೆ ಕಳಿಸಿದ ಪಕ್ಷದವರು ಜಯವನ್ನು ಪಡೆಯುವರು. ಆಗ ತೂರ್ಯ(ಕಹಳೆ)ಗಳು ನಾದ ಮಾಡಿ ವಿಜೃಂಭಿಸುತ್ತವೆ. ಹೀಗೆ ಕಂದುಕ ವಿನೋದದಿಂದ ಜಯವನ್ನು ಪಡೆದು ರಾಜನು ಮಂದಿಗಳಿಂದ ಹೊಗಳಲ್ಪಡುತ್ತ ಆ ಕುದುರೆಯಿಂದ ಇಳಿಯಬೇಕು. ತೋಕಾರದೇಶದಲ್ಲಿ ಹುಟ್ಟಿದ ಸರ್ವಲಕ್ಷಣ ಸಂಪನ್ನವಾದ, ಸುಶೀಕ್ಷಿತವಾದ, ವೇಗದಲ್ಲಿ ಶ್ರೇಷ್ಠವಾದ, ಉತ್ತಮ ಅಶ್ವವನ್ನು ರಾಜನು ಮತ್ತೆ ಏರಬೇಕು. ಆಮೇಲೆ ಮಂಡಲ ಮತ್ತು ಧಾರೆಗಳಲ್ಲಿ ಆ ಕುದುರೆಯನ್ನು ಓಡಿಸಿ ನಿಲ್ಲಿಸಬೇಕು.

ಒಳಗೆ ಕಡಿವಾಣವನ್ನು ಎಳೆದು, ಹೊರಗೆ ಲಗಾಮನ್ನು ಅವಲಂಬಿಸಿ ದೃಢವಾಗಿ ತೊಡೆಗಳನ್ನು ನಿಲ್ಲಿಸಿ, ಕಾಲುಗಳನ್ನು ಮಾತ್ರ ಆಡಿಸುತ್ತಾ, ಸ್ಥಿರ ಹಸ್ತನೂ, ಶಿಥಿಲವಲ್ಲದ ಆಸನವನ್ನು ಹಾಕಿದವನೂ ಎದೆಯನ್ನು ವಿಶಾಲವಾಗಿ ಉಬ್ಬಿಸಿ, ಕಾಲಿನ ಆಧಾರವನ್ನು ಹೆಬ್ಬೆರಳಿನಿಂದ ದೃಢವಾಗಿ ಒತ್ತಿಕೊಂಡು, ಪಟ್ಟಿಯ ಮಧ್ಯದ ಮುಂಭಾಗದಲ್ಲಿ ಕಾಲಿನ ಗಂಟುಗಳಿಂದ ಕುದುರೆಗೆ ಹೊಡೆಯಬೇಕು. ಕುದುರೆ ತಪ್ಪಾದ ದಾರಿಯಲ್ಲಿ ಹೋದರೆ ಅದನ್ನು ಚಾವಟಿಯಿಂದ ಹೊಡೆದು ದಾರಿಗೆ ತರಬೇಕು. ಮಾತಿನಿಂದಲೇ ಕುದುರೆಯನ್ನು ಬೆದರಿಸಬೇಕು. ತೊಡೆಗಳಿಂದ ಒತ್ತಬೇಕು. ದಾರಿಯಲ್ಲಿ ಕುದುರೆಯ ಆಸಕ್ತಿಯನ್ನು ಬೆಳೆಸಬೇಕು. ಕ್ರಮವಾಗಿ ಅದನ್ನು ಹಿಂದಿರುಗಿಸಿ, ಬಳಲಿದ ಕುದುರೆಯನ್ನು ಸಾಂತ್ವನಗೊಳಿಸಬೇಕು. ಹೆಗಲನ್ನು ತಟ್ಟಿ ಬೆನ್ನು ಚಪ್ಪರಿಸಬೇಕು. ಎಡಬಲ ತಿರುಗಬೇಕಾದಾಗ ಆಯಾ ಕಡೆಯ ಲಗಾಮವನ್ನು ಎಳೆಯಬೇಕು. ಬೀದಿಯಲ್ಲಿ ಕುದುರೆ ನೆಗೆಯಬೇಕಾದಾಗ ಲಗಾಮನ್ನು ಎರಡೂ ಬದಿ ಸಮವಾಗಿ ಎಳೆದು ಹಿಡಿಯಬೇಕು. ಹೀಗೆ ರಾಜನು ವಾಹನ ವಿದ್ಯೆಯಲ್ಲಿ ಜಾಣ್ಮೆಯನ್ನು ತೋರಿಸಬೇಕು. ಪ್ರೇಕ್ಷಕ ಲೋಕವನ್ನೂ ಅಶ್ವವಿದ್ಯಾವಿಶಾರದರನ್ನೂ ರಂಜಿಸಿದ ಮೇಲೆ ಅಂತಃಪುರದ ಸ್ತ್ರೀಯರಿಂದ ನೀರಾಜನವಿಧಿ (ಆರತಿ)ಯನ್ನು ಮಾಡಿಸಿಕೊಂಡು. ಚಿನ್ನ, ಬಟ್ಟೆ, ಅಲಂಕಾರ ಇತ್ಯಾದಿಗಳಿಂದ ಕುದುರೆ ಸವಾರರನ್ನು ಸಂತೋಷಪಡಿಸಬೇಕು. ಎಲ್ಲ ಜನಗಳಿಂದ ಹೊಗಳಿಸಿಕೊಳ್ಳುತ್ತ ಗಾಯಕರು ಸ್ತುತಿಗಳನ್ನು ಹಾಡುತ್ತಿರಲು, ಕವಿಗಳಿಂದ ವರ್ಣಿಸಲ್ಪಡುತ್ತ ರಾಜನು ರಾಜ ಸೌಧವನ್ನು ಪ್ರವೇಶಿಸಬೇಕು. ಹೀಗೆ ಕುದುರೆ ವೈಹಾಳಿಯ ವಿನೋದವನ್ನು ಮಾಡಬೇಕು."[೨೮]

ಅಶ್ವಗಳ ಗತಿ ಭೇದಗಳನ್ನು ವಿವರಿಸುತ್ತಾ, "ಸಿಂಹದಂತೆ, ಹುಲಿ, ಆನೆ, ಹಂಸ, ನವಿಲು, ಶರಭ, ವೃಷಭ, ಮುಂಗಿಸಿ, ಒಂಟೆಯಂತೆ ನಡೆಗೆಯುಳ್ಳ ಕುದುರೆಗಳು ಒಡೆಯನಿಗೆ ಸಿರಿಸಂಪತ್ತನ್ನು ಕೊಡುತ್ತವೆ. ವಕ್ರವಾಗಿದ್ದು, ವಿಷಮವಾಗಿ, ಎಡವುತ, ಮುಗ್ಗರಿಸುತ ಚಮತ್ಕಾರವಿಲ್ಲದ ಮಿಶ್ರಗತಿಯುಳ್ಳ ಕುದುರೆಗಳು ಶ್ರೇಷ್ಠಾಶ್ವಗಳು. ಆದರೆ ಗತಿಗಳಿಂದ ವಕ್ರವಾದರೆ ಉತ್ತಮವಾದವುಗಳಲ್ಲ ಇವು ಅನುಪಯುಕ್ತ ಕುದುರೆ ಎನಿಸಿಕೊಳ್ಳುತ್ತವೆ.

ಕುದುರೆಯ ಗಂಧ ಭೇದಗಳನ್ನು ಹೇಳುತ್ತಾ, ಕಣ್ಣುಗಳಲ್ಲಿ, ಕಿವಿ, ಮುಖ, ಮೂಗಿನ ಹೊಳ್ಳೆ ಬೆವರಿನಲ್ಲಿ, ಮೂತ್ರ ಪುರಿಷಗಳಲ್ಲಿ, ಅತ್ತಿಹುವ್ವಿನಂತೆ, ಕಡಹದ ಹುವ್ವಿನಂತೆ, ಮೊಲೆಹುವ್ವಿನಂತೆ, ಬಿಲ್ವ, ಪುಷ್ಪ, ತುಪ್ಪ, ಹಸುವಿನ ಹಾಲಿನಂತೆ, ವಾಸನೆಯುಳ್ಳ ಕುದುರೆಗಳು ಸುಗಂಧಯುಕ್ತವಾಗಿರುತ್ತವೆ. ಇವುಗಳಿಗೆ ಸಮಾನವಲ್ಲದ, ದುರ್ಗಂಧವುಳ್ಳ ಕುದುರೆಗಳು ಅವುಗಳನ್ನು ಅದೇ ಹೆಸರಿನಿಂದ ಕರೆಯುತ್ತಾರೆ.

ಸ್ವರಭೇದವನ್ನು ಗುರುತಿಸಿ ಅಶ್ವಗಳು ವೀಣಾವೇಣ, ಮೃದಂಗಭೇರಿ ಧ್ವನಿ ಹೊಂದಿದ್ದು, ಗಜ, ಕ್ರೌಂಚಪಕ್ಷಿ, ಶಂಖ, ಸಿಂಹ, ವ್ಯಾಘ್ರಗಳ ಧ್ವನಿಯುಳ್ಳ ಕುದುರೆ ಶುಭಕರವೆಂದು ಕರೆಯಿಸಿಕೊಳ್ಳುತ್ತವೆ. ಹಾಗೆಯೇ ಮಟಕುಮಟವಾಗಿ, ಸೂಕ್ಷ್ಮವಾಗಿ, ಗದ್ಗದವಾಗಿದ್ದು ಕಠಿಣವಾದ ಅಪಸ್ವರವನ್ನು ಮಾಡುವ ವರಾಹೋಷ್ಟ್ರ ಅಶ್ವಗಳು ಅಶುಭಕರವಾದವುಗಳು. ಇಂತಹವು ಒಡೆಯನ ಐಶ್ವರ್ಯವನ್ನು ಅಪಹರಿಸುವಂತೆ ಮಾಡುತ್ತವೆ"[೫೭] ಎಂದು ಮುಮ್ಮಡಿ ಕೃಷ್ಣರಾಜ ಒಡೆಯರ ಸೌಗಂಧಿಕ ಪರಿಣಯ ಸ್ಪಷ್ಟಪಡಿಸುತ್ತದೆ.

೪.೩.೩.೯. ಗಂಧ-ಸ್ವರ ಲಕ್ಷಣ : ಕಣ್ಣು, ಬಾಯಿ, ಕಿವಿ, ಮೂಗು, ದೇಹ, ಗುಹ್ಯ, ಪರೀಷ, ಸ್ವೇದ, ಮೂತ್ರಗಳಿಂದ ಗಂಧ ಹುಟ್ಟುತ್ತದೆ. ಕಬ್ಬಿನಹಾಲು, ಹೊಸತುಪ್ಪ, ಹಸುವಿನ ಹಾಲು, ಶಾಲಿ, ತಂಡುಲ, ಜೇನುತುಪ್ಪ ದ್ರಾಕ್ಷಾಸಮಾನವಾದ ಗಂಧಗಳು ಉತ್ತಮ. ತಾವರೆ, ಕಣಿಗಿಲೆ, ಕದಂಬ, ಕುವಲಯದ ಜಾತಿಯ ಗಂಧಗಳು ಜಯವನ್ನು ಕೊಡುತ್ತವೆ. ಬಾಳೆ ಮಲಯರುಹ, ಕರ್ಬಾಲ, ಕೋಷ್ಟ, ಕಚೋರ, ಏಲಕ್ಕಿ, ಲವಂಗ, ಕಾಲಾಗರುಗಳಿಗೆ ಆಗರವಾದ ಗಂಧ ಉತ್ಸಾಹಕರವಾದದ್ದು. ಆಸವ, ಅಭ್ರ, ಹುತ್ತ, ಬತ್ತದ ಅರಳು, ಬಿಲ್ವಪತ್ರ, ಮದ್ಯ, ಹಲಸಿನ ಹಣ್ಣಿನ ವಾಸನೆಯಿಂದ ಕುದುರೆಯ ನಿಶ್ವಾಸ ಕೂಡಿದ್ದರೆ ಶುಭಕರ. ನೋಡುವಲ್ಲಿ, ಮೈ ತೊಳೆಯುವಲ್ಲಿ, ನೆನೆದ ನೆಲದಿಂದ ಹೊಮ್ಮುವ ವಾಸನೆ ಬಂದರೆ ಶುಭ. ಅಂತಹ ಕುದುರೆ ಚಕ್ರವರ್ತಿಗಳಿಗೆ ಯೋಗ್ಯವಾದದ್ದು.

ಹಂದಿ, ಆನೆ, ಕತ್ತೆ, ಹೋತ ಮುಂತಾದವುಗಳ ಗಂಧದಿಂದ ಕೂಡಿದ ಕುದುರೆ ಭಯ, ಹಾನಿ, ಶೋಕವನ್ನು ತರುತ್ತದೆ. ಮರಣ ಉಂಟಾಗುತ್ತದೆ. ಬಿಸಿಯರಕ್ತ, ಮೀನಿನ ಹೊಲಸು, ಮಷಕ, ಸುಂಡಿಲಿ, ಮಜ್ಜಿಗೆ, ಹಸುವಿನ ಚರ್ಮ, ಲೋಯಿಸರ, ಮುತ್ತುಗದ ಗಂಧ, ಬಸೆಯ ರೀತಿಯ ಗಂಧವಿದ್ದರೆ ಅದು ಅಶುಭ.

ಸ್ವರಗಳಲ್ಲಿ ಶುಭ-ಅಶುಭವೆಂದು ಎರಡು ವಿಧ. ಹೃದಯ, ವಕ್ಷ, ಕೊರಳು, ಶಿರದಿಂದ ಹೊರಬಂದ ಸ್ವರವನ್ನು ಹೇಷಿತವೆನ್ನುತ್ತಾರೆ. ಘನ, ಗಂಭೀರ, ಉತ್ಸಾಹದಿಂದ ಕೂಡಿದ ಹೇಷಿತ ಧನಕನಕ ಸಮೃದ್ಧಿಯನ್ನು ಒದಗಿಸುತ್ತದೆ. ಜಯವನ್ನುಂಟು ಮಾಡುತ್ತದೆ. ಮದಿಸಿದ ಆನೆ, ಗುಡುಗು, ಶಾರ್ದೂಲ ಕ್ರೌಂಚ, ರಥ ತಮಟೆ, ಶಂಖ, ಪುಣ್ಯಾಹ, ವೃಷಭ, ಸಿಂಹ ಸದೃಶ ಸ್ವರಗಳು ಶುಭಕರವೆಂದು ಜಿ.ಜಿ.ಮಂಜುನಾಥನ್ ಅವರು ಗಂಧ ಸ್ವರದ ಕುರಿತು ಪ್ರಸ್ತಾವನೆಯಲ್ಲಿ ವಿವರಿಸುತ್ತಾರೆ.

೪.೩.೩.೧೧. ಪ್ರೋಥ ಲಕ್ಷಣ : ಮನುಷ್ಯರ ಹಸ್ತದಲ್ಲಿ ಯಾವ ರೀತಿಯಾಗಿ ಹಸ್ತಸಾಮುದ್ರಿಕದ ರೇಖೆಗಳು ಶಾಸ್ತ್ರೀಯ ಫಲಕ್ಕಾಗಿ ಗಮನಿಸಲ್ಪಡುತ್ತವೆಯೋ ಅದೇ ರೀತಿಯಾಗಿ ಅಶ್ವಗಳಿಗೆ ಪ್ರೋಥಸ್ಥಾನದಲ್ಲಿ ಉಂಟಾಗುವ ರೇಖೆಗಳಿಂದ ಅವುಗಳ ಆಯುಷ್ಯವನ್ನು ನಿರ್ಧರಿಸಲಾಗಿದೆ. "(ಪ್ರೋಥ-ಮೂಗು) ಮಧ್ಯಸ್ಥಾನದಲ್ಲಿ ಹುಟ್ಟಿ ಮೇಲ್ಮುಖವಾಗಿ ಹರಿದ ಒಂದೇ ರೇಖೆಯು ಮುಖರೋಗದ ಕಾರಣದಿಂದಾಗಿ ಒಂದು ವರ್ಷದಲ್ಲಿ ಮೃತಿಯನ್ನು ಹೊಂದುವದು. ಪ್ರೋಥ ಮಧ್ಯದಿಂದ ಹುಟ್ಟುವ, ಒಂದು ಅಂಗುಲ ಪ್ರಮಾಣದ ಊರ್ಧ್ವಗಾಮಿಗಳಾದ ಎರಡು ರೇಖೆಗಳಿರಲು ಅಂತಹ ಅಶ್ವವು ನಾಲಿಗೆ ಹಿರಿದುಕೊಂಡು ಎರಡನೇ ವರ್ಷದಲ್ಲಿ ಮೃತಿಹೊಂದುತ್ತದೆ. ಪ್ರೋಥಮಧ್ಯದಿಂದ ಹುಟ್ಟುವ (ಒಂದು ಅಂಗಾಲ ಪ್ರಮಾಣದ) ಎರಡು ರೇಖೆಗಳು ಅಡ್ಡವಾಗಿ ಹರಿದಿದ್ದರೆ ಮೂರು ವರ್ಷದಲ್ಲಿ, ಹನು (ಕಪಾಲ ಭಾಗ) ರೋಗ ಪೀಡಿತವಾಗಿ ಸಾಯುವದು. ಪ್ರೋಥ ಮಧ್ಯದಿಂದ ಹುಟ್ಟುವ ಎರಡು ರೇಖೆಗಳು ಮೇಲೆ ಹೋಗಿ ಮತ್ತೆ ಕೆಳಕ್ಕೆ ಬಾಗಿದ್ದರೆ, ಅದು ನಾಲ್ಕನೆಯ ವಯಸ್ಸಿನಲ್ಲಿ ಗಂಟಲಿನ ವ್ಯಾಧಿಯಿಂದ ಮೃತಿಯನ್ನು ಹೊಂದುವದು.

ಪ್ರೋಥಮಧ್ಯ ಭಾಗದಿಂದ ಹುಟ್ಟಿ ಮೇಲ್ಮುಖವಾಗಿ ಸಾಗಿ ಮುಂದಿನ ತುದಿಯಲ್ಲಿ ಎಡಗಡೆಗೆ ವಾಲಿರುವ ರೇಖೆಯು ಐದನೆಯ ವರ್ಷದಲ್ಲಿ, ಸಿಂಹಾದಿ ಪ್ರಾಣಿಗಳ ಪರಿಯಿಂದ ಮೃತಿಹೊಂದುವದು. ಪ್ರೋಥಮಧ್ಯದಲ್ಲಿ ಎರಡು ಅಂಗುಲ ಪ್ರಮಾಣದ ಊರ್ಧ್ವಗಾಮಿ ರೇಖೆಗಳು ಇರಲು ಆರನೆಯ ವಯಸ್ಸಿನಲ್ಲಿ, ಅದೇ ಭಾಗದಲ್ಲಿ ಅರ್ಧ ಅಂಗುಲ ಪ್ರಮಾಣದ ಅಡ್ಡ (ಆಯತ) ರೇಖೆಯು ಮಧ್ಯಭಾಗದಲ್ಲಿ ಉನ್ನತಭಾವವನ್ನು ಹೊಂದಿರಲು ಏಳನೆಯ ವಯಸ್ಸಿನಲ್ಲಿ, ಉಗ್ರವಾದ ಧ್ವನಿಯ ಕಾರಣವಾಗಿ, ಪ್ರೋಥಭಾಗದಲ್ಲಿರುವ ಮೂರು ಅಂಗುಲ ಉದ್ದವಾದ ರೇಖೆಯು ಎಂಟನೆಯ ವರ್ಷದಲ್ಲಿ, ಜ್ವರದ ಕಾರಣವಾಗಿ, ಅದೇ ಭಾಗದಲ್ಲಿ ಹುಟ್ಟಿ ಮಧ್ಯ ಭಾಗದಲ್ಲಿ ಸ್ಥೂಲವಾಗಿರುವ ನೆಟ್ಟಗಿನ ಎರಡು ರೇಖೆಗಳು ಇರಲು ಕ್ರಮವಾಗಿ ಒಂಭತ್ತು ಹಾಗೂ ಹತ್ತನೇ ವರ್ಷದಲ್ಲಿ, ಅದೇ ಮಧ್ಯದಲ್ಲಿ ಎರಡು ಅಂಗುಲ ಅಗಲದ ಊರ್ಧ್ವಗಾಮಿಯಾದ ರೇಖೆಯು ಅಶ್ವಕ್ಕೆ ಹನ್ನೆರಡನೆಯ ವರ್ಷ ಮರಣ ಸೂಚಕವಾಗಿರುತ್ತದೆ. ಈ ಮರಣವು 'ರೂಕ್ಷಾವರ್ತ'ದಿಂದ ಉಂಟಾಗುತ್ತದೆ. ಪ್ರೋಥದ ಮೇಲೆ ದಪ್ಪವಾದ ಹಾಗೂ ದೀರ್ಘವಾದ ರೇಖೆಯ ಇರಲು ಶ್ವಾಸರೋಗದಿಂದ ಹದಿಮೂರನೆಯ ವರ್ಷ. ಪ್ರೋಥದ ಮೇಲೆ ಅಡ್ಡ ಹಾಗೂ ಉದ್ದರೇಖೆಗಳ ಜೋಡಣೆಯ ಕಾಕಪಾದದಂತೆ ಇರಲು ಹದಿನಾಲ್ಕು ವರ್ಷ, ಪ್ರೋಥದ ಮೇಲೆ ಎರಡು ರೇಖೆಗಳು ಇದ್ದು ಮಾರ್ಗದಲ್ಲಿ ಹೋಗುತ್ತಿರುವಾಗ ಭಯದಿಂದ ಹದಿನೈದನೆಯ ವಯಸ್ಸಿನಲ್ಲಿ, ಪ್ರೋಥದ ಮೇಲೆ ಒಂದು ರೇಖೆಯು ಇದ್ದು ಅಂತಹ ಕುದುರೆಯು ಹದಿನಾರನೆಯ ವಯಸ್ಸಿನಲ್ಲಿ ವಾತರೋಗದಿಂದ, ಕೃಷ್ಣವರ್ಣದ ಕುದುರೆಗೆ ಪ್ರೋಥ ಸ್ಥಾನದಿಂದ ಸ್ವಲ್ಪ ದೂರದಲ್ಲಿ ರೇಖೆ ಇರಲು ಹದಿನೇಳನೆಯ ವಯಸ್ಸಿನಲ್ಲಿ ಮರಣ ಹೊಂದುವುದರಲ್ಲಿ ಸಂಶಯವಿಲ್ಲ. ಪ್ರೋಥ ಸ್ಥಾನದಲ್ಲಿ ಯೂಪ ಅಥವಾ ಚೈತ್ಯಾಕೃತಿ ಇರಲು ಹದಿನೆಂಟನೆ ವರ್ಷದಲ್ಲಿ ಜಲದಲ್ಲಿ ಮುಳಗಿ ಮರಣವನ್ನು ಹೊಂದುತ್ತದೆ. ಪ್ರೋಥ ಸ್ಥಾನದಲ್ಲಿ 'ಶ್ಯಾವ' ಸನ್ನಿಭವಾದ ರೇಖೆಯು ಇರಲು ಇಪ್ಪತ್ತೊಂದನೆಯ ವಯಸ್ಸಿನಲ್ಲಿ ವಿಷದ ಕಾರಣವಾಗಿ ಮರಣ ಹೊಂದುವದು.

ಅಶ್ವದ ಪ್ರೋಥ ಸ್ಥಾನದಲ್ಲಿ ಸ್ರುಕ್, ಸ್ವಸ್ತಿಕ, ವರ್ಧಮಾನ, ನಂದ್ಯಾವರ್ತ, ಶ್ರೀ ವೃಕ್ಷ ಇಂತಹ ಶುಭ ಚಿಹ್ನೆಗಳು ಇರಲು ಶುಭ ಪ್ರದವಾಗಿದ್ದು, ಮೂವತ್ತನೇ ವರ್ಷದಲ್ಲಿ ಮರಣ ಹೊಂದುವದು. ಪ್ರೋಥದಲ್ಲಿ ಚಕ್ರ, ಅಥವಾ ವಜ್ರದ ಚಿಹ್ನೆಗಳು ಇರಲು ಮೂವತ್ತೊಂದು ವರ್ಷ, ಅಶ್ವದ ಪ್ರೋಥದಲ್ಲಿ ಅರ್ಧಚಂದ್ರಾಕೃತಿಯ ರೇಖೆ, ಭಾಸ್ಕರ (ಸೂರ್ಯ) ಸಮಾನವಾದ ರೇಖೆಯು ಇದ್ದರೆ ಮೂವತ್ತೆರಡನೆಯ ವಯಸ್ಸಿನಲ್ಲಿ ಮರಣ ಹೊಂದುತ್ತದೆ."[೩೦]

೪.೩.೩.೧೧. ದಂತ ಲಕ್ಷಣ : ಅಶ್ವಗಳ ಬಿದ್ದ ಹಾಗೂ ಎರಡನೇ ಬಾರಿ ಹುಟ್ಟಿದ ಹಲ್ಲುಗಳ ಪರೀಕ್ಷೆಯಿಂದ ಅಶ್ವಗಳ ವಯಸ್ಸನ್ನು ನಿರ್ಧರಿಸಲಾಗುವುದು. ಆರು ಬೆಳ್ಳಗಿನ ಹಲ್ಲುಗಳಿದ್ದರೆ ಅದು 'ಶಿಶು' ಈ ಹಲ್ಲುಗಳು ಸ್ವಲ್ಪ ಕಷಾಯವರ್ಣವನ್ನು ಪಡೆದರೆ (ಬಿಳುಪು ಕಡಿಮೆಯಾದರೆ) ಅಂತಹ ಅಶ್ವವು ಎರಡು ವರ್ಷದ್ದಾಗಿರುತ್ತದೆ. ಹಾಗೆಯೇ ಸಂದಂಶ (ಕಚ್ಚುವ ಹಲ್ಲು) ಮಧ್ಯಮ ಹಾಗೂ ಸಾಲಿನ ಕೊನೆಯ ಹಲ್ಲು ಕ್ರಮವಾಗಿ ಬಿದ್ದು ಮತ್ತೆ ಹುಟ್ಟಿದರೆ ಅಂತಹ ಅಶ್ವಕ್ಕೆ ಮೂರು, ನಾಲ್ಕು ಹಾಗೂ ಐದು ವರ್ಷಗಳಾಗಿವೆ ಎಂದು ತಿಳಿಯಬೇಕೆಂದು ಶಾಸ್ತ್ರಕಾರರ ಅಭಿಮತವಾಗಿದೆ. ಕುದುರೆಗಳಲ್ಲಿ ಉಂಟಾಗುವ ದಂತಗಳ ವರ್ಣವಿಶೇಷ ಜ್ಞಾನದಿಂದ ಅವುಗಳ ವಯಸ್ಸನ್ನು ಈ ರೀತಿಯಾಗಿ ವಿವರಿಸಲಾಗಿದೆ.

> ದಂತೋದ್ಭೇದಂ ಪ್ರವಕ್ಷ್ಯಾಮಿ ವಾಜಿನಾಂ ಮುಖ್ಯಲಕ್ಷಣಮ್ ।
> ಯೋನ ವಿಜ್ಞಾತ ಮಾತ್ರೇಣ ವಯೋಜ್ಞಾನಂ ಪ್ರಜಾಯತೇ ॥ (೧೮೬)
> ಷಡ್‌ಭಿರ್ದಂತೈಃ ಸಿತಾಭೈರ್ಭವತಿ ಹಯಶಿಶುಸ್ತೈಃ
> ಕಷಾಯೈರ್ದ್ವಿರಬ್ದಃ ಸಂದಂಶೈರ್ಮಧ್ಯಮಾಂತ್ಯೈಃ ಪತಿತಸಮುದಿತೈಸ್ತ್ರೀಶ್ಚತುಃ ಪಂಚವರ್ಷ
> ಸಂದಂಶಾನುಕ್ರಮೇಣ ತ್ರಿಕಸಮಗುಣಿತೈಃ ಕಾಲಿಕಾಪೀತ ಶುಕ್ಲೈಃ
> ಕಾಚಾಮಾಕ್ಷಿತಶಂಖಾವಟಚಲನ ಮತಶ್ಚಾವಪಾತಂಚ ವಿದ್ಧಿ ॥ (೧೮೭)

ಶಾಸ್ತ್ರಕಾರನಾದ ಕೆಳದಿಬಸವರಸನು ಹಲ್ಲುಗಳ ಪರೀಕ್ಷೆಯನ್ನು ಕುರಿತು ಹೇಳುತ್ತ ಕೋಷ್ಟಕ ರೂಪದಲ್ಲಿ ಕೆಳಗಿನಂತೆ ವಿವರಿಸಿದ್ದಾನೆ. ಹಲ್ಲುಗಳ ಬಣ್ಣ, ಅವಸ್ಥೆ/ಹೆಸರು, ವಯಸ್ಸು, ಹೀಗೆ ಹರವು ಪಡೆದುಕೊಂಡಿದೆ.

ಹಲ್ಲುಗಳ ಬಣ್ಣ	ಅವಸ್ಥೆ/ಹೆಸರು	ವಯಸ್ಸು
ಕಪ್ಪು	ಕಾಲಿಕಾ	೮
ಹಳದಿ	ಪೀತ	೧೧
ಬಿಳಪು	ಶುಕ್ಲ	೧೪
ಗಾಜಿನಬಣ್ಣ	ಕಾಚ	೧೭

ಜೇನುತುಪ್ಪದ ಬಣ್ಣ	ಮಾಕ್ಷಿಕ	೨೦
ಬಿಳುಪು	ಶಂಖ	೨೩
ಒರಳಿನ ಬಣ್ಣ	ಅವಟ	೨೬
	ಚಲನ	೨೯
	ಅವಪಾತ	೩೨

ಕಾಲಿಕಾ, ಹರಿಣೀ ಶುಕ್ಲಾ ಕಾಚಾ ಚಾಪಿ ಸಮಾಕ್ಷಿತಾ
ಶಂಖಶ್ಚೋಲೂಖಲಂ ಕಂಪಃ ಪತನಃ ಕ್ರಮಾತ್ ||೧೮೮||
ಊರ್ಧ್ವಂಚ ಪಂಚವರ್ಷೇಭ್ಯೋ ಯಾವದ್ವಾತ್ರಿಂಶದಬ್ದಕಮ್
ತ್ರಯಂ ತ್ರಯಂ ಚ ಚಾರ್ವಾಣಾ ಮೇಕೈಕಂ ವ್ಯಂಜನಂ ಭವೇತ್ ||೧೮೯||

ಐದು ವರ್ಷಗಳ ಮೇಲೆ ಮೂರು ಮೂರು ವರ್ಷಗಳ ಅಂತರದಲ್ಲಿ ಮೂವತ್ತೆರಡು ವಯಸ್ಸಿನವರೆಗೆ ಅಶ್ವಗಳ ಹಲ್ಲಿನ ಚಿಹ್ನೆಗಳು ಈ ಕೆಳಗಿನಂತಿರುತ್ತವೆ. ಐದುವರ್ಷದ ಮೇಲೆ ಮೂವತ್ತೆರಡು ವರ್ಷದವರೆಗೆ ಮೂರು ಮೂರು ವರ್ಷದ ಅಂತರದಿಂದ ಅಶ್ವಗಳ ಹಲ್ಲುಗಳ ಚಿಹ್ನೆಗಳು ಇದ್ದು, ಹನ್ನೊಂದನೆಯ ವರ್ಷಕ್ಕೆ ಹಳದಿಬಣ್ಣ, ಹಸಿರು, ಮಾಕ್ಷಿಕ, (ಜೇನು ತುಪ್ಪದ ಬಣ್ಣ) ಅವಟ ಉಲೂಖಲ (ಒನಕೆ-ಒರಳು) ರಂಧ್ರ, ಛಿದ್ರ ಇದ್ದು ಚಲನ ಕಂಪ ಅಲ್ಲಾಡುವುದು. ಪತನ ಅವಪಾತ ಬೀಳುವುದು.

ವಯಸ್ಸು	ಹೆಸರು/ಚಿಹ್ನೆ / ಅವಸ್ಥೆ
(೫+೩) = ೮	ಕಲಿಕಾ
(೮+೩) = ೧೧	ಹರಿಣೀ
(೧೧+೩) = ೧೪	ಶುಕ್ಲಾ
(೧೪+೩) = ೧೭	ಕಾಚ
(೧೭ +೩) = ೨೦	ಸಮಾಕ್ಷಿಕ
(೨೦+ ೩) = ೨೩	ಶಂಖ
(೨೩ +೩) = ೨೬	ಉಲೂಖಲ
(೨೬+ ೩) = ೨೯	ಕಂಪ
(೨೯ +೩) = ೩೨	ಪತನ”[೫೧]

ಹೀಗೆ ಕುದುರೆಯ ಹೆಸರು ಮತ್ತು ಬಣ್ಣ, ಅವಸ್ಥೆ, ಚಿಹ್ನೆಗಳ ಮೂಲಕ ಕುದುರೆಯ ವಯಸ್ಸನ್ನು ಹಲ್ಲುಗಳ ಬೆಳವಣಿಗೆಯ ಮೂಲಕ ಸಂಖ್ಯೆಯ ರೂಪದಲ್ಲಿ ವಿವರಿಸಿದ್ದುಂಟು. ಇವು ಹೆಚ್ಚು ನಿಖರವಾಗಿದ್ದು ಪರಿಪೂರ್ಣವಾದ ಮಾಹಿತಿಯನ್ನು ಓದುಗರಿಗೆ ತಲುಪಿಸುವಂತೆ ಮಾಡಿದೆ. ಅಶ್ವದ ಕಿವಿಯನ್ನು ಸ್ವಲ್ಪ ನುಲಿದರೆ ಆ ಕಿವಿಯು ಕೆಂಪು ಸಿಂಧೂರದಂತೆ ಕೆಂಪಾಗುತ್ತ ಇರುವ ಅಶ್ವವು ದೀರ್ಘ ಕಾಲ ಬಾಳುತ್ತದೆ.

೪.೪. ಕುದುರೆಯ ಅಂಗರಚನೆ : ಸ್ವಭಾವ

ಶಾಸ್ತ್ರರಚನೆಯಲ್ಲಿ ಕುದುರೆಯ ಅಂಗರಚನೆ ಮತ್ತು ಅವುಗಳ ಸ್ವಭಾವ ಪ್ರಮುಖವಾದದ್ದು ಹಾಗಾಗಿ ಅಗ್ನಿಕರ್ಮ, ಶಸ್ತ್ರಕರ್ಮಗಳಿಗೆ ಅತ್ಯಂತ ಉಪಯುಕ್ತವಾದ ಜ್ಞಾನವೆಂದು ತಿಳಿದು ಅವುಗಳ ಕುರಿತು ವಿವರಿಸಲಾಗಿದೆ.

"ದಂತಪೀಠಿಕೆ, ಗಂಧ, ಸೃಕ್ಕಿಣಿ, ಜಿಹ್ವಾಬಂಧ, ತಾಳಿಗೆದೆರೆ, ತಾಳುವಂಶ, ದಂತ, ದಂಷ್ಟ್ರ, ಪಾರಿಪಕ್ಷ, ಮಧ್ಯ, ಸಂದಂಶ, ಕೆಂಬಲ್ಲು, ಅಗ್ರದಂತ, ಬಾಹ್ಯ, ಅಗ್ರ, ತಳಮೂಲ, ಓಷ್ಠ, ಅಧರೋಷ್ಠ, ಪ್ರಪಾನ, ಪ್ರೋಥ, ನಾಸಾಪುಟ, ಘೋಣ, ನಾಸಾವಂಶ, ನಯನಾಶ್ರುಪಾತ, ವರ್ಕುಣಿ, ಕ್ಷಣಿ, ಆಲಿ, ಶುಕ್ಲ, ಕೃಷ್ಣಭಾಗ, ಸಿತಭಾಗ, ವೃಷಿಭಾಗ, ನಯನಾಕ್ಷಿಕೂಟ, ಭ್ರೂಮಧ್ಯ, ಭ್ರೂಕುಟಿ, ಕಣೀರ, ಆಗಸ, ಅಪಾಂಗ, ಸ್ತೂಪ, ಲಲಾಟ, ಶಿರ, ಕಿವಿ, ಕರ್ಣ, ಕಟಕ, ಚಿಬುಕ, ಅಣು, ಹನು, ಗಂಡ, ಹನುಚಕ್ರ, ನಿಗಳ, ಬೆಡಗು, ಬೆಡವು, ವರ್ಗಣಿ, ಮನ್ಯು, ಮಧ್ಯೆ, ಗಳ, ತಲೆ, ಹೆಡೆ, ಗ್ರಿವ, ಸ್ಕಂಧ, ಕೇಸರ, ಕಾಕಸೆ, ಕಕ್ಷ, ಕಂಠ, ನಿಗಳ, ಜತ್ರು, ವಕ್ಷ, ಕ್ರೋಳ, ವಂಶ, ಮುಯ್ಯು, ದಾವ, ಬಾಹ್ಯ, ಜಾಂಗಳ, ಕೇಣ, ಜಾನು, ಕಟಕ, ಪಾಣಿ, ಮದಿಸಂದು, ನಾಭಿ, ಜಾನುಮಂಜರ, ಜಂಘೆ, ಪಳಿಹತ್ತ, ಗುದ, ಕೂರ್ಚೆ, ಕಳೆ, ಇಳಿಕೆ, ಹೃದಯ, ಶಿಶ್ನೆ, ಜಠರ, ಕಕ್ಷ, ವಾಸಾಕೋಷ್ಠ, ಕುಕ್ಷಿ, ಕಕುದು, ರಂಧ್ರ, ಉಪರಂಧ್ರ, ಮೇಖಳೆ, ರೋಮ, ರಾಜಿ, ಕಕುಮಧ್ಯ, ಆಸವ, ಪೃಷ್ಠ, ಮಲಕುಟ, ತಿಕ, ರೋಹಿಣಿ, ಪಾಂಡು ಜಘನ, ಪುಚ್ಛದಂಡ, ಮತ್ತಿಕೆ, ರೋಮಸ್ತ, ಬಾಲದಂಡ, ಪಾನ, ಶ್ವೇತಪಿಂಡ, ಚಟುಳ, ಶಕ್ತಿ, ಶಿವನಿ, ಮುಷ್ಕ, ವಂಖಣ, ಮೋಹ, ನಾಭಿ, ಬಕ್ಕು, ಶಿಶ್ನ, ಶಿಶ್ನಾಗ್ರ, ಕರ್ಣಿಕೆ ಶಿಶ್ನಧಾರೆ, ಅಂಡಜಾತ, ಪಾಂಡುಪಿಂಡ, ಸ್ತುರೆ, ಮಂಜರಿ, ಶಂಖಿ, ಕೇಣ, ಅಪರ, ಭಾಗೆ, ಯೋನಿ, ಸ್ತನ, ಮುಂತಾದ ಸಮಸ್ತ ಭಾಗಗಳನ್ನು ದೇಹದ ಅಂಗರಚನೆಯ ಅನುಗುಣವಾಗಿ ಪಟ್ಟಿಮಾಡಿ ಸುಮಾರು ೧೯೦ ಅವಯವಗಳು ಕುದುರೆಯಲ್ಲಿ ಕಂಡು ಬರುತ್ತವೆ."[೨೨] ಅವುಗಳ ವಿಚಾರವನ್ನು ಸುದೀರ್ಘವಾಗಿ ಈ ಕೆಳಗಿನಂತೆ ವಿವರಿಸಲಾಗಿದೆ.

ಕೆಳಗಿನ ಮೇಲಿನ ಹಲ್ಲುಗಳ ಮೊದಲ ಸಂದುಗಳನ್ನು ಪೀಠಿಕೆಯೆಂದೂ, ತಳಗಳ ಅಣಲ ಮೇಲಿನ ಹಲ್ಲು ಗಂಧವೆಂದೂ, ಕಟವಾಯಿ ಸಂದುಗಳನ್ನು ಸೃಕ್ಕಣಿ, ಮೇಢ್ರ ಸ್ಥಾನಗಳನ್ನು ಜಿಹ್ವಾಸ್ಥಂಭವೆಂದೂ, ತಾಳುಗೆಯಿಂದ ನಾಲಿಗೆಯ ಮೇಲೆ ಇರುವ ನಾಲಿಗೆಯ ಕೆಳಗೆ ತಾಳುಗೆ ಎಂದೂ, ತಾಳಿಗೆಯ ತೆರೆ ಮೂವತ್ತೆರಡು ಅರ್ಧಕೂರ್ಮ, ತೆರೆಗಳ ನಡುವಿನ ರೇಖೆಗಳು ವಾಜಿಯೆಂದೂ, ಆ ತೆರೆಗಳ ಮೇಲಣ

ರೇಖೆ ತಾಳುಗೆ, ಅಣಲಲ್ಲಿ ಹುಟ್ಟಿದ ಹಲ್ಲು ದಂತವೆಂದು, ಅಣಲುಗಳ ದಾಡೆಯ ಹಲ್ಲು ದಂಷ್ಟ್ರ, ಕಡೆಯ ಹಲ್ಲುಗಳು ನಾಲ್ಕು ಪಾರಿಪಕ್ವ, ನಡುವಣ ನಾಲ್ಕು ಹಲ್ಲು ಮಧ್ಯವೆಂದೂ, ಮುಂಬಲ್ಲು ನಾಲ್ಕು ಸಂದಂಶ, ಮೇಲಿನ ಅಗ್ರಹಲ್ಲುಅಗ್ರ. ಆ ಹಲ್ಲ ಹೊರಗೆ 'ಬಾಹ್ಯ'ವೆಂದೂ ಹಲ್ಲಿನ ಒಳಗೆ ಅಭ್ಯಂತರವೆಂದೂ, ತುದಿಗಳನ್ನು ಅಗ್ರವೆಂದೂ, ಕಿವಿಯ ಮೊದಲನು 'ಮೂಲ'ವೆಂದೂ, ಹಲ್ಲು ಮುಚ್ಚಿರಲು ಹಲ್ಲ ಕೆಳಗಿನ ಹಲ್ಲತಾಳ ಪಲ್ಲೋಷ್ಟವೆಂದೂ, ಅದರ ಕೆಳಗಿನ ಭಾಗ ಚುಬುಕ, ಮೇಲಿನ ತುಟಿಯ ನಡುವಿನ ಭಾಗ ಪ್ರಸ್ಥಾನ, ಮೇಲಿನ ತುಟಿಯು ಉತ್ತರೋಷ್ಟ, ತುಟಿಯ ಕಡೆ ಘೋಣ, ಮೂಗಿನ ಕಂಬಿಯು ನಾಸಾವಂಶ, ಮೂಗಿನ ಒಳಗೆ ಸ್ರೋತಮಾರ್ಗ. ಕಣ್ಣೊಳಗಿನ ಮೊದಲ ನಯನಾಶ್ರುಪಾತವೆಂದು, ಕಣ್ಣ ಮೇಲಿನ ಎವೆಗಳು ಅಕ್ಷಿಪಾತವೆಂದೂ, ಕಣ್ಣು ಮುಚ್ಚಿರುವ ಹೊಟ್ಟೆಯನ್ನು ವಕ್ಕುಣಿಕೆಯೆಂದೂ, ಅದರ ಮೇಲಿನ ರೇಖೆಯನ್ನು ಯಕ್ಷಿಣಿಯೆಂದು ಕರೆಯುತ್ತಾರೆ.

ಅದೇ ಕಣ್ಣೊಳಗಿನ ಬಿಳಿಯ ಆಲಿಯನ್ನು ಶುಕ್ಲವೆಂದೂ, ಕಣ್ಣಿನ ಬಿಳಿಪಿನ ಭಾಗದ ಕಪ್ಪನ್ನು ಕೃಷ್ಣಭಾಗವೆಂದೂ, ನಡುವಿನ ಭಾಗ ದೃಷ್ಟಿ, ಕಣ್ಣ ಹೊಟ್ಟೆಯ ಮೇಲಿನ ಭಾಗಕ್ಕೆ ನಯನಾಕ್ಷಿರೂಪ, ಹೊರಗಿನ ಹುಬ್ಬಿಗೆ ಭ್ರೂವೆ, ಎರಡು ಹುಬ್ಬಿನ ನಡುವಿನ ಭಾಗ ಭ್ರುಕುಟಿ, ಕಣ್ಣ ಮೊದಲಿನ ಮಾಂಸದ ಕೆಂಪಿಗೆ ಕಣ್ಣೀರ, ಕಣ್ಣೀರ ಬಿಳಿಭಾಗ ಅಥವಾ ಸುಸಿರಕ್ಕೆ ಆಕಾಶವೆಂದೂ, ಕಣ್ಣ ಹೊರಗಿನ ಕಡೆಗಣ್ಣಿಗೆ ಅಪಾಂಗವೆಂದೂ, ಸ್ತೂಪದ ಹುಬ್ಬಿನ ಎಡೆಯನ್ನು ಲಲಾಟಿಯೆಂದೂ, ಆ ಲಲಾಟವನ್ನು ಸ್ತೂಪ ಎನ್ನುವರು.

ಎರಡು ಕಿವಿ ಎಡೆಯನ್ನು ಶಿರವೆಂದೂ, ಅದರ ನಡುವಿನಭಾಗಕ್ಕೆ ಮಸ್ತಕ, ಅದರ ಎರಡು ಕೆಲಸವನ್ನು ಕಿವಿಕರ್ಣವೆಂದೂ, ಕಿವಿಯ ಮುಂದಿನ ರೇಖೆಗೆ ಕರ್ಣಕುಡಿ, ಕಿವಿಯೊಳಗಿನ ಬಯಲಕ್ಕೆ ಶ್ರೋತ್ರಾಣಿಯೆಂದೂ, ಹಣೆ, ಕಿವಿಗಣ್ಣೆಡೆಯಲ್ಲಿ ಕಟಕಟವೆಂದೂ, ಚುಬುಕದ ಮೇಲಿನ ಅಣಲಿಗೆ ಹನುವೆಂದೂ, ಹನುವಿನ ನಡುವಿನ ಭಾಗಕ್ಕೆ ಅಥವಾ ಹೂವಿಗೆ ಗಂಡ, ಗಂಡದ ಕೆಳಗಿನ ಭಾಗ ಪೊರಗಣ, ಇದರ ಕೆಳಗಿನ ಭಾಗಕ್ಕೆ ಹನುಚಕ್ರ, ಹಲ್ಲಾದಿಯಾದ ಹನುಕಡೆ ನಾಲ್ವತ್ತೇಳನ್ನು ತಿಕ ವೆಂದೂ, ಕುದುರೆಯ ಕೊರಳ ನಡುವಿನ ಪ್ರದೇಶವನ್ನು ನಿಗಳವೆಂದೂ, ಕಿವಿಗಳ ಹೊರಗಡೆ ಭಾಗವನ್ನು ಬೇಡುಗೆಯೆಂದೂ, ಬೇಡುವಿನ ಸಮೀಪ ಇರುವ ಭಾಗಕ್ಕೆ ವರ್ಣಣಿಯೆಂದೂ, ನಡು ಕಂಡನಾಳಿಕೆಯ ಭಾಗಕ್ಕೆ ಮಧ್ಯವೆಂದೂ, ಮಧ್ಯಗಳ ತಲೆಯ ಎಡೆಯನ್ನು ಗ್ರೀವವೆಂದೂ, ಅದರ ಮೇಲಿನ ಹೆಗಲಕ್ಕೆ ಸ್ಕಂದವೆಂದೂ, ಕಂದದ ಮೇಲಿನ ವಳಯವನ್ನು ಕೇಸರವೆಂದೂ, ಕೇಸರದಿಂದ ಕೆಳಗೆರಡನ್ನೂ ವೃದ್ಧರ ಕಂದವೆಂದೂ, ಆ ಕೇಸರದ ಕೆಲಗಳನ್ನು ಕಾಕಸೆಯೆಂದೂ, ಕೊರಳಿನ ನಡುವಣ ನೀಳವೆಂದೂ, ಆ ನೀಳಕ್ಕೆ ಕಕ್ಷೆಗಳೆಂದೂ, ಆ ಕಕ್ಷಗಳ ನಡುವನ್ನು ಕಂಟಿಕವೆಂದೂ, ಆ ಕಂಠದ ನೀಳ ಕಡೆಯ ಹನ್ನೊಂದು ಎನ್ನುವರು. ಕೊರಳ ಕೆಳಗಿನ ಭಾಗಕ್ಕೆ ವಕ್ಷವೆಂದೂ, ಆ ವಕ್ಷದೆಡೆಯನ್ನು ಕೋಳವೆಂದೂ, ಆ ವಕ್ಷವನಾಶ್ರೈಯಿಸಿದ ಠಾವು ಎರಡಕ್ಕೆ ಕುಟಿಸವೆಂದೂ. ಕುಂದಿಯ ಮೊದಲಾಶ್ರಯವನ್ನು ದಾಮವೆಂದೂ, ದಾಮದಿಂದ ಕೆಳಗೆ ಬಾಹ್ಯವೆಂದೂ, ಆ ಬಾಹ್ಯಮೂಲವನ್ನು

ಜೋಳಗವೆಂದೂ, ಆ ಬಾಹ್ಯದೊಳಗಿನ ಕಟಿಗಳಿಗೆ ಕೇಣವೆಂದೂ, ಬಾಹ್ಯದ ಕೆಳಗಿನ ಮೊಳಕಾಲ ಬಾಹ್ಯವೆಂದೂ, ಆ ಮೊಳಕಾಲ ಕರಟವಂಕವೆಂದು ಕರೆಯುವರು. ಮೊಳಕಾಲಿನ ಮೇಲೆ ಮಂಡಿ ಸಂದನ್ನು ಜಾನುವೆಂದೂ ಆ ಜಾನುವಿನ ಕೆಳಗಿನ ಭಾಗವನ್ನು ಜಂಘೆಯೆಂದೂ, ಜಂಘೆಯ ಕೆಳಗಿನ ಭಾಗವನ್ನು ಪಳಿಹಸ್ತವೆಂದೂ, ಮೊಳಕಾಲಿನ ಕೆಳಗೆ ಪಳಿಹಸ್ತವನ್ನು ಹೊಂದಿಕೊಂಡಿರುವ ಭಾಗಕ್ಕೆ ಕೂರ್ಚೆಯೆಂದು ಕೂರ್ಚೆಯ ಕೆಳಗಿನ ಭಾಗವನ್ನು ಕಳೆಯೆಂದೂ, ಆ ಕಳೆಯರಡು ಕೆಲಸವನ್ನು ಮಿನಿಸಿಯೆಂದೂ. ಕಳರದಿಂದ ಪಾಶೆಯೆಂದೂ ಆಜಂಘೆಯ ಕೆಳಗಿನ ಹಾಗೂ ಮುಂದಿನ ಕಾಲುಗಳ ಪ್ರದೇಶಗಳಲ್ಲಿ ಮೊದಲಿಗೆ ಇಪ್ಪತ್ತೊಂದು ಇವೆ ಎಂದು ಗುರುತಿಸಿದ್ದು, ಅಲ್ಲಿಂದ ಕೆಳಗಿನ ಭಾಗವನ್ನು ಹೃದಯವೆಂದೂ, ಆ ಹೃದಯದ ಮಧ್ಯಭಾಗವನ್ನು ನಾಭಿಯೆಂದು ಕರೆಯುವರು. ಆಸನದಿಂದ ಕೆಳಗಿನ ಭಾಗಕ್ಕೆ ಬರೆಯಲೊತ್ತವೆಂದೂ, ಕೋಷ್ಟವೆಂದೂ ಆ ಕೋಷ್ಟದ ಕೆಳಗಿನ ರೇಖೆಗಳನ್ನು ಕುಕ್ಷಿಯೆಂದೂ, ಕುಕ್ಷಿಯ ಮೇಲಿನ ಭಾಗಕ್ಕೆ ಕುಕುದಿಯೆಂದು, ಆ ಕುಕ್ಷಿಯ ಒಳಗಿನ ಮತ್ತು ಹೊರಗಿನ ಭಾಗವನ್ನು ಕಕುದಿಯೆಂದೂ, ಅದರ ಸಂಧಿಯ ಎಡೆಯನ್ನು ರಂಧ್ರವೆಂದೂ ಕರೆಯುವರು.

ನಾಭಿಯ ರಂಧ್ರದ ಎಡೆಯಲ್ಲಿರುವ ಭಾಗಕ್ಕೆ ಉಪರಂಧ್ರವೆಂದೂ, ಆ ರಂಧ್ರಕ್ಕೂ ಉಪರಂಧ್ರಕ್ಕೂ ಹೊಂದಿಕೊಂಡ ನಡುವಿನ ಪ್ರದೇಶಕ್ಕೆ ಮೇಖಳೆಯೆಂದು ಕರೆಯುವರು. ಆ ನಾಭಿಕೋಶದ ಮಧ್ಯದ ಭಾಗವನ್ನು ರೋಮರಾಜಿಯೆಂದೂ, ಕಕುದಿಗೂ, ರೋಮಕ್ಕೂ ಹೊಂದಿಕೊಂಡಿರುವ ನಡುವಿನ ಭಾಗ ಕಾಕಸೆಯೆಂದೂ, ಕಾಕಸೆಗೆ ಮತ್ತು ಶಾಸನಕ್ಕೆ ಮಧ್ಯವೆಂದೂ, ಆ ಕಕುವಿನ ಹೊರಗಿನ ಭಾಗವನ್ನು ಆಸನವೆಂದೂ, ಆಸನದ ಹೊರಗಿನ ಭಾಗವನ್ನು ಪೃಷ್ಠವೆಂದೂ, ಆಸನದ ಪೃಷ್ಠದ ನಡುವಿನ ಭಾಗಕ್ಕೆ ನೆಟ್ಟಲುವನ್ನು ಮಲಕುಠಾರಿಯೆಂದೂ, ತಿಕದಿ ಕೆಲವನ್ನು ರೋಹಿಣಿಯೆಂದೂ, ಅದರ ಕೆಳಗಿನ ಭಾಗವನ್ನು ಪಾಂಡುವೆಂದೂ. ಜಂಘೆಯ ಕೆಳಗಿನ ಭಾಗವನ್ನು ಬಾಲದ ದಂಡೆ ಮತ್ತು ಪುಚ್ಛದಂಡವೆಂದೂ ಕರೆಯುವರು.

ಬಾಲದ ಕೆಳಗಿನ ಭಾಗವನ್ನು ಗುದವೆಂದೂ, ಆ ಗುದದ ಎರಡು ಕೆಲನವನ್ನು 'ಮೃತ್ತಿಕೆ'ಯೆಂದೂ, ಆ ಮೃತ್ತಿಕೆಯ ಕೆಳಗಿನ ಸ್ಥಳವನ್ನು ಆಸನವೆಂದೂ, ಬಾಲಂಡೆಯ ಆ ಬಾಲದ ಮರೆಯೊಳಗೆ ಇರಲು ಪಾನವೆಂದೂ, ಆ ಪಾನದ ಎರಡು ಕೆಲಸವನ್ನು ಶ್ವೇತಪಿಂಡವೆಂದೂ, ಅದರ ಕೆಳಗೆ ಇರುವ ಭಾಗಕ್ಕೆ ಚಟುಳವೆಂದೂ, ಆ ಕೆಳಗಿನ ಭಾಗವನ್ನು ಶಕ್ತಿಯೆಂದೂ, ಶಕ್ತಿ ಶಿವನಿಯ ಮುಷ್ಕದ ಎಡೆಯನ್ನು ಬಣ್ಣವೆಂದೂ, ಆ ಶಿವನಿಯದ ಎಡೆಯನ್ನು ಹೋಮವೆಂದೂ, ಕರೆಯುತ್ತಾರೆ.

ಅಂಡದ ಹೊಕ್ಕುಳದ ಮಧ್ಯಭಾಗವನ್ನು ಶಿಶ್ನವೆಂದೂ, ಆ ಶಿಶ್ನದ ತುದಿಯನ್ನು ಕರ್ಣಿಕೆಯೆಂದೂ, ಮೂತ್ರ ಬರುವ ಸ್ಥಳವನ್ನು ಶಿಶ್ನದ್ವಾರವೆಂದೂ, ಮೂತ್ರಕೋಶದ ಪಿಂಡದ ಕೆಳಗಿನ ಭಾಗವನ್ನು ಅಂಡಜಾತವೆಂದು ಕರೆಯುತ್ತಾರೆ. ಸ್ತುರೆಯ ಮೇಲಿನ ಭಾಗವನ್ನು ಚಕ್ರಶಕ್ತಿಯೆಂದೂ, ರೋಹಿಣಿಯ ಸಂಧಿಯ ಕೆಳಗಿನ ಸ್ಥಳಕ್ಕೆ ಸೂಳವೆಂದೂ, ಅದರ ಪಾಶದ ನಡುವಿನ ಭಾಗವನ್ನು ಸಂಧಿಯೆಂದೂ, ಯುಗ

ಸಂಧಿಯ ಕೆಳಗಿನ ಭಾಗ ಶಕ್ತಿನಿ. ಆ ಪಾಂಡು ಪಿಂಡ ಗಲ್ಲದ ಕೆಳಗೆ ಇರುವ ಸ್ಥಳಕ್ಕೆ ಊರುವೆಂದೂ, ಊರುವಿನ ಕಣ್ಣಕಡೆಗೆ ತಾನಾಕ್ಕೆ, ಪಾಂಡು ಪಿಂಡ ಎಂಬ ಊರುವಿನ ಕೆಲಸವನ್ನು ಪಾಂಡುಪಿಂಡವೆಂದೂ, ಚಕ್ರಶಕ್ತಿಯ ಕೆಳಗಿನ ಭಾಗ ಜಂಘೆ, ಸ್ತುರೆಯ ಕೆಳಗಿನ ಭಾಗ ಮಂಜರಿ. ಅದರ ನಡುವಿನ ಭಾಗ ಶಂಖ, ಸ್ತುರೆಯ ಕೆಳಗಿನ ಭಾಗ ಜಂಘೆ, ಅದರ ಮೇಲಿನ ಕಲೆಗಳಿಗೆ ಕೇಣ, ಶಿವನಿಯ ನಡುವಿನ ಭಾಗ ಯೋನಿ, ಅದರ ಅಪರ ಹಿಂದಣ ಭಾಗ ಮೂವತ್ತು ಮೂರುವೆಂದೂ ಕಡವನಿಗೂ, ಗೋಳಿಗೆಗೂ ಒಂದೇ ಪ್ರಕಾರವಿದು. ಅದು ಎಂಟು ಪ್ರಕಾರದ ಲಕ್ಷಣವು ಸರಿಯಾಗಿ ಗೋಳಿಗೆಗೆ ಇದ್ದು, ಯೋನಿಯು, ಮೊಲೆಯು ವಿಶೇಷ ಲಕ್ಷಣವನ್ನು ಹೊಂದಿದೆ.

ಹಲ್ಲಿನ ಪೀಠಿಕೆಯಿಂದ ಹಿಡಿದು ಯೋನಿಯ ಕೊನೆಯತನಕ ತೊಂಬತ್ತಾರು ಪ್ರದೇಶಗಳನ್ನು ಹೆಸರಿಸಿ, ಮೊದಲು ನಡು ಕಡೆಗೆ ಕುದುರೆಯ ಮುಖ, ಮೈ, ಬಾಲ, ಬೆನ್ನುಗಳ ಕುರಿತು ವಿವರ ಪೂರ್ಣವಾಗಿ ಚಿತ್ರಿಸಿದ್ದಾನೆ. ಕಣ್ಣು, ಮುಖ, ಕೊರಳು, ಕಿವಿ ಅಂಡ, ಶಿಶ್ನ, ಕಾಲುಗಳು ಇವು ಹತ್ತು ಸ್ಥಾನಗಳು ಕುದುರೆಗಳಿಗೆ ಬಲವನ್ನು ಕೊಡುತ್ತವೆ"[೩೩] ಎಂದು ಶಾಸ್ತ್ರಕಾರನಾದ ಅಭಿನವಚಂದ್ರ ಅಭಿಪ್ರಾಯ ಪಡುತ್ತಾನೆ.

೪.೫. ಸುಳಿಗಳು ಮತ್ತು ಚೇಷ್ಟೆಗಳು

" 'ಆವರ್ತ' ಎಂದರೆ ನೀರಿನ ಸುಳಿಯಂತೆ ಇರುವ (ಕುದುರೆಯ ಮೈಮೇಲೆ ಕಾಣುವ) ಗುರುತು 'ಮುಕುಲ' ಎಂದರೆ ಮೊಗ್ಗಿನಂತೆ ಕಾಣುವ ಗುರುತು 'ಶುಕ್ತಿ' ಕಪ್ಪೆಚಿಪ್ಪಿನಂತಿರುವ ಸುಳಿ, ಹಸುವಿನ ನಾಲಗೆಯಂತೆ ಕಾಣುವುದು. 'ಅವಲೀಢಕ' ನೂರು ಕಾಲಿನ ಹುಳುವಿನಂತಿರುವ ಸುಳಿ. 'ಶತಪದೀ' ಪಾದುಕೆಯಂತೆ ಆಕಾರವಿರುವುದು. 'ಪಾದುಕಾ' ಅರ್ಧ ಪಾದುಕೆಯಂತಿರುವುದು 'ಅರ್ಧಪಾದುಕಾ' ಹೀಗೆ ಅನೇಕ ಸುಳಿಗಳ ಸಂಯೋಗವಿದ್ದರೆ ಅದಕ್ಕೆ 'ಸಂಪಾತ' ಎಂದು ಕರೆಯುವರು. ಹೀಗೆ ಸುಳಿಗಳ ಎಂಟು ಭೇದಗಳನ್ನು ವಿದ್ವಾಂಸರು ಹೇಳಿದ್ದಾರೆ.

ಆದರೆ ಎದೆಯಲ್ಲಿ ಎರಡು ಸುಳಿಗಳು, ತಲೆಯಲ್ಲಿ ಎರಡು ರಂಧ್ರ ಮತ್ತು ಉಪರಂಧ್ರಗಳಲ್ಲಿ ಎರಡೆರಡು, ಹಣೆಯಲ್ಲಿ ಒಂದು, ಪ್ರಮಾಣದಲ್ಲಿ ಹೀಗೆ ಒಟ್ಟು ಹತ್ತು ಸುಳಿಗಳು ಎಂದು ಸರ್ವಜ್ಞ ಸೋಮೇಶ್ವರ ಹೇಳುತ್ತಾನೆ. ನಿಗಾಲದಲ್ಲಿ (ಕುದುರೆಯ ಕತ್ತಿನ ಸಮೀಪದ ಒಂದು ಅಂಗ ಭಾಗ) ಇರುವುದು ದೇವಮಣಿ, ಅದರ ಕೆಳಗೆ ರೋಚಮಾನಕ ಅವುಗಳ ಮಧ್ಯೆ ಕಂಡಾವರ್ತ ಇವು ವಿಶೇಷವಾಗಿ ಪ್ರಶಸ್ತವಾದವುಗಳು. ಹಣೆಯಲ್ಲಿ, ಕಟವಾಯಿಗಳಲ್ಲಿ, ಬಾಹುಗಳ ಚರ್ಮದಿಂದ, ದೇಶಾಂತಗಳಲ್ಲಿ, ಎದೆಯಲ್ಲಿ, ಕಿವಿಯ ಬಳಿ ಇರುವ ಸುಳಿಗಳು 'ಶುಭಾವರ್ತ'ಗಳು."[೩೪]

ಕುದುರೆಯ ವಿವಿಧ ಅಂಗಗಳಿಂದ ಸುಳಿಗಳು ಕಂಡು ಬರುತ್ತವೆ. ಅವುಗಳನ್ನು ಈ ಕೆಳಗಿನಂತೆ ನೋಡಬಹುದು. "ಕುದುರೆಗೆ ಒಳ್ಳೆಯ ಸುಳಿಗಳು ಮೂರು ಭೇದವಾಗಿ ಇರುವವು ಅವು ಎಂಟು

ಸ್ಥಾನಗಳಲ್ಲಿ ನೂರಾರುಗಳಿವೆ. ಕುದುರೆಯ ಹತ್ತು ಸುಳಿಗಳು ಧ್ರುವಪ್ರದ. ಹತ್ತು ಸುಳಿ ಒಳ್ಳೆಯವು ಮತ್ತೆ ಮೂವತ್ತೇಳು ಉತ್ತಮ. ೧೨೭ರ ರೋಮದ ಸುಳಿ ವಜ್ರಿಯೆಂಬುವರು. ಉರದಲ್ಲಿ, ಶಿರದಲ್ಲಿ ಎರಡೆರಡು ರಂಧ್ರೋಪರಂಧ್ರದಲ್ಲಿ ಎರಡೆರಡು ಹಣೆಯಲ್ಲಿಯೂ, ತಿಕದಲ್ಲಿಯೂ ಒಂದೊಂದು ಇರುವುದು. ಕುದುರೆಯ ತಿಕದಲ್ಲಿ ನಾಲ್ಕು ಸುಳಿಯಿರಲು ಅದನ್ನು ಆಳುವವನಿಗೆ ದನವೂ, ಧಾನ್ಯವೂ, ಸುಖವೂ ಉಂಟಾಗುವುದು. ಕುದುರೆಯ ಹಣೆಯಲ್ಲಿ ಬಲಸುಳಿಯಾಗಿ ಎರಡು ಇದ್ದರೆ ಯುದ್ಧಕ್ಕೆ ಹೋದಲ್ಲಿ ವೈರಿಯನ್ನು ಕೊಂದು ಒಡೆಯನಿಗೆ ಜಯವನ್ನುಂಟು ಮಾಡುವುದು. ಕುದುರೆಯ ಹಣೆಯಲ್ಲಿ ನಾಲ್ಕು ಸುಳಿ ಚೌಕವಾಗಿ ಇರಲು ಅದನ್ನಾಳುವವನು ಲೋಕ ಪ್ರಸಿದ್ಧನಾಗುವನು ಮತ್ತು ಪ್ರಸಿದ್ಧ ಅರಸನಾಗುವನು. ಕುದುರೆಯ ವಳಿಯದ ಕೂದಲು ತುದಿಯ ಸ್ಥಾನದಲ್ಲಿ, ಕೊರಳಲ್ಲಿ ಸುಳಿಯಿದ್ದರೆ ಆ ಕುದುರೆ ತನ್ನನ್ನಾಳುವವನಿಗೆ ವೈರಿಗಳ ವೈರತ್ವವನ್ನು ನಾಶಮಾಡಿ ಜಯವನ್ನು ಕೊಡುವುದು. ಕುದುರೆಯ ಉರದಲ್ಲಿ ನಾಲ್ಕು ಸುಳಿಯಿರಲು ಬಹಳ ಐಶ್ವರ್ಯವು ಪರಮಾಯುಷ್ಯವುಂಟಾಗಿ ಹರಷವು ಹೆಚ್ಚುವುದು. ಕುದುರೆಯ ಉರದಲ್ಲಿಯೂ, ಹಣೆಯಲ್ಲಿಯೂ ಒಂದೊಂದು ಸುಳಿಗಳು ಇದ್ದರೆ ಅದನ್ನು ಆಳುವವನಿಗೆ ನೆನೆದ ಕಾರ್ಯಗಳಾಗುವವು. ಕುದುರೆಗೆ ಒಳ್ಳೆಯ ಸುಳಿಗಳು ಹದಿನಾರು, ಹತ್ತು ಸ್ಥಾನದಲ್ಲಿ ಹತ್ತು ಸುಳಿಗಳು ಇರುವವು. ಕುದುರೆಯ ಮೇಲಣ ತುಟಿಯಲ್ಲಿ ಸುಳಿಯಿದ್ದರೆ ತಾಯಿವಳಿವಳು. ಕೆಳಗಣ ತುಟಿಯಲ್ಲಿ ಸುಳಿಯಿರಲು ತಂದೆಗೆ ಮರಣ, ತಿಕದಲ್ಲಿ, ಬಾಲದಲ್ಲಿ ಆ ರೀತಿಯ ಫಲ ಉಂಟಾಗುತ್ತದೆ. ಕುದುರೆಯ ಎಡದ ಭಾಗದಲ್ಲಿ ಸುಳಿಯಿದ್ದರೆ ಹೆಂಡತಿ, ಆಳುವವನಿಗೆ ಸಾವು. ಪ್ರೋಥದೆಡೆಯಲ್ಲಿ ಸುಳಿಯಿದ್ದರೆ ಕುಲನಾಶವಾಗುವುದು. ಕುದುರೆಯ ಮೂಗಿನಲ್ಲಿ ಸುಳಿ ಇರಲು ದ್ರವ್ಯಹಾನಿ, ಕದಪುಗಳಲ್ಲಿ ಇರಲು ಒಡೆಯಸಾಯುವನು. ಅಂಡದ ಮೇಲೆ ಇದ್ದರೆ ಒಡೆಯನನ್ನು ನಾಶಮಾಡುವುದು. ಕುದುರೆಯ ಕಣ್ಣನೀರು ಬೀಳುವ ಠಾವಿನಲ್ಲಿ ಸುಳಿಯಿರಲು ವೈರಾಗ್ಯವುಂಟಾಗಿ ನಂತರ, ಅಗಲಿಕೆಯನ್ನು ಮಾಡುವುದು. ಕುದುರೆಯ ದಾಡೆಯಲ್ಲಿ, ಕಾಲಿನಲ್ಲಿ, ಕೇಸರದಲ್ಲಿ, ತಲೆಯ ಸಂಧಿಯಲ್ಲಿ, ಕೂರ್ಚೆಯಲ್ಲಿ ಎರಡು ತೊಡೆಗಳ ನಡುವೆ ಸುಳಿಗಳು ಇರಲು ಅದನ್ನು ಆಳುವವನಿಗೆ ಹಾನಿಯೂ, ದುಃಖ, ಭಯವೂ ತಪ್ಪದು. ಕುದುರೆಯ ತುದಿಯ ಕಿವಿಯ ಎಡೆಯಲ್ಲಿ ಸುಳಿ ಇರಲು ಒಡೆಯನಿಗೆ ತನ್ನ ಮನೆಯಲ್ಲಿಯೇ ಮರಣ ತಪ್ಪದು. ಕುದುರೆಯ ಸುಳಿಗಳು ಒಂದು ಸ್ಥಾನದಲ್ಲಿ ಇದ್ದರೆ ಧನಹಾನಿ. ಕೊರಳ ಮಧ್ಯದಲ್ಲಿ ಸುಳಿ ಇರಲು ಅದನ್ನಾಳುವವನಿಗೆ ಸಾವನ್ನೈದಿಸುವುದು(ಒದಗಿಸುವುದು). ಕುದುರೆಯ ಎದೆಯಲ್ಲಿ, ದಾಡೆಯಲ್ಲಿ ಇದ್ದ ಸುಳಿಯಿಂದಾಗಿ ಒಡೆಯನಿಗೆ ಸಾವು ತಪ್ಪದು. ತೂರ‍್ಯದ ನಡುವೆಂದರೆ ಕಾಲಲ್ಲಿ ಸುಳಿ ಇರಲು ಅದನ್ನಾಳುವವನ ಮಕ್ಕಳನ್ನು ಕೊಲ್ಲುವುದು. ಕುದುರೆಗೆ ಕಕುಸ್ಥಾನದಲ್ಲಿ ಸುಳಿಯಿದ್ದರೆ ಅದನ್ನಾಳುವವನ ಸಂತತಿಯ ಎಲ್ಲರಿಗೂ ಮಹಾ ಕಷ್ಟವಾಗುವುದು ಮರಣ ತಪ್ಪದು. ಕುದುರೆಗೆ ಮಣಿ ಮೊದಲಾಗಿ ಸುಳಿಯಿರಲು ಮನೆಯಲ್ಲಿ ಒಂದು ಕ್ಷಣವೂ ಇರಿಸಲಾಗದು. ಅದರಿಂದ ಹೆಂಡರು ಸಾಯಿಯುವವರು ಅದರೊಡೆಯನ ರಾಜ್ಯಾಧಿಪತಿಯಾದರೂ ಕೆಡುವನು. ಒಡೆಯನು ಕುದುರೆಯ

ನೋಡ ಬಂದಾಗ ಆ ಕುದುರೆ ಕೋಪದಿಂದ ನೋಡಿ ಅಲ್ಪವಾಗಿ, ಮುಟ್ಟಿಸದೆ ನೋಡುವದಕ್ಕೂ, ಮುಟ್ಟುವದಕ್ಕೂ ಮೊದಲೆ ಮಿಡಿಯುವದು ಅದನ್ನು 'ಧೂಮಕೇತು' ಎಂದು ತಿಳಿದು ಬೇಗ ಬಿಡುವುದು ಉಚಿತ. ಲಕ್ಷಣವಿಲ್ಲದ ಕುದುರೆಗಳು ಬ್ರಾಹ್ಮಣರಿಗೆ ದಾನವ ಕೊಡುವುದು. ಅಲ್ಲದೆ ತನಗೆ ವೈರಿಯಾಗಿದ್ದವಗೆ ಕೊಟ್ಟು ಕಳುಹಿಸುವುದು., ಅಲ್ಲದೇ ದೇವರಿಗೆ ಕೊಡುವುದು ಇಲ್ಲದೇ ಲೋಭವುಂಟಾದರೆ ಅದಕ್ಕೆ ಬ್ರಾಹ್ಮಣರಿಂದ ಹೋಮ, ಶಾಂತಿ,ಕರ್ಮ ದಾನಗಳನ್ನು ಮಾಡುವುದು. ಕುದುರೆಯ ಕಣ್ಣನೀರು ಬೀಳುವ ಠಾವಿನಲ್ಲಿ ಇದ್ದ ಸುಳಿಯ ಕುದುರೆಯನ್ನೇರಿದಾತನು ಯುದ್ಧದಲ್ಲಿ ಅವನ ಕಣ್ಣು ಕಾಗೆಯೂ, ಹದ್ದೂ ತಿಂದು ಹೋಗುವುದು. ಕುದುರೆಯ ಹೊಟ್ಟೆಯಲ್ಲಿ ಮಣಕಾಲ ಕೆಳಗೆ ಸುಳಿಗಳು ಇದ್ದರೆ ಅದನ್ನಾಳುವ ಅರಸ ಯುದ್ಧದಲ್ಲಿ ಸಾಯುವನು. ಕಣಕಾಲಲ್ಲಿ ಸುಳಿಯಿದ್ದರೆ ಅದರಿಂದ ಸೆರೆ ಸಿಕ್ಕು ನೋವನ್ನನುಭವಿಸುವನು. ಕುದುರೆಯ ತುಟಿಯಲ್ಲಿ ಸುಳಿಯಿರಲು ಒಡೆಯನು ಸಾಯುವನು ನಾಭಿಯಲ್ಲಿ ಸುಳಿ ಇರಲು ವ್ಯಾಧಿ ಪೀಡೆಗಳಿಂದ ಬಾಧೆಗಳಿಗೆ ಒಳಗಾಗುವನು. ಕುದುರೆಯ ಕಂಕುಳಲ್ಲಿ ಕೂದಲು ಸೂಳಿಯೂ ಇರಲು ಯುದ್ಧದಲ್ಲಿ ಅಂಬಿನ ಗಾಯದಿಂದ ಸಾಯುವನು. ಪ್ರಜಾಪತಿಯ ಮೂತ್ರ ಸ್ಥಾನದಲ್ಲಿ ಸುಳಿಯಿರಲು ಗಂಡ-ಹೆಂಡಿರು ಸಮೇತ ಸಾಯುವರು. ಕುದುರೆಯ ಗುದದಲ್ಲಿ, ಪ್ರಜಾಪತಿಯಲ್ಲಿ, ಬಾಲದಲ್ಲಿ, ತಿಕದಲ್ಲಿ, ಸುಳಿಯಿರಲು ಒಡೆಯನ ಅಂಬಿನ ಗಾಯದಿಂದ ಕೊಲ್ಲದೆ ಇರದು.

ಕುದುರೆಯ ಪಿಂಡಸ್ಥಾನದಲ್ಲಿ, ಸಂದಿನಲ್ಲಿ, ಅಂಡದಲ್ಲಿ ಬಿಳಿದು ಇದ್ದರೆ ಅದನ್ನು ಯುದ್ಧಕ್ಕೆ ಒಯ್ಯಲಾಗದು ಮತ್ತು ಏರಲಾಗದು. ಕುದುರೆಗೆ ಅಶುಭರೇಖೆ, ಶುಭರೇಖೆ ಕುಟಿನದೆಡೆಯಲ್ಲಿರಲು ಆ ಸುಳಿ ಉಭಯವನು ಕೇಡಿಸುವುದು. ಕುದುರೆಯ ಮಂಡೆಯಲ್ಲಿ ಕೂದಲ ಸಮೂಹ (ರಾಶಿ) ಬಹಳ ಹುಟ್ಟಿದ್ದರೆ ಅದನ್ನು ಶ್ರೇಣಿ ಎಂದು ಕರೆಯುವರು. ಅದು ಅವಲಕ್ಷಣದ ಸುಳಿಯ ದೋಷಗಳನ್ನು ಪರಿಹರಿಸುವದು, ಕುದುರೆಯ ಪೂರ್ವಭಾಗದಲ್ಲಿ ಅಶುಭತೆ ಸೂಚಿಸುವ ಸುಳಿಗಳು ಕೆಲವು ಇರಲು ರೋಚಮಾನವೆಂದರೆ ಕಿರಣಮುಳ್ಳಡೆ ದೋಷವು ಪರಿಹಾರವಾಗುವುದು. ಕುದುರೆಗೆ ಅಪರ ಭಾಗದಲ್ಲಿ ಹಲವು ಸುಳಿಗಳು ದೋಷವಿದ್ದರೂ ಸಹಿತ ಮೇಖಲೆಯಿಂದ ಪರಿಹರಿಸುವುದು. ಕುದುರೆಯ ಸುಳಿ ದಗ್ಧ ಚರ್ಮ ಅಲಂಕಾರವಿಲ್ಲದೆ ಇದ್ದರೆ ಸಮಸ್ತ ದ್ರವ್ಯಗಳನ್ನು ಕೆಡಿಸುವುದು. ಹಣೆಯಲ್ಲಿ ಸುಳಿ ಇರಲು ಬೇಗ ಬಿಡುವದು ಒಳ್ಳೆಯದು. ಕುದುರೆಯ ಮೈಯ ಮರಿಯಾದೆ, ಕುದುರೆಯ ತಲೆಯ ಮೇಲೆ ಕೀಲಕೊಟ್ಟ ಹಾಗೆ ತೋರುತ್ತಿದ್ದರೆ ಅದನ್ನು ತೆಗೆದುಕೊಳ್ಳಲಾಗದು ಮತ್ತು ಅದನ್ನಾಳಲಾಗದು. ಕುದುರೆಗೆ ಪ್ರಜಾಪತಿಯಲ್ಲಿ, ಮೊಲೆಯಲ್ಲಿ ಸುಳಿಗಳು ಇದ್ದರೆ ಅದನ್ನು ಕೊಳ್ಳಲಾಗದು. ಹಲ್ಲು ಸಹಿತವಾಗಿ ಮರಿಹುಟ್ಟಿದರೆ ಮಹಾಕಷ್ಟ. ಕುದುರೆಯ ಬಾಲದ ಕೂದಲು ಕೆಂಪಾಗಿ, ಕೊರಟಾಗಿ, ಎದುರಾಗಿ ಇರಲು ಕೊಳ್ಳಲಾಗದು.

ಕುದುರೆಗೆ ಒಂದೊಂದು ಸ್ಥಾನದಲ್ಲಿ ಕುಂದದೆ ಕೂದಲು ಇರಲು ಉತ್ತಮ. ಅಂಡದಲ್ಲಿ ಕೂದಲು ಹುಟ್ಟಿದರೆ ಮಹಾಕಷ್ಟ. ಕುದುರೆ ಅಂಡ ಒಂದು ಹಿರಿದಾಗಿ ಒಂದು ಕಿರಿದಾಗಿ ಇರಲು ಕುಂದಿದರೆ ಕುಸುಮ

ಇದ್ದರೆ, ನೀಳವಾಗಿರಲು ಕಪಿಯ ಬೀಜದ ಹಾಗೆ ಇರಲು ಮಹಾಕಷ್ಟ. ಹಗಲು ಮತಿವಿಪರೀತವಾಗಿ ಇದ್ದು, ಮೈ ಚೀರುವಧ್ವನಿ ದುಷ್ಟ ಮನಸ್ಸು, ಮುಡುಬು, ಪಾಶವಲ್ಲ ಇಂತಹ ಗುಣಗಳುಳ್ಳ ಕುದುರೆಯನ್ನು ಆಳಲಾಗದು. ಕುಕುಚೆ ಹೆಗ್ಗಂದಿತನು ಎರಡು ಮೊಲೆಯನ್ನುಳ್ಳದ್ದು, ಅವಳಿ ಕಿವಿಯಿರಲು, ಎರಡು ಮುಖವನ್ನುಳ್ಳದ್ದು, ಅಂಡಗಾತ್ರವಾದುದು ಇವೆಲ್ಲವುಗಳಿಂದ ಅತೀಯಾದ ಕಷ್ಟ ಉಂಟಾಗುತ್ತದೆ. ಹಂದಿ, ಹುಲಿ, ಕಪ್ಪೆ, ಬಾಗಿಯಹೂವು, ಕಗ್ಗಿದ್ದು ಕಾಗೆಮುಖ ಕರಾಳಿ ಮೊರಗಿವಿಯಷ್ಟು ಇರುವ ಮನೆಗೆ ಶೋಕವನು, ದುಃಖವನು ಉಂಟು ಮಾಡುವುದು. ಬೆಳಗುಜಾವದಲ್ಲಿ (ಮುಂಜಾನೆ) ಮಂಗಳ ಪಾಠಕರ, ಮದ್ದಳೆಯಧ್ವನಿ, ಶಂಖಧ್ವನಿ ಇವನ್ನಾಲಿಸಿ ಹರುಷದಿಂದ ಹಲುಮೆಣಿಸುವ (ಹುಂಕರಿಸುವ) ಕುದುರೆಯ ಅಧಿಪತಿಗೆ ಜಯವನ್ನುಂಟು ಮಾಡುವುದು. ಪತಾಕೆಗಳ ಬಿಳಿಯ ಕೊಡೆಗಳ, ಆನೆಗಳ ಮುಗಿಲನು, ಸೂರ್ಯನ ಕನ್ನಿಕೆಯರನ್ನು, ಬ್ರಾಹ್ಮಣರನ್ನು, ಪಾತ್ರಗಳನ್ನು, ಹೂವಿನ ಸಮೂಹಗಳನ್ನು ಕಂಡು ಹಲುಮಣಿಸುವ ಕುದುರೆಗೆ ಆಯುಷ್ಯವೂ, ಶುಭವೂ ಉಂಟಾಗುತ್ತದೆ. ಮೈಯ್ಯುವಾಗ ಹರುಷವಾಗಿ ಬಾಯಿ ತುಂಬಿದ ಹುಲ್ಲು ಸಹಾ (ಹಲುಮಣಿಸಲು) ಹುಂಕರಿಸಲು ಬಾಯ ಕಾಂತಿ ಮಿಂಚಿನ ಹಾಗೆ ಹೋಳ್ದಿರೆ ಅದರ ನಗೆ ಉತ್ತಮವಾದದ್ದು. ಧೂವಾಳಿಗೆ ಹೋಗುವಾಗ ತಿರುಗಿ ಬರುವಾಗ ಪೌಜು ಕಂಡಾಗ ಹರುಷದಿಂದ ಹುಂಕರಿಸಲು ಒಡೆಯನಿಗೆ ಧನಲಾಭ ಉಂಟಾಗಿ ಹರುಷವನ್ನು ತಂದುಕೊಡುವುದು.

ಮುಂಜಾನೆಯ ಸಮಯದಲ್ಲಿ ಕುದುರೆ ಅಗ್ನಿಯ ದಿಕ್ಕಿನಲ್ಲಿ ಮುಖ ಮಾಡಿ ಹರುಷದಿಂದ ಬಿಡದೆ ಹುಂಕರಿಸುತ್ತಿರಲು ಅದರ (ಪತಿ) ಒಡೆಯ ಕಿಚ್ಚಿನಲ್ಲಿ ಬೆಂದು ಮರಣವಪ್ಪುವನು. ಕುದುರೆ ಸುರ್ಯೋದಯದ ಸಮಯದಲ್ಲಿ ದೆಸೆಗಳ ನೋಡಿ ಮೂಡ ಮುಖವಾಗಿ ನಿಂತು ಗರ್ಜಿಸಲು, ಹುಂಕರಿಸಲು, ಯುದ್ಧಕ್ಕೆ ಪಯಣವ ಹುಟ್ಟಿಸುವುದು, ಎರಡನೆಯ ಝಾವದಲ್ಲಿ ಕುದುರೆ ತೆಂಕಣ ಮುಖವಾಗಿ ನಿಂತು ಗದರಿ ಹುಂಕರಿಸಲು, ಒಡೆಯನಿಗೆ, ಆತನ ಮಕ್ಕಳಿಗೆ ಮತ್ತು ಆತನ (ಪರ್ಗಡೆಗೆ) ಪರಿವಾರಕ್ಕೆ ಸಾವುತಪ್ಪದು. ಕುದುರೆ ಪಡುವಣಕ್ಕೆ ಮುಖಮಾಡಿ, ವಾಯುವ್ಯಕ್ಕೆ ಮುಖಮಾಡಿ ಬಹಳ ಧ್ವನಿಯಾಗಿ ಹಲವು ಸೂಳು ಹುಂಕರಿಸುತ್ತಿರಲು, ಪೂರ್ವ ರಾತ್ರಿಯಲ್ಲಾದರೆ ಆ ಒಡೆಯನ ಹೆಂಡತಿಗೂ, ಹೆಗ್ಗಡೆಗೂ ಮರಣ ತಪ್ಪದು. ಬಡಗ ಮುಖಾಮಾಡಿ ನಡುವಿಕುಳು ರಭಸದಿಂದ ಹುಂಕರಿಸುತ್ತಿರಲು ತನಗೆ ಪ್ರಿಯವಾದ ಸಂಗಾತಿ ಸಂಘ ದೊರಕುವುದು. ಆವಾಗಲು ಕುದುರೆ ಸಣ್ಣ ಕಟ್ಟಿಗೆಗಳ ತಿನ್ನುತ್ತಿದ್ದು, ನಿಸ್ಸಾರವಾಗಿದ್ದ ಹುಲ್ಲ, ಕೊಳೆತ ಹುಲ್ಲುಗಳ ತಿನ್ನುತ್ತಿದ್ದರೆ, ದುರ್ಮನನಾಗಿ ಕೆದರಿ ಸೂರ್ಯನನ್ನು ನೋಡುತ್ತಿರಲು ಅದು ಒಡೆಯನಿಗೆ ಭೀತಿಯನ್ನುಂಟುಮಾಡುವುದು. ಪೂರ್ವಾಹ್ನನದಲ್ಲಿ ಆಕಾಶವನ್ನು ನೋಡುತ್ತ ಈಶಾನ್ಯದೆಸೆಯ ಕಡೆಗೆ ನೋಡುತ್ತ ದುರ್ಮತಿಯಾಗಿ ಬಾಲವನು ಕೆದರುತ್ತ ಹುಂಕರಿಸುತ್ತಿರಲು ಒಡೆಯನಿಗೆ ಹೇಳಿದೆ ಎಂದು ಅರಿಯುವುದು.

ಕುದುರೆಯ ಎರಡು ಕಣ್ಣಿನಲ್ಲಿ ನೀರು ಸುರಿಯುತ್ತ ದುಃಖದಿಂದ ಲದ್ದಿಯನ್ನು ಹಾಕುತ್ತ, ಗತ್ತವ ಮಾಡುತ್ತ ಹುಂಕರಿಸುತ್ತ ಇರಲು ಅದರ ಒಡೆಯನಿಗೆ ಅತಿಶಯವಾದ ಭಯವನ್ನುಂಟು ಮಾಡುವುದು. ಮೇವ ಬಿಟ್ಟು ಚಿಂತಿಸುತ್ತ ಭ್ರಾಂತಿಗೊಂಡು ಒಮ್ಮೆ ಹೀನವಾಗಿ, ಒಮ್ಮೆ ದೀರ್ಘವಾಗಿ ಹುಂಕರಿಸುತ್ತಿರಲು ಅದರಿಂದ ಪತಿಗೆ ಭಯವ ಮಾಡುವುದು.

ಕುದುರೆ ಬಾಲವ ಕೆದರುತ್ತ ಇರಲು ಒಡೆಯನಿಗೆ ಉತ್ತಮ ಹೊಲ್ಲಂಗಳ ಹೇಳದು ಬಾಲದಡಿಯ ಕೆದರುತ್ತಾ, ಬೆದರುತ್ತಾ, ಮೈಯನದಿರುತ್ತಾ, ಕಾಲಲ್ಲಿ ನೆಲವ ಕೆರೆಯುತ್ತಾ ಇರಲು ಬೇಗನೆ ಒಡೆಯನಿಗೆ ಕೇಡು ತಪ್ಪದು. ಬಲದಕಾಲಲ್ಲಿ ನೆಲವ ಅಡಿಗಡಿಗೆ ಹೊಯ್ಯುತ್ತ ಬಾಲವ ಬಲದ ಕಡೆಗೆ ಕೆದರಿ ಅತಿ ಹರುಷವಾಗಿರಲು ಒಡೆಯನಿಗೆ ವಿಜಯವನ್ನು ಮಾಡುವುದು. ಎಡದ ಕಾಲಲ್ಲಿ ನೆಲವ ಹೊಯ್ದರೆ ಎಡದ ಕಡೆಗೆ ಬಾಲವ ಕೆದರಿದೊಡನೆ ಹೊಲ್ಲ, ಆ ಗುಣಗಳು ಎರಡು ಕಡೆಯಲ್ಲಿ ಇರಲು ಮಧ್ಯಮಫಲ ಪಯಣದೂರವನ್ನು ಹೇಳುವದು. ಕುದುರೆ ಚಕ್ರಾಕಾರವಾಗಿ ಕೆದರಿ ಭಯವನ್ನು ಹುಟ್ಟಿಸಿ ಕುದುರೆ ಬಾಲವನಡಗಿಸಿಕೊಂಡರೆ ಭಯವನ್ನು ಹೇಳುವದು. ಪೂರ್ವಭಾಗದಲ್ಲಿ ಉರಿಕಿಡಿಗಳು ಉದುರಿದೊಡೆ ದೇಶಕ್ಕೆ ಕೇಡು ತಪ್ಪದು. ಅಪರಾಹ್ನದಲ್ಲಿ ಉದುರಿದೊಡನೆ ದೇಶಾಧಿಪತಿಗೆ ಕೆಡಗು ಉಂಟಾಗುವುದು. ತಲೆಯಲ್ಲಿ ಉರಿ ಹುಟ್ಟಿದರೆ ಹರಿಯಮಗ ಸಾವನ್ನಪ್ಪುವನು. ಕಂದದಲ್ಲಿ ಉರಿ ಹುಟ್ಟಿದರೆ ಒಡೆಯನು ಸಾಯುವನು. ಬೆನ್ನಲ್ಲಿ ಉರಿ ಹುಟ್ಟಿದರೆ ಏರುವಾತಗಳಿಯುವನು. ಮೂಗಿನ ಒಂದು ಹೊಳ್ಳೆಯಲ್ಲಿ ಉರಿಯಾದರೆ ಉಳ್ಳಂಗೆ (ಶ್ರೀಮಂತನಿಗೆ) ಒಡವೆ ನಷ್ಟವಾಗುತ್ತದೆ. ಎರಡು ಮೂಗಿನಲ್ಲೂ ಉರಿಯಾದರೆ ಅಳಿದವನನ್ನು ಕೊಲ್ಲುವುದು. ತುರಗದ ಜಘನದಲ್ಲಿ ಕಿಡಿ ಉದುರಿ ಮಗ ಸಾಯುವನು. ಪ್ರಜಾಪತಿಯು ಅಂಡದಿಂದ ಕಿಡಿಯುದುರಿದೊಡನೆ ಕುಲಸ್ತ್ರೀ ಮರಣವಾಗುತ್ತದೆ. ಬಾಲದಡಿಯಲ್ಲಿ ಎಂದರೆ ಒಡನಿಗೆ ಕಾಳಗವು, ಭಯವು ಆಗುವದು. ಬಾಲದ ತುದಿಯಲ್ಲಿ ಆದೊಡೆ ಅಪಜಯವಾಗುವುದು. ಕುದುರೆಯ ಮೈಯಲ್ಲಿ ಉರಿಗಳು ನೆಗಳ್ದರೆ (ಎದ್ದರೆ) ಸಾಮಂತ ಪರಿವಾರಗಳಿಗೆ ಅಳಿವು (ನಾಶ) ತಪ್ಪದು. ಕತ್ತಿಯ ಕಟ್ಟುವ, ಠಾವು, ತಲೆಯ, ಕೊರಳಿನ ಮಧ್ಯೆ, ಪಚ್ಚಗಳ ನಡುವಿನ ಮಧ್ಯ, ಎಡೆಯ ಮುಗುಳು ಕಂದ ಈ ಸ್ಥಲಗಳನ್ನು ಉರಿಗಳು ತೋರಿದರೆ ಕೇಡು ಉಂಟಾಗಿ ಈ ಸ್ಥಳಗಳಲ್ಲಿ ಮಿಂದ ಹಾಗೆ ಆದರೆ ಮಹಾ ಸಂತೋಷವಾಗುವುದು. ಹುಂಕರಿಸುವಾಗ ಬಾಯಿಯಿಂದ ಉರಿಯು ಹೊರಟು ಮೇಲುಸುರು ಹೊರಡುತ್ತ ಇದ್ದರೆ ತನ್ನ ಲಕ್ಷ್ಮೀಯು ವೈರಿಯನ್ನು (ವೈರತ್ವ) ಸೇರುವಳು. ಕುದುರೆಯ ಬಾಯಲ್ಲಿ ನೀರು ಸುರಿಯುತ್ತ ಬಾಯ ನೊರುಸುತ್ತ ಆ ನೀರು ಉರದಲ್ಲಿ, ಕಾಲಲ್ಲಿ ಬೀಳಲು ಅದರಿಂದ ಒಡೆಯನಿಗೆ ದುಃಖ, ಶೋಕ, ಭಯವುಂಟಾಗುವುದು. ಪ್ರಯಾಣಕ್ಕೆ ಹೋಗುವಾಗ, ಮನೆಗೆ ಲಾಯಕ್ಕೆ ತೆಗೆಯುವಾಗ ಯುದ್ಧಕ್ಕೆ ಹೋಗುವಾಗ, ಹುಲಿಯ ಹಾವಿನ ಹಾಗೆ, ನಡೆದರು. ಗತ್ತವ ಮಾಡಿದರು ಅಪಜಯವಾಗುವುದು. ಕುದುರೆಗೆ ಅಲ್ಲದ ಸುಳಿ ಇದ್ದರೆ ಅದನ್ನು ವೇದಶಾಸ್ತ್ರ ಸಂಪನ್ನರಾದ ಬ್ರಾಹ್ಮಣರಿಗೆ ಧಾರಾಪೂರ್ವಕವಾಗಿ ದಕ್ಷಿಣೆ ಸಹಿತವಾಗಿ

ಕೊಟ್ಟರೆ ಉತ್ತಮ ಹೀಗೆ ಅಭಿನವಚಂದ್ರ ಶಾಸ್ತ್ರಕ್ರಮದಿಂದ ಸುಳಿಗಳು ಗತಿ, ಚೇಷ್ಟೆಗಳನ್ನು ಸವಿವರವಾಗಿ ಹೇಳಿರುವನು."[೨೮]

ಅಶ್ವಗಳ ಚೇಷ್ಟಾವಿಶೇಷದಿಂದ ಒಡೆಯನಿಗೆ ಉಂಟಾಗುವ ಶುಭಾಶುಭಫಲಗಳನ್ನು ಬುದ್ಧಿವಂತರು ಶಾಸ್ತ್ರದ ಆಧಾರದಿಂದ ತಿಳಿದುಕೊಳ್ಳುವುದು ಉತ್ತಮ. "ಹೇಷಾರವನ್ನು ಮಾಡುವಾಗ ತನ್ನ ಮುಖವನ್ನು ಮೇಲಕ್ಕೆ ಮಾಡಿ, ಗೊರಸುಗಳಿಂದ ಭೂಮಿಯನ್ನು ಕೆರೆಯುತ್ತದೆ. ಅಂತಹ ಅಶ್ವ ಕಣದಲ್ಲಿ ಜಯವನ್ನು ಸೂಚಿಸುತ್ತದೆ. ಆ ಸಮಯದಲ್ಲಿ ತಕ್ಷಣ ಮಲ-ಮೂತ್ರ ವಿಸರ್ಜನೆಯನ್ನು ಅಥವಾ ಕಣ್ಣೀರಿನ ಸುರುಸುವಿಕೆಯನ್ನು ಮಾಡಿದರೆ ಪರಾಭವವನ್ನು ಸೂಚಿಸುತ್ತದೆ. ರಾತ್ರಿಯ ಹೊತ್ತಿನಲ್ಲಿ ಹೇಷಾರವನ್ನು ಮಾಡುವ ಅಶ್ವ ಯಜಮಾನನ ಮೇಲೆ ಶತ್ರುವಿನ ಆಕ್ರಮಣವನ್ನು ಸೂಚಿಸುತ್ತದೆ. ಬಾಲವು ನಡುಗುತ್ತಿರಲು ಒಡೆಯನ ಶೀಘ್ರ ಮರಣದ ನಿಶ್ಚಯವಾಗಿದೆ ಎಂದು ಸೂಚಿಸುತ್ತದೆ. ಬಾಲದ ತುದಿಯಿಂದ ಬೆಂಕಿಯ ಕಣಗಳು ಹೋಗುತ್ತಿರುವಂತೆ ಕಾಣುತ್ತಿದ್ದರೆ ಚೇಷ್ಟಾವಿಶೇಷವು ಅದೇ ರಾತ್ರಿಯಲ್ಲಿ ಒಡೆಯನ ಸಾವನ್ನು ಸೂಚಿಸುತ್ತದೆ. ಎಡಗಾಲಿನಿಂದ ಭೂಮಿಯನ್ನು ಕೆರೆಯುತ್ತಾ ದೀನವಾದ ಮನಸ್ಸಿನಿಂದ ಹೇಷಾರವನ್ನು ಮಾಡುತ್ತಿರಲು ಅಂತಹ ಅಶ್ವವು ಯಜಮಾನನಿಗೆ ಪರಾಜಯವನ್ನು ದೀನವಾಗಿ, ಮಲಮೂತ್ರಗಳನ್ನು ವಿಸರ್ಜಿಸಿಕೊಳ್ಳುತ್ತಾ, ಕಣ್ಣೀರನ್ನು ಸುರಿಸುತ್ತಾ ಶಬ್ದವನ್ನು ಮಾಡುತ್ತಿರಲು ಖಂಡಿತವಾಗಿ ಒಡೆಯನಿಗೆ ಅಪಜಯದ ಸೂಚನೆ. ಹೇಷಾರವು ಅಳುವುದಕ್ಕೆ ಸಿದ್ಧರಾದವರ ಧ್ವನಿಯಂತೆ (ಕಟ್ಟಿದ ಗಂಟಲು, ಗದ್ಗದ ಧ್ವನಿಯಿಂದ) ಇರಲು ಹಾಗೆಯೇ ದೀನತೆಯಿಂದ ಕೂಡಿದ್ದು, ದೀರ್ಘ ಶಬ್ದವನ್ನುಂಟು ಮಾಡಿದರೆ ಅಶುಭ ಲಕ್ಷಣ.

ತಿನ್ನುವ ಹುಲ್ಲನ್ನು ಬಿಟ್ಟು, ಧೂಳನ್ನು ತಿನ್ನುತ್ತಾ ಅಥವಾ ಒಣಗಿದ ಹುಲ್ಲು, ಕಡ್ಡಿಗಳನ್ನು ಬಾಯಲ್ಲಿಟ್ಟುಕೊಂಡು ಭಯ ಸೂಚಕವಾದ ಹೇಷಾರವನ್ನು ಮಾಡುವ ಅಶ್ವವು ಭೂಮಿಯನ್ನು ಎಡಗಾಲಿನಿಂದ ಕೆರೆಯುತ್ತಿರಲು, ಬಾಲವನ್ನು ಹಿಂದಕ್ಕೆ ಬೀಸುತ್ತಿರಲು ಇಂತಹ ಚೇಷ್ಟಾ ವಿಶೇಷವುಳ್ಳ ಕುದುರೆ ಯಜಮಾನನಿಗೆ ಪ್ರಯಾಣ, ಮರಣವನ್ನು ಸೂಚಿಸುತ್ತದೆ. ಯಾವ ಅಶ್ವವು ಬಲಗಾಲಿನಿಂದ ಭೂಮಿಯನ್ನು ಕೆರೆಯುತ್ತಾ ಬಾಲದ ಚಾಲನೆಯನ್ನು ಮಾಡುವುದೋ ಅಂತಹ ಅಶ್ವವು ಯಜಮಾನನಿಗೆ ಪ್ರಯಾಣ, ರಣಗಳಲ್ಲಿ ಜಯ ಮತ್ತು ಶುಭಲಕ್ಷಣವನ್ನು ಸೂಚಿಸುತ್ತದೆ.

ಅಶ್ವಗಳಲ್ಲಿ ಕಂಡುಬರುವ ಧ್ರುವ ಹಾಗೂ ಅನ್ಯ ಶುಭಾಶುಭ ಸ್ವರೂಪ ಆವರ್ತಮಾನ ಹಾಗೂ ಸ್ಥಾನ ಇವುಗಳಿಂದ ಉಂಟಾಗುವ ಫಲ ವಿಶೇಷದ ಕುರಿತು ವಿವರಿಸಲಾಗಿದೆ. ಸುಳಿಗಳು ಉದ್ಭವಿಸುವ ಕ್ರಮವನ್ನು ಕುರಿತು ಚರ್ಚಿಸುತ್ತಾ ತಾಯಿಯ ಗರ್ಭಕೋಶದಲ್ಲಿ ಅಶ್ವಶಿಶುವು ಇರುವಾಗ ಶರೀರದ ಒಳಗೆ ವಾಯುವು ಅತಿವೇಗದಿಂದ ಸಂಚರಿಸುವ ಸಮಯದಲ್ಲಿ ಶಿಶುವಿನ ಶರೀರದ ರೋಮಗಳನ್ನು ಸುಳಿಯ ಆಕಾರದಲ್ಲಿ ತಿರುಗಿಸುತ್ತವೆ. ಹೀಗಾಗಿ ಅವುಗಳ ಬೆಳವಣಿಗೆ ಗೋಚರವಾಗುತ್ತದೆ. ಅವುಗಳನ್ನು ಎಂಟು ಪ್ರಕಾರವಾಗಿ ಶಾಸ್ತ್ರಕಾರರು ಗುರುತಿಸಿದ್ದಾರೆ.

ಆವರ್ತ, ಶತಪಾದೀ, ಶುಕ್ತಿ, ಅವಲೀಢಕ, ಪಾದುಕಾ, ಪಾದುಕಾರ್ಧ, ಸಮೂಹ, ಮುಕುಲವೆಂದೂ, ನೀರಿನ ಸುಳಿಯಂತೆ ಆಕಾರ ಹೊಂದಿರುವುದು ಆವರ್ತ, ನೂರು (ಸಾವಿರ) ಕಾಲಿನ ಝರಿಯ ಆಕೃತಿಯುಳ್ಳದ್ದು ಶತಪಾದೀ, ಕಪ್ಪೆಚಿಪ್ಪಿನ ಆಕೃತಿಯಂತೆ ಇರುವ ಸುಳಿಗೆ ಶುಕ್ತಿಕರವು, ತಾಯಿಯ ಮೈಯನ್ನು ನಾಲಿಗೆಯಿಂದ ಸಿಕ್ಕಿಕೊಂಡಾಗ ಅದರ ಶರೀರದ ಮೇಲಿನ ರೋಮಗಳು ಒಂದೇ ದಿಕ್ಕಿಗೆ ಬಾಚಿಕೊಂಡಂತೆ ಕಾಣುತ್ತದೆ. ಈ ರೀತಿಯ ಆಕೃತಿಯಲ್ಲಿರುವ ಸುಳಿಗೆ ಅವಲೀಢಕವೆಂದೂ, ಪಾದುಕೆಗಳ ಆಕಾರದಲ್ಲಿರುವ ಸುಳಿ ಅರ್ಧಪಾದ, ಒಂದಕ್ಕಿಂತ ಹೆಚ್ಚು ಮುಕುಲಾಕಾರವಾದ ಸುಳಿಗಳ ಸಮೂಹ ಮುಕುಲ, ಈ ಆವರ್ತಗಳಿಗಿಂತ ಬೇರೆ ರೀತಿಯಾದ ರೋಮವಿಕಾರ ಉಂಟಾಗುವ ಆವರ್ತಗಳೂ ಕಂಡುಬರುತ್ತವೆ. ಇವುಗಳ ಸ್ಥಾನವಿಶೇಷದಿಂದ ಶುಭಾಶುಭ ಫಲವನ್ನು ನಿರ್ದೇಶಿಸಲಾಗಿದೆ. ಹಸು, ಕುದುರೆ ಇಂತಹ ಪ್ರಾಣಿಗಳನ್ನು ಕೊಳ್ಳುವಾಗ ವಿಶೇಷವಾಗಿ ಸುಳಿಗಳ ಲಕ್ಷಣಗಳನ್ನು ಪರೀಕ್ಷಿಸಿ ಜನರು ಖರೀದಿಸುತ್ತಾರೆ. ಹೀನಸುಳಿ' ಇದ್ದರೆ ಅಂತಹ ಹಸು, ಕುದುರೆಗಳನ್ನು ಜನರು ಸಾಧಾರಣವಾಗಿ ಕೊಳ್ಳುವುದಿಲ್ಲ. ಹಾಗೆಯೇ ಹತ್ತು ವಿಧವಾದ ನಿಂದ್ಯವಾದ ಆವರ್ತಲಕ್ಷಣ ಹೀಗಿವೆ. ಸ್ಥಾನಚ್ಯುತ, ವಿವರ್ಣ, ದುಃಸ್ಥಿತ, ತಿರ್ಯಗಾಯತ, ವಿನ್ಯಸ್ತ, ವಿನಿಗೂಢ, ಭಿನ್ನಾಕಾರ, ಓಮ, ಮಹಾನ್, ವಾಮದಕ್ಷಿಣ, ಕೂದಲುಗಳಿಂದ ಕೂಡಿದ್ದು, ಸ್ವಸ್ಥಾನದಿಂದ ಚ್ಯುತವಾದದ್ದು 'ಸ್ಥಾನಚ್ಯುತ'. ವರ್ಣಕ್ಕಿಂತ ಬೇರೆ ಬಣ್ಣವನ್ನು ಹೊಂದಿರುವ ಕೂದಲಿಗಳಿಂದ ಕೂಡಿದ ಆವರ್ತ 'ವಿವರ್ಣ', ಆವರ್ತವು ಇವೆಯೋ ಇಲ್ಲವೋ ಎನ್ನುವಷ್ಟು ಸಂಶಯವನ್ನುಂಟು ಮಾಡುವ ಕೂದಲುಗಳನ್ನು ಹೊಂದಿರುವುದು ದುಃಸ್ಥಿತ. ಆವರ್ತವು ಉದ್ದ-ಅಗಲಗಳಿಂದ ಇದ್ದರೆ ಅದರ ನಿಮಿತ್ತವಾಗಿ ರಾಜ್ಯ ಹಾನಿಯ ಭಯವು ಆಗುತ್ತದೆ. ಇದನ್ನು 'ತಿರ್ಯಗಾಯತ'ವೆಂದೂ. ವಿವರ್ಣವಾದ, ವಿಷಮವಾದ, ಸ್ಥೂಲವಾದ, ಮೇರೆ ಮೀರಿದ ಗಾತ್ರವುಳ್ಳ, ಎಡದಿಂದ ಬಲಕ್ಕೆ ಹೊರಳಿದ ವಿಚಿತ್ರವಾದ ರೋಮಗಳನ್ನು ಹೊಂದಿರುವ, ದಟ್ಟವಾದ, ಸಾಂದ್ರವಾದ, ಕೂದಲನ್ನು ಹೊಂದಿರುವ ಇಂತಹ ಲಕ್ಷಣವನ್ನು ಒಳಗೊಂಡಿರುವ ಸುಳಿಯು 'ವಿನ್ಯಸ್ತ' ಎಂದು ಹೇಳಲಾಗುತ್ತದೆ. ಇದರ ನಿಮಿತ್ತವಾಗಿ ರಾಜರ ಆಯಸ್ಸು, ಧನಗಳು ನಾಶವಾಗುತ್ತವೆ. ಯಾವ ಸುಳಿಯಲ್ಲಿ ರೋಮಗಳ ಇರುವಿಕೆ ತಿಳಿಯುವುದಿಲ್ಲವೋ ಅದು 'ವಿಗೂಢ'ಕ ಇದರಿಂದ ರಾಜರು ಮೂಢರಾಗುತ್ತಾರೆ.

ಆವರ್ತದಲ್ಲಿ ರೋಮಗಳು ಎರಡು ಭಾಗಗಳಲ್ಲಿ ವಿಭಕ್ತವಾಗಿದ್ದರೆ ಅದು 'ಭಿನ್ನಕಾರ' ಇದರಿಂದ ರಾಜರ ತಲೆಯೇ ಎರಡು ಹೋಳಾಗುವ ಸಾಧ್ಯತೆಯಿದೆ. ಆವರ್ತಗಳ ಪ್ರಮಾಣವನ್ನು ಸೂಚಿಸಲು 'ಅಂಗುಲ' ಅಂಗುಲದ ಮೂರನೇ ಒಂದು ಭಾಗ. ಅಂಗುಲದ ನಾಲ್ಕನೇ ಒಂದು ಭಾಗ. ಅಂಗುಲದ ಅರ್ಧಭಾಗ, 'ಯವ' ಈ ಮಾನಕಗಳನ್ನು ಬಳಸಲಾಗುತ್ತದೆ. 'ಆವರ್ತ' ಸುಳಿಯ ಪ್ರಮಾಣ ಅಂಗುಲದ ಮೂರನೇ ಒಂದು ಭಾಗ. ಶತಪಾದೀ ಸುಳಿಯ ಪ್ರಮಾಣ ಅರ್ಧ ಅಂಗುಲಕ್ಕಿಂತ ಸ್ವಲ್ಪ ಹೆಚ್ಚು. ಶುಕ್ತಿ ಸುಳಿಯ ಪ್ರಮಾಣ ಮೂರೂವರೆ ಅಂಗುಲದಷ್ಟು. ಅವಲೀಢ ಸುಳಿಯ ಪ್ರಮಾಣ ಮೂರು ಅಂಗುಲದಷ್ಟು.

ಮುಕುಲ ಸುಳಿಯ ಪ್ರಮಾಣವು ನಾಲ್ಕನೆಯ ಒಂದು ಭಾಗ ಅಂಗುಲದಷ್ಟು. ಪಾದುಕಾ ಸುಳಿಯ ಪ್ರಮಾಣ ಹನ್ನೆರಡು 'ಯುವ' ಪ್ರಮಾಣದಷ್ಟು, ಅರ್ಧಪಾದುಕಾ ಸುಳಿಯ ಪ್ರಮಾಣ ಆರು 'ಯುವ' ಪ್ರಮಾಣದಷ್ಟು 'ಸಮೂಹ' ಸುಳಿಯ ಪ್ರಮಾಣ ಅರ್ಧ ಅಂಗುಲ ಪ್ರಮಾಣದಷ್ಟು. ಈ ಲಕ್ಷಣಗಳಿಂದ ಕೂಡಿದ ಶುಭ ಸ್ಥಾನಗಳಲ್ಲಿ ಇರುವ ಆವರ್ತಗಳಿಂದ ಅಶ್ವಗಳ ಶುಭಫಲಗಳು ಉಂಟಾಗುತ್ತವೆ. ಈ ಆವರ್ತಗಳು ಪ್ರದಕ್ಷಿಣಾಕಾರವಾಗಿದ್ದರೆ ಅವು ಶುಭ ಸೂಚಕಗಳಾಗಿವೆ. ಈ ಮೇಲಿನ ಪ್ರಮಾಣಗಳಿಗೆ ಕಡಿಮೆ ಪ್ರಮಾಣವಾಗಿದ್ದರೆ 'ಓಮ'ವೆಂದೂ, ಇದೇ ಪ್ರಮಾಣ ಹೆಚ್ಚಾಗಿದ್ದರೆ 'ಮಹಾನ್'ವೆಂದೂ ಕರೆಯಲಾಗಿದೆ. ಬಲಭಾಗಕ್ಕೆ ಇರಬೇಕಾದ ಆವರ್ತವು ಎಡಭಾಗದಲ್ಲೂ, ಎಡಭಾಗದಲ್ಲಿ ಇರಬೇಕಾದ ಆವರ್ತವು ಬಲಭಾಗದಲ್ಲೂ ಇದ್ದರೆ 'ವಾಮದಕ್ಷಿಣ' ಇದರ ಫಲ- ರಾಜನ ಬಂಧನ ಹಾಗೂ ಶತ್ರುಗಳ ಅಭಿವೃದ್ಧಿ ವಿಹಿತವಾದ ಸ್ಥಾನಗಳಲ್ಲಿ ಶುಭಾವರ್ತಗಳಿದ್ದರೆ ಅವು ಸಂಪೂರ್ಣ ಫಲವನ್ನು ಕೊಡುತ್ತವೆ. ನಿಂದ್ಯವಾದ ಸ್ಥಾನಗಳಲ್ಲಿ ನಿಂದ್ಯವಾದ ಆವರ್ತಗಳಿದ್ದರೆ ಅವು ಸಂಪೂರ್ಣ ಅಶುಭ ಫಲವನ್ನು ಕೊಡುತ್ತವೆ. ಅಪ್ರಶಸ್ತವಾದ ಸ್ಥಾನದಲ್ಲಿ ಶುಭಾವರ್ತವೂ, ಶುಭವಾದ ಸ್ಥಾನದಲ್ಲಿ ಅಶುಭಾವರ್ತವೂ ಇರಲು ಅದು ಮಿಶ್ರವಾದ ಫಲವನ್ನುಂಟು ಮಾಡುತ್ತದೆ. ಶುಭಾವರ್ತಗಳೂ, ಅಶುಭಾವರ್ತಗಳೂ ಸೇರಿಕೊಂಡು ಯಾವವು ಹೆಚ್ಚಿನ ಸಂಖ್ಯೆಯಲ್ಲಿ ಇರುತ್ತವೆಯೋ ಅದರ ಆಧಾರದ ಮೇಲೆ ಒಟ್ಟಾರೆ ಫಲವನ್ನು ಕೊಂಡು ಕೊಳ್ಳಬಹುದು.

ವಿಹಿತವಾದ ಸ್ಥಾನದಲ್ಲಿ ಚ್ಯುತವಾದ ಹತ್ತು ವಿಧವಾದ ಧ್ರುವಾವರ್ತಗಳ ಸ್ಥಾನಗಳಿದ್ದು, ಅವು ಈ ರೀತಿಯಾಗಿವೆ. ಪ್ರಜಾನನ, ಲಲಾಟಜ, ಮಸ್ತಕದಲ್ಲಿ ಎರಡು ಸ್ಥಾನಗಳು, ಎದೆಯ ಭಾಗದಲ್ಲಿ ಎರಡು ಸ್ಥಾನಗಳು, ರಂಧ್ರಸ್ಥಾನದಲ್ಲಿ ಎರಡು, ಉಪರಂಧ್ರ ಸ್ಥಾನದಲ್ಲಿ ಎರಡು ಸ್ಥಾನಗಳು, ಹೀಗೆ ಅವುಗಳನ್ನು ಗುರುತಿಸಲಾಗಿದೆ. ಪ್ರಪಾನ ಸ್ಥಳದಲ್ಲಿ ಬಲಗಡೆ ಅಥವಾ ಮಧ್ಯಭಾಗದಲ್ಲಿ ಇರುವ ಪ್ರದಕ್ಷಿಣಾವರ್ತವನ್ನು ಹೊಂದಿದ ಸುಳಿಯು ಹಣ ಸೌಭಾಗ್ಯ ಪ್ರದವಾಗಿದ್ದು, 'ಪ್ರಪಾನ ಸ್ಥಳ' ಎಂದರೆ ಮುಖಾಗ್ರಸಮೀಪ ಮುಖದ ಮುಂಭಾಗಕ್ಕೆ ಹತ್ತಿರವಾದ ಸ್ಥಳ ಎಂದು ಹೇಳಿ, ಎಡಭಾಗದಲ್ಲಿ ಪ್ರಪಾನ ಸ್ಥಳದಲ್ಲಿ ಸುಳಿಯಿದ್ದು, ಕೂದಲುಗಳಿಂದ ಕೂಡಿದ್ದರೆ ವಿತ್ತನಾಶ ಫಲವಾಗಿರುತ್ತದೆ. ಈ ಆವರ್ತವು ಹುಬ್ಬುಗಳ ಮಧ್ಯಭಾಗ, ಹುಬ್ಬುಗಳ ಬಲಗಡೆ, ಹುಬ್ಬುಗಳ ಒಳಭಾಗದಲ್ಲಿ ಅಥವಾ ಮೇಲ್ಭಾಗದಲ್ಲಿ ಕಂಡು ಬಂದರೂ ವಿತ್ತನಾಶವೇ ಆಗುವುದು. ಹುಟ್ಟಿನಿಂದಲೇ ಮೂಡಿರುವ ಲಲಾಟ ಸ್ಥಾನದಲ್ಲಿರುವ ಪ್ರದಕ್ಷಿಣಾಕಾರದ ಸುಳಿ ಇರಲು ಅಂತಹ ಅಶ್ವವು ದೀರ್ಘಾಯುಷ್ಯ ಹೊಂದಿರುತ್ತದೆ. ಜೊತೆಗೆ ಸುಖ ಸೌಭಾಗ್ಯಗಳನ್ನುಂಟುಮಾಡುತ್ತದೆ. ಹಾಗೆಯೇ ಲಲಾಟದ ಮಧ್ಯಭಾಗದಲ್ಲಿರುವ, ರೋಮಗಳಿಂದ ಕೂಡಿದ ಆವರ್ತ ಅಶ್ವಕ್ಕೆ ಮಧ್ಯಮ ಪ್ರಮಾಣದ ಆಯಸ್ಸನ್ನು ಉಂಟು ಮಾಡುತ್ತದೆ ಎಂಬ ವಿಚಾರವನ್ನು ಅಶ್ವಶಾಸ್ತ್ರಕಾರರು ಹೇಳುತ್ತಾರೆ. ಹುಬ್ಬುಗಳ ಮಧ್ಯಭಾಗದಲ್ಲಿ ಅಥವಾ ಲಲಾಟದ ಎಡಭಾಗದಲ್ಲಿರುವ ಆವರ್ತವು ಅಶ್ವಕ್ಕೆ ಇರುವುದರಿಂದ ಅಲ್ಪಾಯಸ್ಸು ಹಾಗೂ ನಿರರ್ಥಕವಾದ ಫಲಗಳನ್ನು ಕೊಡುತ್ತವೆ.

ಮಸ್ತಕ ಸ್ಥಾನದಲ್ಲಿರುವ ಆವರ್ತಗಳು 'ಮಸ್ತಕ್ಯ' ಆವರ್ತಗಳಾಗಿದ್ದು, ಯಾವ ಅಶ್ವದ ಮಸ್ತಕ ಸ್ಥಾನದಲ್ಲಿ ಸಮಪ್ರಮಾಣದ (ಎರಡು) ಹುಟ್ಟಿನಿಂದ ಉಂಟಾದ ಆವರ್ತಗಳು ಇವೆಯೋ ಅದು ಎಂಟು ವರ್ಷ ಆಯುಸ್ಸುಳ್ಳದ್ದಾಗಿರುತ್ತದೆ; ಜೊತೆಗೆ ವಿತ್ತನಾಶಕವಾಗಿರುವುದು. ಅಶ್ವದ ಮಸ್ತಕಸ್ಥಾನದಲ್ಲಿ ಕಿವಿಗಳ ಮಧ್ಯ ಇರುವ ಸ್ಥಳದಲ್ಲಿ ಹುಟ್ಟಿನಿಂದ ಉಂಟಾದ ಆವರ್ತಗಳು ಕಂಡು ಬರುತ್ತವೆಯೋ ಅಂತಹ ಅಶ್ವವು ಅಲ್ಪಾಯುವಾಗಿರುತ್ತದೆ. ಇದು ಸುಖ ಹಾಗೂ ಧನವನ್ನು ನಾಶಪಡಿಸುತ್ತದೆ. ಅಶ್ವದ ಮಸ್ತಕ ಸ್ಥಾನದಲ್ಲಿ ಕೇಸರದ ಕೂದಲುಗಳ ಕಡೆ ವಾಲಿಕೊಂಡಂತೆ, ಕಪ್ಪೆಚಿಪ್ಪಿನ ಮಾದರಿಯಲ್ಲಿ ಆವರ್ತಗಳು ಇರಲು ಅದು 'ಸ್ಥಾನಚ್ಯುತ' ಇಂತಹ ಅಶ್ವಗಳು ಅಲ್ಪಾ ಆಯಸ್ಸು ಹೊಂದಿದ್ದು, ಸುಖವನ್ನು ಬಯಸುವದರಿಂದ ಬಿಡುವುದು ಸೂಕ್ತ. ಮಸ್ತಕ ಸ್ಥಾನದಲ್ಲಿಯೇ ಇರುವ ಪ್ರದಕ್ಷಿಣಾವರ್ತದ ಸುಳಿಗಳು ಇರುವ ಅಶ್ವವು ಧನ, ಗೋತ್ರವರ್ಧಕವಾಗಿದ್ದು ಗ್ರಾಹ್ಯವಾಗಿರುತ್ತವೆ. ರಂಧ್ರ ಹಾಗೂ ಉಪರಂಧ್ರಗಳ ಸ್ವಸ್ಥಾನಗಳಲ್ಲಿರುವ ಎರಡೆರಡು ಆವರ್ತಗಳು ಉತ್ತಮವಾಗಿದ್ದು. ನಾಭಿ ಪ್ರದೇಶಕ್ಕೆ ಸಮೀಪದಲ್ಲಿದ್ದು, ಪರಸ್ಪರ ಸೇರಿಕೊಂಡಿರುವ ಆವರ್ತಗಳು ಉಪರಂಧ್ರಗಳಲ್ಲಿ ಇದ್ದಲ್ಲಿ ಅಲ್ಪಾಯುವಾಗಿರುತ್ತವೆ. ಹುಟ್ಟಿನಿಂದ ಉಂಟಾದ ಸುಳಿಗಳಲ್ಲಿ ರೋಮಗಳೇ ಇಲ್ಲದಿದ್ದರೆ ಅವು ಅಶುಭ ಸೂಚಕ, ಒಳ್ಳೆಯದನ್ನು ಬಯಸುವವರು ಇಂತಹ ಅಶ್ವಗಳನ್ನು ತ್ಯಜಿಸಬೇಕು.

ಅಶುಭ ಲಕ್ಷಣ ಕುರಿತು ವಿವರಿಸುತ್ತಾ ಅಶ್ವದ ಮೇಲಿನ ತುಟಿಯಲ್ಲಿರುವ ಆವರ್ತದ ಫಲವು ಒಡೆಯನ ತಾಯಿಯ ಸಾವಿಗೆ ಕಾರಣವಾಗುತ್ತದೆ. ಪ್ರಪಾನದ ಮೇಲಿರುವ ಹಾಗೂ ಬಲಭಾಗದಲ್ಲಿರುವ ಆವರ್ತವು ಒಡೆಯನ ತಂದೆ ಸಾವಿಗೆ, ಅಶ್ವದ ಕೆಳಗಿನ ತುಟಿ, ಚುಬುಕಸ್ಥಾನ (ಕಡಿವಾಣ ಹಾಕುವ ಸ್ಥಳ) ಮೂಗಿನ ತುದಿ ಈ ಸ್ಥಾನಗಳಲ್ಲಿರುವ ಆವರ್ತ ಒಡೆಯನ ನಾಶಕ್ಕೆ ಕಾರಣವಾಗುತ್ತದೆ. ಅಶ್ವದ ಮೂಗಿನ ಹೊಳ್ಳೆಗಳಲ್ಲಿ ಇರುವ ಕೂದಲಿನಿಂದ ಕೂಡಿದ ಆವರ್ತಗಳು ಒಡೆಯನ ವೃತ್ತಿಯನ್ನು ಹಾಳು ಮಾಡುತ್ತವೆ. ಅಶ್ವದ ಕಣ್ಣೀರು ಬರುವ ಸ್ಥಾನದಲ್ಲಿ ಇರುವ ಆವರ್ತಗಳು ಒಡೆಯನ ಕಣ್ಣೀರಿಗೆ ಕಾರಣ. ವರ್ತ್ಮಸ್ಥಾನದಲ್ಲಿರುವ ಆವರ್ತವು ಒಡೆಯನ ಕಣ್ಣಿನ ರೋಗಕ್ಕೆ ಕಾರಣ. ಭ್ರೂಮಧ್ಯದಲ್ಲಿರುವ ಆವರ್ತವು ಒಡೆಯನ ದ್ವೇಷವು ಬೆಳೆಯುವಂತೆ ಮಾಡಿ, ಕಂಠ (ಶಂಖ) ಸೊಂಟ(ಕಟಿ), ಘೋಟ, ಶಿರಸ್ಸು ಈ ಸ್ಥಾನಗಳಲ್ಲಿರುವ ಆವರ್ತವು ಒಡೆಯನಿಗೆ ರೋಗವನ್ನುಂಟು ಮಾಡುತ್ತದೆ.

ಕೂರ್ಚ, ಕಕ್ಷ (ಭುಜದ ಸಂಧಿ) ಕಲಾ, ಮನ್ಯು, ಹನು, ಸ್ಕಂಧಗಳಲ್ಲಿ ಇರುವ ಆವರ್ತವು ಹಾಗೂ ಕಿವಿಯ ತುದಿಯಲ್ಲಿ ಇರುವ ಆವರ್ತಗಳು, ವಿಧುಮರ್ಮ ಸ್ಥಾನಗಳಲ್ಲಿರುವ ಆವರ್ತಗಳು ಒಡೆಯನ ಹಣವನ್ನು, ಕತ್ತಿನ ಭಾಗದಲ್ಲಿರುವ ಸುಳಿಗಳು ಯಜಮಾನನನ್ನು ನಾಶಪಡಿಸುತ್ತವೆ. ಗಲ್ಲ (ಗಂಟಲ ಪೆಟ್ಟಿಗೆ ಇರುವ ಸ್ಥಾನ) ದಲ್ಲಿರುವ ಸುಳಿಗಳು ಅಶ್ವವನ್ನು ಹೊಂದಿದ ಯಜಮಾನನಿಗೆ ಸಿಡಿಲಿನ ಭೀತಿಯನ್ನು ತರುತ್ತವೆ. ಜತ್ರು (ಹೆಗಲಸಂದು) ಸ್ಥಾನದಲ್ಲಿ ಸುಳಿ ಇರಲು ಯಜಮಾನನಿಗೆ ದಿಕ್ಕುಗಳಲ್ಲಿ ಭೀತಿ ಉಂಟಾಗುತ್ತದೆ. ಇಂತಹ ಅಶ್ವ ಅಲ್ಪಾಯುವಾಗಿರುತ್ತವೆ. ಜೊತೆಗೆ ಒಡೆಯನನ್ನೇ ಘಾತಿಸುತ್ತವೆ. ಕಕುತ್

ಸ್ಥಾನದಲ್ಲಿರುವ ಆವರ್ತ ಯಜಮಾನನ ಸರ್ವಸ್ವವನ್ನೂ ಹರಣ ಮಾಡುತ್ತದೆ. ಈ ಅಶ್ವವನ್ನು ತ್ಯಜಿಸಿ ಶಾಂತಿಮಾಡಿಕೊಳ್ಳಬೇಕು. ಕಾಕಸಾವರ್ತವಿದ್ದರೆ ಯಜಮಾನನು ಯುದ್ಧದಲ್ಲಿ (ಸತ್ತು) ಕಾಗೆಗಳಿಗೆ ಭಕ್ಷಿಸಲ್ಪಡುತ್ತಾನೆ. ಆಸನಾವರ್ತವನ್ನು ಹೊಂದಿದ ಅಶ್ವದ ಯಜಮಾನ ಶೂಲಕ್ಕೆರಿಸಲ್ಪಡುತ್ತಾನೆ. ಓಮ ಕ್ರೋಡಗಳಲ್ಲಿ ಆವರ್ತವಿರುವ ಅಶ್ವ ಯುದ್ಧದಲ್ಲಿ ಯಜಮಾನನ ನಾಶಕ್ಕೆ ಕಾರಣ. ಅಂಸ (ಹೆಗಲು) ಆವರ್ತವಿರುವ ಅಶ್ವವು ಶತ್ರು ಸಂಕ್ಷೋಭಕ್ಕೆ ಕಾರಣ. ಲಾಂಗಲ ಸ್ಥಾನದಲ್ಲಿ ಆವರ್ತವಿರಲು ಪರಾಜಯಕ್ಕೆ ಕಾರಣ. ಮಂದರ ಸ್ಥಾನದಲ್ಲಿರುವ ಅಶ್ವ ಧನನಾಶಕ್ಕೆ, ಜಾನು ಸ್ಥಾನದಲ್ಲಿರಲು ಯಜಮಾನನ ನಾಶಕ್ಕೆ ಕಾರಣ. ಜಂಘಾ ಸ್ಥಾನದಲ್ಲಿ ಕೂದಲುಗಳಿಂದ ಕೂಡಿದ ಆವರ್ತವಿರಲು ಕಬ್ಬಿಣದ ಸಂಕೋಲೆಯ ಬಂಧನ, 'ಈಷಿಕ', 'ಜೂಷಿಕ' ಸ್ಥಾನಗಳಲ್ಲಿ ಆವರ್ತವಿರಲು ಸ್ವಾಮಿ ಘಾತುಕ, ಮಾತ್ರಜ ಸ್ಥಾನದಲ್ಲಿ ಕುಷ್ಟಿಕ ಆವರ್ತವಿರಲು ರಣರಂಗದಲ್ಲಿ ಮರಣ. ಪಾರ್ಶ್ವ, ಶೀರ್ಷಜ ಸ್ಥಾನದಲ್ಲಿ ಆವರ್ತಹೊಂದಿ, ಅಲ್ಲಿ ರೋಮಗಳನ್ನು ಹೊಂದಿರುವ ಅಶ್ವ ಕ್ಲೇಶವನ್ನು ಉಂಟು ಮಾಡಿ ಮರಣಕಾರಕವಾಗಿರುತ್ತದೆ. ಹೃದಯ ಸ್ಥಾನದಲ್ಲಿ ಆವರ್ತವಿರುವ ಅಶ್ವದ ಕಾರಣದಿಂದ ಯಜಮಾನನು ಹೃದಯ ಶೋಕದಿಂದ ಸಾವನ್ನು ಹೊಂದುತ್ತಾನೆ. ವಕ್ಷಸ್ಥಾನದಲ್ಲಿ ಆವರ್ತವಿರುವ ಅಶ್ವವು ಒಡೆಯನ ನಾಶಕ್ಕೆ ಕಾರಣವಾಗಿ ಶಂಖ, ಪಾರ್ಶ್ವ ಸ್ಥಾನಗಳಲ್ಲಿ ಆವರ್ತ ನಿಮಿತ್ತವಾಗಿ, ಕಕುಂದರ ಸ್ಥಾನದಲ್ಲಿ, ವಂಶಸ್ಥಾನದಲ್ಲಿ ಆವರ್ತವಿರಲು ಒಡೆಯನ ವಂಶವನ್ನು ಸಮೂಲವಾಗಿ ನಾಶ ಮಾಡುತ್ತವೆ.

ಓಷ್ಠ ಹಾಗೂ ನಾಮಿಸ್ಥಾನಗಳಲ್ಲಿ ಆವರ್ತಗಳಿರುವ ಹಾಗೂ ಮೂತ್ರ ಕೋಶತ್ರಿಕ ಸ್ಥಾನಗಳಲ್ಲಿ ಅವರ್ತವಿರುವ ಅಶ್ವಗಳು ಯಜಮಾನನಿಗೆ ರೋಗವನ್ನು ಉಂಟು ಮಾಡುತ್ತವೆ. ಮುಷ್ಕ(ಅಂಡಕೋಶ)ದಲ್ಲಿ ಆವರ್ತವಿರುವ ಅಶ್ವಗಳು ಯಜಮಾನಿಯ ಪತಿಗೆ ಅಲ್ಪಾಯುವಾದ ಪುತ್ರನಿಗೆ ಕಾರಣವಾಗುತ್ತದೆ. ರೋಹಿಣೀ ಭಾಸಲ ಸ್ಥಾನದಲ್ಲಿ ಇರುವ ಅವರ್ತಗಳ ಅಶ್ವವು ಚಿಬುಕ ಸ್ಥಾನದಲ್ಲಿರಲು ಒಡೆಯನಿಗೆ ದ್ರೋಹ ಮಾಡುತ್ತವೆ. ಬಾಲದ ಮೂಲದಲ್ಲಿರಲು ಸಮೂಲ ವಂಶಾನ್ವಯ ನಾಶ. ರೋಮಜ, ಶಿರೋಜಾತದಲ್ಲಿರಲು ಸ್ಥಾನಭ್ರಂಶ ಉಂಟಾಗುತ್ತದೆ. ಪುಚ್ಛದಂಡ ಸ್ಥಾನದಲ್ಲಿರಲು ಶತ್ರುಗಳನ್ನು ಜಯಿಸುತ್ತಾನೆ. ಸೇವನೀ, ಪಾಯು, ಕುಕ್ಷಿ, ಈ ಸ್ಥಾನಗಳಲ್ಲಿ ಆವರ್ತಗಳಿರಲು ಒಡೆಯನಿಗೆ ಕುಕ್ಷಿರೋಗ (ಉದರ ರೋಗ) ಉಂಟಾಗುತ್ತದೆ. ಸ್ಫಿಕ್, ಪಿಂಡ, ಅಂಡ, ಸಕ್ಥಿ ವಂಕ್ಷಣ ಈ ಸ್ಥಾನಗಳಲ್ಲಿ ಆವರ್ತವಿರುವ ಅಶ್ವವು ಪತಿ ದ್ರೋಹಕ್ಕೆ ಕಾರಣವಾಗುತ್ತವೆ. ರೋಮಜ, ಶಂಖಜ, ಸ್ಫುರಜ ಸ್ಥಾನದಲ್ಲಿರುವ ಅಶ್ವಗಳು ಒಡೆಯನ ಕ್ಲೇಶಕ್ಕೆ ಕಾರಣವಾಗುತ್ತವೆ. ಹೀಗೆ ಸುದೀರ್ಘವಾದ ವಿವರಣೆಯಿಂದ ನಿಂದ್ಯವಾದ ಆವರ್ತಗಳನ್ನು ಕುರಿತು ಚರ್ಚಿಸಲಾಗಿದೆ.

ಶುಭಾವರ್ತಗಳ ಕುರಿತು ವಿವರಿಸುತ್ತಾ ಪ್ರದಕ್ಷಿಣಾಕಾರದ ಆವರ್ತಗಳು ಶುಭಪ್ರದವಾದವುಗಳು ಸೃಕ್ ಸ್ಥಾನದಲ್ಲಿ ಉಂಟಾದ ಆವರ್ತ ಪ್ರದಕ್ಷಿಣಾಕಾರದ 'ಶುಕ್ತಿ' ಲಕ್ಷಣದ ಆವರ್ತವು ಜಯವರ್ಧಕ. ಲಲಾಟ

ಸ್ಥಾನದಲ್ಲಿದ್ದರೆ ಶುಭಪ್ರದ. ಅಶ್ವದ ಲಲಾಟ ಸ್ಥಾನದಲ್ಲಿ ಪ್ರದಕ್ಷಿಣಾಕಾರವಾದ, ಕೂದಲುಗಳಿಂದ ಕೂಡಿದ ಮೂರು ಆವರ್ತಗಳು ಇದ್ದರೆ 'ತ್ರೇತಾಗ್ನಿ' ಇದರ ಕಾರಣವಾಗಿ ರಾಜನು ಶತ್ರುಗಳನ್ನು ಗೆಲ್ಲಲು ಸಮರ್ಥನಾಗುತ್ತಾನೆ. ಲಲಾಟದಲ್ಲಿ ಊರ್ಧ್ವನಾಮಿಯಾದ, ಕೂದಲುಗಳಿಂದ ಕೂಡಿದ ಮೂರು ಆವರ್ತಗಳು ಕಂಡು ಬಂದರೆ 'ನಿಶ್ರೇಣೀಕ' (ತ್ರೇತಾಗ್ನಿ ಆವರ್ತವು ವಿಭೂತಿ ಪಟ್ಟೆಗಳಂತೆ ಹಣೆಯ ಮೇಲೆ ಅಡ್ಡವಾಗಿಯೂ, ನಿಃಶ್ರೇಣಿಕವೂ ನಾಮದಂತೆ ಹಣೆಯ ಮೇಲೆ ಊರ್ಧ್ವಗಾಮಿಯಾಗಿಯೂ ಇರುತ್ತವೆ.) ಇಂತಹ ಅಶ್ವದ ಸಹಾಯದಿಂದ ರಾಜನು ಶತ್ರುಗಳನ್ನು ಗೆಲ್ಲುತ್ತಾನೆ. ಲಲಾಟದಲ್ಲಿ ನಾಲ್ಕು ಮೂಲೆಗಳಲ್ಲಿ ಚೌಕ ಅಥವಾ ಆಯತ ಆಕೃತಿಯಲ್ಲಿ ನಾಲ್ಕು ಪ್ರದಕ್ಷಿಣಾವರ್ತಗಳು ರೋಮ ಸಹಿತವಾಗಿದ್ದು, ನಾಲ್ಕು ದಿಕ್ಕುಗಳಿಗೆ ಹೊಂದುವಂತೆ ಇರುತ್ತವೆ. ಅದಕ್ಕೆ 'ಚತುರಂತ'.ಈ ಅಶ್ವವು ಯಜಮಾನನಿಗೆ ವೃದ್ಧಿಯನ್ನು ಜಯವನ್ನು ತಂದು ಕೊಡುತ್ತವೆ. 'ಮುಕುಲ' ಆವರ್ತಗಳು ಪ್ರದಕ್ಷಿಣಾಕಾರದಲ್ಲಿ, ಕೂದಲುಗಳಿಂದ ಆವೃತ್ತವಾಗಿ ಒಂದೇ ಪ್ರಮಾಣದಲ್ಲಿರಲು ಅಪಾಂಗಸ್ಥಾನ(ಕಣ್ಣಿನ ಕೊನೆ)ದಲ್ಲಾಗಲೀ, ಕರ್ಣಮೂಲ ದಲ್ಲಾಗಲೀ ಇದ್ದರೆ ಅದಕ್ಕೆ ವೃಷಭಾವರ್ತವೆಂದು, ಇದರಿಂದ ಒಡೆಯನಿಗೆ ಫಲ, ವಿಜಯ, ಅರ್ಥ, ಆಭರಣಗಳ ಪ್ರಾಪ್ತಿಯಾಗುತ್ತದೆ. ರೋಮಜ ಆವರ್ತವಾಗಿದ್ದು 'ನಿಗಾಲ' (ಕುದುರೆಯ ಕತ್ತಿನ ಹತ್ತಿರದ ಭಾಗ) ಸ್ಥಾನದಲ್ಲಿರುವ ಆವರ್ತಕ್ಕೆ 'ದೇವಮಣಿ' ಎಂದು ಈ ಶುಭಾವರ್ತವು ಅಶ್ವದ ಮುಂಭಾಗದ ಮೈಯಲ್ಲಿರಲು ಎಲ್ಲಾ ಅಶುಭ ಲಕ್ಷಣಗಳು ನಿವಾರಣೆಯಾಗುತ್ತವೆ. ಚಕ್ರಾಕಾರದಲ್ಲಿರುವ, ಕೂದಲುಗಳಿಂದ ಕೂಡಿರುವ ಕಂಠನಾಡೀ ಸ್ಥಾನದಲ್ಲಿದ್ದರೆ 'ಚಕ್ರಕೀ' ಇದರಿಂದ ಒಡೆಯನ ಶತ್ರುಗಳು ನಾಶ ಹೊಂದುತ್ತಾರೆ.

ಕಂಠಸ್ಥಾನದಲ್ಲಿ ಆವರ್ತವಿದ್ದರೆ 'ರೋಚಮಾನ', ಇದರಿಂದಾಗಿ ಒಡೆಯನಿಗೆ ಜಯ, ಮಿತ್ರ, ಧನಗಳು ಉಂಟಾಗುತ್ತವೆ. ಕೇಶಗಳ ಕೊನೆಯಲ್ಲಿ, ಗ್ರೀವಾ ಸ್ಥಾನದಲ್ಲಿ, ಶುಕ್ತಿ ಆವರ್ತವಿದ್ದು ಸಮಾನವಾದ ಪ್ರಮಾಣ ಹಾಗೂ ಪ್ರದಕ್ಷಿಣಾಕಾರದಲ್ಲಿರಲು ಒಡೆಯನು ಶತ್ರುಗಳನ್ನು ಗೆದ್ದು ಬೇಗನೆ ರಾಜನಾಗುತ್ತಾನೆ.

ಕೇಶಗಳ ಬಲಭಾಗದಲ್ಲಿ ಶುಕ್ತಿ ಆವರ್ತವಿರಲು ಒಡೆಯನಿಗೆ ಪಾನ (ಸುರಾ) ವನ್ನು ಒದಗಿಸುವುದು. ಅದೇ ಶುಕ್ತಿ ಆವರ್ತ ಕೇಶಗಳ ಎಡಭಾಗದಲ್ಲಿ ಇರಲು ಶುಭ. ಜೊತೆಗೆ ಆರೋಗ್ಯಗಳನ್ನುಂಟು ಮಾಡುತ್ತದೆ. ಎದೆಯ ಭಾಗದಲ್ಲಿ ರೋಮಜವಾದ ನಾಲ್ಕು ದಿಕ್ಕುಗಳಿಗೆ ಹೊಂದುವ ನಾಲ್ಕು ಶುಕ್ತಿ ಆವರ್ತ ಇದ್ದರೆ, ಒಡೆಯ ಶತ್ರುಗಳನ್ನು ಗೆದ್ದು ಸಂಪತ್ತನ್ನು ಹೊಂದುತ್ತಾನೆ. ಎದೆಯ ಭಾಗದಲ್ಲಿ ನಾಲ್ಕು ಶುಕ್ತಿ ಪ್ರದಕ್ಷಿಣಾವರ್ತಗಳಿರಲು ಹಾಗೂ ಕಂಠಸ್ಥಾನದಲ್ಲಿ ರೋಚಮಾನ ಆವರ್ತವಿರುವ ಅಶ್ವಕ್ಕೆ ಶ್ರೀವೃಕ್ಷ' ಎಂಬ ಸಂಜ್ಞೆ ಉಂಟು. ಇದು ಇಷ್ಟಾರ್ಥಗಳನ್ನು ಸಾಧಿಸುತ್ತದೆ. ವಕ್ಷಃಸ್ಥಾನದಲ್ಲಿ ಪ್ರದಕ್ಷಿಣಾಕಾರವಾದ ಹಾಗೂ ಊರ್ಧ್ವ ಮುಖವಾದ ರೋಮಗಳುಳ್ಳ ಮೂರು ಶಕ್ತಿ ಆವರ್ತಗಳು ಇದ್ದಲ್ಲಿ ಒಡೆಯನು ಯುದ್ಧದಲ್ಲಿ ಶತ್ರುಗಳ ಸಂಹಾರವನ್ನು ಮಾಡುತ್ತಾನೆ. ಫಲ (ಎರಡು) ಬಾಹು ಸ್ಥಾನದಲ್ಲಿ (ಎರಡು) ಆವರ್ತಗಳು ಇರಲು ಅಶ್ವಕ್ಕೆ 'ಅಂಗದೀ' ಎಂದು ಕರೆಯುವರು. ಇದು ಒಡೆಯನಿಗೆ ಆಭರಣ ಪ್ರಾಪ್ತಿಯನ್ನುಂಟು ಮಾಡುತ್ತದೆ.

ಅಶ್ವಕ್ಕೆ ಉಪರಂಧ್ರಗಳಲ್ಲಿ ಅಥವಾ ಅದರ ಮೇಲ್ಭಾಗದಲ್ಲಿ, ರೋಮಜವಾದ ಆವರ್ತವು ಕಂಡು ಬರುತ್ತಿದ್ದರೆ ಅಂತಹ ಅಶ್ವವು ಧನ ವೃದ್ಧಿಕರವಾಗಿದ್ದು 'ಮೇಖಲೀ' ಹಯವೆಂದು ಹೇಳಲಾಗುತ್ತದೆ. ಅಶ್ವದ ಲಲಾಟ ಸ್ಥಾನದಲ್ಲಿ ರೋಮಜವಾದ ಈ ಕೆಳಕಂಡ ಆಕಾರದ ವಿಶೇಷಗಳು ಶುಭತರವಾದ ಫಲವನ್ನು ಉಂಟು ಮಾಡುತ್ತವೆ. ಆ ಕೃತಿಗಳು ಇಂತಿವೆ. ಶ್ರೀವೃಕ್ಷ, ಸ್ವಸ್ತಿಕ, ಅಬ್ಜ(ಕಮಲದ ಹೂವು), ಧ್ವಜ(ಬಾವುಟ), ಕಲಶ(ಪಾತ್ರೆ), ಗದಾ, ಶಂಖ, ಚಕ್ರ, ಅಸಿ (ಕತ್ತಿ) ಚಾಪ(ಬಿಲ್ಲು), ನಂದ್ಯಾವರ್ತ, ಅರ್ಧಚಂದ್ರ, ಸಕಲ ಶಶಿಕಲಾ (ಪೂರ್ಣಚಂದ್ರ) ವರ್ಧಮಾನ, ಪತಾಕ, ವಜ್ರ, ಮತ್ಸ್ಯ, ಅಂಕುಶ, ವ್ಯಂಜನ(ಬೀಸಣಿಗೆ), ಕವಚ, ಭೃಂಗಾರಕ (ಡಬ್ಬಿ) ಮುಂತಾದವುಗಳು ಪ್ರಮುಖವಾಗಿವೆ."[೨೬]

ಹಾಗೆಯೇ ಸುಳಿಗಳ ಕುರಿತು ವಿವರಿಸುತ್ತ ಸದಾಶಿವರಾಯ ತನ್ನ ಸದಾ ಶಿವನೀತಿಯಲ್ಲಿ ತುರಗಲಕ್ಷಣ ಜೊತೆಗೆ ಸುಳಿಗಳು ಉಪಯುಕ್ತ ಮತ್ತು ಅನುಪಯುಕ್ತ ಎಂಬುದರ ಕುರಿತು ವಿವೇಚಿಸಿದ್ದಾನೆ.

"ಪತ್ತುಂಸುಳಿಗಳು ಧ್ರುವಮೆ
ಪತ್ತಾರುಂ ಸುಳಿಗಳ ಶುಭ ರೋಮಜಗಳು ಮೂ
ವತ್ತೇಳ್ ಶುಭವರ ನೂರಿ
ಪ್ಪತ್ತುಂ ಮೂರಧಿಕಮಾಗೆ ಸುಳಿಗಳು ಗುರುವೇ"[೨೭] (೧೮)

ಹತ್ತು ಸುಳಿಗಳು ಇರಲು ಧ್ರುವವೆಂದೂ, ಇಪ್ಪತ್ತಾರು ಸುಳಿಗಳು ಶುಭ. ರೋಮಜಗಳು ಮುವತ್ತೇಳು ಇದ್ದರೂ ಸಹ ಶುಭವೆನಿಸುವದು. ನೂರಾಇಪ್ಪತ್ತು ಸುಳಿ ಇದ್ದು, ಮೂರು ಅಧಿಕವಾಗಿರವ ಸುಳಿಗಳು ಇರುವವು ಎಂದು ಹೇಳಿ ಬಲದಾವರ್ತದ ಹಲ್ಸುಳಿ, ಚಿಪ್ಪಿನ ಆಕಾರವಾಗಿರಲು ಸೂಕ್ತ, ನೂರ್ಕೋಲಿನವಾದ ಲಲಿತ ಶತಪಾದದಿಂದ ವತ್ಸವು ಬಲು ನಕ್ಕಿದ ಆಕಾರದಲ್ಲಿದ್ದರೆ ಅವಲೀಢ ಎಂದು ಗುರುತಿಸಲಾಗಿದೆ. ಹಾವಿನಂತಹ ಪಾದವಿರಲು ಅದರರ್ಧ ಪಾದ ಮುಕುಳವಾಗಿರಲು ಕುಟ್ಮಲದಂದು ಒಂದಾಗಿ ಕೂಡಿ ಸಮೂಹದಲ್ಲಿರುತ್ತವೆ.

"ಉರದೊಳ್ ಶಿರದೊಳ್ ಭುಜದೊಳ್
ನೆರೆ ನಾಭಿಯ ಕುಕ್ಷಿ ಮಧ್ಯದೊಳಗೆರಡೆರಡುಂ
ಇರಲಾ ನಾಸಾತಲದೊಳು
ವರನೊಸಲೊಳು ವಾಜಿ ಗಂಧ ಸಧ್ರುವಮಕ್ಕುಂ"[೨೮] (೧೯)

ಉರ, ಶಿರ, ಭುಜ, ನಾಭಿ, ಕುಕ್ಷಿ ಮಧ್ಯದಲ್ಲಿ ಎರಡು ಸುಳಿಗಳಿರಲು ಹಾಗೆಯೇ ನಾಸಾತಲದೊಳಗೆ, ಹಣೆಯಲ್ಲಿ ವಾಜಿ, ಗಂಧ ಸಧ್ರುವವಿದ್ದು, ನಾಸಾಪುಟಗಳ ತಳಭಾಗದಲ್ಲಿ ಭಾಸುರ ಸುಳಿಯಿಲ್ಲದಿರಲು ಒಡೆಯನಿಗೆ ಹಾನಿ ಉಂಟಾಗುತ್ತದೆ. ಆ ಸುಳಿ ಹಣೆಯಲ್ಲಿರಲು ನಾಶ, ರಣರಂಗದಲ್ಲಿ ಆಳುವಗಾಗುವುದು.

ಮಂಡೆಯಲ್ಲಿ ಎರಡು ಸುಳಿ ಕಾಣಿಸಿಕೊಳ್ಳಲು ಶುಭ ಇಲ್ಲದಿರಲು ಲಾಯಕೆ ನಾಶವಾಗುವುದು. ಮಂಡಿಸಿ ಎದೆಯೊಳಗಿರಲು ಖರೀದಿಸಿದ ಮಾಲೀಕನಿಗೆ ಲಾಭವಿಲ್ಲದೇ ಸರ್ವನಾಶವಾಗುತ್ತದೆ. ಭುಜಮೂಲ, ಕುಕ್ಷಿಮಧ್ಯದಲ್ಲಿ ಎರಡು ಸುಳಿಗಳಿಲ್ಲದೆ ಇರಲು ವಿಜಯ ಆಗದು ಹೊಟ್ಟೆಗೆ ರುಜೆ ಶೂಲಿಗಳಾಗುವದು.

ಬಾಚರಸನ ಶಾಲಿಹೋತ್ರನಮತ ಕೃತಿಯು ಖ್ಯಾತ ಕರ್ನಾಟಕ ವೃತ್ತಗಳಲ್ಲಿ ರಚನೆಗೊಂಡಿದ್ದು ಕುದುರೆಯ ಶುಭ ಅಶುಭ ಲಕ್ಷಣ ಮತ್ತು ಸುಳಿಗಳ ಕುರಿತು ಹೀಗೆ ವಿವರಿಸುತ್ತದೆ.

> "ತುರಗದ ಕರ್ಣ ಮೂಲದೊಳು ಪುಟ್ಟೆ ಶುಭಂ ಪದದೊಳ್ ಜಯಾವಹಂ
> ಕೊರಳೊಳಗೊಂದಿರಲ್ಕೆ ಶಿರಿಯುಗ್ಮ ಮುದೇವಮಣಿ ಪ್ರಶಸ್ತ ನೀ
> ಳ್ದಿರಲದು ಲೋಚಮಾನ ಮುದಿತೋನ್ನತೆಯಂ ಸಿರಿವೃಕ್ಷದಂತೆ ತೋ
> ರಿರೆ ಶುಭಮುಂ ಉರಸ್ಥಳದ ನಾಲ್ಕರ(ಚಾ)ಕದೊಳಿಷ್ಟ ಸಿದ್ಧಿಯಂ"[೫೯] (೧೪)

ಕುದುರೆಯ ಶುಭಲಕ್ಷಣಗಳನ್ನು ಚರ್ಚಿಸುತ್ತಾ ಕರ್ಣದಿಂದ ಹುಟ್ಟಿದ ಅಶ್ವ ಉತ್ತಮವಾದದ್ದು ಜಯವನ್ನು ತಂದುಕೊಡುತ್ತದೆ. ಕೊರಳೊಳಗೆ ಗಿರಿಯುಗ್ಮ, ದೇವಮಣಿ ಇರಲು ಅತ್ಯುತ್ತಮವೆನಿಸಿ ಕೊಳ್ಳುವುದು. ಸಿರಿ ಸಂಪತ್ತು ವೃಕ್ಷದಂತೆ ಕಂಗೊಳಿಸುವ ಕುದುರೆ ಶುಭವನ್ನು ತರುತ್ತದೆ. ಉರಸ್ಥಳದಲ್ಲಿ (ಹೊಟ್ಟೆ) ನಾಲ್ಕು ಪಟ್ಟಿಕೆಗಳಿರಲು ಅಷ್ಟಸಿದ್ಧಿಯನ್ನು ದಯಪಾಲಿಸುತ್ತದೆ.

> "ಉರದೊಳ್ ದೊಡ್ಡಿತಿನಿಪ್ಪುದೊಂದು ಸುಳಿಯಾಗಲ್ ಸೌಖ್ಯ ಮುಂಗಾಲ್ಗಳ
> ತ್ತರದಿಂ ನಾಲ್ಕರಲಂತೆ ಮಂಗಳಕರಂ ಇಷ್ಟಾಸ್ಪದಂ ರಂಧ್ರದಿಂ
> ತರದಿಂ ಮೇಖಳೆಯುಗ್ಮ ಮುದ್ರವಕರಂ ಕೇಶಾಂತದಾವರ್ತದಿಂ
> ಸರಿಯಿಂತಾದಡ ಮಂಗದೊಳ್ (ಸುಳಿಯ) ಮೂವತ್ತೇಳವತ್ಯುತ್ತಮಂ"[೬೦] (೧೫)

ಹೊಟ್ಟೆಯೊಳಗೆ ದೊಡ್ಡದಾದ ಒಂದು ಸುಳಿಯಿರಲು ಸೌಖ್ಯ ಮತ್ತು ಸಂತೋಷವನ್ನುಂಟು ಮಾಡುತ್ತದೆ. ಅದೇ ರೀತಿ ಮುಂಗಾಲುಗಳ ಮೇಲಿನ ಭಾಗದಲ್ಲಿ ನಾಲ್ಕು ಸುಳಿಯಿರಲು ಮಂಗಳವನ್ನುಂಟು ಮಾಡುವುದು. ಹಾಗೆಯೇ ಇಷ್ಟಾರ್ಥವನ್ನು ನೀಡುವ, ರಂಧ್ರದಿಂದ ಹಿಡಿದು ಮೇಖಳೆಯುಗ್ಮ, ಮುದ್ರವಕರ,ಕೇಶಾದಂತ, ಆವರ್ತದಿಂದ ಸರಿಯಾಗಿ ಮೂವತ್ತೇಳು ಸುಳಿಯಿರಲು ಮಂಗಳಕರವಾದವುಗಳು ಎಂದು ಹೇಳಿರುವನು.

> "ಮೂಗಿನ ಕಂಬಿಯೊಳ್ ಮರಣಮಂ ಪದರಿಕ್ಕೆಲದೊಳ್ ಸಹೋದರಂ
> ಗಾಗಳೆ ಮೃತ್ಯು ಕೇಳ್ಕದಪಿನೊಳ್ ಸತಿಗಂ ಮೃತಿ ನಾಸಿಕಾಗ್ರದೊಳ್
> ಬೇಗದಿ ವಿತ್ತಮಂ ಕೆಡಿಕು ಕಣ್ಣ ಮೊದಲ್ ಸುಳಿಯಿಂ ಹಯೊಧಿಪಂ
> (ಸಾಯ್ಗು) ಭಯೋಷ್ಟದೊಳ್ ಸುಳಿಗಳಾಗಲು ತತ್ಕುಲನಾಶ ನಿಶ್ಚಯಂ"[೬೧] (-೧೬)

ಕುದುರೆಯ ಮೂಗಿನ ಕಂಬಿಯೊಳಗೆ ಸುಳಿ ಇದ್ದರೆ ಸಾಕಿದ ಒಡೆಯನ ಸಹೋದರರು ಮರಣಹೊಂದುವರು. ಹೆಂಡತಿಯು ಸಹ ನಾಶಹೊಂದುವಳು ಹಾಗೆಯೇ ಮೂಗು ಮತ್ತು ಕೆಟ್ಟಕಣ್ಣುಗಳಿಂದ ಕುದುರೆಗೆ ಸುಳಿಯಿರಲು ಅದರ ಒಡೆಯ ಸಾಯುವನು. ಭಯೋಷ್ಟದೊಳಗೆ ಸುಳಿಯಿರಲು ಬೇಗನೆ ಕುಲನಾಶವಾಗುತ್ತದೆ. ಇವನ್ನು ತಿಳಿದು ಕುದುರೆಯನ್ನು ಬಿಟ್ಟು ಬಿಡುವದು ಒಳ್ಳೆಯದು.

"ಸುಳಿಗಳ ಪುಬ್ಬಿನೊಳಾಗೆ ವಿತ್ತವಳಿಗುಂ ಗೋನಾಳಿಯಂದಿ
ಕ್ಕೆಲದೊಳುಂ ಮಾನುಷ ಮೆಟ್ಟೆ ಶೋಕ ಕಕುದಾವರ್ತದಿಂ ತೋರಲಾ
ಗಳೆ ಕೊಳ್ಗುಂ ಪತಿ ಪತ್ನಿ ಪುತ್ರ ಚಯಮಂ ಕಕ್ಷಾವರ್ತದಿಂತ
ತ್ಕುಲನಾಶಂ ಕದನೋಗ್ರ ಮೃತ್ಯು ಮುರದೊಳ್ ಮೂಡಲುದಾವರ್ತದೊಳ್"[೪೨] (೧೮)

ಹುಬ್ಬಿನೊಳಗೆ ಸುಳಿಗಳಿದ್ದು ವಿತ್ತವಳಿಗಳಿಂದ, ಗೋನಾಳಿಯಂತೆ ಕಾಣುತ್ತಿದ್ದು, ಮಾನುಷ ಮೆಟ್ಟೆ, ಶೋಕ, ಕಕುದಾ ಆವರ್ತದಿಂದ ಕಾಣುತ್ತಿರಲು ಗಂಡ ಹೆಂಡತಿ, ಮಕ್ಕಳು ಕಕ್ಷಾವರ್ತದಿಂದ ತಕ್ಷಣವೇ ಕುಲ ನಾಶವಾಗುವದು. ಸಾವು ಸಮೀಪಿಸಲು ಅಂತಹ ಕುದುರೆಯನ್ನು ಬಿಟ್ಟು ಬಿಡುವದು ಒಳ್ಳೆಯದು.

"ಆಸನದೊಳ್ ಸುತಾರ್ಥಹತಿ ಶೀವನಿಯೊಳ್ ಕಲಹಂ ಧನಕ್ಷಯಂ
ಕ್ಲೇಶನಿಧಿ ಕ್ವಣಿಸ್ಥಲದೊಳುಂ ಮೃದು ಕಾಕಸೆಯೊಳ್ವಿನಾಶಮಾ
ರ್ಜೇಸರು ಕುರ್ಚಿಯೊಳ್ ನೆಗಳ್ದ ಕುಟ್ಟಿಕೆಯೊಳ್ ಸಲೆ ಜಾನುಜಂಘೆಯೊಳ್
ದೂಷಣಮೆಪ್ಪತಾರು ಸುಳಿಗಳ್ ತುರಂಗದೊಳೆಂದು ಭಾಸ್ಕರಂ"[೪೩] (೨೦)

ಕುದುರೆಯ ಆಸನದೊಳಗೆ ಸುತಾರ್ಥ, ಶಿವನಿಯೊಳಗೆ ಕಲಹ, ಧನಕ್ಷಯವಾಗುತ್ತದೆ. ಕ್ಲೇಶನಿಧಿ, ಕ್ವಣಿಸ್ಥಲದೊಳಗೆ ಮೃದು, ಕಾಕಸೆಯೊಳಗೆ ಇರಲು ನಾಶ, ಕೂರ್ಚಿ, ಕುಟ್ಟಿಕೆ, ಸಲೆ, ಜಾನು, ಜಂಘೆ, ದೂಷಣ ಎಂಬ ಇಪ್ಪತ್ತಾರು ಸುಳಿಗಳು ಕುದುರೆಗಳಿಗೆ ಇವೆ ಎಂದು ಭಾಸ್ಕರನು ಹೇಳುತ್ತಾನೆ.

ಹಾಲಸ್ಯ ಪುರಾಣದಲ್ಲಿ ಕುದುರೆಗಳ ಸುಳಿಗಳನ್ನು ಕುರಿತು ವಿವರಿಸುತ್ತಾ

"ಜಂಘೆಗಳೊಳ್ ಸುಳಿಚೋಡಂ
ಸಂಘಟಮಾಗಿ ತುರಂಗಂ
ಸಂಘಿಸೆದಲ್ ಭಯಬಂಧಂ
ಲಂಘಿತಮಾಗದೆ ಬರ್ಕುಂ"[೪೪] (೧೧-೯೦)

ಕುದುರೆಯ ತೊಡೆಯಲ್ಲಿ ಎರಡು ಸುಳಿಗಳು ಕೂಡಿಕೊಂಡಿದ್ದು, ಸಂಘಸಲು ಹೆದರಿ ಯುದ್ಧ ಮಾಡದೇ ಹಿಂಜರಿಯುತ್ತದೆ. ಮೇಲಿನ ತುಟಿಯಲ್ಲಿ ಸುಳಿಯಿರುವ ಕುದುರೆ ಸಾಕಿದ ಒಡೆಯನ ತಾಯಿಯನ್ನು ಕೊಂದು ನಾಶ ಮಾಡುತ್ತದೆ. ಹಾಗೆಯೇ ಕಕ್ಷೆಯಲ್ಲಿ ಬಲ ಗಡೆಗೆ ಸುಳಿ ಇದ್ದರೆ ರಾಜನಿಗೆ ಶಿಕ್ಷೆಯನ್ನು ಕೊಡುತ್ತದೆ.

ಮೂಗಿನ ಮೇಲೆ ಹೊಸ ಸುಳಿ ಇರಲು ಆರಾಮು ಇಲ್ಲದೆ ತೂಕಡಿಸುತ್ತ ನಿಲ್ಲುವದು. ಕಕ್ಕೆಯ ಬಲಗಡೆ ಸುಳಿ ಇರಲು ಬೇಗನೆ ರಾಜನಿಗೆ ಸಿಗದೆ ಹೆದರಿಕೆ, ಆತಂಕದಿಂದ ಇರುವದು. ಜಾನು ಒಳಗೆ ಸುಳಿಯಿದ್ದು ಕುದುರೆಯ ಸ್ಥಾನ, ಕುಲ ನಾಶಮಾಡುವುದು ಇದು ಕೆಟ್ಟ ಕುದುರೆಯ ಸಮೂಹ ಲಕ್ಷಣವೆಂದು ಹೇಳಿರುವನು. ಇಂತಹ ಕುದುರೆ ಲಾಯದೊಳಗೆ ಇರಲು ಕೇಡು ಉಂಟಾಗಿ ಕುದುರೆ ಸಾಯದೆ ಬದುಕುವದು ಮುವತ್ತೆರಡು ವರ್ಷದವರೆಗೆ.

ಉತ್ತಮ ಸುಳಿಗಳ ಲಕ್ಷಣ ಕುರಿತು ಚರ್ಚಿಸಿ ಅವುಗಳಿಂದಾಗುವ ಉಪಯೋಗವನ್ನು ಹೇಳಲಾಗಿದ್ದು ಅದು ಈ ಕೆಳಗಿನಂತಿದೆ.

"ಸುಳಿಗಳ್ ಕೊರಳೊಳ್ ತಾವು
ಜ್ವಳತುರಗಂಗಳ್ಗ ಮಿರ್ಪವವೆ ಕೇಳ್ ಧರೆಯೊಳ್
ಮಿಳಿರ್ವ ವರದೇವ ಮಣಿಗಳ್
ಬಳಿಕವರಿಂದ ಖಿಳ ಸಂಪದಂ ದೊರೆಕೊಳ್ಗುಂ"[೪೫] (೧೧-೭೮)

ಕುದುರೆಯ ಕೊರಳಲ್ಲಿ ಪ್ರಜ್ವಲವಾದ ಮತ್ತು ಸ್ಪಷ್ಟವಾದ ಸುಳಿಯಿರಲು 'ದೇವಮಣಿ'ಯೆಂದು ಹೆಸರಿಸಿ ಆ ಸುಳಿಗಳಿಂದ ಒಡೆಯನಿಗೆ ರಾಜ್ಯ, ಸಂಪತ್ತು, ಐಶ್ವರ್ಯ ದೊರಕುತ್ತದೆ. ಕುತ್ತಿಗೆಯಲ್ಲಿ ಎರಡು ಸುಳಿಯಿರಲು ಮತ್ತು ಎದೆಯಲ್ಲಿ ಹೊಟ್ಟೆಯಲ್ಲಿ ಎರಡು, ವರಲಪನದೊಳೆರಡು ನಾಸಿಕಾ (ಮೂಗಿನ) ಪುಟಯುಗ್ಮದೊಳಗೆ ಎರಡು, ಹಣೆಯೊಳಗೆ ಒಂದು, ಹೊರ ಗುದದೊಳಗೆ ಸುಳಿಯಿರಲು ಉತ್ತಮವಾದ ಸುದ್ದಿ ತಿಳಿಯದು.

"ಆವ ತುರಂಗದ ಗೋಣು
ದ್ಭಾವದ ಮಧ್ಯದೊಳಿರ್ಕುಂ
ತಾವೆರಲುಂ ಸುಳಿ ಕೇಳ್ಗೆ
ಕೋವಿದ ಕೋಡಿಯದಲ್ತೇ"[೪೬] (೧೧-೮೮)

ಯಾವ ಕುದುರೆಯ ಗೋಣು ಉದ್ದವಾಗಿದ್ದು, ಆ ಗೋಣಿನ ಮಧ್ಯದಲ್ಲಿ ಎರಡು ಸುಳಿ ಇರಲು ಅದನ್ನು ಕೊಂಡುಕೊಂಡ ಒಡೆಯನಿಗೆ ಕೇಡು ಉಂಟಾಗುವುದು. ಇದು ಉತ್ತಮ ಕುದುರೆಯ ಲಕ್ಷಣವಲ್ಲವೆಂದು ಶಾಸ್ತ್ರಕಾರರ ಅಭಿಮತವಾಗಿದೆ.

"ಕೊಳಲಿಕೆ ಹೋದಾ ಸಮಯದಿ
ಘಳಿಲನೆ ಸೂರ್ಯನನ್ನು ನೋಡಿ ಬಾಲವ ಬೀಸೇ
ಬಲ ನೋಡಿ ಲದ್ದಿಯಿಕ್ಕಲು
ನೆಲನೊದ್ದಲ್ಲಣಿಸೆ ಕುದುರೆ ಕೊಂಡೊದೆ ಲಾಭಂ"[೪೭] (೫೩)

ಕುದುರೆಯನ್ನು ಖರೀದಿಸುವ ಸಂದರ್ಭದಲ್ಲಿ ತೆಗೆದುಕೊಳ್ಳುವ ಒಡೆಯನನ್ನು ನೋಡಿ ತಕ್ಷಣ ಸೂರ್ಯನಿಗೆ ಮುಖ ತೋರಿಸಿ ಬಾಲವನ್ನು ಬಿಸಿ, ಬಲಗಡೆ ಮುಖವಾಗಿ ಲದ್ದಿಯನ್ನು ಹಾಕಲು ಮೂತ್ರ ಬಿಟ್ಟು ನೆಲವನ್ನು ಒದ್ದೆಮಾಡುವಂತಹ ಕುದುರೆಯನ್ನು ತೆಗೆದು ಕೊಳ್ಳುವ ಒಡೆಯನಿಗೆ ಲಾಭ ಉಂಟಾಗುತ್ತದೆ. ಅಲ್ಲದೇ ಸಂಪತ್ತು ಸಮೃದ್ಧಿಯಾಗುವುದು ಇದು ಒಳ್ಳೆಯ ಲಕ್ಷಣ. ಹಾಗೆಯೇ ಖರೀದಿಸುವ ಸಮಯದಲ್ಲಿ-

"ಎಡನೋಡಿ ಮಯ್ಯ ತಲೆಯನು
ಕೊಡಹುತ ಅಂಗಾಂಗಳನ್ನು ಕಚ್ಚಲು ತನ್ನಾ
ಅಡಿಗಳ ಪಸರಿಸಿ ಕೂಗಲು
ಬಿಡದಾ ಕುದುರೆಯನು ಕೊಳ್ಳೆ ಹೊಲ್ಲೆಹವಕ್ಕುಂ"[೪೮] (೩೪)

ಕುದುರೆಯನ್ನ ಕೊಂಡುಕೊಳ್ಳುವ ಸಮಯದಲ್ಲಿ ಎಡಗಡೆ ನೋಡಿ, ಮೈ ಮತ್ತು ತಲೆಯನ್ನು ಕೊಡವಿ ಅಂಗಾಂಗಗಳನ್ನು ಕಚ್ಚಿಕೊಳ್ಳುತ್ತ ಆಗಾಗ ಕೆಟ್ಟ ಧ್ವನಿಯಿಂದ ಕೂಗುತ್ತಿದ್ದರೆ ಅಂತಹ ಕುದುರೆಯನ್ನು ಖರೀದಿಸದೇ ಬಿಡುವುದು ಉತ್ತಮ. ಬಾಲ ಎಬ್ಬಿಸಿ, ಹಲ್ಲು ಪುಡಿಯ ಮಾಡಿ ಮೇಲಕ್ಕೆ ಊದಲು ಅಂತಹ ಕುದುರೆ ಯುದ್ಧಕ್ಕೆ ಸೂಚನೆಯನ್ನು ಕೊಡುವದು. ಅಲ್ಲದೇ ಸಾಲು ಸಾಲಾಗಿ ಕಣ್ಣೀರು ಸುರಿಸುತ್ತಿರಲು ಸೋಲನ್ನು ಸೂಚಿಸುವ ಲಕ್ಷಣವನ್ನು ಒಡೆಯನಿಗೆ ತೋರಿಸುವದು.

"ಬಲ್ಲಿದ ರಿಪುವನು ಗೆಲುವರೆ
ಹಲ್ಲಣವನು ಹಾಕಿ ತಂದು ನಿಲ್ಲಿಸೆ ಬೇಗಂ
ಉಲ್ಲಸದಿಂ ಬಲಗಾಲನು
ಸಲ್ಲಲಿತದಿ ಕೆದರೆ ಕುದುರೆ ಜಯವಹವಕ್ಕುಂ"[೪೯] (೫೬)

ಬಲಾಢ್ಯನಾದ ವೈರಿಯನ್ನು ಗೆಲ್ಲುವ ಸೂಚನೆಯನ್ನು ತಿಳಿಸುತ್ತದೆ. ಅಲ್ಲದೇ ಯುದ್ಧಕ್ಕೆ ಸಿದ್ಧಮಾಡಿ ಹಲ್ಲಣವನ್ನು ಹಾಕಿ ತಂದು ನಿಲ್ಲಿಸಿದ ಸಂದರ್ಭದಲ್ಲಿ ಸಂತೋಷದಿಂದ ಬಲಗಾಲನ್ನು ಕೆದರುತ್ತಿದ್ದರೆ ಒಡೆಯನಿಗೆ ಜಯದ ಮಾಲೆಯ ಸುವಿಚಾರ ತಿಳಿಸುತ್ತದೆ. ಆದ್ದರಿಂದ ಹಯಶಾಸ್ತ್ರನಾದ ಸದಾಶಿವರಾಯ ಕುದುರೆ ಉತ್ತಮ ಮಿತ್ರನಾಗಿ, ಯುದ್ಧದಲ್ಲಿ ಸಹಾಯವಾಗುತ್ತದೆ ಮತ್ತು ನಾಡಿಗೆ, ಜಯ, ಕೀರ್ತಿ, ಲಾಭ, ಶೋಭೆ, ಸತಿ, ಸುತರನ್ನು ಸುಖಮಯವಾಗಿ ನೋಡಿಕೊಳ್ಳುತ್ತದೆ. ಅಲ್ಲದೆ ಪ್ರಮಾಣದಲ್ಲಿ, ಪ್ರೀತಿಯಲ್ಲಿ ಉತ್ತಮವಾದದ್ದು. ರತ್ನ, ಸಿರಿಸಂಪತ್ತನ್ನು ಒದಗಿಸುತ್ತದೆ. ಇದರಿಂದ ರಾಜ್ಯ, ಧನಧಾನ್ಯ ಕೈವಶವಾಗುತ್ತದೆ. ರಾಜ ಜಯಲಕ್ಷ್ಮೀ ಒಲಿಯುತ್ತಾಳೆ ಎಂದು ಕುದುರೆಯ ಬಗ್ಗೆ ಅತ್ಯಂತ ನಂಬಿಗೆಯಿಂದ ಮನಸಾಕ್ಷಿಯಾಗಿ ಅದರ ಗುಣಗಾನ, ಮಹತ್ವ, ಅವಶ್ಯಕತೆಯನ್ನು ಕುರಿತು ಹೇಳಿರುವನು. ಸಿಂಧು ದೇಶ ಪ್ರದೇಶದಲ್ಲಿ ರಾಜರು ಋಷಿಗಳು ಯಜ್ಞವ ಮಾಡುವ ಸಮಯದಲ್ಲಿ ಧರಣಿಯೂ ಮಥನಿಸಿ ದಕ್ಷಿಣ ಪ್ರದೇಶದ ಗಾರ್ಹ್ಯ

ಪತ್ತೆಯಲ್ಲಿ ಧೂಮಜ್ವಾಲೆ ತುಂಬಿತು ಆ ಸಮಯದಲ್ಲಿ ಕಣ್ಣೀರಿನ ಹನಿಯು ಜಲವಿಳಿಯಲು ಬೆರಳಲಿಂಮ್ಮಿಡಿದ ಸಂದರ್ಭದಲ್ಲಿ ಕುದುರೆಗಳು ಜನ್ಮಿಸಿದವು. ತುರುಗರತ್ನಗಳೆಂಬ ಎರಡು ಬಲವುಳ್ಳ ಸ್ತ್ರೀ ಪುರುಷತ್ವ ರೂಪವನ್ನು ಧರಿಸಿ ಕಾಣಲು ಅಲ್ಲಿರುವ ಋಷಿಮುನಿಗಳು ಬೆರಗಾಗಿ ನಿಂತರು.

ಅಶ್ವಲಾಯನ ಮನಿಯಾದ ಈತ ತನ್ನಶ್ವಪಾತದಿ ಜನ್ಮಿಸಿದವೆಂದು ತಿಳಿದು ಅಶ್ವಕ್ಕೆ ಹೆಸರಿಟ್ಟು ಶಾಲಿಹೋತ್ರಮುನಿಗೆ ವಿಶ್ವದೊಳಗೆ ಈ ರತ್ನವನ್ನು ನೀನು ಈಶ್ವರನ ಅನುಗ್ರಹದಿಂದ ವಿಸ್ತಾರ ಮಾಡು ಎಂದು ಆದೇಶ ಮಾಡಿದನು.

ಶಾಲಿಹೋತ್ರ ಮುನೀಂದ್ರನು ಗಜಾಲೋಲನಂಘ್ರಿಯ ಭಜಿಸಿ ಕೇಳಲು ಘೋಟಕದ ದುರ್ಗಣ. ಸುಗುಣ ಲಕ್ಷಣವನ್ನು ಸುಳಿವರ್ಣ, ಅಂಜನಗಳ ಮೂಲಕ ಕೀಳುಮೇಲು ಎಂಬುದಾಗಿ ಗುರುತಿಸಿ ರೇಖೆಯನ್ನು ಅವುಗಳ ರೋಗ, ಚೇಷ್ಟೆ ಚಿಕಿತ್ಸಾಕ್ರಮಗಳಿಂದ ಅರಿತುಕೊಳ್ಳುವುದು ಎಂದು ಹೇಳಿದನು.

"ಶೃಂಗಿ ವಾಳಾಂಜನಿಕ ರಾಳಿಕು
ಚಾಂಗಿ ಕಾಳಾಮುಖ ವಿಕಾಳಿಕೃ
ಶಾಂಗಿ ಪಂಚಖರಿ ತ್ರಿಕರ್ಣಿ ವಿದಿಕ್ ಶೃತಿಗಳೆಂಬಾ
ಅಂಗದೊಳಗೀರೈದು ಬಗೆಯತು
ರಂಗವಿವು ದೇಶಾಧಿಪತಿಗಳ
ಭಂಗಬಡಿಸುವವಧಿಕ ಖೋಡಿಗಳೆಂದನಾ ಮುನಿಪಾ"[೨೨] (೧-೮)

ಶೃಂಗಿ, ವಾಳಾಂಜನಿ, ಕರಾಳಿಕು, ಚಾಂಗಿ, ಕಾಳಾಮುಖ, ವಿಕಾಳಿ, ಕೃಶಾಂಗಿ, ಪಂಚಖರಿ, ತ್ರಿಕರ್ಣಿ ವಿಧಿಕ್ ಎಂಬ ಶೃತಿಗಳು ದೇಹದೊಳಗೆ ಹತ್ತು ವಿವಿಧ ಭಾಗದಲ್ಲಿರಲು ದೇಶಾಧಿಪತಿಗಳು ರಾಜರನ್ನು ಭಂಗಪಡಿಸುವ, ನಾಶಗೊಳಿಸುವ, ಖೋಡಿಗಳೆಂದು ದುರ್ಲಕ್ಷಣ ಕುರಿತು ವಿವರಿಸುತ್ತಾನೆ.

ಹೊಟ್ಟೆಯಲ್ಲಿ ಬಿಳಿಕಾಂಜನ, ಬಲಬದಿಯ ಎಲುಬಿನಲ್ಲಿ ಪಾಂಡುರಂಜನ ಮುಖದ ಮೇಲೆ (ವದನವಳೀಯ) ಪದ್ಮಾಂಜನ ಎಡಗಡೆಯ ತುದಿಯಲ್ಲಿ ಕೃಷಾಂಕದ ಮಹಾಂಜನವಿದ್ದು, ವದೆವೆಧಾ ಸ್ತ್ರೀಯರನ್ನು ನಾಶಮಾಡುವದು. ವರದ ನಾಲ್ಕು ಅಂಜನಗಳೊಳಗೆ ಒಂದು ಎಡ ಬಲ ಎಲುಬುಗಳಲ್ಲಿ ಕುದುರೆಯನ್ನು ಸಾಕುವ ಒಡೆಯನಿಗೆ ದುಃಖ ಹೆಚ್ಚುವುದು. ಜೊತೆಗೆ ಕೆಂಪು ಮಚ್ಚೆಯಿದ್ದು ಕರಿಯ ಕುದುರೆಯ ಕಂದುಬಣ್ಣದ ದೊಡ್ಡ ರಶಿಮ್ಮತವಾಹಳ ಇದ್ದರೆ ವಿದ್ಯಾವಂತರಾದ ಅದನ್ನು ಬಿಟ್ಟರೆ ಒಳ್ಳೆಯದು. ಹಲ್ಲು ಹೀನಾಧಿಕ ಸುಳಿಯು ತ್ರೈಕಾವರ್ಣದಿದ್ದು ಪತಿಗೆ ಆಘಾತವೆಂದು ತಿಳಿದು ಸಂತತಿಯನ್ನು ಹರಿಸುವುದು. ಫಣದಂತೆ ಮುಖಹೊಂದಿ ಅಳಮ ಸುಳಿಯನ್ನು ಹೊಂದಿದ್ದು ದುಃಖವನ್ನು ಮರೆಯಬೇಕು.

ಒಂದು ಶುಭ್ರ ನಯನದಲ್ಲಿ ಹನ್ನೊಂದು ಪೆಂಗಾಳಿಯ ಕಣ್ಣುಗಳು ಸೈಂಧವಗಳ ಮಂಗಳಾಖ್ಯವು ಕೇಡು ಬಯಸುವವು. ಸುಂದರವಾದ ಸುಳಿರೇಖೆ ರೋಮಗಳನ್ನು ಪರಿಶೋಧಿಸದೆ ಮಂದಮತಿಯುಳ್ಳ ಕುದುರೆಯನ್ನು ಕೊಳ್ಳಲಾಗದು.

ಎಂಟು ಪ್ರಕಾರದ ಸುಳಿ, ರೇಖೆ ರೋಮಗಳಲ್ಲಿ ಎಂಟು, ಕಮಲದೊಳಗೆ ಪ್ರದಕ್ಷಿಣವೆಂಟು ಪ್ರದಕ್ಷಿಣಾಕೃತಿ ಕರದಲ್ಲಿ ನೆಕ್ಕಿದೊಳಗೆ ಹೊಂದಿಕೊಂಡು ಚೇಳಿನೋಪಾದಿಯಲ್ಲಿ ಒಂಟಿ ಬಟ್ಟೆಯ ಬಣಜಿಗನಂತೆ ನಾಟಿದವು. ಶಾವಂತಿಕೆಯಂತೆ ಶಿಂಪಿಗನನ್ನು ಒಲಸಿತು. ಎರಡು ಗೇಣು ಉನ್ನತವಾದ ಸುಳಿ ವಡಮುರಿದು ಒಂದೆಡೆಗೆ ಕಾಣುವಂತಿದ್ದು, ಎಮ್ಮೆ, ಚೇಳಿನ ಸುಳಿಯ ರೇಖೆ ಬೆರಳೆರಡರ ಅಳತೆಯಲ್ಲಿ ಅಕ್ಕರಿರದೇ ಬಟ್ಟೆಯ ಬಣಜಿಗನ ಸುಳಿ ಮುರಿಯದಂತೆ ರೇಖೆಯಿರಲು ಸಮತಾ ಎನ್ನುವರು. ಪಾದ, ಪೃಷ್ಠೋದರ ಹೃದಯ ಪದನಾದಿ ದೇಹದೊಳಗೆ ಚೇಳಿನೋಪಾದಿಯಲ್ಲಿ ಸುಳಿಯಿರಲು ಒಡೆಯನಾದವನಿಗೆ ಸಾವುತಪ್ಪದು ಪ್ರಾರಂಭದಲ್ಲಿ ಏಳೆಂಟು ಗೆರಿಗಳ ಹಾದಿ ಒಂದೇ ರೀತಿಯ ಫಲ ಮತ್ತಾದರೆಯು ಸಿಂಪೆಮ್ಮೆ ಚೇಳಿನಂತಿರಲು ಮುಟ್ಟಲಾಗದು.

> “ಹಲ್ಲಣದ ಕೆಳಗಿರಲು ಸುಳಿತಾ
> ಹೊಲ್ಲೆಯವು ತಾಕುವದು ನಡು ಬೆ
> ನ್ನಲ್ಲಿ ಸುಳಿಯಿರೆ ಆಸನ ಕ್ರಮವೆಂದು ಕಂದಕದಾ
> ಝುಲ್ಲಿಯಲಿ ಸುಳಿ ತಾಕೆ ಹಿಂದೆಲಿ
> ಯೆಲ್ಲ ಕಂಡರೆ ರವಿಗೆರಗಿ ಕರ
> ದಲ್ಲಿ ಮುಟ್ಟಿದ್ದರೆ ಸಚೇಲ ಸ್ನಾನದಿಂ ಶುದ್ಧಿ”[೫೧] (೧-೧೬)

ಮೇಲಿನ ಸಾಲುಗಳು ಕುದುರೆ ಸುಳಿಯ ಮಹತ್ವವನ್ನು ಕುರಿತು ವಿವರಿಸುತ್ತವೆ. ಕುದುರೆಯನ್ನು ಏರಿ ಕುಳಿತುಕೊಳ್ಳುವ ಜೀನು ಅಥವಾ ಆಸನದ ಕೆಳಗೆ ಸುಳಿಯಿರಲು ಹೊಲ್ಲೆಯವು ತಾಕುತ್ತದೆ. ನಡುವಿನ ಬೆನ್ನಲ್ಲಿ ಸುಳಿ ಇದ್ದು, ಆಸನ ಕ್ರಮದಿಂದ ಕಂದಕದ ಝುಲ್ಲಿಯಲ್ಲಿ ಸುಳಿ ತಾಗುತಿರಲು, ಹಿಂದುಗಡೆ ಕಾಣುತ್ತಿರಲು ರವಿಗೆರಗಿ ಕೈಮುಟ್ಟಿದೊಡನೆ ಸಚೇಲ ಸ್ನಾನ ಮಾಡುವುದು. ಪರಿಶುದ್ಧವಾಗುವದು.

> “ಆವ ಕುದುರೆಗಳ ಬಾಲದ್ಧಣೆಗಳ
> ಠಾವಿನಲಿ ಸುಳಿಯಿರಲು ಒಡೆಯಗೆ
> ಸಾವು ಕೇಡಹುದುದರ ಕಂದಕದಲ್ಲಿ ರೋಮಗಳೂ
> ನ್ಯಾವರಿಸಿದಂತೆರಡು ಪಾರ್ಶ್ವವ
> ನಾವರಿಸಿಕೊಂಡು ದ್ವಿಭಾಗವ
> ಭಾವಿಸುತ್ತಿರೆ ಭಾಳಲೋಚನನೆನಿಪುದ ಶುಭಕರಾ”[೫೨] (೧-೧೭)

ಕುದುರೆಯ ಬಾಲದ ಹಣೆಯಲ್ಲಿ ಸುಳಿ ಇರಲು ಒಡೆಯನಿಗೆ ಸಾವುತಪ್ಪದು. ಕಂದಕದಲ್ಲಿ ಕೂದಲುಗಳನ್ನು ಆವರಿಸಿಕೊಂಡು ಎರಡು ಪಾರ್ಶ್ವ ಭಾಗಗಳಲ್ಲಿ ಕಾಣುತ್ತಿದ್ದರೆ ಅದನ್ನು ಸಾಕುವ ಒಡೆಯನಿಗೆ ಒಳ್ಳೆಯದಾಗುತ್ತದೆ. ಮೂರು ಭಾಗದ ಮುಖ ಪಟ್ಟಿಯಲ್ಲಿ, ವಾರುಗಳಲ್ಲಿ ಶ್ರೇಷ್ಠವಾದ ಕೈವಶವಾಗದೇ ಗಂಗೆದೋಗಲು ರೂಪದಲ್ಲಿ, ಕೊರಳಿನೊಳಗೆ ಕಾಣುತ್ತಿದ್ದರೆ ಸರ್ಪವೆಂದು ತಿಳಿದು ಪಾರ ಕೆಟ್ಟುದ್ದು ಆಗುವುದು ಶಿರದಲ್ಲಿ ಶಿರೋರುಹಗಳಿಲ್ಲದಿರಲು ಬಲು ಖೋಡಿ ಮುಂಡಿ ತಾಗುವದು. ಮುಂದುಗಡೆಯ ತಲೆ ಎಡ, ಬಲ, ಭಾಗದಲ್ಲಿ ಒಂದು ಸುಳಿ ಇರಲು ಶೂನ್ಯ ಮಸ್ತಕವೆಂದು ನಡುವೆ ಇರಲು 'ಬಾಸಿಂಗ' ಸುಳಿಯೆಂದು ಬೆನ್ನೊಳಗೆ ಬಿಳಿಯ ಪಟ್ಟಿಯಿರಲು ಸುಂದರವಾದ ಪರಿಹಾರವಿಲ್ಲದ ಹರಿನಾಗ ಅದರ ಫಲಗಳ ಕುರಿತು ಹೇಳಿದ್ದಾನೆ.

ಹಣೆಯಲ್ಲಿ ಶೂನ್ಯವಿರಲು ಖರೀದಿಸಿದ ಒಡೆಯನಿಗೆ ಸಂಕಷ್ಟದಲ್ಲಿ ಸಿಲುಕಿಸುವದು. ಕಡಿಮೆ ಆಯುಷ್ಯದಿಂದ ಬದುಕುವದು. ಬಾಸಿಂಗ ಸುಳಿಯಿರಲು ಹೆಂಡತಿಯು ಸಾಯುವಳು. ಮದುವೆಯಾಗದೆ ಇರುವದು ಸುಂದರಿಯರ ರಣಭಂಗ ಮಾಡುವದು ಅದನ್ನು 'ಹರಿನಾಗ'ವೆಂದು ಕರೆಯುವರು. ಎರಡು ಮೂಗಿನ ಮಧ್ಯದಲ್ಲಿ ಬಿಳಿಯ ಸರದಂತೆ ಇರಲು ಬೊಕ್ಕಣವೆಂದೆನಿಸುವದು. ಹೆಚ್ಚು ದುಃಖವನ್ನು ಕೊಡುವದು ಎಡಗಡೆಯಲ್ಲಿ ಸುಳಿಯಿರಲು ಚಿಂತಿಮಾಡಿಸುವದು. ಶೋಕಾವರ್ತ ಮುಂತಾದ ಖೋಡಿಗಳು ಇರುವುದರಿಂದ ತುರಗಳ ನಾವರ್ತ ಎನ್ನುವರು. ಅದರ ಗುಣದಿಂದ ಸುಳಿರೇಖೆ ಹೃದಯಾವರ್ತ, ಹೃದಯದಲ್ಲಿ ಹೊಕ್ಕಳಲ್ಲಿ ನಾಭ್ಯಾವರ್ತ, ವೃಷಣಾವರ್ತ, ವೃಷಣದಿಂದ ತುಂಗು ಬಿಗುವಡೆ ಹತ್ತಿರದ ಆವರ್ತಗಳಾದ ಘೋಟೀವರ್ತ. ಹೊಟ್ಟೆಯೊಳಕ್ಷಿ, ನೇತ್ರಾವರ್ತವಳ್ಳಿಯ ಸಂದಿನಲ್ಲಿರಲು ಕಾಕಾವರ್ತವೆಂದೆನಿಸಿಕೊಳ್ಳುವುದು. ಮುಂದಣ ಜಾನುಗಳ ಮೇಲೆ ಗೂಢಾವರ್ತ ಸುಳಿ, ತತ್ಸರಿಸಿ ಸಂದಿನೊಳಗೆ ಕೀಲಾವರ್ತ, ಭಗಮೇಢ್ರಾ ಎರಡು ಗುಹ್ಯಾವರ್ತ ಹೊಳ್ಳಿಯ ಹೊರಗಡೆ ನಾನಾವರ್ತ ಇದ್ದು ಮುಂದಿನ ಚರಣಗಳೆರಡರಲ್ಲಿ, ಚಪ್ಪೆಯಲ್ಲಿರಲು ಅಂಗಾವರ್ತವೆನಿಸಿಕೊಳ್ಳುತ್ತದೆ. ಮೂಗಿನಹೊಳ್ಳೆಯಲ್ಲಿ ಸುಳಿಯಿರಲು ಜನ್ಮಾವರ್ತ, ಹುಬ್ಬಿನ ನಡುವೆ ಭ್ರೂರಾವರ್ತ, ಸ್ನಾಗೆ ಗಣೇಂದಿಳಿವಲ್ಲಿ ಹೋಗಿ ಬೀಳುವಂತಿರಲು ಮಧ್ಯಭಾಗದಲ್ಲಿರುವ ಅಶ್ವಕ್ಕೆ ಪಾವರ್ತಾಖ್ಯ ಕುದುರೆ ಎಂದೆನ್ನಲಾಗಿದೆ. ಸುಳಿಯು ಕರ್ನಾವರ್ತ ಶೋತ್ರಗಳಲ್ಲಿರಲು ಭೂಮಿಯಲ್ಲಿ ಜನ್ಮಿಸಿದ ಬೆಳೆಬೆಳೆಯುವ ಒಡೆಯನಿಗೆ ಶಕ್ತಿಯನ್ನು ಕುಂದಿಸಿ ಮುರಿದು ಕೆಡಿಸುವದು. ಬಾಲದಲ್ಲಿ ಸುಳಿಯಿದ್ದು ಹೆಚ್ಚು ಶಕ್ತಿ ಹೊಂದಿದ್ದರೆ ಪುಚ್ಛಾವರ್ತವೆಂದೂ, ಮತ್ತಿಳಿಯೊಳಗೆ ಬಲಂಗಧಿಕವಾಗಿರಲು ದುಃಖಗಳು ಹೆಚ್ಚು ಉಂಟಾಗುತ್ತವೆ.

ಎಡಬಲದ ಅಂಗದೊಳಗೆ ಸುಳಿಗಳೊಂದು ಕಡೆಗೆ ಹೆಚ್ಚಾಗಿದ್ದು, ಕುದುರೆಯು ತಕ್ಷಣ ವಿಷಮಾವರ್ತನೆಂದು ನಂಬಿ ಒಡೆಯ ಗತಿಹೀನಾ ಅಶಿತವಾದೊಡೆ ಬಿಳಿದಾದ ಅಡಿಯು ಮೂರರಲ್ಲಿ ಒಂದು ಇರಲು, ಮತ್ತಾವೆಡೆಯು ಕಾಣಿಸಲು ಅದಕ್ಕೆ ಖೋಡಿ ವಿಷಯಾಂಗೀ ಎಂದು ಕರೆಯುವರು. ಕುದುರೆಯ ಮುಂಗಾಲಿನಲ್ಲಿ ಸುಳಿ

ಹುಟ್ಟಿದರೆ ತಳಾವರ್ತಾಖ್ಯವೆಂದೂ, ಮುಂದಿರುವ ಚೇರಿನ ಕುದುರೆ ಕಾಂಡವೆನಿಸುತ್ತದೆ. ಅಲ್ಲದೇ ಇದರಿಂದ ಒಡೆಯನಿಗೆ ಮಹಾಐಶ್ವರ್ಯ ಸಿರಿಸಂಪತ್ತನ್ನು ಪರಿಹರಿಸಿ ಕೊನೆಗೆ ತಿರಿದುಣಿಸುವ ಕುದುರೆ ತಳಾವರ್ತಕಾಖೋಡಿ, ಏಕಾಂಡೀ ಎನಿಸುವದು. ಒಂದು ಭಾಗದಲ್ಲಿರುವ ಸುಳಿ ಇನ್ನೊಂದು ಭಾಗದಲ್ಲಿ ಇರದೆ ಹೋದರೆ ನಿಂದ್ಯವೆಂದು, ಎರಡು ಭಾಗದಲ್ಲಿ ಜಾಬು ಸುಳಿಯಿರಲೂ ಅದಕ್ಕೆ ಹೊಂದುವ ಗುಣ, ಸುರಮಣಿಯಿಂದ, ಕಂಠಾಭರಣದಿಂದ ಯಾವುದೇ ಕುಂದು ಕೊರತೆ ಬರುವುದಿಲ್ಲ. ಕೋಟಿದುರ್ಲಕ್ಷಣವಿದ್ದರೂ ಕುದುರೆಗೆ ತೊಂದರೆ ಆಗದು.

ಹಿರಿಯಣ್ಣಕವಿ ತನ್ನ ಹಯರತ್ನಶ್ರೇಣಿ ಕೃತಿಯಲ್ಲಿ ಉತ್ತಮ ಸುಳಿಗಳಿಂದ ಒಡೆಯನಿಗೆ ಆಗುವ ಲಾಭಗಳನ್ನು ಕುರಿತು ವಿವರಿಸುತ್ತಾ

"ತಲೆಲಲಾಟಗಳುದರುರ ಸ್ಥಳ
ಗಳವಿವೈದರ ಮುಂದುಗಡೆಯಲಿ
ಸುಳಿಯೆರಡು ನಾಲ್ಕಿರಲು ಜಯಮಂಗಳನು ತಾನೆನಿಕುಂ
ಘಳಿಲನುತ್ಸಹ ವೇದ ವಾದ್ಯಂ
ಗಳನು ತಾನೇ ನೆಡೆಸಿಕೊಂಬದು
ತಿಳಿವುದೀ ಹಯ ವಿಜಯ ಮಾಳ್ಪದು ರಾಜಯೋಗ್ಯಮರೂ"[೪೩] (೨-೧)

ತಲೆಯಲ್ಲಿ, ಕುತ್ತಿಗೆಯ ಶಿರಭಾಗದಲ್ಲಿ ಹೊಟ್ಟೆಯಲ್ಲಿ ಮುಂತಾಗಿ ಐದು ಸ್ಥಳಗಳ ಮುಂದಿನ ಭಾಗದಲ್ಲಿ ಸುಳಿ ಎರಡು ಅಥವಾ ನಾಲ್ಕು ಇದ್ದರೆ ಜಯಮಂಗಳವನ್ನುಂಟುಮಾಡುತ್ತದೆ. ನಂತರ ಉತ್ಸಾಹ, ಹುಮ್ಮಸ್ಸು, ವೇದವಾದ್ಯಗಳನ್ನು ಮಾಡಿಸಿಕೊಳ್ಳುತ್ತ ಇರುವುದು. ಇದರಿಂದ ರಾಜನಾದವನಿಗೆ ಜಯ ವಿಜಯ ಪ್ರಾಪ್ತಿಯಾಗಿ ಉತ್ತಮ ಕುದುರೆ ಎನಿಸಿಕೊಳ್ಳುವದು.

ಕುದುರೆಯ ಉಪರಂಧ್ರದಲ್ಲಿ ಸಪ್ಯಾವರಣ ಸುಳಿಯಿದ್ದು, ಮುಖದಲ್ಲಿ ಯಾವಾಗಲೂ ಸುಖ ಸಂಪತ್ತು ಸೂಚಿಸುವಂತಿದ್ದರೆ ಒಡೆಯನಿಗೆ ಜಯುಂಟಾಗುತ್ತದೆ. ಕುತ್ತಿಗೆಯ ಮೇಲೆ ಕೂದಲು ಹುಟ್ಟಲು ಒಡೆಯನಿಗೆ ಪರಮಭಾಗ್ಯ ಉಂಟಾಗುತ್ತದೆ. ಹಾಗೆಯೇ ಮುದುಡಿದ ಕಣ್ಣು ಹೊಂದಿರುವದರಿಂದ ಸುಪವಿತ್ರವೆನಿಸುವದು.

ಪಾರುವನ ಹಿಂಗಾಲದೊಳಗೆ ತೋರೆಯ ಒಳಭಾಗದಲ್ಲಿ ಮಚ್ಚೆಯು ಧಾರುಣೇಶ್ವರರು ಚಿಂತಾಮಣಿಯೆಂದು ಗುರುತಿಸಿದ್ದಾರೆ. ಯಾರಮನೆಯಲ್ಲಿ ಇಂತಹ ಕುದುರೆ ಇರುವದೋ ಅವರಿಗೆ ಮಹಾಲಕ್ಷ್ಮೀ ಕೈಸೇರುವಳು ಸೇವಕರು, ಸೈನಿಕರು, ಮಕ್ಕಳು, ಸಹೋದರರಿಗೆ ಸಂಬಂಧಿಕರಿಗೆ ಹಾಗೂ ಪಶುಪ್ರಾಣಿಗಳಿಗೆ ಸಮೃದ್ಧಿ ಪ್ರಾಪ್ತಿಯಾಗುವುದು.

"ಹಯಕೆ ಕಂಠಾಭರಣವಿರಲು

ಚ್ಚಾಯವು ಒಡೆಯನಿಗೆಹುದು ರಣದಲಿ

ಜಯವ ಪಡುವನು ಮಕ್ಕಳಾಹರು ದೇವಮಣಿಯಿರಲು

ಭಯದ ದುರ್ಲಕ್ಷಣವನೆಲ್ಲವ

ಕ್ಷಯವ ಮಾಳ್ಪದು ಮುಂದೆ ಭಾಗ್ಯೋ

ದಯವು ಕೈಸೇರುವುದು ಸತ್ಯವಿದೆಂದನಾ ಮುನಿಪಾ"[೨೯] (೨-೪)

ಕುದುರೆಗೆ ಕಂಠಾಭರಣವಿದ್ದರೆ ಯುದ್ಧದಲ್ಲಿ ಒಡೆಯನು ಜಯವನ್ನು ಹೊಂದುತ್ತಾನೆ, ಮಕ್ಕಳಾಗುತ್ತಾರೆ. ದೇವಮಣಿಯಿರಲು ಭಯ ನಿವಾರಣೆಯಾಗಿ ಭಾಗ್ಯೋದಯವು ಕೈಸೇರುವುದು. ಮಕ್ಕಳಾಗುವರು ದುರ್ಲಕ್ಷಣ ಮಾಯವಾಗಿ ಒಳ್ಳೆಯ ಲಕ್ಷಣ ಪ್ರಾಪ್ತಿಯಾಗುವದು.

೪.೬. ರೋಗ : ಚಿಕಿತ್ಸೆ-ಆರೈಕೆ

ಸೃಷ್ಟಿಯಲ್ಲಿ ಅನೇಕ ರೀತಿಯ ಪ್ರಾಣಿ-ಪಕ್ಷಿಗಳು ಪ್ರತಿದಿನ ಹುಟ್ಟುತ್ತವೆ ಮತ್ತು ಸಾಯುತ್ತವೆ. ಜೀವಂತವಿರುವ ಯಾವುದೇ ತರಹದ ಪ್ರಾಣಿಗಳಿಗೆ ಒಂದಿಲ್ಲೊಂದು ರೀತಿಯಲ್ಲಿ ರೋಗ ರುಜಿನಗಳು ಬರುವುದು ಸಹಜವಾದ ಪ್ರಕ್ರಿಯೆಯಾಗಿದೆ. ಅದರಂತೆ ಅವುಗಳ ಉಪಚಾರ ಮಾಡುವುದು ಅತೀ ಅವಶ್ಯ. ಮಾನವ ಅತ್ಯಂತ ಬುದ್ಧಿಜೀವಿ, ವಿಚಾರ ಮಾಡುವ, ಆಲೋಚಿಸುವ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ಗುಣ ಸ್ವಭಾವ ಹೊಂದಿರುವುದರಿಂದಲೇ ತನಗೆ ಉಪಯುಕ್ತವಾಗುವ ಪ್ರಾಣಿ, ಪಕ್ಷಿಗಳಿಗೂ ಸಹ ಅವುಗಳ ವರ್ತನೆ, ಕಾರ್ಯ ಚಟುವಟಿಕೆ ಸ್ವಭಾವಗಳನ್ನು ಅರಿತು ಉಪಚರಿಸುವ ಕ್ರಮಗಳ ಕೈಗೊಂಡನು. ಹೀಗಾಗಿ ನಮ್ಮಲ್ಲಿ ವೈದ್ಯಿಕೀಯಶಾಸ್ತ್ರ ಪ್ರಾಚೀನ ಕಾಲದಿಂದಲೂ ನಡೆದು ಕೊಂಡು ಬಂದಿದೆ. ಅದಕ್ಕೆ ಅಶ್ವಶಾಸ್ತ್ರಕಾರರು ಹೊರತಾಗಿಲ್ಲ. ಕುದುರೆಗಳಿಗೆ ಬರುವ ರೋಗಗಳು ಅವುಗಳಿಗೆ ಚಿಕಿತ್ಸೆ, ಆರೈಕೆ ಕುರಿತು ಪ್ರಾಯೋಗಿಕವಾಗಿ ಶಾಸ್ತ್ರರೂಪದಲ್ಲಿ ಬರೆದು ಕೊಟ್ಟಿರುವುದು ಅವರ ಪಾಂಡಿತ್ಯ ಪೂರ್ಣ ಪ್ರಜ್ಞೆಗೆ ಸಾಕ್ಷಿ.

ಸಕಲಶಾಸ್ತ್ರ ಪಾರಂಗತನಾದ ಚಾವುಂಡರಾಯ ತನ್ನ ಲೋಕೋಪಕಾರ ಕೃತಿಯಲ್ಲಿ ಕುದುರೆಗೆ ಬರುವ ರೋಗಗಳನ್ನು ಕುರಿತು ಪ್ರಸ್ತಾಪಿಸುತ್ತಾ, ಈ ಕೆಳಗಿನಂತೆ ವಿವರಿಸುತ್ತಾನೆ.

ಜ್ವರ ಲಕ್ಷಣ : ಕುದುರೆಗಳಿಗೆ ಬರುವ ಜ್ವರ ಲಕ್ಷಣ ಮತ್ತು ಉಪಚಾರ ಕುರಿತು ಹೇಳುತ್ತಾ-

"ಒಡೆದಿರೆ ರೋಮಂ ಮೆಯ್ ಮರ

ವಡೆಬಾಯೊಳ್ ಕೊಳೆನಾಚೆ ಮೇಹುಗೊಳ್ಳದೆ ನಿಲೆನೀ

ರಡಕೆ ಪಿರಿದಾಗೆ ಝಂಪಿಸೆ

ನಿಡುಸಯ್ಯೆ ಹಯಂ ಕರಂ ಜ್ವರಾರ್ತನೆನಿಕ್ಕುಂ"[೩೦] (೯-೨೩೪)

ಕುದುರೆಗಳಿಗೆ ರೋಮ ಎದ್ದಿರುವ ಮೈ ಮರಗಟ್ಟಿರುವ, ಬಾಯಿಯು ಕೊನೆನಾರುತ್ತಿರುವ, ಮೇವು ತಿನ್ನದೆ ಇರುವ, ನೀರಡಿಕೆ ಇಲ್ಲದಿರುವ, ತೂಕಡಿಸುತ್ತಿರುವ ಶ್ವಾಸ (ಉಸಿರಾಟ ಹೆಚ್ಚುತ್ತಿರುವ) ಬಿಡುತ್ತಿರುವ ಈ ಎಲ್ಲಾ ಗುಣಲಕ್ಷಣಗಳು ಕುದುರೆಗಳಿಗೆ ಕಂಡು ಬಂದರೆ ಜ್ವರ ಬಂದಿದೆ ಎಂದು ತಿಳಿಸಿದ್ದಾನೆ. ಮುಂದುವರೆದು ಜ್ವರಕ್ಕೆ ಉಪಚರಿಸುವ ಕ್ರಮವನ್ನು ಕುರಿತು ವಿವರಿಸುತ್ತಾ-

"ಜಳದ ಪಿಪ್ಪಲಿ ದೇವದಾರು ರುಚೆ ನಿಂಬಂ ಚಿತ್ರಕಂ ಪಾಲೆ ನೇ ।
ಱಿಲವುಂಗುರ್ನ್ನಲಬೇವು ದಂತಿ ಕಟುಕಂ ಭಿನ್ನೇಜಮೆಂಬಿಂತಿವಂ ॥
ಜಳದೊಳ್ ಮೂವಡಿಗೂಡಿ ಕಾಸಿ ಮಧುಮಿಶ್ರಂ ಪೊಯ್ಗೆ ಮೇಣ್ ಬೇವು ಪಿ
ಪ್ಪಲಿ ಜೇನೆಯ್ ಕಟುಕಾಂಬುವಂ ಕುಡಲೊಡಂ ಸರ್ವಜ್ವರಂ ಪಿಂಗುಗುಂ"[೫೬] (೯-೨೩೫)

ಭದ್ರಮಸ್ತೆ, ಹಿಪ್ಪಲಿ, ದೇವದಾರು, ರುದಂತಿ, ಬೇವು, ಚಿತ್ರಮೂಲ, ಹಾಲೆಯತಿಗುಡು, ನೇರಲ ತಿಗಡು, ಅಶ್ವಗಂಧಿ, ನೆಲಬೇವು, ದಂತಿ, ಕಟುಕರೋಹಿಣಿ, ಅಮರದುವಳ್ಳಿ ಇವೆಲ್ಲವನ್ನು ತಂದು ಕುಟ್ಟಿ ಮಡಿಕೆಯೊಳಗಿಟ್ಟು ಹೊಟ್ಟೆಯೊಳಗೆ ಕಷಾಯಮಾಡಿ ಮೂರು ಮಡಿ ನಿರೋಂದುಮಡಿ ಪರ್ಯಂತ ಕಾಸಿ ಆ ಕಷಾಯದ ನೀರನ್ನು ಕೊಂಡು ನಂತರ ಜೇನುತುಪ್ಪದಲ್ಲಿ ಬೆರಸಿ ಕುಡಿಸುವದು. ಇದರಿಂದ ಜ್ವರವಾಸಿಯಾಗುತ್ತದೆ.

ಅಲ್ಲಾ, ಬೇವು, ಹಿಪ್ಪಲಿ, ಕುಟುಕ ರೋಹಿಣಿ ಈ ಮೂರನ್ನೂ ಕೂಡಿಸಿ ಅರೆದು ನೀರಿನಲ್ಲಿ ಕಲಿಸಿ ಜೇನುತುಪ್ಪವನ್ನು ಕೂಡಿಸಿ ಕುದುರೆಗೆ ಕೊಡುವುದರಿಂದ ಎಲ್ಲಾ ಜ್ವರಗಳು ಮಾಯವಾಗುತ್ತವೆ. ಹಾಗೆಯೇ ಬೇವಿನ ಕಷಾಯದ ನೀರನೊಳಗೆ ಹೆಸರನ್ನು ಕೂಡಿಸಿ, ಕುದಿಸಿ ಆ ನೀರಿನೊಳ ಕಳವೆ, ಯಕ್ಕಿ, ಯೋಗರವನ್ನು ಕೂಡಿಸಿ ಕಹಿಪಡುವಲದ ಸಮೂಲವನ್ನು ತಂದು ತುಳಿದು ರಸವನ್ನು ಮಾಡಿ ಜೇನು ತುಪ್ಪ, ಹಿಪ್ಪಲಿಯ ಚೂರ್ಣವನ್ನು ಕೂಡಿಸಿ, ಆ ಪೆಸಹಿರಿ ಹುಗ್ಗಿಯ ವೋಗರನ್ನು ಕೂಡಿಸಿ, ಕಲಿಸಿ ಮುದ್ದೆಯನ್ನು ಮಾಡಿ ಕುದುರೆಗಳಿಗೆ ಕೊಡುವುದರಿಂದ ಜ್ವರ ಗುಣಮುಖವಾಗುವದು.

ಅಭಿನವಚಂದ್ರ ತನ್ನ ಅಶ್ವಶಾಸ್ತ್ರ ಕೃತಿಯ ಹದಿಮೂರನೆಯ ಅಧ್ಯಾಯದಲ್ಲಿ ಕುದುರೆಗಳಿಗೆ ಬರುವ ರೋಗ ಲಕ್ಷಣ ಮತ್ತು ಪರಿಹಾರ ಕುರಿತು ವಿವರಿಸುತ್ತಾ-

"ಕೆಂಪುಕ್ಕುಂ ಮೂತ್ರಂ ಮೇಣ
ಸಂಪೋಲ್ಕುಂ ಲದ್ದಿ ಮೇಹುಗೊಳ್ಳದು ಖಾಣ
ಕ್ಕಂ ಪದೆದು ಬಾರದಶ್ರುಜ
ಲಂ ಪಾಯ್ಗುಂ ಜ್ವರವಿಕಾರಮಾದೊಡೆ ತುರಗಂ"[೫೭] (೧೩-೧)

ಕುದುರೆಯು ಮೂತ್ರವನ್ನು ರಕ್ತದ ಹಾಗೆ ಬಿಡುತ್ತಿರಲು, ಲದ್ದಿಯನ್ನು ಒಣಗಿದಂತೆ ಹಾಕುತ್ತಿರಲು ಮೇಯದೆ, ನೀರು ಕುಡಿಯದೆ ಖಾಣಮನೊಲ್ಲದ ಅದಕ್ಕೆ ಜ್ವರ ಬಂದಿದೆ ಎಂದು ತಿಳಿದುಕೊಳ್ಳಬೇಕು ನಂತರ ಚಿಕಿತ್ಸೆಯನ್ನು ಮಾಡಲು ಬೇವಿನ ಎಲೆಯನ್ನು ತುಳಿದು ಪಿಂಡವನಿಕ್ಕಿ ಉಪ್ಪುಮುಟ್ಟಲಾರದ ಮೇವನ್ನು ಸ್ವಲ್ಪ ಕರಿಕೆಯ ಹುಲ್ಲನಿಟ್ಟು ಬಿಸಿಲಿನ ಕಾವಿನಲ್ಲಿರಿಸಿದರೆ ಜ್ವರ ಗುಣವಾಗುವುದು.

ಅತೀಜ್ವರ: ಹಿರಿಯಣ್ಣ ಕವಿಯು ಹಯರತ್ನ ಶ್ರೇಣಿ ಕೃತಿಯಲ್ಲಿ ವೈದ್ಯೋಪಚಾರದ ವಿವರ ನೀಡುತ್ತಾ

"ಅತಿ ಜ್ವರಕೆ ಕೇತಕಿಯ ಮಲೆಯು ಬಾಳಿಯ ಗಡ್ಡೆ
ಕ್ಷಿತಿಯ ಸಕ್ಕರೆಗಡ್ಡೆ ಇವು ಮೂರು ಸಮಗೊಂಡು
ಜತನದಿಂ ಕಷಾಯವ ಮಾಡೆರಡು ಸೇರನುಂ
ಮೂರು ದಿನ ಕೊಡಲು ಮಾಣ್ಗು"[೫೭] (೭-೧೧)

ಅತಿಜ್ವರ ಬಂದಿದೆ ಎಂದು ತಿಳಿದು ಉಪಚರಿಸಲು ಕೇತಕಿಯ ಮಲೆಯು, ಬಾಳಿಯ ಗಡ್ಡೆ, ಕ್ಷಿತಿಯ, ಸಕ್ಕರೆ ಗಡ್ಡೆ ಇವುಗಳನ್ನು ಕೂಡಿಸಿ ಸಮಭಾಗ ಮಾಡಿ ಸರಿಯಾಗಿ ಕಷಾಯವ ಮೂರೆರಡು ಸೇರು ಬರುವಂತೆ ಮಾಡಿ ಮೂರು ದಿನ ಕೊಟ್ಟರೆ ಗುಣವಾಗುತ್ತದೆ. ಎಂದು ಹೇಳಿ ಸಂಪೂರ್ಣವಾದ ಜ್ವರ ಗುಣಮುಖವಾಗುವ ವಿಧಾನವನ್ನು ವಿವರಿಸುತ್ತಾನೆ.

"ಬೇವು ತಗ್ಗಿ ಕರಂಜಿ ಕಿರಿಬೇವು ಅತಿಬಜೆ ಹೆ
ಬ್ಬೇವಿವಾರ ಮುಗುಳು ನೀಲಿಗಣಜಲಿ ಬ್ರಹ್ಮಿ
ಹಾವು ಮೆಕ್ಕಿಯು ಉತ್ತರಾಣಿ ಏರಂಡ ಈಶ್ವರಿ ಇವೇಳರವೊಲವೂ
ತೀವಿದರಳಿಯ ಸೆಕ್ಕೆ ಕೇತಕಿಯ ಮಲೆ ತ್ರಿಫಲೆ
ಭಾವಿಸುವ ಕಾಡ ಕವಡೆ ಕಹಿಪಡುವಲ ವಿಷಗುಂಬ
ಳಾ ವಿಷದ ಹೀರೆ ಜಂಭೀರ ವಿವ್ವೆದರ ಬಜಿ ಕಾಡ ಜೀರಿಗೆ ಸೈಂಧವ ಲವಣಾ (೬-೩)
ಕೋಷ್ಟ ತ್ರಿಕಟುಕ ಕಲ್ನಾರು ಬಿಳೆ ಜೀರಿಗೆ
ಯಿಷ್ಟು ಇವು ಮೂವತ್ತೊಂದು ಜೀನಸುನ ಸಮಗೂಡಿ
ಕುಟ್ಟಿ ನವಬತು ಸಕ್ಕರೆವೆರಸೀ ಬಿಸಿನೀರಿಂದಲಾಗಲಜು ಮೂತ್ರದಿಂ
ಗೊಟ್ಟದಿಂ ಪ್ರತಿದಿನವು ಕವಳಗೊಳಿಸುತ್ತಿರಲ್
ಕಷ್ಟ ಜ್ವರಂಗಳುಂ ಪರಿಹರಿದು ವಾಜಿಗಳ್
ನೆಟ್ಟರಾರೋಗ್ಯ ಮಂತಾಳಿರ್ಪವೆಂದ ಮುನಿ ಶಾಲಿಹೋತ್ರಂ ಪೇಳ್ವನೂ"[೫೯] (೬-೪)

ಬೇವು, ತುಗ್ಗಿ, ಕರಂಜಿ, ಕಿರಿಬೇವು, ಅತಿಬಜೆ, ಹೆಬ್ಬೇವಿವಾರ ಮುಗುಳು, ನೀಲಿಗಣಜಲಿ, ಬ್ರಹ್ಮಿ, ಹಾವು ಮೆಕ್ಕಿ, ಉತ್ತರಾಣಿ,ಏರಂಡ, ಈಶ್ವರಿ ಇವೆಲ್ಲವುಗಳನ್ನು ತೀವಿದರಳಿಯ ಸೆಕ್ಕೆ, ಕೇತಕಿಯ ಮಲೆ, ತ್ರಿಫಲೆ, ಕಾಡಕವಡೆ, ಕಹಿಪಡುವಲ, ವಿಷಗುಂಬಳ, ವಿಷದಹೀರೆ ಜಂಭೀರ ಈ ಐದರ ಬಜಿ, ಕಾಡ ಜೀರಿಗೆ, ಸೈಂಧವಲವಣ, ಕೋಷ್ಟ, ತ್ರಿಕಟುಕ, ಕಲ್ನಾರು, ಬಿಳಿ ಜೀರಿಗೆ,ಇವೆಲ್ಲವುಗಳ ಮೂವತ್ತೊಂದು ದಿನಸುಗಳನ್ನು ಸಮಪ್ರಮಾಣದಲ್ಲಿ ಕೂಡಿಸಿ ಕುಟ್ಟಿ ನವಬತು, ಸಕ್ಕರೆಬೆರಸಿ ಬಿಸಿನೀರಿನಿಂದ ಗಲಜ ಮೂತ್ರದಿಂದ ಅಥವಾ ಗೊಟ್ಟದಿಂದ ಪ್ರತಿದಿನ ಕವಳಗೊಳಿಸುತ್ತಿರವುದರಿಂದ ಕಷ್ಟಜ್ವರಗಳು ಪರಿಹಾರವಾಗಿ ಗುಣಹೊಂದುತ್ತವೆ. ಕುದುರೆಗಳು ಮೊದಲಿನಂತೆ ಆಗುವವು ಎಂದು ಶಾಲಿಹೋತ್ರನನ್ನು ಅನುಸರಿಸಿ ಹೇಳಿರುವನು.

ಪಿತ್ತಜ್ವರ : “ಪಿತ್ತಜ್ವರ ಕುದುರೆಗೆ ಹೆಚ್ಚಾಗಲು ಬಾಯಿ ಬತ್ತುತ್ತದೆ.ಸುರೆಯಲ್ಲಿ ಅಣಿಲೆಕಾಯಿ, ಹಿಪ್ಪಲಿ, ಇಂಗು, ಸಂವತ್ಸರಲವಣ, ನೊರೆಹಾಲಲ್ಲಿ ಸಕ್ಕರೆಯನ್ನು ಕೂಡಿಸಿ ಪಾನಕವಾಡಿ ಅದಕ್ಕೆ ಹಾಲಬತ್ತಿಯನ್ನೆರಿಸುವುದರಿಂದ ರಾಜಾನ್ನದಕ್ಕಿಯ ಓಗರವನ್ನು ಜೇನುತುಪ್ಪದಲ್ಲಿ ಕಲಿಸಿ ಕೊಡುವುದರಿಂದ”[೬೦] ಹಾಗೂ ಕರಿಕೆಯ ಹುಲ್ಲನ್ನು ಹಾಕಿ, ಗಾಳಿ, ಬಿಸಿಲು ಇಲ್ಲದ ಸ್ಥಳದಲ್ಲಿ ಕಟ್ಟಿದರೆ ಪಿತ್ತಜ್ವರ ಗುಣಮುಖವಾಗುತ್ತದೆ.

ವಾತಜ್ವರ : ವಾತಜ್ವರ ಗುಣಮುಖವಾಗಲು ಕುದುರೆಗೆ “ಅಂಟಲೆಕ್ಕಿಯ ಬೇರು, ನುಗ್ಗಿಯ ಬೇರು, ಕೋಲು ಮುಕ್ಕನ ತೊಗಟೆ, ಅತಿಬಜೆ ವಿಳಂಗ, ಮಂಗರುಳಿ, ಜೆತಿಸುಡೆ, ಪರ್ಪಾಟಕಿಯ ಕಷಾಯವನ್ನು ಕೊಡುವದರಿಂದ”[೬೧] ವಾತಜ್ವರ ಉಪಶಮನವಾಗುತ್ತದೆ.

ಶ್ಲೇಷ್ಮಜ್ವರ : ಈ ಜ್ವರ ಗುಣವಾಗಲು “ನೆಲಗುಂಬಳ, ದೇವದಾರಿಯ ತೊಗಟೆ, ಕೊತಂಬರಿಯ ಬೀಜ, ತಾವರೆಯ ಗಡ್ಡೆ, ಇವುಗಳನ್ನು ಕೂಡಿಸಿ ಕಷಾಯವನ್ನು ಮಾಡಿ ಕೊಡಲೆರಡು ಸೇರು ಆಗ ಗುಣಹೊಂದುವದು.”[೬೨] ಕುದುರೆಯ “ಮುಖದಲ್ಲಿ, ಕಣ್ಣಿನಲ್ಲಿ, ಶ್ಲೇಷ್ಮ ಆಗಾಗ ಬೀಳುತ್ತಾ ಇರಲು ಮೇವು ತಿನ್ನದೇ ಇರಲು ಶ್ಲೇಷ್ಮಜ್ವರದ ಲಕ್ಷಣವೆಂದು ಗುರುತಿಸಿ, ಈಶ್ವರಿಯ ಸಮೂಲವನ್ನು ತುಳಿದು ಜೇನು ತುಪ್ಪದಲ್ಲಿ ಕಲಸಿ ಕೊಡುವದು. ಹಾಗೆಯೇ ಕಳವೆಯ (ಜೋಳ) ಊಟವನ್ನು ಹೆಸರಕಟ್ಟನ್ನು ಕಲಿಸಿ ಕೊಟ್ಟರೆ”[೬೩] ಶ್ಲೇಷ್ಮ ಜ್ವರ ನಿಂತು ಕುದುರೆ ಮೊದಲಿನಂತೆ ಕಾಣುವದು.

ಸನ್ನಿಪಾತ ಜ್ವರ : ಕುದುರೆಗೆ “ಮರೆವು ಉಂಟಾಗಿ ಅಥವಾ ಬುದ್ಧಿ ಭ್ರಮಣೆಯಾಗಿ ತಿಟ್ಟನೆ ತಿರುಗಿ ನೋಡಲು, ಮೂರ್ಛೆಹೋಗಲು, ಲದ್ದಿಯಲ್ಲಿ ನೊರೆಯಂತೆ ರಕ್ತವೂ ಕೂಡಿಕೊಂಡಿರಲು”[೬೪] ಸನ್ನಿಪಾತ ಜ್ವರ ಬಂದಿದೆ ಎಂದು ಗ್ರಹಿಸಬೇಕು. ಚಿಕಿತ್ಸಾ ಕ್ರಮ ಅನುಸರಿಸಿ “ನೆಲ ಬೇವು, ತಿಗುಡೆ, ಅಮರದಬಳ್ಳಿ, ನೆಗಲಿ ನೆಲಗುಂಬಳಗಳ ಮೂಲ, ಕಾಕಝುಂಗಿಯ ಸಹಮೂಲ, ದ್ರಾಕ್ಷಿಯ ಕಷಾಯವನ್ನು”[೬೫] ಕೊಡುವುದರಿಂದ ಈ ರೋಗ ಮಾಯವಾಗುತ್ತದೆ.

ಶಂಕಜ್ವರ : ಈ ರೋಗಕ್ಕೆ ಬೆಲ್ಲವತ್ತರ, ನೆಲಬೆವು, ಪಡುವಲ, ನೆಲಗುಳ್ಳ, ನೆಲಗುಂಬಳ, ತೀವಿದೀಶ್ವರಿ, ನೆಲದಾಳಿ, ವರಬೇರು, ರುದ್ರಾಕ್ಷಿಯ ಕಷಾಯವನ್ನು ಕೊಡಬೇಕು.

ಲಘುಣ ಜ್ವರ : ಮಧುಕ, ಪತ್ರಿ, ಲವಂಗ, ತಿಗುಡೆ, ಶುಂಠಿಯನ್ನು ಸಮಭಾಗ ಚೂರ್ಣಮಾಡಿ ಜೇನುತುಪ್ಪದಲ್ಲಿ ಅರೆದು ಸೇರನ್ನು ಕೊಡಲು ಎರಡು ದಿನಕ್ಕೆ ಗುಣವಾಗುತ್ತದೆ.

ಅಷ್ಟಜ್ವರ : ಈ ರೋಗ ಗುಣಹೊಂದಲು ಕೆಂಪು ನವಣಕ್ಕಿಯನ್ನು ಬೀಸಿ ಹಿಟ್ಟಿನೊಳಗೆ ರಾಯಬೋರಿಯ ಅರಗನ್ನು ಕೂಡಿಸಿ ಕುಟ್ಟಿ, ಆಕಳ ಹಾಲಿನಲ್ಲಿ ಕಲಿಸಿ ಒಂದು ದಿನ ಕೊಟ್ಟು ನಂತರ ಒಂದು ಸೇರು ನೀರೊಳಗೆ ನೆಟ್ಟನಿಯ ನೀರಸವ ಬೆರಸಿ ಕುಡಿಸುತ್ತ ಮತ್ತಷ್ಟರೊಳಗೆ ಶುಂಠಿ, ಹಿಪ್ಪಲಿ ಕಷಾಯ ಮಾಡಿ ಕುಟ್ಟಿ ಉಳಿದಿದ್ದು ತುಪ್ಪದಲ್ಲಿ ಪ್ರತಿಪಾಕ ಮಾಡಿ ಕೊಡಲು ಪರಿಹಾರವಾಗುವದು.

ಮನ್ಮಥ ಜ್ವರ : ಹಾಲಿನೊಳಗೆ ಬಿಳಿ ಜೀರಿಗೆಯನ್ನು, ಸಣ್ಣಕ್ಕಿಹಿಟ್ಟು ಸರಿಯಾಗಿ ಬೆರಸಿ ಬೆಲ್ಲವನ್ನು ಕಲಿಸಿ ತಿನಿಸಲು ಗುಣವಾಗುತ್ತದೆ. ಹಾಗೆಯೇ ಐದು ದಿನ ಕೊಡಲು ಸಂಪೂರ್ಣ ವಾಸಿಯಾಗುವುದು.

ಚಾವುಂಡರಾಯ ಲೋಕೋಪಕಾರ ಕೃತಿಯಲ್ಲಿ ರೋಗಗಳು ಮತ್ತು ಚಿಕಿತ್ಸೆ ಎಂಬ ವಿಷಯ ಕುರಿತು ವಾತ, ಪಿತ್ತ ಶ್ಲೇಷ್ಮ ಅವುಗಳ ವಿಚಾರವಾಗಿ ಚರ್ಚಿಸುತ್ತಾ ಈ ರೀತಿಯಾ ಹೇಳಿದ್ದಾನೆ. ಕುದುರೆಗಳಿಗೆ ವಾತಗಳು ಹೆಚ್ಚಾದೊಡೆ ಜಠರಾಗ್ನಿ ಹೆಚ್ಚುವುದು ಅಥವಾ ಕುಂದುವದು. ಪಿತ್ತ ಹೆಚ್ಚಾದರೆ ಅಗ್ನಿ ಹೆಚ್ಚುವುದು, ಶ್ಲೇಷ್ಮ ಹೆಚ್ಚಾದರೆ ದೀಪನವು ಕೆಡುವುದು ಈ ಮೂರು ಸಮಾನವಾಗಿದ್ದರೆ ಕುದುರೆಗಳಿಗೆ ಒಳ್ಳೆಯದು ಎಂದು ಹೇಳುತ್ತಾನೆ.

ಪಿತ್ತ, ವಾತ, ಕಫ : ಈ ಮೂರು ಕುರಿತು ದೋಷಮುಕ್ತವಾಗಲು "ಅರಗು, ರಸಾಂಜನ, ಅರಿಸಿನ, ಹಿಪ್ಪಲಿ, ಸೈಂಧವ, ರಾಶ್ಮೆ, ಯುಷ್ಟಿಮಧುಕ, ಶುಂಠಿ ಇವುಗಳನ್ನು ತುಳಿದು ಆಡಿನ ಹಾಲಿನಲ್ಲಿ ಕಲಿಸಿ ನಸ್ಯವನ್ನು ಮಾಡಲು ಪಿತ್ತ ಗುಣವಾಗುವದು. ಈ ಎಲ್ಲಾ ನಸ್ಯ ತುಳಿದುದ್ದನ್ನು ಗೋಮೂತ್ರದಲ್ಲಿ ಕಲಿಸಿ ನಸ್ಯವನ್ನು ಮಾಡಲು ಶ್ಲೇಷ್ಮಗುಣವಾಗುವುದು. ಇದೇ ಔಷಧವನ್ನು ಬಿಸಿನೀರಿನಲ್ಲಿ ಕೂಡಿಸಿ ನಸ್ಯವ ಮಾಡಲು"[೬೬] ವಾತಗಳಿಂದ ಉಂಟಾಗುವ ಎಲ್ಲಾ ರೋಗಗಳು ಗುಣವಾಗುತ್ತವೆ. ಅಭಿನವಚಂದ್ರ ಅಶ್ವಶಾಸ್ತ್ರ ಕೃತಿಯಲ್ಲಿ ಕುದುರೆ ಕಣ್ಣಿನಲ್ಲಿ ನೀರು ಸೋರುತ್ತಿದ್ದರೆ ಪಿತ್ತವೆಂದೂ, ಕಣ್ಣಿನಿಂದ ಪಿಚ್ಚು ಸುರಿಯುತ್ತಿರಲು ಶ್ಲೇಷ್ಮವೆಂದೂ, ನೋವಿನಿಂದ ಕಣ್ಣು ಮುಚ್ಚಿದ್ದರೆ ವಾತವೆಂದು ಹೇಳಿ ತ್ರಿದೋಷಗಳಿಂದ ತಿವಿರ, ಕಾಚು, ಪಟಲಹೂವು ಕಣ್ಣುಗಳಲ್ಲಿ ಹುಟ್ಟುವುದನ್ನು ಅರಿತು, ಪರಿದ ಪರಕಲಿಸಿ ಹರಿದು ಬಹ ಅರಿಯನರಿವ ತೆರದಲ್ಲಿ ತೆಗೆದು ಸೈಂಧವಲವಣವನ್ನು ಚೂರ್ಣಮಾಡಿ ಕಣ್ಣಿಗೆ ಹಚ್ಚಲು ಗುಣವಾಗುತ್ತದೆ.

ಕಫ : "ಬಾಗೆ, ಗೋಧಿ, ಪಡುವಲ, ಆಡುಸೋಗೆ, ಎಳೆಲೆವಾಳೆ, ಬೇವು, ಬೆಲ್ಲವತ್ತ, ತುಗ್ಗಿ, ಸೀವನ್ನಿ, ಪಾದರಿ, ಅವುಡಲ ಇವುಗಳ ಸೊಪ್ಪುಗಳನ್ನು ತಂದು ತುಳಿದು ಚೂರ್ಣವ ಮಾಡಿ ಪೊಟ್ಟಣವನ್ನು ಕಟ್ಟಿ, ಬಿಸಿಮಾಡಿ ಕುದುರೆಗಳ ಮುಖಕ್ಕೆ ಶಾಖವನ್ನು ಕೊಡಲು ಶ್ಲೇಷ್ಮರೋಗ ಗುಣವಾಗುತ್ತದೆ."[೬೭]

ವಾತ : "ತ್ರಿಫಲಾ, ಮೋಡಿ, ತ್ರಿಕು, ಜೀರಿಗೆ, ಕಪ್ಪುಜೀರಿಗೆ, ಇಂಗು, ಹುಣಿಸೇಹಣ್ಣು, ವಾದಕ್ಕಿ, ಬಿಳಿಸಾಸುವೆ, ಅಜಾಮೋದ, ಅಶ್ವಗಂಧಿ, ಕಹಿಪಡುವಲ, ಪುಳ್ಳಂ ಪುರುಚಿಸೊಪ್ಪು, ತಿಗಡೆ, ಬೇವಿನ ಚಕ್ಕೆ, ಕೊನ್ನಾರಿಗಡ್ಡೆ, ಪರ್ಪಾಷ್ಟಕ, ಕಟುಕರೋಹಿಣೀ, ದಾಳಿಂಬೆಸಿಪ್ಪೆ, ಕರಿಉಪ್ಪು, ಸೈಂಧವಲವಣ, ಬಿಡಲವಣ, ಸಾಮುದ್ರಲವಣ, ಕಾಚಲವಣ ಇವೆಲ್ಲವುಗಳನ್ನು ಒಟ್ಟಿಗೆ ಕೂಡಿಸಿ ಕುಟ್ಟಿ ಚೂರ್ಣ ಮಾಡಿಕೊಳ್ಳಬೇಕು. ಮೇಲೆ ಹೇಳಿದ ಚೂರ್ಣವನ್ನು ವಾತರೋಗಕ್ಕೆ ಒಂದು ಫಲ ಪ್ರಮಾಣ ತುಪ್ಪದೊಡನೆ ಕೊಡಬೇಕು. ಪಿತ್ತರೋಗಗಳಿಗೆ ಒಂದು ಫಲ ಪ್ರಮಾಣ ಮೇಲೆ ಹೇಳಿದ ಚೂರ್ಣವನ್ನು ಜೇನು ತುಪ್ಪದ ಜೊತೆಗೆ ಸಕ್ಕರೆ ಸೇರಿಸಿ ಕೊಡಬೇಕು. ಕಫವಾದ ರೋಗಕ್ಕೆ ಈ ಚೂರ್ಣವನ್ನು ಒಂದು ಫಲದಷ್ಟು ಪ್ರಮಾಣ ಸುರೆಯೊಡನೆ ಮಿಶ್ರಮಾಡಿ ಕೊಡಬೇಕು."[೬೮] ಹೀಗೆ ಕೊಡುವುದರಿಂದ ವಾತ, ಪಿತ್ತ, ಕಫ ರೋಗಗಳು ವಾಸಿಯಾಗುತ್ತವೆ. ಆಲಸ್ಯ ನಿವಾರಣೆಯಾಗಿ ಸದೃಢವಾಗುತ್ತವೆ.

ರಾಮಚಂದ್ರ ಕವಿ ತನ್ನ 'ಅಶ್ವಶಾಸ್ತ್ರದ ಟೀಕು' ಎಂಬ ಕೃತಿಯಲ್ಲಿ ವಾತರೋಗವನ್ನು ಕುರಿತು ವಿವರಿಸುತ್ತಾ "ಮುಳ್ಳು ಬದನೆಬೇರು, ಸುಗಂಧೀಬೇರು, ಪಾದರಿಬೇರು, ಮಂಗದವಳ್ಳಿಬೇರು, ಗುಗ್ಗಳದ ಬೇರು, ಬೀಜಗರಗ, ಗೊರಟೆಬೇರು, ತಪಸದಬೇರು, ದಾಳ, ಅವುಡಲದ ಬೇರು, ಇವುಗಳನ್ನು ಕೂಡಿಸಿ ೪ ಕೊಳಗ ನೀರೊಳಗೆ ಹಾಕಿ, ಕೊಳಗ ಪರಿಯಂತರ ಕಾಯಿಸಿದ ಮೇಲೆ ಆ ಕಷಾಯದೊಳಗೆ ೧ ಕೊಳಗ ಎಣ್ಣೆಯ ಬೆರಸಿ ೨ ಕೊಳಗವನ್ನು ೧ ಕೊಳಗ ಪರಿಯಂತರ ಕಾಸಿ ನಂತರ ಬೇಕಾದ ಪ್ರಮಾಣದಲ್ಲಿ ಕೊಂಡು ಅದರಲ್ಲಿ ಹಸುವಿನ ತುಪ್ಪವನ್ನು ಬೆರಸಿ ಕುದುರೆಯ ತಿಗದಲ್ಲಿ ತೊಡೆದು ಹೊಟ್ಟೆಗೆ ಕೊಡಲು"[೬೯] ವಾತರೋಗ ಗುಣಮುಖವಾಗುತ್ತದೆ ಎಂದು ಹೇಳಿರುವನು.

"ತ್ರಿಫಲೆ, ಬಜೆ, ಬೆಲ್ಲ, ಸುಣ್ಣ, ಕುಷ್ಟ, ಸದಗುಪ್ಪೆ, ಜಟಾಮಾಂಸಿ, ಇಂಗು ಇವೆಲ್ಲವನ್ನು ಸಮಪ್ರಮಾಣದಲ್ಲಿ ಎಣ್ಣೆ ಇಟ್ಟು ಕುದುರೆಗೆ ಆಸನವಸ್ತಿಯನ್ನು ಕಟ್ಟಲು ವಾತ ಗುಣವಾಗುತ್ತದೆ ಎಂದು ಅಭಿನವಚಂದ್ರ ಹೇಳಿದ್ದಾನೆ."[೭೦]

ಶ್ಲೇಷ್ಮವಾತ : ಈ ರೋಗಕ್ಕೆ ಉಪಚರಿಸಲು ಪ್ರಮುಖವಾಗಿ "ಶುಂಠಿ, ಹಿಪ್ಪಲಿ, ಮೆಣಸು, ವೊಮಗಂಗಪಾಣು, ತೆಂಗಿನಕಾಯಿತಿರುಳು, ಗಜ್ಜುಗದತಿರುಳು, ಬಿಡಲವಣ, ಚಿತ್ರಮೂಲ, ಚವ್ಯ, ಜೀರಿಗೆ, ಸೈಂಧವಲವಣ, ಸೌವರ್ಚವಲಣ, ಅಮೃತಬಳ್ಳಿಯನ್ನು ಕೂಡಿಸಿ ಸಮಭಾಗ ಮಾಡಿ ಬಿಸಿನೀರಿನಿಂದ ಕುದುರೆಗೆ ಕೊಡುವುದರಿಂದ ಶ್ಲೇಷ್ಮವಾತ ಗುಣಮುಖವಾಗುತ್ತದೆ."[೭೧]

ಅಂಡವಾತ : ಈ ರೋಗವನ್ನು ಹಿಡಿತದಲ್ಲಿಡಲು "ಬಜೆ, ಇಂಗು, ಆಣಿತಿ, ವಾಯು, ವಿಳಂಗ, ಅರಿಸಿನ, ಗುಳ್ಳ, ನೆಲಗುಳ್ಳ, ಕಟುತ್ರಯ, ಕಡಸಿಗೆಬೀಜ, ಸಾಸುವೆ, ಸಂವತ್ಸರ, ಲವಣ, ಅಜಮೋದ, ಇವುಗಳನ್ನು ಸಮಪ್ರಮಾಣದಲ್ಲಿ ಕೂಡಿಸಿ ಪಿಂಡವ ಇಡಲು ಅಂಡವಾತ ಗುಣಹೊಂದುವದು. ಬರಿವದಣೆ, ಸುಗಂಧಿ, ಪಾದರಿಗುಳ್ಳ, ನೆಲಗುಳ್ಳ, ಅಣಿಲೆ ಬಿಳಿಯ ಚಿತ್ರಮೂಲ, ಆಸಜಿ ಹೊಂಗೆ, ಬೆಲ್ಲವತ್ತ, ಗರುಗ

ಗೋರಂಟೆ ತವಸ, ಅವುಡಲ ಇವೆಲ್ಲವುಗಳ ಬೇರು, ಅಜಮೋದ, ಬೇರೆಲ್ಲವ ನಾಗುಳ, ನೀರೆರೆದೂ ಕಾಸಿದ ಕಷಾಯ, ಒಂದು ಕೊಳಗದಲ್ಲಿ ತುಪ್ಪ, ೧. ಎಣ್ಣೆಯವನ್ನು ಕೂಡಿಸಿ, ಆ ಎಣ್ಣೆ ತುಪ್ಪ ಉಳಿಯಲ್ಪಟ್ಟು ಕಾಸಿ, ಆಸನ ವ್ಯವಸ್ಥೆಯ ಕಟ್ಟಲು ಆಂಡವಾತ ಪರಿಹಾರವಾಗುವುದು."[೭೨]

ಶ್ಲೇಷ್ಮ : "ಗಿಣಿಯ ಮೂಗಿನಗಡ್ಡೆ, ಹೆಗ್ಗುಳ, ನೆಲಗುಳ, ಗಣಜಿಲ, ಅಪಾಮಾರ್ಗ, ಕಾಡಕವಡೆ ಇಂದ್ರವಾರುಣಿ, ಕರಿಯಬದನೆ, ನೆಗ್ಗಿಲುಬೇರು, ಆಕಳಕರಿ ವಿಳಂಗ ಕೋಷ್ಠಾ, ಮೆಣಸು, ಹಿಪ್ಪಲಿ, ಶುಂಠಿ, ಚೇಷ್ಟೆ, ಮಧುರಸ್ಮೆ, ಮತ್ತೆಣಸಿ, ಭಂಗಿಯ ಸಹಿತ ಹದಿನೆಂಟು ಬಗೆಯ ಔಷಧವನ್ನು ಸಮಗೂಡಿಸಿ ಹಣಿದರ್ಧ ಸೇರನ್ನು ಮಧು, ಹಾಲಿನೊಳಗೆ ಕೊಡುವುದರಿಂದ ಐದು ಬಗೆಯ ಶ್ಲೇಷ್ಮಗಳು ಗುಣವಾಗುತ್ತವೆ.

ಎರಡೆರಡು ಸೇರು ಘೃತತಿಲ ತೈಲ, ಹರಳೆಣ್ಣೆ, ಗರುಗ, ಬೇವಿನ ರಸಗಳಲ್ಲಿ ಒಂದೊಂದು ಸೇರು ಮಧು ಬೆರಸಿ ಎಳೆ ಉರಿಯೊಳೆ ಸರೆತ್ತೊಂದು ಕುದಿ ಬಂದ ಬಳಿಕ ಹೊಸಕೇರ ಹರಳನ್ನು ತರಿಸಿ ಮೂವತ್ತು ನಾಲ್ಕು ಕತ್ತರಿಸಿ ಹಾಕಿ ಮರಳಲೊಂದು ಕುದಿಗೆ ತೊಲೆ ಮೈಲಿ ತುಥ್ಯವನ್ನು ಪರಿಶುದ್ಧವಾಗಿ, ಪುಡಿ ಮಾಡಿ ಕಲಸಿ ಮತ್ತೊಂದು ಕುದಿ ಬಂದ ಬಳಿಕ ಮುಡದಾರ, ಶಿಂಗಿಮಣಿ, ಶಿಲೆಯರಡು ತೊಲೆಯ, ಮತ್ತರ ಪಾವು, ಇಂಗಲೀಕ, ಕಂಬಿ, ಚೆಂದ್ರ, ಹವಳ, ಸರಗಂಧಕ ಕೋಷ್ಟ ಇವುಗಳನ್ನು ಸಣ್ಣಗೆ ಅರೆದು ಪುಡಿಯನ್ನು ಹಾಕಿ ಮೂರು ಕುದಿ ಬಂದ ಮೇಲೆ ಕೆಳಗೆ ಇಳಿಸಿ ಶತತೈಲವೆಂಬ ಅಶ್ವಗಳಿಗೆ ಚರಮೌಷದೀ ಮಾಡುವುದು."[೭೩]

ಶೂಲಿಗಳು : ಶೂಲಿಯನ್ನು ಕುರಿತು ಸಕಲಶಾಸ್ತ್ರ ಪಾರಂಗತ ಪಂಡಿತನಾದ ಚಾವುಂಡರಾಯ ಕುದುರೆಗೆ ಬರುವ ಶೂಲಿಗಳನ್ನು ಕುರಿತು ಸುದೀರ್ಘವಾಗಿ ಲೋಕೋಪಕಾರದಲ್ಲಿ ಚರ್ಚಿಸಿದ್ದಾನೆ.

"ಪಡುವೊಡಮೇಜ್ವೊಡಂ ತಲೆಯನಿಕ್ಕುವೊಡಂ ಬಿಸುಸುಯ್ವೊಡಂ ಬೆಮ
ರ್ವೊಡಮುದರಂ ವಿಜೃಂಭಿಸುವೊಡೆಂ ಕರಮಾಮದೊಳೊಂದಿ ಲದ್ದಿ ಪೊ
ಪೊಡಮದು ಶೂಲಿಯೆಂದಜೆದು ವಾಜಿಗೆ ಪಿಪ್ಪಲಿ ಶುಂಠಿ ಸೈಂಧವಂ
ಗಿಡಿವುದು ಮೂಗಿನೊಳ್ ನಯನದೊಳ್ ಗುದದೊಲ್ ಮಿಗೆ ಮೇಢ್ರದೇಶದೊಳ್"[೭೪]

ಕುದುರೆಗಳು ಬೀಳುವ ಸಮಯದಲ್ಲಿ ಮುಖವು ನೊರೆಯಿಂದ ಒಡಗೂಡಿದ್ದರೆ, ಹೆಚ್ಚು ಉಸಿರನ್ನು ಬಿಡುತ್ತಿದ್ದರೆ, ಬೆವರುತ್ತಿದ್ದರೆ, ಹೊಟ್ಟೆಯುಬ್ಬರಿಸಿ ಕೊಂಡಿರಲು ಲದ್ದಿಯ ಸಂಗಡ ಆಮದಂತೆ ಹೋಗುತ್ತಿದ್ದರೆ ಈ ಗುಣಗಳಿಂದ ಕುದುರೆಗೆ ಶೂಲಿ ಬಂದಿದೆ ಎಂದು ತಿಳಿದು ಹಿಪ್ಪಲಿ, ಶುಂಠಿ, ಸೈಂಧವಲವಣ ಇವುಗಳನ್ನು ಚೂರ್ಣಮಾಡಿ ಮೂಗಿನಲ್ಲಿ ಇಡುವುದರಿಂದ, ಕಣ್ಣಿನಲ್ಲಿ ಹಚ್ಚುವುದರಿಂದ, ಆಸನದಲ್ಲಿಡುವದು, ವೃಷಣದ ನಾಳಗಳಲ್ಲಿ ತುಂಬುವುದರಿಂದ ಹಾಗೆಯೇ ಉಪ್ಪು, ಹಿಪ್ಪಲಿ, ಬಜೆ, ಸಾಸಿವೆ ಬೋನಗಾರೆಯಕಾಯಿ, ಶುಂಠಿ ಇವನ್ನು ಚೂರ್ಣಮಾಡಿ ಆಕಳಮಜ್ಜಿಗೆ, ಅಂಬಲಿ, ಎಳ್ಳೆಣ್ಣೆ ಇವುಗಳ ಜೊತೆಗೆ ಕೂಡಿಸಿ, ಕಲಿಸಿ ನಸ್ಯವ ಮಾಡಿದರೆ ಶೂಲಿಗಳು ಗುಣವಾಗುತ್ತವೆ. ಅಲ್ಲದೇ ಸೈಂಧವ, ಬಿಡುವಲವಣ, ಕಾಚಲವಣ, ಸಂದರ್ಚಲವಣ,

ಉಪ್ಪು, ಇಂಗು, ಹಿಪ್ಪಲಿ, ಶುಂಠಿ, ತುಂಬುರುಕಾಯಿ, ಕೊತ್ತುಂಬರಿ, ಅಣಿಲೆಯಕಾಯಿ ಕೊಂಡು ಕುಟ್ಟಿ ಚೂರ್ಣಮಾಡಿ ಮಧ್ಯದಲ್ಲಿ ಕಲಿಸಿ ಕೊಡುವುದರಿಂದ ಶೂಲಿಗಳು ವಾಸಿಯಾಗುತ್ತವೆ.

ಹಿರಿಯಣ್ಣ ಕವಿಯು ಹಯರತ್ನಶ್ರೇಣಿ ಕೃತಿಯಲ್ಲಿ ರೋಗಗಳಿಗೆ ಚಿಕಿತ್ಸೆ ಕುರಿತು ಪ್ರಸ್ತಾಪಿಸಿದ್ದಾನೆ. ಉದಾಹರಣೆಗಾಗಿ,

"ನೆಲಬೇವು ಇಂದ್ರವಾರುಣಿ ಬ್ರಹ್ಮಿ ಹೆಗ್ಗುಳ(ಂ)
ನೆಲದವರಿಕೆ ಕತ್ತೆ ಗುರಬರಂಜಿಕೆಯರಡು
ನೆಲಗುಳ್ಳ ಪುರುಷರತ್ನಂಗಳ ಸಮೂಲ ಹೆಗ್ಗೂಡಚಿಗಾ
ಹುಲುಗಲೀ ಅಪಾಮಾರ್ಗಗಳ ಬೇರು ಬಜೆಯಿಂ
ಗಳ ಕೋಲು ಮುಕ್ಕುಗಳ ಸೆಕ್ಕೆ ಆಕಳಕರಿ
ಸಲೆ ಗಂಟು ಭಾರಂಗಿ ತಿಗಡೆ ಅತಿಬಜೆ ಶುಂಠಿ ಜಾಪಾರದೋವು (೭-೧)

ಚವೆ ಇಂಗು ಪತ್ರಿ ತ್ರಿಕಟುಕ ಯಪಕ್ಷಾರ ಸೈಂ
ಧವಲವಣ ಲವಂಗವು ತ್ರಿಫಲೆ ಕಿರಿಬೇವು ಹೆಬ್ಬೇವು
ಯಿವರ ಮುಗುಳು ಹಾಲೆಯೆಂಬದರ ಬೀಜ ಗಜುಗಿನ ತಿರುಳು ಸಾಸಿವೆಗಳು
ಇವು ನಾಲ್ವತ್ತು ಸಮಗೂಡಿ ಚೂರ್ಣಿಸುತ ಮಾ
ನವ ಮೂತ್ರ ಗೋಮೂತ್ರ ಬಿಸಿ ನೀರೋಳಾದೊಡಂ
ತವಕದಿಂ ಮೂರು ಪಾವನು ಕುಡಿಸಲಾ ಹಯಕೆ ಹದಿನೆಂಟು ಶೂಲಿ ಮಾಣ್ಗು"[೨೫] (೭-೨)

ಕುದುರೆಗಳಿಗೆ ಶೂಲಿ ಬರುವುದನ್ನು ತಡೆಗಟ್ಟಲು ಔಷದೋಪಚಾರವನ್ನು ಮಾಡುವ ಕ್ರಮಗಳನ್ನು ಹೇಳಿರುವನು. ನೆಲಬೇವು, ಇಂದ್ರವಾರುಣಿ, ಬ್ರಹ್ಮಿ, ಹೆಗ್ಗುಳ, ನೆಲದವರಿಕೆ, ಕತ್ತೆಗುರ ಬರಂಜಿಕೆಯರಡು, ನೆಲಗುಳ್ಳ, ಪುರುಷರತ್ನ, ಸಮೂಲ, ಹೆಗ್ಗೂಡಚಿಗೆ, ಹುಲುಗಲಿ, ಅಪಾಮಾರ್ಗಗಳಬೇರು, ಬಜೆಗಳಕೋಲು, ಮುಕ್ಕಗಳಸೆಕ್ಕೆ, ಆಕಳಕರಿ, ಸೆಲೆಗಂಟು ಭಾರಂಗಿ, ತಿಗಡೆ, ಅತಿಬಜೆ, ಶುಂಠಿ, ಜಾಪಾರದೋವು, ಚವೆ, ಇಂಗು, ಪತ್ರಿ, ತ್ರಿಕುಟುಕ, ಯಪಕ್ಷಾರ ಸೈಂಧವಲವಣ, ಲವಂಗ, ತ್ರಿಫಲೆ, ಕಿರಿಬೇವು, ಹೆಬ್ಬೇವು, ಅದರ ಮುಗುಳು, ಹಾಲೆಬೀಜ, ಗಜುಗಿನ ತಿರುಳು, ಸಾಸಿವೆ ಇಂತಹ ನಾಲ್ವತ್ತು ಪ್ರಕಾರದ ಔಷಧ ಜಾತಿಯ ಪ್ರಕಾರಗಳನ್ನು ಸಮಪ್ರಮಾಣದಲ್ಲಿ ಕೂಡಿಸಿ, ಚೂರ್ಣ ಮಾಡಿ ಮಾನವ ಮೂತ್ರ, ಗೋಮೂತ್ರ, ಬಿಸಿ ನೀರೊಳಗೆ ತವಕದಿಂದ ಮೂರು ಪಾವನ್ನು ಕುಡಿಸುವುದರಿಂದ ಹದಿನೆಂಟು ಪ್ರಕಾರದ ಶೂಲಿಗಳು ಗುಣವಾಗುತ್ತವೆ. ಶುಂಠಿಯನು ನೀರಿಲ್ಲಿ ಅರೆದು ನಸ್ಯವನ್ನು ಮಾಡಿ ಕಣ್ಣಿಗೆ ಅಂಜನವನ್ನು ಹಚ್ಚುವುದರಿಂದ ಶೂಲಿ ಉಪಶಮನವಾಗುತ್ತದೆ.

ಸುಭೀಕ್ಷೆ ಮತ್ತು ಹೊಟ್ಟೆ ಶೂಲಿ : "ಈ ರೋಗದ ಲಕ್ಷಣ ಹಸಿದು ದಡಬಡಿಸುವ, ಕುದುರೆಗೆ ಹೊಟ್ಟೆ ಶೂಲಿ ಇದ್ದಾಗ ಬಾಣವನ್ನು ಕಟ್ಟಿದರೆ ಅದರಿಂದ ಉಚ್ಚಸವಾಗಿ ಬೇನೆಯ ತಡೆದುಕೊಳ್ಳಲಾಗದೆ ನೆಲಕ್ಕೆ ಬೀಳಲು ಸುಭೀಕ್ಷೆಶೂಲಿ ಎಂದು ಕರೆಯುವರು. ನಂತರ ಮಲಗುವದು, ಹೊರಳುವದು, ಏಳುವದು, ಸಿಡಿಮಿಡಿಗೊಳ್ಳುವದು, ಬೆವರುವುದು, ಉಮ್ಮಳಿಸುವದು, ತಲೆಗುತ್ತುವದು ಇವೆಲ್ಲ ಲಕ್ಷಣಗಳು ಸುಭೀಕ್ಷ ಶೂಲಿಯವು."[೭೬]

"ಕುದುರೆಗಳಿಗೆ ಆಧ್ಮಾನಹುಟ್ಟಿ, ಹೊಟ್ಟೆಯುಬ್ಬರಿಸಿ ಶೂಲಿ ಕಾಣಲು ಅದಕ್ಕೆ ಬ್ರಾಹ್ಮಿಯ ಸೊಪ್ಪು ತಂದು ರಸವನ್ನು ಮಾಡಿ ಆ ರಸದೊಳಗೆ ಎಣ್ಣೆಯನ್ನು ಹಾಕಿ ಕುಡಿಸಲು ಗುಣಮುಖಹೊಂದುವದು."[೭೭] ಈ ರೋಗದ ಲಕ್ಷಣವನ್ನು ಅಭಿನವಚಂದ್ರ ಹೇಳಿದ ರೀತಿಯಲ್ಲಿಯೇ ರಾಮಚಂದ್ರಕವಿ ಹೇಳುತ್ತಾನೆ. ಆದರೆ ಇದರ ಜೊತೆಗೆ ಉಪಚಾರ ವಿಧಾನವನ್ನು ಹೇಳಿರುವುದು ಇವರಿಬ್ಬರಲ್ಲಿ ಭಿನ್ನತೆಯನ್ನು ಸೂಚಿಸುತ್ತದೆ. "ಶುಂಠಿಯನ್ನು ಬಾಯಿಗೆ, ನಾಲಿಗೆ ಉಜ್ಜಿ ಲೇಪನವನ್ನು ಮಾಡಿ, ಸಾಸುವೆ, ಸೈಂಧವಲವಣ, ಎಳ್ಳೆಣ್ಣೆಯಲ್ಲಿ ಕಲಿಸಿ ಹೊಕ್ಕಳ ಕೆಳಗೆ, ಮೈಗೆ ಹಚ್ಚುವುದರಿಂದ, ಕುಡಿಸುವುದರಿಂದ ಎಲ್ಲ ಶೂಲಿಗಳು ಪರಿಹಾರವಾಗುತ್ತವೆ. ಇಂಗು, ಬಜೆ, ಚಿತ್ರಮೂಲ, ಪವಾಹಕ, ಶೃಂಗಿ, ಬೇವು, ಅಳಲೆಕಾಯಿ, ಕಣಗಿಲ ಬೇರು, ಅವುಡಲದಬೇರು, ಚಂಗಲಕೋಷ್ಟ, ತಿಡೆ ಇವುಗಳನ್ನು ಒಂದೆರಡು ಮೂರು ನಾಲ್ಕರಿಂದ ಹತ್ತು ಭಾಗಗಳಿಗೊಂದು ಭಾಗವನ್ನು ಹೆಚ್ಚಿಸಿ, ಕೂಡಿಸಿ ಅರೆದು ಬಿಸಿ ನೀರಿನಲ್ಲಿ ಕಲಸಿ ಕುದುರೆಗೆ ಕೊಡಲು ಎಲ್ಲ ಶೂಲಿಗಳು ದೋಷಮುಕ್ತವಾಗುತ್ತವೆ. ಹಾಗೆಯೇ ಶುಂಠಿ, ಸೋಮನಾಥನ ಇಂಗು, ಬೆಳ್ಳುಳ್ಳಿ, ತಿಗಡೆ, ಸೈಂಧವಲವಣ ಈ ಐದನ್ನು ಸಮಭಾಗ ಮಾಡಿ ಅರೆದು ಬಿಸಿ ನೀರಿಂದ ಕುದುರೆಗೆ ಕೊಡಲು ಎಲ್ಲಾ ಶೂಲಿಗಳು ಮಾಯವಾಗುವವು."[೭೮]

ಕುದುರೆಗಳು ಒಣಗಿದ ಆಹಾರಗಳ ಸೇವನೆ ಮಾಡುವುದರಿಂದ, ಆಹಾರವು ಜೀರ್ಣವಾಗದೆ ಇರುವುದರಿಂದ, ಅತಿಯಾಗಿ ಸವಾರಿ ಮಾಡುವುದರಿಂದ, ಚಳಿ ಮತ್ತು ಬಿಸಿಲುಗಳಿಂದ, ಆಯಾಸಗೊಳ್ಳುವುದರಿಂದ, ರೋಗಗಳು ಉಂಟಾಗುತ್ತವೆ. ಇಂತಹ ಸಂದರ್ಭದಲ್ಲಿ ಅಶ್ವಾಯುರ್ವೇದ ಪಂಡಿತರಿಂದ ಚಿಕಿತ್ಸೆ ಮಾಡಿಸಿ ರೋಗ ನಿವಾರಣೆಯಾಗುವಂತಹ ಔಷಧಿಗಳನ್ನು ಕೊಡಬೇಕು.

ಸುಭೀಕ್ಷ ವರ್ತರೋಗ : ಕುದುರೆ ಮತ್ತೆ ಮತ್ತೆ ಏಳುವುದು, ಮತ್ತೆ ಮತ್ತೆ ಕೂಡುವುದು, ಶರೀರವನ್ನು ಮುದುಡಿಕೊಳ್ಳುವುದು, ಹೊಟ್ಟೆ ಉಬ್ಬರಿಸಿಕೊಂಡು ಬಹಳ ಸಂಕಟಪಡುವುದು, ತಲೆ ಭಾರವಾಗಿ ಕಷ್ಟದಿಂದ ಎತ್ತುವುದು. ಆಮದಿಂದ ಕೂಡಿದ ಮಲವನ್ನು ವಿಸರ್ಜನೆ ಮಾಡುವುದು, ಹೊಟ್ಟೆಯನ್ನು ವಾಯುವು ಶಬ್ದದೊಡನೆ ಸಂಚಾರ ಮಾಡುವುದು ಈ ಎಲ್ಲ ಲಕ್ಷಣಗಳಿಂದ ಕೂಡಿರುವ ರೋಗಕ್ಕೆ ಸುಭೀಕ್ಷವರ್ತವೆಂದು ಕರೆಯುತ್ತಾರೆ. ಈ ರೋಗ ನಿವಾರಣೆ ಮಾಡಲು ಶರೀರದ ಒಂಭತ್ತು ದ್ವಾರಗಳಲ್ಲಿಯೂ ಶುಂಠಿಚೂರ್ಣವನ್ನು ಹಾಕಿ, ಕುದುರೆಯನ್ನು ನಿಧಾನವಾಗಿ ಓಡಾಡಿಸುವುದರಿಂದ ವಾಯುವು ಸಮಸ್ಥಿತಿಗೆ ಬರುತ್ತದೆ. ಮೇಲೆ

ತಿಳಿಸಿದ ಚಿಕಿತ್ಸೆಯಿಂದ ಒಂದು ವೇಳೆ ವಾಯುವು ಶಮನವಾಗದಿದ್ದರೆ ಬಿಳಿಸಾಸಿವೆ, ಸೈಂದವಲವಣ, ತ್ರಿಕಟು (ಶುಂಠಿ, ಹಿಪ್ಪಿ, ಮೆಣಸು) ಇವುಗಳಿಂದ ಕೂಡಿದ ತೈಲವನ್ನು ಅಭ್ಯಂಗ ಮಾಡುವುದರಿಂದ ಕುದುರೆಯು ರೋಗದಿಂದ ಗುಣಮುಕ್ತವಾಗುತ್ತದೆ. ವೈದ್ಯನು ಒದ್ದೆಯಾದ ಕಂಬಳಿಯಲ್ಲಿ ಕಾಯಿಸಿದ ಕಲ್ಲನ್ನು ಸುತ್ತಿಕೊಂಡು, ಕುದುರೆಯ ಎರಡೂ ಪಕ್ಕೆಗಳು, ಹೊಟ್ಟೆ ಮತ್ತು ಬೆನ್ನಿನ ಭಾಗಗಳಿಗೆ ಮತ್ತೆ ಮತ್ತೆ (ಸ್ವೆದನ) ಕಾಯಿಸುವುದು. ಹೀಗೆ ಮಾಡುವುದರಿಂದ ಗುಣವಾಗುತ್ತದೆ. ಒಂದು ವೇಳೆ ಇದರಿಂದಲೂ ವಾಯುವು ಸಮಸ್ಥಿತಿಗೆ ಬರದಿದ್ದರೆ ಆಗ ಆ ಕುದುರೆಗೆ ನಿರೂಹಬಸ್ತಿಯನ್ನು ಪ್ರಯೋಗಿಸಬೇಕು. ಹುಣಿಸೆ ಹಣ್ಣಿನಿಂದ ಸಿದ್ಧವಾದ ಕಲ್ಕವನ್ನು ಕಾಂಜಿಯೊಡನೆ ಬೆರಸಿ ಬಿಳಿಸಾಸಿವೆ, ಸೈಂದವಲವಣ, ಮಗ್ಗಾರೆಕಾಯಿ, ಸಬ್ಬಸಿಗೆ ಬೀಜದಿಂದ ತಯಾರಿಸಿದ ಆಸವ, ಇವುಗಳೊಡನೆ ಎಳ್ಳೆಣ್ಣೆಯನ್ನು ಬೆರಸಿ ಮೇಲೆ ಹೇಳಿದ ಮಿಶ್ರಣವನ್ನು ನಿರೂಹಬಸ್ತಿಗೆ ಉಪಯೋಗಿಸಿದರೆ ಪ್ರಕುಪಿತವಾದ ವಾಯುವು ಶಮನ ಹೊಂದುವುದು. ಒಂದು ವೇಳೆ ಈ ನಿರೂಹಬಸ್ತಿ ಕ್ರಮದಿಂದಲೂ ಕುದುರೆ ಗುಣಹೊಂದಿದ್ದ ಪಕ್ಷದಲ್ಲಿ ಹೊಟ್ಟೆಯ ಎರಡು ಬದಿಗಳಲ್ಲಿ ಸಾಲಾಗಿ ಎರಡು ಗೆರೆಗಳಂತೆ ಕೆಂಪಗೆ ಕಾಯಿಸಿದ ಲೋಹಶಲಾಕೆಯಿಂದ ಅನೇಕ ಬಿಂದುಗಳ ರೂಪದಲ್ಲಿ ಬರೆಹಾಕಬೇಕು. ಈ ದಾಹ ಚಿಕಿತ್ಸೆಯಿಂದ ಕುದುರೆಯು ತಕ್ಷಣ ಆರೋಗ್ಯವನ್ನು ಪಡೆಯುತ್ತದೆ. ಹೊಟ್ಟೆಯು ಸಡಿಲುಗೊಳ್ಳುತ್ತದೆ. ಮನಸ್ಸಿನ ಪ್ರಸನ್ನತೆಯನ್ನು ಹೊಂದುತ್ತದೆ. ಮಾರನೆಯದಿನ (ಮರುದಿನ) ಆ ಕುದುರೆಗೆ ಪಾಚಕವಾದ ಮತ್ತು ಅಗ್ನಿ ದೀಪವನ್ನುಂಟು ಮಾಡುವ ಪಾನೀಯಗಳನ್ನು ಕೊಡಬೇಕು. ಏಲಕ್ಕಿ, ಹಿಪ್ಪಿ, ಶುಂಠಿ ಚಿರಾಯತ, ಪಂಚಲವಣಗಳು, ಬಜೆ, ಅರೆಬಜೆ, ಇಂಗು ಈವೆಲ್ಲ ಚೂರ್ಣಗಳನ್ನು ಅರ್ಧ ಫಲದಷ್ಟು ಪ್ರಮಾಣ, ಅರ್ಧಸೇರು (೩೨ ಫಲ) ಸುರೆಯನ್ನು ಸೇರಿಸಿ ಕುಡಿಸಬೇಕು. ಮೇಲಿನ ಕ್ರಮದಿಂದ ಎಲ್ಲ ವಿಧವಾದ ಶೂಲಿಗಳು ನಾಶವಾಗುತ್ತವೆ. ಶುಂಠಿ ಚೂರ್ಣ ಒಂದನ್ನೇ ಆದರೂ ಬೆಲ್ಲವನ್ನು ಬೆರಸಿ ಪ್ರಯೋಗ ಮಾಡುವುದರಿಂದ ಸಹ ಶೂಲಿ ಗುಣಮುಕವಾಗುತ್ತದೆ."[೬೮]

ವಾತ, ಹೊಟ್ಟೆಶೂಲಿ, ಆಧ್ಮಾನರೋಗ : "ತ್ರಿಫಲಾ, ಮೋಡಿ, ತ್ರಿಕಟು, ಜೀರಿಗೆ, ಕಪ್ಪುಜೀರಿಗೆ, ಇಂಗು ಹುಣಸೇಹಣ್ಣು, ವಾದಕ್ಕಿ, ಬಿಳಿಸಾಸಿವೆ, ಅಜಾಮೋದ, ಅಶ್ವಗಂಧಿ, ಕಹಿಪಡುವಲ, ಪುಳ್ಳಂ ಪುರುಚಿಸೊಪ್ಪು, ತಿಗಡೆ, ಬೇವಿನ ಚಕ್ಕೆ, ಕೊನ್ನಾರಿಗಡ್ಡೆ, ಪರ್ಪಾಷ್ಟಕ, ಕಟುಕರೋಹಿಣೀ, ದಾಳಿಂಬೆಸಿಪ್ಪೆ, ಕರಿಉಪ್ಪು, ಸೈಂಧವಲವಣ, ಬಿಡಲವಣ, ಸಾಮುದ್ರಲವಣ, ಕಾಚಲವಣ ಇವೆಲ್ಲವನ್ನು ಒಟ್ಟಾಗಿ ಕೂಡಿಸಿ ಕುಟ್ಟಿ ಚೂರ್ಣ ಮಾಡಿಕೊಳ್ಳಬೇಕು. ಮೇಲೆ ಹೇಳಿದ ಚೂರ್ಣವನ್ನು ವಾತರೋಗಗಳಲ್ಲಿ ಒಂದ ಪಲ ಪ್ರಮಾಣ ತುಪ್ಪದೊಡನೆ ಕೊಡಬೇಕು. ಪಿತ್ತಜನರೋಗಗಳಲ್ಲಿ ಒಂದು ಫಲಪ್ರಮಾಣ ಮೇಲೆ ಹೇಳಿದ ಚೂರ್ಣವನ್ನು ಜೇನುತುಪ್ಪ ಮತ್ತು ಸಕ್ಕರೆ ಸೇರಿಸಿ ಕೊಡಬೇಕು. ಕಫಜವಾದ ರೋಗಗಳಲ್ಲಿ ಈ ಚೂರ್ಣವನ್ನು ಒಂದು ಫಲದಷ್ಟು ಪ್ರಮಾಣ ಸುರೆಯೊಡನೆ ಮಿಶ್ರಮಾಡಿ ಕೊಡಬೇಕು. ಅರನಾಳ ಅಥವಾ ಕಾಂಜಿಯೊಡನೆ ಈ ಚೂರ್ಣವನ್ನು ಪ್ರಯೋಗಿಸಿದರೆ ಹೊಟ್ಟೆಯ ಶೂಲ ಮತ್ತು ಆಧ್ಮಾನ ರೋಗಗಳು (ಹೊಟ್ಟೆ ಉಬ್ಬರಿಸಿಕೊಂಡು

ಶಬ್ದ ಮಾಡುತ್ತಿರುವುದು) ನಾಶವಾಗುತ್ತವೆ. ಇದೆ ಚೂರ್ಣವನ್ನು ಮಾಂಸರಸದೊಡನೆ ಕೊಟ್ಟರೆ ಕುದುರೆಗಳಿಗೆ ಶರೀರದಲ್ಲಿ ಪುಷ್ಟಿಯುಂಟಾಗುತ್ತದೆ. ಬಿಸಿನೀರಿನೊಡನೆ ಕೊಡುವುದರಿಂದ ಈ ಚೂರ್ಣವು ಎಲ್ಲಾ ರೋಗಗಳನ್ನೂ ಪರಿಹಾರಮಾಡುತ್ತದೆ.

ಸಿಂಹಾಣಕರೋಗ : ಶ್ಲೇಷ್ಮದೋಷವು ವೃದ್ಧಿಯಾಗಿ ಕುದುರೆಗಳ ಮೂಗಿನಿಂದ ಸುರಿಯುತ್ತಿರಲು ಸಿಂಹಾಣಕ ರೋಗವೆಂದು ಕರೆಯುವರು. ಬಿಳಿ ಸಾಸುವೆಯಿಂದ ತೆಗೆದ ಎಣ್ಣೆಯನ್ನು ಆಡಿನ ಮೂತ್ರದೊಡನೆ ಬೆರಸಿ ಹೆಗ್ಗುಳ್ಳದ ರಸವನ್ನು ಹಾಕಿ, ಈ ಮಿಶ್ರಣವನ್ನು ನಸ್ಯಮಾಡಿಸಿದರೆ ಸಿಂಹಾಣಕರೋಗ ಗುಣಾಗುವುದು.

ಕಾಸ (ಕೆಮ್ಮು) ಹಿಕ್ಕಾ (ಬಿಕ್ಕಳಿಕೆ) : ಶುಂಠಿ, ತುರುಚನಬೇರು, ಕೊನ್ನಾರಿಗೆಡ್ಡೆ ಮುತ್ತುಗದ ಬೀಜ, ಹೆಗ್ಗುಳ್ಳ, ನೆಲಗುಳ್ಳ, ಗಂಟು ಭಾರಂಗಿ, ಬಲಮುರಿಕಾಯಿ, ಬಜೆ, ಪುಷ್ಕರಮೂಲ, ಹಿಪ್ಲಿ, ಇವುಗಳ ಚೂರ್ಣವನ್ನು ತುಪ್ಪದೊಡನೆಯಾಗಲೀ, ಜೇನುತುಪ್ಪದೊಡನೆಯಾಗಲೀ, ಸಕ್ಕರೆಯೊಡನೆಯಾಗಲೀ, ಕಲಿಸಿ ನೆಕ್ಕಿಸಿದರೆ ಕುದುರೆಗಳಿಗೆ ಕೆಮ್ಮು ಮತ್ತು ಬಿಕ್ಕಳಿಕೆ ರೋಗಗಳು ನಾಶವಾಗುತ್ತವೆ.''[೮೦]

ಬುಕ್ಷಾವರ್ತಶೂಲಿ : ''ತೊಡೆಯ ಸಂಧಿಯಲ್ಲಿ, ಬೆನ್ನ ನೆಟ್ಟಲುವಿನಲ್ಲಿ, ಉಗ್ರವಾದ ಬೇನೆ ಇರಲು ಬುಕ್ಷಾವರ್ತ ಶೂಲಿ ಎಂದು ಕರೆಯುವರು. ಹಿಪ್ಪಲಿ, ಮೆಣಸು, ಎಳ್ಳೆಣ್ಣೆ, ಹಸುವಿನ ಹಾಲು, ಮೊಸರು, ತುಪ್ಪ ಇವುಗಳನ್ನು ಕೂಡಿಸಿ ಕುದುರೆಗೆ ಕೊಡಬೇಕು. ಶುಂಠಿಯನ್ನು ತೇದು ಕಣ್ಣಿಗೆ ಹಚ್ಚುವುದು, ಹಸಿ ಶುಂಠಿಯ ರಸವನ್ನು ಮೂಗಿನೊಳಗೆ ಹಿಂಡುವದು. ಈ ರೀತಿಯಾಗಿ ಉಪಚರಿಸಿದರೆ ಬುಕ್ಷಾವರ್ತ ರೋಗ ಉಪಶಮನವಾಗುತ್ತದೆ. ಹೊಸ ತುಪ್ಪದಲ್ಲಿ ಕೊಡಶಿಗೆಯನಾರು, ಸೈಂಧವಲವಣ, ರೇಣುಕ, ಚಿತ್ರಮೂಲ, ಸೋಮನಾಥನ ಇಂಗು ಇವನ್ನು ಸಮಭಾಗ ಮಾಡಿ ಕುದುರೆಗೆ ಕೊಡುವುದರಿಂದ''[೮೧] ಎಲ್ಲಾ ಬಗೆಯ ಶೂಲಿಗಳು ನಾಶ ಹೊಂದಿ ಕುದುರೆ ಚೈತನ್ಯದಾಯಕವಾಗುವದು.

ಸ್ತನ್ಯಾವರ್ತಶೂಲಿ : ಈ ರೋಗಕ್ಕೆ ''ಒಂದು ಗದ್ಯಾಣ ಮುತ್ತುಕದ ಬೀಜ, ಇಂಗು, ಒಂದು ಪಾವು, ಜೋಪಾರದ ದೋವು, ಮಾದಳದ ತಿರುಳೊಂದನ್ನು ಗುಡಾಜ್ಯದೊಳಗಿಡಲು ಸ್ತನ್ಯಾವರ್ತಶೂಲಿ ಪರಿಹಾರವಾಗುತ್ತದೆ.

ಮೂತ್ರಶೂಲಿ : ಛಂದದಿಂದೆರಡು ಬಗೆಯಲ್ಲಿ ಹಿಪ್ಪಲಿಗಳನ್ನು ಸೇರೊಂದು ಸಮಪ್ರಮಾಣದಲ್ಲಿ ಕೂಡಿಸಿ ಪುಡಿ ಮಾಡಿ ತುಪ್ಪದಲ್ಲಿ ಸೈಂಧವಲವಣವನ್ನು ಕೊಡುವುದರಿಂದ ಮೂತ್ರಶೂಲಿಯು ನಾಶವಾಗುತ್ತದೆ.

ಸದಾವರ್ತಶೂಲಿ : ಮುತ್ತಕದ ಬೀಜ, ಗಣಜಲಿಯ ತೆನೆ, ಸೈಂಧವಲವಣ, ಬಿತ್ತರಿಪ ಹಾಲಿವಾಳದ ತೋಟೆ ಇವುಗಳನ್ನು ಸಮಪ್ರಮಾಮದಲ್ಲಿ ಎಳ್ಳೆಣ್ಣೆಯೊಳಗೆ ಕೊಡುವುದರಿಂದ ಈ ಶೂಲಿ ಗುಣಮುಖವಾಗುತ್ತದೆ.

ಎತ್ತಲ ಅತಿದಾಹ ಶೂಲಿ : ಬಜೆ, ಕೊಷ್ಟವೆತ್ತು, ಪಾಷಾಣದಂತೆ, ಸೈಂಧವನೆತ್ತುವದರಿಂದ ಹುಳಿಯೆಂಬಲದೊಳಗೆ ಕೂಡಿಸಿ ಕೊಡಲು ಹಯಕಾರೋಗ್ಯವಾಗುವದು.

ರಕ್ತಶೂಲಿ : ಹಾಲಿನೊಳಗೆ ಕಾಕ ಝುಂಗೆಯ ಬೇರನರೆದು ಕುಡಿಸಲಾಲಸ್ಯವಿಲ್ಲದೆ ಉತಾರವಾಗುವದೆಂದು ಹಿರಿಯಣ್ಣ ಕವಿ ಹೇಳಿರುವನು.

ಕ್ರಿಮಿದೋಷ ಶೂಲಿ : ಸಮಪ್ರಮಾಣದಲ್ಲಿ ತ್ರಿಕಟುಕ, ಕೋಷ್ಟವರೆ ಸೇರನೊಡಗೂಡಿಸಿ ಮೇಲೆ ಮತ್ತಕದ ಬೀಜ ಗದ್ಯಾಣ ಬೆರಸಿ ಬೆಲ್ಲದಲ್ಲಿ ಕೊಡಲು ಕ್ರಿಮಿದೋಷಶೂಲಿ ಗುಣವಾಗುವುದು.

ವರ್ನಿವೆಸದಾವರ್ತಶೂಲಿ : ಚೆನ್ನಾಗಿ ಬೆಳ್ಳೊಳ್ಳಿ, ಇಂಗು, ಸೈಂಧವಲವಣವನ್ನು ಕೂಡಿಸಿ ಚೂರ್ಣ ಮಾಡಿ ಸಮಪ್ರಮಾಣದಲ್ಲಿ ಹೆತ್ತಿರುವ ಮೊಸರಿನೊಳಗೆ ಕೊಡಲು ಗುಣವಾಗುವುದು.

ಬಿಂಬಾವರ್ತಶೂಲಿ : ಕೋರಿಯನ್ನು ಸುಟ್ಟು ಭಸ್ಮದೊಳಗೆ ಕೂಡಿಸಿ ಹೆಣ್ಣಕೋಳಿಯ ರಕ್ತ ದೊಳಗೆ ಕಲಸಿ ಕೊಡಲು ಅಶ್ವಕ್ಕೆ ಆರೋಗ್ಯ ಪ್ರಾಪ್ತಿಯಾಗುವದು.

ತ್ರಿಭ್ರಮಶೂಲಿ : ಘೃತ ಎಳ್ಳೆಣ್ಣೆ ಕೂಡಿಸಿ ಮೈಮರ್ದನೆಯನ್ನು ಮಾಡಿಸಿ, ಬಿಸಿಲಲ್ಲಿ ಕಟ್ಟಿ ದುರ್ರಿಳಕಾಯಿ, ಶುಂಠಿ, ಅರಿಷಿಣ, ಬೆಲ್ಲವನ್ನು ಕೊಡುವದು.

ಖಾಸವರ್ತಶೂಲಿ : ಹಾಲಿನಲ್ಲಿ ನೆಗ್ಗಲಿಬೇರು, ಶುಂಠಿಯನ್ನು ಸಮಪ್ರಮಾಣದಲ್ಲಿ ಕೂಡಿಸಿ ಕೊಡಲು ಮೆಲ್ಲುಸಲ್ಕಾಶೂಲಿ ಗುಣವಾಗಿ ಕುದುರೆಗಳು ಸಂತೋಷದಿಂದಿರುವವು.

ಸುಖಾವರ್ತಶೂಲಿ : ಎರಡು ದಿನಸಿನ ಶುಂಠಿ, ಹಿಪ್ಪಲಿಯೆಂಗುರದ ಬೇರು ಅರೆದು ಸಮಭಾಗ ಮಾಡಿ ಕೊಡುವುದರಿಂದ ಗುಣವಾಗುವದು.

ಪ್ರಾಹಿಕದ ಶೂಲಿ : ಭರದಿಂದ ಮಣಿಯ ತುಂಡನ್ನು ಸುಟ್ಟು ಬೂದಿಯನ್ನು ಕರೆ ಕೋಳಿಯ ರಕ್ತ, ಇಂಗು, ಮುಕ್ತದ ಬೀಜವನ್ನು ಅರೆದುಕೊಡಲು ಪ್ರಾಹಿಕದ ಶೂಲಿ ನಾಶವಾಗುವದು.

ಪುರೀಷ ಶೂಲಿ : ಕಾಯೊಳುದಂತಿಯ ಬೇರ ಸಮಪ್ರಮಾಣದಲ್ಲಿ ಮುದದಿ ತಿಲತೈಲದಿಂದ ಅರೆದು ಗೊಟ್ಟದಲ್ಲಿ ಎತ್ತಲು ಕುದುರೆ ಗುಣಮುಖವಾಗುವದು.

ಪಾನೀಯಶೂಲಿ : ಶುಂಠಿ, ಸೈಂಧವಲಣ, ಪದುಳದ ಇಂಗು, ಬಜೆಯೆರಡು ಹಿಪ್ಪಲಿಗಳನ್ನು ಕುದುರೆ ಗಾಜ್ಯದೊಳಗೆ ಸಮಭಾಗದಿಂದ ಕೂಡಿಸಿ ತಿನಿಸಲು ಗುಣವಾಗುವದು.

ಕ್ಷುಧಾವರ್ತಶೂಲಿ : ಬೆಳ್ಳೊಳ್ಳಿ, ಅಜಿವಾನ, ತ್ರಿಕುಟಕ, ವಾಯಿವಳಂಗ ಮಿಯುವಂತೆ ಇವೆಲ್ಲವನ್ನು ಸಮಪ್ರಮಾಣದಲ್ಲಿ ಕೂಡಿಸಿ ತುಪ್ಪದೊಳಗೆ ಸೇರನೀಡಲು ಉಪಶಮನ ಹೊಂದವದು.

ಗುಲ್ಮಿಕಾವರ್ತಶೂಲಿ : ಇಂಗು, ಬೇವು, ಅಜಿವಾನ, ಅಳಲಿಕಾಯಿ, ವಾಯು ಅಂಗಳ, ನೆಲದವರಿಕೆ ಕೂಡಿಸಿ ತುಪ್ಪದಲ್ಲಿ ಕೊಡುವದು.

ರಜನಿಶೂಲಿ : ಕಚೋರ, ಭಜಿ, ಸೈಂಧವಲವಣ, ಅಂಜದಲೆ, ಸದ್ಯಕ್ಷಾರ ಕೂಡಿಸಿ ನಿಂಬಹುಳಿ ಗಂಜಿಯೊಳಗರ ಸೇರನರೆದು ಕುಡಿಸಲು ರೋಗ ಗುಣಹೊಂದುವದು.

ಕ್ರಿಮಿಶೂಲಿ : ಇಂದ್ರವಾರುಣಿ, ಲಕ್ಕಿ ಮುಗುಳು, ಜೋಪಾರದೋವು, ಭಜಿ, ಕುಳಂಜಿನ, ಮಾಳದದ ಬೇರಿನ ತೊಗಟೆ, ಗಜಗಿನ ತಿರುಳು, ಮತ್ತಕದ ಬೀಜ, ಸೈಂಧವಲ, ಅಳಲೆಕಾಯಿಂದ ರಾಗಿಯ ಹಳದಿ ತಂದಿವನ್ನು ಸಮಕೂಡಿಸಿ ಅರಸೇರ ನೋಜನೆಯಿಂದ ಸರಿಯಾಗಿ ಸಮಭಾಗ ಮಾಡಿ ಪುಡಿಕೊಡಲು ಕ್ರಿಮಿಶೂಲಿ ರೋಗ ಪರಿಹಾರವಾಗುವುದು."[೮೨]

ಕ್ರಿಮಿದೋಷ : "ಎರಡು ಜೀರಗಿ, ಚಿತ್ರಮೂಲ, ಗಣಜಿಲಿ ಗುಳವೆರಡರ ಸಹಬೇವು, ನೆಲಬೇವು, ಹೆಬ್ಬೇವು, ಕಿರಿಬೇವುಗಳ ಮುಗುಳು, ತ್ರಿಫಲೆ, ತ್ರಿಕಟುಕ, ಕೋಷ್ಟ, ಇಂಗು, ಚವೆ, ಪಂಚಲವಣಾ, ವರಕೋಲು, ಮುಕ್ಕು, ಇಂಗುಳ, ಅತಿಬಜೆ ಆಲನಾಲ್ಕರಸೆಕ್ಕೆ, ಅಜವೇದ ಅತಿಬಜೆ, ಕುಳಂಜಿನ, ಈಶ್ವರಿ, ಉತ್ತರಾಣಿಗಳ ಬೇರು, ಗಜಗದ ತಿರುಳು, ಟೆಂಕಣ, ಆಕಳಕರೀ ಇಂತಹ ಮೂವತ್ತೊಂದು ವಿಶಿಷ್ಟವಾದ ದಿನಿಸುಗಳನ್ನು ವಿನಯದಿಂದ ಪಾಲಿಕೋಜನೆಯಿಂದ ಸಮಗೂಡಿಸಿ ಚಿನಿಪತ್ರವನ್ನು ಮಾಡಿ ಲಶುನದಿಂದ ಕೂಡಿಸಿ ಮೂರು ಪಾವಿನ ತೂಕವನ್ನು ಕೆನೆ ಹಾಲಿನೊಳಗೆ ಕೂಡಿಸಿದೆ ಪಾನಕ ತಣ್ಣನೆಯ ರಸದೊಳಗೆ ಕಲಸಿ ಗೊಟ್ಟಲಿನಿಂದ ಐದು ದಿನ ಕೊಡುವುದರಿಂಧ ಕುದುರೆಗೆ ಕ್ರಿಮಿದೋಷಗಳು ಪರಿಹಾರವಾಗುವವು."[೮೩]

ಚಾವುಂಡರಾಯನು ಲೋಕೋಪಕಾರದಲ್ಲಿ ಕ್ರಿಮಿಗಳಿಗೆ ಉಪಚರಿಸುವ ವಿಧಾನವನ್ನು ವಿವರಿಸುತ್ತಾ

> "ಅವರಿಯ ಮೂಳಮುಮಂ ತು ।
> ಪ್ಪವುಮಂ ಮೇಣ್ ಹಾರಿವಾಳ(ಣ)ದಲೆಯಂ ತಿಳತ್ಯೆ
> ಳವ್ರುಮಂ ಮೇಣೆಡುವಾ ।
> ಜ್ಯವುಮನೆಟೆಯೆ........ಪೋಕುಂಕ್ರಿಮಿಗಳ್"[೮೪] (೯-೨೩೧)

ಅವರೆಯ ಬೇರು ಅರೆದು ತುಪ್ಪದಲ್ಲಿ ಕಲಿಸಿ ಕವಳವನ್ನು ಕೊಡುವುದು. ಹರಿವಾಣದೆಲೆಯ ಅರೆದು ಎಳ್ಳೆಣ್ಣೆಯಲ್ಲಿ ಕಲಿಸಿ ಕೊಡುವುದರಿಂದ, ತುಪ್ಪದಲ್ಲಿ ಕೂಡಿಸಿ ಕುಡಿಸುವುದರಿಂದ ಈ ಎಲ್ಲಾ ಕ್ರಮಗಳಿಂದ ಕ್ರಿಮಿಗಳು ನಾಶ ಹೊಂದುವವು ಎಂದು ಹೇಳಿದ್ದಾನೆ.

ಸರ್ವ ಶೂಲಿಗಳು : "ಸಾಸುವೆಯನ್ನು, ಸೈಂಧವಲವಣವನ್ನು, ಸಮಪ್ರಮಾಣದಲ್ಲಿ ಅರೆದು ಎಳ್ಳೆಣ್ಣೆಯಲ್ಲಿ ಕೂಡಿಸಿ ಅಂಬಿಲದಲ್ಲಿ ಕುದುರೆಗೆ ಕೊಡಲು ಸರ್ವಶೂಲಿಗಳು ಮಾಯವಾಗುತ್ತವೆ. ಅಲ್ಲದೇ ಇಂಗು ತೂಕ ೧, ಬಜೆತೂಕ ೨, ಚಿತ್ರಮೂಲ ೩, ಕರ್ಕಾಟಕ ಶೃಂಗಿ ೪, ಅಜಮೋದ ೫, ಅಳಿಲೆಕಾಯಿ ೬, ಕಣಗಿಲಬೇರು

೭, ಚಂಗಲಕೋಷ್ಠ ೮, ಗಜುಗದ ತಿರುಳು ೯, ತಿಗಡೆ ೧೦, ತೂಕವನ್ನು ಕೂಡಿಸಿ ಈ ರೀತಿಯ ಎಲ್ಲಾ ಔಷಧಗಳನ್ನು ಬಿಸಿನೀರಿನಿಂದ ಅರೆದು ಕೊಡಲು ಸರ್ವಶೂಲಿಗಳು ಗುಣವಾಗುವವು ಅದರಂತೆ ಕರ್ಕಾಟಕ ಶೃಂಗಿ, ಇಂಗು, ಬೆಳ್ಳುಳ್ಳಿ, ತಿಗಡೆ, ಸೈಂಧವಲವಣ, ಈ ಪಂಚ ವಿಧಗಳನ್ನು ಸಮಪ್ರಮಾಣದ ಕೂಡಿಸಿ, ಅರೆದು ಪುಡಿ ಮಾಡಿ ಕುದುರೆಗೆ ಕೊಡುವುದರಿಂದಲೂ ಸಹ ಈ ರೋಗ ಗುಣ ಮುಖವಾಗುವುದು. ಹಾಗೆಯೇ ಬಜೆ, ಇಂಗು, ತಿಗಡೆ, ಶುಂಠಿ, ಮೆಣಸು, ಹಿಪ್ಪಲಿ, ಅತಿಬಜೆ, ಬಿಡಲವಣ, ಗಾಜುಲವಣ, ಸೈಂಧವಲವಣ, ಸಂವತ್ಸರಲವಣ, ಸಮುದ್ರಲವಣ, ಅಳಿಲೆಕಾಯಿ ಅಜಮೋದ, ಇವುಗಳನ್ನು ಬಿಸಿನೀರಿನಲ್ಲಿ ಹಾಕಿಕೊಡಲು ಕುದುರೆಗೆ ಸರ್ವ ರೋಗಗಳು ನಾಶವಾಗುವವು. ಅದರಂತೆ, ಇಂಗು, ಬಜೆ, ಪಂಚಲವಣ, ಶೃಂಗಿಯಬೇರು, ಅತಿಬಜೆ, ಹಿಪ್ಪಲಿ, ಅಣಿಲೆಕಾಯಿ, ಗಜ್ಜುಗದ ತಿರುಳು, ಮೆಣಸು, ಇವೆಲ್ಲವನ್ನು ಸುರೆಯಲಿ ಕಲಿಸಿ ಕೊಡುವದರಿಂದ ಸರ್ವಶೂಲಿಗಳು ಗುಣವಾಗುತ್ತವೆ. ಅದೇ ರೀತಿ ತ್ರಿಕುಟಕ, ಇಂಗು, ಚಿತ್ರಮೂಲ, ಕಿರುದೇಗು ಗಜ್ಜುಗದ ತಿರುಳು, ಬಿಡಲವಣ, ಜೀರಿಗೆ, ಚವ್ಯ, ಕಲ್ಲುಪ್ಪು, ಸಂವತ್ಸರಲವಣ, ನಾಭಿಯನ್ನು ಬಿಸಿನೀರಿನಿಂದ ತೊಳೆದು ಈ ಔಷಧವನ್ನು ಕೊಡಲು ಶ್ಲೇಷ್ಮ ವಾತ ಶೂಲಿ ಗುಣಮುಖವಾಗುತ್ತದೆ. ಹಾಗೆಯೇ ಎಳ್ಳೆಣ್ಣೆ, ಹಾಲು, ಹಿಪ್ಪಲಿ, ಮೆಣಸು, ಮೊಸರು, ತುಪ್ಪ ಇವುಗಳನ್ನು ಕೂಡಿಸಿ ಶುಂಠಿಯನ್ನು ತೇದು ಕಣ್ಣಿಗೆ ಅಂಜನವನ್ನು ಮಾಡಿ ಹಚ್ಚುವುದರಿಂದ, ಪಿಂಡಮಾಡಿ ಹೊಸ ತುಪ್ಪದಲ್ಲಿ ಕೊಡಸಿಗೆಯ ಬೀಜ, ಸೈಂಧವಲವಣ, ರೇಣುಕ ಚಿತ್ರಮೂಲ, ಇಂಗು, ಇವುಗಳನ್ನು ಸೇರಿಸಿ ಪಿಂಡವಾಗಿ ಕೊಡಲು ಸರ್ವಶೂಲಿಗಳು ಪರಿಹಾರವಾಗುವವು.

ರಸಾಜೀರ್ಣ : ಕುದುರೆಗೆ ರಸಾಜೀರ್ಣ ರೋಗವುಂಟಾದಾಗ ಶರೀರವೆಲ್ಲವೂ ಭಾರವಾಗಿ ಆಲಸ್ಯ ಉಂಟಾಗುತ್ತದೆ. ಆ ಸಂದರ್ಭದಲ್ಲಿ ಕುದುರೆಯು ಬಹಳ ನೋವಿನಿಂದ ಹೆಜ್ಜೆಯಿಡುತ್ತದೆ. ಇಂತಹ ರೋಗವುಳ್ಳ ಕುದುರೆಗೆ ಶರೀರದಲ್ಲಿ ಲಾಘವ ಉಂಟಾಗುವವರೆಗೂ ಲಂಘನ ಮಾಡಿಸಬೇಕು. ಬೆಚ್ಚಗಿರುವ ಕಪ್ಪುಮಣ್ಣಿನಿಂದ ಶರೀರವನ್ನೆಲ್ಲ ಲೇಪನ ಮಾಡಬೇಕು. ಶರೀರಗೌರವವು ಬಹಳ ಹೆಚ್ಚಾಗಿದ್ದರೆ ಎದೆಯ ಮುಂಭಾಗದಲ್ಲಿ ಇರುವ ಸಿರೆಯನ್ನಾಗಲೀ ಅಥವಾ ಎದೆಯ ಹಿಂಭಾಗದಲ್ಲಿ ಅಂಡಗಳ ಸಮೀಪದಲ್ಲಿರುವ ಸಿರೆಯನ್ನಾಗಲಿ ಭೇದನಮಾಡಿ ರಕ್ತಸ್ರಾವ ಮಾಡಿಸಿ, ಕುದುರೆಗೆ ಮುಂಭಾಗದಲ್ಲೂ, ಹಿಂಭಾಗದಲ್ಲೂ ಕೂಡ ಗೌರವವು (ಮೈ ಭಾರವಾಗಿರುವುದು) ಅತ್ಯಧಿಕವಾಗ್ದಿರೆ ಬೆನ್ನುಮೂಳೆಯ ಅಕ್ಕಪಕ್ಕದಲ್ಲಿರುವ ಮತ್ತು ಅಂಡಗಳ ಸಮೀಪದಲ್ಲಿರುವ ಎಲ್ಲ ಸಿರೆಗಳನ್ನೂ ಭೇದಿಸಿ ರಕ್ತಸ್ರಾವ ಮಾಡಿಸಬೇಕು. ನಂತರ ಅಳಲೇಕಾಯಿ ಚೂರ್ಣಕ್ಕೆ ಬೆಲ್ಲ ಮತ್ತು ಬೇವಿನ ಎಲೆಗಳನ್ನು ಬೆರಸಿ, ಅರೆದು ಕುದುರೆಗೆ ತಿನ್ನಿಸಿದರೆ, ಅದು ಆಮರಸವನ್ನು ಪಾಕಮಾಡಿ ಜಠರಾಗ್ನಿಯನ್ನು ಉದ್ದಿಪನಗೊಳಿಸುವುದು.

ಮುಷ್ಕ (ಅಂಡಬೀಜ) ಅಥವಾ ಚಾಲೀ ರೋಗ : ಮುಷ್ಕವು ಮೇಲೆ ಅಥವಾ ಕೆಳಗೆ ಹೋಗಿ ಸಿಕ್ಕಿಹಾಕಿಕೊಂಡರೆ ಆಗ ಬಹಳ ನೋಟವನ್ನುಂಟು ಮಾಡುತ್ತದೆ. ಮುಷ್ಕವು ಯಾವ ಭಾಗಕ್ಕೆ ಚಲಿಸಿರುತ್ತದೆಯೋ ಕುದುರೆಯು

ನಡೆಯುವಾಗ ಆ ಭಾಗದ ಕಾಲು ಕುಂಟುತ್ತದೆ. ಮುಷ್ಕದ ಚಲನದಿಂದ ಉಂಟಾಗುವ ಈ ವ್ಯಾಧಿಗೆ ಚಾಲೀ ಎಂದು ಕರೆಯುವರು. ಆಗ ಮುಷ್ಕವಿರುವ ಭಾಗಕ್ಕೆ ತೈಲದಿಂದ ಅಭ್ಯಂಗ ಮಾಡಿಸಿ, ಧ್ಯಾನದಿಂದ ಸ್ವೇದನ ಮಾಡಬೇಕು. ಆ ಕುದುರೆಯನ್ನು ನಿರ್ವಾತ ಪ್ರದೇಶದಲ್ಲಿಟ್ಟು ಬಿಸಿಯಾದ ಆಹಾರವನ್ನು ಕೊಡಬೇಕು. ಅಂಡದ ಸಮೀಪದಲ್ಲಿರುವ ಸಿರೆಯನ್ನು ಛೇದನ ಮಾಡಿ ವೈದ್ಯನು ರಕ್ತಮೋಕ್ಷಣ ಮಾಡಿಸಬೇಕು. ಇದರಿಂದಲೂ ಕುದುರೆಯು ಸ್ವಸ್ಥವಾಗದ್ದಿದ್ದರೆ ನಿರೂಹಬಸ್ತಿ ಮತ್ತು ಅನುವಾಸನ ಬಸ್ತಿಗಳನ್ನು ಕೊಡಬೇಕು. ನಿಪುಣನಾದ ವೈದ್ಯನು ಯಾವ ಕಡೆಗೆ ಚಾಲೀವ್ಯಾಧಿ, ಇದೆಯೋ ಆ ಭಾಗದಲ್ಲಿ ತ್ರಿಕಪ್ರದೇಶದಲ್ಲಿ ಬರೆ ಹಾಕಬೇಕು.''[೮೫]

ಉತ್ಕರ್ಣ ರೋಗ : ವಾತದೋಷದಿಂದ ಉಂಟಾಗುವ ಉತ್ಕರ್ಣಕ ಎಂಬ ರೋಗದಿಂದ ಕುದುರೆಯ ಕಿವಿಗಳೆರಡೂ ಶಂಕುಗಳಂತೆ ನೇರವಾಗಿ ನಿಂತಿರುತ್ತವೆ. ಕಣ್ಣು ಗುಡ್ಡೆಗಳು ತಿರುಗುತ್ತಿರುತ್ತವೆ. ಶರೀರದಲ್ಲೆಲ್ಲ ಸ್ತಂಭನ ಸೆಟೆಯುವಿಕೆ ಉಂಟಾಗುತ್ತದೆ. ಕುದುರೆಗೆ ಅಭ್ಯಂಗಮರ್ದನ ಮತ್ತು ಸ್ವೇದನಗಳನ್ನು ಮಾಡಿಸಿ ಎರಡು ಶಂಖ ಪ್ರದೇಶಗಳಲ್ಲೂ, ಎರಡು ಮನ್ಯಾ (ಹೆಕ್ಕುತ್ತು) ಪ್ರದೇಶಗಳಲ್ಲೂ ಬಾಲದಲ್ಲಿಯೂ ಸಿರಾವ್ಯಧಮಾಡಿ ರಕ್ತಮೋಕ್ಷಣ ಮಾಡುವುದು ಉತ್ತಮ.

"ಕರ್ಣ ಮೂಲಗಳಿಂದ ಆರಂಭಿಸಿ ಸ್ಕಂಧಗಳ ಪಾರ್ಶ್ವದಲ್ಲಿ (ಹೆಗಲಿನ ಪಕ್ಕ) ಹಾದು ಬೆನ್ನೆಲುಬಿನ ಅಕ್ಕಪಕ್ಕಗಳಲ್ಲಿ ಸಾಗಿ, ತಿಕಪ್ರದೇಶದ ಮಧ್ಯಭಾಗಕ್ಕೆ ಸೇರುವಂತೆ ಸ್ಥೂನದವರೆಗೆ ಎರಡು ರೇಖೆಗಳನ್ನು ಕಾದ ಶಲಾಕೆಯಿಂದ ಎಳೆಯಬೇಕು. ಮೂರು ದಿನ ತುಪ್ಪದಿಂದ ಅಭ್ಯಂಗಮಾಡಿಸಿ, ಬಿಸಿ ನೀರನ್ನು ಯವಕ್ಷಾರ ಮತ್ತು ಎಳ್ಳೆಣ್ಣೆ ಸೇರಿಸಿ ಕುಡಿಸಬೇಕು. ಮನ್ಯಾಸ್ತಂಭ (ಹೆಕ್ಕತ್ತಿನ ಜಾಗದಲ್ಲಿ ಹಿಡಿದು ಕೊಳ್ಳುವುದು) ಉಂಟಾದರೆ ಮೇಲೆ ಹೇಳಿದಂತೆ ಸ್ನೇಹ ಸ್ವೇದನಗಳನ್ನು ಮಾಡಿ ಮನ್ಯಾ ಪ್ರದೇಶದಲ್ಲಿರುವ ಪೃಷ್ಠ ವಂಶದ ಅಕ್ಕಪಕ್ಕ ಇರುವ ಎರಡು ಸಿರೆಗಳನ್ನು ಛೇದಿಸಿ, ರಕ್ತಸ್ರಾವಮಾಡಿಸಿ ನಂತರ ನಸ್ಯಕರ್ಮವನ್ನು ಸಹ ಮಾಡಬೇಕು. ಆಕಳಕರಿ, ಶುಂಠೀ, ಅರಿಶಿನ ಸಣ್ಣರಾಶ್ಮೆ, ಇಂಗು, ಚಂಗಲ್‌ಕೋಷ್ಠ, ರಸಾಂಜನ, ಹಿಪ್ಪಿ, ನವಣೆ ಇವುಗಳ ಚೂರ್ಣವನ್ನು ಸಣ್ಣರಾಶ್ಮೆಯ ಕಷಾಯದಲ್ಲಿ ಭಾವನೆಮಾಡಬೇಕು. ಹಸುವಿನ ಕೊಂಬು ನವಿಲುಗರಿ, ಬಿಳಿ ಕರಡಿಯ ಕೂದಲ, ಉಗುರು ಮತ್ತು ಹಲ್ಲುಗಳು, ಹಾಗೆಯೇ ಆನೆಯ ಕೂದಲು, ಉಗುರು ಮತ್ತು ಹಲ್ಲು, ಬಿಳಿಸಾಸಿವೆ ಇವುಗಳ ಕುಟ್ಟಿ ಚೂರ್ಣ ಮಾಡಿಕೊಂಡು ಮೇಲೆ ಹೇಳಿದ ಎಲ್ಲಾ ಚೂರ್ಣಗಳನ್ನು ಬೆರಸಿ ಕುದುರೆ ಲಾಯಗಳಲ್ಲಿ ಧೂಪವನ್ನು ಹಾಕುವುದರಿಂದ, ಕುದುರೆಯ ಶರೀರದಲ್ಲಿ ಪ್ರವೇಶಿಸುವ ಎಲ್ಲ ವಿಧವಾದ ಗ್ರಹಗಳೂ ಉಚ್ಚಾಟಿಸಲ್ಪಡುತ್ತವೆ.''[೮೬] ಹೀಗೆ ಸರ್ವಜ್ಞ ಸೋಮೇಶ್ವರ ಅನೇಕ ಆರ್ಯುವೇದ ಗಿಡಮೂಲಿಕೆಗಳಿಂದ ಔಷಧವನ್ನು ತಯಾರಿಸಿ ಉಪಯುಕ್ತವಾದ ರೀತಿಯಲ್ಲಿ ಕುದುರೆಗೆ ಬರುವ ಲಕ್ಷಣಗಳನ್ನು ಅರಿತು ಅವು ಮಾಡುವ ವರ್ತನೆಯನ್ನು ಗಮನಿಸಿ ವಿವಿಧ ಬಗೆಯಾಗಿ ಉಪಚರಿಸಿದ ಕ್ರಮಗಳನ್ನು ತನ್ನ ಕೃತಿಯಲ್ಲಿ ಹೇಳಿದ್ದಾನೆ. ಒಬ್ಬ ಶ್ರೇಷ್ಠ ಚಕ್ರವರ್ತಿ ಅಷ್ಟೆ ಅಲ್ಲ ಒಬ್ಬ

ಸಮರ್ಥ ವೈದ್ಯಗಾರನಂತೆ ನಮಗೆ ಗೋಚರಿಸುತ್ತಾನೆ. ಸಮಾಜದ ಕಷ್ಟ ಕಾರ್ಪಣ್ಯಗಳ ಜೊತೆಗೆ ಒಂದು ಪ್ರಾಣಿಯ ಆರೈಕೆ, ಉಪಚಾರ, ಪಳಗಿಸುವ ಕ್ರಮ, ಸೈನ್ಯದ ವ್ಯವಸ್ಥೆ ಜೊತೆಗೆ ಜೋತಿಷ್ಯಶಾಸ್ತ್ರ, ವೈದ್ಯಶಾಸ್ತ್ರ ಮುಂತಾದವುಗಳ ಜ್ಞಾನ ಸಾಗರವನ್ನು ಹೊಂದಿರುವುದು ಈತನ ಕೃತಿಯಿಂದ ತಿಳಿದು ಬರುವ ಪ್ರಮುಖ ಅಂಶಗಳಲ್ಲೊಂದು.

ಮೈಬಡವಾದರೆ : "ಕುದುರೆಗೆ ಉದಯ ಕಾಲದಲ್ಲಿ ಹಸುವಿನ ಹಾಲನ್ನು ಕುಡಿಸುವುದು. ಮಧ್ಯಾಹ್ನದಲ್ಲಿ ಸುರೆಯನ್ನು ಕುಡಿಸುವುದು, ಸಂಜೆಯ ಸಮಯದಲ್ಲಿ ಗೋಮೂತ್ರಬೆರಸಿದ ಕವಳ ಮೊದಲಾದ ಆಹಾರವನ್ನು ಕೊಡುವುದು. ಸಾಸಿವೆ. ಶುಂಠಿ, ಹಿಪ್ಪಲಿ, ಸೈಂಧವಲವಣ ಇದನ್ನು ಜೇನುತುಪ್ಪ, ಹಸುವಿನ ತುಪ್ಪದಲ್ಲಿಯಾದರೂ ಕಲಸಿ ಅಳಲೆಕಾಯಿ, ನೆಲ್ಲಿಯಚೆಟ್ಟು, ಕಾರೆಯಕಾಯಿ, ಇದರ ರಸದಲ್ಲಿ ಕಲಸಿ ಕುದುರೆಯ ತಿಗದಲ್ಲಿ ಲೇಪನ ಮಾಡುವುದು ೨ ಬಗೆಯ ಜೋಳ, ಇಪ್ಪ ಮದುಕ, ಸರಳದೇವದಾರು. ಶ್ರೀಗಂಧ, ದೇವದಾರು, ನೈದಿಲೆಗಡ್ಡೆ ಇದನ್ನು ಸುಗಂಧಿ ರಸದಲ್ಲಿ ಅರೆದು ಹಾಲಿನಲ್ಲಿ ಕಲಿಸಿ ಮೈಗೆ ಲೇಪಿಸುವುದು.

ಬಡ ಮರಿಗೆ : ಒಂದು ವರುಷದ ಮರಿಗೆ ಒಂದು ಬಳ್ಳ ಜೇನುತುಪ್ಪವನ್ನು ಕುಡಿಸುವುದು. ಕುದುರೆಯ ಮೈಯ್ಯ ಬಡವನರಿತು ಒಂದು ಬಳ್ಳ, ಸುರೆಯನು ಕುದುರೆಯತಕ್ಕಂತೆ ಕುಡಿಸುವುದು. ಕುದುರೆಯ ಶಿಶ್ನದ ತುದಿಯಲ್ಲಿ, ಮೂತ್ರ ಬರುವ ಕರಡಿಯ ಆಸನದಲ್ಲಿ ಬೆರಳುದ್ದದ ಪ್ರಮಾಣದಲ್ಲಿ ಎಣ್ಣೆಯ ಬತ್ತಿಯ ಮಾಡಿ ೩ ದಿವಸ, ಮೂರು ವೇಳೆಯಲ್ಲಿ ಏರಿಸುವುದು.

ಸನ್ನಿಪಾತ : ತೊಳಚಿಯ ಸೊಪ್ಪು, ನುಗ್ಗೆಯ ಸೊಪ್ಪು, ಲೊಕ್ಕಿಯಸೊಪ್ಪು ಇವನ್ನು ತಂದು ಕುದುರೆಗೆ ಶಾಖಾವನ್ನು ಕೊಡಲು ಸನ್ನಿಪಾತ ಮೊದಲಾದ ವ್ಯಾಧಿಗಳು ಗುಣವಾಗುತ್ತವೆ. ಈ ಸೊಪ್ಪುಗಳನ್ನು ತಂದು ಕಡುಬೆಯ್ಯುಯುವ ಹಾಗೆ ಹುರಿದು ನೆನೆದ ಪಾವುಡೆಯಲ್ಲಿ ಹಾಕಿ ಮೈಗೆ ಸೊಗಯಿಸುವಂತೆ ಶಾಖವನ್ನು ಕೊಡುವುದು ಉತ್ತಮ.

ಮೈಬಾವು : ಕಡುಮಳೆಯಲ್ಲಿ, ಕಡುಗಾಳಿಯಲ್ಲಿ, ಬಿಡದೆ ಸುರಿಯುವ ಸೊನೆಯಲ್ಲಿ, ಮೈಬಾತ ಕಡೆಯಲ್ಲಿ ಕರ್ಪೂರವನ್ನು ತಂದು ಸುಟ್ಟು ಶಾಖವನ್ನು ಕೊಡುಬೇಕು. ಹೀಗೆ ದಿನಕ್ಕೆ ಮೂರು ವೇಳೆಯಲ್ಲಿ ಶಾಖವನ್ನು ಕೊಟ್ಟರೆ ಶೋಭೆಯು ಉಂಟಾಗುವುದು.

ಸನ್ನಿಬಾವು : ಆನೆಯ, ಒಂಟೆಯ, ಕುದುರೆಯ, ಕತ್ತೆಯ ಲದ್ದಿಯನ್ನು ತಂದು ಗತ್ತವನು ಮಾಡಿ ಇವುಗಳನ್ನು ಕೂಡಿಸಿ ಇದರ ಜೊತೆಗೆ ಮಂದನೆಯ ಹೆಸರನ್ನು ಕೂಡಿಸಿ ಕಲಸಿ ಕುದುರೆಯ ಮೈಗೆ ಲೇಪಿಸುವುದು. ನಂತರ ಶಾಖವನ್ನು ಕೊಡುವುದು. ಸನ್ನಿಬಾವು ಮುಂತಾದ ರೋಗಗಳು ಮಾಯ್ಯುವವು. ಹಾಗೆಯೇ ಜ್ವರವು ಕಾಯುತ್ತಿರಲು, ಅತಿಸಾರವಾಗಿರಲು ಮೈಯಲ್ಲಿ ಹೂವು ಹೆಚ್ಚುತ್ತಿರಲು ದೊಡ್ಡ ಭಾರವ ಹೊತ್ತು ಬೆನ್ನಲ್ಲಿ ಬೆಂದಿರಲು ಮೇಲುಬ್ಬಸವಾಗಿರಲು ಮೇಲೆ ಹೇಳಿದ ಶಾಕವನ್ನು ಕೊಡುವುದು."[೮೭]

ಬಾವುರೋಗ : "ಶುಂಠಿ, ಹಿಪ್ಪಲಿ, ಮೆಣಸು, ಬಜೆ, ಬೆಲ್ಲ, ಸುಣ್ಣ, ಕಪ್ಪೆಯಸೊಪ್ಪು, ಜಟಾಮಾಂಸಿ, ಈ ಎಲ್ಲ ಎಂಟು ಔಷಧವನ್ನು ಸಮಭಾಗ ಮಾಡಿ, ಒಂದು ಭಾಗ ಸೋಮನಾಥನ ಇಂಗಿನಪುಡಿ, ಹಾಕಿ ಅದಕ್ಕೆ ಹವಣದಷ್ಟು ಎಣ್ಣೆಯ ಕೂಡಿಟ್ಟು, ಆ ಎಣ್ಣೆಯನ್ನು ಕುದುರೆಯ ಮೈಗೆ ಹಚ್ಚುವುದು ಮತ್ತು ಕೊಡುವುದು. ತೊಡೆಗಳು, ಮೊಳಕಾಲ ಕೆಳಗಡೆ, ತಲೆ, ಕಿಬೊಟ್ಟೆ, ವೃಷಣಗಳು, ಹೊಕ್ಕಳು, ಹೊಟ್ಟೆ ಕಿವಿಯ ಮೊದಲಾದವು ಬಾತರೆ ಆ ಎಣ್ಣೆಯ ಕೊಡುವದು. ತೊಡೆಯಲ್ಲಿ ಮತ್ತು ತೊಡೆಯಿಂದ ಕೆಳಗಡೆಯಲ್ಲಿ ಈ ಎಣ್ಣೆಯ ಕೊಟ್ಟು ಕೆಸರ ಬಳಿಯಲು ಬಾವು ಗುಣವಾಗುವದು. ವಾಕ್‌ದೋಷ ಸಹ ನಾಶವಾಗುತ್ತದೆ. ಕಗ್ಗಲಿಯ ತೊಪ್ಪಲು ತುಳಿದು, ರಸ ಮಾಡಿಕೊಂಡು ಆ ರಸವನ್ನು ವೃಷಣಗಳಲ್ಲಿ ಬಳಿಯುವದು. ಅದರಿಂದ ಬಾವು ಗುಣವಾಗುತ್ತದೆ. ತಲೆಯಲ್ಲಿ ಕೊಂಬು ಬಂದಂತೆ ಉಬ್ಬಿಕೊಂಡಿರಲು ಆ ರಸವನ್ನು ಕೊಡುವುದರಿಂದ ಕುಗ್ಗುವದು. ಕಗ್ಗಲಿಸೊಪ್ಪು ತಳಿದು ಅಂಬಿಲದಲ್ಲಿ ಕವಳವಿಡಲು ವೃಷಣ ಬಾವು ಗುಣಹೊಂದುತ್ತದೆ. ಒಂದು ಬೀಜ ಮೇಲಕ್ಕೇರಿರಲು, ಒಂದು ಕೆಳಕ್ಕೆ ಇಳಿದಿರಲು ಅದು ವಾಕ್ ದೋಷದಿಂದ ವೃಷಣಗಳಲ್ಲಿ ಶೂಲಿಯೆಂದು ತಿಳಿದುಕೊಳ್ಳಬೇಕು."[೮೮]

ಅಭಿನವಚಂದ್ರ ಅಶ್ವಶಾಸ್ತ್ರಕೃತಿಯಲ್ಲಿ ಬಾಹು ವಿಚಾರವಾಗಿ ಚರ್ಚಿಸುತ್ತ ಈ ರೀತಿಯಾಗಿ ಹೇಳುತ್ತಾನೆ.

"ಕಾಸಿದ ಚಿಕ್ಕಣ ಗೆಸಜೊಳ್
ಸಾಸುವೆ ಕಲ್ಲುಪ್ಪು ಕಣಿಕ ಮುದ್ದಿನ ಪುಡಿಯಂ
ಬೇಸಜಿದೆ ಕೂಡಿ ಕುದುರೆಗೆ
ಪೂಸುಗೆ ಕಡುಮಂದಮಾಗಿ ಶೋಫಂ ಕೆಡುಗುಂ"[೮೯] (೧೪-೩೦)

ಸಣ್ಣ ಬುಗ್ಗುಡವನ್ನು ಕಾಸಿ ಅದರೊಳಗೆ ಸಾಸುವೆ, ಕಲ್ಲುಪ್ಪು, ಕಣಿಕ, ಉದ್ದಿನಚೂರ್ಣ ಇವುಗಳೆಲ್ಲವನ್ನು ಹಾಕಿ ಹಚ್ಚಲು ಬಾಹು ಬತ್ತುವುದು.

ಹೆಸರುಯದ ಬಾಹು ವಿಷದೋಷ : ಹುತ್ತವನ್ನು ಅಗೆದು, ಸತ್ತ ನಾಯಿಯನ್ನು ಹೂಳಿ, ಮುಚ್ಚಿ ಇರಿಸಿ ಅದೆಲ್ಲವನ್ನು ಭೋಗಿಸಿದ ನಂತರ ತೆಗೆದು ಆ ಎಲುಬುಗಳಿಗೆ ಮಣ್ಣು ಮೆತ್ತಿ ಇರಸಿ, ಆ ಮಣ್ಣನ್ನು ಸಣ್ಣಾಗಿ ಅರೆದು, ಆ ಮಣ್ಣನ್ನು, ಅಸ್ತಿಯನ್ನು ಕೂಡಿಸಿ ತಗ್ಗಿಯ ಸೊಪ್ಪಿನ ರಸದಲ್ಲಿ ಅರೆದು ಹಚ್ಚಲು ಹೆಸರುಯದ ಬಾಹು ವಿಷದೋಷವೆಲ್ಲವು ಗುಣವಾಗುವುದು.

ಲೋಕೋಪಕಾರದಲ್ಲಿ ಅನೇಕ ರೋಗಗಳ ಮಾಹಿತಿ ನೀಡುತ್ತಾ ಕುದುರೆಗಳಿಗೆ ಬರುವ ಬಾಹುರೋಗ ಕುರಿತು ಪದ್ಯವೊಂದರಲ್ಲಿ ಈ ರೀತಿ ವಿವರ ನೀಡಿದ್ದಾನೆ.

"ರಸಿಯಿಸಿದೊಡೆ ತಲೆಗುತ್ತಂ
ಮಸನಿದೊಡೆಗ್ಗುವೊಡೆ ತಿರಿಗಿ ಕೆಡವೊಡೆ ಮೆಯ್ ಝೋಂ ||

ಪಿಸುವೊಡೆ ಬಾತೊಡೆ ಮಿಗೆ ಮೋ
ಹಿಸುವೊಡೆ ರಾಸ್ನಾದಿತೋಯಮಂ ಕುಡೆ ತೀರ್ಗುಂ (೯-೨೩೯)
ತರಗಂ ಕೊಳ್ಕುಳಿ ನುಗ್ಗಿ ಕಗ್ಗೋಟಿಲೆ ತೊಟ್ಟಿಲ್ ಸೂರಣಂ ಶುಂಠಿಯ
ಜ್ಜಗೆಯಯ್ದುಪ್ಪುಗಳಕ್ಕೆ ಸಾಸಿವೆ ಹರಿದ್ರಾದ್ವಂದ್ವ ಮಿೂ ಪೇಟ್ದಿ ಮ
ರ್ದುಗಳಂ ಪುತ್ತಿನ ಮಣ್ಣುಮಂ ಕದಡಿ ಕಾಸಿಟ್ಟೆಯ್ದೆ ಪೊಯ್ಯಾವ ಬಾ
ವುಗಳುಂ ತೀರ್ಚುಗುಮಲ್ಲದಂದೆಜಿಗೆ ಸದ್ಯಃ ಕ್ಷಾರಮಂ ತುಪ್ಪದೊಳ್”೯೦ (೯-೨೪೦)

ಕುದುರೆಗಳಿಗೆ ರಸಿಯಿಸಿದೊಡೆ. ತಲೆಯು ಚಟ್ಟಿಕ್ಕಿದೊಡೆ, ಬಿಕ್ಕುತಿದ್ದೊಡೆ, ತೂಕಡಿಸುವಡೆ, ಬಾತೊಡೆ, ತನ್ನ ತಾ ಅರಿಯದಿದ್ದೊಡೆ ಈ ರೋಗವನ್ನರಿತು ಅದಕ್ಕೆ ರಾಶ್ಮೆ ಮೊದಲಾದ ಔಷಧಿಗಳನ್ನು ಕೂಡಿಸಿ ಅರೆದು ಉದಕದಲ್ಲಿ ಕಲಸಿ ಕುಡಿಸಲು ಆರೋಗಗಳು ಗುಣವಾಗುವವು. ತಗರ ಕೊಳುಗಳಿಕೆಯ ಸಮೂಲ, ನುಗ್ಗಿಯಬೇರು, ಕಗ್ಗೊರಲೆಯಬೇರು, ನೀರ್ದೊಟ್ಟಿಲಬೇರ, ಸೂರಣದ ಗೆಂಡೆ, ಶುಂಠಿ, ಅಜ್ಜಗೆ, ಸೈಂಧವ, ಕಾಚಲವಣ, ಬಿಡುಲವಣ, ಸಂವರ್ಚಲವಣ, ಉಪ್ಪು, ಎಕ್ಕೆಯೆಲೆ, ಸಾಸಿವೆ, ಅರಿಸಿನ, ಮರದರಿಸಿನ ಈ ಎಲ್ಲಾ ಔಷಧಗಳನ್ನು ಅರೆದು ಹುತ್ತಮಣ್ಣನ್ನು ಕೂಡಿಸಿ ಉದಕದಲ್ಲಿ ಕಲಿಸಿ ಕಾಸಿ ಹದವರಿತು ಬಾಹುವಿನ ಮೇಲೆ ಹಚ್ಚಿ, ಶಾಖವನ್ನು ಮಾಡುವುದರಿಂದ ಎಲ್ಲಾ ರೀತಿಯ ಬಾಹುಗಳು ಗುಣವಾಗುತ್ತವೆ. ಅಲ್ಲದೇ ಅಲ್ಲಾ, ಸದ್ಯಃ ಕ್ಷಾರವನ್ನು ಚೂರ್ಣಮಾಡಿ ತುಪ್ಪದಲ್ಲಿ ಕಲಿಸಿ ಕೊಡುವುದರಿಂದ ಬಾಹುಗಳು ಮಾಯವಾಗುತ್ತವೆ.

ಮೂತ್ರ ಕೃಚ್ಛ್ರಕ ರಕ್ತಮೂತ್ರ : “ಎರನ ಕಾಯಿ ತುಳಿದು ರಸವನ್ನು ಕೊಂಡು ಕುಡಿಸಬೇಕು. ಅಲ್ಲಾ, ಬೆಲ್ಲವತ್ತದ ಬೇರು ತುಳಿದು ರಸವನ್ನೂ ಮಾಡಿಕೊಂಡು ಕುಡಿಸಬೇಕು. ಇದರಿಂದ ಕುದುರೆಗಳಿಗೆ ಮೂತ್ರಕೃಚ್ಛ ರೋಗ ಗುಣವಾಗುವದು. ಆಕಳ ಹಾಲೊಳಗೆ ಸಕ್ಕರೆಯನ್ನು ಕಲಿಸಿ ಆಡಸೋಗೆಯ ಸೊಪ್ಪಿನ ರಸವನ್ನು ತೆಗೆದುಕೊಂಡು ಕೂಡಿಸಿ ಕುಡಿಸುವುದರಿಂದ ಕುದುರೆಗಳಿಗೆ ರಕ್ತವರ್ಣ”೯೧ ಗುಣವಾಗಿ ಹೊಸ ಮೂತ್ರ ವೃದ್ಧಿಯಾಗುವದು.

ರಾಮಚಂದ್ರಕವಿಯು ಅಶ್ವಶಾಸ್ತ್ರ ಟೀಕು ಕೃತಿಯಲ್ಲಿ ರಕ್ತ ಮೂತ್ರಕ್ಕೆ ಉಪಚಾರದ ವಿವರಗಳನ್ನು ತಿಳಿಸುತ್ತಾ ಈ ರೀತಿ ಹೇಳುತ್ತಾನೆ. “ಕಡು ಬಿಸಿಲಕಾದರೆ, ಕಡುಬಾಯಾರಿ ನೀರು ಕುಡಿಯದಿದ್ದರೆ ಮೂತ್ರ ಕೃಚ್ಛೆ ವ್ಯಾಧಿ. ಕುದುರೆಯು ಪಡೆಯ ಸಂಗಡ ಹೋಗಿ ದೂಡಿಸಿ ಬೀಳುವದು, ಏಳುವದು, ಬೆವರು ಮೈಯಲ್ಲಿ ಹೊರಹೊಮ್ಮುವದು ಅದರಿಂದ ವೃಷಣಬಾಯಿವುದು ಅದಕ್ಕೆ ಮೂತ್ರಕೃಚ್ಛೆ ಎನ್ನುವರು.

ಹಿಪ್ಪಲಿ, ಮೆಣಸು, ಸೈಂಧವಲವಣ, ಶುಂಠಿ, ಗರುಗ, ಇಂಗು, ಸಾಸಿವೆ, ಇವನ್ನು ಸಮಭಾಗಮಾಡಿ ಅರೆದು ನೀರಲ್ಲಿ ಕಲಸಿ ಕುದುರೆಗೆ ಕೊಡುವರು. ತಿಗದಲ್ಲಿ, ವೃಷಣಂಗಳಲ್ಲಿ ಹಚ್ಚುವದು. ಮೂತ್ರ ಚೆನ್ನಾಗಿ ಬೀಳುವುದಕ್ಕೆ ಶುಂಠಿಯನ್ನು ನೀರಿನಲ್ಲಿ ಅರೆದು ಮರ್ದಿಸಿ ಕುದುರೆಯ ಕಣ್ಣಿಗೆ ಹಚ್ಚುವದು. ಮೂಗಿನೊಳಗೆ ನಸ್ಯವನ್ನು ಮಾಡಿಸುವುದು.

ಶೋಣುಕ ಮೋಹ : (ರಕ್ತಮೇಷ) ಒಂದಿಷ್ಟು ನೆತ್ತರು, ಒಂದಿಷ್ಟು ನೀರು ಕೂಡಿ ರಕ್ತವು ಸಿಕ್ಕಿ ಸಿಕ್ಕಿ ಬಿಡಲು ಕುದುರೆಗೆ ಶೋಣಕ ಮೋಹವೆಂದು ತಿಳಿಯುವದು. ಯಲವದ ಬೀಜ, ಅಪ್ಪಮದುಕ ಇವನ್ನು ಅರೆದು ಜೇನುತುಪ್ಪ ಹಾಗೂ ಹಸುವಿನ ತುಪ್ಪದಲ್ಲಿ ಕಲಸಿ ಕುದುರೆಗೆ ಕೊಡವದು. ಆ ಬಳಿಕ ತುಪ್ಪ ಹಸುವಿನಹಾಲು, ಜೇನುತುಪ್ಪ ಇದರಲ್ಲಿ ಯಾಲಕ್ಕಿಯನ್ನು ಅರೆದು ಕುದುರೆಗೆ ಕೊಡಲು ರಕ್ತ ಮೋಹ ಗುಣವಾಗುತ್ತದೆ. ಸವತೆಯ ಬೇರು ಈ ಬೀಜವನ್ನು ನೀರನಲ್ಲಿ ಅರೆದು ಬೆಲ್ಲವ ಹಾಕಿ ಕುದುರೆಗೆ ಕೊಡಲು ಕಣ್ಣು ಮುಚ್ಚದಿರದು. ಮೈಸಡಿಲುವುದು ಇವುಗಳ ಉಬ್ಬಿ ಬಡವಳಿದ ಮದಕರಿಯ ಮೈಯ್ಯ ಎಣ್ಣೆಯನ್ನು ಬೆಂಕಿಯಲ್ಲಿ ಸುಟ್ಟು, ಆ ಬೂದಿಯನ್ನು ಹಸುವಿನ ಹೊಸ ತುಪ್ಪದಲ್ಲಿ ಕಲಸಿ ಕುದುರೆಗೆ ಕೊಡಲು ವಜ್ರ ಕೀಡಿಯ ಹುಳುಗಳು ಸಾಯಿವುದು. ಹಸುವಿನ ಹಾಲಿನಲ್ಲಿ ಬೆಲ್ಲವ ಬೆರಸಿ ಕುಡಿಯಿಸುವುದು ಬೆಲ್ಲವಿಲ್ಲದಿದ್ದರೆ ಹಿಪ್ಪೆಯ ಹೂವನರೆದು ಹಾಲಿನಲ್ಲಿ ಕಲಸಿ ಕುದುರೆಗೆ ಕುಡಿಸುವದು.

ವಜ್ರಕೀಟ : ಮುಳ್ಳು ಕೊಗ್ಗೆಯನು ಅಂಬಿಲದಲ್ಲಿ ಕುದುರೆಗೆ ಕೊಡಲು ವಜ್ರಕೀಟವು ಸಾಯುವದು. ಕಾಡಶೀಗೆ ಬೀಜ, ದೇವದಾರುಸೊಪ್ಪು ವಾಯಿದಳಂಗ, ಇಂಗು ಇವನ್ನು ಸಮಭಾಗ ಮಾಡಿ ಕೂಡಿಸಿ ಕೊಂಡದಲ್ಲಿ ಕಲಸಿ ಕುದುರೆಗೆ ಕೊಡಲು ಹುಳುಗಳೆಲ್ಲ ಸಾಯುವವು. ಕರಿಯ ಗರುಗದರಸ ೧ ಮಾನ, ಕಹಿ ಸೋರೆಯ ಸೊಪ್ಪಿನರಸ ೧ ಮಾನ, ಇದರಲ್ಲಿ ೧ ಮಾನ ಬೆಣ್ಣೆಯ ಬೆರಸಿ ಕುದುರೆಗೆ ಕುಡಿಸಲು ಹುಳುವಿನ ಕುಲವು ನಾಶವಾಗುತ್ತದೆ. ಹಸುವಿನ ಹೊಸ ತುಪ್ಪದಲ್ಲಿ ಕಳಲೆಯಬೇರು, ಕಳಲೆಯಸೊಪ್ಪು ಇದನ್ನು ಪುಡಿ ಮಾಡಿ ಅದರ ಕೂಡ ಅರೆದು ಪೊಟ್ಟಣವ ಮಾಡಿ ಕಾಸಿ ಕುದುರೆಗಳಲ್ಲಗಳನೊತ್ತಿ ಶಾಕವ ಮಾಡಲು ಕುದುರೆಯ ಇತರ ಕ್ರಿಯೆಗಳು ಗುಣವಾಗುವವು. ನಗರೆ ಸೊಪ್ಪು, ಉಮ್ಮತ್ತದ ಸೊಪ್ಪು, ಮೊಗನಿಯ ತಿಗಡು ಇವನ್ನರೆದು ನೀರಿನಲ್ಲಿ ಕಲಸಿ ಕೊಡುವುದರಿಂದ ಕುದುರೆ ಹೊಟ್ಟೆಯಲ್ಲಿರುವ ಹುಳುಗಳು ಸಾಯುವವು.

ತಿಗಡೆ, ಶುಂಠಿ, ಹಿಪ್ಪಲಿ, ಮೆಣಸು, ಕೊಡಶಿಗೆ, ತುಗ್ಗಲಿಯ ತೊಪ್ಪಲು (ಕಗ್ಗಲಿ) ಅಳಲೆಕಾಯಿ, ತಾರೆಯಕಾಯಿ, ನೆಲ್ಲಿಯಚೆಟ್ಟು, ಬಜೆ, ವಾಯಿವಿಳಂಗ, ಬೇವಿನ ಸೊಪ್ಪು, ಕಾಯಿ, ಒಳನಾರುಬೇರು ಹೂವು, ಇವನ್ನು ಗೋಮೂತ್ರದಲ್ಲಿ ಅರೆದು ಕುದುರೆಗೆ ಕೊಡಲು ಎಲ್ಲ ಹುಳುಗಳು ಮಾಯವಾಗುವವು. ಹಾಲವಾಣದ ಸೊಪ್ಪುನೆರೆದು ನೊರೆ ಹಾಲಿನಲ್ಲಿ ಕಲಸಿ ಕುದುರೆಗೆ ಕೊಡುವದು ಹಾಗೆಯೇ ನೋರೆಹಾಲಲ್ಲಿ ಸಕ್ಕರೆ ಬೆರಸಿ, ಕುದುರೆಗೆ ಕುಡಿಸಲು ಹುಳುಗಳು ಸಾಯುವವು. ಕಿವಿಗಳು ಜೋಗೈಸಿ ಕೊಂಡಿರಲು ಕಡುತಂಗಟ್ಟು ಮೈಯರಿಯದೆ ಇರಲು ಕಣ್ಣು ಮುಚ್ಚದೆಯಿರಲು, ಉಸಿರು ಬಿದ್ದಲೆದಂತೆ, ಹೊಟ್ಟೆಬಾತಿರಲು ಕುದುರೆ ಬದುಕದು ಎಂದು ತಿಳಿಯುವದು.

ಸಿಮ್ಲಾ ವೇಣು ವ್ಯಾಧಿಗೆ : ಬುರಣೆಯಾದ ಕಡಲೆಯ ತಿಂದರೆ, ನಾರುವ ನೀರ ಕುಡಿದರೆ, ನಾರುವ ಕವಳವ ಕೊಂಡರೆ ರಕ್ತ, ಪಿತ್ತ, ಶ್ಲೇಷ್ಮಗಳು ಹೆಚ್ಚಿದರೆ ಸಂಪೂರ್ಣವೆಂಬ ವ್ಯಾಧಿ ಬರುವದು. ಈ ರೋಗದ ಲಕ್ಷಣ.

ಕಣ್ಣಿನಲ್ಲಿ ನೀರು ಸುರಿಯುವದು. ಹೊಳ್ಳೆಯಲ್ಲಿ ಶ್ಲೇಷ್ಮಸುರಿಯುವದು. ಅಡಿಗಡಿಗೆ ಕೆಮ್ಮುವುದು ಅದಕ್ಕೆ ಮದ್ದು, ಅರಿಸಿನ, ಗುಳ್ಳಬದನೆ, ಶುಂಠಿ, ಹಿಪ್ಪಲಿ, ಮೆಣಸು, ಇವನ್ನು ಆಡಿನ ಹಾಲಲ್ಲಿ ಅರೆದು ಮೂಗಿಗೆ ನಸ್ಯವ ಮಾಡಲು ವಾತ, ಪಿತ್ತ, ಶ್ಲೇಷ್ಮಗಳಿಂದ ಹುಟ್ಟಿದ ಸಿಂಹಣ ವ್ಯಾಧಿ ಗುಣವಾಗುವುದು. ಅಗಸೆಯ ನೊಪ್ಪನರೆದು ಹಿಂಡಿಕೊಂಡು ಆ ರಸದಲ್ಲಿ ಶುಂಠಿ, ಹಿಪ್ಪಲಿ, ಮೆಣಸು, ಅಳಲೆಕಾಯಿ, ನೆಲ್ಲಿಯ ಚೆಟ್ಟು, ಕಾರೆಯಕಾಯಿ, ಇವನ್ನೆರೆದು ಕುದುರೆಯ ಮೂಗಿಗೆ ನಸ್ಯವ ಮಾಡಲು ಸಂಪೂರ್ಣ ವ್ಯಾಧಿ ಗುಣವಾಗುತ್ತದೆ. ಸೈಂಧವಲವಣ, ಶುಂಠಿ ಇವನರೆದು ಗುಳ್ಳದ ರಸದಲ್ಲಿ ಬೆರಸಿ ಕುದುರೆಗೆ ನಸ್ಯವ ಮಾಡಲು ಸಂಪೂರ್ಣವಾದಿ ಮುಕ್ತ. ಕುದುರೆಗೆ ಸಿಂಹಣ ವ್ಯಾಧಿ, ತೊಡಕಿದಾಗ ರಸವ ಕೊಡಲಾಗದು. ನಸ್ಯದಿಂದ ಕಾಯಿಸಿ ನಸ್ಯ ಮಾಡಿದ ಮೊಗಕ್ಕೆ ಶಾಖವನ್ನು ಮಾಡುವದು ಕಣ್ಣುಗಳ ಕೆಳಗೆ ಶಿಲೆ ಬಿಡುತ್ತ ಕುದುರೆಯ ಮೂಗಿನೊಳಗೆ ಕುರುಗಳ ಮೂಡಿದಂತೆ ಗಂಟುಗಳು ಮೂಡಲು ರಕ್ತ ಸಿಂಹಣವೆಂದು ತಿಳಿಯುವದು. ಆ ಗಂಟೊಡೆದು ನೆತ್ತರು ನಿಲ್ಲದೆ ಸುರಿಯಲು ಕುದುರೆಗೆ ಮರಣದ ಲಕ್ಷಣವೆಂದು ತಿಳಿದು ದಾಳಿಂಬದ ಹೂವಿನ ರಸವನ್ನು, ಹಸುವಿನ ಹಾಲನ್ನು ಕೂಡಿಸಿ, ಮೂಗಿನೊಳಗೆ ನಸ್ಯವನ್ನು ಮಾಡಲು ಬಿಡದೆ ಸುರಿವ ನೆತ್ತರು ನಿಲ್ಲುವುದು. ಗರಿಕೆ ರಸವನ್ನು ಮುಖಕ್ಕೆ ಹಿಂಡಲು ಸುರಿಯುವ ನೆತ್ತರು ಗುಣಮುಕ್ತ.

ಗೂಷ್ಮ ಗೋಷ್ಮ ರೋಗ : ವಾತ, ಪಿತ್ತ, ಶ್ಲೇಷ್ಮಂಗಳು, ವೆಗ್ಗಳ (ಹೆಚ್ಚಳ) ವಾಗಲು ವಿಕಾರವಾಗಿ ತಲೆ, ಮುಖ, ವೃಷಣಂಗಳು ಬಾಯಲು ಕುದುರೆಯ ಬಿಸಿಲಲ್ಲಿ ಕಟ್ಟುವದು ಬಜೆ, ಕಣಗಿಲೆಯಲೆ, ವಾಯುದವಳಂಗ, ಅರಸಿನ, ಮರದರಿಸಿನ, ಶುಂಠಿ, ಹಿಪ್ಪಲಿ, ಮೆಣಸು ಕೊಡಸಿಗೆ ಬೀಜ, ಚಂಗಲಕೋಷ್ಠ, ಸಾಸಿವೆ ಸಾವರ್ಚಲವಣ ವೋಮ ಇವನ್ನು ಸಮಭಾಗಮಾಡಿ ಅರೆದು ಮುದ್ದೆ ಮಾಡಿ ಕುದುರೆಗೆ ಕೊಡಲು ವೃಷಣಂಗಳ ಬಾವು ಮಾಯುವದು."[೯೨]

ದೀಪನ : "ಇಂಗುಳ, ಆಡಸೋಗೆ, ಕುಟುಕರೋಹಿಣಿ, ಹಾವುಮೆಕ್ಕೆ, ಲೊಕ್ಕೆ, ಬ್ರಾಹ್ಮಿ, ಬೇವು, ಇಂಗು, ವಿಳಂಗ, ಎಕ್ಕೆಯಲೆ, ಗಿರಿಕರ್ಣಿಕ, ಅಂಗುರು ಚಿತ್ರಮೂಲ, ಕಹಿ ಪಡವಲ ಇವುಗಳನ್ನು ಮಜ್ಜಿಗೆಯಲ್ಲಿ ಒಂದಾಗುವಂತೆ ತುಳಿದು ಕವಳಮಾಗಿ ಕೊಡಲು ಕುದುರೆಗಳಿಗೆ ಸರ್ವರೋಗಗಳು ಉಪಶಮನವಾಗುವುದು ಜೊತೆಗೆ ದೀಪನಪ್ಪುದು"[೯೩] ಹಾಗೆಯೇ "ಕುದುರೆಗೆ ದೀಪನವನ್ನರಿದು ಭೋಜನ ಮಾಡಿಸುವದು ತುಪ್ಪ ಘನವಾದರೆ ಉದರಾಗ್ನಿ ಕೆಟ್ಟು, ವಿಕೃತಿಯಾಗಿ ಬೀಳುವುದು"[೯೪]

ಉಷ್ಣರೋಗ : "ಕುದುರೆಗಳಿಗೆ ಪಿತ್ತ ಹೆಚ್ಚಾಗಿ ಉಷ್ಣವಾದೊಡೆ ಉದಯ ಕಾಲದಲ್ಲಿ ಪಾನವನ್ನು ಕುಡಿಸುವದು. ಲವಣ ಮೊದಲಾದ ಔಷಧಗಳನ್ನು ಮಧ್ಯಾಹ್ನದಲ್ಲಿ ಕೊಡುವದರಿಂದ, ಸಾಯಂಕಾಲದಲ್ಲಿ ಕುಟ್ಟುವುದು ದಂತಪ್ಪದನ್ನು ಹೀಗೆ ಮಾಡುವುದರಿಂದ ಕಡಿಮೆಯಾಗುವದು."[೯೫]

ವಾಯುರೋಗ : ಈ ರೋಗಕ್ಕೆ "ಇಂಗುಳದ ಮೇಣ, ನುಗ್ಗಿಯ ತೊಗಟೆ, ಬಜೆವಾಯಿವಳಂಗ, ಹಿಪ್ಪಲಿಯ ಮೂಲ, ಹೊನ್ನಾವರಿಕೆಯ ಪುಷ್ಪಗಳ ಜಿವಾನ, ಕಾರ್ಚಿಯಗಡ್ಡೆ, ಕರಿಲಕ್ಕಿಯ ಮುಗಳು

ಸೈಂಧವಲವಣ, ಮುಂಗಲಿಯ ವಲಾನಿವರಗಡ್ಡೆ, ಬೋನಗಾರಿಯಕಾಯಿ, ಭಂಗಿ, ಬೊಳ್ಳೊಳ್ಳಿ, ಹೆಬ್ಬೇವಿನ ಮುಗುಳು, ತ್ರಿಕಟುಕಂಗಳ ಹದಿನೆಂಟು, ಬಿಸಿನೀರು ಮಧುವಿನೊಳಗೆ ಕೊಡಲು ಏಳು ವಾಯುಗಳು ಪರಿಹಾರವಾಗುವವು."[೯೬]

ಉಷ್ಣವಾಯು : "ಕುದುರೆಗಳಿಗೆ ವಾಯು ಕಂಡೊಡೆ ಬೇಸರದೆ ಹಿಮದ ದಿನದೊಳಗೆ ನೀರನ್ನು ಕುಡಿಸದೆ ಜಾವ ಜಾವಕ್ಕೆ ಇಪ್ಪತ್ತೈದು ಅಣಿಲೆಯ ಕಾಯಿಗಳನ್ನು ಚೂರ್ಣಮಾಡಿ ಸೈಂಧವಲವಣವನ್ನು ಕಲಿಸಿ ಹೀಗೆ ಎಂಟು ಜಾವಕ್ಕೆ ತೊಲೆ ಇನ್ನೂರು ಅಣಿಲೆಯ ಕಾಯಿ ಬರಕವಳವನ್ನು ಕೊಡಬೇಕು. ಉಷ್ಣಕಾಲದಲ್ಲಿ ಈ ಮರ್ಯಾದೆಯಲ್ಲಿಯೇ ಅಣಿಲೆಯ ಕಾಯಿ ಚೂರ್ಣವನ್ನು ಬೆಲ್ಲದಲ್ಲಿ ಕಲಿಸಿ ಕೊಡುವುದರಿಂದ, ಕುದುರೆಗಳಿಗೆ ಸಮಸ್ತರೋಗ ಉಪಶಮನ ಜೊತೆಗೆ ಉಷ್ಣುವಾಯು ಸಮಧಾತುವಾಗಿರುತ್ತದೆ.

ಸೆಂಬರೋಗ : ಕುದುರೆಗಳಿಗೆ ಆವಾಗಳು ಮೂಗಿನಿಂದ ಉದಕದಂತೆ, ಅರಿಸಿನದಂತೆ ಬೆಳ್ಳನೆಯ ಶ್ಲೇಷ್ಮದಂತೆ ಸುರಿಯುತ್ತಿರಲು ಅದಕ್ಕೆ ಸೆಂಬರೋಗ ಎಂದು ಕರೆಯುವರು. ಈ ರೋಗವನ್ನು ಉಪಚರಿಸಲು ದೇವದಾರು, ಸೈಂಧವಲವಣ, ಭದ್ರಮಸ್ತೆ, ಬಿಡುಲವಣ, ವಾಯುವಿಳಂಗ, ಸದ್ಯಃಕ್ಷಾರ ಇವುಗಳನ್ನು ತುಳಿದು ಎಳ್ಳೆಣ್ಣೆ, ಗೋಮೂತ್ರದಲ್ಲಿ ಕಲಿಸಿ ನಸ್ಯವನ್ನು ಮಾಡಿ ಕೊಡುವುದರಿಂದ ಸೆಂಬರೋಗ ಗುಣವಾಗುತ್ತದೆ.

ಖಾಸರೋಗ : ಕುದುರೆಗಳ ಖಾಸರೋಗಕ್ಕೆ ಗುಳ್ಳದಬೇರು, ನೆಲಗುಳ್ಳದ ಬೇರು, ಬೇವು ಲೊಕ್ಕಿ, ಆಡಸೊಗೆ ಇವುಗಳನ್ನು ತುಳಿದು ಚೂರ್ಣಮಾಡಿ ಗೋಮೂತ್ರದಲ್ಲಿ ಕಲಿಸಿ ಅಟ್ಟು ಆವುದಕವನ್ನು ಕೊಂಡು ಅದರೊಳಗೆ ಶುಂಠಿ, ಕಿರುದೇಗು, ಇವೆರಡನ್ನು ಚೂರ್ಣಮಾಡಿ ಕುಡಿಸಲು ಕುದುರೆಗಳಿಗೆ ಖಾಸರೋಗ ಗುಣವಾಗುತ್ತದೆ."[೯೭]

ತಳರೋಗ : ತಳರೋಗ ಕುರಿತು ವಿವರ ಪೂರ್ಣವಾದ ಮಾಹಿತಿಯನ್ನು ಅಭಿನವಚಂದ್ರ ತನ್ನ ಅಶ್ವಶಾಸ್ತ್ರಕೃತಿಯ ಹದಿನೈದನೆಯ ಅಧ್ಯಾಯದಲ್ಲಿ ರೋಗದ ಲಕ್ಷಣ ಮತ್ತು ಔಷಧೋಪಚಾರ ಕುರಿತು ಹೇಳುತ್ತಾ-

"ಕಿಱುಗಲ್ಲೊಳ್ ಕೆಸಱೊಳ್ ಮೊಳೆ
ಕೊರಡುಗಳೊಳ್ ಮುಳ್ಳೊಳಿಡುಕುೞಿಡೆಗಳೊಳಂ ಪಾಯ್
ದುರದೆ ಕೊಳಗುಗಳ್ ಸಲೆಕು
ತ್ತಿಱಿದಳ್ಕುತ್ತಡಿಯನಿಡುವೊಡದು ತಳರೋಗಂ (೧೫-೧)

ಕ್ಷೀರಿಕೆಯಿಂ ಕರ್ಬುವುದಾ
ಕ್ಷೀರಮಹೀರುಹ ಕಷಾಯದಿಂದಂ ನೀಲಾಂ

ಭೋರುಹ ಲೋಧ್ರಂ ತ್ರಿಫಲೆಯ

ನೀರೊಳ್ ಮಧುಮಿಶ್ರಮಾಗೆ ಪೂಸುಗೆ ಖುರಮಂ"[೯೮] (೧೫-೨)

ಹರಳುಗಲ್ಲು, ಕೆಸರು, ಕೊರಡುಮುಳ್ಳು, ಇಡುಕು ಇಂಥ ಠಾವಿನಲ್ಲಿ ಹೋಗುವಾಗ ಕೊಳಗು ಸವೆದು ಅಳುಕಿ ನೆಡೆಯಲು ಅದಕ್ಕೆ ತಳರೋಗವೆಂದು ತಿಳಿಯಬೇಕು. ಆ ಕೋಳಗನ್ನು ಹಾಲಿನಿಂದ ತೊಳೆದು ಹಾಲುಮರದ ಹಾಲಿನಿಂದ ಕೆನ್ನೆಯದಿಲಗಡ್ಡೆ, ಲೋಧ್ರ, ತ್ರಿಫಳೆಯಲ್ಲವನ್ನು ನೀರಿನಿಂದ ಅರೆದು ಜೇನುತುಪ್ಪವನ್ನು ಕಲಿಸಿ ಕೊಳವಿಗೆ ಹಚ್ಚುವುದು. ಅರಗು, ಸಜ್ಜರಸ, ಬೆಲ್ಲವತ್ತದ ಹಗಿನು, ಗುಗ್ಗಳ ಇವೆಲ್ಲವನ್ನು ಕೂಡಿಸಿ ಎಣ್ಣೆ, ತುಪ್ಪದಿಂದ ಅರೆದು ಖುರಕ್ಕೆ ಲೇಪಿಸಿ, ಇಟ್ಟಿಗೆಯನ್ನು ಕಾಸಿ ಮೆಟ್ಟಿಸಲು ತಳರೋಗ ಗುಣವಾಗುವದು. ಹಾಗೆಯೇ ಅರಿದಳ ಲೋಧ್ರ, ಎಳ್ಳು, ಅರಿಸಿನ, ತ್ರಿಫಳೆ, ಗೇರಹರಳು ಇವುಗಳನ್ನು ಸಹ ಕೂಡಿಸಿ ಎಣ್ಣೆಯಲ್ಲಿ ಕಾಯಿಸಿ ಬಳಿಕ ಹಚ್ಚಿ ಇಟ್ಟಿಗೆಯಿಂದ ಕಾಸಿ ಮುಟ್ಟಿಸುವುದರಿಂದ, ತ್ರಿಫಲೆಯನ್ನು ಎಣ್ಣೆಯಲ್ಲಿ ಕಲಿಸಿ ಹಚ್ಚಲು ತಳರೋಗ ಉಪಶಮನವಾಗುತ್ತದೆ.

"ಅರಿದಾಳ, ಬೆಲ್ಲ, ಸಜ್ಜರಸ, ಕಾಸೀಸ (ಕರಿಯಸೀಸ) ಅರಗು, ಮೆಣಸು ಇವೆಲ್ಲವು ಒಂದಾಗುವಂತೆ ಚೂರ್ಣಮಾಡಿ ಎಳ್ಳೆಣ್ಣೆಯಲ್ಲಿ ಕಲಿಸಿ ಅಟ್ಟ ಕೊಡಲು ಕುದುರೆಗಳಿಗೆ ತಳರೋಗವಾಸಿಯಾಗುವದು."[೯೯]

ಹರಿಣರೋಗ : "ಬಸರು ಎತ್ತಿಕಟ್ಟಲು, ಮೈ ಸುಕ್ಕಿಸುತ್ತ ಇರಲು, ಬಾಯಲ್ಲಿ ಲೋಳೆ ಸುರಿಯುತ್ತಿರಲು, ಕಣ್ಣುಬಿಟ್ಟು, ಉಬ್ಬಸವಾದಡೆ ಶೂಲಿಯಿಂದ ಕಿವಿಕೆತ್ತಿಸಿದಂತೆ ಇರಲು ಹುಲ್ಲು, ನೀರು, ಖಾಣಗಳನೊಲ್ಲದೆ ಇರಲು, ಕಾಲುದಡದಡಿಸಿದೊಡೆ, ಹಲ್ಲುಗಳು ಗಿಡಿಗಿರೆದಿರಲು, ಬಾಲ ಬಿದ್ದ ಹಾಗೆ ಮಿಡುಕುದಿರಲು ಅದನ್ನು ಹರಿಣ ರೋಗವೆಂದು ತಿಳಿದುಕೊಳ್ಳಬೇಕು.

ತಾಳುರೋಗ : ಕುದುರೆ ಕಡು ಬಿಸಿಲಲ್ಲಿ ಇದ್ದು, ತಾಳುಗೆ ಒಣಗಿ, ಮುಖ ಒಣಗಿ ನೀರನ್ನು ಆಹಾರವನ್ನು ಒಲ್ಲದೆ ತಾಪದಿಂದ ದಡದಡಿಸಲು ಅದನ್ನು ತಾಳುರೋಗವೆಂದು ಕರೆಯಲಾಗಿದೆ. ಹಾಗೆಯೇ ಕುದುರೆ ದಡದಸಿ ಮೇಯದರಿಯದೆ ತಡಸವೆನಿಸಿ ಅಲ್ಪ ಅಲ್ಪವನ್ನು ಮೆಯ್ಯಲು, ಕಡುಗುಂದಿ ರೋಮ ಒಡೆದು, ಕಣ್ಣು ಕುಳಿಯಾಗಿ ಇರಲು ತಾಳುರೋಗವೆಂದು ತಿಳಿದು, ಕುದುರೆಗೆ ಕಣ್ಣ ಕೆಳಗೆ ಸೆರೆಯನ್ನು ಬಿಡಿಸುವುದು. ಗೋಮೂತ್ರ, ಎಣ್ಣೆ, ಸೈಂಧವಲವಣ ಇವುಗಳನ್ನು ಕೂಡಿಸಿ ತಾಳುಗೆಗೆ ಒರಸಲು ತಾಳುರೋಗ ಗುಣವಾಗುವದು.

ನಾಲಗೆಯ ರೋಗ : ನಾಲಗೆ ಕರಿದಾಗಿ ಬಾತು ಹುಣ್ಣುಗಳು ಹುಟ್ಟಿ, ಶ್ಲೇಷ್ಮ ಸುರಿಯುತ್ತಿರಲು ಪ್ರಜಾಪತಿ ಕೊಳೆ ನಾರುತ್ತಿರಲು ಅದನ್ನು ನಾಲಗೆಯ ರೋಗವೆಂದು ಕರೆಯಲಾಗಿದೆ. ಹಿಪ್ಪಲಿ, ಜೇನುತುಪ್ಪ, ಚಂಗಣೆ, ನಿಲಕೋಷ್ಟ, ಬಜೆ, ಬೆಳ್ಳುಳ್ಳಿ, ಸೈಂಧವಲವಣ, ಅರಿಸಿನ, ಮರದರಿಸಿನ, ಇವೆಲ್ಲವುಗಳನ್ನು ಕೂಡಿಸಿ ತುಪ್ಪದಲ್ಲಿ ಕಲಿಸಿ ಬಾಯಲ್ಲಿ ಇಡಲು ಆ ಹುಣ್ಣುಗಳು ಗುಣವಾಗುವವು. ಅದರಂತೆ ಕೋಷ್ಠ,

ಕಾಡು ಹಡಲ, ಅಣಿಲೆಕಾಯಿ, ಇವುಗಳನ್ನು ಓಗರದಲ್ಲಿ ಅರೆದು ಇಟ್ಟು ಆಡಿನ ಮೂತ್ರ, ತುಪ್ಪದಲ್ಲಿ ಸೈಂಧವಲವಣವನ್ನು ಅರೆದು ನಸ್ಯವನ್ನು ಮಾಡಿಕೊಡುವದು.''[೧೦೦]

ಕೂರ್ಚರೋಗ : ''ಕುದುರೆಯ ಕೂರ್ಚದ ಠಾವಿನಲ್ಲಿ ಅತಿನೋವಾಗಿ ಭೀತಿಯಿಂದ ಕುಂಟುತ್ತ ಇರಲು ಅದನ್ನು ಕೂರ್ಚರೋಗವೆಂದು ಕರೆಯುವರು. ಸರಳಕೋಷ್ಠ, ಮಂಜಿಷ್ಠೆ, ರಾಶ್ಮೆ, ಬೆಳ್ಳುಳ್ಳಿ, ಸೈಂಧವಲವಣ, ಇವೆಲ್ಲವುಗಳನ್ನು ಕೂಡಿಸಿ ಹಸುವಿನ ಹಾಲಲ್ಲಿ ಕಲಿಸಿ, ಕಾಸಿ ಹಚ್ಚಲು ಕುದುರೆಯ ಕೂರ್ಚರೋಗ ಗುಣವಾಗುವದು. ಹಾಗೆಯೇ ಕೂರ್ಚರೋಗಕ್ಕೆ ಶಾಖವನ್ನು ಕೊಡಬೇಕು. ಗುಣವಾಗದಿದ್ದರೆ ಹತ್ತಿರ ಬರೆಯನ್ನು ಹಾಕಬೇಕು.''[೧೦೧]

ಶೋಭೆರೋಗ : ''ಚಿತ್ರಮೂಲ, ಅತಿಬಜೆ, ದಂತಿಕ, ಹಿಪ್ಪಲಿ, ಕಾಗೆದೊಂಡೆ, ಗಿಣಿಮೂಗಿ, ಇವನ್ನು ಮೂತ್ರದಲ್ಲಿ ಅರೆದು ಹಚ್ಚಲು ಶೋಭೆ ಗುಣವಾಗವದು. ಗೇರಹರಳು, ಚಿತ್ರಮೂಲವನ್ನು ಅರೆದು ಮನುಷ್ಯರ ಮಲವನ್ನು ಕೂಡಿಸಿ ಹಚ್ಚಲು ಶೋಭೆ ಗುಣ ಹೊಂದುತ್ತದೆ. ಅಲ್ಲದೇ ಮರುದೊಂಡೆಯನರೆದು ಬೇವಿನ ಕಷಾಯದಲ್ಲಿ ಕೂಡಿಸಿ ಹಚ್ಚಲು ಶೋಭೆ ಉಪಶಮನ. ಬಲ್ಲವರಿಗೂ, ಅರಿಯದವರಿಗೂ ಇದೆ ಮದ್ದು ಎಂದು ಶಾಸ್ತ್ರಕಾರರು ತಿಳಿಸುತ್ತಾರೆ. ಕೆಂಡಲೆಯನ್ನು ಗೆಣಸನ್ನು, ನವಣೆಯನ್ನು ಕೂಡಿಸಿ ಸಣ್ಣಾಗುವಂತೆ ಅರೆದು ಹಚ್ಚಲು ಶೋಭೆ ಗುಣವಾಗುತ್ತದೆ.''[೧೦೨]

ಅತಿಸಾರ : ಈ ರೋಗ ಕುರಿತು ಲೋಕೋಪಕಾರ ಈ ರೀತಿಯಲ್ಲಿ ಚರ್ಚಿಸಿದ್ದಾನೆ.

> ''ಅತಿ ಬಜೆಯಂ ಶುಂಠಿಯುಮಂ
> ಪ್ರತಿಪಾಕಂಗೊಂಡು ಕುಡುಗೆ ಮೂಱುದಿನಂ ಕ್ಷೀ
> ರತರುತ್ವಕ್ಕಸಿರಿ ತೋಯಮ
> ನತಿಸಾರ ವ್ಯಾಧಿ ಹಯಕುಳಕ್ಕುಪಶಮಿಕುಂ''[೧೦೩] (೯-೨೩.೨)

ಅತಿಬಜೆ, ಶುಂಠಿ, ಇವೆರಡನ್ನು ಕೂಡಿಸಿ ಚೂರ್ಣ ಮಾಡಿ ಕೊಡಸಿ ಗನತಿಗುಡನರೆದು ಮೊಸರ ನೀರಲ್ಲಿ ಕಲಸಿ ಆ ಚೂರ್ಣವನ್ನು ಕೂಡಿಸಿ ಕಲಿಸಿ ಕುದುರೆಗೆ ಕೊಡಲು ಅತಿಸಾರ ರೋಗ ಗುಣವಾಗುತ್ತದೆ.

ವಾತ ಅತಿಸಾರ : ''ಭೋರನೆ ಉಚ್ಚುವುದು, ಆ ದ್ವಾರವು ಗುಳಿಯಾಗಿ ತೆರೆದಿರಲು ಬೊಬ್ಬುಳಿಕೆಯಾಗಿ ಇರುವುದನ್ನು ವಾತಾತಿಸಾರವೆಂದು ತಿಳಿಯಬೇಕು. ದಾಳಿಂಬದ ಕೊನರು, ದರ್ಭೆಯ ಚಿಗುರು ಬೆಳೆದ ತಿಗುಡು, ಹಿಪ್ಪೆಯ ತಿಗುಡು ಇವೆಲ್ಲವನ್ನು ರಸದಿಂದ ರಜಾನ್ನದಕ್ಕಿಯ ಪಾಯಸವನಿಟ್ಟು ಆರಿಸಿ ಜೇನತುಪ್ಪವನ್ನು ಕಲಿಸಿ ಕೊಡಲು ಅತಿಸಾರ ಗುಣವಾಗುವದು. ಯುಷ್ಟಿ, ಮಧುಕ, ಹೊಸತುಪ್ಪ, ಬೆಳೆದಹಣ್ಣು, ಜೇನುತುಪ್ಪ, ಮೊಸರನ್ನು ಕೂಡಿಸಿ ಕೊಡಲು ವಾತಾತಿಸಾರ ಗುಣವಾಗುತ್ತದೆ.

ರಕ್ತಾತಿಸಾರ : ಬಿಸುಸುಯಿವುದು, ಬಡವಾಗುವದು, ಸತ್ವನೆಡುವದು, ದಾಹವೆತ್ತುವುದು, ಶೈತ್ಯವ ಬಯಸುವುದು. ರಕ್ತವಾಗಿ ಗತ್ತವ ಮಾಡುವದು ಇದನ್ನು ರಕ್ತಾತಿಸಾರ ಲಕ್ಷಣವೆಂದು ತಿಳಯಬೇಕು.

ಶ್ಲೇಷ್ಮಾತಿಸಾರ : ಬಹಳ ಬಡವಾಗಿ ಸಾಯುತ್ತಿರಲು, ಚಿಂತಾಕ್ರಾಂತವಾಗಿ ಇರಲು ಅದನ್ನು ಶ್ಲೇಷ್ಮಾತಿಸಾರವೆಂದು ತಿಳಿದು ಅದಕ್ಕೆ ಹಿಪ್ಪಲಿಯನ್ನು ಅರೆದು ತುಪ್ಪದಲ್ಲಿ ಕಲಿಸಿ ತಿನ್ನಲು ಇಡುವುದರಿಂದ ಶ್ಲೇಷ್ಮಾತಿಸಾರ ಉಪಶಮನವಾಗುತ್ತದೆ.”[೧೦೪]

ಅಂಡಬಾಹು : “ವಾತಾದಿಯಾಗಿ ಪ್ರಜಾಪತಿ ವಿಕೃತಿಯಾಗಿ ಅಂಡವು ಬಾತಿರಲು ಅಂತಹ ಕುದುರೆಯನ್ನು ಬಿಸಿಲಿನಲ್ಲಿ ಕಟ್ಟುವುದರಿಂದ ಅಂಡಬಾಹು ಕಡಿಮೆಯಾಗುವದು. ಅಲ್ಲದೇ ಸಣ್ಣ ಕೆಸರನ್ನು ಕಾಸಿ ಅದರಲ್ಲಿ ಸಾಸವೆ, ಕಲ್ಲುಪ್ಪು, ಕಣಿಕ ಉದ್ದಿನ ಪುಡಿಯನ್ನು ಎಮ್ಮತ್ತದ ರಸದಿಂದ ಕಲಿಸಿ ಅಂಡಬಾತ ಕಡೆಗಳಲ್ಲಿ ಹಚ್ಚಬೇಕು ಅದರಿಂದ ಆ ರೋಗ ಗುಣುಖವಾಗುತ್ತದೆ.

ಮುಷ್ಕನಾಳ : ಕುದುರೆಯ ಬೀಜವೊಂದು, ಉರಿವೊಂದು ಇಳಿದಿರಲು ಕಾಲು ಕುಂಟಿದರೆ ವೇದೆ ಪಟ್ಟರೆ ಅದನ್ನು ಮುಷ್ಕನಾಳವೆಂದು ತಿಳಿಯುವದು. ಇದಕ್ಕೆ ಉಪಶಮನ ಮಾಡಲು ಎರಡು ಬೀಜವನ್ನು ಮೊದಲಲ್ಲಿ ಒಂದಾಗಿ ಕಟ್ಟಿ ಸಿರೆಯಲ್ಲಿ ಶಾಖವನ್ನು ಮಾಡುವದು. ಹಾಲಿನಿಂದ ತಿಕದ ಮುಂದೆ ಬರೆಯಲು ಗುಣವಾಗುವದು.

ಉಳೂಕ : ಉರಜಾನು, ಜಂಘೆ, ಪ್ರಜಾಪತಿ ಈ ಸ್ಥಾನಗಳಲ್ಲಿ ಬಾತರೆ ಹುಣ್ಣುಗಳು ಹುಟ್ಟುತ್ತ ಇರಲು ಬಾಯಲ್ಲಿ ರಕ್ತ ಬೀಳುತ್ತ ಇದ್ದರೆ ಅದನ್ನು ಉಳೂಕವೆಂದು ಕರೆಯುವರು. ಹೊಂಗೆಯ ಬೀಜ, ಕಬ್ಬಿನರಸ, ಬಜೆ, ಹಿಪ್ಪಲಿಮೂಲ, ಉಪ್ಪು, ಹಿಪ್ಪಲಿ, ಅರಿಶಿನ, ಮರದರಿಸಿನ, ಸಾಸಿವೆ, ಚಿತ್ರಮೂಲ, ಉಮ್ಮತ್ತು ಇವೆಲ್ಲವನ್ನು ಗೋಮೂತ್ರ, ಆಡಿನ ಮೂತ್ರದಿಂದ ಅರೆದು ಹಚ್ಚಲು ಉಳೂಕ ರೋಗ ಗುಣವಾಗುತ್ತದೆ.”[೧೦೫]

ತದ್ದು : “ಸಜ್ಜರಸವನ್ನು ಪುಡಿ ಮಾಡಿ ಹೊಸ ತುಪ್ಪದಲ್ಲಿ ಕಲಿಸಿ ಹಚ್ಚಲು ಮೂರು ದಿನಕ್ಕೆ ಕಜ್ಜಿ ಮತ್ತು ತದ್ದುಗಳೆಲ್ಲವು ಗುಣವಾಗುತ್ತವೆ ಎಂದು ಗುರುತಿಸಲಾಗಿದೆ.

ರಸದೋಷ : ನೊರೆ ಸಹಿತ ಲದ್ದಿಯನ್ನು ಹಾಕಲು, ದಡದಡಿಸಿ ನಡೆಯಲಾರದೆ ಇರಲು ಅದನ್ನು ರಸದೋಷವೆಂದು ತಿಳಿಯುವದು. ಹಿಪ್ಪೆಯ ಹೂವು ಒಂದು ಬಳ್ಳವ ನೀರಲ್ಲಿ ಅರೆದು ಹಸುವಿನ ಹಾಲಲ್ಲಿ ಕಲಿಸಿ ಇಡಲು ರಸದೋಷ ಉಪಶಮನವಾಗುವದು. ಹಾಗೆಯೇ ಹೇಮಂತ ಋತುವಿನಲ್ಲಿ ಹೇಳಿದ ಕವಳವನಿಕ್ಕಲು ಮತ್ತು ಮೂರು ದಿನಕ್ಕೆ ಲೇಪನ ಮಾಡಲು ರಸದೋಷ ಗುಣವಾಗುತ್ತದೆ. ಉಪ್ಪು ಕೊಮ್ಮೆ, ಹಿಪ್ಪಲಿ, ಯಾಲಕ್ಕಿ, ಗರುಗದಸೊಪ್ಪು ಇವೆಲ್ಲವನ್ನು ಸಮ ಪ್ರಮಾಣದಲ್ಲಿ ಕೂಡಿಸಿ ಮೃದುವಹ ಮರದ ತಿಗುಡಿನಿಂದ ಕೊಡಲು ರಸದೋಷ ಗುಣವಾಗುತ್ತದೆ.

ಮೃಗಜೃಂಭ : ಅಳಿಮೋಹ ಮೇವುದನ್ನು, ಕಣ್ಣು ಕುಳಿವುದನ್ನು, ಕೊರಳು ಬಿಸಿವುದನ್ನು, ಗಂಟು ಗಟ್ಟುವುದನ್ನು, ಬಸುರಕ್ಕುಳಿಸುವುದನ್ನು, ದಡದಡಿಸಿ ಕಾಲನೆಳವುದನ್ನು ಮೃಗಜೃಂಭನೆಂದು ತಿಳಿಯುವುದು. ಅದನ್ನು ಬಿಸಿಲಿನಲ್ಲಿ ಕಟ್ಟಿಸುವುದರಿಂದ, ಬಿಸಿಲಿಲ್ಲದೆ ಗಾಳಿಮಳೆ ಮೋಡಗಳಾದಂದು ಮನೆಯಲ್ಲಿ ಕಟ್ಟಿ ನೆಟ್ಟಲವು ಮೊದಲಗೊಂಡು ಪಿರುದಗಳು ಪರಿಯಂತರ ಶಾಖವನ್ನು ಮಾಡುವದು. ಬಜೆ, ಕೊಡಸಿಗೆಯ ಬೀಜ, ಇಂಗು, ಅತಿಬಜೆ, ಕೋಷ್ಠ ಪಂಚಲವಣ, ಚಿತ್ರಮೂಲ, ಗಜಹಿಪ್ಪಲಿ, ಹಿಪ್ಪಲಿ, ಅಜಮೋದ ತ್ರಿಫಳೆ, ಶುಂಠಿ, ಲವಂಗ, ಲವಂಗಪತ್ರೆ, ನಾಗಕೇಸರ ಇವೆಲ್ಲವನ್ನು ಕೂಡಿಸಿ ಪುಡಿಮಾಡಿ ಬಿಸಿನೀರಿನಲ್ಲಿ ಕಲಿಸಿ ಕೊಡಲು ಮೃಗಜೃಂಭ ಗುಣವಾಗುವುದು. ಸರಳನ್ನು ಚಂಗಣಿಗಿಲ ಕೋಷ್ಠ, ಮಂಜಿಷ್ಠೆ ರಾಸ್ಮೆ ಬೆಳ್ಳುಳ್ಳಿ, ಸೈಂಧವ ತಗರ ಇವುಗಳನ್ನು ಕೂಡಿಸಿ ಪುಡಿ ಮಾಡಿ, ಕರಿಯ ಹಸುವಿನ ಹಾಲು, ಎಳ್ಳಣ್ಣೆ ಇವನ್ನು ಕೂಡಿಸಿ, ಎಳ್ಳಣ್ಣೆ ಇಳಿಯಲಿಟ್ಟು ಪದನರೆದು ಅಟ್ಟು ಯುವ ಕ್ಷೌರವನ್ನು ಪುಡಿಮಾಡಿ ತಳಿದು ಆರಿಸಿದ ಎಣ್ಣೆಯನ್ನು, ಬಿಸಿ ನೀರನ್ನು ಕೂಡಿಸಿ ಎರೆಯುವದು. ಕುದುರೆಯ ಕಣ್ಣು ಕೆಳಗೆ, ಉರದಲ್ಲಿ, ಕಾಲಿನಲ್ಲಿ, ತೋಳುಗಳಲ್ಲಿ, ಹಿಂದಣ ಅಪಾನಗಳಲ್ಲಿ ಸೆರೆಯ ಬಿಡಿಸುವದು. ಹುರಿದಮಳಲಿಂದೆ ಶಾಖವನ್ನು ನೆಟ್ಟಲು ವಿಡಿದು ಜಘನ ಪರಿಯಂತರ ಖರೆಯುವದು.”[೧೦೬]

ರಕ್ತಮೇಹ : “ಉಪ್ಪು, ಕಬ್ಬಿನರಸ, ಹಿಪ್ಪಲಿ, ತುಪ್ಪ, ಎಳ್ಳು ಇವನ್ನು ಕೂಡಿಸಿ ಇಡಲು ಹಾಲಲ್ಲಿ ರಕ್ತ ಮೇಹ ಕೆಡುವದು.

ರಕ್ತಮೇಹಾದ್ಯ : ಎಲಜಿಯ ಬೀಜ, ಯಷ್ಟಿ ಮಧುಕ, ಜೇನುತುಪ್ಪ, ಮಂಜಿಷ್ಠೆ, ತುಪ್ಪ ಇವನ್ನು ಕಲಿಸಿ ಇಡುವದು. ಯಾಲಕ್ಕಿ, ಜೇನುತುಪ್ಪ, ಹಾಲು, ಅಂಬಿಲ ಇವನ್ನು ಕೂಡಿಸಿ ಇಡಲು ರಕ್ತ ಮೇಹಾದ್ಯ ಗುಣಮುಖವಾಗುವದು.

ಸಿಂಹ್ವಾಣರೋಗ : ಬೂರಣವಾದ ಕಡಲೆಯಿಂದ, ಕೊಳೆ ನೀರಿಂದ, ದುರ್ಗಂಧರಸ ಭೋಜನಗಳಿಂದ ವಾತ, ಪಿತ್ತ, ಶ್ಲೇಷ್ಮಗಳು ಹೆಚ್ಚಿ ಸಿಂಹ್ವಾಣ ಹುಟ್ಟುತ್ತದೆ. ಹಾಗೆಯೇ ಕುದುರೆಗೆ ಕಣ್ಣುನೀರು ಸುರಿಯುತ್ತಿರಲು ಮೂಗಿನಲ್ಲಿ ಶ್ಲೇಷ್ಮ ಸುರಿವುದು. ಕೆಮ್ಮುವುದು ಅದಕ್ಕೆ ಸಿಹ್ವಾಣವೆನ್ನುವರು.

ಅರಿಸಿನ ಬರಿವದಳೆ ಕಟುಕತ್ರಯವನ್ನು ಆಡಿನ ಹಾಲಲ್ಲಿ ಅರೆದು ಅದನ್ನು ನಶ್ಯವ ಮಾಡಿ ಕೊಡಲು ವಾತ, ಪಿತ್ತ, ಶ್ಲೇಷದಿಂದ ಸಿಂಹ್ವಾಣ ಗುಣವಾಗುವದು. ಆಲ, ಅತ್ತಿ, ಅರುಳಿ, ಬಸುರಿ, ಇವುಗಳ ಹಾಲು ಕುಡಿಯನ್ನು ತಂದು ತುಳಿದು ಜೇನುತುಪ್ಪದಲ್ಲಿ ಕಲಸಿ ಇಡಲು ಆರು ಅಥವಾ ಏಳು ದಿನಕ್ಕೆ ಕುದುರೆಯ ಖಾಸ ನಾಶವಾಗುವದು. ಗೋಮೂತ್ರದಲ್ಲಿ ಸೈಂಧವಲವಣ, ಶುಂಠಿಯನ್ನು ಅರೆದು ಆ ಗುಳ್ಳದ ಹಣ್ಣಿನ ರಸವನ್ನು ಕೂಡಿಸಿ ನಶ್ಯಮಾಡಿ ಹಾಕುವದರಿಂದ ಸಿಂಹ್ವಾಣರೋಗ ಗುಣ ಹೊಂದುವದು. ಅಲ್ಲದೇ ರಸಗಳನ್ನು ಕೊಡಲಾಗದೇ ನಶ್ಯಗಳನ್ನು ಮಾಡುವುದು. ರಾತ್ರಿಯಲ್ಲಿ ಮುಖಕ್ಕೆ ಶಾಖವನ್ನು ಮಾಡಿ ಕಣ್ಣು ಕೆಳಗೆಯೆರಡು ಬೆರಳ ಬಳಿಯಲ್ಲಿ ಸೆರೆಯ ಬಿಡಿಸುವದು.

ರಕ್ತ ಸಿಂಹ್ವಾಣ : ಕುದುರೆಯ ಮೂಗಿನಲ್ಲಿ ಕುರು ಮೂಡಿದ ಹಾಗೆ ಗಂಟಾಗಿರಲು ಅದನ್ನು ರಕ್ತ ಸಿಂಹ್ವಾಣವೆಂದೂ, ಆ ಮೂಗಿನಲ್ಲಿ ಉಸಿರು ಹರಿಯದೆ ಇರಲು ಆ ಕುದುರೆಗೆ ಮರಣವೆಂದು ತಿಳಿದು. ಹಸುವಿನ ಹಾಲನ್ನು, ದಾಳಿಂಬದ ಹೂವಿನ ರಸವನ್ನು ಕೂಡಿಸಿ ನಶ್ಯವನ್ನು ಮಾಡಲು ಮೂಗಿನಲ್ಲಿ ಬೀಳುವ ರಕ್ತ ಗುಣವಾಗುತ್ತದೆ. ಕರಿಕೆಯ ರಸವನ್ನು, ಹಾಲನ್ನು ಕೂಡಿಸಿ ನಶ್ಯವ ಮಾಡಿ, ಉತ್ತರಣೆಯ ರಸವನ್ನು ತಲೆಯಲ್ಲಿ ಎರೆಯಲು, ಮೂಗಿನಲ್ಲಿ ಬೀಳುವ ರಕ್ತ ನಿಲ್ಲುವದು.”[೧೦೭]

ಜಲಗರರೋಗ : “ಹರಿದು ಬಂದ ಬಹಳ ನೀರನ್ನು ಕುಡಿಯುವದರಿಂದ, ಹೊಟ್ಟೆ ವಿಪರೀತವಾಗಿ ಉಬ್ಬುವುದರಿಂದ, ಅದಕ್ಕೆ ಜಲಗರರೋಗ ಎಂದು ತಿಳಿಯುವದು. ಹಾಗೆಯೇ ಹೊಕ್ಕುಳ, ಕೆಳಗಿಬ್ಬೆರಳಲ್ಲಿ, ಹೊಕ್ಕುಳ ಮೇಲೆ ಎಡದ ಕಡೆಯಲ್ಲಿ ಒಂದು ಬೆರಳಲ್ಲಿ ನಖಚೇಣದಿಂದ ಕುಟ್ಟಿ ಶಸ್ತ್ರದಲ್ಲಿ ನಾಲ್ಕು ಅಂಗುಲ, ಎರಡು ಅಂಗುಲದಲ್ಲಿ ಶಸ್ತ್ರವನ್ನು ಬಿಡಿಸುವುದು. ಅದಕ್ಕೆ ಹದ್ದಿನ ಗರಿಯನ್ನು ಗುಳಿಗೆಯ ಮಾಡಿ ಕೊರೆದು ಅದರೊಳಗೆ ಇಟ್ಟು ಧಾರೆಯನ್ನು ಬಿಟ್ಟು ನೀರನೊಸರಿಸುವುದು. ಆ ಹುಣ್ಣನ್ನು ಶೋಧಿಸಿ, ಜೇನುತುಪ್ಪವನ್ನು, ತುಪ್ಪವನ್ನು ಕೂಡಿಸಿ ಬಿಡುವುದು. ಮತ್ತೆ ಶಾಖಗಳಲ್ಲಿ, ಎಣ್ಣೆಯಲ್ಲಿ ಮಾಡುವದು. ಉರದಿಂದ ಎರಡು ಪಕ್ಕದಿಂದಲೂ ಕ್ರೋಡಮೂಲದಿಂದ ಬಾಹು ಹರಿದರೆ ಅದಕ್ಕೆ ಮುಂದಿನ ಕಾಲಲ್ಲಿ ಸೆರೆಯನ್ನು ಬಿಡಿಸುವದು.

ನಾಳೀವ್ರಣ : ಎಕ್ಕಿಯ ಹಾಲನ್ನು ಉಪ್ಪನ್ನು ಕಣಕದಲ್ಲಿ ಕೂಡಿಸಿ ಬತ್ತಿಯನು ಮಾಡಿ ಆ ಹುಣ್ಣಿಗೆ ಊರಿಸಿ ಒಂದೆರಡು ದಿನವಿರಿಸಿ ಮತ್ತೆ ತೆಗೆದು ಎಣ್ಣೆಯನ್ನು ತೊಡೆಯುವದರಿಂದ ಆ ನಾಳೀವ್ರಣ ಮಾಯುವದು. ನೊರೆ ಹಾಲಲ್ಲಿ ಕಲ್ಲುಪ್ಪು, ಗರುಗದ ರಸ, ಉಮ್ಮತ್ತದ ಸೊಪ್ಪಿನ ರಸ, ಗೇರತುಪ್ಪ ಇವೆಲ್ಲವುಗಳನ್ನು ಕೂಡಿಸಿ ಅಟ್ಟು ಹಚ್ಚಲು ನಾಳಿವ್ರಣ ಗುಣವಾಗುತ್ತದೆ.

ಕಗ್ಗಲಿಹಿಗನು, ಮತ್ತಿಯ ಹಗಿನು, ತ್ರಿಫಳೆ, ಹಿಪ್ಪಲಿ, ಹಿಪ್ಪಲಿಮೂಲ, ಚವ್ಯ, ಚಿತ್ರಮೂಲ, ಶುಂಠಿ ಇವೆಲ್ಲವನ್ನು ಚೂರ್ಣ ಮಾಡಿ, ಧೂಳಿ ಎಂಟು ಭಾಗ, ಎಳ್ಳೆಣ್ಣೆ ಒಂದು ಭಾಗವನ್ನು ಕೂಡಿಸಿ ಕಲಸಿ ಅವನ್ನು ಗೋಮೂತ್ರದಲ್ಲಿ ಬೆರಸಿ ಎಣ್ಣೆನಿಲೆ ನಾಲ್ಕುರೊಳಗೊಂದು ಭಾಗ ಮಾಡಿ ಹೆಚ್ಚಿಸಿದ ಮೂತ್ರವನ್ನು ಅರೆದು ಬತ್ತುವ ಪರಿಯಂತರ ಲೇಪನ ಮಾಡಬೇಕು. ಬೇವಿನ ಕಷಾಯದಲ್ಲಿ ಹೊಯ್ದು ಆಡಿಸಿ ಹೆಸರಕಟ್ಟು, ಜೇನುತುಪ್ಪ, ಶುಂಠಿ, ಹಿಪ್ಪಲಿ, ಅವೆಲ್ಲವುಗಳನ್ನು ಪುಡಿಮಾಡಿ ಕೊಡಬೇಕು. ಏಳು ದಿನಗಳವರೆಗೆ ಭೋಜನವ ಕೊಡಲು ತೊಡೆ, ಜಾನು, ಜಂಘೆ, ಕೂರ್ಚೆಯಲ್ಲಿ ಇದ್ದ ನಾಳಿ ಹುಣ್ಣುಗಳೆಲ್ಲವು ಗುಣವಾಗುವವು.

ವಾಮೆ, ದ್ರೋಣಿಕೆ, ಉಳೂಕಕ್ಕೆ, ನಿರ್ದ್ರವಿಗೆ, ಭೀಮಾದ್ರಿಗೆ, ವಿಸರ್ಪಿಗೆ ಇವೆಲ್ಲವುಗಳಿಗೆ ಕ್ರಮದಿಂದ ಕೆಸರನ್ನು ಬಳಿಯುವದು. ತೊಡೆ, ಜಂಘನ, ಮುಖ, ಕಡೆಗಣ್ಣು ಇವುಗಳಲ್ಲಿ ಹುಣ್ಣುಗಳು ಆದರೆ

ತುಪ್ಪವನ್ನು, ಜೇನುತುಪ್ಪವನ್ನು ಕೂಡಿಸಿ ಜೇವಣಿಗೆಯ ರೋಗ ಉಪಶಮನ ವಾಗುವವರೆಗೂ ಕೊಡುವದು ಒಳ್ಳೆಯದು."೧೧೮

ತುರಿಕೆ, ಕಜ್ಜಿ : ತುರಿಕೆ, ಕಜ್ಜಿಯನ್ನು ಕುರಿತು ಚಾವುಂಡರಾಯ ತನ್ನ ಕೃತಿಯಲ್ಲಿ ಈ ರೀತಿಯಾಗಿ ವ್ಯಕ್ತಪಡಿಸಿದ್ದಾನೆ.

"ಹಯನಿಕರದ ಕಜ್ಜಿಗೆ ಕ
ಳ್ಳಿಯ ಮಸಿಯಂ ತುಪ್ಪದೊಡನೆ ಪೊಸುಗೆ ಮುಂಡಂ
ಗಿಯ ಮಸಿಯೊಡನಿರದೆಳ್ಳೆ
ಣ್ಣೆಯನೆಡೆ ತುಜೆಯಿನಿಸುಮಿಲ್ಲದಂತಿರೆ ಪೋಕುಂ (೯-೨೪೧)

ಬೆರಸಿ ಭರದಿಂ ಮುನ್ನಂ ಗೋಮಾತ್ರದಿಂ ಬಜೆಕಪ್ಪು ಸಿಂ
ಧುರವರಿಸಿನಂ ಸದ್ಯಃಕ್ಷಾರಂಗಳೆಂಬಿವನಟ್ಟು ಸಿಂ
ಧುರುಹಸಹಿತಂ ಮೇಣ್ ಲೋಗೇಶ್ವರಂ ಶರಪುಂಖಿಯೆಂ
ಬೆರಡಜೊಳ ಮಂತೊಂದಂ ತಂದಿಕ್ಕೆ ಕಜ್ಜಿಯನೋಡಿಕುಂ (೯-೨೪೨)

ಅರಿದಾಳಂ ಪೊಸ ಸುಣ್ಣ ಮಿಂದ್ರಯವೆ ಕೇರ್ಗಂಧೋಜಳಂ(ಳೆಂ)ದಾರು ಸಿ
ಧುರಮಯ್ದುಪ್ಪು ಕಟುತ್ರಯಂ ರಜನಿ ಸದ್ಯಃ ಕ್ಷಾರಮೆಂಬಿಂತಿವಂ
ಸರಿ ಗೊಂಡಾಡಿನ ದುಗ್ಧದಿಂ ಸಮನೆ ಪೊಯ್ದೆಳ್ಳೆಣ್ಣೆಯಿಂಬಂದಟ್ಟನಂ
ತರಮಿಂಬಾಗಿರೆ ಪೊಸ ಕಜ್ಜಿ ಮೊದಲಾದಶ್ವವ್ರಣಂ ಪಿಂಗುಗುಂ"೧೧೯ (೯-೨೪೩)

ಕಳ್ಳಿಯ ಕೊಂಬ ತಂದು ಸುಟ್ಟು ಮಸಿಯನ್ನು ಮಾಡಿ ತುಪ್ಪದಲ್ಲಿ ಕಲಿಸಿ ಹಚ್ಚುವುದು. ಅಲ್ಲಾ, ಮಂಡಗೆಯ ಎಲೆಯನ್ನು ಸುಟ್ಟು ಎಣ್ಣೆಯಲ್ಲಿ ಕಲಿಸಿ ಹಚ್ಚುವದು. ಇದರಿಂದ ಕುದುರೆಗಳ ತುರಿಕೆ ಕಜ್ಜಿಗಳು ಮಾಯವಾಗುತ್ತವೆ. ಹಾಗೆಯೇ ಉಪ್ಪು, ಚಂದ್ರ, ಅರಿಸಿನ, ಸದ್ಯಃಕ್ಷಾರ ಇವನ್ನು ಚೂರ್ಣಮಾಡಿ ಗೋಮೂತ್ರದಲ್ಲಿ ಅರೆದು ಅಟ್ಟು, ಸೈಂಧವಲವಣ, ಲೋಯಿಸರ, ಮುಳ್ಳುನುಗ್ಗಿ ಇವರೊಳಗೆ ದೊರಕಿಸಿದೊಂದರೆದು ಚೂರ್ಣವನ್ನು ಮಾಡಿ ಆ ಅಟ್ಟುದರೊಡಗೂಡಿಸಿ ಕಲಿಸಿ ಹಚ್ಚಲು ತುರಿಕೆ ಗುಣವಾಗುತ್ತದೆ. ಅರಿದಾಳ, ಹೊಸಸುಣ್ಣ, ಕೊಡಸುಗನಬೀಜ, ಗಂಧಕ ಮರದರಿಸಿನ, ಚಂದ್ರ, ಸೈಂಧವ, ಕಾಚ ಬಿಡುಸಂವರ್ಚಲನವಣಗಳು, ಉಪ್ಪು, ಶುಂಠಿ, ಹಿಪ್ಪಲಿ, ಮೆಣಸು, ಅರಿಸಿನ, ಸದ್ಯಃಕ್ಷಾರ ಇವನ್ನು ಸಮವಾಗಿ ಕೊಂಡು ಚೂರ್ಣಮಾಡಿ, ಎಕ್ಕೆಯ ಹಾಲನ್ನು (ಆಡಿನಹಾಲನ್ನು) ಎಳ್ಳೆಣ್ಣೆಯನ್ನು ಸಮಮಾಡಿಕೊಂಡು ಆ ಚೂರ್ಣವನ್ನು ಹಾಕಿ ಅಟ್ಟು, ಅದನ್ನು ಹಚ್ಚಲು ಕುದುರೆಗಳಿಗೆ ತುರಿಕೆ, ಕಜ್ಜಿ ಮೊದಲಾದ ಎಲ್ಲಾ ಹುಣ್ಣುಗಳು ಮಾಯವಾಗುವವು.

ಅಭಿನವಚಂದ್ರ ಹೇಳುವಂತೆ-ಬೋಳವನೂ, ಮಸಿಯಾಗಿ ಹುರಿದು ಎಣ್ಣೆಯಲ್ಲಿ ಅರೆದು ಕಜ್ಜಿಗೆ ಕೆಟ್ಟಹುಣ್ಣುಗಳಿಗೆ ಇಡಲು ಗುಣವಾಗುವದು.

"ಅರಿಸಿನ ಮೇಣ್ ಕೋಷ್ಠಂ ಸಿತ
ಸರುಷಪಮಂ ಕೂಡಿಕೊಂಡು ಸದ್ಯಕ್ಷಾರಂ
ಬೆರಸಟ್ಟು ಮೂತ್ರದಿಂದಂ
ತುರಗದ ಕಜ್ಜಿಗೆ ವಿಲೇಪನಂಗೆಯ್ವುದದಂ (೧೩-೧೭)

ಮರದರಿಸಿನ ಮರಿಸಿನ ಮು
ತ್ತರಣೆ ತಿಲಂಕೇರ ಗೊಟ್ಟೆಯಿಂತಿವನೊಂದಾ
ಗರೆದೆಳ್ಳೆಣ್ಣೆಯೊಳಟ್ಟಾ
ದರದಿಂದಂ ಪೂಸೆ ಕಜ್ಜಿ ಕುತ್ತಂ ತೀರ್ಗುಂ"[೧೧೧] (೧೩-೧೮)

ಅರಿಸಿನ, ಎಕ್ಕೆ, ಚೆಂಗಣಗಿಲ, ಕೋಷ್ಠ, ಸಾಸಿವೆ, ಸದ್ಯಃಕ್ಷಾರ ಇವೆಲ್ಲವನ್ನು ಸಮವಾಗಿ ಕೂಡಿಸಿ ಮೂತ್ರದಲ್ಲಿ ಅರೆದು ಕುದುರೆಗೆ ಹಚ್ಚಲು ಕಜ್ಜಿ ಗುಣವಾಗುತ್ತದೆ. ಮರದರಿಸಿನ, ಉತ್ತರಣೆ, ಕರಿಯೆಳ್ಳು, ಗೇರಗೊಟ್ಟೆ, ಇವೆಲ್ಲವುಗಳನ್ನು ಕೂಡಿಸಿ ಅಟ್ಟಿ ಹಚ್ಚಲು ಕಜ್ಜಿ ಉಪಶಮವಾಗುವದು. ಮಂಡಗಳ್ಳಿಯನ್ನು ಎಕ್ಕಿಯನ್ನು ಸುಟ್ಟು ಕರಿಮಾಡಿ, ಎಳ್ಳನ್ನು ಹುರಿದು ಕರಿಮಾಡಿ ಮೂತ್ರದಿಂದರೆದು ಹಚ್ಚಲು ಕಜ್ಜಿ ಗುಣವಾಗುತ್ತದೆ. ಮನುಷ್ಯರಿಗೆ, ಕುದುರೆಗೆ ಜೀವಧನಗಳಿಗೆ ಕೂಡ ಕಜ್ಜಿಯಾದರೆ ಹೊಂಗೆಯ ಎಣ್ಣೆಯನ್ನು ಹೊಸಸುಣ್ಣವನ್ನು ಕೂಡಿಸಿ ಹಚ್ಚಲು ಗುಣವಾಗುತ್ತದೆ ಎಂದು ಶಾಸ್ತ್ರಕಾರರು ತಿಳಿಸುವುದನ್ನು ಗಮನಿಸಿದಾಗ ಒಂದು ಪ್ರಾಣಿಯ ಬಹುವಿದಧ ರೋಗಗಳ ಪರಿಕಲ್ಪನೆ ಅವರಿಗೆ ಕರಗತವಾಗಿತ್ತೆಂಬುದು ವಿಧಿತವಾಗುತ್ತದೆ.

ಹುಣ್ಣುಗಳು : "ಅರಳು ಆಗದ ಹಾಗೆ ಸುಣ್ಣದ ಪುಡಿಯನ್ನು ಅರುವೆಯಲ್ಲಿ ಸೋಸಿ ಅರಿದಳವನ್ನು ಬೆರಸಿ ಚೂರ್ಣವನ್ನು ಮಾಡಿ ತುಪ್ಪದಲ್ಲಿ ಅಟ್ಟು, ಕೆಟ್ಟ ಹುಣ್ಣುಗಳಿಗೆ ತೊಡೆಯಲು ಗುಣವಾಗುವದು. ಬಿಳಿಯ ಅವುಡಲ ಬೇರನ್ನು, ಗೇರಹರಳನ್ನು ಕೂಡಿಸಿ ಅರೆದು ಎಣ್ಣೆಯಲ್ಲಿ ಅಟ್ಟು ಆ ಎಣ್ಣೆಯನ್ನು ಕೆಟ್ಟ ಹುಣ್ಣಿಗೆ ತೊಡೆಯಲು ಗುಣಮುಖವಾಗುವದು.

ಕೆರಕು, ತುರಿಕೆ, ಕಜ್ಜಿ, ಕಂಚುಕೆ, ಖುರರವಂಜುಳು, ಪುತ್ತುಬಾಹು, ಭಗಂಧಕ ಅರಿಷೆ, ಕುಷ್ಟ ನರವಲಿಯವೆಲ್ಲವೂ ಕೆಟ್ಟ ಹುಣ್ಣೆಂದು ತಿಳಿಯುವದು. ತಳದಲ್ಲಿ, ಕುಟ್ಟಿಕೆಯಲ್ಲಿ, ಬಾಯಲ್ಲಿ, ಕಂಕುಳಲ್ಲಿ, ಕಣ್ಣನೀರು ಬೀಳುವ ಠಾವಿನಲ್ಲಿ, ಉರದಲ್ಲಿ, ಕೊರಳಲ್ಲಿ, ಪಾಂಡುವಿನಲ್ಲಿ ಹುಣ್ಣುಗಳು ಹುಟ್ಟಲು ಒಳ್ಳೆಯದಲ್ಲ. ಎಮ್ಮೆಯ ಕೊಂಬಿನಿಂದ ಹಲವು ರೀತಿಯ ಆಯುಧಗಳಿಂದ, ದಸಿಗಳಿಂದ ಆದ ಹುಣ್ಣನ್ನು ಹರಿಯುವದು. ಉತ್ತರಣೆ, ಕೊಳವಳಿಕೆ, ಇವುಗಳನ್ನು ಸುಟ್ಟು ಬೂದಿಯನ್ನು ಗೋಮೂತ್ರದಲ್ಲಿ ಕಲಿಸಿ

ತೊಡೆಯಲು ಕೆಟ್ಟ ಹುಣ್ಣುಗಳು ಗುಣವಾಗುವವು. ನೆಲದಲ್ಲಿ ಮದ್ದನ್ನು ಸುಟ್ಟು ಆ ಬೂದಿಯನ್ನು ಗುಡಿಸಿಕೊಂಡು ಎರಡು ಮಡಿ ನೀರನೆರೆದು ಸೋಸಿ ಆ ನೀರನ್ನು ಕಾಯಿಸಿ ಮಂದವಾಗಿ ಆದ ಬಳಿಕ ಹಚ್ಚುವುದು. ಅದನ್ನು ಒಳ್ಳೆಯ ಮಡಿಕೆಯಲ್ಲಿ ಹಾಕಿ ಅಂಬಿಲ, ಎಕ್ಕದ ಹಾಲು, ಆಡಿನಹಾಲು, ಬೆಲ್ಲ, ಎಮ್ಮೆಯ ಹಾಲು ಇವನ್ನು ಚೆನ್ನಾಗಿ ಹದಬರುವಂತೆ ಅರೆದು ಅಟ್ಟು ತೊಳಿಸುವುದು. ಗಿಣಿಮೂಗಿ, ಅರಿಸಿನ, ಹಿಪ್ಪಲಿ ಮೂಲ, ಇಂಗು, ಶುಂಠಿ, ಹಿಪ್ಪಲಿ, ನುಗ್ಗಿ, ತಗ್ಗಿ, ನೆಲ್ಲಿಯಕಾಯಿ, ಯವಕ್ಷಾರ, ಸಾಸವೆ, ಬಜೆ, ಅತಿಬಜೆ, ಹೊಸ ಸುಣ್ಣವನ್ನು ಸೋಸಿ ಅದನ್ನು ಮೊದಲ ಬದಿಯಲ್ಲಿ ಕೂಡಿಸಿ ಇವೆಲ್ಲವುಗಳನ್ನು ರಸ, ಒಂದು ಪಡಿಯನ್ನು ಕೂಡಿಸಿ ತೊಳೆಸುತ್ತ ಮತ್ತೆ ಅಟ್ಟು ಇಳುಹಿ ತಂದು ಕೈಯಲ್ಲಿ ಮುಟ್ಟದೆ ಮತ್ತೊಂದು ಗಡಿಗೆಯಲ್ಲಿ ಅರೆದು ಇರಸಿ ಹದನರಿದು, ಹಚ್ಚಲು ಕೆಟ್ಟ ಹುಣ್ಣುಗಳು ಗುಣವಾಗುವವು. ಮಾಘ ಮಾಸದಲ್ಲಿ, ಬಿಸಿಲಿನಲ್ಲಿ, ಬೇಸಗೆಯಲ್ಲಿ, ಬಿಸಿಲು ಹೋದ ಬಳಿಕ ಮುಗಿಲು ಮಳೆಯ ಈ ಕಾಲಗಳಲ್ಲಿ ವಿಚಾರಿಸಿಕೊಂಡು ಆ ಹುಣ್ಣುಗಳಿಗೆ ಅರಳೆ ಚೆನ್ನಾಗಿ ಇಕ್ಕಿ ಕೆಟ್ಟ ಹುಣ್ಣಿನ ರಸತಿಗೆಯನ್ನು ಹೋಗುವ ಹಾಗೆ ಶಾಖವನ್ನು ಹಾಲು, ತುಪ್ಪದಲ್ಲಿ ಮಾಡುವದು. ಹೊಗೆಯವರ್ಣ, ಆರನೇರಿಲತನಿವರ್ಣವಾಗಿರಲು ಅದಕ್ಕೆ ಚಿತ್ರಮೂಲ, ಸಮೂಲವನ್ನು ಸುಟ್ಟು ಆ ಬೂದಿಯಿಂದ ತಳಿದು ಮತ್ತೆ ಹಾವು, ಮೆಕ್ಕೆ ಬೇರನ್ನು, ಎಕ್ಕಿಯ ಹಾಲಲ್ಲಿ ತೊಯಿಸಿ ನಾಳಿ ನರುಹುಣ್ಣಿನ ಬೇರಿಗೆ ಬತ್ತಿಯನೇರಿಸಿ ಹುಣ್ಣನ್ನು ಚೆನ್ನಾಗಿ ಶೋಧಿಸುವದರಿಂದ ಎಲ್ಲಾ ಬಗೆಯ ಹುಣ್ಣುಗಳು ಗುಣವಾಗುತ್ತವೆ.

ಸರ್ಪಹುಣ್ಣುಗಳು : ಬೆಣ್ಣೆಯನ್ನು, ಮತ್ತಿಯ ತೊಪ್ಪೆಯನ್ನು, ಹಿರಿಯ ಮದ್ದಿನಬೇರು. ಅಂಬಿಲ, ಜೇನುತುಪ್ಪ ಇವೆಲ್ಲವನ್ನು ಕೂಡಿಸಿ ಅರೆದು ಆ ಹುಣ್ಣಿಗೆ ದಿನಪ್ರತಿ ಕೊಡಲು ಎಲ್ಲಾ ಹುಣ್ಣುಗಳು ಗುಣವಾಗುತ್ತವೆ. ಹಾಗೆಯೇ ಕೊಳುಗುಳಿಕೆ, ಹುಣಿಸೆ, ಎತ್ತು ನಾಲಗೆ ಇದರ ಎಲೆಯನ್ನು ಅರೆದು ಎಳ್ಳೆಣ್ಣೆಯಲ್ಲಿ ಕಲಿಸಿ ಹುಣ್ಣಿಗೆ ಇಟ್ಟು ಮೇಲೆ ತೊಡೆಯಲು ಹಾಲ ಮರಗಳು ಅತ್ತಿ, ಆಲ, ಗೋಣಿ, ನೇರಲ ಇವುಗಳ ತಿಗುಡನ್ನು ಎಳೆನೀರಿನಲ್ಲಿ ಅರೆದು ತುಪ್ಪವನ್ನು ಕಲಿಸಿ ಆ ಹುಣ್ಣಿಗೆ ಇಡುವದು. ಕಾನೆದೊಂಡೆ, ಜೇನುತುಪ್ಪ ಮತ್ತಿಯ ತಿಗುಡು, ಹಿರಿಯ ಮದ್ದು ಇವೆಲ್ಲವನ್ನು ಅರೆದು ತುಪ್ಪದಲ್ಲಿ ಕಲಿಸಿ ಹುಣ್ಣಿಗೆ ಕೊಡಲು ಗುಣಮುಖವಾಗುವದು.

ಗೇರ ಹೆರಳು, ಹೊಂಗೆಯ ಬೀಜ, ಚೆಂಗಣಗಿಲ ಕೋಷ್ಠ, ತಿಲಸೈಂಧವ, ಸಧ್ಯಃಕ್ಷಾರ ಇವೆಲ್ಲವನ್ನು ಕೂಡಿಸಿ ಅರೆದು ಆಡಿನ ಹಾಲಿನಲ್ಲಿ ಲೇಪವನ್ನು ಮಾಡುವದು. ಗರುಗವಾಗಲಿ, ಉಮ್ಮತ್ತುದೆಲೆಯಾಗಲಿ, ನರಮೂತ್ರದಲ್ಲಿ ಉಪ್ಪು ಬೆರಸಿ ಅರೆದು ಕುದುರೆಯ ಹುಣ್ಣಿಗೆ ಬಳಿಯುವರು. ಬಹಳ ದಿನದ ಹುಣ್ಣುಗಳಿಗೆ ಗುಳಿಯಾಗಿಯಿದ್ದೊಡೆ, ಉಚ್ಚಿಯಿದ್ದರೂ ಸಹಿತ ಹಾಗೆಯೇ ಬಾತಿದ್ದರೆ, ಗಂಟು ಗಟ್ಟಿದ್ದರೂ ಅದಕ್ಕೆ ತಕ್ಕ ಬರೆಯನ್ನು ಹಾಕುವದು. ಸೋರೆಯೆಲೆಯನ್ನು ಅರೆದು ಕೆಟ್ಟ ಹುಣ್ಣುಗಳಿಗೆ ಇಡಲು ಮೂರು ನಾಲ್ಕು ದಿನದ ಮೇಲೆ ಎಣ್ಣೆಯಲ್ಲಿ ಅದನ್ನು ಇಟ್ಟು ತೊಡೆಯುವದು. ಆ ಎಲೆಯನ್ನು ತುಪ್ಪದಲ್ಲಿ ಶಾಖವನ್ನು ಮಾಡುವದು. ಹಾಗೆಯೇ ಹೊಸಸುಣ್ಣ ಸಧ್ಯಃಕ್ಷಾರವನ್ನು ಕೂಡಿಸಿ ಆ ಹುಣ್ಣಿಗೆ ಹಚ್ಚುವದರಿಂದ ಗುಣವಾಗುತ್ತದೆ.''[೧೧೦]

ಪ್ರಾಣಿರಸ ಗಂಟುಗಳು : ಹಿರಿಯಣ್ಣ ಕವಿಯು ತನ್ನ ಹಯರತ್ನ ಶ್ರೇಣಿ ಕೃತಿಯಲ್ಲಿ ಪ್ರಾಣಿಗಳಿಗೆ ಬರುವ ವಿವಿಧ ಬಗೆಯ ಗಂಟುಗಳನ್ನು ಗುರುತಿಸಿ, ಚಿಕಿತ್ಸಾಕ್ರಮವನ್ನು ಹೇಳಿದ್ದಾನೆ. ಉದಾಹರಣೆಗಾಗಿ

> "ಪಾಣಿರಸ ಗಂಟುಗಳ ಸೀಳಿ ಶಸ್ತ್ರದಲದರ
> ಶ್ರೋಣೀತವನೊರಸಿ ಹುಳಿಯ ಹಣ್ಣದ ಬಟ್ಟೆಯೊಳ್
> ಮಾಣದೆ ಯವಕ್ಷಾರಮಂ ಕಲಿಸಿ ಲೇಪಿಸಿ ವಿಳಂಗ ಶುಂಠಿಯು ಸೈಂಧವಂ
> ಜಾಣರಜಿವಾನದೊಳ್ ಬೆರಸಿ ಬೆಲ್ಲದಲಿಕ್ಕ
> ಲೂಣೆ ಇಲ್ಲದೆ ನಾಲ್ಕು ದಿವಸಕ್ಕೆ ಗಂಟುಗಳ್
> ಮಾಣುವವು ಸಿದ್ಧವೆಂದು ಸುರಿದಂ ಶಾಲಿಹೋತ್ರಂ ಜಗಕೆ ಸಂತಸದೊಳೂ"[೧೧೨] (೭-೧೬)

ಕುದುರೆಯ ರಸಗಂಟುಗಳನ್ನು ಗಮನಿಸಿ ರಸ ಗಂಟುಗಳನ್ನು ಸೀಳಿ, ಶಸ್ತ್ರದಲ್ಲೇ ಶ್ರೋಣಿತವನ್ನೇರಿಸಿ ಹುಳಿಯ ಹಣ್ಣರ ಬಟ್ಟೆಯೊಳಗೆ ಮಾಗಿರದೆ ಯವಕ್ಷಾರವನ್ನು ಕಲಿಸಿ ಲೇಪನವನ್ನು ಮಾಡಿ ವಿಳಂಗ, ಶುಂಠಿಯನ್ನು, ಸೈಂಧವ, ಜಾಣರ ಜಿವಾನದೊಳಗೆ ಬೆರಸಿ, ಬೆಲ್ಲದಲ್ಲಿ ಕೊಡಲು ಲೂಣೆ ಇಲ್ಲದೆ ನಾಲ್ಕು ದಿನಕ್ಕೆ ಗಂಟುಗಳು ಮಾಯುವವು.

ಮಧು ಪಂಕರ ಗಂಟುಗಳು : "ಶಸ್ತ್ರದಿಂದ ಸೀಳಿ ಇದಕ್ಕೆ ತಿಂಥಿಣಿ ಲಕ್ಕಿ, ಮಂಗರುಳೆ, ತೋರಣ ಗಿಲಗಳಿದರು, ತೊಪ್ಪಲನ್ನರೆದು ಲೇಪನ ಮಾಡಿ ಬೆಲ್ಲ, ತುಗ್ಗಿಯ ತೊಪ್ಪಲನ್ನು ಮುದದಿ ತುಪ್ಪದಲ್ಲಿ ತಾಸನಿಯಕೊಡೆ, ನಾಲ್ಕು ದಿನ ಕೊಡಲು ಗುಣವಾಗುವದು.

ಗತಿಭಂಗರಸದ ಗಂಟು : ಶಸ್ತ್ರದಿಂದ ಸೀಳಿ ಅಳಲೆಯಕಾಯಿ, ನೆಲಬೇವು, ಕರಿಬೇವು, ಆವರಿಕೆಯಬೇರು, ಬೆಳ್ಳೊಳ್ಳಿಯನ್ನು ತುಪ್ಪದೊಳಗೆ ಅರೆದು ಮತ್ತೆ ಆ ರಸದ ಗಾಯಕ್ಕೆ ಲೇಪನವನ್ನು ಮಾಡಲು, ವಾರುವಕ್ಕದಕ್ಕೆ ಕಾಸನೀಯ ಕೊಡಲು ನಾಲ್ಕು ದಿನಕ್ಕೆ ಗುಣವಾಗುವದು.

ಕುಂಟುತ್ತಿರುವ ರೋಗ : ಚಾರು ಕುದುರೆಗಳು ಕುಂಟುತ್ತಿರುವುದನ್ನು ಗಮನಿಸಿ ರಾಳ, ಮ್ಯಾಣ, ಅರಿಷಿಣ, ಚಂದ್ರ ಘುತಾ, ಸಾರವಳ್ಳೆಣ್ಣೆ ಒಳಗೆ ಅರೆದು ಖುರಕ್ಕಿಡಲು ಜೊತೆಗೆ ಔಡ್ಲದೆಲಿಯನ್ನು ಕಟ್ಟಿದರೆ ಗುಣವಾಗುತ್ತದೆ.

ತಳಶಸ್ತ್ರರಸರೋಗ : ತಳಶಸ್ತ್ರ ರಸ ರೋಗಕ್ಕೆ ಲೋಹದ ಚೂರ್ಣ, ಕಾಚು, ಮತ್ತಳಲಿಯ ಕಾಯಿ ಅರಪಾವು ಸಮಗೂಡಿಸಿ ತಿಲತೈಲದೊಳಗೆ ಕಲಿಸಿ ಲೇಪಿಸುತ ಮೇಲೆ ಲೆಕ್ಕಿಯ ತೊಪ್ಪಲನಿಟ್ಟು ಕಟ್ಟಿ, ಒಲಿಯಲ್ಲಿಟ್ಟು ಇಟ್ಟಂಗಿಯ ಕಲ್ಲನ್ನು ಸುಟ್ಟು ಕಾವು ಗೊಡುವುದರಿಂದ ತಲಸದಳೆ, ಬಳ್ಳೊಳ್ಳಿ, ಅಜಿವಾನ, ಸಮಗೂಡಿಸಿ ನಂತರ ಲೆಕ್ಕಿಯ ತೊಪ್ಪಲೊಡನೆ ಕಾಸನೆಯ ಕೊಡಲು ಏಳು ದಿವಸಕ್ಕೆ ರೋಗ ಗುಣಮುಖವಾಗುವದು.

ಮರುತ ಪಂಕರಸ : ಮರುತ ಪಂಕರಸಕ್ಕೆ ಬಜೆಯು ಬಡಗಿಯ ಮನಿಯೊಳಗೆ ಇರುವ ಇಲ್ಲಾಣ, ಸೈಂಧವಲವಣವನ್ನು ಸಮಗೂಡಿಸಿ ನಿರುತ, ಜಂಭೀರ ರಸದಿಂದ ಕಲಿಸಿ ಲೇಪಿಸುವ ಅಜಿವಾನ, ಸೈಂಧವಲವಣಾ ಒರವೆ, ವಾಯ್ವಳಂಗ, ಅಳಲಿಯ ಕಾಯಿ, ಲಶುನಗಳನ್ನು ಅರೆದು ತುಪ್ಪದಲ್ಲಿ ಕಾಸನಿಯ ಕೊಡುತ್ತಿರಲು ಮೂರು ದಿನಕ್ಕೆ ರೋಗ ಪರಿಹಾರವಾಗುವದು.

ಮನಸ್ತಂಭರಸ : ಮನಸ್ತಂಭರಸಕ್ಕೆ ಎಳ್ಳೆಣ್ಣೆ ತುಪ್ಪದಿಂದ ಮೈಮರ್ಧನೆಯನ್ನು ಮಾಡುತ್ತ ಇಟ್ಟಂಗಿಯ ಕಾವು ಕೊಟ್ಟ ಮೇಲೆ ಸಬ್ಬಸಿಗೆ ಬೀಜ, ಬಜಿ, ಸೈಂಧವಲವಣ, ಇಂಗು, ಹಿಪ್ಪಲಿ ವಿಳಂಗಾ ಜೊತೆಗೆ ಹಿಪ್ಪಲಿಯ ಮೂಲ ಪರ್ಪಾಟಂಗಳ ಈ ಮೂಲಿಕೆಗಳನ್ನು ಸಮನಾಗಿ ತುಪ್ಪದಿಂದ ಮೊದಲ ಯಾಮದೊಳಗೆ ಮೂರು ದಿನ ಕಾಸನಿಯ ಕೊಡಲು ಪರಿಹಾರವಾಗುವದು.

ಯಂತ್ರಿಕರಸ : ಈ ರೋಗಕ್ಕೆ ಎಣ್ಣೆ ತುಪ್ಪವನ್ನು ಮೈಗೆ ಮೆತ್ತಿ ಮರ್ದನಗೈದು ಇಟ್ಟಂಗಿ ಕಲ್ಲಿಂದ ಒತ್ತಿ ಕಾವನ್ನು ಕೊಟ್ಟು ಬಳ್ಳೊಳ್ಳಿ, ನಿರ್ಗುಂಡಿ ತಗ್ಗಿ, ನೆಲಬೇವು, ನೆಲಗುಳಾ, ಅತ್ತಿ ನುಗ್ಗಿಗಳ ಬೇರಿನ ತೊಗಟೆಗಳನ್ನು ಸಮಪ್ರಮಾಣದಲ್ಲಿ ಅರೆದು ತುಪ್ಪದಲ್ಲಿ ನಾಲ್ಕು ದಿನ ಕಾಸನಿಯ ಕೊಡಲು ಬೇಗನೆ ಗುಣವಾಗುತ್ತದೆ ಎಂದು ಶಾಸ್ತ್ರಕಾರರು ಅಭಿಪ್ರಾಯಪಡುತ್ತಾರೆ.

ಉತ್ಕರಣ ವಾಯು : ಈ ರೋಗಕ್ಕೆ ನುಗ್ಗಿ ಬೇರಿನ ತೊಗಟೆ, ಮುತ್ತುಕದ ಬೀಜ, ಬಳ್ಳೊಳ್ಳಿ, ಲೆಕ್ಕಿಯ ಸೊಪ್ಪು, ವಾಯುವಳಂಗ ಇವುಗಳನ್ನು ತುಪ್ಪದೊಳಗೆ ಕಾಸನಿಯ ಕೊಟ್ಟು, ಬಳಿಕ ಉತ್ತರಾಣಿ, ಮದ್ದುಗಣಿಕೆ, ನಿರ್ಗುಂಡಿ ಸಮ ಪ್ರಮಾಣದಲ್ಲಿ ಕೂಡಿಸಿ, ಔಡಲದೆಲಿಯ ಹರವಿಯೊಳಗೆ ತುಂಬಿ ಯೆಸರೆತ್ತಿ ಬೆಂದಿರುವ ಬೆನ್ನು ತಾಳುವಂತಿಕೆ ಇಡಲು ಮೇಲೆ ಅರವಿಯನ್ನು ಕಟ್ಟಿದರೆ ಗುಣವಾಗುತ್ತದೆ.

ಏಕಾಂಗವಾಯು : ಈ ರೋಗಕ್ಕೆ ಅಂಗುರದ ಗಡ್ಡೆ ಸೈಂಧವಲವಣ, ತಿಗುಡೆ, ಬಳ್ಳೊಳ್ಳಿ, ಇಂಗು, ಸಂವತ್ಸರದ ಲವಣ, ಅಜಿವಾನ ವಿಳಂಗ, ಇವುಗಳನ್ನು ಸಮಭಾಗಮಾಡಿ ತುಪ್ಪದೊಳಗೆ ಕಾಸನಿಯ ಕೊಡಲು ನಂತರ ಅಂಗಕ್ಕೆ ಎಳ್ಳೆಣ್ಣೆ ತುಪ್ಪವನ್ನು ತೊಡೆದು ಮರ್ದನೆಯ ಮಾಡಲು ಹಿಂಗದಿಕ್ಕುತ ಇಟ್ಟಂಗಿ ಕಾವು ಕೊಡಲು ಏಕಾಂಗವಾಯು ನಾಲ್ಕು ದಿನಕ್ಕೆ ಪರಿಹಾರವಾಗುವದು.

ಅಂಡವಾಯು : ಕೋಲು ಮುಕ್ಕನ ತೊಗಡೆ, ಭಜಿ, ಶುಂಠಿ, ಹಿಪ್ಪಲಿಯ ಮೂಲ, ನಿರ್ಗುಂಡಿ ಅತ್ತಿಯ ನುಗ್ಗಿ ತೇಗುಡಚೆ, ಮೇಲೆರಡುಗಳ ಏರಂಡವಿಸಿತರಬೇರು, ಸಮಗೂಡಿಸಿ ತುಪ್ಪದಿಂದ ಆಲಸ್ಯವಿಲ್ಲದೆ ಕುದುರೆಗೆ ಕಾಸನೆಯಗೊಟ್ಟು, ತೈಲಘೃತದಿ ಮೈಮರ್ದನಿಯ ಮಾಡಲು ದಿನಕ್ಕೆ ನಾಲ್ಕು ಸಲ ಉಪ್ಪಿನ ಪಟ್ಟಣದಿಂದ ಕಾವು ಕೊಡಲು ಅಂಡವಾಯು ಗುಣವಾಗುವದು.

ಯಾವಿಲವಾಯು : ಅಜಮೋದ, ಕೋಲ ಮುಕ್ಕನ ಬೀಜ, ನೆಲಬೇವು, ಅಜಿವಾನ, ಲಶುನ ಹಿಪ್ಪಲಿಯ ತನ್ಮೂಲ, ಅತಿ ಭಜಿಯು ಪರ್ಪಾಟಕ ವಿಳಂಗ, ಕಹಿಪಡುವಲವನ್ನು ಸುಟ್ಟು ಕರಕಿಂಗು, ಶುಂಠಿ,

ವಜನದಿಂದ ಸಮಪ್ರಮಾಮದಲ್ಲಿ ಕೂಡಿಸಿ ತುಪ್ಪದಿಂದ ಕಾಸನಿಯ ಮಾಡಿ ಗಜುಗ, ಅಂಕಲಿಯ ತಪ್ಪಲು, ಲವಣ ಪಟ್ಟಣದಿಂದ ನಿಜವಾಗಿ ಕಾಸಿ ಮೈಮರ್ದನೆಯನ್ನು ಮಾಡಲು ಯಾವಿಲ ವಾಯುದೋಷ ಗುಣವಾಗುತ್ತದೆ.

ಉರಕರ್ನಿಕೆಯವಾಯು : ಈ ರೋಗಕ್ಕೆ ತುಪ್ಪ ತೈಲವನ್ನು ಬೆರಸಿ ಮೈಮರ್ದನವ ಮಾಡಿ ಇಲ್ಲಣ, ಲವಣರಸ, ಪಾವು, ನುಗ್ಗಿಬೇರಿನ ತೊಗಟೆ, ಹಾವು ಮೆಕ್ಕಿ ಬೇರನ್ನು ಸಮಭಾಗದೊಳಗೆ ಅರೆದು ಬಿಸಿ ಮಾಡಿ ಸರ್ವಾಂಗವನ್ನು ಪೂಸಿ, ಮತ್ತಿರದೆ ಅಂಕಲಿ, ತೊಪ್ಪಲಲ್ಲಿ ಕಾವನ್ನು ಕೊಟ್ಟು ನಿರಂತರ ಬೊಳ್ಳುಳ್ಳಿ, ಶುಂಠಿ, ಇಂಗು, ಅಜಿವಾನ, ಲಕ್ಕಿ ಘೃತವನ್ನು ಇಡಲು ರೋಗ ಮುಖ್ಯವಾಗಿ ಗುಣಹೊಂದುವದು.

ಮುಖರೋಗ : ಬಿಸಿಗಂಜಿ, ಅಜಿವಾನ, ಸೈಂಧವ, ಸಾಸಿವೆ, ಸಬ್ಬಸಿಗೆ, ಬಿತ್ತರಿಷಿಣ, ಸಮಪ್ರಮಾಣದಲ್ಲಿ ಕೂಡಿಸಿ, ತಿಂಥಿಣಿಯ ಹಸೆಗೊಜ್ಜಿನೊಳಗಿಟ್ಟು ಕುದಿಸಿ ಮುಖಕ್ಕೆ ಲೇಪನವ ಮಾಡಿ, ಇಟ್ಟಂಗಿಯ ಕಾವನ್ನು ಝುಸಕದಿಂದ ಕೊಟ್ಟು ನಂತರ ತುಪ್ಪ, ಸಮ ತಿಲತೈಲದೊಳಗೆ ಬೆರಸಿ ಕೊಡಲು ಮುಖರೋಗ ಮೂರು ದಿನಕ್ಕೆ ಪರಿಹಾರವಾಗುವದು.

ಚೂರಂಗ ವಾಯು : ಶುಂಠಿ, ಬಜಿ, ಸಾಸಿವೆ ಶಿರಸದಬೇರು, ಬೆಳ್ಳೂಳ್ಳಿ, ನಿಂಬೆಯ ಹುಳಿಯಲ್ಲಿ ಅರೆದು ನಾಲ್ಕು ಕಾಲಿಗೆ ಲೇಪವನ್ನು ಮಾಡಿ ಯಾಲಕ್ಕಿಯಷ್ಟು ಮಧುಕ, ನಯದ ಮುಸ್ತೆಯ ಮೆಣಸು, ಕೊಂಕುಳವು, ಕೊತ್ತಂಬರಿಯ ಸಹಿತ ತುಪ್ಪದೊಳಗೆ ಕಾಸನಿಯ ಕೊಟ್ಟು ನಂತರ ಔಡಲಯಕ್ಕಿ ಎಣ್ಣೆಯನ್ನು ಕಾಲಿಗೊರಸಲು ನಾಲ್ಕು ದಿನ ಗುಣವಾಗುವದು.

ರಸಕುಂದಿಗೆ : ತ್ರಿಫಲ, ಶುಂಠಿ, ಹಿಪ್ಪಲಿ, ಮೆಣಸು, ಸಮಘೃತ ಸೇರು, ಅಜಕ್ಷೀರ, ಮತ್ತೆರಡು ಸೇರು. ಇವೆರಡನ್ನು ಕಾಸನಿಯಕೊಟ್ಟು ತ್ರಿಕಟುಕನಳ ಪಾವಜ, ಕ್ಷೀರದೊಳಶನ ಗೈದು ಸೈಂಧವ, ಅಜಿವಾನ, ಸಧ್ಯಃ ಕ್ಷಾರ, ಹಿಪ್ಪಲಿ ಟೆಂಕಣಭಾರ, ಅರಿಷಿಣವನ್ನು ಅಜಕ್ಷೀರದೊಳಗೆ ಅರೆದು ಮೈಗೆ ಲೇಪನ ಮಾಡುವದರಿಂದ ಗುಣವಾಗುತ್ತದೆ.

ಕರಕುಳಿಗಳ ಗ್ರಹ : ರಸಕುಂದಿಲಿಗೆ ಹೇಳಿದ ಔಷಧಿಯನ್ನು ಕೊಡಲು ಗುಣಮುಖವಾಗುವದು. ನೊರೆಯುವ ಕರುಳಿಳಿದು ತೊಡಕಿದ ಕುದುರೆಗೆ ಕೈಗೆ ಹರಳೆಣ್ಣೆಯನ್ನು ಬಿಡಿಸಿ ಅಂಡದ ನೀವಿ ಅರೆಮಮ್ಮಾಯಿ, ಹಿಪ್ಪಲಿಯ ಬಾಣಂತಿ ಬಾಳವದರರ್ಧ ಮತ್ತು ನಾಲ್ಕು ಸೇರು ಸರಾಯದೊಳಗೆ ಅರೆದು ಕಲಸಿಕ್ಕಲು, ಗೊಟ್ಟದಲೆತ್ತಲು ಗುಣವಾಗುವದು. ಇದಕ್ಕೆ ಗುಣವಾಗದಿದ್ದರೆ ನಾಲ್ಕು ಕಾಲನ್ನು ಕಟ್ಟಿ ಬಹುಸೂಕ್ಷ್ಮದಿಂದ ಸಿಕ್ಕಿರ್ಧ ಕರುಳ ತೊಡಕನ್ನು ಬಿಡಿಸಿ, ಕಾಲನ್ನು ಮೇಲಕೆತ್ತಿ ಅಂಡಗಳನ್ನು ಹಗರದಿಂದ ನೀವಿದು ಬಳಿಕ ವೈದ್ಯವಿಡಲು ಗುಣವಾಗುತ್ತದೆ.

ಗತ್ತ ಸಿಕ್ಕಿದ ರೋಗ : ಗತ್ತ ಸಿಕ್ಕಿದ ಕುದುರೆಗೆ ಶುಂಠಿ, ಕಾಷ್ಟ, ಜ್ಯೋತಿ, ಮತ್ತೆ ಮಿಸುನೀಯ ಸಬಕಾರ, ಜಂಪಾದಿ, ಪುನಗೆತ್ತಿದೀರ್ಯೆದು ಸಮಗೂಡಿಸಿ ನಿಂಬಿಹುಳಿಯೊಳಗೆ ಅರೆದು ತೆಂಗಿನಕಡ್ಡಿಯ ಬತ್ತಿಯನ್ನು ಮಾಡಿ ಈ ಔಷಧವನ್ನು ತೊಡದ ಮೇಲೆತ್ತಿ ಶಿಶ್ನ ರಂಧ್ರದೊಳಗೆ ಏರಿಸಿ ತೆಗೆದು ನೇತ್ರಗಳಿಗೆ ಇಂಗುಳ ಮೇಣ, ಶುಂಠಿಯನ್ನು ಜಂಭೀರ ರಸದಲ್ಲಿ ಕೊಡುವದು.

ಮೂಲವ್ಯಾಧಿ : ಮೆಲ್ಲನಂಜನವಿಡಲು ಹರಳೆಣ್ಣೆ ಎರೆಯಲು, ಸೇರುಬೆಲ್ಲ, ಬೀಜಗಳೆದು ಪುಡಿಮಾಡಿ ನೆರೆಗೊಟ್ಟದಲ್ಲಿ ಹಾಲೊಂದುವರೆ ಸೇರಿನೊಳಗೆ ಕಲಸಿ ಇಡಲು ಕುದುರೆ ಗುಣವಾಗುವದು. ಶತತೈಲವನ್ನು ಕುದುರೆಯ ಮದಗರಕ್ಕೆ, ತದ್ದಿಗೆ, ಹಳೆಹಣ್ಣು ಪದರ ರೋಗವೆಲ್ಲವುಗಳಿಗೆ ಪುರುಷ ಮೂಲವ್ಯಾಧಿ ಮೊದಲಾದವುಗಳಿಗೆ ಲೇಪಿಸುವದರಿಂದ ಗುಣಮುಖವಾಗುವದು.

ಕಾಲುಬಾಯಿಗೆ : ಮಿಸುನಿಯ ಮದ್ದು, ನಿರ್ವಿಷ, ಸಾರಂಗ, ಶೃಂಗಹಿರುಚಿಯ ಹುಲಿಯುಗುರು, ಪತ್ಯನಾಭಿ ಕುದುರೆಯ ಕೊಳಗವೆಲ್ಲವನ್ನು ಕಂಚಿ, ನಿಂಬಿಯ ಹುಳಿಯೊಳಗೆ ಅರವಂಗಳಂಗವನ್ನು ತೇಯ್ದು ಲೇಪನವ ಮಾಡಿ ನಿರ್ವಹಿಸಿ ಮಾಡುವದರಿಂದ ನಿರ್ವಾಹವಾಗುವದೆಂದು"[೧೧೬] ಶಾಲಿಹೋತ್ರ ಹೇಳಿದ ಎಲ್ಲಾ ಅಶ್ವ ಔಷಧವನ್ನು ವಿವರ ಪೂರ್ಣವಾಗಿ ಹೇಳಿದ್ದೇನೆ ಎಂದು ಶಾಸ್ತ್ರಕಾರ ಹಿರಿಯಣ್ಣ ಕವಿ ತನ್ನ ಮನದ ಇಂಗಿತವನ್ನು ಕೊನೆಯಲ್ಲಿ ಹೇಳಿಕೊಂಡಿದ್ದಾನೆ.

ಕಣ್ಣುರೋಗ : "ಕರ್ಪೂರ, ಸೈಂಧವ, ಹಿಪ್ಪಲಿ, ಜೇನುತುಪ್ಪ ಇವನ್ನು ನೊರೆಹಾಲಲ್ಲಿ ಕೂಡಿಸಿ ತುಪ್ಪ ನಿಲಲಟ್ಟು ಕಣ್ಣಿಗೆ ಹಚ್ಚಲು ಕಣ್ಣುರೋಗ ಗುಣವಾಗುವುದು.

ಚಕ್ಷುರೋಗ : ಅರಗು ತೂಕ ೧, ಅಣಿಲೆ ಕಾಯಿ ತೂಕ ೨, ತಾರೆಕಾಯಿ ತೂಕ ೩, ಮೆಣಸಿಲೆ ತೂಕ ೪, ಮೆಣಸು ತೂಕ ೫, ಹಿಪ್ಪಲಿ ತೂಕ ೬, ಶಂಖ ತೂಕ ೭, ಬೇವಿನಕಡ್ಡಿ ತೂಕ ೮, ತೂಕವನ್ನು ಕೂಡಿಸಿ ಆಡಿನ ಮೂತ್ರದಲ್ಲಿ ಅರೆದು ಕಣ್ಣಿಗೆ ಹಚ್ಚಲು ಎಲ್ಲಾ ಚಕ್ಷು ರೋಗಗಳು ಗುಣವಾಗುತ್ತವೆ. ಇದರಿಂದ ಶಾಸ್ತ್ರಕಾರರ ಪ್ರಮಾಣ ಬದ್ಧ ತಿಳುವಳಿಕೆ ಒಂದು ರೋಗವನ್ನು ಗುಣಪಡಿಸುವಲ್ಲಿ ಅವರು ವೈದ್ಯಕಾರರಂತೆ ಗೋಚರಿಸುತ್ತಾರೆ ಎಂಬುದನ್ನು ಮರೆಯುವಂತಿಲ್ಲ.

ಅರಿಗಣ್ಣು, ಪಟಲಗಣ್ಣು, ಹಕ್ಕು, ರಕ್ತ, ಮಂಜು, ಮೊಳೆ, ತಿಮಿರ, ಅರಿಗಣ್ಣು, ಹೂಗಣ್ಣು ಇವೆಲ್ಲವನ್ನು ಮೇಲಿನ ಅಂಜನದಲ್ಲಿ ಗುಣಪಡಿಸಬಹುದು.

ಕಿವಿಯ ಬೇನೆ : ಕುದುರೆಗೆ ವಾತದಿಂದಲೂ, ಶ್ಲೇಷ್ಮದಿಂದಲೂ ಕಿವಿಯಲ್ಲಿ ಬೇನೆ ಹುಟ್ಟುತ್ತದೆ. ಅದು ಪಿತ್ತವಾದರೆ ಮಾತ್ರ ಇದು ಕೆಲದಿವಸ ಮಾತ್ರ ಇದ್ದು ಬೇಗನೆ ಗುಣವಾಗುವದು.

ಕರ್ಣರೋಗ : ಅಂಬಿಲವನ್ನು ಸೋದಿಸಿ, ಹಸಿಯ ಶುಂಠಿಯನ್ನು ಜಜ್ಜುಗುಟ್ಟಿ ಹಾಕಿ ಮಾದಲದ ಹಣ್ಣಿನ ರಸವನ್ನು ಕೂಡಿಸಿ ಎಳ್ಳೆಣ್ಣೆಯನ್ನು ಬೆರಸಿ, ಕಾಸಿ ಬಿಸಿಲಲ್ಲಿಕ್ಕಿ, ಕಿವಿಯಲ್ಲಿ ಎರೆಯಲು (ಹಾಕಲು) ಕರ್ಣರೋಗ ಗುಣವಾಗುತ್ತದೆ.

ಗುದರೋಗ : ಗುದದಿಂದ ಹುಟ್ಟಿ ಮರಿಪೊರಮಡೆ ಬಿಸಿಯ ಹಾಲಲ್ಲಿ ಅದನ್ನು ತೊಳೆದು ಕಿವಿಯಲ್ಲಿಯೂ, ಗುದದಲ್ಲಿಯೂ, ಎಣ್ಣೆಯಲ್ಲಿ (ಶೇಖಂ) ಶಾಖವನ್ನು ಮಾಡುವುದು. ಅತಿ ಬಳಿದು ಅಹ ಪರಿಯಂತರ ತೊಳೆದು ತುಪ್ಪ ಸೈಂಧವ ತಣ್ಣೀರು ಇವನ್ನು ಕೂಡಿಸಿ ಒರಸಿ ತುಪ್ಪವನ್ನು ಗುದಕ್ಕೆ ಹಚ್ಚುತ್ತ ಬರಲು ಕುದುರೆಗೆ ಗೂದೆ ಹೊರಟು ಹೋಗಿ ಗುಣವಾಗುವುದು.

ಉಂಡಗೆ ಮತ್ತು ಗಂಟುರೋಗ : ಹೊಳೆಯುವ ಅಣಿಬಂಧ ಕೊಲ್ಲಗೆ ಕೊಳೆ, ಕೋಮಲಗೆಟ್ಟಿ, ಗಂಟಾದರೆ ಕುದುರೆಗೆ ಅದನ್ನು ಉಂಡಗೆ ಎಂದು ತಿಳಿದು, ಆ ಗಂಟು ಕೊಯಿದು ರಕ್ತವನ್ನು ಬಿಡಿಸಿ ಎಳ್ಳೆಣ್ಣೆಯನ್ನು ಹಚ್ಚಿ ಶೇಖವನ್ನು (ಶಾಖ) ಮಾಡಿ ನಂತರ ಶುಂಠಿ, ಅರಿಸಿನ ಇವನ್ನು ಕೂಡಿಸಿ ಗೋಮೂತ್ರದಿಂದ ಅರೆದು ವಸ್ತ್ರಗಾಳಿತವ ಮಾಡಿ ಆ ಹುಣ್ಣಿಗೆ ಕಟ್ಟಲು ಗಂಟು ಗುಣವಾಗುತ್ತದೆ.

ವಿಷಲಕ್ಷಣ : ಕುದುರೆ ಮೈ ಹೊಕ್ಕರೆ : ಮೈಯ ಶೋಭೆ ಗಂಟು ಮುಖದಲ್ಲಿ ಶ್ಲೇಷ್ಮ ಸುರಿಯುತ್ತಿರಲು ರೋಮ ಒಡೆದರೆ (ಕೂದಲು) ಬಾಲದ ಕೂದಲು, ಉದುರುವಡೆ, ನಾಲಿಗೆ ಕರಿದಾಗಿ ಇರಲು, ತಿಮಿರವಾಗಿ ಇರಲು, ಕೋಪವಾಗಿ ಕಾಣಲು, ದುಶ್ಚೇಷ್ಟಿಯಾಗಿ ಇರಲು, ವಿಷತಾಗಿದೆ ಎಂದು ತಿಳಿದು ಚಿಕಿತ್ಸೆಯನ್ನು ಕೊಡುವುದು.

ಕುದುರೆಗೆ ಹಾವು ಕಚ್ಚಿದರೆ : ಹಾವು ಕಚ್ಚಿದ ಆ ಭಾಗವನ್ನು ಕೊಯಿದು ತೆಗೆದು ಆ ವಿಷವನ್ನು ಕಳೆಯಲು ಆ ಗಾಯಕ್ಕೆ ಉಪ್ಪನ್ನು, ತುಪ್ಪವನ್ನು ಕಲಸಿ ಕಟ್ಟಲು ವಿಷವು ಇಳಿಯುವದು (ತೇರ್ಗು) ಮತ್ತೆ ಕುದುರೆಯ ಮೈಯ್ಯಗೆ ಕೆಸರನ್ನು ಬಳಿದು ಜೇನುತುಪ್ಪಗಳಿಂದ ಲೇಪಿಸಿ (ಹಚ್ಚಿ) ಕಿರುಕುಸಾಲೆಯ ಸಮೂಲವನ್ನು ತುಳಿದು ಆ ರಸವನ್ನು ತುಪ್ಪವ ಬೆರಸಿ ಎರೆಯಲು ವಿಷವು ಗುಣವಾಗುತ್ತದೆ. ಎರಡು ಸೆಳ್ಳೆಯ ತಿಗುಡನ್ನು ಆಸಡಿ, ಕಿರುಕುಸಾಲೆಯ ಬೇರು ಇವನ್ನು ಕೂಡಿಸಿ ಅಂಬಿಲದಲ್ಲಿ ಅರೆದು ಕುದುರೆಗೆ ಎರೆಯಲು ವಿಷ ಮುಕ್ತವಾಗುತ್ತದೆ. ಎಮ್ಮೆಯ ಸಗಣಿಯ ರಸವನ್ನು ಎರಡು ಮಾನ ತುಪ್ಪದಲ್ಲಿ ಕೂಡಿಸಿ ಎರೆಯಲು ವಿಷಮುಕ್ತ. ಅಂಬಿಲ ಎರಡು ಮಾನ, ನೀಲಿಯ ಸೊಪ್ಪಿನ ರಸ, ಒಂದು ಮಾನ ಇವನ್ನು ಕೂಡಿಸಿ ಎರೆಯಲು ವಿಷವಾಸಿಯಾಗುವುದು. ಕಡವದ ತಿಗಡನು ಹಿಡಿದು ತುಪ್ಪದಲ್ಲಿ ಕಲಿಸಿ ಹಚ್ಚಲು ವಿಷ ಮುಕ್ತ. ವಿಷ ಹೆಗಲತಾಗಿದ್ದರೆ ತಗ್ಗಿಯ ಸೊಪ್ಪಿನ ರಸವನ್ನು ಎರೆಯಲು ವಿಷ ಮುಕ್ತ.

ಕುಳಿಕ ಕಚ್ಚಿದರೆ : ಕುಳಿಕ ಕಚ್ಚಿದರೆ ಕುದುರೆ ನಡ ನಡುಗುವುದು. ಬಾವುದು ಕೋಪಿಯಪ್ಪುದು (ಕೋಪಹೆಚ್ಚಾಗುವುದು) ಅದಕ್ಕೆ ಏಡಿಯ ಬಿಲದ ಮಣ್ಣನ್ನು ತಂದು ಹಚ್ಚಿ, ತಗ್ಗಿಯ ಸೊಪ್ಪಿನ ರಸವನ್ನು ಕೊಡಲು ಗುಣವಾಗುವುದು.

ಹಾವು, ಚೇಳುಗಳು ಕಚ್ಚಿದರೆ : ಹಾವು ಕೆಚ್ಚೇಳುಗಳು ಕಚ್ಚಿದರೆ ಆ ಎರಡಕ್ಕೆ ಆಸಡಿಯ ಗೆಣಸು, ದಂಟು, ಎಲೆ, ಹೂವು ಕಾಯಿ, ಈ ೫ ರ ರಸವನ್ನು ಕುದುರೆಯ ಕಣ್ಣಿಗೆ ಅಂಜನಮಾಡಿ ಹಚ್ಚಿ ಮೂಗಿಗೆ ನಶ್ಯವನ್ನು ಮಾಡಿ ಒಡಲಿಗೂ ಎರೆಯಲು ವಿಷಗಳು ಗುಣವಾಗುತ್ತವೆ.

ಸ್ಥಾವರವೆಂದರೆ ಮರ, ಗಿಡ, ಬಳ್ಳಿ, ಕಾಯಿ, ಹೂವು, ಬೇರಿಂದಾದ ವಿಷಯಗಳು, ಜಂಗಮವೆಂದರೆ ಹಾವು ಮೊದಲಾದ ಕ್ರೂರ ಜೀವಿಗಳಿಂದಾದ ವಿಷ. ಈ ಎರಡು ಪ್ರಕಾರಕ್ಕೂ ಕುದುರೆ ಮನುಷ್ಯರಿಗೂ, ಕರಿಯ ನೀಲಿಯ ಬೇರನ್ನು ಅಂಬಿಲದಲ್ಲಿ ಆಗಲಿ, ಹಳೆಯ ನೀರಿಂದಲಾಗಲಿ ಅರೆದು ಎರೆಯಲು ಎಲ್ಲಾ ವಿಷಗಳು ಗುಣವಾಗುವವು.

ಹಾವು ಕಚ್ಚಿದರೆ : ಅಜಮೋದವನ್ನು ಎಮ್ಮೆಯ ರಕ್ತದಿಂದ ಅರೆದು ಕಲಸಿ ಹಚ್ಚಲು ಹಾವು ಕಚ್ಚಿದ ವಿಷವು ಗುಣಮುಕ್ತ.

ಹಾವಿನ ವಿಷ : ಕುದುರೆ ಮುಖಹೊಕ್ಕರೆ ಕೂದಲುಗಳೆಲ್ಲಾ ಒಡೆದು ಮೈಯಲ್ಲಾ ಗಂಟಾಗಿ ಮುಖವು ಬಾತು ಜೋಗ ಹೋದಂತೆ ಕುದುರೆ ಮೇಯದು. ಕುದುರೆಯ ಮೈಯೆಲ್ಲವನ್ನು ಅರಸಿನದಿಂದ ಒರಸಿ ಬಳಿಕ ಶುಂಠಿಯ ಅಂಬಲದಿಂದ ತೇಯಿದು ನಶ್ಯವನ್ನು ಮಾಡಿ ಬಣ್ಣದ ಸಿರೆಯಲ್ಲಿ ಒರೆಸಲು ವಿಷವು ಹೊರಟು ಹೋಗುತ್ತದೆ.

ಗ್ರಹಭೂತ ನಿವಾರಣೆ : ಅಡವಿಯಲ್ಲಿ, ಸುಡುಗಾಡಿನಲ್ಲಿ ಕುದುರೆ ಬೆಚ್ಚಿ ಅಂಜಿದರೆ ಅದಕ್ಕೆ ಭೂತ ಹಿಡಿದಿದೆ ಎಂದು ತಿಳಿಯುವದು. ಕುದುರೆ ತಿರುಗುತ್ತ ಬೀಳುತ್ತ ಮೈಮುಳಿದು ಹಲ್ಲುಕಚ್ಚುವುದು. ಕಣ್ಣು ಹಲವರ್ಣವಾಗಿ ಅತಿಭೀತನಾಗಿರುವುದು. ಗ್ರಹಭೂತ ಬಿಡಿಸಲು ಬೇಗನೆ ಸಮುದ್ರ ಪಾಳವನ್ನು ಮನುಷ್ಯರ ಮೂತ್ರದಿಂದ ಅರೆದು ಕುದುರೆಗೆ ನಶ್ಯವನ್ನು ಮಾಡಿ, ಅಂಜನವನ್ನು ಹಚ್ಚಲು ಗ್ರಹ ಬಿಡುವುದು. ಮೆಣಸು, ವಿಳಂಗ, ಬಜೆ, ಮೆಣಸಿಲೆ, ಚಂಗಣಗಿಲ ಕೋಷ್ಠ, ಜಟಾಮಾಂಸಿ, ಶುಂಠಿ ಇವೆಲ್ಲವನ್ನು ಅರೆದು ಪಿಂಡ ಮಾಡುವುದದರಿಂದ ಗ್ರಹದೋಷ ನಿವಾರಣೆಯಾಗುವುದು.

ಕ್ಷಯರೋಗ : ಕುದುರೆ ಖಡಕಲಾಗಿ ಮೈಯೆಲ್ಲ ಸೆರೆವರಿದು ಮೇಯದೆ ಅಳಿಮೇಹ ಮೇಯದೆ ಧ್ಯಾನಿಸುತಿರಲು, ಮೂಗಿನಲ್ಲಿ ನಾರುತಿರಲು ಅದಕ್ಕೆ ಕ್ಷಯರೋಗ ಬಂದಿದೆ ಎಂದು ತಿಳಿಯುವದು. ಕರಿಯೆಕ್ಕೆಯ ಹುಲ್ಲು, ಕಲ್ಲುಪ್ಪನ್ನು ಅಂಬಿಲದಲ್ಲಿ ಕಲಿಸಿ ಕೊಡಲು ಕುದುರೆಯ ಕ್ಷಯರೋಗ ಗುಣವಾಗುತ್ತದೆ. ಹೆಗ್ಗುಳ, ನೆಲೆಗುಳ್ಳ, ತ್ರಿಫಲೆಯರಸ, ಚಿತ್ರಮೂಲದ ಬೇರು ಇವೆಲ್ಲವನ್ನು ಕೂಡಿಸಿ ಕೊಡಲು ಆರೋಗ್ಯ ಸುಧಾರಿಸುವುದು ಜೊತೆಗೆ ಕ್ಷಯರೋಗವಾಸಿಯಾಗುವುದು. ಹೇಮವರ್ಣ ನೀಲ, ಕಪ್ಪು, ಕೆಂಪು, ಹಸುರು, ಈ ೫ ವರ್ಣದ ಗುಗ್ಗುಳದ ಪರೀಕ್ಷೆಯನ್ನು ನೋಡುವದು.

ಸರ್ವರುಜೆ : ಕಿರುಗುದುರೆ ಮೆಣಸಿಲೆಯನ್ನು ೬೦ ತೂಕವನ್ನು ಇಪ್ಪತ್ತೊಂದು ದಿನ ಪರಿಯಂತರ ಕೊಡುವುದು ಅದರಿಂದ ದೊಡ್ಡ ಕುದುರೆಗೆ ೮ ತೂಕದ ಮೆಣಸಿಲೆಯನ್ನು ೨೧ ದಿನ ಓಗರದಲ್ಲಿ ಕೊಡುವುದು. ಹಿರಿಯ ಕುದುರೆಗೆ ೧೦೦ ತೂಕವನ್ನು ೨೧ ದಿನ ಕ್ರಮದಲ್ಲಿ ಕೊಡಲು ಸರ್ವರುಜೆ ಗುಣವಾಗುವುದು. ಅಣಲೆಯ ಕಾಯಿ ತುಪ್ಪವನ್ನು ಕೂಡಿಸಿ ದಿನ ೧ಕ್ಕೆ ಕಾಯಿ ೫, ಎರಡನೆ ದಿನಕ್ಕೆ ಕಾಯಿ

೧೦, ಮೂರನೆ ದಿನಕ್ಕೆ ಕಾಯಿ ೧೫, ನಾಲ್ಕನೇ ದಿನಕ್ಕೆ ಕಾಯಿ ೨೦, ಐದನೆ ದಿನಕ್ಕೆ ಕಾಯಿ ೨೫, ಈ ಕ್ರಮದಲ್ಲಿ ಇಕ್ಕಿ ಆರನೆಯ ದಿನಕ್ಕೆ ೨೦, ಏಳನೇ ದಿನಕ್ಕೆ ೧೫, ಎಂಟನೆಯ ದಿನಕ್ಕೆ ೧೦, ಒಂಬತ್ತನೆಯ ದಿನಕ್ಕೆ ೫ ಕಾಯಿ ಆ ಪ್ರಕಾರದಲ್ಲಿ ತುಪ್ಪಬೆರಸಿ ಕೊಡುವುದು ಹೀಗೆ ಕೊಡುವುದರಿಂದ ಸಕಲ ವ್ಯಾಧಿಗಳು ಗುಣವಾಗುವವು.

ಸರ್ವರೋಗಗಳು : ರಾಶ್ಮ, ಆಡಸೋಗೆ, ಸಬ್ಬಸಿಗೆ, ಬೆಲ್ಲವಿತ್ತದ ತಿಗುಡು, ಪದ್ಮಕ ಶುಂಠಿ, ಭದ್ರಮಸ್ತೆ, ತೊಟ್ಟಿಲಬೇರ, ಬಳ್ಳಿದುರುಚೆ ಸಮೂಲ, ವಾಯುವಿಳಂಗ, ತುಗ್ಗಿಯಮೂಲ, ಅವುಡಲಕನ ಬೇರು. ನೆಗ್ಗಿಲಸಮೂಲ, ನೆಲಗುಳ್ಳದ ಹೆಗ್ಗುಳದ ಸಮೂಲ ಇವನ್ನು ತಂದು ಕುಟ್ಟಿ ಉದಕದಲ್ಲಿ ಕಷಾಯವನ್ನು ಮಾಡಿ, ಆ ಕಷಾಯವನ್ನು ಕುಡಿಸಲು ಕುದುರೆಗೆ ಸಕಲ ರೋಗಗಳು ಗುಣವಾಗುತ್ತವೆ. ಹಾಗೆಯೇ ಚವೆ, ಚಿತ್ರಮೂಲ, ಮರದರಿಸಿನ, ಅಗಳ, ಶುಂಠಿ, ತೊಲೆಗಂಟು, ಭಾರಂಗಿ, ತ್ರಿಫಲೆ, ತ್ರಿಕಟುಕ, ವಾಯಿವಳಂಗ, ಕೋಷ್ಟಕಾಷ್ಟ, ಜ್ಯೋತಿ, ಹಿಪ್ಪಲಿಯಮೂಲ, ಅತಿಬಜೆ, ರಸ್ಮಿ ಇವುಗಳನ್ನು ಎರಡೆರಡು ಸೇರು, ಪಾವು, ಚವಿ, ಭಂಗಿ, ಅಳಿವೆಬೀಜ, ಕಾಯಿ, ಪತ್ರಿ, ಅರಪಾವು, ಲವಂಗ ಪಾವು, ಲವಂಗದ ಸೆಕ್ಕೆ, ಸೇರು ಜಾಪತ್ರೆ, ಅರಸೇರು ಇವೆಲ್ಲವುಗಳನ್ನು ಇಪ್ಪತ್ತೊಂದು ಜಿನಸುಗಳನ್ನು ಸಮಮಾಡಿ ತವಕದಿಂದ ಸಣ್ಣ ಚೂರ್ಣವನ್ನು ಮಾಡಿಟ್ಟುಕೊಂಡು ಪ್ರತಿ ದಿನಕ್ಕೊಂದು ಪಾವಿನ ಪ್ರಮಾಣದಲ್ಲಿ ಘೃತ, ಮದುವಿನೊಳಗೆ ಕೊಡುವುದರಿಂದ ರವಿವಾರ ಆದಿಯಾಗಿ ಎರಡು ಹೊತ್ತು ವಾರಕ್ಕೆ ಮೇಯಿಸುವುದರಿಂದ ಸರ್ವರೋಗಗಳು ಮಾಯವಾಗಿ ಜವಗುಂದದಲೆ ಚಮತ್ಕೃತಿಯಿಂದ, ಹಂಸಗಳವಳದಿಂದ ಕಾಣುವವು.

ಅರ್ಕಧಾನ್ಯವನ್ನು ತಂದು ಅತೀಸೂಕ್ಷ್ಮದಿಂದ ಮಾಡಿ ಅರ್ಕದಕ್ಷೀರದಿಂದ ಮಿದಿದು ಚರ್ಕದ ಮೇಲೆ ಅರ್ಕಪತ್ರವನ್ನು ಕವಚಿ ಉಪ್ಪಿನ ಬೆರಣಿಯಲ್ಲಿ ಕುಕ್ಕುಟ ಪುಟವನಿಡಲು ನಂತರ ಕರ್ಕನವನ್ನು ಮಧುವಿನಲ್ಲಿ ಕಲಿಸಿ, ಘಟಿಕಿಯ ಮಾಡಿ ಅರ್ಕಸೊಂಕದಲೆ ಶುಷ್ಕಗೊಳಿಸಲು ಕುಸುಮ ಸಂಪರ್ಕ ಮೊಸದಿರಲು ಹರಿಲೋಚನಕೆ ಜಂಭೀರ ರಸದಿಂದ ಹಚ್ಚಲು ಗುಣವಾಗುತ್ತದೆ. ಹೀಗೆ ಮಾಡುವುದರಿಂದ ಹಚ್ಚರೋಗ ಗುಣವಾಗುವದು."[೧೧೪]

ಘೃತ, ಕ್ಷೀರ, ದುಗ್ಧಪಾನಗಳನ್ನು ಯುಕ್ತಾಯುಕ್ತತೆಯನ್ನು ಅರಿತು ನಡೆಸಬೇಕಾಗುತ್ತದೆ. ಕುದುರೆಯನ್ನು ಕಟ್ಟುವ ಗೂಟ ಚೂಪಾಗಿರಬಾರದು ಅಲ್ಲದೆ, ಮಲಗುವ ಜಾಗವನ್ನು ಕುಳಿತೆವರಿಲ್ಲದಂತೆ ಮಾಡಿ ಕಲ್ಲಿನಿಂದ ಕಟ್ಟಿಸಬೇಕು. ಮಳೆಗಾಲದಲ್ಲಿ ಸೋರದ, ನಿವಾತವಪ್ಪ ಜಾಗದಲ್ಲಿ ಕುದುರೆಯನ್ನು ಕಟ್ಟಬೇಕು. ಮಾಗಿಯಲ್ಲಿ ಆತಪ ಛಾಯಾಗಾರ ಮತ್ತು ಗ್ರೀಷ್ಮದಲ್ಲಿ ಸುಸ್ಥಾನದಲ್ಲಿ ಕಟ್ಟಬೇಕು. ಬಿಸಿಲು, ಗಾಳಿ, ಮಳೆಗಳಲ್ಲಿ ಕುದುರೆಗಳನ್ನು ಬಿಡಬಾರದು. ಉದಾಹರಣೆಗಾಗಿ ಪದ್ಯವೊಂದು ಕುದುರೆಯ ರಕ್ಷಣೆಯನ್ನು ಕುರಿತು ಹೀಗೆ ಸ್ಪಷ್ಟಪಡಿಸುತ್ತದೆ.

"ಕಡುಬಿಸಿಲೊಳ್ ಕಡುಮಳೆಯೊಳ್
ಕಡು ಗಾಳಿಯೊಳಿರಿ ಸಲಾಗದಿರ್ದೊಡೆ ಕುತ್ತ

ಕ್ಕೆಡೆಯಕ್ಕುಮದಟ್ ನಿಂಬಾ
ದೆಡೆಯೊಳ್ ಕಟ್ಟುವುದು ಕಲಿತ ಯೋಗ್ಯಾಲಯದೊಳ್ (೭-೭)
ತುರಗದುರದುದ್ದಮಾಳ್ಪುದು
ಚರಣೆಯನದ ಜೊಳಗು ಹಸ್ತ ವಿಸ್ತಾರಂ ಮ
ತ್ತೆರಡುಂ ಕೆಲದೊಳ್ ಮುಂಡಿಗೆ
ಗೊರಗಲುಚಿತ ಮಾಗೆ ಮಾಡುವುದು ಮಂದಿರಮಂ’’ (೭-೮)

ಕುದುರೆಯನ್ನು ಕಡುಬಿಸಿಲಿನಲ್ಲಿ, ಕಡುಮಳೆಯಲ್ಲಿ, ಕಡಗಾಳಿಯಲ್ಲಿ ಕುದುರೆಗಳನ್ನಿರಿಸಿದರೆ ಅದರಿಂದ ವ್ಯಾಧಿ ಹುಟ್ಟಿ ಅನಾರೋಗ್ಯದಿಂದ ಬಳಲುತ್ತದೆ. ಆದ್ದರಿಂದ ಕಾಲಗಳನ್ನು ಅರಿತು ಉತ್ತಮವಾದ ಸ್ವಚ್ಛತೆಯುಳ್ಳ ಸ್ಥಳಗಳಲ್ಲಿ ಕಟ್ಟುವುದು ಸೂಕ್ತ. ಹಾಗೆಯೇ ಚರಣೆಯನ್ನು ಅದರ ಉರದುದ್ದವಾಗಿ ಒತ್ತೋಳ ನೀಲದಲ್ಲಿ ಎರಡು ಕಡೆಯಲ್ಲಿ ಮುಂಡಿಗೆಗಳ ಶಿರದ ಉದ್ದವನ್ನು ಗಮನಿಸಿ ನೆಟ್ಟು ನಂತರ ಲಾಯವನು ಮಾಡುವುದರಿಂದ ರಕ್ಷಣೆಯಾಗುವುದರ ಜೊತೆಗೆ ಆರೋಗ್ಯವಾಗಿರಲು ಸಾಧ್ಯವಾಗುತ್ತದೆ. ಪರಿಚಾರಕನಾದವನು ದೈನಂದಿನ ಕೆಲಸವೆಂದರೆ ಖುರವನ್ನು ಶೋಧಿಸುವುದು. ಹಗಲು, ಇರುಳು ಮಂದದಿಂದ ಹೊರಗೆ ತಂದು ಸಮತಲ ನೆಲದಲ್ಲಿ ಹೊರಳಿಸುವುದು, ಒರೆಸುವುದು, ಕುದುರೆಯನ್ನು ಏರುವವನು ಐದು ಬಲಗಳನ್ನು ಅರಿತವನಾಗಿರಬೇಕು.

ಚೈತ್ರ, ವೈಶಾಖ ಮಾಸಗಳಲ್ಲಿ ಸುರಾಪಾನದ ಜೊತೆಯಲ್ಲಿ ತ್ರಿಫಲವನ್ನು ಕುಡಿಸುವುದರಿಂದ ಅದು ರುಜಾಪಹಾರ ಮತ್ತು ಬಲಕರವಾಗುತ್ತದೆ. ಜ್ಯೇಷ್ಠ, ಆಷಾಢದಲ್ಲಿ ಕರ್ಕಾಟಕ ವಾಣಿಯೊಡನೆ ಕೊಟ್ಟರೆ ಕುದುರೆಗೆ ಸಂತುಷ್ಟಮನ ಮತ್ತು ಪುಷ್ಟಿವರ್ಧನವಾಗುತ್ತದೆ. ಶ್ರಾವಣ, ಭಾದ್ರಪದ ಮಾಸಗಳಲ್ಲಿ ಸಧ್ಯಃ ಕ್ಷಾರದೊಡನೆ ಕೊಟ್ಟರೆ ಕುದುರೆಗೆ ಬಲ ಹೆಚ್ಚುತ್ತದೆ. ಆಶ್ವಯುಜ, ಕಾರ್ತಿಕಗಳಲ್ಲಿ ತ್ರಿಫಲ ಮತ್ತು ಹಾಲನ್ನು ಕೊಟ್ಟರೆ ಉತ್ತಮ, ಮಾರ್ಗಶಿರ, ಪುಷ್ಯ ಮಾಸಗಳಲ್ಲಿ ದಧಿಸಮನ್ವಿತವಾಗಿ, ಮಾಘ, ಫಾಲ್ಗುಣಗಳಲ್ಲಿ ತ್ರಿಫಲೆಯನ್ನು ಎಣ್ಣೆಯೊಡನೆ ಕೊಡುವುದು ಯೋಗ್ಯ. ಕುದುರೆ ಬಡವಾದರೆ, ಅಧ್ವಾನದಲ್ಲಿ ನೊಂದರೆ, ಯುದ್ಧದಲ್ಲಿ ಗಾಯಗೊಂಡರೆ ಏಳು ದಿವಸ ದುಗ್ಧೋದಕವನ್ನು ಕೊಡಬೇಕು. ನೀರನ್ನು ಕುಡಿಸುವಂತೆ ಹಾಲನ್ನು ಕುಡಿಸಬೇಕು. ಉಪ್ಪನ್ನು ಕೊಟ್ಟ ದಿವಸ ಹಾಲನ್ನು ಕುಡಿಸಬಾರದು. ಹಾಗೆಯೇ ಕ್ಷೀರ ಮತ್ತು ಬೆಲ್ಲದ ಕ್ಷೇತ್ರದಲ್ಲಿ ಲವಣ ಅತ್ಯಂತ ಉಪಯುಕ್ತವಾದದ್ದು, ಜೊತೆಗೆ ಚೆನ್ನಾಗಿ ಬೆಳೆದ ಹೊಲದಕಡಲೆ ಕೊಡುವುದು ಉತ್ತಮವಾದ ವಿಧಾನ. ಹುಳುಬಿದ್ದ ಹೊಲದ, ಸಾರಸತ್ವವಿಲ್ಲದ, ಬೆಳ್ಳನೆಯ ಕಡಲೆಗಳನ್ನು ಕೊಡಬಾರದು. ಯಾವ ಯಾವ ಪ್ರದೇಶದಲ್ಲಿ ಯಾವ ಯಾವ ಆಹಾರವನ್ನು ಬೆಳೆಯುತ್ತಾರೋ ಅದನ್ನು ಅರಿತು ಔಷಧವನ್ನು ಕೊಡಬೇಕು.

ತ್ರಿದೋಷಹರ, ಆರೋಗ್ಯಕರ, ಕಫಹರ, ಸರ್ವರೋಗಹರ, ಖಾಸವಿನಾಶ, ಅಗ್ನಿದೀಪನ, ಪಿತ್ತನಾಶ, ರಕ್ತಪಿತ್ತಾಪಹರ ಮುಂತಾದ ಪಿಂಡಗಳನ್ನು ತಯಾರಿಸಿ ಕೊಡಬೇಕು. ಇಂಗ್ವಾದಿಪಿಂಡವನ್ನು ಬಿಸಿನೀರಿನಲ್ಲಿ ಕೊಡಲು ವಾತ ಕಡಿಮೆಯಾಗುವದು. ಅಲ್ಲದೇ ತಣ್ಣೀರಿನಿಂದ ಕೊಟ್ಟರೆ ವಾತ ಕಡಿಮೆಯಾಗುತ್ತದೆ. ಕಷಾಯ ಮತ್ತು ಹಸುವಿನ ಹಾಲಿನಿಂದ ಶ್ಲೇಷ್ಮ ಕೆಡುತ್ತದೆ. ಬಡವಾದ ಕುದುರೆಗಳನ್ನು ತಿಳಿದು ಉಪಚರಿಸಿದರೆ ಒಳ್ಳೆಯದು. ಜವೆಯನ್ನು ಖಾಣಗಟ್ಟುವಲ್ಲಿ ಉವಿಯನ್ನು ಕಳೆದು ಕಟ್ಟಬೇಕು. ಹೆಸರು, ತೊಗರಿ, ಉದ್ದು, ಗೋಧುವೆಯನ್ನು ಆಹಾರವಾಗಿ ಕೊಡುವುದರ ಜೊತೆಗೆ ತೊಳಸಿ ಕಟ್ಟಬೇಕು. ನೆನೆಹಾಕಿದ ಕಡಲೆಯನ್ನು ಕುದುರೆಗೆ ಕೊಡಬೇಕು. ಮಳೆ, ದುರ್ದಿನ, ಗಾಳಿಯ ದಿವಸಗಳಲ್ಲಿ ಕಡಲೆಯನ್ನು ಕೊಡಬಾರದು. ನೆಂದದ್ದು, ಅಡಿಗಟ್ಟು, ಹುಳುತಿಂದದ್ದು, ಮುಗ್ಗಿದ್ದು, ಬೆಂದದ್ದು, ಬೂಷ್ಟ ಬಂದದ್ದು, ಮೊಳೆ ಹೋದದ್ದನ್ನು ಖಾಣವಾಗಿ ಕುದುರೆ ಕಟ್ಟಬಾರದು. ಬರಗು, ಎಳ್ಳು, ಕೊರೆ, ಪಾಕು, ಅಗಸೆ, ಕುಸುಬೆ, ಕಳಲೆ, ನೆಲ್ಲು, ಸಾವೆಗಳು ಕುದುರೆಗೆ ಅಹಿತಕರವಾದವುಗಳು ಕೊಡಬಾರದು. ಕುದುರೆಗಳಿಗೆ ದೊಡ್ಡದಾದ ಮಡು, ತೊರೆ, ಕೆರೆ, ಬಾವಿ, ಚಿಲುಮೆಗಳ ನೀರನ್ನು, ಹರಿಯುವ ನೀರನ್ನು ಕುಡಿಸಬೇಕು. ಕದಡಿದ್ದು, ಎಲೆಕೊಳೆತದ್ದು, ಹುಳಿತದ್ದು, ಹಾವಸೆ, ಪಂಕವಲಿ, ಕಲಂಕ, ಕ್ರಿಮಿಯಿಂದ ಕೂಡಿದ ನೀರನ್ನು ಕುಡಿಸಬಾರದು. ಹಾಗೆ ಕುಡಿಸಿದರೆ ಮಂದಾಗ್ನಿಯಾಗಿ ಆಹಾರವನ್ನು ಸೇವಿಸದೆ ಧಾತುಗಳು ಬಂಧಿಸುತ್ತವೆ. ಇದರಿಂದ ಕುದುರೆಗೆ ಹಾನಿಯಾಗುವುದು.

ಕೆಟ್ಟ ನೀರಿನಿಂದ, ಆಹಾರದಿಂದ, ಬಿಸಿಲಿನಿಂದ ಮತ್ತು ಅಸಮರ್ಥ ಆರೋಹಕನಿಂದನ ಕುದುರೆ ಕ್ಷೀಣಿಸುತ್ತದೆ. ರೋಗದಿಂದ ಸಾಯುತ್ತದೆ. ಕುದುರೆಯನ್ನು ಏರುವಲ್ಲಿ ಅವಮಾನಿಸಬಾರದು. ಕುದುರೆಗೆ ಗಂಧ, ಮಾಲೆ, ಆಭರಣ, ಖಾಣ, ಪಾನ, ಭೋಜನ ಅಶಯನಗಳಲ್ಲಿ ಆದರವನ್ನು ಮಾಡುವ, ಒಡೆಯನ ಶತ್ರುಗಳನ್ನು ಸಮರಾಂಗಣದಲ್ಲಿ ಕುದುರೆ ಕೊನೆಗಾಣಿಸುತ್ತದೆ. ದೂರ ಪ್ರಯಾಣ, ಬೇಟೆ, ವಿನೋದ ಕಾರ್ಯ, ದೊಡ್ಡಯುದ್ಧ, ಸೈನಿಕರು ಮತ್ತು ಮದಸಿದ ಆನೆಗಳು ಸುತ್ತಿ ಮುತ್ತಿದ ಸಂದರ್ಭದಲ್ಲಿ ಕುದುರೆ ತನ್ನ ಒಡೆಯರ ಮನೋವಕ್ಕಾಯ ಕರ್ಮಗಳು ಊರ್ಜಿತವಾಗುವ ಹಾಗೆ ಉತ್ಸಾಹವನ್ನುಂಟು ಮಾಡುತ್ತದೆ.

ರಾಜನಾದವನು ತನ್ನ ಶ್ರೀಯನ್ನು ಮರೆಯಲು, ನೆಲವನ್ನು ಕಾಪಾಡಿಕೊಳ್ಳಲು, ಶತ್ರುಗಳನ್ನು ಜಯಿಸಲಿಚ್ಛಿಸುವುದಾದರೆ ಆಜಾನೇಯ ಕುದುರೆಯನ್ನು ಸಾಕಬೇಕು. ನಿತ್ಯವೂ ಕುದುರೆಯನ್ನು ಪೂಜಿಸಬೇಕು. ಹಬ್ಬಗಳಂದು ಆರತಿ ಮಾಡಬೇಕು. ಉದಯಕಾಲದಲ್ಲಿ ಶುಭ ಲಕ್ಷಣವುಳ್ಳ ಕುದುರೆಗಳನ್ನು ನೋಡಬೇಕು. ವಿಜಯಾಕಾಂಕ್ಷಿಯಾದ ದೊರೆ ಆನೆ, ಕುದುರೆಗಳಿಗೆ ಸ್ನಾನ, ಆಹಾರ ಮುಂತಾದವನ್ನು ನಡೆಸದೆ ತಾನು ಏನನ್ನೂ ಮಾಡಬಾರದು. ಯುದ್ಧದಲ್ಲಿ ಜಯಿಸಲು ಕುದುರೆಯೇ ಮುಖ್ಯವಾದುದರಿಂದ ಬುದ್ಧಿವಂತನಾದವನು ಕುದುರೆಯನ್ನು ಸಾಕಬೇಕು. ಕ್ರೂರಾಯುಧಗಳಿಂದ ಜರ್ಝರಿತವಾಗಿದ್ದರೂ ಬೆನ್ನಿನ ಮೇಲೆ ಯಜಮಾನಿದ್ದರೆ ಕುದುರೆ ಶತ್ರುಪಾಳೆಯವನ್ನು ದಾಟುತ್ತದೆ.”[೧೧೬]

ಹೀಗೆ ಆರು ಋತುಗಳಲ್ಲಿಯೂ ಕುದುರೆಗೆ ಬೇರೆ ಬೇರೆ ಔಷಧವನ್ನು ಕೂಡಿಸಿ ಕೊಡುವುದರಿಂದ ಉತ್ತಮವಾದ ಪೋಷಣೆ ಮಾಡಿದಂತಾಗುತ್ತದೆ.

ಹೀಗೆ ಪ್ರಾಚೀನ ಕಾಲದಿಂದ ಕುದುರೆಯನ್ನು ಅತ್ಯಂತ ಪ್ರೀತ್ಯಾದರಗಳಿಂದ ನೋಡಿಕೊಂಡು ಬಂದ ರಾಜ ಮಹಾರಾಜರು, ಶ್ರೀಮಂತರು, ಸಾಮಾನ್ಯವರ್ಗದವರೂ ಸಹ ಅವುಗಳನ್ನು ಉಪಚರಿಸುತ್ತಾ ಬಂದಿದ್ದಾರೆ. ಗಿಡಮೂಲಿಕೆಗಳಿಂದ ತಯಾರಿಸಿದ ಔಷಧ ಪದ್ಧತಿ ಹೆಚ್ಚು ಮನ್ನಣೆಯನ್ನು ಹಿಂದಿನಿಂದ ಹಿಡಿದು ಇಂದಿನವರೆಗೆ ಪಡೆದುಕೊಂಡು ಬಂದಿದೆ. ಶಾಲಿಹೋತ್ರನನ್ನು ಅನುಸರಿಸಿ ಬರೆದ ಎಲ್ಲಾ ಶಾಸ್ತ್ರಕಾರರು ಅಲ್ಪಸ್ವಲ್ಪ ಬದಲಾವಣೆ ಮಾಡಿಕೊಂಡು ತಮಗೆ ಹೊಳೆದ ಹೊಸ ಆಲೋಚನೆಗಳನ್ನು ಪ್ರಯೋಗಮಾಡಿ ಅದರಿಂದ ರೋಗಗಳಿಗೆ ಚಿಕಿತ್ಸೆ ಕಂಡುಕೊಂಡಿದ್ದಾರೆ. ಚಾವುಂಡರಾಯ ಕೊಡುವ ರೋಗಗಳ ಪಟ್ಟಿಗೂ ಮತ್ತು ಆನಂತರ ಬಂದ ಶಾಸ್ತ್ರಕಾರರ ರೋಗದ ಪಟ್ಟಿಗೂ ಬದಲಾವಣೆ ಕಂಡು ಬರುತ್ತದೆ. ಔಷಧ ಕೊಡುವ ವಿಧಾನದಲ್ಲಿಯೂ ಸಹ ಭಿನ್ನತೆಯನ್ನು ಕಾಣುತ್ತೇವೆ. ಉದಾಹರಣೆಗೆ ಸೆಂಬರೋಗ, ಖಾಸರೋಗ ಮತ್ತು ಚಿಕಿತ್ಸೆ ಕುರಿತು ಯಾವ ಶಾಸ್ತ್ರಕಾರ ಹೆಸರಿಸುವುದಿಲ್ಲ. ಚಾವುಂಡರಾಯನೊಬ್ಬನೆ ಹೆಸರಿಸಿದ್ದಾನೆ. ಆದ್ದರಿಂದ ಈ ರೋಗಗಳು ಅವನ ಕಾಲದಲ್ಲಿಯೇ ಹೆಚ್ಚು ಪ್ರಚಲಿತವಿದ್ದು ನಂತರ ದಿನಗಳಲ್ಲಿ ಮಾಯವಾಗಿರುವಂತೆ ಕಾಣುತ್ತದೆ. ಆದರೆ ವಾತ, ಪಿತ್ಥ, ಕಫ, ಶಾಲಿಹೋತ್ರನಿಂದ ಹಿಡಿದು ಇಂದಿನ ವರೆಗೂ ಇವುಗಳ ಲಕ್ಷಣ ಕಂಡುಬರುವುದರಿಂದ ಇವು ಎಲ್ಲಾ ಕಾಲಕ್ಕೂ ಹರವು ಪಡೆದುಕೊಂಡಿವೆ ಎಂಬುದು ವಿಧಿತವಾಗುತ್ತದೆ. ತುರಿಕೆ, ಕಜ್ಜಿ, ಹುಣ್ಣುಗಳು ಎಲ್ಲಾ ಕಾಲದಲ್ಲೂ ಪ್ರಚಲಿತವಿರುವಂತಹ ರೋಗಗಳು. ಹಿರಿಯಣ್ಣ ಕವಿಯು ಕೊಡುವ ಶೂಲಿಗಳ ಪ್ರಕಾರಗಳು, ಚಾವುಂಡರಾಯ ಮತ್ತು ಅಭಿನವಚಂದ್ರ, ಬಾಚರಸ ಮುಂತಾದ ಶಾಸ್ತ್ರಕಾರರಲ್ಲಿ ಅಷ್ಟೊಂದು ಪ್ರಾಮುಖ್ಯತೆಯನ್ನು ಪಡೆದುಕೊಂಡಿಲ್ಲ. ವಾತರೋಗದ ಕುರಿತು ರಾಮಚಂದ್ರ, ಮೂರನೇ ಸೋಮೇಶ್ವರ, ಹಿರಿಯಣ್ಣ ಕವಿ ಹೆಚ್ಚು ಚರ್ಚಿಸಿದ್ದಾರೆ. ಸುಭಿಕ್ಷವರ್ತರೋಗ, ಸಿಂಹಾಣಕರೋಗ, ಕಾಸ, ಬಿಕ್ಕಳಿಗೆ, ಸರ್ವಜ್ಞ ಸೋಮೇಶ್ವರನಲ್ಲಿ ಕಾಣಬರುತ್ತವೆ. ಇವುಗಳ ಕುರಿತು ಚಾವುಂಡರಾಯನಲ್ಲಿ ಕಂಡುಬರುವುದಿಲ್ಲ. ಸೋಮೇಶ್ವರ ಉತ್ಕರ್ಣರೋಗವನ್ನು ವಿಶೇಷವಾಗಿ ಹೆಸರಿಸಿದ್ದಾನೆ. ಕುದುರೆಗೆ ಬರುವ ಬಾವು ರೋಗವನ್ನು ರಾಮಚಂದ್ರಕವಿ ವಿಶೇಷವಾಗಿ ಚರ್ಚಿಸಿದ್ದಾನೆ. ಅಭಿನವಚಂದ್ರ ವಜ್ರಕೀಟವೆಂಬ ರೋಗವನ್ನು ಗುರುತಿಸಿ ಅದಕ್ಕೆ ಪರಿಹಾರ ನೀಡಿದ್ದಾನೆ. ಈ ರೋಗ ಎಲ್ಲಿಯೂ ಪ್ರಸ್ತಾಪಗೊಂಡಿರುವುದಿಲ್ಲ. ಆದ್ದರಿಂದ ಇದು ೧೨ರಿಂದ ೧೪ನೇ ಶತಮಾನದಲ್ಲಿ ಮಾತ್ರ ಪ್ರಚಲಿತವಿತ್ತೆಂದು ವಿಧಿತವಾಗುತ್ತದೆ. ಅಭಿನವಚಂದ್ರ ಹರಿಣರೋಗ, ತಾಳುರೋಗ, ಕೂರ್ಚರೋಗ, ಶೋಭೆರೋಗದ ಕುರಿತು ಹೆಚ್ಚು ವಿಶ್ಲೇಷಿಸಿದ್ದಾನೆ. ಈ ರೋಗಗಳು ಉಳಿದ ಶಾಸ್ತ್ರಕಾರರಲ್ಲಿ ಕಾಣಸಿಗುವುದಿಲ್ಲ. ಅತಿಸಾರ, ರಕ್ತಾತಿಸಾರ, ವಾತಾತಿಸಾರ ಈ ರೋಗಗಳು ಹೆಚ್ಚಾಗಿ ಎಲ್ಲ ಶಾಸ್ತ್ರಕಾರರು ಪ್ರಸ್ತಾಪಿಸಿದ್ದಾರೆ. ಮೃಗಜೃಂಭರೋಗ ಅಭಿನವಚಂದ್ರನಲ್ಲಿ ಮಾತ್ರ ಕಂಡು ಬರುತ್ತದೆ. ಜಲಗರರೋಗ, ನಾಳೀವ್ರಣ ಸಹ ಅಭಿನವಚಂದ್ರನಲ್ಲಿ

ಬಳಕೆಯಾಗಿರುವ ರೋಗಗಳು. ಕುದುರೆಗಳಿಗೆ ಗಂಟುಗಳು ಕಾಣಿಸಿಕೊಳ್ಳುತ್ತವೆ. ಇವುಗಳನ್ನು ಹಿರಿಯಣ್ಣ ಕವಿ ಮಾತ್ರ ಗುರುತಿಸಿದ್ದಾನೆ. ಮೂಲವ್ಯಾಧಿ, ಕಾಲುಬಾಯಿರೋಗ, ಗತ್ತಸಿಕ್ಕದ ರೋಗದ ಕುರಿತು ಹಿರಿಯಣ್ಣ ಕವಿಯಲ್ಲಿ ಮಾತ್ರ ಮಾಹಿತಿ ಸಿಗುತ್ತದೆ. ಉಳಿದವರಲ್ಲಿ ಇದರ ಉಲ್ಲೇಖ ಕಂಡುಬರುವುದಿಲ್ಲ. ಕಣ್ಣುರೋಗ, ಕಿವಿಯ ಬೇನೆ, ಕರ್ಣರೋಗ, ಗುದರೋಗ, ಅಭಿನವಚಂದ್ರ ಮಾತ್ರ ಹೆಸರಿಸಿದ್ದಾನೆ. ಕುದುರೆಗೆ ಹಾವು ಕಡಿತ, ಚೇಳು ಕಡಿತ, ವಿಷದೋಷಗಳನ್ನು ಕುರಿತು ಅಭಿನವಚಂದ್ರ ವಿಶೇಷವಾಗಿ ಔಷಧಗಳನ್ನು ಕಂಡುಕೊಂಡಿದ್ದಾನೆ. ಇದರ ಪ್ರಸ್ತಾಪ ಉಳಿದ ಯಾವ ಶಾಸ್ತ್ರಕಾರರಲ್ಲೂ ಕಂಡು ಬರುವುದಿಲ್ಲ, ಹೀಗೆ ಅಶ್ವಶಾಸ್ತ್ರಕಾರರು ಕುದುರೆಯ ಪ್ರಾಮುಖ್ಯತೆಯನ್ನು ಅರಿತು ವೈದ್ಯೋಪಚಾರದ ಕಡೆಗೆ ಹೆಚ್ಚು ಒಲವು ತೋರಿದಂತೆ ಕಂಡುಬರುತ್ತದೆ. ಇದು ಇವನ ಅತಿ ವಿಶೇಷಗಳಲ್ಲಿ ಒಂದು.

ಮಾನವನು ತನ್ನ ರಕ್ಷಣೆಗಾಗಿ ಸುರಕ್ಷಿತ ಕ್ರಮಗಳನ್ನು ಯಾವ ರೀತಿಯಾಗಿ ಕೈಕೊಳ್ಳುತ್ತಾನೋ ಅದೇ ರೀತಿಯಲ್ಲಿ ತಾನು ಸಾಕುವ ಪ್ರಾಣಿಗಳನ್ನು, ಪಕ್ಷಿಗಳನ್ನು ತನ್ನ ಮಗುವನ್ನು ಜೋಪಾನ ಮಾಡುವಂತೆ ಮಾಡಬೇಕಾಗುತ್ತದೆ. ತನಗೆ ಉಪಯುಕ್ತವಾದ ಪ್ರಾಣಿಯನ್ನು ರಕ್ಷಿಸದೇ ಹೋದರೆ ಅವನ ದಿನನಿತ್ಯದ ಕೆಲಸ ಕಾರ್ಯಗಳಿಗೆ ಅಡ್ಡಿ ಆತಂಕಗಳು ಉಂಟಾಗುತ್ತವೆ. ಹೀಗಾಗಿ ಅವುಗಳ ಆರೈಕೆ, ಪೋಷಣೆ, ಉಪಚಾರ, ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು ಅನಿವಾರ್ಯ.

೪.೭. ಶುಭ-ಅಶುಭ ನಿರ್ದೇಶನ

ಹಿಂದಿನ ಕಾಲದಿಂದಲೂ ನಮ್ಮ ಹಿರಿಯರು ಯಾವುದೇ ಕೆಲಸಕಾರ್ಯ ಮಾಡುವಾಗ, ವಸ್ತುಗಳನ್ನು ಖರೀದಿಸುವಾಗ, ಪ್ರಾಣಿಗಳನ್ನು ಕೊಂಡುಕೊಳ್ಳುವಾಗ ಅವುಗಳ ಲಕ್ಷಣ ಮತ್ತು ಆಕಾರ ಅದರಿಂದಾಗುವ ಶುಭ-ಅಶುಭ (ಒಳ್ಳೆಯ, ಕೆಟ್ಟ) ಎಂಬುದನ್ನು ಅನೇಕ ಶಾಸ್ತ್ರಪರಿಣಿತರಿಂದ ತಿಳಿದುಕೊಂಡು ಇಲ್ಲವೇ ಅಧ್ಯಯನಮಾಡಿ, ಚರ್ಚಿಸಿ ನಿರ್ಧಾರ ತೆಗೆದುಕೊಂಡು ಮುಂದುವರಿಯುವದು ವಾಡಿಕೆ. ಅದು ವೇದಕಾಲದಿಂದ ಹಿಡಿದು ಇಂದಿನವರೆಗೂ ಬೆಳೆದುಕೊಂಡು ಬಂದಿದೆ. ಶಾಸ್ತ್ರಕಾರನಾದ ಸದಾಶಿವರಾಯನು ಕುದುರೆ ಶುಭ-ಅಶುಭ ನಿರ್ದೇಶನ ಮಾಡುವ ಸಂದರ್ಭದಲ್ಲಿ ಅವುಗಳ ಸುಳಿ, ಬಣ್ಣ, ಆಕಾರದಿಂದ ಗುರುತಿಸಲ್ಪಡು ತ್ತಾನೆ.

> “ಕಟವಾಯಿಗಳಲಿ ಸುಳಿಗಳು
> ಪಟುವಾಗೆರಡಿರಲು ಭಾಗ್ಯವಹುದೂ ಸಿದ್ಧಂ
> ನಿಟಿಲದೊಳರಡಿರೆ ಜಯಕರ
> ದಿಟದಿಂ ಮೂರದ್ದಲಿರಲ ಶುಭಫಲ ವತಿಗೇ (೨೩)

ಶುಭ ಫಲ ಕುರಿತು ವಿವರಿಸುತ್ತಾ ಒಡೆಯನಾದವನಿಗೆ ಆಗುವ ಫಲಗಳು ಕಟಬಾಯಿಯ ಎರಡು ಕಡೆ ಸುಳಿಗಳು ಬಿಡದೆ ಎರಡಿರಲು ಭಾಗ್ಯವೆನಿಸುವುದು. ನಿಟಿಲದೊಳೆರಡಿರಲು ಜಯ ಉಂಟಾಗಿ, ದಿಟದಿಂದ ಮೂರೆಡಿರಲು ಶುಭಫಲವನ್ನು ಕೊಡುತ್ತವೆ.

ಪಣೆಯಲಿ ಚೌಕದಿ ನಾಲ್ಕರ
ಎಣಿಕೆಯ ಸುಳಿಯಿರಲು ಹಯಕೆ ರಾಜಂಗ್ಯೋಗ್ಯಂ
ಗುಣವಧಿಕವಹುದು ಬಲಮುರಿ
ಅಣು ಮಾತ್ರವು ವಾರೆಯಾಗೆ ಅರೆಯಾಯುಷ್ಯಂ" (೨೯)

ಹಣೆಯಲ್ಲಿ ಚೌಕಾಕಾರದ ನಾಲ್ಕು ಸುಳಿಯಿರಲು ಹಯಕೆ ರಾಜಮರ್ಯಾದೆ ಸಿಗುವುದು. ಜೊತೆಗೆ ಆ ರಾಜ್ಯಕ್ಕೆ ಉತ್ತಮ ಹೆಸರು ಪ್ರಾಪ್ತಿಯಾಗುವುದು. ಗುಣದಿಂದ ಹೆಚ್ಚು ಬಲಮುರಿಯಾಗಿರಲು ಅಣುಮಾತ್ರ ವಾರೆಯಾಗಿದ್ದರೆ ಅಲ್ಪ ಆಯುಷ್ಯ ಹೊಂದುವುದು. ಕಡೆಗಂಗಳಲ್ಲಿ ಕಡೆಸುಳಿಗಳು ಇರಲು ಒಡೆಯನಿಗೆ ಮಂಗಳ ಉಂಟಾಗಿ ಜಯಹೊಂದುವನು. ಅದೇ ಭ್ರೂಮಧ್ಯ ಸುಳಿಗಳು ಕಡು ಶುಭಗಳನ್ನು ನೀಡುವವು. ಕಿವಿಗಳ ಬುಡದಲ್ಲಿ ಸುಳಿಯಿರಲು ಜಯವಾದ ಸುದ್ದಿ ತಿಳಿಯುವದು. ಗಳ ಮೂಲದಲ್ಲಿ ಸುಳಿಯಿರಲು ನವಕಂಠಾಭರಣ ಧರಿಸುವುದು. ರಣರಂಗದಲ್ಲಿ ಗೆಲುವಾಗುವದು. ಕೊರಳಿನ ಮಧ್ಯದಲ್ಲಿ ಸುಳಿ ನಾಲ್ಕರಿಂದ ಎಂಟರವರೆಗೆ ಇರಲು ಸಿರಿ ಸಂಪತ್ತು, ಅಷ್ಟಧಾನ್ಯ ಐಶ್ವರ್ಯ ಸುಖ ಪ್ರಾಪ್ತಿಯಾಗುತ್ತದೆ. ತೋಳುಗಳಲ್ಲಿ ಸುಳಿಗಳಿದ್ದು, ಆಳಿದ ಒಡೆಯನಿಗೆ ಐಶ್ವರ್ಯ ಹೆಚ್ಚುವುದು. ಸೊನ್ನೇ ಪಾವಡಿ ಮೇಳೈಸಿದ ತಲೆ ಸುಳಿ ಯುಗ ಹೇಳುವಂತಿರಲು ಭಾಗ್ಯ ಉಂಟಾಗುವುದು. ಅಳ್ಳೇಗಳೊಳಗೆ ಸುಳಿ ಇದ್ದು, ಒಳ್ಳೆಯ ಫಲವನ್ನು ಕೊಡುವದು. ಅದೇ ಸುಳಿ ಹಿಂದುಗಡೆಯ ಭಾಗದಲ್ಲಿರಲು ದೊಷ ನಿವಾರಣೆಯಾಗಿ ಉದರದಲ್ಲಿ ಹರಿಸುಳಿ ಬೆಳ್ಳಿ ಬಂಗಾರವು ಬರುವುದು ಗಂಗಾಪಾಯವಾಗುವುದು.

ಅಂಡದ ಬೀಜವು ಒಂದುಂ
ಮಂಡೆಯೊಳಂ ಕೊಡುಟಕ ಪಿಂಗಳನೇತ್ರಂ (?)
ಗಂಡಶ್ವಕೆ ಮೊಲೆಗಳಿರೇ
ಕೊಂಡವಗಂ ಸರ್ವಹಾನಿಯಾಹುದು ಸಿದ್ಧಂ (೩೦)

ಅಂಡದ ಬೀಜವೊಂದರಲ್ಲಿ ಮತ್ತು ಮಂಡೆಯೊಳಗೆ ಕೊಡುಟಕ ಪಿಂಗಳನೇತ್ರ (ಕಣ್ಣು) ಇದ್ದು, ಗಂಡು ಕುದುರೆಗೆ ಮೊಲೆಗಳಿರಲು ಅದನ್ನು ಖರೀದಿಸಿ, ಉಪಚರಿಸುವವನಿಗೆ ಎಲ್ಲಾ ರೀತಿಯಲ್ಲಿ ಸಂಕಷ್ಟ ಉಂಟಾಗಿ ಹಾನಿಯಾಗುವುದು. ಹೊಟ್ಟೆಯೊಳಗೆ ಒಂದೇ ಸುಳಿಯಿದ್ದು, ಹೃದಯಾವರ್ತ ಬಹಳ ಕ್ಲೇಶವಾಗಿದ್ದು, ಖುರ ಮುಟ್ಟುವಲ್ಲಿ ಸುಳಿಯಿರಲು, ಸರ್ವರನ್ನು ಕೆಡಿಸುವುದು ಇದಕ್ಕೆ ತಾಳಾವರ್ತವೆಂದು ಕರೆಯುವರು. ಹಣೆಯ ಕೆಳಗೆ ಸುಳಿಯು ಅಣುಮಾತ್ರ ಇದ್ದು, ನೇತ್ರ ಯುಕ್ತವಾಗಿರಲು ಕಾಣೆ ಆಣೆಯಿಲ್ಲದ ಅಶ್ವವಾಗಿದ್ದರೂ ಫಣಿಭೂಷಣ ಲಾಲಿಸುವುದು ಇದಕ್ಕೆ ಶೋಕಾವರ್ತವೆಂದೂ ಗುರುತಿಸಲಾಗಿದೆ.

"ಕೆಳಗಣ ಮೇಗಣ ತುಟಿಯೊಳು
ಸುಳಿಯಿರೆ ಅಶ್ವಕ್ಕೆ ತಂದೆ ತಾಯಿಗೆ ಮರಣಂ

ಒಳಿತಲ್ಲ ಬಲದ ತಿಗದಲಿ

ತಿಳಿವುದು ಎಡದಲ್ಲಿರಲು ಒಡೆಯಂಗೆ ಮರಣಂ"೧೧೮ (೩೩)

ಕೆಳಗಿನ ಮತ್ತು ಮೇಲಿನ ತುಟಿಯಲ್ಲಿ ಸುಳಿರಲು ಅಶ್ವಕ್ಕೆ ಹಾಗೆಯೇ ಅದನ್ನು ಸಾಕಿದ ತಂದೆ ತಾಯಿಗೆ ಮರಣವಾಗುವುದು. ಬಲದ ತಿಗದಲ್ಲಿ, ಎಡದಲ್ಲಿರಲು ಒಡೆಯನಿಗೆ ಮರಣ ಉಂಟಾಗಿ ನಷ್ಟ ಹೆಚ್ಚಾಗುತ್ತದೆ. "ನಾಸಿಕ(ಮೂಗು)ದ ನಡುವೆ ಮತ್ತು ಮೇಲೆ ಭಾಸುರ ಸುಳಿಯಿರಲು ಕುದುರೆಯ ಕುಲನಾಶವಾಗಿ, ನಾಸಾಪುಟದೊಳಗಿದ್ದರೆ ಲೇಸಾಗಿರಲು ವಿತ್ತನಾಶ. ಪ್ರಾಣಪಹರಣವಾಗುತ್ತದೆ. ಕದಪುಗಳೊಳಗೆ ಅಂಡ ಸುಳಿಯಿರಲು ಪತಿಗೆ ಕೇಡು ಕಣ್ಣೀರು, ಉದುರವ ಸ್ಥಾನದಲ್ಲಿ, ಹುಬ್ಬಿನ ತುದಿಯಲ್ಲಿ ಸುಳಿ ವಿರಕ್ತಿ ಬಂಧುಕ್ಲೇಶವಾಗುವುದು. ದಾಡೆ ತುದಿಸಂದು ತೊಡೆಯಲ್ಲಿ ಕೂಡಿ ಜಘನದಲ್ಲಿ, ಕೇಶ ಕೂರ್ಚಗಳಲ್ಲಿ ಮೂಡಿರುವ ಸುಳಿ ಕ್ಲೇಶ ಮಾಡುವದು. ಸುಳಿಯು ಪತಿಗೆ ಉಗ್ರವಾಗುವುದು. ಹಣೆಯ ಭ್ರೂಮಧ್ಯ ಮಸ್ತಕ ಎಸೆದಿರುವ ಸುಳಿ ಕರ್ಣವನ್ನು ಹೊಂದಲು ಹಯಕ್ಕೆ ಪ್ರಸರಿತವಾಗಲು ಕೇಶ ಶುಕ್ತಿಕೆ ವಸುಧೆಯೊಳಗೆ ವಾಜಿಗಲ್ಪ ಆಯುಷ್ಯ ಉಂಟಾಗುತ್ತದೆ. ಗದ್ದನ ಸುಳಿ ಕುಲನಾಶ ಗಂಡದಲಿ ಬಹಳ ನಿತ್ರಾಣ ಮಾಡುತ್ತದೆ. ಹಾಗೆಯೆ ರೆಪ್ಪೆಯಲ್ಲಿ ಸುಳಿ ಇರಲು ಬುದ್ಧಿಯನ್ನು ನಾಶಮಾಡಿ ಪತಿಯಾದವನನ್ನು ಅಳಿಸುತ್ತಿರುವುದು. ಕುದುರೆಗೆ ಕಣಕಾಲಲ್ಲಿ ಸುಳಿ ಇರಲು ಅದನ್ನು ಖರೀದಿಸಿದ ಒಡೆಯನಿಗೆ ಕಾರ್ಯಗ್ರಹವಾಸವಾಗುವುದು. ಅಲ್ಲದೇ ಮೃದುನಾಭಿಯಲ್ಲಿ ವ್ಯಾಧಿಯು ಗುದ, ತಿಗ, ಶಿಶ್ನದಲ್ಲಿ, ಬಾಲದಲ್ಲಿರಲು ಶುಭ ಉಂಟಾಗುತ್ತದೆ. ಕಂಕುಳಸುಳಿ ಇದ್ದರೆ ಯುದ್ಧದಲ್ಲಿ ಅಪಜಯವಾಗುವುದು. ಕಿಂಕರಧ್ವನಿ, ಹಗಲುಜನನ, ವಿಪತ್ತಿತಾಗಲು ಡೊಂಕುವ ದೊಡ್ಡ ಕಿವಿಯು ಭೊಂಕನೆ ಆ ಅಶ್ವಕೊಳ್ಳಲಾಗದು. ಅಂಡದ ಬೀಜವು ಉದ್ದವಾಗಿದ್ದು, ಅಂಡದೊಳಗೆ ಹೆಚ್ಚು ಕಡಿಮೆ ರೋಮಗಳಿರಲೂ ಅಂಡವು ಹಿಂದಕ್ಕೆ ಬಾಗಿರಲು ಅದನ್ನು ಕೊಂಡವಗೆ ಕುದುರೆ ಹಾನಿ ತೋರದೆ ಬಿಡಲಾರದು. ನಾಲಿಗೆಯನ್ನು ಹೊರತೆಗೆಯಲು ಬಾಲವನ್ನು ಎಡ ಮತ್ತು ಬಲಕ್ಕೆ ವಾರೆ ಮಾಡುತ್ತಿರಲೂ, ಗಾಳಿಯನ್ನು ಸೇವಿಸಲು ಅಂತಹ ಕುದುರೆ ಕೀಳು ಎಂದು ತಿಳಿದು ಎರದೆ ಇರುವದು. ನೆಲಹಿಡಿದು ಮೇಲೆಳುವದು ಛಲದಿಂದ ಎದ್ದು ನಿಲ್ಲುವುದು, ಭೂಮಿಯು ದೊಡ್ಡದಾದಂತೆ ಬಲುಪಕ್ಕ ತಿರುಗಿ ಬೀಳುವದು ಬಲವಿಲ್ಲದೆ ಇರುವ ಕುದುರೆಯನ್ನು ಕೊಳ್ಳಲು ಸಾಧ್ಯವಾಗದು. ನಾಲ್ಕು ಸುಜಾತಿಯ ಕುದುರೆಗೆ ಲೋಕದಿ ವಿಖ್ಯಾತಿ ಹೆಚ್ಚುವುದು. ಶ್ವೇತ, ಶೋಣ, ಏಕಹರಿ ಜ್ವಲ, ಕೈರವ ಶ್ರೇಷ್ಠ ಎಂದು ಶಾಸ್ತ್ರಕಾರರು ಗುರುತಿಸುವರು. ಒಂದೊಂದು ವರ್ಣದ ಕುದುರೆಗೆ ಕಿವಿಗಳಲ್ಲಿ ಬೇರೆ ಬಣ್ಣದ ಬಗೆಯನ್ನು ಹೊಂದಿದ್ದು 'ಶ್ಯಾಮ' ಚಂದದಿ ಇಂದೀವರಾಭ ತುರಗ 'ನೀಲ'ವೆಂದು ಹೆಸರಿಸಲಾಗಿದೆ. ಅರಳಿ ಎಲೆಯಂತೆ ಹಣೆಯಲ್ಲಿ ಬಿಳಿಪಿನ ವರ್ಣವಿರಲು ತಿಲಕವೆಂದೂ, ವರಮುತ್ತುಕ, ಪುಷ್ಪ ವರ್ಣದ ಕುದುರೆ ಕುಂಕುಮ ಬೋರವೆಂದೂ, ತನುವಿನಲ್ಲಿ ಕೆಂಪು, ಬಿಳಿ ಹೆಚ್ಚಾಗಿದ್ದ ಕುದುರೆಗೆ ಉಜ್ವಲಬೋರವೆಂದು ಇದು ವಿಶೇಷವಾಗಿ ಹೊಳೆಯುತ್ತಿದ್ದು ಬಣ್ಣವು ಹೆಚ್ಚು ರಂಜಿಸುವುದು. ಹಣೆಮುಖದೊಳಗೆ ಬಿಳಿ ಆಕಾರ ಹೊಂದಿದ್ದರೆ

ಪಂಚಕಲ್ಯಾಣಿಯೆಂದೂ, ಉರ, ಪುಚ್ಛಕೇಶ, ಶ್ವೇತವರ್ಣವಾಗಿದ್ದರೆ ಅಷ್ಟಮಂಗಳನೆಂದೂ, ಕರಿ ಕುದುರೆಗೆ ಹಣೆ, ಹಲ್ಲುಗಳು ಬಿಳಿದಾಗಿದ್ದರೆ ಮಲ್ಲಿಕಾಕ್ಷನೆಂದು, ಒಳ್ಳೆಯನಾಮ ಇರಲು ದುಷ್ಟವಾದ ಸುಳಿಗಳು ಕುದುರೆಯೊಳಗಷ್ಟವಾಗಿದ್ದರೆ ಪಂಚಕಲ್ಯಾಣಿ ಶುಭವಾದದ್ದು. ತಿಲ, ತುಂಡಲ, ಸಮವರ್ಣ ಸಲೆ ಶೋಭಿಸಲು ತುರಗಕ್ಕೆ 'ನೀಲ'ವೆಂದು ಬಿಳಿ, ಕೆಂಪು, ಬೊಟ್ಟು ಇರಲು ಗುಲಗಂಜಿಯ ನೀಲವೆನ್ನುವರು"[೧೨೯] ನಾಲ್ಕು ವರ್ಣದಿಂದ ಇರುವ ಒಂದಕ್ಕೊಂದು ನಾನಾ ಬಗೆಯ ಹೆಸರು ಶಾಸ್ತ್ರ ರೂಪದಿಂದ ಹೇಳುತ್ತ ಶುಭ ಅಶುಭ ಲಕ್ಷಣಗಳನ್ನು ವಿವರಿಸಿದ್ದಾನೆ.

ಬುದ್ಧಿಶಾಲಿಯಾದ ದಿವ್ಯವಾದ ನಡಿಗೆಯುಳ್ಳ, ಮಿತಾಹಾರಿಯಾದ ಅಲಂಕಾರ ಮಾಡಿಸಿಕೊಳ್ಳುವ ಹಾಡು, ಗೌರವ ಪೂಜೆಗಳನ್ನು ಇಷ್ಟಪಡುವ, ಪಾದವನ್ನೆತ್ತಿ, ಓಡುವ ಹಾಗೂ ಶುಭ್ರವಾದ ಹಾಸಿಗೆ ಮತ್ತು ನಿಲುದಾಣಗಳನ್ನು ಅಪೇಕ್ಷಿಸುವ, ಶುಭವಾದ ಅಂಗಗಳನ್ನು ಹೊಂದಿರುವ, ಕುದುರೆಯನ್ನು ಉತ್ತಮಸತ್ತ್ವ ಎಂದು ಕರೆಯುತ್ತಾರೆ. ಪಾರಿವಾಳದ ಕತ್ತಿನಂತೆ, ಕಾಮನಬಿಲ್ಲಿನ ಕಾಂತಿಯಂತೆ ರೋಮಗಳನ್ನು ಹೊಂದಿರುವ ಛಾಯೆಗೆ, 'ಪಾರ್ಥಿವಛಾಯೆ' ಎನ್ನಲಾಗಿದೆ. ಮುತ್ತು ಅಥವಾ ಸ್ಫಟಿಕಕ್ಕೆ ಸಮಾನವಾಗಿರುವ ಛಾಯೆಗೆ 'ತೈಜಸೀ' ಎಂದು. ವಾಸನೆ, ಬೆವರು ಇತ್ಯಾದಿಗಳಲ್ಲಿ ಹಾಲಿಗೆ ಸಮಾನವಾದ ಗುಣವನ್ನು ಹೊಂದಿ ನಡಿಗೆಯಲ್ಲಿ ಹಂಸ, ನವಿಲು, ತಿತ್ತರಿ ಪಕ್ಷಿ, ಟಿಟ್ಟಿಭ ಹಕ್ಕಿಗಳಿಗೆ ಸಮಾನವಾಗಿರುವ ಕುದುರೆಗಳು ಸವಾರನಿಗೆ ಅತ್ಯಂತ ಸುಖವನ್ನು ಕೊಡುತ್ತವೆ. ಕಂಕುಳು, ಮೊಳಕಾಲಸಂಧಿಗಳಲ್ಲಿ ನಡೆಯುವಾಗ ವಕ್ರತೆ(ಬಾಗುವಿಕೆ)ಯೂ ಕಾಲುಗಳ ಚಾಚುವಿಕೆಯೂ ಕಾಣುವುದೋ ಅದು 'ಉಚ್ಚಾಂಘ್ರಿ' ಇದು ಯುದ್ಧಕ್ಕೆ ಶ್ರೇಷ್ಠವಾದದ್ದು. ನಡೆಯುವಾಗ ಮೂರು ಸಂಧಿಗಳಲ್ಲೂ ಯಾವ ಕುದುರೆ ಕಾಲುಗಳನ್ನು ಬಾಗಿಸಿ ತೋರಿಸುವುದೋ ಅದನ್ನು 'ವಕ್ರಪಾದ'ವೆಂದು ಹೆಸರಿಸಲಾಗಿದೆ. ವಿನೋದ ವೈಹಾಳಿಯಲ್ಲಿ ನೋಡುಗರಿಗೆ ತುಂಬಾ ಆಕರ್ಷಕವಾಗಿ ತೋರುವುದರಿಂದ 'ಸಮಪಾದ' ಎಂದು ಕರೆಯಿಸಿಕೊಳ್ಳುವುದು.

ಅತಿ ಎತ್ತರವೂ ಅಲ್ಲದ, ಅತಿ ಕೆಳಗೂ ಅಲ್ಲದ ಪಾದಗಳಿಂದ ನಡೆಯುವ ಕುದುರೆಗೆ ಮಧ್ಯಪಾದವೆಂದು ಗುರುತಿಸಿ, ಇದು ಯುದ್ಧರಂಗದಲ್ಲಿ ಉತ್ತಮವಾದುದೆಂದು, ಓಡುವಾಗ ಮಣಿಬಂಧ (ಕಾಲಿನ ಮಣಿಕಟ್ಟು) ಬಾಗುವಿಕೆ ತೋರುತ್ತಿದ್ದರೆ 'ನೀಚಪಾದ'ವೆಂದೂ, ಇದು ದಾರಿಯ ಪ್ರಯಾಣಕ್ಕೆ ಮಾತ್ರ ಪ್ರಶಸ್ತ ಎನ್ನುವರು. ಕಾಲಿನ ಎಲ್ಲ ಸಂಧಿಸ್ಥಳಗಳಲ್ಲಿ ನೆಟ್ಟಗಿದ್ದು, ಓಡುವಾಗ ಕಾಣುತ್ತಿದ್ದರೆ 'ಸ್ತಬ್ಧಪಾದ' ಇದು ಸಹ ದಾರಿಯ ಪ್ರಯಾಣಕ್ಕೆ ಉತ್ತಮ. ಗಂಭೀರವೂ, ಅಸ್ಖಲಿತವೂ, ಸ್ನಿಗ್ಧವೂ, ಇಂಪಾಗಿರುವುದೂ, ಕಿವಿಗೆ ಹಿತವಾಗಿರುವುದು ಆದ ಅಶ್ವಧ್ವನಿವುಳ್ಳದ್ದು, ಪ್ರಶಸ್ತವಾದದ್ದು, ಇದು ಒಡೆಯನಿಗೆ ಗೆಲುವನ್ನು ತಂದು ಕೊಡುತ್ತದೆ. ಮಾಂಸ ಹೆಚ್ಚಾಗಿಲ್ಲದೆ, ಉದ್ದವಾಗಿದ್ದು, ಕಣ್ಣುಗಳ ಮಧ್ಯೆ ಉಬ್ಬಿರುವ ಮುಖವಿರುವ ಕುದುರೆಯನ್ನು ಎಲ್ಲರೂ ಮುಕ್ತ ಮನಸ್ಸಿನಿಂದ ಹೊಗಳುವರು.

ಕುದುರೆಯ ಕಣ್ಣುಗಳು ಬಿಳಿ, ಕಪ್ಪು, ಹಳದಿ ಅಥವಾ ಮಲ್ಲಿಗೆಯ ಕಾಂತಿಯಂಥ ಬಣ್ಣವುಳ್ಳ, ವೈಡೂರ್ಯ, ಸ್ಫಟಿಕಗಳ ಛಾಯೆಯನ್ನು ಹೊಂದಿರುವ, ಪುಷ್ಯರಾಗಕ್ಕೆ ಸಮಾನವಾದ ಪ್ರಭೆಯನ್ನು ಹೊಂದಿರುವ ಜಿಂಕೆ, ಒಂಟೆ, ಟಿಟ್ಟಿಭ, ಕ್ರೌಂಚ, ಹಂಸಗಳಲ್ಲಿ ಯಾವುದಾದರೊಂದರ ಕಣ್ಣಿಗೆ ಸಮಾನವಾಗಿರುವ ಕುದುರೆ ಉತ್ತಮವಾದದ್ದು ಇದು ಶುಭವನ್ನು ತರುತ್ತದೆ.

ಕುದುರೆಯ ತುಟಿಗಳು, ಬಾಯಿ, ಕಟವಾಯಿಗಳು, ಸೂನಾ (ಕುತ್ತಿಗೆ ಭಾಗ) ಪ್ರೋಥ (ಮೂಗು) ಇವು ತೆಳ್ಳಗೆ ಮೃದುವಾಗಿರಬೇಕು. ನಿಮಿರಿ ನಿಲ್ಲುವ, ಒಳಗೆ ಕೂದಲಿಲ್ಲದ ವಿಳ್ಯದ ಎಲೆಯ ಹಾಗಿರುವ ಚಿಕ್ಕ ಕಿವಿಗಳು ಶುಭವೆನಿಸುವುದು. ತಲೆಯು ಬೇಲದ ಹಣ್ಣಿನ ಆಕಾರದಲ್ಲಿರಬೇಕು. ಭುಜ ಉಬ್ಬಿರಬೇಕು ಮತ್ತು ದೃಢವಾಗಿರಬೇಕು. ಕುತ್ತಿಗೆ ನವಿಲಿನ ಕಂಠದಂತಿರಬೇಕು. ಎದೆಯು ಗುಂಡಗೆ ವಿಶಾಲವಾಗಿ, ಹೆಗಲುಗಳು ದಪ್ಪವಾಗಿ ತುಂಬಾ ವಿಸ್ತಾರವಾಗಿರಬೇಕು. ಮಡಿಲು ಸಾಂದ್ರವಾಗಿದ್ದು, ಮುಂಗಾಲುಗಳು ದುಂಡಗೆ ಉದ್ದವಾಗಿ, ಮೊಣಕಾಲುಗಳು ಪರಸ್ಪರ ಸಮಾನವಾಗಿ ಗುಂಡಗೆ ಇದ್ದು, ಮೊಣಗಂಟುಗಳು ಕಾಣದಂತೆ ಇರಬೇಕು.

ಕಾಲುಗಳು ಉದ್ದವಾಗಿ, ಮಾಂಸರಹಿತವಾಗಿ, ರಕ್ತನಾಳಗಳು ಮೇಲೆ ಕಾಣದಂತೆ ಗೂಢವಾಗಿರಬೇಕು. ಮಣಿ ಬಂಧಗಳು ಚಿಕ್ಕವಾಗಿ ನೆಟ್ಟಗಿದ್ದರೆ ಶುಭ, ಗೊರಸುಗಳು ಕತ್ತೆಯ ಗೊರಸುಗಳಂತಿದ್ದು ಅವುಗಳಲ್ಲಿ ರೇಖೆಗಳಿರಬಾರದು. ಕರ್ಣಿಕೆಗಳು ಒಳಗೆ ತೂತನ್ನು ಹೊಂದಿ ಅಭಿನ್ನವಾಗಿರಬೇಕು. ಬೆನ್ನಮೂಳೆಯು ಸ್ವಲ್ಪ ಬಗ್ಗಿದಂತಿದ್ದು, ಮಾಂಸಖಂಡಗಳಿಂದ ಚೆನ್ನಾಗಿ ಕೂಡಿಕೊಂಡಿರಬೇಕು. ಪಕ್ಕೆಗಳು ಉದ್ದವಾಗಿ, ಸಮವಾಗಿ ಗುಂಡಗಿರಬೇಕು. ಹೊಟ್ಟೆಯು ಮೇಲೆ ಎತ್ತಿಕಟ್ಟಿದಂತೆ ತೆಳ್ಳಗಿರಬೇಕು. ವೃಷಣಗಳು ರೋಮರಹಿತವಾಗಿ ಗುಂಡಗೆ, ಹಗುರವಾಗಿ, ಒಂದೇ ಬಣ್ಣದವಾಗಿದ್ದು ಜನನಾಂಗವು ಹ್ರಸ್ವವಾಗಿರಲು ಉತ್ತಮ. ಪಿಂಡಕಗಳು ಚೆನ್ನಾಗಿ ಅಂಟಿಕೊಂಡಂತೆ ಇದ್ದು, ಜಘನ ಪ್ರದೇಶ ಗುಂಡಗೂ, ವಿಶಾಲವಾಗಿದ್ದು, ಗುದದ್ವಾರವು ಮರೆಯಾಗಿದ್ದರೆ ಶ್ರೇಷ್ಠ. ಹೆಚ್ಚು ದೀರ್ಘವಾದ ಬಹಳ ಕೂದಲಿನಿಂದ ಕೂಡಿದ ಬಾಲವು ಪ್ರಶಂಸೆಗೆ ಅರ್ಹವಾದದ್ದು. ಉಪಾಂತರಗಳೆಂಬ ಅಂಗಗಳು ವಿಕಟವಾಗಿದ್ದು, ತೊಡೆಗಳು ನೆಟ್ಟಗೆ ದಪ್ಪವಾಗಿರಲು, ಪಾದದ ಮೇಲ್ಭಾಗಗಳು ಚಿಕ್ಕವಾಗಿ ಕಾಲುಗಳು ಹಿಂದೆ ವರ್ಣಿಸಿದ ಹಾಗೆ ಇರಬೇಕು.”[೧೨೦]

ಕಕ್ಷಾ, ಪುಲಿನ, ದ್ವೀಪ, ಮಧ್ಯಖಂಡ, ಉಪರಿ ಎಂಬ ಐದು ಧಾರೆ ಇವುಗಳ ಬಲವನ್ನು ರಕ್ಷಿಸಿಕೊಂಡು ಓಡುವ ಐದನೆಯ ಧಾರೆಯಲ್ಲಿಯೂ, ಬಾಯಿಯಲ್ಲಿ ಇರುವ ಲಗಾಮುವನ್ನು ಕಚ್ಚಿ ಹಿಡಿಯದೆ, ಜಾರದೇ ಬಾಲವನ್ನು ಆಡಿಸುತ್ತಾ ಓಡಬಲ್ಲ, ಅನಂತರ ಲಗಾಮು ಹಿಡಿದು ನಿಲ್ಲಿಸಲ್ಪಟ್ಟಾಗ ಮೇಲೆದ್ದು ಕುಣಿಯದೆ ನಿಲ್ಲುವ ಕುದುರೆಯನ್ನು ಉತ್ತಮ ಪ್ರಾಣಿ ಎನ್ನುತ್ತಾರೆ. ಉಳಿದ ಕುದುರೆಗಳು ಮಧ್ಯಮ ಅಥವಾ ಅಧಮ ವರ್ಗಕ್ಕೆ ಸೇರುತ್ತವೆ. ಯಾವ ಕುದುರೆಯು ತನ್ನ ಕೂದಲಿನಲ್ಲಿ (ಸವಾರನ) ಕೈಗಳ ಸ್ಪರ್ಶವನ್ನು ಸಹಿಸುವುದಿಲ್ಲವೋ ತೊಡೆಗಳನ್ನಾಗಲಿ, ಮುಂಗಾಲುಗಳನ್ನಾಗಲಿ, (ಕಾಲಿನಿಂದ) ತಿವಿಯುವುದನ್ನು ಸಹಿಸುವುದಿಲ್ಲವೋ ಅಂಥ ಕುದುರೆಯನ್ನು ಜವನವೆಂದೂ, ಸವಾರನು ಹಿಮ್ಮಡಿಯಿಂದ ತಟ್ಟಿದರೆ ಸಾಕು.

ಲಗಾಮುವನ್ನು ಎಳೆದರೆ ಸ್ವಲ್ಪ ಮುಟ್ಟಿ ಸೂಚನೆ ಕೊಟ್ಟರೆ ಅಷ್ಟರಿಂದಲೇ ಓಡುವ ಕುದುರೆಗೆ 'ಅಂತರಪ್ರೈತ್ತಿಕ'ವೆಂದೂ, ಹಿಮ್ಮಡಿಯಿಂದ ಗಟ್ಟಿಯಾಗಿ ತಟ್ಟಿ, ಚುರುಕಾಗಿ ಚಾಟಿಯಿಂದ ಹೊಡೆದು ಚಬುಕದಿಂದ ಚುಚ್ಚಿದಾಗಲೇ ಓಡುವ ಕುದುರೆಯು (ಮಂದ) ಮಂಹವೆಂದೂ. ನೂರು ಬಿಲ್ಲಿನಷ್ಟು ದೂರ ಹೋಗಿ ಮತ್ತೆ ವೇಗವಾಗಿ ಹಿಂದಕ್ಕೆ (ಹೊರಟ ಜಾಗಕ್ಕೆ) ಹನ್ನೆರಡು ಮಾತ್ರ ಕಾಲದಲ್ಲಿ ಬರುವ ಕುದುರೆ 'ಉತ್ತಮವೇಗವಾನ್'ವೆಂದೂ, ಅಷ್ಟು ದೂರವನ್ನು ಇಪ್ಪತ್ತನಾಲ್ಕು ಮಾತ್ರಾ ಕಾಲದಲ್ಲಿ ಓಡುವ ಕುದುರೆ 'ಮಧ್ಯವೇಗ', ಮೂವತ್ತೆರಡು ಮಾತ್ರಾ ಕಾಲದಲ್ಲಿ ಅದೇ ದೂರವನ್ನು ಓಡಿ ಮುಗಿಸಬಲ್ಲ ಕುದುರೆ ಹೀನವೇಗವೆಂದೆನಿಸಿಕೊಳ್ಳುವುದು. ಗೊರಸಿನಿಂದ ಕೀಕಸವೆಂಬ ಮೂಳೆಯವರೆಗೆ ಕುದುರೆಯ ಎತ್ತರ ಏಳು ವಿತಸ್ತಿಗಳಷ್ಟು ವಿಶಾಲತೆ ಹಾಗೂ ಉದ್ದವು ಹದಿನೈದು ವಿತ್ತಸ್ತಿಗಳಷ್ಟು ಇರಬೇಕು.

ವಕ್ರವಾದ ನಾಮದ ಗುರುತು ಅಥವಾ ಕತ್ತರಿಸಿದಂತೆ ಇರುವ ನಾಮದ ಗುರುತು ಹಣೆಯಲ್ಲಿರುವ ಕಪ್ಪಾದ ತುಟಿ ಮತ್ತು ಅಂಗುಳನ್ನುಳ್ಳ ಪ್ರೋಥವು ಅಂಟಿಕೊಂಡಂತೆ ಇರುವ ಉದ್ದವಾದ ಕಿವಿಗಳನ್ನುಳ್ಳ, ಚಿಕ್ಕ ಕಪೋಲವನ್ನೂ ಮೇಲ್ದುಟಿಯನ್ನೂ ಹೊಂದಿರುವ, ಕರಾಳವೂ, ಚೂಪಾದ ಹಲ್ಲುಗಳನ್ನುಳ್ಳ, ಹದ್ದಿನ ಅಥವಾ ಕಾಗೆಯ ಕಣ್ಣಿನಂತಹ ಕಣ್ಣುಗಳನ್ನುಳ್ಳ, ಭುಜದ ಮೇಲೆ ತುಂಬಾ ನೆರಿಗೆಗಳನ್ನು ಹೊಂದಿರುವ, ಕೆಟ್ಟ ಧ್ವನಿಯನ್ನು ಮಾಡುವ, ವಕ್ರವಾದ ಜನನಾಂಗವನ್ನುಳ್ಳ, ವಿಚಿತ್ರವಾದ ಕಿವಿಗಳನ್ನುಳ್ಳ, ನೇತಾಡುವ ಅಂಡಕೋಶವನ್ನು ಹೊಂದಿರುವ, ಒತ್ತಾಗಿ ಕುಟಿಲವಾಗಿರುವ ಬಾಲವನ್ನು ಹೊಂದಿರುವ ಕುದುರೆಗಳನ್ನು 'ಶೂಲಕ' ವೆಂದು ಕರೆಯುತ್ತಾರೆ. ಈ ಮೇಲಿನ ಸ್ವರೂಪವುಳ್ಳ ಕುದುರೆಗಳು ದುಷ್ಟ ಮನಸ್ಸಿನವಾಗಿದ್ದು, ಹತ್ತಿರಕ್ಕೆ ಬಂದವರನ್ನು ಹಲ್ಲುಗಳಿಂದ ಕಚ್ಚಿ ಕಾಲುಗಳಿಂದ ಒದೆಯುತ್ತವೆ. ಹಿಂದಿನ ಭಾಗದಲ್ಲಿ ಎಗರಿ ಸವಾರನನ್ನು ಬೀಳಿಸುತ್ತವೆ. ಮುಂಗಾಲುಗಳನ್ನು ಮೇಲಕ್ಕೆ ಎತ್ತಿ ಸವಾರನ ಜೊತೆಯಲ್ಲಿ ತಾವು ಬೀಳುತ್ತವೆ. ಕಡಿವಾಣವನ್ನು ಎಳೆದು ಕೊಂಡು ಹೋಗಿ ಸಂಕಟಕ್ಕೆ ಸಿಕ್ಕಿಹಾಕಿಕೊಳ್ಳುತ್ತವೆ. ಇಕ್ಕಟ್ಟಿನ ಪ್ರದೇಶಗಳಿಗೆ ನುಗ್ಗುತ್ತವೆ. ಒಂದೇ ಕಡೆ ಹಠ ಹಿಡಿದು ನಿಲ್ಲುತ್ತವೆ. ಹೊಡಸಿಕೊಂಡರೂ ಮುಂದಕ್ಕೆ ಹೋಗುವುದಿಲ್ಲ. ಇಂತಹ ಸ್ವಭಾವವನ್ನು ಹೊಂದಿರುತ್ತವೆ.

ಕುಂಬಾರನ ಚಕ್ರದಂತೆ ದುಷ್ಟು ಕುದುರೆಗಳು ಒಂದೇ ಜಾಗದಲ್ಲಿ ಸುತ್ತು ಹಾಕುತ್ತವೆ. ನೆಲದ ಮೇಲೆ ಹೊರಳಾಡುತ್ತವೆ. ಈ ರೀತಿಯ ದೋಷಗಳಿಂದ ಕೂಡಿದ ಕುದುರೆಗಳು ದುಷ್ಟವಾದವುಗಳು ಇವುಗಳಿಗೆ 'ಘೋಟಕ'ವೆಂದು ಕರೆಯುವರು."[೧೨]

ನಾನಾ ವರ್ಣದ ಕುದುರೆಗಳಿಗಿಂತಲೂ ಶ್ರೇಷ್ಠವಾದದ್ದು ಬಿಳಿಯ ಕುದುರೆ. ಅದನ್ನು ಮಹಾ ಉತ್ತಮವೆಂದು ವರ್ಣಿಸಲಾಗಿದೆ. ಅಶ್ವೀಜಮಾಸದ ರಾತ್ರೆಯ ಮುಗಿಲಿನ ಚಂದ್ರನೋಪಾದಿಯ ಬಿಳಿದನುಳ್ಳ ಕುದುರೆ ಉತ್ತಮ, ಕೆಂಪು, ಹವಳ, ಕಪ್ಪಿನೊಳಗೆ ಬಿಳಿದು ವೆಗ್ಗಳವಾಗಿ, ಮಂಗಳವಾಗಿ ಇರಲು ಆ ಕುದುರೆ ಮಹಾಶ್ರೇಷ್ಠವಾದದ್ದು. ಉತ್ತಮವಾದ ಕುದುರೆಯನ್ನು ವರ್ಣಿಸುವ ಪದ್ಯದ ಸಾಲುಗಳು ಈ ಕೆಳಗಿನಂತಿವೆ.

"ಧವಲ ಜಲಧರದ ಕೂರ್ಮದ
ಕುಲವಯ ಬಾಂಧವನ ಶೈಲದ ನಿಮಿಷದ ಸುಧಾ
ಧವಲಿತ ವಿಚಿತ್ರ ಪತ್ರ
ಗ್ರಿವದಂದಮನಿಸಿಸು ಬೆಳ್ಪು ತೋರ್ಪಡೆ ಶುಭದಂ"[೧೨೨] (೨-೩೫)

ಬೆಳ್ಳಿಯ ಬೆಟ್ಟದ ಚಂದ್ರನ ಶರತ್ಕಾಲದ ಮುಗಿಲ ದೇವಗಂಗೆಯ ಹವಳದ ಮಣಿಯ ವರ್ಣದ ಕುದುರೆಗಳು ಉತ್ತಮ. ಹೀಗಾಗಿ ಬಿಳಿಯ ಕುದುರೆಯು ಎಲ್ಲಾ ಕುದುರೆಗಳಿಗಿಂತ ವಿಶಿಷ್ಟವಾಗಿ ಗೋಚರಿಸಿರುವುದು ಅದರ ಶ್ರೇಷ್ಠತೆಯ ಪ್ರತೀಕವಾಗಿದೆ.

ಕುದುರೆಯ ತಲೆಯೂ, ತೊಡೆಯೂ ಹಾವಸೆ ಹತ್ತಿದ ಕಲ್ಲಿನ ಮರಿಯಾದೆಯಲ್ಲಿ ಬೇರು ಕೊಳತು ಬಿದ್ದ ಮರದಂತೆಗೋಚರಿಸುವ ಕಾನಲ ನೀಲವರ್ಣದ ಕುದುರೆ ಒಳ್ಳೆಯದಲ್ಲ. ಕುದುರೆಯ ಕಣ್ಣಿನೊಳಗಾಗಲಿ, ಹೊರಗಾಗಲಿ ಬಳೆಯ ಹಾಗೆ ಬಿಳಿಯರೇಖೆ ಒಂದಾದರೂ, ಹಲವಾದರೂ, ಎರಡು ಕಣ್ಣು ಇದ್ದರೆ ಶುದ್ಧ. ಒಂದು ಕಣ್ಣಾದರೆ ಒಳ್ಳೆಯದಲ್ಲ. ಕುದುರೆಯ ಕಣ್ಣು ಬೆಳ್ಳಿಯ ಬಟ್ಟಲ ಹಾಗೆ ಇರಲು ಅದನ್ನು ಮಲ್ಲಿಕಾಕ್ಷನೆಂದು, ಅದು ಉತ್ತಮ. ಆ ಕಣ್ಣಿಗೆ ಕಪ್ಪಿನ ಬಳೆಗಳ ರೇಖೆಯಿರಲು ಕಷ್ಟ.

"ಕಾಗೆ ಶಿಲೆ ಕತ್ತೆ ತೋಳಂ
ಗೂಗೆ ಕಪೋತಂ ಸುಭಸ್ಮ ಧೂಮಚ್ಛವಿಯಂ
ತಾಗಿರೆ ಹಯವರ್ಣಮಿವಂ
ಬೇಗದಿ ವರ್ಜಿಸುವುದ ಶುಭವರ್ಣಾದಿಗಳಂ"[೧೨೩] (೨-೩೯)

ಕಾಗೆ, ಕತ್ತೆ, ತೋಳ, ಹಾವಸೆಗಲ್ಲು, ಗೂಗೆ, ಬೂದಿಯ ವರ್ಣ, ಪಾರಿವಾಳ ಹೊಗೆ ಈ ವರ್ಣದ ಕುದುರೆಗಳು ಅಶುಭ ಅಂತಹ ಕುದುರೆಯನ್ನು ಕೊಳ್ಳಲಾಗದು. ಕರಿಯ ಕುದುರೆಯ ಅಂಡದಲ್ಲಿ ಕೆಂಪುರೇಖೆ, ಬಿಳಿಯ ರೇಖೆಗಳು ಇದ್ದರೆ ಅದು ಒಳ್ಳೆಯದಲ್ಲ. ಆ ಕ್ಷಣವೆ ಬಿಡುವುದು ಒಳ್ಳೆಯದು. ಕುದುರೆಯ ಮೈ ಬಿಳಿಯಾಗಿದ್ದು, ಶಿರ ಕಪ್ಪಾಗಿ ಇದ್ದರೆ ಅದನ್ನು ದೋಷ ಪರಿಹಾರನೆಂಬುವರು. ಕುದುರೆಯ ಮುಖ ಕಾಗೆಯ ಮುಖದ ಹಾಗೆ ಕಪ್ಪಾಗಿ ಇರಲು, ಒಳಗೆ ಕಪಿಯ ಮುಖದ ಹಾಗೆ ಕೆಂಪಾಗಿ ಇರಲು, ಹಳದಿ ಬಿಳಿಯ ಮಿಶ್ರವರ್ಣವಾಗಿ ಇದ್ದರೆ ಉತ್ತಮ. ಕುದುರೆಯ ಕಾಲುಗಳಲ್ಲಿ ಅಡ್ಡತರಗಳಾಗಿ ಕರಿದಾದ ದಪ್ಪ ರೇಖೆಗಳು ಇರಲು ಅದು ಮಾರ್ಜಾಲಚರಣ. ಆ ಕುದುರೆಯು ಅವಲಕ್ಷಣ ಮತ್ತು ದರಿದ್ರವೆಂದು ಕರೆಯುವರು. ಖುರ, ಅಂಡ, ಬಾಲದ ಅಡಿ, ಶಿರ, ಮೇಢ್ರ ಈ ಐದು ಸ್ಥಾನದಲ್ಲಿ ಯಾವ ಬಣ್ಣವು ಕುದುರೆಗಿದ್ದರೆ ಕಪ್ಪಾಗಿರಲು ಒಳ್ಳೆಯದಲ್ಲ. ಈ ಮೊದಲು ಹೇಳಿದ ಐದು ಕಾವಿನಲ್ಲೂ ಬಿಳಿದಾಗಿ ಇರಲು ಉತ್ತಮ. ನಾಲ್ಕು ಕಾಲುಗಳು ಬಿಳಿದಾಗಿದ್ದರೆ ಉತ್ತಮ. ಒಂದು ಕಾಲಲ್ಲಾಗಲಿ, ಮೂರು ಕಾಲಲ್ಲಾಗಲಿ,

ಬಿಳಿದಾಗಿ ಇದ್ದರೆ ಅದು ವಿಷಮ. ಇದನ್ನು ವಿಷಮಪಾದವೆಂದು ಕರೆಯುವರು. ಕುದುರೆಯ ಬಾಲ ಮಿಳಿಯ ಹುರಿಯ ಹಾಗೆ ಕವಲಾಗಿ ವಳಿಯ ಕಡುಕಪ್ಪಾಗಿ, ಕವಲಾಗಿ ಇರಲು ಅದು ದುಷ್ಟವಾಜಿ. ಭಯವನ್ನು ಮಾಡುವುದು ಕುದುರೆಯ ಬಾಲದ ಬಣ್ಣವೂ, ಮೈಯ ಬಣ್ಣವೂ, ಬೇಜೆ ಬೇಜಾಗಿರಲು ಹುಲಿಯ ಬಣ್ಣದ ರುಚಿಕಾಂತಿಯಾಗಿರಲು ಆ ಕುದುರೆಯನ್ನು ಲಾಯದಿಂದ ಬೇಗ ಹೊರಗೆ ಹಾಕುವುದು. ಪವಳನಲ್ಲಿ, ಜನ್ನನಲ್ಲಿ, ಮವ್ವನಲ್ಲಿ, ಜಂಬನಲ್ಲಿ ಕೆಂಚನೀಲನಲ್ಲಿ, ಕೆಂಚಜನ್ನನಲ್ಲಿ ಮೈಯಲ್ಲಿ, ಎಲ್ಲಿಯೂ ಕಪ್ಪು ಹುಟ್ಟಿದರೆ ಅಗ್ನಿವೆಂದು ಕರೆಯುವರು. ಅದು ಕಷ್ಟ ಎಂದು ಬಣ್ಣಿಸಲಾಗಿದೆ. ವಿವಾಹ ಮುಂತಾದ ಶುಭಕಾರ್ಯ ಕ್ರಮಗಳಿಗೆ, ಸಮಾರಂಭಗಳಲ್ಲಿ ಹುಯ್ಯಲು ಮುಖಕ್ಕಂ ಉತ್ತಮ ವರ್ಣದ ಕುದುರೆಗಳು. ಉತ್ತಮ ಅಲ್ಲದ ವರ್ಣದ ಕುದುರೆಗಳು ಕಷ್ಟ. ಅವನ್ನು ತರಲಾಗದು ಚಂದ್ರನ ಕುದುರೆಯ ಮರ್ಯಾದೆಯಲ್ಲಿ ಅತಿ ಬಿಳಿದಾಗಿ ಸರ್ವಾಂಗವೂ ಆಗಿರಲು ಆ ಕುದುರೆಯನ್ನೇರಲು ಒಳ್ಳೆಯದು. ಹುಯ್ಯಲಿಗೆ ಹೋದರೂ ಹಗೆಯ ಜಯಸುವರು. ದೇವೇಂದ್ರ ಪಾಲುವೆಳ್ಳಿಯೋಪಾದಿಯ ಅತಿಬಿಳಿದಾದ ಕುದುರೆಯನ್ನೇರಿದವರಿಗೆ ಜಯ. ಹಗೆಯ ಕೈಯೊಳಗಾಗಿ ಸಿಕ್ಕಿದರೂ ಆ ಹಗೆಯನ್ನು ಗೆದ್ದು ಐಶ್ವರ್ಯ ಸಿರಿಸಂಪತ್ತನ್ನು ಪಡೆಯುವರು. ಹಾಲನೊರೆಯೋಪಾದಿಯ ಬಿಳಿಯ ಕುದುರೆಯನ್ನಾಳುವವನು ಇಂದ್ರನಿಗೆ ಸಮವೆಂದು, ಅವನು ಭಾಗ್ಯವಂತನಾಗಿ ಬದುಕುವನು. ತುಂಬಿಯ ಬಣ್ಣದ ಕುದುರೆಯನ್ನೇರಲು ಹುಯ್ಯಲಂ ಮಾಡಿದರೆ ಯಮನು ಕೋಲಿನ ಮರಿಯಾದೆಯಲ್ಲಿ ಹಗೆಗಳ ಬಲವನ್ನು ನಾಶಮಾಡುವನು. ಆ ಕುದುರೆಯನ್ನು ಕೊಂಗನೆಂದು ಕರೆಯುವರು. ಅರಿದಳ ಬಣ್ಣದ ಕುದುರೆಯ ನೇರುವಾತ, ಗರುಡವಾಹನನಾದ ಹರಿಗೆ ಸಮ. ಆತನು ಹಿಮಸೇತು ಮಧ್ಯಪರಿಯಂತರ ಆಳುವನು. ಅದನ್ನು ದಿವ್ಯವಾಹನವೆಂದು ಕರೆಯಲಾಗಿದೆ.

ಕುದುರೆಯ ಬಾಲ, ಉರ, ಕದಪು, ಕಣ್ಣಾಲ ಇವು ಅತಿ ಬಿಳಿದಾಗಿ ಇರಲು ಆಳುವವನಿಗೆ ಅರಿಜಯವಾಗುವುದು ಅದನ್ನು ಮೇಘವರ್ಣನೆಂದು ಹೇಳುವರು. ಮೈಯೆಲ್ಲಾ ಅತಿ ಬಿಳಿದಾದ ಕುದುರೆಯ ಕಿವಿಯಲ್ಲಿ ಬೇರೊಂದು ಬಣ್ಣಗಳು ಆಗಿರುವಂತ ಕುದುರೆಯನ್ನಾಳುವವನಿಗೆ ರಾಜ್ಯ ಹಸ್ತನಹವಾಗುವುದು ಅದನ್ನು ಶ್ಯಾಮನೆಂದು ಕರೆಯಲಾಗಿದೆ. ಪಾರಿವಾಳದ ಮೈಯ ವರ್ಣದ ಕುದುರೆಯ ವಳಿಯು ಬಿಳಿದಾಗಿ ಇರಲು ಸಿಂಹಪೋತನೆಂದು ವರ್ಣಿಸಲಾಗಿದೆ. ಮೈಯೆಲ್ಲಾ ಬಿಳಿಯ ಸಾಸುವೆಯ ತಳಿದ ಹಾಗೆ ಇದ್ದರೆ ಕಪಿಯ ಬಣ್ಣದ ಕುದುರೆಯನ್ನೇರಿದ ಅರಸು ಯುದ್ಧಕ್ಕೆ ಹೋದರೆ ಸಾವು ತಪ್ಪದು.

ಹವಳದ ಬಣ್ಣದ ಮೈಯ್ಯನ್ನು ಹೊಂದಿರುವ ಕುದುರೆ(ಲಕ್ಷಣ)ಯನ್ನು ಇಟ್ಟುಕೊಂಡು ಅದನ್ನು ಆಳುವವನಿಗೆ ಐಶ್ವರ್ಯ ಉಂಟಾಗುತ್ತದೆ. ಚೇರನಾಗಲಿ, ಚೋರನಾಗಲಿ ಯುದ್ಧಕ್ಕೆ ಹೋದ ಅರಸನಿಗೆ ಹಗೆಗಳ (ವೈರಿಯ) ಲಕ್ಷ್ಮಿ, ರಾಣಿ ಒಲಿಯುವಳು. ಕುದುರೆಯ ಬಾಲವ ಗುಡಿಗಟ್ಟುವುದು ಮೈ ಪುಳಕವಾಗಿರುವ ಸಂತೋಷಿಸುತ್ತಿರುವ, ಕುದುರೆಯ ನಾಳುವವನಿಗೆ ರಾಜ್ಯಹಸ್ತ ಉಂಟಾಗುವುದು. ಯುದ್ಧದಲ್ಲಿ ಈ ಗುಣಗಳನ್ನುಳ್ಳ ಕುದುರೆಯನ್ನೇರಲು ವೈರಿಯನ್ನು ಜಯಿಸುವನು. ಹವಳದ ಮೈಯ ಬಣ್ಣದ ಕುದುರೆಯ

ಲಕ್ಷಣ ಕೂಡಿಕೊಂಡು ಇದ್ದ ಕುದುರೆಯನ್ನಾಳುವವನಿಗೆ ಐಶ್ವರ್ಯ ಲಭಿಸುವುದು. ಯುದ್ಧಕ್ಕೆ ಹೋದರೆ ವೈರಿಯ ಕೊಂದು ಆಳಿದವನನ್ನು ರಕ್ಷಿಸುವುದು. ಯುದ್ಧದಲ್ಲಿ ಕುದುರೆಯನ್ನೇರಿ ಸತ್ತರೆ ವೀರಸ್ವರ್ಗವಾಗುವುದು. ಕುದುರೆಸತ್ತು ರಾಹುತನೋಡಿಬಂದರೆ ಅಧೋಗತಿಯಲ್ಲಿ ಬೀಳುವನು. ಪೂರ್ವದವರು ಕುದುರೆಯನ್ನೇರಿ ಸತ್ತರೆಂದು ಈಗ ಅವನಾನೊಬ್ಬನೂ ಕುದುರೆಯ ಸಾಕದೆ ಇದ್ದರೆ ತನ್ನ ಒಡೆಯನ ಕೊಂದವನನ್ನು ಧನ ಭಂಡನೆಂದು ಕರೆಯುವರು. ಯುದ್ಧದಲ್ಲಿ ತನ್ನ ಆಳುವ ಅಧಿಪತಿಯನ್ನು ಕೆಡವಿದೊಡೆ ಸ್ವರ್ಗ ಉಂಟಾಗುತ್ತದೆ. ನಂತರ ಆತನನ್ನು ಮರೆತರೆ ಅಧೋಗತಿ ಉಂಟಾಗುತ್ತದೆ. ಹೀಗೆ ಬಹುವಿಧವಾದ ವರ್ಣ ವಿಸ್ತಾರದಿಂದಾಗಿ ಕುದುರೆಯ ಶುಭ-ಅಶುಭಗಳನ್ನು ಅರಿಯಬಹುದು.

ಶಾಸ್ತ್ರಕಾರನಾದ ಅಭಿನವಚಂದ್ರನು. ಕುದುರೆಯ ಪುಂಡ್ರ, ಕಾಕಸೆ, ಪುಷ್ಪ, ಗಂಧ, ಕಾಂತಿಯ ಕುರಿತು ವಿವರ ಪೂರ್ಣವಾದ ಮಾಹಿತಿಯನ್ನು ನೀಡುತ್ತಾ ಬಿಳಿದಿಲ್ಲದ ಬಣ್ಣದ ಮೈಯ ಕುದುರೆಯಲ್ಲಿ ತಾವರೆ ಹೂವಿನೋಪಾದಿಯ ಬಿಳಿಕುದುರೆ ಇದ್ದರೆ, ಉತ್ತಮ ಅದನ್ನು ಪ್ರೋತ ಭೀತನೆಂದು. ಕುದುರೆಯ ಮುಖವಲ್ಲದೆ ಕದಪಿನಲ್ಲಿ, ಕೊರಳಿನಲ್ಲಿ ಬಿಳಿದಾಗಿರಲು ಅದನ್ನು ಪುಂಡ್ರಾಹ್ವಯನೆಂಬುದು. ಈ ಎರಡು ಸ್ಥಾನದಲ್ಲಿ ಗಲ್ಲ, ಕೊರಳು ನರೆ ಅಲ್ಲಲ್ಲಿ ಹುಟ್ಟಿದರೆ ಅದನ್ನು ಪುಂಡ್ರನೆಂದು ಕರೆಯುವರು.

ಗದೆ, ತೋರಣ ಕನ್ನಡಿ ಕಳಶ, ಶಂಖ, ತುಂಬಿ, ನೈದಿಲು, ಖಂಡೆಯ, ವನಕೆ, ತಾವರೆಯ ಹೂವು ಇಂಥ ಶುಭರೇಖೆಗಳು ಕುದುರೆಯ ಮೈಯಲ್ಲಿದ್ದರೆ ಮಹಾ ಉತ್ತಮ. ಬಿಲ್ಲು ಕಲ್ಪವೃಕ್ಷ, ಬಲಸುಳಿ, ತಾವರೆಯ ಹೂ, ದೇವೇಂದ್ರನವಜ್ರ, ಲಕ್ಷ್ಮೀರಂಗ, ವಾಲಿ ಈ ಪ್ರಕಾರದ ಶುಭರೇಖೆಗಳು ಇದ್ದರೆ ಕುದುರೆ ಉತ್ತಮವಾದದ್ದು ಎನ್ನಲಾಗಿದೆ. ಕುದುರೆಯ ಹಣೆಯಲ್ಲಿ ಬಿಳಿದು ಚೌಕವಾಗಿ ಇರಲು ಉತ್ತಮ. ಆ ಮುಖದಲ್ಲಿ ಅರಳಿಯ ಎಲೆಯ ಹಾಗೆ ಬಿಳಿದಾಗಿ ಇರಲು ಲಾಭ ಮತ್ತು ಭಾಗ್ಯ ಪುಣ್ಯ ಪ್ರಾಪ್ತಿಯೆಂದು, ಕೆನ್ನೆಯಲ್ಲಿ, ಮಂಡೆಯಲ್ಲಿ, ಹಣೆಯಲ್ಲಿ, ತುಟಿಯಲ್ಲಿ, ತೋಳಿನಲ್ಲಿ ಬಿಳಿದಾಗಿರಲು ಕುದುರೆ ಮಹಾ ಉತ್ತಮವೆಂದು, ಮುಖ ಮಂಡೆಗಳಲ್ಲಿ ಬೆಳ್ಪು ಏನೂ ಇಲ್ಲದೆ ಕೊರಳ ಕೆಳಗೆ ಬಿಳಿದಾಗಿದ್ದರೆ ಭಾಗ್ಯವಂತರು ಆಳಲಾಗದು. ಒಂದು ವೇಳೆ ಆಳಿದರೆ ಕಷ್ಟ ಉಂಟಾಗುತ್ತದೆ.ತಿರುವು ಮುರುಹನಾಗಿ, ಉರುಗನಾಗಿ, ಬಾಗಿಯಡೆವರಿತವಾಗಿ ಪುಂಡ್ರ ಹಣೆಯಲ್ಲಿ ಇದ್ದರೆ ಆಗದು. ಕುದುರೆಗೆ ಪುಂಡ್ರ ಒಳ್ಳೆಯ ಪುಷ್ಪಗಳ ಆಕಾರದಲ್ಲಿದ್ದರೆ, ಅಂಡ ಬಿಳಿದಾಗಿದ್ದರೆ ಅದನ್ನು ಆಳುವವನಿಗೆ ಮಕ್ಕಳಿರುವರು. ಸುಖ ಉಂಟಾಗುವುದು. ಭಾಗ್ಯವಂತರಾಗುವರು ಕುದುರೆಯ ಹೊಕ್ಕುಳ ಸ್ಥಾನದಲ್ಲಿ ಪುಷ್ಪಗಳ ಹಾಗೆ ಮೊಲ್ಲೆಯ ಹೂವಿನೋಪಾದಿಯಲ್ಲಿರಲು ಅದನ್ನಾಳುವಾತನಿಗೆ ದಳವಾಯಿ ಪಟ್ಟ ಲಭಿಸುವುದು. ಕುದುರೆಯ ಮೈಯಲ್ಲಿ ಪುಷ್ಪರೇಖೆಗಳು ಕರಿದಾಗಿ ಇದ್ದರೆ ಕಷ್ಟ ಆಗದು. ಆ ಕರಿದಿನೊಳಗೆ ಬಿಳಿದು ಕೂಡಿ ಇದ್ದರೆ ಆ ಕಪ್ಪಿನ ದೋಷವಿಲ್ಲವೆಂದು, ಕುದುರೆಯ ಕೊರಳು ಕೈ ಕಣ್ಣು ಇವುಗಳಲ್ಲಿ ಕಪ್ಪಿನ ಪುಷ್ಪಂಗಳು ಇದ್ದ ಕುದುರೆಯನ್ನಾಳುವವರಿಗೆ ನೋವಾಗುವುದು; ಯುದ್ಧಕ್ಕೆ ಹೋಗಲಾಗದು. ಕುದುರೆ ಇದ್ದಂತಹ

ಶುಭರೇಖೆಗಳಾಗಲಿ ಆ ಫಲಗಳು ಉತ್ತಮವಾಗಲಿ, ಕಷ್ಟವಾಗಲಿ ಏಳುದಿನ, ಏಳು ಪಕ್ಷ, ಏಳು ತಿಂಗಳು, ಏಳು ವರುಷಕ್ಕೆ ಅದನಾಳಿದವನಿಗೆ ಆ ಫಲ ತಪ್ಪದು. ಕಣ್ಣು, ಬಾಯಿ, ಕಿವಿ, ಮೈ, ಯೋನಿ, ಲದ್ದಿ, ಗದ್ದ ಇವುಗಳಲ್ಲಿ ಗಂಧವನರಿತ ಫಲಗಳನ್ನು ಹೇಳುವುದು. ಕಬ್ಬಿನ ಹಾಲು, ಹೊಸ ತುಪ್ಪ, ಹಸುವಿನ ಹಾಲು, ಜೇನುತುಪ್ಪ, ಹಿಪ್ಪೆಯಹೂವು, ದ್ರಾಕ್ಷಿಯಹಣ್ಣು ಇದರ ಪರಿಮಳಗಳುಳ್ಳ ಕುದುರೆಯನ್ನಾಳುವವನಿಗೆ ಉತ್ತಮವಾದದ್ದು, ತಾವರೆ, ಕಣಿಗಿಲ, ನೈದಿಲ, ಜಾಜಿ ಅರಳುಗಳು ಪರಿಮಳಗಳನ್ನುಳ್ಳ ಕುದುರೆಗಳನ್ನಾಳುವವನಿಗೆ ಉತ್ತಮ. ಲಾಮಂಚ, ಶ್ರೀಗಂಧ, ಮಡಿವಾಳ, ಚೆಂಗಣಗಿಲಕೋಷ್ಠ, ಕರ್ಪೂರ, ಶುಂಠಿ, ಯಾಲಕ್ಕಿ, ಲವಂಗ, ಅಗಿಲು ಇದರ ಪರಿಮಳವುಳ್ಳ ಕುದುರೆಯನಾಳುವವನಿಗೆ ಉತ್ತಮ. ಬಾಯಿ ತಿಕಗಳಲ್ಲಿ ಹುತ್ತದ ಮಣ್ಣಿನ, ನೆಲ್ಲರಿಳಿನ ಬೆಲ್ಲವತ್ತದ, ಹಣ್ಣಿನ, ಜೇನುತುಪ್ಪದ, ಹಲಸಿನ ಹಣ್ಣಿನ ಪರಿಮಳಗಳನ್ನುಳ್ಳ ಕುದುರೆಯನ್ನಾಳಲು ಮಹಾ ಉತ್ತಮ. ಕುದುರೆ ನೀರೊಳಗೆ ಮುಳುಗಿ ಬಂದಿರಲು, ಅಲ್ಲದೆ ಮೆಯ್ಯ ತೊಳದಿರಲು, ಆ ಕುದುರೆಯ ಪರಿಮಳ, ಕುದುರೆಯ ಲದ್ದಿ ಗತ್ತಗಳಲ್ಲಿ ಇರಲು, ಅದನ್ನಾಳುವಾತನಿಗೆ ತಾವರೆಯ ಹೂವಿನ ಪರಿಮಳಗಳಾಗಿರಲು ಮಹಾ ಉತ್ತಮ ಚಕ್ರವರ್ತಿಯೆನಿಸುವನು. ಇಷ್ಟು ಗಂಧ ಉತ್ತಮವಾದುದು. ಹಂದಿಯ, ಆನೆಯ, ಕತ್ತೆಯ, ಶರಭದ ಇವುಗಳ ಪರಿಮಳದ ಕುದುರೆಯ ಲದ್ದಿ ಗತ್ತಗಳಲ್ಲಿ ಇರಲು ಅದನ್ನಾಳುವವನಿಗೆ ಹಾನಿ, ದುಃಖ-ಮರಣ ತಪ್ಪದು.

ಬಿಸಿನೆತ್ತರು, ಮೀನ, ಹೊಲಸು ಕೊಂದು ಹಾಕಿದ, ಇಲಿಯ ಕರುಳಿನ, ಹಸಿಯ ಗೋಚರ್ಮದ ಮುತ್ತಕದ ಪರಿಮಳುಳ್ಳ, ಕುದುರೆಯನ್ನಾಳುವವನಿಗೆ ಕಷ್ಟ, ಹಾನಿ ತಪ್ಪದು. ಕುದುರೆಗೆ ಒಳ್ಳೆಯ ಅದಲ್ಲದ ಧ್ವನಿಗಳ ಫಲವನ್ನೂ ಉರ, ಕೊರಳಲ್ಲಿ, ರೋಮಗಳು ಸಾಲಾಗಿರಲು ಫಲಾಫಲಗಳನ್ನು ಹೇಳಲಾಗದು. ಕುದುರೆ ಹಲುಮಣಿಸುವಾಗ, ಸತ್ವವಾಗಿ, ನಯವಾಗಿ, ಎದೆ, ಕೊರಳು, ಹೊಟ್ಟೆ, ತಲೆಗಳಲ್ಲಿ ಬಿದಿರುವಣ ಈ ಪ್ರಕಾರದಲ್ಲಿ ಧ್ವನಿ ಹೊರಡುತ್ತಿದ್ದರೆ ಅದನ್ನು ಹೇಷಿತವೆಂದು, ಅಂತಹ ಕುದುರೆಗಳಿಗೆ ಆಯುಷ್ಯ ಉಂಟಾಗುವುದು. ಸಿಡಿಲಧ್ವನಿಯ ಹಾಗೆ ಗಂಭೀರವಾಗಿ, ನೇರವಾಗಿ, ಸಂತೋಷವಾಗಿ, ನಿರ್ಮಲವಾಗಿ ಇರುವ ಧ್ವನಿಯುಳ್ಳ ಕುದುರೆಯು ಧನಕನಕ ಸಮೃದ್ಧಿಯನ್ನುಂಟು ಮಾಡುವುದು. ಮದಸೋಕಿದಾನೆಯ ಗುಡುಗಿನ ಹುಲಿಯ ಕ್ರೌಂಚದ ಗೆಲ್ಲವರೆಯ ಶಂಖದ ಪುಣ್ಯಾಹವದ ಗೂಳಿಯ, ಸಿಂಹದ ಧ್ವನಿಯ ಮರಿಯಾದೆಯಲ್ಲಿ ಹುಂಕರಿಸುವ ಕುದುರೆ ಮಹಾ ಉತ್ತಮವಾದದ್ದು.

ಕುದುರೆಯ ಮೈಯಿಂದಲೂ ಶಿರಸ್ಸು ಉದ್ದವಾಗಿದ್ದು, ಜೀವಧನಗಳ ಬಸವನೇರುವ ಸುರತವಾದ ಧ್ವನಿಯಿಂದ ಅತಿ ಕಠೋರವಾದ ಸ್ವರವಾಗಿದ್ದರೆ ಅಂತಹ ಕುದುರೆಯನ್ನು ತೆಗೆದುಕೊಳ್ಳಲಾಗದು ಅದನ್ನು ಆಳುವವನಿಗೆ ಒಳ್ಳೆಯದಲ್ಲ. ಹಂದಿಯ ಕತ್ತೆಯ ಶರಭದ, ಬಳ್ಳುವಿನ, ನರಿಯ, ಬೆಕ್ಕಿನ, ಕಾಕೋಳಿಯ ಕಾಗೆಯ, ನಾಯಿಗಳ ಧ್ವನಿಯೋಪಾದಿಯಲ್ಲಿ ಹುಂಕರಿಸುವ ಕುದುರೆಯಿರಲು ಮಹಾಕಷ್ಟವಾಗುವುದು. ಭೀತಿಯ ಮನಸ್ಸನ್ನುಳ್ಳ, ಚಪಲತ್ವ, ಕಾಮಾತುರವುಳ್ಳ, ಬಹಳ ಆಹಾರವನ್ನು ತಿನ್ನುವಂತಹ ಗುಣಗಳನ್ನುಳ್ಳ

ಕುದುರೆಗೆ ಖರಸತ್ವನೆಂದು ಕರೆಯುವರು. ಈ ಕುದುರೆ ಅಂಜುವುದು. ಬಹಳ ದೀಪನವುಳ್ಳ, ಬಾಯಾರಿಕೆಯುಳ್ಳ, ದೈವರೂಪ ಈ ಗುಣವುಳ್ಳ ಕುದುರೆಗೆ ಪಶುಸತ್ವವೆಂದು ಕರೆಯುವರು. ಭೀತಿಯನುಳ್ಳ, ಜಡದೇಹಿ, ಬಹಳ ನೀರ ಕುಡಿವುದು. ಪ್ರಿಯವನುಳ್ಳ, ಕುದುರೆಗೆ ಮೀನಸತ್ವನೆಂದು, ಯಾವಾಗಲೂ ನಿದ್ರೆಯಾಗಿರುವ ಆಲಸ್ಯತನವುಳ್ಳ, ಧ್ಯಾನಿಸುತ್ತಲಿರುವ ಕುದುರೆಗೆ ಭೈರವ ಸತ್ವನೆಂದು ಕರೆಯಲಾಗಿದೆ.

ನಡೆಯ ಲಕ್ಷಣಗಳಿಂದ ಉತ್ತಮ ಅಥವಾ ಕಷ್ಟವೆಂದು ನಾನಾ ಗತಿಗಳಿಂದ ಗುರುತಿಸಬಹುದು. ಖುರ ಖುರ ಬೆರಸದೆ ಇರುವಂತಹ, ಕಾಲು ಕಾಲುವೊರಸದೆ ಇರುವ, ತಗ್ಗಿದ ಬೆನ್ನು, ಅಡಗಿದ ಹೊರವಾರು, ಅಡಗಿದಬಾಲ, ತಿರವಾಗಿ ಇರುವ, ಕೊರಳು, ನೆಗಹಿ ಇದ್ದರೆ ಅದು ಒಳ್ಳೆಯದು. ಆನೆ, ನವಿಲು, ಹುಲಿ, ಶರಭ, ಹಸು, ಗೂಳಿ, ಹಂಸೆ, ಚಕ್ರವಾಕ, ಸಿಂಹ, ಕೋಡಗ ಇವುಗಳ ನಡೆಯುಳ್ಳ ಕುದುರೆಗಳು ಉತ್ತಮ. ತಲೆಯ ಕತ್ತೆತ್ತುವಡೆ, ಶಿರವನೆತ್ತುವಡೆ, ಬಲಿದು ನಡವಡೆ, ಬಿಡದೆ ಎಡರುವಡೆ, ಇದ್ದ ಹಾಗೆ ಇದ್ದು, ಮೋಸದಲ್ಲಿ ಇರುವಡೆ, ಅದರಿಂದ ವಾಹಕಂಗೆ ಧನಹಾನಿಯು ಕಷ್ಟವು ತಪ್ಪದು. ಕುದುರೆ ಹದಿನಾರು ಮಾತ್ರೆ ಹೋಗಿ ಆಗಲೇ ತಿರುಗಿದ ಬೇಗವನುಳ್ಳ ಕುದುರೆ ಉತ್ತಮವಾದದ್ದು. ಕುದುರೆ ಇಪ್ಪತ್ತನಾಲ್ಕು ಮಾತ್ರೆಗೆ ಬಹುದು ಮಧ್ಯಮದ ವೇಗವನುಳ್ಳುದ್ದು ಕಷ್ಟವೆಂದು, ಕೈಯಿಂದ ಪ್ರದಕ್ಷಿಣವಾಗಿ ಬಲವಾಗಿ ಮೊಳಕಾಲು, ಗಲ್ಲ, ಪರಿಯಂತ ಅಕ್ಷರ ಒಂದೊಂದನಣೆಯಿಂದ ಹೇಳಿದರೆ ಮಾತ್ರೆಯೆಂಬ ಹೆಸರು.

ಸತ್ವವನುಳ್ಳ, ಮೈ ಕೂದಲು ವಳಿಯದ, ಕೂದಲು ಕೋಮಲವಾಗಿದ್ದು, ಹಲ್ಲು ಅತಿ ಬಿಳಿದಾಗಿ ಇರಲು ಕಣ್ಣು ತಾವರೆಯ ಹೂವಿನೋಪಾದಿಯಲ್ಲಿದ್ದು, ಕುದುರೆ ಸಂತೋಷವನ್ನುಂಟುಮಾಡುವುದು. ಬಲ್ಲವಂತಿಕೆಯನುಳ್ಳ, ಸಜ್ಜನನು ಮೈ ಕೂದಲು ಸಣ್ಣದಾಗಿ ಕಾಂತಿಯಾಗಿ, ಹುಲ್ಲೆಯ ಕಾಲುಗಳ ಮರ್ಯಾದೆ ಇರಲು ಕುದುರೆಯು ತೀಕ್ಷ್ಣ ಹಯವೆಂದು ಕರೆಯುವರು. ಅಂತಹ ಕುದುರೆ ಉತ್ತಮವಾದದ್ದು. ಹುಲ್ಲೆಯ ಕಾಲಿನ ಹಾಗೆ, ಹುಲ್ಲೆಯ ಕಣ್ಣು ಅದರ ಮೈ, ಜಂಘೆ ಬೆಟ್ಟವ ನಗೆಯುವ ಉರವಣೆಯಾಗಿ ಇದ್ದ ಕುದುರೆ ಉತ್ತಮ. ಕುದುರೆಯ ಚರ್ಮ, ಕೊರಳು, ಕೂದಲು, ಮೈ ಇವೆಲ್ಲವು ದಪ್ಪವಾಗಿ ಆನೆಯ ನಡೆಯನುಳ್ಳ ಕುದುರೆ ಮಂದನೆಂಬುವರು."[೯೨]

೪.೮. ನೀರಾಜನ ವಿಧಿವಿಧಾನ

ಸಾಮಾನ್ಯವಾಗಿ, ಮನೆಯಲ್ಲಿ ದೇವಸ್ಥಾನಗಳಲ್ಲಿ ದೇವರ ಮುಂದೆ ಎತ್ತುವ ಆರತಿಗೆ ಸಂಸ್ಕೃತದಲ್ಲಿ ನೀರಾಜನ ಎಂಬ ಪದ ಬಳಕೆಯಲ್ಲಿದೆ. "ನವವಧೂವರರಿಗೆ, ವಿಜಯ ಯಾತ್ರೆಗೆ ಹೊರಡುವ ಯೋಧರಿಗೆ, ಗೆದ್ದು ಬಂದ ರಾಜರಿಗೆ ಮತ್ತು ಏನಾದರೂ ವಿಶೇಷ ಸಾಧಿಸಿದ ಜನನಾಯಕರಿಗೆ ಈ ರೀತಿ ದೀಪದ ಆರತಿ ಬೆಳಗುವುದು ಸಂಪ್ರದಾಯವಾಗಿತ್ತು. ಇದಲ್ಲದೆ ರಾಜಲಾಂಛನಗಳಿಗೂ ಸಾರ್ವಭೌಮತ್ವದ ಗುರುತುಗಳಾದ ಪಟ್ಟದ ಕುದುರೆಗಳು, ಪಟ್ಟದ ಆನೆಗಳು ಮತ್ತು ಆಯುಧಗಳಿಗೂ ಈ ಬಗೆಯ ದೀಪಧಾರತಿಯ ವಿಶೇಷ ಪೂಜೆ ಬಳಕೆಯಲ್ಲಿತ್ತು. ಕಾಶ್ಮೀರದಲ್ಲಂತೂ ಇದಕ್ಕೊಂದು ಪ್ರಮುಖ

ಸ್ಥಾನವಿತ್ತು"[೧೨೫] ಎಂದು 'ಮಾತಿನ ಚಪ್ಪರ' ಪ್ರಬಂಧ ಸಂಕಲನದ 'ನೀರಾಜನವಿಧಿ' ಲೇಖನದಲ್ಲಿ ಶಿಕಾರಿಪುರ ಕೆ.ಹರಿಹರೇಶ್ವರ ಅವರು ಅಭಿಪ್ರಾಯ ಪಡುತ್ತಾರೆ.

"ಕಾಳಿದಾಸನ ರಘುವಂಶದಲ್ಲಿ ಈ ವಿಶೇಷ ವಿಧಿಯ ಪ್ರಸ್ತಾಪ ಬರುತ್ತದೆ. ರಘುಮಹಾರಾಜ ದಿಗ್ವಿಜಯಕ್ಕೆ ಹೊರಟಿದ್ದಾನೆ. ಅದಕ್ಕೆ ನಾಂದಿಯಾಗಿ ರಾಜಧಾನಿಯಲ್ಲಿ ಮಾಡಿದ್ದೇನೆ? ಎಂದು ಕವಿ ಹೇಳುತ್ತಾನೆ.'"[೧೨೬] 'ನೀರಾಜನವಿಧಿಯಿಂದ ಕುದುರೆಗಳನ್ನು ಪೂಜಿಸುತ್ತಾ ವಿಧಿವತ್ತಾಗಿ ಅಗ್ನಿಯಲ್ಲಿ ಹವಿಸ್ಸನ್ನು ಸಮರ್ಪಿಸುತ್ತಿದ್ದಾಗ ಅಗ್ನಿಕೊಂಡದ ಜ್ವಾಲೆ ಪ್ರದಕ್ಷಿಣ ಪೂರ್ವಕವಾಗಿ ತಿರುಗಿದ್ದು, ಹೇಗಿತಪ್ಪಾ ಅಂದರೆ ಅದು ರಾಜನಿಗೆ ಹಸ್ತಲಾಘವ ಕೊಡುತ್ತಾ ಜಯವನ್ನು ಕೋರುತ್ತಿತೋ ಏನೋ ಎನ್ನುವಂತಿತ್ತು!'.

ಇಲ್ಲಿ " 'ವಾಜಿ' ಎಂದರೆ ಕುದುರೆಯೊಂದೇ ಅಲ್ಲ, ಪಟ್ಟದ ಆನೆಯೂ ಸೇರಿದೆ ಎಂದು ಹೇಳಬಹುದು. ಏಕೆಂದರೆ ಕಾಮಂದಕ ನೀತಿಶಾಸ್ತ್ರದಲ್ಲಿ ಹೇಳುವ ಸೈನಿಕರ ಕುದುರೆಗಳನ್ನು ಮತ್ತು ಆನೆಗಳನ್ನು ವಿಧಿಪೂರ್ವಕವಾಗಿ ಬೆಳಗುವ ವಿಧಿಯೂ ಇದೆ."[೧೨೭]

ಯಾವುದಾದರೂ ದಂಡೆಯಾತ್ರೆಗೆ ಹೋಗುವ ಮುನ್ನ ರಾಜರು ಆಚರಿಸುತ್ತಿದ್ದ ಈ ನೀರಾಜನ ವಿಧಿಯಲ್ಲಿ ಯೋಧರಿಗೂ ಸೈನ್ಯದ ಕುದುರೆ ಮತ್ತು ಆನೆಗಳ ಜೊತೆಗೆ ಎತ್ತು, ಒಂಟೆ ಮೊದಲಾದ ಪ್ರಾಣಿಗಳಿಗೂ ವಿಶೇಷ ರೀತಿಯಲ್ಲಿ ಆರತಿಗಳನ್ನು ಎತ್ತಿ ಬೆಳಗುವುದು ಮುಖ್ಯವಾಗಿತ್ತು. ಅಗ್ನಿಪುರಾಣವೂ ಇದನ್ನೇ ಸಮರ್ಥಿಸುತ್ತಾ "ಆ ದಿನ ರಾಜಲಾಂಛನಗಳಾದ ಆನೆ, ಕುದುರೆ, ಛತ್ರ, ಖಡ್ಗ, ಬಿಲ್ಲುಬಾಣ, ದುಂಧುಬಿ, ಧ್ವಜ, ಪತಾಕ ಇವೆಲ್ಲವುಗಳನ್ನು ವಿಶೇಷವಾಗಿ ಅಲಂಕರಿಸಿ ಮಂತ್ರಪೂರ್ವಕವಾಗಿ ಪೂಜಿಸಬೇಕು" ಎನ್ನುತ್ತಾ ರಾಜಲಾಂಛನಗಳಿಗೂ ಈ ಪೂಜೆಯನ್ನು ವಿವರಿಸುತ್ತದೆ.

ನೀರಾಜನವೆಂದರೆ 'ಪ್ರಕಾಶಮಾನವಾಗಿ ಬೆಳಗುವ ಒಂದು ಭಾವ' ಎಂದೂ, ನೀರಿನಿಂದ ಸ್ಪರ್ಶಿಸಿಕೊಳ್ಳುವುದು ಎಂದೂ ಹೇಳಬಹುದು. ಶಾಂತಿಯಿಂದ ಪವಿತ್ರಗೊಂಡ ನೀರನ್ನು ಸಿಂಪಡಿಸುವ ಒಂದು ಆಚರಣೆ ಎಂದು ಕರೆಯಲಾಗುತ್ತದೆ.

ವರಾಹಮಿಹಿರನ ಬೃಹತಸಂಹಿತೆಯಲ್ಲಿ (ದೇವರ ವಿಗ್ರಹದ ಮುಂದೆ ಇಡುವ 'ನೀಲಾಂಜನ'ದೀಪ ನೀರಾಜನದ ತದ್ಭವ) ಬೆಳಗುವುದು ಎಂಬ ಅರ್ಥದಲ್ಲಿ ನೀರಾಜಿತ ಪದ ಬಳಕೆಯಲ್ಲಿದೆ. ವಿಷ್ಣು, ಬ್ರಹ್ಮ, ಇಂದ್ರ ಮೊದಲಾದ ದೇವತೆಗಳನ್ನು ನಿನ್ನ ಅಡಿಗೆರಗಿದಾಗ, ಅವರುಗಳು ಧರಿಸಿದ ವಜ್ರ ಖಚಿತ ಕಿರೀಟದಿಂದ ಪ್ರತಿಫಲನಗೊಂಡ ಬೆಳಕು ನಿನ್ನ ಪಾದಗಳನ್ನು ಬೆಳಗುತ್ತಿವೆ ಎಂದು ಆಚಾರ್ಯ ಶಂಕರರು ತಮ್ಮ ಸೌಂದರ್ಯ ಲಹರಿಯಲ್ಲಿ "ಮುಕುಂದ - ಬ್ರಹ್ಮೇಂದ್ರ ಸ್ಫುಟ ಮುಕುಟ ನೀರಾಜಿತ ಪದಾಮ್!" ಎಂದು ಹೇಳುವುದನ್ನು ಸ್ಮರಿಸಿಕೊಳ್ಳಬಹುದು.

ಕೌಟಿಲ್ಯನ ಪ್ರಕಾರ ಆಶ್ವಾಯುಜದ ಒಂಬತ್ತನೆಯ ದಿನ ಪ್ರಯಾಣ ಸಮಯದಲ್ಲಿ ಯುದ್ಧಕ್ಕೆ ಹೊರಟಾಗ ಆಕ್ರಮಣ ಮುಗಿಸಿ ಹಿಂತಿರುಗಿದಾಗ ಮತ್ತು ರಾಜ್ಯದಲ್ಲಿ ವ್ಯಾದಿಗಳು ತಲೆದೋರಿದಾಗ ಈ

ನೀರಾಜನ ವಿಧಿಯನ್ನು ಆಚರಿಸಬೇಕು ಎಂದಿರುವನು. ನೀರಾಜನ ವಿಧಿಯಲ್ಲಿ ಹಲವು ಬಗೆಗಳಿವೆ. ದೀಪಮಾಲೆಯಿಂದ ನೀರೊಳಗಿದ್ದ ತಾವರೆಯ ಹೂವಿನಿಂದ ಒಗೆದ ಶುಚಿಯಾದ ಬಟ್ಟೆಯಿಂದ, ಮಾವಿನ ಮತ್ತು ಅಶ್ವತ್ಥ ಎಲೆಗಳಿಂದ ಮತ್ತು ಸಾಷ್ಟಾಂಗ ನಮಸ್ಕಾರ ಮಾಡುತ್ತಾ ಅಡ್ಡಬೀಳುವುದರಿಂದ ಎಂದು ಐದು ರೀತಿಯಲ್ಲಿ ನೀರಾಜನಗಳನ್ನು ಹೇಳಿದ್ದಾರೆ. ಶ್ರೀಹರ್ಷನ ನೈಷಧ ಚರಿತ್ರೆಯಲ್ಲೂ ಈ ಪ್ರಸ್ತಾಪ ಬರುತ್ತದೆ.

ಬೃಹತಸಂಹಿತೆಯಲ್ಲಿ ವರಾಹಮಿಹಿರನ ೪೪ನೇ ಅಧ್ಯಾಯದ ಎಲ್ಲಾ ೨೮ ಶ್ಲೋಕಗಳೂ ನೀರಾಜನ ವಿಧಿಗೇ ಮೀಸಲಾಗಿವೆ. ವರಹಮಿಹಿರ ಹೇಳುವಂತೆ ಭಗವಂತ ರೆಪ್ಪೆ ಬಿಚ್ಚಿ (ಮೋಡಗಳನ್ನು ಚದುರಿಸಿ) ತನ್ನ ಕಣ್ಣುಗಳನ್ನು (ಸೂರ್ಯ ಮತ್ತು ಚಂದ್ರ) ತೆರೆದು, ತನ್ನ ಯೋಗ ನಿದ್ರೆಯಿಂದ ಎಚ್ಚೆತ್ತಾಗ ಆನೆಗಳಿಗೂ, ಕುದುರೆಗಳಿಗೂ, ಯೋಧರಿಗೂ ಈ ನೀರಾಜನವಿಧಿಯನ್ನು ಆಚರಿಸಬೇಕು. “ಆಷಾಡ ಮಾಸದ ಏಕಾದಶಿಯಂದು ವಿಷ್ಣು ತನ್ನ ಯೋಗ ನಿದ್ರೆಯಲ್ಲಿ ತೊಡಗಿ ನಾಲ್ಕು ತಿಂಗಳ ಕಾಲ ಹಾಗೆ ಯೋಗನಿದ್ರೆಯಲ್ಲಿದ್ದು, ಮೇಲೆ ಹೇಳಿದ ಭಗವಂತನ ಕಣ್ಣುಗಳ ಎನ್ನೀನ ಕಾರ್ತಿಕದ ಏಕಾದಶಿಯಲ್ಲೂ ಆಗುತ್ತದೆಂದು ಜನರ ನಂಬಿಕೆ. ಕಾರ್ತೀಕ ಮಾಸದ ಅಥವಾ ಆಶ್ವಯುಜ ಮಾಸದ ಶುಕ್ಲಪಕ್ಷ ೮, ೧೨ ಅಥವಾ ೧೫ನೇ ದಿನ ಈ ಶಾಂತಿ ವಿಧಿಯನ್ನು ಆಚರಿಸಬೇಕು.”[೧೨೮]

“ಉತ್ತರ ಭಾರತದಲ್ಲಿ, ಕೆಲವು ಕಡೆ ಚಾಂದ್ರಮಾನ ತಿಂಗಳುಗಳ ಗಣನೆಯಲ್ಲಿ ಮೊದಲು ಕೃಷ್ಣಪಕ್ಷ, ಆಮೇಲೆ ಶುಕ್ಲಪಕ್ಷ. ಈ ಮಾದರಿಯ ಗಣನೆಗೆ ಪೂರ್ಣಿಮಾಂತ ಮಾಸಗಳು ಎಂದು ಹೇಳುತ್ತಾರೆ. ಕಾರ್ತಿಕ ಮಾಸದ ಕೃಷ್ಣ ಪಕ್ಷದ ದ್ವಾದಶಿಯಿಂದ ಹಿಡಿದು ಕಾರ್ತಿಕ ಶುದ್ಧ ಪ್ರಥಮ ತಿಥಿವರೆಗೆ ನಡೆಸುವ ಒಂದು ವಿಶೇಷ ಹಬ್ಬ ಈ ನೀರಾಜನವಿಧಿ. ಸಾಮಾನ್ಯವಾಗಿ ರಾಜ ಮಹಾರಾಜರು ಇದನ್ನು ನಡೆಸಿಕೊಂಡು ಬರುತ್ತಿದ್ದರು.”[೧೨೯] ರಾಜಧಾನಿಯ ಈಶಾನ್ಯ ಭಾಗದಲ್ಲಿ ಪ್ರಶಸ್ತವಾದ ಭೂಮಿಯನ್ನು ಆರಿಸಿಕೊಂಡು ಒಂದು ವಿಶಾಲವಾದ ಮಂಟಪವನ್ನು ನಿರ್ಮಿಸಿ, ಹಲಸು, ದೇವದಾರು ಮುಂತಾದ ಪ್ರಶಸ್ತಿ ಮರಗಳಿಂದ ಹದಿನಾರು ಮೊಳ ಎತ್ತರ, ಹತ್ತು ಮೊಳ ತೋರಣ ಕಮಾನುಗಳನ್ನು ಕಟ್ಟಿದ ಮಂಟಪವನ್ನು ನಿರ್ಮಿಸಬೇಕು. ತಳಿರು ತೋರಣಗಳಿಂದ ಅದನ್ನು ಅಲಂಕರಿಸುತ್ತಾರೆ. ಸಾಮಾನ್ಯವಾಗಿ ಮೂರು ಕಮಾನುಗಳುಳ್ಳ ಪ್ರವೇಶ ದ್ವಾರಗಳು ಇರುತ್ತವೆ.

ಅಲ್ಲೊಂದು ಪ್ರಾರ್ಥನಾ ಮಂದಿರ (ಶಾಂತಿಸದ್ಮ, ಯಾಗಶಾಲೆ) ನಿರ್ಮಿಸಬೇಕು. ಅದನ್ನು ಸಾಲವೃಕ್ಷ, ಔದುಂಬರ, ಅರ್ಜುನ ಮರಗಳಿಂದಲೂ ಕುಶ ಹುಲ್ಲಿನಿಂದಲೂ ನಿರ್ಮಿಸಿ, ಯಾಗ ಶಾಲೆಗೆ ಬಿದುರಿನ ಬಾಗಿಲು, ಮತ್ಸ್ಯ, ಧ್ವಜ ಮತ್ತು ಚಕ್ರಗಳಿಂದ ಅಲಂಕಾರಗೊಳಿಸಬೇಕು. ದೇವತಾಪೂಜೆ ಮತ್ತು ಹೋಮಗಳು ನಡೆಯುವುದರಿಂದ, ಸೂರ್ಯನು ಚಿತ್ತಾ ನಕ್ಷತ್ರಕ್ಕೆ ಪ್ರವೇಶಿಸಿದ ದಿನದಿಂದ ಅವನು ಸ್ವಾತಿ ನಕ್ಷತ್ರಕ್ಕೆ ಹೋಗುವವರೆಗೆ ಈ ವ್ರತವನ್ನು ನಡೆಸುತ್ತಾರೆ. ಐದು ಬಗೆಯ ಎಲೆಗಳಿಂದಲೂ, ನೂಲುಗಳಿಂದಲೂ, ಅಲಂಕೃತವಾದ ಪೂರ್ಣಕುಂಭಗಳಲ್ಲಿ ನೀರನ್ನು ಇಟ್ಟಿರುತ್ತಾರೆ.

ಕೇಸರಿಯಲ್ಲಿ ಅದ್ದಿದ ಒಂದು ಹಗ್ಗಕ್ಕೆ ಅಕ್ಕಿ, ಬಿಳಿಸಾಸಿವೆ ಮುಂತಾದವುಗಳನ್ನು ಕಟ್ಟಿ ನಂತರ ಕುದುರೆಗಳ ಕೊರಳಿಗೆ ಆ ಹಗ್ಗವನ್ನು ಕಟ್ಟಿ ಪೂಜಾಗೃಹಕ್ಕೆ ಕರೆತರಬೇಕು. ತೋರಣದ ಪಶ್ಚಿಮ ಭಾಗದಲ್ಲಿ ಆನೆಗಳನ್ನು ಮತ್ತು ಕುದುರೆಗಳನ್ನು ಕರೆತಂದು ಅಲ್ಲಿ ಅವುಗಳಿಗೆ ವಿಶೇಷ ರೀತಿಯಲ್ಲಿ ಮಂತ್ರಪೂರ್ವಕವಾಗಿ ಸ್ನಾನ ಮಾಡುತ್ತಾರೆ. ಏಳು ದಿನಗಳ ಕಾಲ ಸೂರ್ಯ, ವರುಣ, ವಿಶ್ವೇದೇವ, ಬ್ರಹ್ಮ, ಇಂದ್ರ ಮತ್ತು ವಿಷ್ಣುವನ್ನು ಉದ್ದೇಶಿಸಿ ವೇದ ಮಂತ್ರಗಳಿಂದ ಕುದುರೆಗಳನ್ನು ಈ ಪೂಜಾಗೃಹದಲ್ಲಿ ಪೂಜಿಸಿ ಶಾಂತಿ ಮಾಡಿಸಬೇಕು; ವಿಧಿವತ್ತಾಗಿ ಹೋಮ ಮಾಡಬೇಕು. ಹೀಗೆ ಪೂಜಿಸಲ್ಪಟ್ಟ ಕುದುರೆಗಳನ್ನು ಗದರಿಸಬಾರದು, ಹೊಡೆಯಲೂಬಾರದು. ಬದಲಾಗಿ ಅವುಗಳ ಮನಸ್ಸಿನಲ್ಲಿ ಇರಬಹುದಾದ ಶಂಕೆ, ಭಯಗಳನ್ನು ದೂರ ಮಾಡುವುದಕ್ಕಾಗಿ ಶುಶ್ರಾವ್ಯವಾಗಿ ಪುಣ್ಯಾ ಮಂತ್ರಗಳನ್ನು ಹಾಡಬೇಕು. ಶಂಖ, ತೂರ್ಯ ಮುಂತಾದ ವಾದ್ಯಗಳ ಧ್ವನಿಯಿಂದ, ಹಾಡುಗಳಿಂದ, ಸಂತೋಷ ಪಡಿಸಬೇಕು.

ಎಂಟನೆಯ ದಿನ ಬೆಳಗಾದಾಗ ಒಂದು ಕುಟೀರವನ್ನು ಮರದ ತೊಗಟೆಗಳಿಂದ ಮತ್ತು ಹುಲ್ಲಿನಿಂದಲೂ, ಮಂಟಪದ ದಕ್ಷಿಣ ಭಾಗದಲ್ಲಿ ಉತ್ತರಾಭಿಮುಖವಾಗಿ ನಿರ್ಮಿಸಬೇಕು. ಈ ಕುಟೀರದ ಮುಂಭಾಗದಲ್ಲಿ ಒಂದು ಅಗ್ನಿ ಕುಂಡದ ವೇದಿಕೆಯನ್ನು ನಿರ್ಮಿಸಬೇಕು. ಹೋಮಕ್ಕಾಗಿ ಪೂರ್ಣ ಕುಂಭಗಳಲ್ಲಿ ವಿವಿಧ ಹೋಮ ಸಾಮಗ್ರಿ, ಸಮಿಧೆಗಳನ್ನೂ ತಂದಿಟ್ಟುಕೊಳ್ಳಬೇಕು. ಬೆಳ್ಳಿಯ ಅಥವಾ ಚಿನ್ನದ ಸ್ರುಕ್(ಸೌಟು)ಗಳನ್ನು ಉಪಯೋಗಿಸಬೇಕು. (ದೂರ್ವೆ ಹುಲ್ಲು, ಫಲಾಶ ಮರದ ತೊಗಟೆಗಳು ಮತ್ತು ಮೊಳಕೆ ಬಂದ ಜವೆ ಗೋಧಿಯನ್ನು ಈ ಪೂಜೆಯಲ್ಲಿ ಉಪಯೋಗಿಸುತ್ತಿದ್ದರು ಎಂದು ಕಾಳಿದಾಸ ರಘುವಂಶದಲ್ಲಿ ಹೇಳುತ್ತಾನೆ.)

ಅಶ್ವವೈದ್ಯ ಮತ್ತು ದೈವಜ್ಞ ಅವರೊಂದಿಗೆ ಹುಲಿಯ ಚರ್ಮದ ಮೇಲೆ ಪೂರ್ವಾಭಿಮುಖವಾಗಿ ಯಜ್ಞಕುಂಡದ ಎದುರು ರಾಜನು ಕುಳಿತುಕೊಳ್ಳಬೇಕು. ಮಂತ್ರಪೂರ್ವಕವಾಗಿ ಹೋಮ ನಡೆಸಬೇಕು. ಈಗ ವಾದ್ಯಗಳು ಮೊಗಳುತ್ತಿರಲು ಪಟ್ಟದ ಕುದುರೆಯನ್ನು ಮತ್ತು ಪಟ್ಟದ ಆನೆಯನ್ನು ಅಲಂಕರಿಸಿ ಮೆಲ್ಲಮೆಲ್ಲನೆ ಆ ಶಾಂತಿಗೃಹದ ಕುಟೀರಕ್ಕೆ ಕರೆತರಬೇಕು.

ಇಲ್ಲೊಂದು ನಂಬಿಕೆಯ ಮಾತನ್ನು ವರಾಹಮಿಹಿರ ಹೇಳುತ್ತಾನೆ: "ಶಾಂತಿಸದ್ಮಕ್ಕೆ ಕರೆತರಲ್ಪಟ್ಟ ಪಟ್ಟದ ಕುದುರೆಗಳು ಮತ್ತು ಆನೆಗಳು ನಿಲ್ಲುವ ಭಂಗಿ ರಾಜನ ಮುಂದಿನ ವರ್ಷದ ಉನ್ನತಿಯಾ ಅವನತಿಗಳಿಗೆ ಸೂಚಕವಾಗಿರುತ್ತದೆ."

ಪಟ್ಟದ ಕುದುರೆಗೆ ಮಂತ್ರ ಪೂರ್ವಕವಾಗಿ ನೈವೇದ್ಯದ ಅನ್ನವನ್ನು ರಾಜಪುರೋಹಿತರು ಸಮರ್ಪಿಸಬೇಕು. ಔದುಂಬರ ವೃಕ್ಷಶಾಖೆಯನ್ನು ಶುದ್ಧೋದಕದಲ್ಲಿ ಅದ್ದಿ ಕುದುರೆಗಳ ಮತ್ತು ಆನೆಗಳ ಮೇಲೆ ಸಿಂಪಡಿಸುತ್ತಾ ಪುರೋಹಿತರು ವೇದಘೋಷ ಮಾಡಬೇಕು. ಇದನ್ನೇ ರಾಜನ ಮೇಲೂ, ಸೈನಿಕರ ಮೇಲೂ ಪ್ರೋಕ್ಷಣೆ ಮಾಡಬೇಕು.

ಸೂರ್ಯನು ಸ್ವಾತಿ ನಕ್ಷತ್ರದಲ್ಲಿ ಇರುವವರೆಗೆ ಬೇರೆ ಬೇರೆ ಅಶ್ವಶಾಲೆ, ಗಜಶಾಲೆಗಳಲ್ಲಿ ಒಂದೊಂದು ದಿನ. ಒಂದೊಂದು ಕಡೆ ಈ ಪೂಜೆಗಳು ನಡೆಯುತ್ತಿದ್ದವು ಮತ್ತು ಕುದುರೆಗಳು ಹಾಗೂ ಆನೆಗಳು ಸತ್ತರಿಸಲ್ಪಡುತ್ತಿದ್ದವು. ಅವುಗಳನ್ನು ಗದರಿಸುವುದಾಗಲಿ, ಅವುಗಳಿಗೆ ಹೊಡೆಯುವುದಾದಾಗಲೀ ಈ ದಿನಗಳಲ್ಲಿ ನಿಷಿದ್ಧ ಕಾರ್ಯಗಳಾಗಿದ್ದವು. ಈ ನೀರಾಜನ ವಿಧಿಗಾಗಿ ನಿರ್ಮಿಸಲ್ಪಟ್ಟ ಪೂಜಾ ಮಂಟಪವನ್ನು ಶಸ್ತ್ರಸಜ್ಜಿತರಾದ ಯೋಧರು, ದೈವಜ್ಞರು, ಆಸ್ಥಾನ ಪುರೋಹಿತರುಗಳು ಕಣ್ಣಾವಲಾಗಿ ಪಾಳಿಯಂತೆ ನೋಡಿಕೊಳ್ಳುತ್ತಿದ್ದರು. ಆನೆಗಳ ಮತ್ತು ಕುದುರೆಗಳ ಯೋಗಕ್ಷೇಮವನ್ನು ವಿಚಾರಿಸಿಕೊಳ್ಳಲು ಪಶುವೈದ್ಯರುಗಳು ದಿನ-ನಿಶಿ ಮಂಟಪದ ಬಳಿಯೇ ಇರುತ್ತಿದ್ದರು.

ರಾಜನ ವೈರಿಯ ಒಂದು ಮಣ್ಣಿನ ಮೂರ್ತಿಯನ್ನ ಅಲ್ಲಿ ಇರಿಸಿಕೊಂಡಿರಬೇಕು. ಪುರೋಹಿತನು ಅಭಿಚಾರ ಮಂತ್ರೋಚ್ಚಾರ ಮಾಡುತ್ತಾ ಒಂದು ಭರ್ಜಿಯಿಂದ ಆ ಮಣ್ಣಿನ ಮೂರ್ತಿಯನ್ನು ತಿವಿಯಬೇಕು.

ಪಟ್ಟದ ಕುದುರೆಗೆ ಆಹಾರವನ್ನ ಸ್ವಲ್ಪ ಸ್ವಲ್ಪವಾಗಿ ಕೊಟ್ಟು ಅದು ತಿಂದ ನಂತರ ರಾಜನು ಆ ಕುದುರೆಯನ್ನೇರಿ ತನ್ನ ಸೈನ್ಯದೊಂದಿಗೆ ಈಶಾನ್ಯಾಭಿಮುಖವಾಗಿ ಮೆರವಣಿಗೆ ಹೊರಡಬೇಕು. ಈ ಸಮಾರಂಭಕ್ಕೆ ಮೀಸಲಾದ ವಿಶೇಷ ಆಭರಣಗಳೊಂದಿಗೆ, ರಾಜ್ಯ ಲಾಂಛನಗಳೊಂದಿಗೆ, ಆನೆಯ ಮೇಲೆ ಅಂಬಾರಿಯನ್ನೇರಿ ರಾಜನು ಉತ್ತರಾಭಿಮುಖವಾಗಿ (ಇಲ್ಲವೇ ಈಶಾನ್ಯದ ಕಡೆ) ಮೆರವಣಿಗೆ ಹೊರಡಬೇಕು.

ಸೂರ್ಯನು ಸ್ವಾತಿ ನಕ್ಷತ್ರ ಬಿಟ್ಟು ವಿಶಾಖಾ ನಕ್ಷತ್ರಕ್ಕೆ ಪ್ರವೇಶಿಸಿದ ದಿನ ವಿಶೇಷ ಪೂಜೆ ನಡೆಯುತ್ತಿತ್ತು. ಪುರೋಹಿತರು ಮಂತ್ರೋಚ್ಚಾರ ಮಾಡುತ್ತಿದ್ದಾಗ ಭೇರಿ, ನಗಾರಿಗಳು ಮೊಳಗುತ್ತಿದ್ದಾಗ ಕುದುರೆ ಮತ್ತು ಆನೆಗಳಿಗೆ ವಿಶೇಷ ಪೂಜೆ ಮಾಡಿ ಪಟ್ಟದ ಕತ್ತಿ ಮತ್ತು ಶ್ವೇತಛತ್ರಕ್ಕೆ ಪೂಜಿಸಿ ರಾಜನು ತನ್ನ ಪಟ್ಟದ ಕುದುರೆಯ ಮೇಲೆ ಹತ್ತುತ್ತಿದ್ದನು. ಆದಾದ ನಂತರ ಪಟ್ಟದ ಆನೆಯ ಮೇಲೆಯೂ ಹತ್ತಿ, ರಾಜನು ಆ ಮಂಟಪದಿಂದ ಹೊರಬರುತ್ತಿದ್ದನು. ಹೊರಬರುತ್ತಿದ್ದಂತಲೇ ವೇದಘೋಷ ಮೊಳಗುತ್ತಿತ್ತು. ರಾಜನ ಹಿಂದೆ ಮತ್ತು ಮುಂದೆ ಇದಕ್ಕಾಗಿ ಸೀಮಿತರಾಗಿದ್ದ ಅವನ ಸೈನಿಕರು ಆನೆ, ಕುದುರೆ ಮುಂತಾದ ವಿವಿಧ ವಾಹನಗಳನ್ನೇರಿ ರಾಜನ ಹಿಂದೆ ಮತ್ತು ಮುಂದೆ ಬರುತ್ತಿದ್ದರು. ರಾಜಧಾನಿಯ ನಾಗರೀಕರು ಸಹ ಹಿಂಬಾಲಿಸಿ ಬರುತ್ತಿದ್ದರು. ಈ ಶೋಭಾಯಾತ್ರೆ ಮಂಟಪದಿಂದ ಹೊರಟು ರಾಜನ ಅರಮನೆಯ ಕಡೆ ರಾಜಧಾನಿಯ ಮುಖ್ಯ ಬೀದಿಗಳಲ್ಲಿ ಸಂಚರಿಸಿ ಕೊನೆಗೆ ಅರಮನೆಯನ್ನು ತಲುಪುತ್ತಿತ್ತು. ಅರಮನೆಯನ್ನು ತಲುಪಿದ ಮೇಲೆ ಅಲ್ಲಿ ರಾಜನು ದರ್ಬಾರನ್ನು ನಡೆಸಿ ರಾಜ್ಯದ ಗಣ್ಯವ್ಯಕ್ತಿಗಳಿಗೆ ಸನ್ಮಾನ ಮಾಡುತ್ತಿದ್ದನು.

ಮುಖ್ಯವಾಗಿ ಈ ನೀರಾಜನ ವಿಧಿಯ ವ್ರತ ಒಂದು ಶಾಂತಿಯ ರೂಪದಲ್ಲಿ ರಾಜರುಗಳು ಮಾಡುತ್ತಿದ್ದ ವಿಶೇಷ ಉತ್ಸವ. ಯುದ್ಧದಲ್ಲಿ ವಿಜಯಕ್ಕೂ, ಮತ್ತು ಬೇರೆ ಬೇರೆ ಉದ್ದೇಶಗಳಿಗೂ ಸಾಕಿಕೊಂಡಿದ್ದ ತನ್ನ ಅಶ್ವದಳ ಮತ್ತು ಗಜಸಮೂಹದ ಕ್ಷೇಮಾಭಿವೃದ್ಧಿಗಾಗಿಯೂ ಮಾಡುತ್ತಿದ್ದ ಪೂಜೆ ಇದು.

ಈ ಅವಧಿಯಲ್ಲಿ ನವಮಿಯಂದು ರಾತ್ರಿ ದುರ್ಗಾಪೂಜೆ ನಡೆಯುತ್ತಿತ್ತು. ಆಯುಧಗಳನ್ನ ಮತ್ತೊಮ್ಮೆ ಈ ರಾತ್ರಿ ಪೂಜಿಸುತ್ತಿದ್ದರು. ಮರುದಿನ ಬೆಳಗ್ಗೆ ಸೂರ್ಯೋದಯ ಕಾಲದಲ್ಲಿ ನೀರಾಜನ ಶಾಂತಿಯ ನಡೆಸುತ್ತಿದ್ದರು ಎಂದು ನೀಲಮತ ಪುರಾಣ ಹೇಳುತ್ತದೆ.

ದ್ವಾದಶಿ(ಉತ್ತರ ಭಾರತದ ಕಾರ್ತಿಕ ಶುದ್ಧ ೧೨)ಯಂದು ನಡೆಸುತ್ತಿದ್ದ ಪೂಜೆಗೆ ನೀರಾಜನ ದ್ವಾದಶಿ ಎನ್ನುತ್ತಿದ್ದರು. ಈ ರಾತ್ರಿ ಶ್ರೀ ವಿಷ್ಣು ನಿದ್ರೆಯಿಂದ ಏಳುತ್ತಾನೆ ಎಂದು ನಂಬಿ, ವಿಷ್ಣುವಿನ ವಿಗ್ರಹದ ಮುಂದೆ ದೀಪಗಳನ್ನು ಬೆಳಗುತ್ತಿದ್ದರು. ವಿಷ್ಣುವಿನೊಂದಿಗೆ ಸೂರ್ಯ, ಶಿವ, ಗೌರಿಯನ್ನೂ, ಗೋಶಾಲೆಯಲ್ಲಿದ್ದ ಹಸುಕರುಗಳನ್ನೂ, ಕುದುರೆಗಳನ್ನೂ, ಆನೆಗಳನ್ನೂ ಆಯುಧಾಗಾರದಲ್ಲಿದ್ದ ಎಲ್ಲ ಆಯುಧಗಳನ್ನೂ ಮತ್ತು ರಾಜ ಲಾಂಛನಗಳನ್ನು ಈ ದಿನ ಮತ್ತೆ ಪೂಜಿಸುತ್ತಿದ್ದರು.

ಒಬ್ಬ ಮುತ್ತೈದೆಯು (ಕೆಲವೊಮ್ಮೆ ರಾಜನಿಗೆ ಅಚ್ಚುಮೆಚ್ಚಾಗಿದ್ದ ರಾಜ ನರ್ತಕಿಯೋ, ವೇಶ್ಯೆಯೋ ಒಬ್ಬಳು) ರಾಜನಿಗೆ ವಿಶೇಷವಾಗಿ ಆರತಿ ಎತ್ತುತ್ತಿದ್ದಳು. ಈ ಆರತಿ ಮೂರು ಬಾರಿ ನಡೆಯುತ್ತಿತ್ತು. ಈ ಶಾಂತಿಯಿಂದ ರಾಜಪರಿವಾರಕ್ಕೂ, ಪ್ರಜೆಗಳಿಗೂ ಅಭ್ಯುದಯವಾಗುತ್ತದೆ. ರೋಗರುಜಿನಗಳು ದೂರವಾಗುತ್ತವೆ ಎಂಬ ನಂಬಿಕೆ ಇತ್ತು. ಹೇಮಾದ್ರಿಯ ಪ್ರಕಾರ ಈ ಪದ್ಧತಿಯನ್ನು ಅಜಪಾಲ ಎಂಬ ರಾಜನು ಚಲಾವಣೆಗೆ ತಂದು ಪ್ರತೀ ವರ್ಷವು ನಡೆಸಬೇಕೆಂಬ ನಿಯಮವನ್ನು ಮಾಡಿದ್ದನು. ಇದು ವರಾಹಮಿಹಿರ ವರ್ಣಿಸುವ ನೀರಾಜನವಿಧಿಯಾಗಿದೆ.

ಗೋವಿಂದ ವೈದ್ಯ ಬರೆದ *ಕಂಠೀರವ ನರಸರಾಜ ವಿಜಯ* (ಕ್ರಿ.ಶ. ೧೬೪೮) ಕಾವ್ಯದಲ್ಲಿ "ದೊರೆರಾಯ ನರಸೇಂದ್ರನ ಮಹಾನವಮಿಯ ಪುರದುತ್ಸವ, ನರಸೇಂದ್ರನ ಮಹಾನವಮಿಯ ಒಡ್ಡೋಲಗದ ಉತ್ಸವದ ಬಲ್‌ಸಿರಿಯ ಸಂಭ್ರಮದ ಮತ್ತು ಭೂಪನ ಪೂಜೆ, ವಿಜಯದಶಮಿಯ ಜಂಬೂಸವಾರಿಗಳು" ಬಣ್ಣಿಸಲ್ಪಟ್ಟಿವೆ.

ಕಂಠೀರವ ನರಸರಾಜ ವಿಜಯ ಕಾವ್ಯದಲ್ಲಿ ಬರುವ, ನೀರಾಜನವಿಧಿಗೆ ಸಂಬಂಧಪಟ್ಟ ವಿವರಗಳನ್ನು ಈ ಕೆಳಗಿನಂತೆ ಸ್ಪಷ್ಟಪಡಿಸುತ್ತಾನೆ.

"ಗಜಶಾಲೆ ಹಯಗಳ ಲಾಯ ದಿವ್ಯಾಯುಧ ।
ವ್ರಜವ ಪೂಜಿಪ ಭದ್ರಭವನ ।
ರಜತಸುವರ್ಣ ರತ್ನದ ಕಾಂತಿಯಿಂದ ನೆರೆ ।
ತ್ರಿಜಗಕಚ್ಚರಿಯ ಬೀರಿದುವು ॥೨೦-೪೦॥

ತೊಳಗುವಾಶ್ವೀಜ ಮಾಸದ ಶುಕ್ಲಪಕ್ಷದೊ
ಳಳವಟ್ಟ ಪ್ರಥಮದಿವಸದೆ ।
ಗಳಿಲನೋಲಗಶಾಲೆ ಪುಣ್ಯಾರ್ಚನೆ ಹೋಮ ।
ವೆಳಸಿತು ವಿಪ್ರರಿಂದಾಗ ॥೨೧-೧॥

ಗಜಶಾಲೆ ಹಯಗಳ ಲಾಯ ದಿವ್ಯಾಯುಧ ।
ವಜ್ರಗಳ ಮಂಟಪಗಳಿಗೆ ।
ದ್ವಿಜರೈದಿ ಹೋಮ ಪುಣ್ಯಾರ್ಚನೆ ಪೂಜೆಯ ।
ತ್ರಿಜಗ ನಲಿಯೆ ರಚಿಸಿದರು ॥೨೧-೨॥

ತವೆ ಜಯಘೋಷಗಳಿಂದ ಕಂಠೀರವ ।
ಭುವನೇಶ್ವರನರ್ತಿಯಲಿ ।
ನವರತ್ನದ ಗದ್ದುಗೆಯಲಿ ಮಂಡಿಸಿ ।
ಸುವಿಲಾಸದೊಳಗೆ ರಂಜಿಸಿದ ॥೨೧-೪೭॥

ಇಂತಪ್ಪೋಲಗಮೆಂಟುದಿವಸ ಪರಿ ।
ಯಂತರ ಸಕಲಸಂಭ್ರಮದೆ ।
ಸಂತೋಷವ ಸರ್ವಜನಕ ಬೀರುತಲ ।
ತ್ಯಂತಸೌಖ್ಯದಲೊಪ್ಪಿದುದು ॥೨೧-೧೩೧॥

ಬಳಿಕೊಂಭತ್ತನೆಯಾದಿನದೆ ಚಂಡಿಕಾ ।
ಲಲನೆಯ ನವಲಕ್ಷ್ಮಿಯರ ।
ವಿಲಸಿತೋತ್ಸವ ಪೂಜೆಗೆ ಶುಭಲಗ್ನವ ।
ಸಲೆ ಜೋಯಿಸಿಗರುಸಿರಿದರು ॥೨೧-೧॥

ಗಜಲಕ್ಷ್ಮಿ ಹಯಲಕ್ಷ್ಮಿಯಾಯುಧಲಕ್ಷ್ಮಿಯರ್ ।
ನಿಜವಾದ ದಾನಲಕ್ಷ್ಮಿಯರ ।
ಭುಜಲಕ್ಷ್ಮಿ ಸೌಭಾಗ್ಯ ಸಿರಿ ಕೀರ್ತಲಕ್ಷ್ಮಿಯ ।
ಭಜಿಸಿ ಪ್ರತ್ಯಕ್ಷಗೆಸಿದರು ॥೨೧-೩೦॥

ಶಾರದಲಕ್ಷ್ಮಿ ಸಾಮ್ರಾಜ್ಯಲಕ್ಷ್ಮಿಯ ಭಕ್ತಿ ।
ಸಾರದೊಳಗೆ ಪೂಜೆಮಾಡೆ ।
ಧಾರಿಣೀಶ್ವರ ಕಂಠೀಐರವೇಂದ್ರನ ಮೆಚ್ಚಿ ।
ಸೇರಿದರ್ನವಲಕ್ಷ್ಮಿಯರು ॥೨೧-೩೧॥

ಮಂಗಳಾರತಿಗಳು ಮುದ್ದುಕೋಲಾಟಗಳ್ ।
ಸಂಗೀತ ಸಕಲಭೋಗಗಳು ।

ಹಿಂಗದೊಪ್ಪಿದುವಾಯುಧಮಂಟಪದ ದಿ ।
ವ್ಯಾಂಗಣದೊಳಗೇನೆಂಬೆ ||೨೧-೩೨||

ತುರಗ ಗಜಾವಳಿ ಚಂಡಿಕಾದೇವಿಗೆ ।
ಹರುಷದೆ ಕಾಣಿಕೆಗೈದು ।
ವರವ ಪಡೆದು ಕಂಠೀರವೇಶ್ವರನಂ ।
ದರಮನೆಗೈತಂದನಾಗ ||೨೨-೩೪||

ದೊರೆರಾಯ ನರಸರಾಜೇಂದ್ರ ಸಿಂಗರಗೈದು ।
ಪರಮೋತ್ಸವದೊಳಗಾಗ ।
ಹರುಷದೊಳಗೆ ಜಂಬಿಸಾರಿಗೈತರುತಿಹ ।
ಸಿರಿಯ ಸಂಭ್ರಮವನೇವೇಳ್ವೆ ||೨೨-೮೫||"೧೫೦

ಕ್ರಿ.ಶ. ಸುಮಾರು ೧೧೭೦-೧೨೦೦ರ ಕಾಲದಲ್ಲಿದ್ದ ಅಭಿನವಚಂದ್ರ ತನ್ನ ಅಶ್ವಶಾಸ್ತ್ರ ಗ್ರಂಥದಲ್ಲಿ ಆನೆಯ ಅಧ್ಯಾಯದಲ್ಲಿ ನೀರಾಜನ ವಿಧಿಯನ್ನು ವಿವರಿಸಿದ್ದಾನೆ.

"ಶತ್ರುಕುಲವನ್ನು ಸಂಹರಿಸುವ ಉದ್ದೇಶದಿಂದಲೂ, ಆ ಮೂಲಕ ಮೇಲೆದ್ದು ಬರಲಿಹ ಜಯವಧುವನ್ನು ಕೈಹಿಡಿಯುವ ಸಲುವಾಗಿಯೂ ನೀರಾಜನ ವಿಧಿಯನ್ನು ಸಾಂಗೋಪಾಂಗವಾಗಿ ಆಚರಿಸತಕ್ಕದ್ದು!" ಎಂದು ಪ್ರಾರಂಭವಾಗುತ್ತದೆ. ಇಲ್ಲಿ ಅಶ್ವಾಯುಜ ಶುದ್ಧ ಬಿದಿಗೆಯ ದಿನ ಅಶ್ವಾನೀಕಕ್ಕೆ ರಕ್ಷೆಯಿಡುವ ಉದ್ದೇಶದಿಂದ ಉತ್ಸಾಹದಿಂದ ಮಹಾಮಂಗಲಕರವಾದ ಈ ನೀರಾಜನ ವಿಧಿಯನ್ನು ನೆರವೇರಿಸುತ್ತಿದ್ದನು. ಪಟ್ಟದ ಕುದುರೆಯನ್ನು ಆಯ್ಕೆ ಮಾಡಿಕೊಳ್ಳುವ ವಿಚಾರವನ್ನು ಕವಿ ಇಲ್ಲಿ ವರ್ಣಿಸುತ್ತಾನೆ. ಅದರ ಜೊತೆ ಜೊತೆಗೆ ಯುವರಾಜ ಕುದುರೆ, ಸೇನಾಧಿಪತಿ ಕುದುರೆ, ಅಮಾತ್ಯ ಕುದುರೆ ಇವುಗಳನ್ನೆಲ್ಲಾ ಈ ದಿನ ವಿಧಿವತ್ತಾಗಿ ಪೂಜಿಸುತ್ತಿದ್ದರು. ಗುಡ(ಬೆಲ್ಲ), ಶಾಲಿ(ಭತ್ತ), ತಂಡುಲಂ(ಅಕ್ಕಿ), ಕನ್ನಡಿ, ಕಲಶ, ಕರುಕೆ(ಗರಿಕೆ), ತೋರಣಂ, ದಧಿ, ಪುಷ್ಪಂ, ಸೊಡರು(ದೀಪ), ಎಸೆವ ರಂಗವಲಿ, ಎಲೆಯಡಕೆ -ಮುಂತಾದ ಪ್ರಸಿದ್ಧ ಪವಿತ್ರ ಪೂಜಾದ್ರವ್ಯಗಳನ್ನು ಅಲ್ಲಿ ಬಳಸುತ್ತಿದ್ದರು. ಶ್ವೇತಪತ್ರ(ಕೊಡೆ), ಮಂಗಲ, ಗೀತ ಆನಕ(ವಾದ್ಯ), ಪಟಹ, ಹೇಮಚಾಮರ, ಗಣಿಕಾವ್ರಾತ (ನಿತ್ಯ ಸುಮಂಗಲಿಯರ ಸಮೂಹ), ಸುಭಟ, ಸುಸಂಘಾತ, ಕಹಳಾರವ -ಈ ಎಲ್ಲಾ ಕೋಲಾಹಲದೊಂದಿಗೆ ಮಹಾನವಮಿಯವರೆಗೆ ಕುದುರೆಗಳನ್ನ ಸ್ನಾನ ಮಾಡಿಸುತ್ತಿದ್ದರು. ಅದಕ್ಕಾಗಿ ತೊರೆ, ಸಮುದ್ರ, ಪೆರ್ಗೆರೆ, ತಾವರೆಗೊಳ, ಮುಂತಾದ ಕಡೆಗಳಿಂದ ನೀರನ್ನು ತರುತ್ತಿದ್ದರು. ಕುದುರೆಗಳ ಮೇಲೆ ಇದ್ದ ಮಣ್ಣಿನ ಕೊಳೆಯನ್ನು ತೊಳೆದು ಆಮೇಲೆ ಪಂಚಗವ್ಯವನ್ನು ತೊಳೆಯುತ್ತಿದ್ದರು.

ದೇವತಾ ಪ್ರತಿಷ್ಠಾಪನೆಯ ಮುನ್ನ ಪುಷ್ಪಾಧಿವಾಸ, ಫಲಾಧಿವಾಸ, ರತ್ನಾಧಿವಾಸ, ಧಾನ್ಯಾಧಿವಾಸ, ಜಲಾಧಿವಾಸ ಎಂಬ ಕ್ರಮವಿದೆ. ಆಯಾಯ ವಸ್ತುಗಳಲ್ಲಿ ಈ ದೇವತಾ ವಿಗ್ರಹಗಳನ್ನು ಒಂದು ರಾತ್ರಿ ಅವಧಿಯವರೆಗೆ ಮುಳುಗಿಸಿ ಇಟ್ಟು, ಮರುದಿನ ಅದನ್ನು ತೆಗೆದು ಶುದ್ಧಿಗೊಳಿಸುವ ಕ್ರಮ ಇದೆ. ಇದೇ ರೀತಿ ಈ ಅಶ್ವಪೂಜೆಯಲ್ಲಿ ಕುದುರೆಯನ್ನು ನೀರಿನ ಒಂದು ತೊಟ್ಟಿಯಲ್ಲಿ ಕೆಲ ಕಾಲ ಕುತ್ತಿಗೆಯ ಮಟ್ಟದವರೆಗೆ ಮುಳುಗಿಸಿ ಎಬ್ಬಿಸಿ ಹೊರಗೆ ತರುವ ಜಲವಾಸದ ಅರ್ಚನೆಯನ್ನು ಈ ವಿಧಿಯಲ್ಲಿ ಮಾಡುತ್ತಿದ್ದರು. ನಂತರ ಈ ವಾಜಿಗೆ ಕುಂಕುಮ, ಅರಿಶಿನ, ಗಂಧ, ಮುಂತಾದವುಗಳನ್ನು ಪೂಜಿಸುತ್ತಿದ್ದರು. ಈಗ ರತ್ನಾವಳಿಯಿಂದ ಕೂಡಿದ ಕಳಶದ ತೋವಾಲನ್ನು ಕುದುರೆ ಮಸ್ತಕದಲ್ಲಿ ಧರಿಸುತ್ತಿತ್ತು. ಮೇಖಲೆ (ಒಂದು ಡಾಬು), ಮಣಿಸರ, ರೇಷ್ಮೆ ಬಟ್ಟೆ, ರಕ್ಷೆ, ಮುಂತಾದವುಗಳಿಂದ ಕೊರಳನ್ನು ಅಲಂಕರಿಸುತ್ತಿದ್ದರು. ಹಣೆಯ ಮೇಲೆ ಪಟ್ಟದ ಕುದುರೆಯ ಲಾಂಛನವನ್ನು ಕಟ್ಟುತ್ತಿದ್ದರು. ಇಷ್ಟೆಲ್ಲಾ ಅಲಂಕಾರವಾದಾಗ 'ಕುದುರೆಗೆ ಕೆಟ್ಟ ದೃಷ್ಟಿಗಳ ಕೆಡುಕು ಆಗದಿರಲಿ' ಎಂದು, ಒಂದು ಸೀರೆಯಲ್ಲಿ ಅರಿಶಿನ, ಉತ್ತರಣೆ (ಅಪಾಮಾರ್ಗ), ಬಿಳಿಸಾಸುವೆ, ಗಜ್ಜುಗ, ಇಂಗು, ಆಮರ್ದುವಳ್ಳಿ, ಬೇವು, ಲೋಧ್ರ, ಬಾಗೆ(ಸಿರಿಸ), ಬಜೆ, ಗುಗ್ಗುಳ, ಇಪ್ಪೆ, ಕಕ್ಕೆ, ರಾಜವೃಕ್ಷ, ಸರಳ ಗೋರೋಜನಗಳನ್ನು ಕಟ್ಟಿ ಆ ಸೀರೆಯ ಪಟ್ಟಣವನ್ನು ಕುದುರೆಯ ಕೊರಳಿಗೆ ಕಟ್ಟುತ್ತಿದ್ದರು.

ದೇವಸ್ಥಾನದ ಮಣ್ಣು, ಮದಗಜಗಳ ಕೋಡದ ಮಣ್ಣು, ಹುತ್ತದ ಮಣ್ಣು ಮತ್ತು ಅರಮನೆಯ ಮಣ್ಣು ಈ ಮೃತ್ತಿಕೆಗಳನ್ನು ಕುದುರೆಯ ಹೃದಯ ಭಾಗಕ್ಕೆ ಹಚ್ಚುತ್ತಿದ್ದರು. ವಿಶಾಲವಾದ ಆ ಅಶ್ವಶಾಲೆಯ ಮಂಟಪವನ್ನು ರಂಗವಲ್ಲಿ, ತೋರಣ, ಬಾವುಟ, ತಮಟೆ, ವೇದಘೋಷ, ಶೇಷಾಕ್ಷತೆ, ಪುಷ್ಪ, ಗಂಧ, ದೀಪ, ಧೂಪ -ಮುಂತಾದವುಗಳಿಂದ ಅಲಂಕರಿಸುತ್ತಿದ್ದರು. ಅಲ್ಲಿ ಹೋಮ ಮಾಡಿಸಿ ಪುರೋಹಿತರಿಗೆ ದಕ್ಷಣೆ ಕೊಟ್ಟು, ಮುಂಬರುವ ಸಂಗ್ರಾಮ ವಿಜಯ ಯಾತ್ರೆಗೆ ನೆರೆದ ಎಲ್ಲ ಜನರಿಂದ ಹಾರೈಕೆಗಳನ್ನ ಈಗ ಕೇಳಿಕೊಳ್ಳುತ್ತಿದ್ದರು.

ಈಗ ರೇವಂತನ ಪೂಜೆಯನ್ನು ಮಾಡುತ್ತಿದ್ದರು. ಚರು, ಬಲಿ, ತಾಂಬೂಲ, ಹೂವು, ಅಕ್ಷತೆ, ಗಂಧ, ಕೈದೀವಿಗೆ, ಪಟಗಳು, ಶಂಖ, ಭೇರಿರವ ಈ ಪೂಜೆಯಲ್ಲಿ ವಿಜೃಂಭಿಸುತ್ತಿದ್ದವು. "ಜಯದೇವ, ಭಾನುಪುತ್ರಕ, ಜಯ, ತುರುಗಾರೂಢ, ಸಾರವಿಜ್ಞಾನನಿಧಿ, ಜಯ ತುರಗ ಹೃದಯ ಚಿತ್ತಮ, ಜಯ ತುರಗಪ್ರಿಯ, ಸುರೇಜ್ಯ, ಜಯರೇವಂತಾ" -ಎನ್ನುತ್ತಾ ಮಹಾರಾಜನು, ರಾಜಪುತ್ರನು, ರಾಜಪರಿವಾರದವರು ರೇವಂತನಿಗೆ ನಮಸ್ಕಾರ ಮಾಡುತ್ತಿದ್ದರು. ಆಮೇಲೆ ಅಶ್ವ ವೈದ್ಯನಿಗೆ ಮಂಗಳ ಜೌಳಿ ಜಣಂಬ, ಉಂಗುರ, ಕರ್ಣಕುಂಡಲ, ಮುಂತಾದವುಗಳನ್ನು ಸಂತೋಷದಿಂದ ಉಡುಗೊರೆಯಾಗಿ ಆ ವೈದ್ಯನಿಗೆ ಕೊಟ್ಟು ಕೊನೆಯಲ್ಲಿ ತನ್ನ ಶಸ್ತ್ರಾಸ್ತ್ರಗಳನ್ನು ಮಹಾರಾಜನು ಕ್ರಮಬದ್ಧವಾಗಿ ಪೂಜಿಸುತ್ತಿದ್ದನು. "ಇದು ನೀರಾಜನ ವಿಧಿ' ಎಂಬುದು ಪೂಜ್ಯಂ ಚಂದ್ರಮತದೊಳ್''[೧೧] ಎಂದು ಅಭಿನವಚಂದ್ರ ಮುಕ್ತಾಯ ಗೊಳಿಸುವುದನ್ನು ಕಾಣಬಹುದು.

ಮಹಾನವಮಿಯಲ್ಲಿ ಕುದುರೆಗೆ ನೀರಾಜನವನ್ನು ಮಾಡುವುದರಿಂದ ವೈರಿಯನ್ನು ಗೆಲ್ಲಬಹುದು. ಆಶ್ವೀಜ ಶುದ್ಧ ಬಿದಿಗೆಯ ದಿನ ಕುದುರೆಗೆ ರಕ್ಷೆಯ ಕಟ್ಟುವುದರಿಂದ ಅರಸನಿಗೆ ಸಂತೋಷ ಉಂಟಾಗಿ ಮಂಗಳವಾದ್ಯ ಮಾಡುವನು. ಅತಿ ಬಿಳಿದಾಗಿರುವ, ಆಯುತವುಳ್ಳ, ದೊಡ್ಡದಾದ ದೀರ್ಘಾಯುವನ್ನು ಗುಡುಗಿನರೂಪ ಧ್ವನಿಯನ್ನು ಹೊಂದಿರುವ ಬ್ರಾಹ್ಮಣನನ್ನು ಕರೆಯಿಸಿ ಪೂಜಿಸುವದು.

"ಲಕ್ಷಣಯುಕ್ತ ಸರ್ವಭ
ರಕ್ಷಮನಂ ಕ್ರೋಧಿರಾಜನೆನಿಪ ನಿಲಜವಂ
ಶಿಕ್ಷಿತವಿದನಂ ಪಂಚ ವಿ
ಧಂ ಕಾಂತಿಯ ಶೋಣವರ್ಣನದು ಯುವರಾಜಂ"[೧೦೨] (೮-೬)

ಉತ್ತಮ ಲಕ್ಷಣವುಳ್ಳ, ಸರ್ವಗುಣಸಂಪನ್ನ, ಕೋಪವುಳ್ಳ, ವಾಯುವೇಗವುಳ್ಳ, ನಾನಾಸಾಧನೆಯನ್ನು ಮಾಡಬಲ್ಲ ಐದು ಗುಣಗಳಿರುವ ಹವಳದ ವರ್ಣದ ಕೆಂಪು ಕುದುರೆಯನ್ನು ಯುವರಾಜಪಟ್ಟ ಕಟ್ಟುವದು.

ಹಗೆಯ ಕುಲ, ಬಲ, ತೇಜ, ಸ್ವರ ಇವುಗಳಲ್ಲಿ ಸತ್ವವುಳ್ಳ ಜೀವ, ಪ್ರಾಣ ಲಕ್ಷಣಗಳಲ್ಲಿ ಸಂಪೂರ್ಣವಾದ ಶುಭಲಕ್ಷಣ ಹೊಂದಿರುವುದನ್ನು ದಳವಾಯಿ ಪಟ್ಟಕ್ಕೆ ಕಟ್ಟುವದು. ಹಾಗೆಯೇ ಬೋರ ಎಂಬ ಕುದುರೆಯು ನಾಲ್ಕು ವರ್ಣಗಳಲ್ಲಿ ವಿಶೇಷಜ್ಞ, ವರ್ಣಲಕ್ಷಣ, ವೀರವನುಳ್ಳ ದೊಡ್ಡದಾದ ಧೀರೋದಾರವಾದ ಕುದುರೆಯು ಪ್ರಮುಖವಾದದ್ದು.

"ಗುಡಶಾಲಿ ತಡುಲಂ ಕ
ನ್ನಡಿ ಕಲಶಂ ಕಱುಕೆ ತೋರಣಂ ದಧಿ ಪುಷ್ಪಂ
ಸೊಡರೆಸವ ರಂಗವಲಿ ಎಲೆ
ಯಡಕೆ ಪವಿತ್ರಂ ಪ್ರಸಿದ್ಧಿಮಿವೆ ಗುಣರತ್ನಾ"[೧೦೩] (೮-೧೧)

ಗುಡಿ ರಾಜನ್ನದಕ್ಕಿ, ಕನ್ನಡಿ, ಕಳಶ, ಗರಿಕೆಯಕೊನರು, ತೋರಣ, ಮೊಸರು, ಹಣತೆ ದೀಪ, ಎಲೆ, ಅಡಿಕೆ ಪವಿತ್ರ ಬಿಳಿಯಸಾಸವೆ ಮುಂತಾದ ಎಲ್ಲಾ ಮಂಗಳ ದ್ರವ್ಯಂಗಳನ್ನು ಹಾಗೂ ಸುತ್ತಿಗೆ ಮಂಗಳವಾದ್ಯ. ಪಟಹ, ಚಿನ್ನದ ಕಾವಿನ ಚಮರ, ಸೂಳೆಯರು, ಪರಿಹಾರ ಸಮೂಹ ಕಹಳೆಯ ಧ್ವನಿ ಇವೆಲ್ಲವನ್ನು ತರುವುದು. ನಂತರ ತೊರೆ, ಸಮುದ್ರ, ದೊಡ್ಡಕೆರೆ, ತಾವರಕೊಳ ಇರುವಲ್ಲಿಗೆ ಕುದುರೆಯನ್ನು ಕರೆದು ಒಯ್ಯುದು ಅಲಂಕರಿಸಿ ಹರೆ, ಕಹಳೆ, ಶಂಖಧ್ವನಿ ನೆರವೇರಿಸಿ ಲಾಯಕ್ಕೆ ಕರೆತರುವುದು. ನಂತರ ಕುಂಕುಮ ಅರಿಶಿನ, ಪರಿಮಳದ ಗಂಧಗಳನ್ನು ಲೇಪಿಸುವುದು. ಕಳಸ ತೋಮರ ರತ್ನವನ್ನು ಹಣೆಯಲ್ಲಿ ಹಚ್ಚಿ ಬಣ್ಣದ ಸೀರೆಗಳನ್ನು ಹೊಟ್ಟೆಯಲ್ಲಿ ಇಳಿಬಿಟ್ಟು ಮತ್ತೆ ಮೆತ್ತಲಿಯಾದಿಯಾದ ಶೃಂಗಾರಗಳನ್ನು ಮಾಡಿ, ಪಟುಗೆಯನ್ನ, ಮಣಿಸರವನ್ನ, ರಕ್ಷೆಯನ್ನು, ಪವಿತ್ರಗಳನ್ನು, ತೊಡರನ್ನು ಸಹ ಕುದುರೆಯ ಹಣೆಯಲ್ಲಿ ಪಟ್ಟವ ಕಟ್ಟುವದು.

ಅರಿಸಿನ, ಉತ್ತರಣೆ, ಬಿಳಿಯ ಸಾಸುವೆ, ಗಜ್ಜುಗ, ಅಮರದಬಳ್ಳಿ, ಬೇವು ಲೋಂಧ್ರ, ಬಾಗೆ, ಬಜೆ, ಗುಗ್ಗುಳ, ಹಿಪ್ಪಲಿ, ಕಕ್ಕೆ ಲೋಹ ಗೋರೋಜನ ಇವೆಲ್ಲವುಗಳನ್ನು ಕುದುರೆಯ ಕೊರಳಿಗೆ ಧಾನ್ಯದ ಪೊಟ್ಟಣವನ್ನು, ರಕ್ಷೆಯನ್ನು ಕಟ್ಟಿದರೆ ರಾಕ್ಷಸ, ಪಿಶಾಚಿಗಳು ಹತ್ತಿರ ಸುಳಿಯುವುದಿಲ್ಲ. ಜೊತೆಗೆ ಮುಟ್ಟಲು ಆಗುವುದಿಲ್ಲ. ಅವುಗಳ ದೃಷ್ಟಿಗಳು ಸಹ ತಾಕುವುದಿಲ್ಲ. ದೇವರ ಗುಡಿಯ ಮಣ್ಣು, ಆನೆಯಕೊಂಬು, ಹುತ್ತದಮಣ್ಣು, ಅರಮನೆಯಮಣ್ಣು ಇವುಗಳೆಲ್ಲವನ್ನು ಕೂಡಿಸಿ ಕುದುರೆಯ ಮೈಗೆ ಲೇಪಿಸುವುದು. ರಂಗವಲ್ಲಿ, ತೋರಣ, ಮಂಗಳವಾದ್ಯ, ವೇದಘೋಷ, ಅಕ್ಷತೆ, ಪುಷ್ಪ, ಗಂಧ, ಧೂಪ, ದೀಪದಿಂದ ಕುದುರೆಗೆ ಶಿಶ್ನದ ಸರಿಸದಲ್ಲಿ ಅರ್ಚಿಸುವದು.

ಲಾಯದಲ್ಲಿ ಬ್ರಾಹ್ಮಣರ ಕೈಯಲ್ಲಿ ಹೋಮವನ್ನು ಮಾಡಿಸಿ ಅವರಿಗೆ ದಕ್ಷಿಣೆಯನ್ನು ಕೊಟ್ಟು ಅವರ ಕೈಯಲ್ಲಿ ಮಂತ್ರಾಕ್ಷತೆ ತೆಗೆದು ಕೊಂಡರೆ ತನ್ನ ವೈರಿಯನ್ನು ಜಯಿಸಿ ಪದಲೋಕ ಸಾಧನವನ್ನು ಪಡೆದು ಚೆನ್ನಾಗಿ ಬದುಕುವದು.

> "ಅಭಿಷೇಕಮಂ ತೋರಣದೊಳ್
> ವಿಭೂತಿಯಂ ತಂದು ಪಟ್ಟವರ್ಧನಕೆ ಜಗ
> ತ್ರಭುವಂ ಪೊಡೆವಡಿಸುವುದಿರು
> ಳಭಿಮುಖವಾಗಿರ್ದು ಶಾಸ್ತ್ರ ವೇದ್ಯಂ ವೈದ್ಯಂ"[೧೧೪] (೮-೨೫)

ಅಭಿಷೇಕವನ್ನು ಮಾಡಿ ತೋರಣದಲ್ಲಿ ಸಂಪತ್ತುಗಳಿಂದ ತಂದ ಪಟ್ಟದ ಕುದುರೆಗೆ ಅರಸನು ನಮಸ್ಕರಿಸಿ ರಾತ್ರಿಯ ಸಮಯದಲ್ಲಿ ಆಯುಧ ಪೂಜೆಗಳನ್ನು ವಿಧಿ ವಿಧಾನದ ಮೂಲಕ ಶಾಸ್ತ್ರೋಕ್ತವಾಗಿ ಮಾಡುವನು. ಬ್ರಹ್ಮನ ಕಣ್ಣೀರಿನಿಂದ, ಚಂದ್ರನಿಂದ, ಕಿಚ್ಚಿನಿಂದ, ಮೃಗದಿಂದ, ದುಗ್ಧಮಥನದಿಂದ ಹುಟ್ಟಿದ ಕುದುರೆಗಳಿಗೆ ಜಯವೆಂದೂ ಜಯ ಧನುಜ ಕುಲವಿಧೇಯ ಐಶ್ವರ್ಯಕ್ಕೆ ಕಾರಣ ಜಯಕ್ಕೆ ಒಡೆಯನೆ ಜಯ ಜಯವೆಂದೂ ಶತ್ರುಕ್ಷಯಕೀರ್ತಿ ಜಯವೆಂದು ಕೊಂಡಾಡಿ ಅನಂತರ ಹರುಷ, ಸಂತೋಷದಿಂದ ಎದ್ದು ನಮಸ್ಕರಿಸಿ ನಾನಾವಾದ್ಯಗಳಿಂದ ಜಯವೆಂದು ದೇವಾನುದೇವತೆಗಳಿಗೆ ವಂದಿಸಿ, ಮಂಗಳ ಜವಳಿಯನ್ನು, ಆಭರಣವನ್ನು, ಉಂಗುರವನ್ನು ವೈದ್ಯರಿಗೆ ಕೊಟ್ಟು, ಬಳಿಕ ಆಯುಧಗಳನ್ನು ಅರ್ಚನೆ ಮಾಡುವನು.

೪.೯. ಅಶ್ವಶಿಕ್ಷಣ

ಅಭಿನವಚಂದ್ರ ತನ್ನ ಪ್ರಸಿದ್ಧ ಕೃತಿಯಾದ ಅಶ್ವಶಾಸ್ತ್ರದಲ್ಲಿ ಕುದುರೆ ಶಾಸ್ತ್ರವನ್ನು ಯಾರಿಗೆ ಮತ್ತು ಹೇಗೆ ಕಲಿಸಬೇಕು ಎಂಬ ವಿಚಾರವನ್ನು ಕುರಿತು ಹತ್ತನೆಯ ಅಧ್ಯಾಯದಲ್ಲಿ ಸ್ವಾರಸ್ಯಪೂರ್ಣವಾಗಿ ಚರ್ಚಿಸಿದ್ದಾನೆ.

"ಆಚಾರ್ಯಂ ಶಿಷ್ಯನ ಶೀ
ಲಾಚಾರಮನಱಿದು ಶಿಕ್ಷೆಗೆಯ್ವುದು ತತ್ಪೂ
ರ್ವಾಚಾರ್ಯ ವಿರಚಿತಮಿದದು"[೧೩೯] (೧೦-೧೧)

ಗುರು ಆಚಾರ್ಯ ನೀತಿವುಳ್ಳ, ಶಿಷ್ಯರಿಗೆ ಕುದುರೆ ಶಾಸ್ತ್ರವನ್ನು ಉಪದೇಶಮಾಡಬೇಕು. ದುರಾಚಾರಿಗಳಿಗೆ, ನೀತಿಬಿಟ್ಟವರಿಗೆ ಇಂತಹ ಶಿಷ್ಯ ಪರಂಪರೆಯುಳ್ಳವರಿಗೆ ಶಾಸ್ತ್ರವನ್ನು ಹೇಳಲಾಗದು ಎಂದು ಸಲಹೆ ನೀಡಿದ್ದಾನೆ. ಗುರುವಿನ ವಿದ್ಯೆಯನು ಕೆಡಿಸುವ, ದಯಾಹೀನ ಲಜ್ಜೆ ಇಲ್ಲದವನಿಗೆ, ಅಜ್ಞಾನಿಗೆ, ನಿಷ್ಠುರನಿಗೆ, ಆಲಸ್ಯವುಳ್ಳವನಿಗೆ, ಕುರೂಪಿಗೆ ದೀಪನಕಾರಿಗೆ ಸುರೆಯ ಸೇವಿಸುವವನಿಗೆ ವ್ಯಾಧಿವಂತನಿಗೆ, ವಿಕಾರಿಗೆ, ಕಿವುಡರಿಗೆ, ಕುರುಡರಿಗೆ, ವಿಚಾರವಿಲ್ಲದವರಿಗೆ ವೈದ್ಯವನ್ನು ಕಲಿಸಬಾರದು.

"ಗುರುಭಕ್ತಂ ಕುಲಜಂ ಪ್ರಸನ್ನವದನಂ ಮೇಧಾವಿ ಸದ್ಧರ್ಮತ
ತ್ಪರನುತ್ಪಾಟಿತ ಚಿಂತ್ಯ ನನರಮಣೀ ದೂರಂ ಕೃತಜ್ಞಂ ಸ್ಥಿರಂ
ನಿರುಜಂ ಸರ್ವಜನೋಪಕಾರಿ ಶುಚಿ ಸದ್ವಾಕ್ಯಂ ನಿರಾಲಸ್ಯ ರ
ಪ್ಪರ ನಾರಯ್ದು ಪದೇಶಮಂ ಕಡುವುದಶ್ವಾಚಾರ್ಯ ರಾಜೋತ್ತಮಂ"[೧೩೭] (೧೦-೩)

ಗುರುಭಕ್ತಿಯುಳ್ಳವನಿಗೆ, ಕುಶಲವನುಳ್ಳವನಿಗೆ, ಮತಿಉಳ್ಳ, ಧರ್ಮಬುದ್ಧಿ, ಹರುಷಮನುಳ್ಳ, ಪರಸ್ತ್ರೀಗಮನವಿಲ್ಲದವನಿಗೆ, ಶಾಸ್ತ್ರಸಂಪನ್ನನಿಗೆ, ಸ್ಥಿರವಾಗಿರುವ ಸರ್ವಜನೋಪಕಾರಿಗೆ, ಶುಚಿಗೆ, ಸತ್ಯವುಳ್ಳವನಿಗೆ ಆಲಸ್ಯವಿಲ್ಲದವನಿಗೆ, ಈ ಎಲ್ಲಾ ಗುಣಲಕ್ಷಣವನ್ನು ಹೊಂದಿರುವ ಶಿಷ್ಯನಿಗೆ ಕುದುರೆಯ ಶಾಸ್ತ್ರವನ್ನು ಕಲಿಸುವುದರಿಂದ ಪ್ರಯೋಜನವಾಗುತ್ತದೆ.

ತಿರಿದುಂಡು ಕಪ್ಪಡವ ಹೊದ್ದುಕೊಂಡು ಜಿತೇಂದ್ರಿಯನಾಗಿ ಇರುವ ಶಿಷ್ಯನು ಸಕಲ ವಿದ್ಯವನ್ನು ಕಲಿಯುವನು. ಅಂತಹವರಿಗೆ ಶಾಸ್ತ್ರವನ್ನು ಹೇಳಿ ಕೊಡುವುದರಿಂದ ವಿದ್ಯೆಯ ಉಪಯೋಗವಾಗುವುದು. ಜೊತೆಗೆ ಪುಣ್ಯಪ್ರಾಪ್ತಿಯಾಗುವದು. ಪರಂಪರೆ ಬೆಳೆದುಕೊಂಡು ಬರುವುದು.

ಕುದುರೆಯು ಹಿಡಿದು ನಿಲ್ಲಿಸಿದಾಗಲೆಲ್ಲಾ ಅಡ್ಡ ತಿರುಗುವುದೋ ಅದನ್ನು ಮಂಡಲದಲ್ಲಿ ಓಡಿಸಿ, ಕಡಿವಾಣವನ್ನು ಹಾಕಿ ದೃಢವಾಗಿ ಎಳೆದು ಹತೋಟಿಗೆ ತರಬೇಕು. ಹಾಗೆಯೇ ಅವಿಲಾಣವನ್ನು ಮೇಲೆ ಮಾಡಿಕೊಯಿ ಯಾವ ಕುದುರೆಯು ಭಯಪಟ್ಟು ನಿಲ್ಲುವುದೋ ಅದರ ಕಟವಾಯಿಗಳನ್ನು ಒತ್ತಿ ತನ್ನ ಪಾದಗಳಿಂದ ಕುದುರೆಯ ಪಕ್ಕೆಗಳಿಗೆ ಗಾಢವಾಗಿ ಸವಾರನು ಒದೆಯಬೇಕು. ಕುದುರೆಯು ಮೇಲೆ ಎಗರುವುದೋ, ಅದರ ಕಡಿವಾಣವನ್ನು ಜೋರಾಗಿ ಎಳೆದು ನಂತರ ಕಡಿವಾಣವನ್ನು ಎಳೆಯುವುದರಿಂದ ಹತೋಟಿಗೆ ಬರುತ್ತದೆ. ಕಡಿವಾಣವನ್ನೇ ತೆಗೆದು ಹಾಕಲು ತುಂಬಾ ಜಾಣತನದಿಂದ ತೊಡಿಸಬೇಕು. ತುಂಬಾ ಕರ್ಕಶವಾದ ಮುಖದಲ್ಲಿ ಅವಿಲಾಣವನ್ನೇ ಇಷ್ಟಪಡದ ಕುದುರೆಯ ಬಾಯಿಗೆ ಸೂತ್ರಿಕೆ(ಹಗ್ಗ)ಯನ್ನು

ಹಾಕಿ, ನಂತರ ಕಡಿವಾಣವನ್ನು ದೃಢವಾಗಿ ಎಳೆದು ನಿಲ್ಲಿಸಬೇಕು. ಅವಿಲಾಣಕ್ಕೆ ಸೇರಿದ ಕಡಿವಾಣವನ್ನು ಸೂತ್ರಿಕೆಯೊಡನೆ ಎಳೆಯಬೇಕು. ಒಪ್ಪದೆ ತಂಟೆಮಾಡಿದರೆ ಅದರ ತಲೆ ಪಟ್ಟಿಯನ್ನು ಎಳೆಯಬೇಕು. ಮತ್ತೆ ಮತ್ತೆ ತಲೆಯನ್ನು ಎತ್ತುವುದೋ ಆ ಸಂದರ್ಭದಲ್ಲಿ ವೇಗವಾಗಿ ಓಡಿಸಬೇಕು. ತಪ್ಪಿಸಿಕೊಂಡು ಹೋಗಲು ಯತ್ನಿಸುತ್ತ ಕುದುರೆ ಲಾಲಿಕೆಯನ್ನು ಧರಿಸಿ ನಿಲ್ಲುವುದೋ ಆಗ ನಾಲ್ಕನೆಯ ಧಾರೆಯಲ್ಲಿ ವೇಗವಾಗಿ ಓಡಿಸಬೇಕು ಹೀಗೆ ಮಾಡುವುದರಿಂದ ಕುದುರೆ ಭಯದಿಂದ ಲಾಲಿಕೆಯನ್ನು ಬಿಟ್ಟರೆ ಆಗ ಕಡಿವಾಣದ ತುದಿಗೆ ಕೀಲುಗಳಿಂದ ಲಾಲಿಕೆಯನ್ನು ಬಿಗಿ ಮಾಡಿದರೆ ಸೂಕ್ತ.

ಕುದುರೆಯ ಬಾಯಿಯನ್ನು ಮತ್ತೆ ಮತ್ತೆ ತೆರೆಯುವುದೋ ಅಂಥ ಕುದುರೆಯನ್ನು ಕೈಬಳಕವುಳ್ಳ ಶ್ರೇಷ್ಠ ಸವಾರನು ಪುಲೆಯಲ್ಲಿ ನಿಯೋಜಿಸಬೇಕು. ಕುದುರೆ ಬಾರಿ ಬಾರಿಗೂ ತನ್ನ ನಾಲಗೆಯನ್ನು ಹೊರಚಾಚುವುದೋ ಅದರ ಲಾಲಿಕೆಯ ಪಕ್ಕದಲ್ಲಿ ಚೂಪಾದ ಮುಳ್ಳಿನಂಥ ಸೂಜಿಗಳನ್ನು ಹಾಕಿಸಬೇಕು. ನಾಲಿಗೆ ಚಾಚಿದರೆ ಅವು ಚುಚ್ಚುವುದರಿಂದ ಕುದುರೆ ಆ ಅಭ್ಯಾಸವನ್ನು ತ್ಯಜಿಸುತ್ತದೆ. ತಲೆಯನ್ನು ತುಂಬಾ ಕೆಳಗೆ ಬಗ್ಗಿಸುವುದು. ಅದರ ಎದೆಯ ಮೇಲಿನ ಚರ್ಮದ ಪಟ್ಟಿಯನ್ನು ಸಡಿಲಗೊಳಿಸಿ, ಕಡಿವಾಣವನ್ನು ಮೇಲಕ್ಕೆ ಎಳೆದು ತಲೆಮೇಲೆ ಎತ್ತುವಂತೆ ಮಾಡಬೇಕು. ಹಿಂಗಾಲುಗಳಿಂದ ಆಸನವನ್ನು ಒದೆಯುವುದೋ ಆ ಕುದುರೆ ಹಿಂಗಾಲುಗಳಿಂದಲೇ ನಡೆಯುವಂತೆ ಮಾಡಿ ಆನಂತರ ಅದರ ಬೆನ್ನು ಬಗ್ಗುವಂತೆ ಮಾಡುವುದು ಸೂಕ್ತ. ಓಡಿಸಿಕೊಂಡು ಹೋಗುತ್ತಿದ್ದಾಗ ಕುದುರೆ ಮೇಲೆ ಎಗರಿ ಬೀಳುವುದೋ ಅದರ ಬಾಯಿಯಲ್ಲಿ ಶಿಲೀಕೆಯನ್ನು, ಕೂದಲಿನಿಂದ ಮಾಡಿದ ಉಂಡೆಯನ್ನು ಕಡಿವಾಲಿಕೆಯನ್ನು ಇಡಬೇಕು. ಚಾವಟಿಯನ್ನು ಕಾಣದಿದ್ದರೂ ಜಿಂಕೆಯಂತೆ ಓಡುವ ಕುದುರೆಯನ್ನು ಕಡಿವಾಣದಿಂದ ಸಡಿಲುಗೊಳಿಸಿ ಹಿಡಿದು ಧಾರೆಗಳನ್ನು ಹೆಚ್ಚಿಸುತ್ತ ಪ್ರಚೋದಿಸಿ ಓಡಿಸಬೇಕು. ರಾವುತನು ಏರುವುದನ್ನೇ ಸಹಿಸದಿರುವ ಕುದುರೆಯನ್ನು ಅದರ ಕುತ್ತಿಗೆಯನ್ನು ಪಕ್ಕಕ್ಕೆ ತಿರುಗಿಸುವಂತೆ ಮಾಡಿ, ಲಗಾಮನ್ನು ದೃಢವಾಗಿ ಹಿಡಿದು ವೇಗವಾಗಿ ಓಡಿಸಬೇಕು. ಯಾವ ಕುದುರೆ ಹಾವಿನಂತೆ ವಕ್ರವಾಗಿ ಹೋಗುವುದೋ ಅದರ ಎರಡು ಪಕ್ಕಗಳಲ್ಲಿ ಕುದುರೆಯನ್ನು ಜೋಡಿಸಿ ಪ್ರಯತ್ನ ಪೂರ್ವಕವಾಗಿ ಏಟು ಪ್ರಚೋದಕ ವಾಕ್ಯಗಳಿಂದ ಓಡಿಸಬೇಕು. ಮೇಲೇರುವ ಸವಾರನನ್ನೇ ಹಿಂಗಾಲಿನಿಂದ ಒದೆಯುವುದೋ ಅದನ್ನು ಎದೆಮುಟ್ಟದ ನೀರಿನಲ್ಲಿ ನಿಲ್ಲಿಸಿ ಸವಾರನು ಅದರ ಮೇಲೆ ಏರಿ ಕುಳಿತು ಕೊಳ್ಳಬೇಕು. ಆಗ ಏರಿ ಕುಳಿತ ರಾವುತನೊಡನೆ ಕುದುರೆ ಬಿದ್ದು ಬಿಡುವುದೋ ಜೀನನ್ನು ಹಾಕದೆ ಅದರ ಮೇಲೆ ಇನ್ನೊಬ್ಬನನ್ನು ಕೂಡಿಸಿ ಓಡಿಸಬೇಕು. ಸವಾರನನ್ನು ಕೂಡಿಸಿಕೊಂಡು ಯಾವುದಾವುದೋ ದಾರಿಯಿಂದ ಹೊರಟು ಬಿಟ್ಟರೆ ಆ ದಾರಿಯಲ್ಲೇ ಅದನ್ನು ಚಾವಟಿ ಏಟಿನಿಂದ ನಿಯಂತ್ರಿಸಬೇಕು. ಎರಡು ಪಕ್ಕೆಗಳನ್ನು ಅತಿಯಾಗಿ ಹಾರಿಸಿದರೆ, ಸವಾರನನ್ನು ಪಕ್ಕಕ್ಕೆ ಬೀಳಿಸಿದರೆ ಗಾಢವಾಗಿ ಉರಸ್ತ್ರಕಾಣ (ಎದೆಯ ಪಟ್ಟಿ) ದಿಂದ ಕಟ್ಟಿ, ಕಡಿವಾಣವನ್ನು ಗಟ್ಟಿಯಾಗಿ ಹಿಡಿದು ಓಡಿಸಬೇಕು.

ಎಷ್ಟು ಪ್ರಚೋದಿಸಿದರೂ ಕುದುರೆಯೂ ಮುಂದೆ ಹೋಗದೆ ಇದ್ದರೆ ಅದರ ಮೇಲೆ ಏರಿ, ತುಂಬಾ ಕಾಲ ಕುಳಿತುಕೊಳ್ಳಬೇಕು. ಅದು ಯಾವ ಕಡೆಗಾದರೂ ಹೋಗುವವರೆಗೂ ಹಾಗೆ ಕುಳಿತುಕೊಳ್ಳಬೇಕು. ಹಾಗಾದರೂ ಮುಂದೆ ಹೋಗದಿರುವಾಗ ಚಾವಟಿಯಿಂದ ಹೊಡೆಯಬೇಕು. ಇಷ್ಟು ಮಾಡಿದರೂ ಸ್ಥಿರವಾಗಿ ಒಂದೆ ಕಡೆ ನಿಂತರೆ ಅದನ್ನು ಪಳಗಿಸಲು ಅತ್ಯಂತ ಕಷ್ಟವಾದ ವಾಹನಾಧಮ ಎಂದು ತಿಳಿಯಬೇಕು. ಅಂಥ ಕುದುರೆಯ ಸವಾರನ ಕಾಲಿನ ಗಂಟಿನ ಬಳಿ ಪಾದುಕೆಗೆ ಕಬ್ಬಿಣದ ಮೊಳೆಗಳನ್ನು ಹಾಕಿಸಿ ಅವುಗಳಿಂದ ಕುದುರೆಯ ಹೊಟ್ಟೆಗೆ ಅದು ಓಡುವವರೆಗೂ ಹೊಡೆಯಬೇಕು. ಹೀಗೆ ಪೀಡಿಸಲ್ಪಟ್ಟರೂ ಕುದುರೆ ಒಂದು, ಹೆಜ್ಜೆಯನ್ನು ಮುಂದಿಡದಿದ್ದರೆ ಅದು ಹಿಂದಾದರೂ ಹೋಗುವಂತೆ ಮಾಡಬೇಕು. ಚಕ್ರದಂತಾದರೂ ಅದು ತಿರುಗುವಂತೆ ಮಾಡಿದರೂ ಮೋಟು ಮರದಂತೆ ಸ್ಥಿರವಾಗಿ ನಿಲ್ಲಲು ಅದರ ಕಣ್ಣುಗಳನ್ನು ಪಟ್ಟಿಯಿಂದ ಮುಚ್ಚಿ (ಹತ್ತಿರದಲ್ಲಿ ಜೋರಾಗಿ) ಕೊಂಬು ಕಹಳೆಗಳ ಶಬ್ದವನ್ನು ಮಾಡಬೇಕು. ನಿಯತವಾದ ದಾರಿಯಲ್ಲಿ ಓಡದೆ ಕುದುರೆ ತನ್ನ ನಿರ್ದಿಷ್ಟ ಪಥವನ್ನು ಬಿಟ್ಟು ಒಳಗೆ ನುಗ್ಗಿದರೆ, ಕಡಿವಾಣವನ್ನು ಎಳೆದು ಅದನ್ನು ನಿರ್ದಿಷ್ಟ ಪಥವನ್ನು ಬಿಟ್ಟು ಒಳಗೆ ನುಗ್ಗಿದರೆ, ಕಡಿವಾಣವನ್ನು ಎಳೆದು ಅದನ್ನು ನಿರ್ದಿಷ್ಟ ಮಂಡಲದಲ್ಲಿ ನಡೆಸಬೇಕು. ಚಲಿಸುವಾಗ ಕುದುರೆ ನಿರ್ದಿಷ್ಟ ಮಾರ್ಗದ ಹೊರಗೆ (ಆಚೆಗೆ) ಹೋಗುವುದರಿಂದ ಅದರ ಪಕ್ಕದಲ್ಲಿ ಇನ್ನೊಂದು ಸರಿಯಾಗಿ ನಡೆಯುವ ಕುದುರೆಯನ್ನು ಜೋಡಿಸಬೇಕು ಒಂದೇ ಧಾರೆಯಲ್ಲಿ ಕುದುರೆ ಚೆನ್ನಾಗಿ ಓಡುವುದೋ ಅದನ್ನು ಅದೇ ಧಾರೆಯಲ್ಲಿ ಸುಸ್ತಾಗುವವರೆಗೂ ಓಡಿಸಬೇಕು. ಹೀಗೆ ಮಾಡುವುದರಿಂದ ಅದು ಬೇಸರದಿಂದ ಕಡಿವಾಣವನ್ನೇ ಬಿಡಬಹುದು. ಇನ್ನೊಂದು ಲಗಾಮಿನಿಂದ ಚೆನ್ನಾಗಿ ಹಿಡಿದು ಕೊಂಡಾಗ ಕುದುರೆಯು ಓಡುತ್ತದೆ. ತನ್ನ ಆಶ್ರಯಸ್ಥಾನವನ್ನು ತಲುಪಿದ ಮೆಲೆ ಸುಮ್ಮನೆ ನಿಂತು ಬಿಡುವ ಕುದುರೆ 'ಶುಲಕ' ಎನಿಸಿಕೊಳ್ಳುತ್ತದೆ.

ಆಶ್ರಯವಿಲ್ಲದ ಕುದುರೆಗೆ ಪೂರ್ವ ಪರಿಚಯವಿಲ್ಲದ ಪ್ರದೇಶದಲ್ಲಿ ಪ್ರಯತ್ನ ಪೂರ್ವಕವಾಗಿ ಆ ಶೂಲಕವನ್ನು ಓಡಿಸಬೇಕು. ಈ ರೀತಿಯಾದ ಪ್ರಯತ್ನದಿಂದ ದುಷ್ಟ ಮನಸ್ಸಿನ ಶೂಲಕಗಳನ್ನು ಪಳಗಿಸಬಹುದು. ಇದರಿಂದ ಅವು ಕಾಲಾಂತರದಲ್ಲಿ ಉತ್ತಮ ತುರಗಗಳಾಗಿ, ರಾಜರ ವಾಹನಗಳಾಗಲೂ ಅರ್ಹತೆ ಪಡೆಯುತ್ತವೆ."[೧೩೭]

೪.೧೦. ಕುದುರೆ ತಳಿ ಅಭಿವೃದ್ಧಿ

ನಾಗರಿಕತೆಯ ಪ್ರಗತಿಯೊಡನೆ ಕುದುರೆಯಿಂದ ಮನುಷ್ಯ ಪಡೆಯುವ ಸೇವೆಗಳ ವ್ಯಾಪ್ತಿ ಬಹುವಿಸ್ತಾರಗೊಂಡಿದೆ. ಆದರೆ ತನ್ನ ಸ್ವಚ್ಛಂದ ಸ್ಥಿತಿಯಲ್ಲಿ ಕುದುರೆ ಬಾಳಿ ವಿಕಸಿಸುವ ಪರಿಸ್ಥಿತಿ ಬಹುಮಟ್ಟಿಗೆ ಉಳಿಯಲಿಲ್ಲ. ಭಿನ್ನ ಉದ್ದೇಶಗಳಿಗೆ ಅನುಸಾರವಾಗಿ ಪ್ರಾದೇಶಿಕ ಸೌಕರ್ಯಗಳನ್ನು ಗಮನದಲ್ಲಿಟ್ಟುಕೊಂಡು ತಳಿ ಸಂಕರ ಮಾಡಿ ಹೊಸ ತಳಿಯ ಕುದುರೆಗಳನ್ನು ಪಡೆಯುವ ಕಲೆಗಾರಿಕೆಯನ್ನು ಮನುಷ್ಯ ಕರಗತ ಮಾಡಿಕೊಂಡ. ಆಫ್ರಿಕ, ಏಷ್ಯ ಮತ್ತು ಯೂರೋಪ್ ಭಾಗಗಳಲ್ಲಿ ಅಶ್ವಸಂಖ್ಯೆಯ

ಕ್ರಮಬದ್ಧ ವಿಸ್ತರಣೆ ಬಹಳ ಹಿಂದಿನ ಕಾಲದಲ್ಲೇ ಆರಂಭವಾಯಿತು. ಗ್ರೀಕ್ ದೇಶದಲ್ಲಿ ಕ್ರೀಡಾ ಚಟುವಟಿಕೆಗಳಿಗಾಗಿ ವಿಶ್ವದ ನಾನಾ ಭಾಗಗಳಿಂದ ಹೇರಳವಾಗಿ ಕುದುರೆಗಳು ಆಮದಾಗುತ್ತಿದ್ದವು. ಅಲ್ಲಿ ಕುದುರೆಯ ಅಭಿವೃದ್ಧಿ ಕೇಂದ್ರಗಳು ಸ್ಥಾಪಿತವಾದವು. ತರಬೇತಿ ಲಾಯಗಳು ಕಟ್ಟಲ್ಪಟ್ಟವು. ಹೀಗಾಗಿ ಆ ದೇಶದ ಕುದುರೆ ಅಭಿವೃದ್ಧಿಗೆ ಅತೀ ಪುರಾತನ ಕಾಲದಿಂದಲೂ ಹೆಸರುವಾಸಿಯಾಗಿದೆ. ಕುದುರೆ ಮತ್ತು ಅಶ್ವರಥಗಳ ಜೂಜು ಆಗಿನ ರೋಮನ್ ದೇಶದಲ್ಲಿ ಆಧುನಿಕ ಕುದುರೆ ಜೂಜಿನಂತೆಯೇ ನಡೆಯುತ್ತಿತ್ತು. ಬರ್ಬರ ಮತ್ತು ಅರಬ್ಬಿ ವಂಶಸ್ಥ ತಳಿಗಳಿಂದ ಉತ್ಪನ್ನವಾದ ಬ್ರಿಟಿಷ್ ಶುದ್ಧ ಅಥವಾ ಥರೋಬ್ರೆಡ್ ತಳಿ ಅಶ್ವ ಜಾತಿಯ ಸಾಮ್ರಾಟ ಸ್ಥಾನವನ್ನು ಗಳಿಸುವವರೆಗೂ ಆಫ್ರಿಕ ದೇಶದ ಕುದುರೆಗಳೇ ಅತಿಮುಖ್ಯ ತಳಿಗಳಾಗಿದ್ದವು.

ಒಂದನೇ ಜೇಮ್ಸ್ ಇಂಗ್ಲೆಂಡಿನ ಶುದ್ಧ ಅರಬ್ಬಿ ಜಾತಿಯ 'ವೈಟಟರ್ಕ್' ಎಂಬ ಕುದುರೆಯನ್ನು ಆಮದು ಮಾಡಿಕೊಂಡ. ಇದಾದ ನಂತರ 'ಥರೋಬ್ರೆಡ್' ಎಂಬ ಹೆಸರುವಾಸಿಯಾದ ತಳ್ಳನೆ ಮೈಕಟ್ಟಿನ ಜೂಜು ಕುದುರೆ ತಳಿಯ ಅಭಿವೃದ್ಧಿ ಕಾರ್ಯ ಪ್ರಾರಂಭವಾಯಿತು. ಇಂಗ್ಲೆಂಡ್ ವಿಶ್ವದ ಅತ್ಯುತ್ತಮ ಕುದುರೆ ತಳಿಗಳ ತವರೂರು. ಅಲ್ಲಿ ಮೊದಲಿದ್ದ ಕುದುರೆ ಜಾತಿಗಳು ಎರಡು. ಒಂದು ಓಡುವ ಜಾತಿ ಕುದುರೆ, ಮತ್ತೊಂದು ಯುದ್ಧ ಅಥವಾ ಪಂದ್ಯದ ಕುದುರೆ, ಓಡುವ ಜಾತಿ- ಕುದುರೆಗಳನ್ನು ಗಾಡಿ ಎಳೆಯುವುದು, ಬೇಸಾಯ ಮುಂತಾದ ಕಾರ್ಯಗಳಿಗೂ, ಪಂದ್ಯದ ಕುದುರೆಗಳನ್ನು ಯುದ್ಧ, ಜೂಜು, ಕ್ರೀಡೆ ಮುಂತಾದ ಚಟುವಟಿಕೆಗಳಿಗೂ ಉಪಯೋಗಿಸುತ್ತಿದ್ದರು. 'ಮೂರನೆಯ ವಿಲಿಯಂ' ದೊರೆ ಕುದುರೆ ಮತ್ತು ಕ್ರೀಡೆಗಳ ಅಭಿಮಾನಿ, ಅರಬ್ಬಿ ಜಾತಿಯ ಅತ್ಯುತ್ತಮ ತಳಿಯೊಂದಾದ 'ಬೈರ್ಲಿಟರ್ಕ್' ಎಂಬ ಜಾತಿಯ ಕುದುರೆಯನ್ನು ಇಂಗ್ಲೆಂಡಿಗೆ ತರಿಸಿಕೊಂಡ. ಪ್ರಖ್ಯಾತವಾದ 'ಗೆಡಾಲ್ಫಿನ್' ಅರೇಬಿಯನ್ ಬೀಜದ ಕುದುರೆ ೧೭೩೫ರಲ್ಲಿ ಇಂಗ್ಲೆಂಡಿಗೆ ಬಂತು. ಈಗಿನ ಬಹುಭಾಗ ಶುದ್ಧ ತಳಿಗಳೆಲ್ಲ ಇದರ ವಂಶದವುಗಳಾಗಿವೆ.

ವೇಗವಾಗಿಯೂ, ಸುಲಭವಾಗಿಯೂ, ಸಂಚರಿಸಲು ಉಪಯೋಗವಾದ ಮೋಟಾರು, ಟ್ರಾಕ್ಟರು ಮುಂತಾದ ಯಾಂತ್ರಿಕ ಸಾಧನಗಳು ಬಳಕೆಗೆ ಬಂದ ಮೇಲೆ ಗಾಡಿಗಳಿಗೆ ಮತ್ತು ಬೇಸಾಯಕ್ಕೆ ಹೇರು ಕುದುರೆಗಳ ಅವಶ್ಯಕತೆ ಕಡಿಮೆಯಾಗಿ ಅವುಗಳ ಸಂತತಿ ಕ್ಷೀಣಿಸಿದೆ. ಜನರಲ್ಲಿ ಜೂಜಿನಲ್ಲಿನ ಆಸಕ್ತಿ ಒಂದೇ ರೀತಿ ಇರುವುದರಿಂದ, ಜೂಜಿನ ಶುದ್ಧ ತಳಿ ಕುದುರೆಗಳ ಅಭಿವೃದ್ಧಿ ಯಥೇಚ್ಛವಾಗಿ ಸಾಗಿದೆ. ಈ ಕುದುರೆಗಳ ವೇಗ ಮತ್ತು ಜೂಜಾಂಗಣದಲ್ಲಿ ಅವುಗಳ ಶ್ರಮಸಹಿಷ್ಣುತೆ ಇವುಗಳ ಏಳ್ಗೆಗೆ ಪ್ರಯತ್ನ ನಡೆಯುತ್ತಲೇ ಇದೆ. ಆದರೂ ಕುದುರೆಗಳ ಮೇಲಿನ ಶ್ರದ್ಧೆ ಪ್ರಪಂಚದ ಎಲ್ಲ ದೇಶಗಳಲ್ಲೂ ಇಲ್ಲ. ರಷ್ಯ, ಚೀನ, ಸಿಂಹಳ ಮುಂತಾದ ದೇಶಗಳಲ್ಲಿ ಕುದುರೆಯ ಜೂಜು ನಿಷೇಧವಾಗಿದೆ. ಇದರಿಂದ ಆ ದೇಶದಲ್ಲಿ ಕುದುರೆ ತಳಿ ಅಭಿವೃದ್ಧಿ ಕಡಿಮೆಯಾಗಿದೆ ಎಂದು ಹೇಳಬೇಕು.

ಭಾರತ ಪ್ರಾಚೀನ ಕಾಲದಿಂದಲೂ ಉತ್ತಮ ಜಾತಿಯ ಅಶ್ವಗಳಿಗೆ ಹೆಸರಾಗಿದೆ. ಕಾಥೇವಾರಿ, ಮಾರಮಾರಿ ಮತ್ತು ಮಣಿಪುರಿ ಜಾತಿಗಳು ಅವುಗಳಲ್ಲಿ ಮುಖ್ಯವಾದವುಗಳು. ಇವುಗಳಲ್ಲದೇ ಭುಟಿಯಾ, ಹಿರ್ಜ್ವಾಯಿ, ಸ್ಪಿತಿ, ಉಸ್ಮಾಯಿ ಮುಂತಾದವು ಕಂಡು ಬರುತ್ತವೆ. ಬ್ರಿಟಿಷರ ಕಾಲದಲ್ಲಿ ಅಶ್ವಸೈನ್ಯಕ್ಕೆ ಬೇಕಾದ ಕುದುರೆಗಳನ್ನು ಆಸ್ಟ್ರೇಲಿಯಾದಿಂದ ಜೂಜಿಗೆ ಅಗತ್ಯವಾದ ಬೀಜದ ಕುದುರೆ ಮತ್ತು ಹೆಣ್ಣು ಕುದುರೆಗಳನ್ನು ಇಂಗ್ಲೆಂಡಿನಿಂದಲೂ ತರಿಸಿಕೊಂಡ ಉದಾಹರಣೆಗಳಿವೆ. ಮೊಗಲರು ಮತ್ತು ಮರಾಠರು ಸ್ಥಳೀಯ ಕುದುರೆಗಳನ್ನು ಅವರ ಯುದ್ಧದ ಅಗತ್ಯಗಳಿಗೋಸ್ಕರ ಅಭಿವೃದ್ಧಿಪಡಿಸಿಕೊಂಡರು. ಭಾರತದಲ್ಲಿ ಅಶ್ವಗಳ ಅಭಿವೃದ್ಧಿ ಕಾರ್ಯ ಬಹುವಾಗಿ ಬ್ರಿಟಿಷರಿಂದಲೇ ಆದದ್ದು. ದೇಶಾದ್ಯಾಂತ ಅನೇಕ ಅಶ್ವಾಭಿವೃದ್ಧಿ ಶಾಲೆಗಳನ್ನು ತೆರೆದು ಭಾರತದ ಶುದ್ಧ ತಳಿ ಕುದುರೆಗಳನ್ನು ಅಸ್ತಿತ್ವಕ್ಕೆ ತಂದರು.

ಶುದ್ಧ ತಳಿಗೆ ಹೆಸರುವಾಸಿಯಾದ "ಥರೋಬ್ರೆಡ್ ಹಾರ್ಸ್" ಕುದುರೆ ಇಂಗ್ಲೀಷ್ ಸಂತತಿಯ ಅರಬ್ಬಿ ಮತ್ತು ಪರ್ಷಿಯ ಜಾತಿಯ ತಂದೆ ತಾಯಿಗಳ ಹಲವಾರು ತಲೆಮಾರುಗಳ ಸಂತತಿಯನ್ನು ಪತ್ತೆ ಹಚ್ಚುವ ಕುದುರೆ. 'ವೇಲರ್' ಆಸ್ಟ್ರೇಲಿಯಾದಿಂದ ಬಂದು ಕುದುರೆ. ಇದು ಶುದ್ಧತಳಿ ಮತ್ತು ಕೇಪ್‌ತಳಿಗಳ ಮಿಶ್ರಣದಿಂದ ಹೊರಬಂದ ಜಾತಿ. ಭಾರತೀಯ ಸೈನ್ಯದಲ್ಲಿ ಮೊದಲು ಹೆಚ್ಚು ಮನ್ನಣೆ ಪಡೆದು ಬಳಕೆಯಲ್ಲಿದ್ದವು. ಕುದುರೆ ತಟ್ಟು ಅಥವಾ ಟಾಕಣ, ಪೋನಿ ಕುದುರೆ ಇದು ಗಿಡ್ಡ ಜಾತಿಯ ಕುದುರೆ. ಇದರ ಎತ್ತರ ೧೪-೨ ಹ್ಯಾಂಡ್ಸ್ ಇಲ್ಲವೇ ೫೮". ಮುಂದಿನ ಕಾಲಿನಗೊರಸು ಕೆಳತುದಿಯಿಂದ ಭುಜದ ಉಬ್ಬು ಏಣಿನವರೆಗಿನ ಎತ್ತರ ೫೮"ಕ್ಕಿಂತ ಕಡಿಮೆ ಇರುತ್ತದೆ. 'ರೀಮೌಂಟ್' ಈ ಕುದುರೆ ತರಬೇತಿ ಇಲ್ಲದ ಸಾಮಾನ್ಯ ಅಶ್ವದಳದಲ್ಲಿ ಉಪಯೋಗವಾಗುವಂತಹದ್ದು. ಪ್ಯಾಕ್ ಪೋನಿ ಅಥವಾ ಹೇರು ಕುದುರೆ ಗಿಡ್ಡ, ದಪ್ಪನೆಯ ಆಕಾರ ಹೊಂದಿದ್ದು, ಕಷ್ಟ ಸಹಿಷ್ಣುವಾದ ಕುದುರೆ, ಪದಾತಿದಳದಲ್ಲಿ ಹೇರು ಸಾಗಾಣಿಕೆಯಲ್ಲಿ ಬಳಸುತ್ತಾರೆ. ಕುದುರೆಯ ವರ್ಣಗಳು ಕಪಿಲವರ್ಣ, ದಟ್ಟಕೆಂಗದು, ಬೂದು, ಕಪ್ಪು, ಕರಿಬೂದು, ಕಪ್ಪು-ಬಿಳುಪು ಮಿಶ್ರಬಣ್ಣದ ಕುದುರೆಗಳು ಸಾಮಾನ್ಯವಾಗಿವೆ. ಭಾರತದ ಕುದುರೆಗಳು ಶುದ್ಧ ಜಾತಿಗೆ ಸೇರಿಲ್ಲ ಎಂಬ ಅಪವಾದವಿದೆ. 'ಭೂಟಿಯಾ' ಹಿಮಾಲಯ ಪ್ರದೇಶದಲ್ಲಿ ಕಾಣಬರುವ ಬೂದು ಮತ್ತು ದಟ್ಟ ಕೆಂಗಂದು. ಇದು ಸಾಮಾನ್ಯ ಲಕ್ಷಣ, ಅಚ್ಚುಕಟ್ಟಾದ ಮೈಕಟ್ಟು, ವಿಶಾಲವಾದ ಹಣೆ, ಮೋಟಾದ ದಪ್ಪನೆಯ ಕತ್ತು, ನೀಳವಾದ ಭುಜ, ದೃಢವಾದ ಬೆನ್ನು, ಬಲವಾದ ಮೂಳೆ, ವಿಶಾಲವಾದ ಎದೆಯುಳ್ಳ ದೇಹ, ಮಾಂಸವತ್ತಾದ ಚಪ್ಪೆಗಳು, ಒರಟು ಕೂದಲಿನಿಂದ ಆವೃತವಾದ ಕಾಲುಗಳು, ಕತ್ತಿನ ಮೇಲೂ, ಬಾಲದಲ್ಲೂ, ಉದ್ದವಾದ ಕೂದಲು ಸಾಮಾನ್ಯವಾಗಿ ಅಗಲವಾದ ಹಿಮ್ಮಡಿಗಳುಳ್ಳ ಪಾದಗಳು. ಸಾರಿಗೆ ಸಾಗಾಣಿಕೆ ಮತ್ತು ಸವಾರಿಗೆ ಈ ಜಾತಿಯ ಕುದುರೆಗಳ ಬಳಕೆ ಕಡಿಮೆ.

ಹಿರ್‌ಜಾಯ್- ಇದು ಅರಬ್ಬಿ ಮಿಶ್ರ ಜಾತಿಯ ಕುದುರೆ. ಬಣ್ಣ ಬಿಳಿ ಇಲ್ಲವೆ ಬೂದು. ಅಡಕವಾದ ಮೈ, ಮೋಟಾದ ಬೆನ್ನು, ಮಾಂಸದಿಂದ ತುಂಬಿಕೊಂಡ ಸೊಂಟ, ಚಪ್ಪಟೆಯಾದ ಪೃಷ್ಠ, ಸುಂದರವಾದ ತಲೆ, ಅಗಲವಾದ ಹಣೆ, ತುಂಬಿದ ಕುಳ್ಳಗೆ ಅಲ್ಲದ, ಉದ್ದವೂ ಅಲ್ಲದ, ಬಲವಾದ ಕತ್ತು, ದೃಢವಾದ ಇಳಿಜಾರುಳ್ಳ ಭುಜ, ಬಲವಾದ ಮುಂಗಾಲು, ಮೂಳೆ ಎದ್ದು ಕಾಣುವ ಮೊಣಕಾಲು ಇವು ಈ ಜಾತಿಯ ಲಕ್ಷಣಗಳು. ಕುದುರೆಯ ಎತ್ತರ ೧೫ ಹ್ಯಾಂಡ್ಸ್ ಅಥವಾ ೬೦" ತೂಕ ೮೦೦-೯೦೦ ಪೌಂಡ್, ವೇಗಗತಿ, ಕಷ್ಟಕರ ಕೆಲಸಕ್ಕೆ ಸಾಮಾನ್ಯವಾಗಿ ಬಳಕೆಯಾಗುವಂತಹವು. ಕಾಥೇವಾರಿ - ರಾಜಸ್ಥಾನ ಮತ್ತು ಗುಜರಾತ ರಾಜ್ಯಗಳು ಈ ತಳಿಗಳ ತವರೂರು. ಕಾಥೇವಾರಿ ಮತ್ತು ಮಾರವಾರಿ ಇವುಗಳ ಅನೇಕ ಲಕ್ಷಣಗಳು ಒಂದೇ ರೀತಿಯಾಗಿದ್ದು, ಈ ಎರಡು ಜಾತಿಗಳೂ ಒಂದೇ ಮೂಲದಿಂದ ಬಂದಿರಬೇಕು. ಈ ತಳಿಯು ವಿಶೇಷ ಲಕ್ಷಣವನ್ನು ಹೊಂದಿದ್ದು, ಹಿಂಗಾಲಿನಲ್ಲಿ ಮಂಡಿ ಮತ್ತು ಚುಂಚುಕಾಲಿನ ಮಧ್ಯೆ ಕುಡುಗೋಲಿನಾಕಾರದ ಕೀಲು ಮತ್ತು ತುದಿಗಳೆರಡೂ ಸೇರಿರುವಂತೆ ಬಾಗಿರುವ ಕಿವಿ. ಸವಾರಿಗಾಗಿ ಬಳಸುವ ಈ ಕುದುರೆ ಹಿಂದೆ ಪಂದ್ಯಕ್ಕೆ ಹೆಸರು ವಾಸಿಯಾಗಿತ್ತು ಎಂದು ಹೇಳಲಾಗಿದೆ.

ಮಾರವಾರಿ- ಇದು ರಾಜಸ್ಥಾನದಲ್ಲಿರುವ ಭಾರತದ ಮೂಲ ತಳಿ. ಈ ಜಾತಿಯ ಕುದುರೆ ದಟ್ಟ ಕೆಂಗಂದು, ಬೂದು, ಕಂದು, ಕಪಿಲ ವರ್ಣ, ಕರಿಬೂದು ಮುಂತಾದ ಅನೇಕ ಬಣ್ಣದ್ದಾಗಿರುತ್ತದೆ. ಸುಮಾರು ಶೇ. ೫೦ರಷ್ಟು ತಳಿ ತಿಳಿಕೆನೆ ಬಣ್ಣ. ಈ ಜಾತಿ ಕುದುರೆ ಠೀವಿ, ಗೌರವ ಮತ್ತು ಸೌಂದರ್ಯಕ್ಕೆ ಹೆಸರುವಾಸಿ. ನಡಿಗೆ ಬಲು ಗಂಭೀರ, ವೇಗ ಮತ್ತು ಕಷ್ಟ ಸಹಿಷ್ಣುತೆ ಇದರ ವೈಶಿಷ್ಟ್ಯವಾಗಿದೆ.

ಮಣಿಪುರಿ- ಇದು ಕೂಡ ಭಾರತದ ಅಶ್ವತಳಿಗಳಲ್ಲಿ ಪುರಾತನವಾದದ್ದು. ಅಸ್ಸಾಮಿನಲ್ಲಿ ಹೆಚ್ಚು ಪ್ರಚಲಿತ. ನಯ, ವೇಗ, ಕಷ್ಟಸಹಿಷ್ಣುತೆ ಈ ಗುಣಗಳಿಗೆ ಈ ಜಾತಿಯ ಕುದುರೆ ಪ್ರಸಿದ್ಧಿ. ಸಣ್ಣಹುಟ್ಟು, ಮಾಟವಾದ ದೇಹ, ದೃಢವಾದ ನಡಿಗೆ, ಉದ್ದನೆಯ ಮುಖ, ಅಗಲವಾದ ಮುಖ, ಅರಳಿದ ಹೊಳ್ಳೆ, ವಿಶಾಲವಾದ ಎದೆಗೂಡು, ದೇಹದ ಪ್ರಮಾಣಕ್ಕೆ ಅನುಗುಣವಾದ ಕಾಲುದೃಢವಾದ ಮಂಡಿ ಮತ್ತು ಕಾಲು-ಕೀಲು ನಯವಾದ ಬಾಗಿದ ಚುಂಚು ಕಾಲು ಇವೆ. ಇವು ಈ ತಳಿಯ ಪ್ರಮುಖ ಲಕ್ಷಣಗಳು. ಇದರ ಎತ್ತರ ೧೧ರಿಂದ ೧೩ ಹ್ಯಾಂಡ್‌ಗಳು (೪೪"-೫೨") ತೂಕ ೬೫೦ ಪೌಂಡ್. ಈ ಕುದುರೆಗಳನ್ನು ಪೋಲೋಪಂದ್ಯ, ಹೇರು, ಸಾಗಾಣಿಕೆ, ಸೈನ್ಯದ ಸಾಮಾನು ಸರಂಜಾಮುಗಳ ಸಾಗಣಿಕೆ ಮುಂತಾದವುಗಳಲ್ಲಿ ಬಳಸುತ್ತಾರೆ.

ಸ್ಪಿತಿ- ಕಂಗಾ ಜಿಲ್ಲೆಯಲ್ಲಿ ಈ ತಳಿ ಪ್ರಚಲಿತವಾಗಿದೆ. ಈ ತಳಿಯ ವೃದ್ಧಿ ರೈತರಿಂದಲೇ ಆದದ್ದು. ಈ ಜಾತಿ ಲಕ್ಷಣಗಳಲ್ಲಿ ಮುಖ್ಯವಾದದ್ದು. ಕಷ್ಟ ಸಹಿಷ್ಣುತೆ, ದೃಢವಾದ ನಡೆ, ಗಟ್ಟಿಯಾದ

ಮೂಳೆ, ಅಡಕವಾದ ಮೈ, ಎತ್ತರ ೧೨ ಹ್ಯಾಂಡ್‌ಗಳು (೪೮") ಬೆಟ್ಟಗಾಡಿಗೆ ಬಹಳ ಅನುಕೂಲವಾದ ಜಾತಿ. ನೀಳವಾದ ಒರಟಾದ ಕೂದಲುಗಳುಳ್ಳ ಮಾಟವಾದ ತಲೆ, ಮೊನಚಾದ ಕಿವಿ, ಅಗಲವಾದ ಭುಜ, ದೃಢವಾದ ಬೆನ್ನು, ಗಿಡ್ಡನೆ ಕಾಲು, ಬಲವಾದ ಗೊರಸು, ಸಣ್ಣ ಕತ್ತು ಇವೇ ಇದರ ಲಕ್ಷಣಗಳು. ಸವಾರಿಗೆ ಮತ್ತು ಹೇರು ತಟ್ಟಾಗಿ ಈ ಜಾತಿ ಕುದುರೆಗಳನ್ನು ಬಳಸುತ್ತಾರೆ.

ಅರಬ್ಬೀ ಜಾತಿಯ ಕುದುರೆ : ಒಂದೆರಡು ದಶಕಗಳ ಹಿಂದೆ ಅರಬ್ಬೀ ಕುದುರೆಗಳು ಭಾರತದಲ್ಲಿ ಹೆಚ್ಚಾಗಿದ್ದುವು. ಜೂಜಿನಲ್ಲಿ ಇವುಗಳ ಬಳಕೆ ತಪ್ಪಿದ್ದರಿಂದ ಒಳ್ಳೇ ಅರಬ್ಬೀ ಕುದುರೆ ಈಗ ವಿರಳ. ಅಶ್ವಗಳಲ್ಲಿ ರಾಜಸಂತತಿ ಎಂದು ಪ್ರಮುಖವಾಗಿವೆ. ಎತ್ತರ ೧೪-೧೫ ಹ್ಯಾಂಡ್‌ಗಳು("೫೬-೬೦"). ಗಾತ್ರದಲ್ಲಿ ದೊಡ್ಡದಾಗಿರುವ ತಲೆಯಲ್ಲಿ ಕಿವಿಯಿಂದ ಕಣ್ಣಿನವರೆಗಿನ ಮೇಲ್ಭಾಗದ ಉದ್ದ ಹೆಚ್ಚು, ಅಗಲವಾದ ಉಬ್ಬಿದ ಹಣೆ, ಉದ್ದವಾದ ಮೊನಚಾದ ಕಿವಿ, ಅಗಲವಲ್ಲದ ಕಣ್ಣು, ಮೃದುವಾದ ನೋಟ, ಬೆದರಿದಾಗ ಉದ್ವಿಗ್ನ ದೃಷ್ಟಿ ಇವು ಇನ್ನಿತರ ಲಕ್ಷಣಗಳು. ತಲೆ ಮುಂಭಾಗ ಮತ್ತು ಮೂತಿಯ ಹತ್ತಿರ ಚೂಪಾಗಿ, ಕೆಂಪಾಗಿ ಕೆಳತುಟಿ ಸ್ವಲ್ಪ ಮುಂದಿದ್ದು ಸುಂದರವಾಗಿ ಕಾಣಿಸುತ್ತದೆ. ಚೆನ್ನಾಗಿ ಬೆಳೆದ ಗಂಟಲು, ಶಕ್ತಿಯುತವಾದ ಮತ್ತು ಬಿಲ್ಲಿನಾಕಾರವುಳ್ಳ ಕತ್ತು, ಸ್ವಲ್ಪ ಸಣ್ಣದಾದರೂ ಮುಂಗಾಲಿನ ಹಿಂದೆ ಉಬ್ಬಿ ಕಾಣುವ ಪಕ್ಕೆಲುಬುಳ್ಳ ಎದೆ, ಇದರಿಂದ ಒಟ್ಟಿನಲ್ಲಿ ತುಂಬಿಕಾಣುವ ಮೈ, ಅಡಕವಾದ ಬೆನ್ನು, ಬಲಿಷ್ಠವಾದ ಟೊಂಕ ಮತ್ತು ರೊಂಡಿ, ಮಂಡಿಯವರೆಗೂ ನೀಳವಾಗಿದ್ದು ಅನಂತರ ಚಿಕ್ಕದಾಗುವ ಮುಂಗಾಲು, ನೀಳವಾದ ಜಿಗಿಯುವ ಕಾಲ್ಗೆಣ್ಣಿನ ಭಾಗ, ದೃಢವಾದ ಅಗಲವಾದ ಪಾದ, ದೊಡ್ಡ ತೊಡೆ, ದೃಢವಾಗಿ ರೂಪಗೊಂಡ ಅಸ್ಥಿಸಂಧಿಗಳು, ಮೃದುವಾದ ಹೊಳಪಾದ ಮೈಚರ್ಮ, ಎತ್ತಿಬೀಸಿದ ಬಾಲ ಇವೇ ಈ ಜಾತಿಯ ಉಳಿದ ಲಕ್ಷಣಗಳು.ಈ ಕುದುರೆಗಳ ಬಣ್ಣ ವಿವಿಧ ರೀತಿಯಾಗಿದ್ದು, ಕುರಿಬೂದು, ದಟ್ಟ ಕೆಂಗಂದು, ಬೂದಿಕಪ್ಪು, ಕಂದು ಮುಂತಾದವು. ಈ ಅನೇಕ ಬಣ್ಣಗಳು ಅಷ್ಟು ಪ್ರಿಯವಲ್ಲ.

ಮೈಸೂರು ರಾಜ್ಯದಲ್ಲಿ ಕುದುರೆ ತಳಿ ಅಭಿವೃದ್ಧಿ : ಮೈಸೂರಿನ ಒಡೆಯರ್ ರಾಜಮನೆತನದವರು ಕುಣಿಗಲ್ಲಿನಲ್ಲಿ ಸುಮಾರು ೧೫೦ ವರ್ಷಗಳಿಗೂ ಹಿಂದೆಯೇ ಸೈನ್ಯದ ಕುದುರೆ ತಳಿ ಅಭಿವೃದ್ಧಿ ಕೇಂದ್ರವನ್ನು ಸ್ಥಾಪಿಸಿದರು. ೧೮೫೦ನೆಯ ವರ್ಷದಲ್ಲಿ, ಈ ಕೇಂದ್ರಕ್ಕೆ ಆಫ್ರಿಕ ತಳಿಗಳನ್ನು ತರಿಸಿದರು. ಆ ಕಾಲದಲ್ಲಿ ಉಪಯೋಗಿಸಿದ ಬೀಜದ ಕುದುರೆಗಳು ಮುಖ್ಯವಾಗಿ ಶುದ್ಧತಳಿ ಅಂದುಕೊಂಡಿದ್ದ ಅರಬ್ಬೀ ಮತ್ತು ವೇಲರ್ ಜಾತಿಯವು. ೧೯೩೬ರಲ್ಲಿ ಜೆ.ಜೆ.ಮಲ್ಲಿಕ್ ಎಂಬ ಬ್ರಿಟಿಷ್ ಅಧಿಕಾರಿ ಈ ಕೇಂದ್ರವನ್ನು ಉತ್ತಮಗೊಳಿಸಲು ನೇಮಕಗೊಂಡನು. ಆತ ಸ್ಥಳೀಯ ಹೆಣ್ಣು ಕುದುರೆಗಳನ್ನು ಉತ್ತಮಗೊಳಿಸಲು ಶ್ರಮಿಸಿದನು. ಆತ ಸ್ಥಳೀಯ ಹೆಣ್ಣು ಕುದುರೆಗಳನ್ನೆಲ್ಲ ವಿಸರ್ಜಿಸಿ ಈ ಕೇಂದ್ರವನ್ನು ಜೂಜುಕುದುರೆ ಅಭಿವೃದ್ಧಿ ಕಾರ್ಯಕ್ಕೆ ಮಾತ್ರ ಉಳಿಸಿಕೊಂಡ. ೧೯೪೦ರಿಂದ ಅಭಿವೃದ್ಧಿ

ಗತಿ ಚೆನ್ನಾಗಿದ್ದು, ಇಲ್ಲಿಂದ ಹೊರಬಂದ ಕುದುರೆಗಳು ಅನೇಕ ಜೂಜಿನಲ್ಲಿ ಪ್ರಸಿದ್ಧಿ ಪಡೆದಿವೆ. ಸರ್ಕಾರದವರು ಇತ್ತೀಚಿನ ದಿನಗಳಲ್ಲಿ ಈ ಕೇಂದ್ರದ ಅಭಿವೃದ್ಧಿಯಲ್ಲಿ ವಿಶೇಷ ಆಸಕ್ತಿವಹಿಸಿ ಹೊರದೇಶದಿಂದ ಶುದ್ಧ ತಳಿಗಳನ್ನು ತರಿಸಿದ್ದಾರೆ. ಈ ಕೇಂದ್ರದಿಂದ ಹೊರಬಂದ ಜಾತಿಗಳಿಗೆ ಪ್ರಪಂಚದ ಅಶ್ವತಳಿಗಳಲ್ಲಿ ಮುಖ್ಯಸ್ಥಾನವಿದೆ.

ತಳಿ ಅಭಿವೃದ್ಧಿ : ಎಲ್ಲ ಪ್ರಾಣಿ ತಳಿ ಅಭಿವೃದ್ಧಿ ಕಾರ್ಯದಲ್ಲಿ ಇರುವಂತೆಯೇ ಕುದುರೆ ತಳಿ ಅಭಿವೃದ್ಧಿಯಲ್ಲೂ ಒಂದು ಜೀವಿಯಿಂದ ಹೊರಬರುವ ಶಿಶು ಅದರ ತಂದೆ ತಾಯಿಯರ ಲಕ್ಷಣವನ್ನೇ ಇಲ್ಲವೇ ಅದರ ಪೂರ್ವಜರ ಲಕ್ಷಣವನ್ನೇ ಹೊಂದಿರುತ್ತದೆ; ಎಂಬ ಸ್ಥಿತಿಯನ್ನು ಗುರುತಿಸುವುದು ಅಗತ್ಯ. ಅಂದರೆ ತಳಿಶುದ್ಧತೆ ನಿಜವಾಗಿಯೂ ಅತಿಮುಖ್ಯ. ಈ ಕಾರಣದಿಂದ ತಳಿ ಅಭಿವೃದ್ಧಿ ಕೆಲಸದಲ್ಲಿ ತೊಡಗಿರುವ ಜನರ ಮೊದಲ ಯೋಚನೆ ಕುದುರೆಗಳ ವಂಶವೃಕ್ಷದ ಕೂಲಂಕಷ ಅರಿವು. ಜೂಜು ಕುದುರೆಯ ತಳಿ ಅಭಿವೃದ್ಧಿಕಾರ್ಯಕ್ಕೆ ತೊಡಗಲು ಪ್ರಯತ್ನಿಸುವರು. ತಳಿಯ ಶುದ್ಧತೆಯಲ್ಲಿ ಲವಲೇಶದಷ್ಟು ಸಂದೇಹ ಬಂದರೂ ಅಂಥ ಕುದುರೆಗಳನ್ನು ಖಂಡಿತ ಬಳಸುವುದಿಲ್ಲ.

ಕುದುರೆ ಆಯ್ಕೆ : ತಳಿವೃದ್ಧಿಗೆ ಬೇಕಾದ ಗುಂಡು ಕುದುರೆಯ ವಯಸ್ಸು ೪ ರಿಂದ ೬ ವರ್ಷ ಇರಬೇಕು. ಗಟ್ಟಿಯಾದ ಕೈಕಾಲುಗಳು, ದೃಢಕಾಯ ಮತ್ತು ಸ್ಥಿಮಿತಿ ಸ್ವಭಾವ ಇರುವುದು ಅತ್ಯಾವಶ್ಯಕ. ತಾಯಿ ತಂದೆ ಎರಡು ಕಡೆಗಳಿಂದಲೂ ಉತ್ತಮ ವಂಶ ಅಗತ್ಯ. ತಳಿಗುಣಗಳು ವಂಶಪರಂಪರೆಯಿಂದ ಬರುವುದರಿಂದ ಒಳ್ಳೆಯ ಬೀಜದ ಕುದುರೆ ಅವಶ್ಯಕ ಮಾತ್ರವಲ್ಲ ಆ ಕುದುರೆಯ ಪೀಳಿಗೆಯೂ ಯಾವ ಸಂದೇಹಕ್ಕೂ ಎಡೆ ಇಲ್ಲದೆ ನಿಷ್ಕಳಂಕವಾಗಿರಬೇಕು. 'ಥರೋಬ್ರೆಡ್' ಜಾತಿ ಬೀಜದ ಕುದುರೆ ಎತ್ತರ ೧೫-೩ರಿಂದ ೧೬-೧ ಹ್ಯಾಂಡ್ಸ್ ಇರಬೇಕು. ಮೊಣಕಾಲು ಅಗಲಿವಿದ್ದು, ಕಾಲು ಮತ್ತು ಪಾದಗಳ ಮೇಲಿನ ದೃಢನಿಲುವು ಆದ್ಯ. ಮಂಡಿಯ ಕೆಳಗೆ ಮೊಣಕಾಲಿನ ಭಾಗ ಗಡುಸಾದ ಮೂಳೆಯಿಂದಾಗಿರುತ್ತದೆ. ಮೊಣಕಾಲಿನ ಹಿಂದಿನ ಮೂಳೆ ಚಾಚಿದ್ದು ದೊಡ್ಡದಾಗಿರುವುದು ಆವಶ್ಯಕ. ಮಂಡಿ ಮತ್ತು ಚುಂಚುಕಾಲಿನ ಮಧ್ಯದ ಭಾಗ ದೃಢವಾಗಿ ಮತ್ತು ರೋಗ ವಿಮುಕ್ತವಾಗಿರಬೇಕು. ಗೊರಸು ದೊಡ್ಡದೂ ಚಿಕ್ಕದೂ ಅಲ್ಲದೆ ಕುದುರೆಯ ಗಾತ್ರಕ್ಕನುಗುಣವಾಗಿ ಮಾಟವಾಗಿರಬೇಕು. ಗೊರಸಿನ ತುದಿ ಅಥವಾ ಕೊಂಬು ಗಡುಸಾಗಿ ಗಟ್ಟಿಯಾಗಿರುವುದು ಅಗತ್ಯ. ಚುಂಚುಕಾಲು ಮತ್ತು ಗೊರಸಿನ ಮಧ್ಯದ ಭಾಗ ಗೊರಸಿನ ಮೇಲ್ಭಾಗದ ಕೀಲಿನ ಮೇಲೆ ಬಾಗಿ ಕೂತಿರುವುದಲ್ಲದೆ ಹ್ರಸ್ವವಾಗಿದ್ದರೆ ಒಳ್ಳೆಯದು. ಶಕ್ತಿಯುತವಾದ ದಪ್ಪ ಮೇಲ್ಭುಜ; ಅದು ಬಾಗಿರಬಾರದು, ಆದರೆ ಕಡಿದಾಗಿಯೂ ಇರಬಾರದು. ಮೊಣಕೈತುದಿ ದೊಡ್ಡದಾಗಿ ಎದ್ದು ಕಾಣುತ್ತಿರುವುದು ಲಕ್ಷಣ. ಮೈ ಸತ್ತು ಅಗಲವಾಗಿದ್ದು, ಎದೆಯ ಸುತ್ತ ಗುಂಡಾಗಿರುವುದು ಸೊಗಸು. ಹ್ರಸ್ವಬೆನ್ನು, ಶಕ್ತಿಯುತವಾದ ಮಾಂಸದಿಂದ ತುಂಬಿದ ಟೊಂಕ, ಶಕ್ತಿಯುತವಾದ ಹಿಂಬದಿ ಮತ್ತು ದಪ್ಪಪುಷ್ಟವಾದ ತೊಡೆ - ಇವು ಕೆಲವು ಸಲ್ಲಕ್ಷಣಗಳು. ಪಿರ್ರೆಯಿಂದ

ಚುಂಚುಕಾಲಿನ ವರೆಗಿನ ಭಾಗ ನೀಳವಾಗಿದ್ದರೆ ಲಕ್ಷಣ. ಉದ್ದ ಮತ್ತು ಅಗಲವಾದ ಕತ್ತು; ತೆಳ್ಳಗೆ ಉದ್ದವಾದ ಮತ್ತು ಅಗಲವಾದ ತಲೆ, ಕಣ್ಣುಗಳ ಮಧ್ಯೆ ಸಾಕಷ್ಟು ಜಾಗ ಇದ್ದು, ಉಬ್ಬಿದ ಹಣೆ, ಹೆಚ್ಚು ಮೊನಚಿಲ್ಲದ ಮೂರ್ತಿ, ಸಣ್ಣದಾಗಿ ಕಂಡರೂ ಬೇಕಾದಾಗ ಅರಳಬಲ್ಲ ಮೂಗಿನ ಹೊಳ್ಳೆ, ತೆಳುವಾದ ಸ್ವಲ್ಪ ಉದ್ದಕ್ಕೆ ಸೇರಿದ ತೆರೆದ ನೆಟ್ಟನೆ ಕಿವಿ. ತೆಳುವಾದ ಅಗಲವಾದ ಕೆಳದವಡೆ, ಕತ್ತು ಮತ್ತು ತಲೆ ಸೇರುವೆಡೆ ತೆಳುವಾಗಿ ಅಗಲವಾಗಿದ್ದರೂ ಗಾಳಿ ಸುಲಭವಾಗಿ ತೂರುವುದಕ್ಕೆ ಅನುಕೂಲವಾಗುವಂತೆ ಸಾಕಷ್ಟು ವ್ಯಾಸಹೊಂದಿ ಸ್ಫುಟವಾದ ಉಸಿರುನಾಳ ಇವು ಬೀಜದ ಕುದುರೆಯ ಇನ್ನೂ ಕೆಲವು ಲಕ್ಷಣಗಳು. ಬಣ್ಣ ಅಷ್ಟೇನೂ ಪ್ರಾಮುಖ್ಯವಲ್ಲದಿದ್ದರೂ, ಜನಸಾಮಾನ್ಯವಾಗಿ ಯಾವುದೇ ಮಸಕು ಬಣ್ಣಗಳನ್ನು ಇಷ್ಟಪಡುವುದಿಲ್ಲ. ದಟ್ಟವಾದ, ಸ್ಪಷ್ಟವಾದ ಬಣ್ಣದ ಕುದುರೆಗಳಿಗೆ ಗಿರಾಕಿ ಹೆಚ್ಚು.

ಹೆಣ್ಣುಕುದುರೆ ಆಯ್ಕೆ : ಬೀಜದ ಕುದುರೆಯ ಆಯ್ಕೆಯ ಆಧಾರಗಳೇ ಹೆಣ್ಣು ಕುದುರೆಯ ಆಯ್ಕೆಗೂ ಅನ್ವಯಿಸುತ್ತವೆ. ಸುಮಾರು ೪ ವರ್ಷ ವಯಸ್ಸಿನಲ್ಲಿ ಇದು ಗರ್ಭಧಾರಣೆ ಮಾಡುತ್ತದೆ. ಇದರ ಎತ್ತರ ೧೫-೨೦ರಿಂದ ೧೫-೩ ಹ್ಯಾಂಡುಗಳು. ಹೆಣ್ಣು ಅಥವಾ ಗಂಡು ಕುದುರೆಗಳ ಜೀವಮಾನ ೨೫ರಿಂದ ೩೦ ವರ್ಷಗಳು.

ಕೂಡಿಸುವಿಕೆ : ಸ್ಥಳೀಯ ಜಾತಿಯ ಹೆಣ್ಣು ಕುದುರೆಗಳು ಗರ್ಭಧಾರಣೆಗೆ ವರ್ಷದ ಎಲ್ಲ ಕಾಲದಲ್ಲೂ ಹದವಾಗಿರುತ್ತವೆ. ಶುದ್ಧ ತಳಿಗಳು ಜನವರಿಯಿಂದ ಫೆಬ್ರವರಿ ತಿಂಗಳ ಕಾಲದಲ್ಲಿ ಮಾತ್ರ ಗರ್ಭತಾಳಬಲ್ಲವು, ಸುಮಾರು ೩ರಿಂದ ಒಂದು ವಾರ ಇಲ್ಲವೇ ೯ ದಿವಸಗಳ ಕಾಲ ಇರುವ ಗರ್ಭಕಾಲದ ಸೂಚನೆಗಳು: ಒಂದು ತರಹ ಮಂಕು, ಕಿರಿಕಿರಿ, ಮನೋವಿಕಾರ, ಹಸಿವು ಕಾಣಿಸದೆ ಇರುವಿಕೆ, ಇತರ ಕುದುರೆಗಳ ಅದರಲ್ಲೂ ಗಂಡುಗಳ ಸಹವಾಸ ಬಯಸುವಿಕೆ, ಆಗಾಗ ಮೂತ್ರವಿಸರ್ಜನೆ, ಯೋನಿಮುಖದ ಚಲನೆ ಮತ್ತು ಬಿಟ್ಟುಬಿಟ್ಟು ಹೊರಸೂಸುವ ಬಿಳಿದ್ರವ ಈ ಸ್ಥಿತಿಯಲ್ಲಿ ಬಹುಹೆಣ್ಣುಗಳು ಗಂಡುಕುದುರೆ ಸಂಭೋಗಕ್ಕೆ ಹಸನಾಗಿರುತ್ತವೆ. ಸಂಭೋಗದ ಅನಂತರ ಗರ್ಭಧಾರಣೆ ಆಗುವುದು ಖಚಿತ. ಆದರೆ ಕೆಲವು ಕುದುರೆಗಳಲ್ಲಿ ಈ ಪರಿಸ್ಥಿತಿ ಹಾಗೆಯೇ ಮುಂದುವರಿದು ಸಂಭೋಗದಿಂದ ಗರ್ಭಧಾರಣೆ ಆಗುವುದಿಲ್ಲ. ಗರ್ಭಕೋಶ ಇಲ್ಲವೆ ಅಂಡಾಶಯದ ಅವ್ಯವಸ್ಥೆ ಅಥವಾ ಸೋಂಕು ಇದಕ್ಕೆ ಕಾರಣ. ಆಗ ಪಶುವೈದ್ಯರಿಂದ ಚಿಕಿತ್ಸೆ ಅಗತ್ಯ. ತಳಿ ಅಭಿವೃದ್ಧಿಯಲ್ಲಿ ಕುದುರೆಗಳನ್ನು ನೈರ್ಮಲ್ಯಕ್ಕೆ ಗಮನ ಬಹಳ ಅಗತ್ಯ. ತಳಿ ಅಭಿವೃದ್ಧಿಯಲ್ಲಿ ಕುದುರೆಗಳ ನೈರ್ಮಲ್ಯಕ್ಕೆ ಗಮನ ಬಹಳ ಅಗತ್ಯ. ಗಂಡು ಕುದುರೆಯ ಶಿಶ್ನ ಸ್ವಚ್ಛವಾಗಿದ್ದು ಕಪ್ಪು ಕೊಳೆ ಶೇಖರವಾಗದಂತಿರಬೇಕು. ಹೆಣ್ಣಿನ ಹಿಂಭಾಗವನ್ನು ಮತ್ತು ಯೋನಿಮುಖದಿಂದ ಸ್ರಾವವಾಗಿರುವ ವಸ್ತುಗಳನ್ನೂ ಚೆನ್ನಾಗಿ ತೊಳೆಯಬೇಕು. ಇದಕ್ಕೆ ಗಮನ ಕೊಡದಿದ್ದರೆ ಗರ್ಭಸ್ರಾವ ಅಥವಾ ಪೂರ್ಣ ಬೆಳವಣಿಗೆಯಾಗದ ಮರಿಗಳ ಜನನ ಅಥವಾ ಗರ್ಭಕೋಶದ ಸೋಂಕು ಆಗಿ ತೊಂದರೆ ಉಂಟಾಗುತ್ತದೆ.

ಗರ್ಭಿಣಿ ಕುದುರೆಗಳ ಆರೈಕೆ : ಗರ್ಭಧಾರಣೆಯಾದ ಕೂಡಲೆ ಹೆಣ್ಣು ಕುದುರೆಯಲ್ಲಿ ಕಾಮೋದ್ರೇಕ ಇಳಿದು ಅದು ಮುಂದೆ ಪ್ರಸವವಾಗುವವರೆಗೂ ಕಂಡು ಬರುವುದಿಲ್ಲ. ಗರ್ಭಧಾರಣೆ ಕಾಲ ಭಾರತ ದೇಶದ ಹವಾಪರಿಸ್ಥಿತಿಯಲ್ಲಿ ಸುಮಾರು ೩೪೦ ದಿವಸಗಳು. ಗರ್ಭಿಣಿ ಕುದುರೆಗೆ ಮೊದಲ ಕೆಲವು ತಿಂಗಳುಗಳಲ್ಲಿ ಲಾಯದ ಸೂಕ್ತ ಮೇಲ್ವಿಚಾರಣೆ ವಿನಾ ಅಂಥ ಹೆಚ್ಚು ಗಮನ ಬೇಕಾಗುವುದಿಲ್ಲ. ೭ನೆಯ ತಿಂಗಳಿನಿಂದ ಎಚ್ಚರಿಕೆಗೆ ಅಗತ್ಯ. ಹೆಚ್ಚು ಆಹಾರ ಕೊಟ್ಟು ಮೈ ಕೊಬ್ಬಿಸಬಾರದು. ಒಳ್ಳೆ ಒಣಗಿಸಿದ ಹಸಿ ಮೇವು ಮತ್ತು ಓಟ್ಸ್ ಧಾನ್ಯ ಇವುಗಳಿಗಿಂತ ಹೆಚ್ಚೇನೂ ಅಗತ್ಯವಿಲ್ಲ. ಹೆರಿಗೆ ಹತ್ತಿರ ಬಂದ ವೇಳೆಯಲ್ಲಿ ನಾರಗಸೆಯ ಬೀಜದ ಗಂಜಿಗೆ ಗೋಧಿಹೊಟ್ಟು ಮತ್ತು ಉಪ್ಪು ಸೇರಿಸಿ ಕೊಡುವುದು ಒಳ್ಳೆಯದು. ನೆಕ್ಕುವುದಕ್ಕೆ ಕಲ್ಲುಪ್ಪ ಇಡುವುದು ಅಗತ್ಯ. ಕುಡಿಯಲು ಸಿಹಿನೀರು ಸದಾ ಸಿಗುವಂತೆ ಇರಬೇಕು. ಹೆರಿಗೆ ಸಮಯದಲ್ಲಿ ಸೂಕ್ತ ಎಚ್ಚರಿಕೆ ಅಗತ್ಯ. ಉತ್ತಮ ತಳಿಕುದುರೆಗಳಿಗೆ ದೇಶೀ ಕುದುರೆಗಳಿಗಿಂತ ಹೆರಿಗೆ ಕಾಲದಲ್ಲಿ ಅಪಾಯ ಸಂಭವ ಹೆಚ್ಚು. ಮೊಲೆತುದಿಯಲ್ಲಿ ಅಂಟು ಕಾಣಿಸಿ ಅನಂತರ ಹಾಲು ಬರುವುದು ಹೆರಿಗೆ ಇನ್ನೇನು ಕೆಲವೇ ಗಂಟೆಗಳಲ್ಲೇ ಆಗುತ್ತದೆ ಎನ್ನುವುದಕ್ಕೆ ಸೂಚನೆ. ಕೆಲವು ಕುದುರೆಗಳಲ್ಲಿ ಇದು ಹೆರಿಗೆಗೆ ಒಂದೆರಡು ದಿವಸಗಳ ಮುಂದೆ ಆಗಬಹುದು. ಸೂಚನೆ ಕಂಡ ಕೂಡಲೆ ಗರ್ಭಿಣಿ ಕುದುರೆಯನ್ನು ಹಿತವಾದ ತಂಪಾದ ಗಾಳಿ ಸಂಚಾರ ಸಮರ್ಪಕವಾಗಿರುವ ಕೊಠಡಿಗೆ ಸಾಗಿಸಬೇಕು. ಉದ್ರೇಕಕ್ಕೆ ಎಡೆ ಇಲ್ಲದೆ ನಿಶ್ಶಬ್ದ ವಾತಾವರಣವನ್ನು ಅಳವಡಿಸುವುದು ಆವಶ್ಯಕ. ಅಪರಿಚಿತ ಜನರನ್ನು ಸೇರಿಸಬಾರದು. ಸಾಧಾರಣವಾಗಿ ಕುದುರೆಗೆ ಅದು ಮಲಗಿದಾಗ ಹೆರಿಗೆಯಾಗುತ್ತದೆ. ವ್ಯತ್ಯಾಸಸ್ಥಿತಿ ಕಂಡುಬಂದರೆ ಪಶುವೈದ್ಯರಿಗೆ ಕರೆಕಳಿಸುವುದು ಉತ್ತಮ. ಮರಿ ಹೊರಬಂದ ತತ್‌ಕ್ಷಣ ಹೊಕ್ಕಳು ಬಳ್ಳಿಯನ್ನು ಒಂದೆರಡು ಅಂಗುಲ ಉದ್ದದಷ್ಟು ಬಿಟ್ಟು, ಶುಭ್ರವಾದ ಟ್ವೈನ್ ದಾರದಿಂದ ಕಟ್ಟಬೇಕು. ಕ್ರಮೇಣ ಬಳ್ಳಿ ಅದಾಗಿ ಅದೇ ಬಿದ್ದು ಹೋಗುತ್ತದೆ. ಹೆರಿಗೆ ಕಸ ಹೊರಬಂದ ಮೇಲೆ ಕುದುರೆಗೆ ತಿಳಿಯಾದ ಹೊಟ್ಟು ಗಂಜಿ ಕುಡಿಸಕಬೇಕು. ಕೆಚ್ಚಲು ಸ್ವಚ್ಛವಾಗಿ ತೊಳೆಯುವುದು ಬಹಳ ಅಗತ್ಯ. ಇವೆಲ್ಲ ಆದಮೇಲೆ ಮರಿಯನ್ನು ತಾಯಿ ಬಳಿ ಇರಿಸಬೇಕು. ಅದು ಸ್ವಲ್ಪ ಹೊತ್ತಿನಲ್ಲಿಯೇ ಎದ್ದುನಿಂತು ಮೊಲೆ ಉಣ್ಣುವುದಕ್ಕೆ ಪ್ರಾರಂಭಿಸುತ್ತದೆ. ಮೊಲೆಯುಣ್ಣಲು ಅದಕ್ಕೆ ಆಗದಿದ್ದಾಗ ಸಹಾಯ ಮಾಡುವುದು ಆವಶ್ಯಕ. ಮರಿಕುದುರೆಗೆ ಮಲಬದ್ಧತೆ ಆಗಿದೆ ಎಂದು ಕಂಡುಬಂದಾಗ ಹರಳೆಣ್ಣೆ ಎನಿಮಾ ಅಗತ್ಯವಾಗಬಹುದು. ಕಾಲಪ್ರವತ್ತಿಯಾದ ಅನಂತರ ಮರಿಗೆ ಏನೂ ಹೆಚ್ಚಿನ ಗಮನಬೇಕಾಗುವುದಿಲ್ಲ. ಗಂಡು ಕುದುರೆ ಮರಿಯನ್ನು ಕೋಲ್ಟ್ ಫೋಲ್ ಎಂದೂ ಹೆಣ್ಣುಕುದುರೆ ಮರಿಯನ್ನು ಫಿಲ್ಲಿ ಎಂದೂ ಕರೆಯುತ್ತಾರೆ. ೬ ತಿಂಗಳಾದ ಮೇಲೆ ತಾಯಿ ಹಾಲು ನಿಲ್ಲಿಸುತ್ತಾರೆ. ಒಂದು ವರ್ಷವಾದ ಅನಂತರ ಹೆಣ್ಣುಗಂಡುಗಳನ್ನು ಬೇರ್ಪಡಿಸಿ ಹುಲ್ಲುಗಾವಲು-ಲಾಯ ಅಲಾಯಿದೆ ಏರ್ಪಾಡು ಮಾಡುತ್ತಾರೆ.

ಕುದುರೆ ವಯಸ್ಸು ನಿರ್ಣಯಿಸುವುದು : ಹಲ್ಲುಗಳ ಎಣಿಕೆಯ ಆಧಾರದ ಮೇಲೆ ಕುದುರೆಯ ವಯಸ್ಸನ್ನು ನಿರ್ಧರಿಸಬಹುದು. ಈ ಲೆಕ್ಕಾಚಾರ ೯ ವರ್ಷದ ಒಳಗಿನ ಕುದುರೆಗಳಿಗೆ ನಿಖರವಾಗಿ ಅನ್ವಯಿಸುತ್ತದೆ. ಅದಕ್ಕೂ ಹೆಚ್ಚಿನ ವಯಸ್ಸಿನ ಕುದುರೆಗಳ ವಯೋಮಿತಿ ನಿರ್ಧಾರಕ್ಕೆ ಅನುಭವಬೇಕು. ಕುದುರೆ ಹುಟ್ಟಿದಾಗ ಮಧ್ಯದ ಎರಡು ಬಾಚಿ ಹಲ್ಲುಗಳಿರುತ್ತವೆ. ೯ ತಿಂಗಳ ಹೊತ್ತಿಗೆ ಉಳಿದೆರಡು ಮುಂದಿನ ಹಲ್ಲುಗಳು ಒಂದು ಬಾಚಿ ಹಲ್ಲೆಲ್ಲ ಅಸ್ತಿತ್ವಕ್ಕೆ ಬಂದ ಹಾಗಾಗುತ್ತದೆ. ೨½ ವರ್ಷ ಸುಮಾರಿನಲ್ಲಿ, ಈ ಹಲ್ಲುಗಳು ಬಿದ್ದು ಸ್ಥಿರವಾದ ಹಲ್ಲುಗಳು ಹುಟ್ಟಲು ಪ್ರಾರಂಭವಾಗುತ್ತವೆ. ೩ ವರ್ಷಕ್ಕೆ ಮಧ್ಯದ ಹಲ್ಲುಗಳೆಲ್ಲ ಬಿದ್ದು ಹೊಸಹಲ್ಲು ಹುಟ್ಟಿರುತ್ತದೆ. ೪ನೆಯ ವರ್ಷದ ೪ ಸ್ಥಿರಹಲ್ಲುಗಳೂ ೫ನೆಯ ವರ್ಷಕ್ಕೆ ಎಲ್ಲ ಬಾಚಿ ಹಲ್ಲುಗಳೂ ಕಳೆದು ಸ್ಥಿರಹಲ್ಲುಗಳು ಬಂದಿರುತ್ತವೆ. ಇಂಥ ಕುದುರೆಗೆ ಪೂರ್ಣಬಾಯಿಯ ಕುದುರೆ ಎನ್ನುತ್ತಾರೆ. ೬ನೆಯ ವರ್ಷದಿಂದ ಬಾಚಿಹಲ್ಲುಗಳ ಮೇಲಿನ ಭಾಗ ಸವೆಯುವುದಕ್ಕೆ ಪ್ರಾರಂಭವಾಗಿ ೯ ವರ್ಷದ ವೇಳೆಗೆ ಅವುಗಳಲ್ಲಿ ಗುಣಿಗಳು ಏನೂ ಇರುವುದಿಲ್ಲ. ಇಂಥ ಕುದುರೆಯನ್ನು ವಯಸ್ಸಾದ ಕುದುರೆ ಎಂದು ಪರಿಗಣಿಸುತ್ತಾರೆ. ಇದಾದ ಮೇಲೆ ಹಲ್ಲುಗಳಿಂದ ವಯೋಮಿತಿ ಗೊತ್ತಾಗುವುದಿಲ್ಲ. ಬೀಜ ಒಡೆಯುವುದಕ್ಕೆ ವಯಸ್ಸು ಮತ್ತು ಕಾಲ ಬೇರೆ ಬೇರೆ ತಳಿಗಳಿಗೆ ವ್ಯತ್ಯಾಸ. ಈ ಶಸ್ತ್ರಚಿಕಿತ್ಸೆಗೆ ಸೂಕ್ತ ವಯಸ್ಸು ಮತ್ತು ಸಮಯಗಳ ವಿಷಯದಲ್ಲಿ ಭಿನ್ನಾಭಿಪ್ರಾಯವುಂಟು. ೬ ತಿಂಗಳಿಗೂ ಕಡಿಮೆ ವಯಸ್ಸುಳ್ಳ ಗಂಡು ಮರಿಗಳ ಬೀಜ ಒಡೆಯುವುದು ಅಸಮಂಜಸ. ಒಂದು ವರ್ಷ ಸೂಕ್ತ ಕಾಲ. ಇದು ಮಾಯುತ್ತದೆ. ನೊಣಗಳ ಕಾಟವಿಲ್ಲದೆ ತಂಪಾಗಿರುವ ವಸಂತಕಾಲ ಇದಕ್ಕೆ ಅತ್ಯುತ್ತಮ ಚಳಿಗಾಲದಲ್ಲಿ ಮಾಯುವುದಕ್ಕೆ ತೊಂದರೆ.

ಬಾಣಂತಿ ಕುದುರೆ ಮತ್ತು ಮರಿಗಳ ಪೋಷಣೆ : ಮರಿ ಉಳ್ಳ ಕುದುರೆಗೆ ಒಳ್ಳೆ ಹಸಿರುಹುಲ್ಲು, ರುಬ್ಬಿದ ಓಟ್‌ಧಾನ್ಯ, ಕುದುರೆ ಮಸಾಲೆಸೊಪ್ಪು, ಕೆಂಪು ಮೂಲಂಗಿ ಇವೆಲ್ಲ ಅಗತ್ಯವಾಗಿ ಕೊಡಬೇಕಾದ ಆಹಾರ. ಹಸಿಮೇವು ಯಥೇಚ್ಛವಾಗಿದ್ದಲ್ಲಿ, ಓಟ್ ದಿವಸಕ್ಕೆ ಎರಡು ಬಾರಿ ಸಾಕು. ಮರಿಗೆ ೨-೩ ವಾರಗಳಾಗಿ ಅದು ಮೇವು ತಿನ್ನಲು ಪ್ರಾರಂಭಿಸಿದಾಗ ಸ್ವಲ್ಪ ಆಹಾರವನ್ನು ನೇರವಾಗಿ ೨-೩ ಬಾರಿ ಅದಕ್ಕೆ ಕೊಡಬಹುದು. ಮರಿ ಚೆನ್ನಾಗಿ ಬೆಳೆಯಬೇಕಾದರೆ ಪುಷ್ಟಿಯಾದ ಆಹಾರ ಆವಶ್ಯಕ.

ಮರಿಗಳ ನಿರ್ವಹಣೆ : ಮರಿ ಸಣ್ಣದಾಗಿದ್ದಾಗಿನಿಂದ ಅದರ ಮೈ ಕೈಯನ್ನು ಕೈಯಿಂದ ಚೆನ್ನಾಗಿ ನೇವರಿಸಿ ಅದಕ್ಕೆ ಒಂದು ಮಮತೆಯ ವಾತಾವರಣವನ್ನು ಉಂಟುಮಾಡುವುದು ಒಳ್ಳೆಯದು. ಸಾಧಾರಣವಾಗಿ ೬ ತಿಂಗಳ ಮರಿಗೆ ಮೊಲೆ ಯುಣ್ಣುವುದನ್ನು ಬಿಡಿಸುತ್ತಾರೆ. ತಾಯಿ ಗಬ್ಬವಾಗಿಲ್ಲದಿದ್ದರೆ ಮರಿಗೆ ೯ ತಿಂಗಳಿನವರೆಗೂ ಹಾಲು ಕುಡಿಯಲು ಬಿಡಬೇಕು. ಮರಿಗೆ ಹಾಲು ಬಿಡಿಸಿದಾಗ ಕುದುರೆ ಕೆಚ್ಚಲು ಊದಿ ನೋವಾದಲ್ಲಿ ಹಾಲು ಹಿಂಡುವುದು ಉತ್ತಮ. ಕೆಚ್ಚಲು ತೊಳೆದು ಕೊಬ್ಬರಿ ಎಣ್ಣೆ ಹಚ್ಚಿದರೆ ಕೆಚ್ಚಲು ಮತ್ತು ಮೊಲೆ ಬಿಗಿಯುವುದಿಲ್ಲ. ತಾಯಿಹಾಲು ಕಡಿಮೆಯಾದಲ್ಲಿ ಮರಿಗೆ ಸ್ವಲ್ಪ

ಬಿಸಿಮಾಡಿದ ಬೆಣ್ಣೆತೆಗೆದ ಹಸುವಿನ ಹಾಲು ಕೊಡಬಹುದು. ತಾಯಿಹಾಲಿದ್ದಲ್ಲಿ ಬೇರೆ ಹಾಲು ಅನಗತ್ಯ. ತಾಯಿ ಹಾಲು ಬಿಡಿಸಿದ ಮೇಲೆ ಎಮ್ಮೆ ಅಥವಾ ಹಸುವಿನ ಹಾಲು ಕೊಟ್ಟಲ್ಲಿ ಮರಿ ಚೆನ್ನಾಗಿ ಬೆಳೆಯುತ್ತದೆ."[೧೩೮]

೪.೧೧. ಇತರೆ

೪.೧೧.೧. ಅಯೋಗ್ಯ ಕುದುರೆ

"ಕುದುರೆಗಳಲ್ಲಿ ಮಾನವನಿಗೆ ಉಪಕಾರ ಮಾಡುವಂತಹ ಕುದುರೆಗಳಿಗೆ ಯೋಗ್ಯ ಕುದುರೆಯೆಂದೂ. ಅವನಿಗೆ ಹಾನಿಯನ್ನುಂಟು ಮಾಡುವ ಅಶ್ವಗಳಿಗೆ ಅಯೋಗ್ಯ ಕುದುರೆಗಳೆಂದು ಕರೆಯುತ್ತೇವೆ. ಈ ಕೆಳಗಿನ ಸೂಚನೆಯಂತೆ ಚರ್ಚಿಸಲಾಗುವ ವಿಶಿಷ್ಟ ಲಕ್ಷಣವನ್ನು ಹೊಂದಿರುವ ಏಳು ಲಕ್ಷಣಗಳು ಇರುವ ಅಶ್ವವು ಸ್ವಾಮಿ ಘಾತಕ. ಎಂದರೆ ತನ್ನ ಒಡೆಯನನ್ನೇ ನಾಶಮಾಡುವಂತಹವುಗಳು. ಅವು ಹೀಗಿವೆ. ಹೀನದಂತ, ಅಧಿಕದಂತ, ಕರಾಲೀ ಕೃಷ್ಣತಾಲುಕ, ಕಪ್ಪುಬಣ್ಣದ ಕಿರುನಾಲಿಗೆ, ಉದ್ದಾಲ ಮುಸರೀ ಶೃಂಗೀ ಈ ಅಶ್ವಗಳು ಪಾಪಶ್ವಗಳು ಎಂದು ಹೇಳಲಾಗುತ್ತದೆ. ಹಾಗೆಯೇ ವ್ಯಾಘ್ರಾಭ, ಸಸ್ತನೀ, ದ್ವಿಖುರ, ಕಕುದೀ ಏಕಾಂಡ ಜಾತಾಂಡ ಐದು ಹಲ್ಲುಗಳಿರುವ ಕುದುರೆಯು ಹೀನದಂತ ಎಂಬ ಅಶ್ವ.

ಏಳು ಹಲ್ಲುಗಳಿರುವ ಅಶ್ವವು ಅಧಿಕದಂತ ಎಂಬ ಅಶ್ವ. ಕರಾಲೀ ಅಶ್ವವು ಬಾಯನ್ನು ಮುಚ್ಚಿಕೊಂಡಾಗ ಕೆಳಗಿನ ಹಲ್ಲುಗಳು ಮೇಲಿನ ಹಲ್ಲುಗಳನ್ನು ಮುಚ್ಚಿಕೊಳ್ಳುತ್ತದೆ. ಅದನ್ನು ಕರಾಲೀ ಅಶ್ವ ಎಂದು ಗುರುತಿಸಲಾಗಿದೆ. ಯಾವ ಕುದುರೆಯ ಕಾಲು ಭಾಗವು ಕಪ್ಪು ಬಣ್ಣದ್ದಾಗಿರುತ್ತದೆಯೋ ಅದನ್ನು ಉದ್ದಾಲವೆಂದೂ, ಶರೀರದಲ್ಲಿ ಒಂದು ಕಾಲ ಮಾತ್ರ ಬೆಳ್ಳಗಿದ್ದು, ಇತರ ಶರೀರದ ವರ್ಣವು ಬೇರೆ ಆಗಿದ್ದಲ್ಲಿ ಅದಕ್ಕೆ 'ಮುಸಲೀ' ಎಂದು ಹೇಳಲಾಗಿದೆ. ಕುದುರೆಯ ಕಿವಿಯ ಕೀಲು ಸ್ಥಾನದಲ್ಲಿ ಸುಳಿ ಇರಲು ಶೃಂಗೀ ಎಂದು ಕರೆಯಲಾಗಿದೆ. ಕುದುರೆಯ ಕಿವಿಯು ಹುಲಿಯ ಕಿವಿಯಂತೆ ಇರಲು ವ್ಯಾಘ್ರುವೆಂದೂ, ಸ್ತನದಿಂದ ಕೂಡಿದ ಅಶ್ವ ಸಸ್ತನಿ. ಇಂತಹ ಕುದುರೆಯ ಗೊರಸುಗಳು ಹಸುವಿನ ಗೊರಸುಗಳಂತೆ ಇದ್ದು ಒಂದು ಅಂಡಕೋಶವು ಇನ್ನೊಂದಕ್ಕಿಂತ ದೀರ್ಘವಾಗಿದ್ದರೆ ಅದು ಏಕಾಂಡ ಅಶ್ವ. ಕೂದಲುಗಳಿಂದ ಕೂಡಿಕೊಂಡ ಅಂಡ ಕೋಶವುಳ್ಳ ಕುದುರೆಯು ಜಾತಾಂಡ, ಭಸ್ಮವರ್ಣ, ಸೊಟ್ಟಗಿರುವ ಬಾಲವನ್ನು ಹೊಂದಿರುವುದು. ಕಪ್ಪು, ನೀಲಿ ಬಣ್ಣದ್ದು ಅಂತಹ ಅಶ್ವಗಳನ್ನು ತ್ಯಜಿಸಬೇಕು. ಸಂಪೂರ್ಣ ಕಪ್ಪು ಬಣ್ಣದ ಕುದುರೆಯ ನಿಂದ್ಯವಾಗಿದ್ದು ಸಂಪೂರ್ಣ ಶ್ವೇತವರ್ಣವಾಗಿರುವ ಇದು ಗೌರವಾರ್ಹವಾದದ್ದು. ಪಾರ್ಥಿವ ಅಶ್ವವು ವಿವಿಧ ವರ್ಣಗಳ ಛಾಯೆಯನ್ನು ಹೊಂದಿದ್ದು, ಸ್ನಿಗ್ಧ ಹಾಗೂ ದೃಢವಾದ ವರ್ಣಗಳನ್ನು, ವಾರುಣೀ ಕುದುರೆಯು ಹೊಸದಾದ ಮೋಡದಿಂದ ಬರುವ ನೀರು (ನೂತ್ನ-ಘನ-ಅಂಜು-ಜಾತ-ಸಲಿಲ-ಪ್ರಖ್ಯ) ಇದರ ಕಾಂತಿಗೆ ಸಮಾನವಾದದ್ದು. ಆಗ್ನೇಯೀ ಬಂಗಾರದ ಕಾಂತಿಯನ್ನು

ಹೊಂದಿರುವ ಆಗ್ನೇಯ. ವಾಯುವ್ಯ, ವೈವಿಧ್ಯಮಯ, ವರ್ಣಗಳು ಗಾಢವರ್ಣಗಳು. ಆಕಾಶದಂತೆ ಸ್ವಚ್ಛ. ತಿಳಿ ನೀಲಿವರ್ಣವುಳ್ಳ ಕುದುರೆ 'ನಾಭಸ' ಎಂದು ಗುರುತಿಸಲಾಗಿದೆ."[೧೩೯]

ಮುಮ್ಮಡಿ ಕೃಷ್ಣರಾಜ ಒಡೆಯರು ತಮ್ಮ ಸೌಗಂಧಿಕ ಪರಿಣಯದಲ್ಲಿ ದೃಷ್ಟ ಕುದುರೆಯ ಲಕ್ಷಣವನ್ನು ಕುರಿತು ಹೀಗೆ ಚರ್ಚಿಸುತ್ತಾರೆ.

"ದುಷ್ಟ ಕುದುರೆಯ ಲಕ್ಷಣವನ್ನು ಕುರಿತು ವಿವರಿಸುತ್ತಾ ವ್ಯಾಘ್ರಾಭ, ಸ್ತನಿ, ದ್ವಿಖರ, ಕಕುದಿ, ಏಕಾಂಡ ಜಾತಾಂಡವೆಂಬ ಹೆಸರು ಹೊಂದಿರುವ ಕುದುರೆಗಳು ಅಯೋಗ್ಯವಾದವುಗಳು. ಕುದುರೆಗಳಿಗೆ ಮುಂಭಾಗದಲ್ಲಿ, ತುಟಿಗಳ ಸಮೀಪದಲ್ಲಿ ಆರು ಬಗೆಯ ಹಲ್ಲುಗಳಿರುತ್ತವೆ. ಆರು ಹಲ್ಲುಗಳಲ್ಲಿ ಒಂದು ಕಡಿಮೆಯಾದರೆ ಅಂತಹ ಅಶ್ವವನ್ನು 'ಹೀನದಂತ'ವೆಂದೂ, ಆರು ದಂತಗಳಿಗೆ ಒಂದು ಹೆಚ್ಚಾಗಿ ಏಳು ದಂತಗಳಿರಲು 'ಅಧಿಕದಂತ'ವೆಂದೂ, ಕುದುರೆಯ ಮೇಲಿನ ಹಲ್ಲು, ಕೆಳಗಿನ ಹಲ್ಲುಗಳಿಂದ ಕಡಿಯುತ್ತಿದ್ದರೆ 'ಕರಾಳೀ' ಎಂದು, ದವಡೆಗಳು ಕೃಷ್ಣ ವರ್ಣವಾಗಿರಲು ಅದಕ್ಕೆ 'ಕೃಷ್ಣಕಾಲುಕ'ವೆಂದೂ, ಮೇಲಿನ ಹಲ್ಲುಗಳಿಂದ ಕೆಳಗಿನ ಹಲ್ಲುಗಳು ಮುಚ್ಚಲ್ಪಟ್ಟಿದ್ದರೆ 'ಉದ್ವಾಲ' ವೆಂದೂ, ಒಂದು ಪಾದಮಾತ್ರ ಶುಭ್ರವಾಗಿ, ಪುಷ್ಪಹೀನವಾದ ಅಶ್ವವು 'ಮುಸಲಿ' ಎಂದು, ಕರ್ಣ ಪ್ರದೇಶದ ಕೀಲಿನಲ್ಲಿ ಸುಳಿಯಿರಲು 'ಶೃಂಗೀ' ಹುಲಿಯ ಬಣ್ಣವಿರುವ ಅಶ್ವ 'ವ್ಯಾಘಾಭವ', ಸ್ತನಗಳಿಂದ ಕೂಡಿರುವ ಅಶ್ವ 'ಸ್ತನೀ' ಹಸುಗಳ ಗೊರಸಿನಂತೆ ಎರಡು ಗೊರಸುಗಳ ಹೊಂದಿರುವ ಅಶ್ವ 'ದ್ವಿಖುರ' ಹಿರುಳು ಬಟುವಾಗಿ, ದಪ್ಪವಾಗಿರಲು 'ಕಕುದಿ' ಜೋಲುತಲಿರುವ ಒಂದೇ ಅಂಡವುಳ್ಳ ಅಶ್ವ 'ಏಕಾಂಡ'ವೆಂದೂ, ಜೋಲುತಲಿರುವ ಎರಡು ಅಂಡವುಳ್ಳ ಅಶ್ವ'ಜಾತಾಂಡ'ವೆಂದೂ, ಭಸ್ಮದಂತೆ ಬಣ್ಣವುಳ್ಳ ಕುದುರೆ ವಕ್ರವಾದ ಬಾಲವುಳ್ಳ ಕುದುರೆ, ಕೃಷ್ಣವರ್ಣವುಳ್ಳ ಕುದುರೆಗಳನ್ನು ತ್ಯಜಿಸಬೇಕು. ಇವು ಸಾಕಿದ ಒಡೆಯನ್ನು ಸೇರುವುದಿಲ್ಲ. ಹಿತವನ್ನು ಬಯಸದೇ ಕಚ್ಚುವುದು, ಒದೆಯುವದು ಮುಂತಾದ ದುಷ್ಟ ಕಾರ್ಯಗಳನ್ನು ಮಾಡುತ್ತವೆ."[೧೪೦]

ಅಡಿಟಿಪ್ಪಣಿಗಳು

೧. ಅಭಿನವಚಂದ್ರನ ಅಶ್ವಶಾಸ್ತ್ರ, (ಸಂ) ಜಿ.ಜಿ.ಮಂಜುನಾಥ, ಪುಟ ೮೫

೨. ಇಮ್ಮಡಿ ಗುರುಸಿದ್ಧನ ಹಾಲಸ್ಯ ಪುರಾಣ, (ಸಂ) ಜಿ.ಜಿ.ಮಂಜುನಾಥನ್ ಪುಟ ೬೫೯

೩. ಕೆಳದಿ ಬಸವರಾಜ ಸಂಕಲಿಸಿದ ಶಿವತತ್ತ್ವರತ್ನಾಕರ (ಸಂ) ಪ್ರೊ. ಮಲ್ಲೇಪುರಂ ಜಿ.ವೆಂಕಟೇಶ ಪುಟ ೭೬೩

೪. ಅದೇ, ಪುಟ ೭೬೩-೭೭೧

೫. ಸರ್ವಜ್ಞ ಸೋಮೇಶ್ವರನ ಮಾನಸೋಲ್ಲಾಸ (ಸಂ) ಡಾ. ಎಂ.ಎಂ.ಕಲಬುರ್ಗಿ, ಪುಟ ೪೬೦-೪೬೨

೬. ಕೆಳದಿ ಬಸವರಾಜ ಸಂಕಲಿಸಿದ ಶಿವತತ್ತ್ವರತ್ನಾಕರ (ಸಂ) ಪ್ರೊ. ಮಲ್ಲೇಪುರಂ ಜಿ.ವೆಂಕಟೇಶ ಪುಟ ೭೪೮-೭೪೯

೭. ಅಭಿನವಚಂದ್ರ ವಿರಚಿತ ಅಶ್ವಶಾಸ್ತ್ರ, (ಸಂ) ಜಿ.ಜಿ.ಮಂಜುನಾಥ. ಪುಟ ೧೬

೮. ಮುಮ್ಮಡಿ ಕೃಷ್ಣರಾಜ ಒಡೆಯರ ಸೌಗಂಧಿಕ ಪರಿಣಯಂ, (ಸಂ) ಡಾ.ಎಚ್.ಎಸ್.ಶ್ರೀಮತಿ ಪುಟ ೩೮೬

೯. ಕೆಳದಿ ಬಸವರಾಜ ಸಂಕಲಿಸಿದ ಶಿವತತ್ತ್ವರತ್ನಾಕರ, (ಸಂ) ಪ್ರೊ.ಮಲ್ಲೇಪುರಂ ಜಿ.ವೆಂಕಟೇಶ, ಪುಟ ೭೩೯-೭೪೩

೧೦. ಸರ್ವಜ್ಞ ಸೋಮೇಶ್ವರನ ಮಾನಸೋಲ್ಲಾಸ (ಸಂ) ಡಾ.ಎಂ.ಎಂ.ಕಲಬುರ್ಗಿ ಪುಟ ೪೫೯, ೪೬೦

೧೧. ತುರಗಲಕ್ಷಣ, ಸೋದೆಯ ಸದಾಶಿವ, ಅಭಿನವಚಂದ್ರ ವಿರಚಿತ ಅಶ್ವಶಾಸ್ತ್ರದ ಅನುಬಂಧ (ಸಂ) ಜಿ.ಜಿ.ಮಂಜುನಾಥನ್ ಪುಟ ೨೬೧

೧೨. ಅದೇ, ಪುಟ ೨೬೧

೧೩. ಅದೇ, ಪುಟ ೨೬೧

೧೪. ಅದೇ, ಪುಟ ೨೬೨

೧೫. ಅದೇ, ಪುಟ ೭೬೨

೧೬. ಅಭಿನವಚಂದ್ರ ವಿರಚಿತ ಅಶ್ವಶಾಸ್ತ್ರ (ಸಂ) ಜಿ.ಜಿ.ಮಂಜುನಾಥನ್ ಪುಟ ೬

೧೭. ಅದೇ, ಪುಟ ೧೧

೧೮. ಕೆಳದಿ ಬಸವರಾಜ ಸಂಕಲಿಸಿದ ಶಿವತತ್ತ್ವರತ್ನಾಕರ (ಸಂ) ಪ್ರೊ.ಮಲ್ಲೇಪುರಂ. ಜಿ. ವೆಂಕಟೇಶ ಪುಟ ೭೪೪-೭೪೫

೧೯. ಅಭಿನವಚಂದ್ರ ವಿರಚಿತ ಅಶ್ವಶಾಸ್ತ್ರ (ಸಂ) ಜಿ.ಜಿ.ಮಂಜುನಾಥ್ ಪುಟ ೨೧೮ರಿಂದ ೨೨೧

೨೦. ಅದೇ, ಪುಟ ೨೧೪-೨೧೫

೨೧. ಅದೇ, ಪುಟ ೨೧೬-೨೧೭

೨೨. ಅದೇ, ಪುಟ ೨೧೧-೨೧೨

೨೩. ಅದೇ, ಪುಟ ೨೧೨-೨೧೪

೨೪. ಅದೇ, ಪುಟ ೨೨೬-೨೭

೨೫. ಕೆಳದಿ ಬಸವರಾಜ ಸಂಕಲಿಸಿದ ಶಿವತತ್ತ್ವರತ್ನಾಕರ, (ಸಂ) ಪ್ರೊ.ಮಲ್ಲೇಪುರಂ ಜಿ.ವೆಂಕಟೇಶ ಪುಟ ೭೪೫-೪೭

೨೬. ಅಭಿನವಚಂದ್ರ ವಿರಚಿತ ಅಶ್ವಶಾಸ್ತ್ರ (ಸಂ) ಜಿ.ಜಿ.ಮಂಜುನಾಥನ್ ಪುಟ ೩೫

೨೭. ಕೆಳದಿ ಬಸವರಾಜ ಸಂಕಲಿಸಿದ ಶಿವತತ್ತ್ವರತ್ನಾಕರ ಸಂಪುಟ ೨, (ಸಂ) ಪ್ರೊ.ಮಲ್ಲೇಪುರಂ ಜಿ.ವೆಂಕಟೇಶ, ಪುಟ ೨೫೦-೫೧

೨೮. ಸರ್ವಜ್ಞ ಸೋಮೇಶ್ವರನ ಮಾನಸೋಲ್ಲಾಸ (ಸಂ) ಡಾ.ಎಂ.ಎಂ.ಕಲಬುರ್ಗಿ, ಪುಟ ೪೭೧-೪೭೫

೨೯. ಸೌಗಂಧಿಕಾ ಪರಿಣಯ (ಸಂ) ಶ್ರೀ ಹೆಚ್.ಎಸ್.ಶ್ರೀಮತಿ, ಪುಟ ೭೫೮-೭೫೯

೩೦. ಕೆಳದಿ ಬಸವರಾಜ ಸಂಕಲಿಸಿದ ಶಿವತತ್ತ್ವರತ್ನಾಕರ, ಪುಟ ೭೫೭-೭೬೧

೩೧. ಅದೇ, ಪುಟ ೭೫೯ರಿಂದ ೭೬೧

೩೨. ಅಭಿನವಚಂದ್ರ ವಿರಚಿತ ಅಶ್ವಶಾಸ್ತ್ರ (ಸಂ) ಜಿ.ಜಿ.ಮಂಜುನಾಥ ಪುಟ ೧೬ (ಪ್ರಸ್ತಾವನೆ)

೩೩. ಅದೇ, ಪುಟ ೨೩೩ರಿಂದ ೨೩೮

೩೪. ಸರ್ವಜ್ಞ ಸೋಮೇಶ್ವರನ ಮಾನಸೋಲ್ಲಾಸ (ಸಂ) ಡಾ.ಎಂ.ಎಂ.ಕಲಬುರ್ಗಿ ಸಂ.೨, ಪುಟ ೪೬೦

೩೫. ಅಭಿನವಚಂದ್ರ ವಿರಚಿತ ಅಶ್ವಶಾಸ್ತ್ರ (ಸಂ) ಜಿ.ಜಿ.ಮಂಜುನಾಥ ಪುಟ ೨೦೩ರಿಂದ ೨೧೦

೩೬. ಕೆಳದಿ ಬಸವರಾಜ ಸಂಕಲಿಸಿದ ಶಿವತತ್ತ್ವರತ್ನಾಕರ ಪುಟ ೭೫೨ರಿಂದ ೭೫೮

೩೭. ತುರಗಲಕ್ಷಣ ಸದಾಶಿವರಾಯ (ಸಂ) ಜಿ.ಜಿ.ಮಂಜುನಾಥನ್ ಪುಟ ೨೭೩

೩೮. ಅದೇ, ಪುಟ ೨೭೪

೩೯. ಬಾಚರಸನ ಶಾಲಿಹೋತ್ರನಮತ (ಸಂ) ಜಿ.ಜಿ.ಮಂಜುನಾಥನ್ (ಅನುಬಂಧ) ಪುಟ ೨೬೬

೪೦. ಅದೇ, ಪುಟ ೨೬೬

೪೧. ಅದೇ, ಪುಟ ೨೬೭

೪೨. ಅದೇ, ಪುಟ ೨೬೭

೪೩. ಅದೇ, ಪುಟ ೨೬೭

೪೪. ಇಮ್ಮಡಿ ಗುರುಸಿದ್ಧನ ಹಾಲಸ್ಯಪುರಾಣ (ಸಂ) ಜಿ.ಜಿ. ಮಂಜುನಾಥನ್, ಪುಟ ೬೬೨

೪೫. ಅದೇ, ಪುಟ ೬೬೦

೪೬. ಅದೇ, ಪುಟ ೬೬೨

೪೭. ತುರಗಲಕ್ಷಣ, ಸದಾಶಿವರಾಯ, (ಸಂ) ಜಿ.ಜಿ.ಮಂಜುನಾಥನ್, ಪುಟ ೨೭೮

೪೮. ಅದೇ, ಪುಟ ೨೭೮

೪೯. ಅದೇ, ಪುಟ ೨೭೯

೫೦. ಹಿರಿಯಣ್ಣ ಕವಿಯ ಹಯರತ್ನಶ್ರೇಣಿ (ಸಂ) ಡಾ.ಎಫ್.ಟಿ.ಹಳ್ಳಿಕೇರಿ, ಪುಟ ೧೩

೫೧. ಅದೇ, ಪುಟ ೧೫

೫೨. ಅದೇ, ಪುಟ ೧೬

೫೩. ಅದೇ, ಪುಟ ೧೯

೫೪. ಅದೇ, ಪುಟ ೨೦

೫೫. ಚಾವುಂಡರಾಯನ ಲೋಕೋಪಕಾರಂ, (ಸಂ) ಹೆಚ್.ಶೇಷ ಅಯ್ಯಂಗಾರ್, ಪುಟ ೨೧೪

೫೬. ಅದೇ, ಪುಟ ೨೧೫

೫೭. ಅಭಿನವಚಂದ್ರ ವಿರಚಿತ ಅಶ್ವಶಾಸ್ತ್ರ, (ಸಂ) ಜಿ.ಜಿ.ಮಂಜುನಾಥನ್, ಪುಟ ೧೫೬

೫೮. ಹಿರಿಯಣ್ಣ ಕವಿಯ ಹಯರತ್ನ ಶ್ರೇಣಿ, (ಸಂ) ಡಾ.ಎಫ್.ಟಿ.ಹಳ್ಳಿಕೇರಿ, ಪುಟ ೪೨

೫೯. ಅದೇ, ಪುಟ ೩೬, ೩೭

೬೦. ಅಭಿನವಚಂದ್ರ ವಿರಚಿತ ಅಶ್ವಶಾಸ್ತ್ರ, (ಸಂ) ಜಿ.ಜಿ.ಮಂಜುನಾಥನ್, ಪುಟ ೨೫೧

೬೧. ಹಿರಿಯಣ್ಣ ಕವಿಯ ಹಯರತ್ನ ಶ್ರೇಣಿ (ಸಂ) ಡಾ. ಎಫ್.ಟಿ. ಹಳ್ಳಿಕೇರಿ, ಪುಟ ೪೨

೬೨. ಅದೇ, ಪುಟ ೪೨

೬೩. ಅಭಿನವಚಂದ್ರ ವಿರಚಿತ ಅಶ್ವಶಾಸ್ತ್ರ (ಸಂ) ಜಿ.ಜಿ.ಮಂಜುನಾಥನ್ ಪುಟ ೨೫೧

೬೪. ಅದೇ, ಪುಟ ೨೫೧

೬೫. ಹಿರಿಯಣ್ಣ ಕವಿಯ ಹಯರತ್ನ ಶ್ರೇಣಿ (ಸಂ) ಡಾ. ಎಫ್.ಟಿ. ಹಳ್ಳಿಕೇರಿ, ಪುಟ ೪೩

೬೬. ಚಾವುಂಡರಾಯನ ಲೋಕೋಪಕಾರಂ. (ಸಂ) ಹೆಚ್.ಶೇಷ ಅಯ್ಯಂಗಾರ್, ಪುಟ ೨೧೧

೬೭. ಅದೇ, ಪುಟ ೨೧೧

೬೮. ಸರ್ವಜ್ಞ ಸೋಮೇಶ್ವರ ವಿರಚಿತ ಮಾನಸೋಲ್ಲಾಸ (ಅನುವಾದ) ಡಾ.ಎಂ.ಎಂ.ಕಲಬುರ್ಗಿ ಸಂಪುಟ ೧, ಪುಟ ೯೬

೬೯. ರಾಮಚಂದ್ರಕವಿಯ ಅಶ್ವಶಾಸ್ತ್ರದ ಟೀಕು (ಅಪ್ರಕಟಿತ ಕೃತಿ) ಕೆ.ಬಿ.೨೭೭. ಕ್ರಮಾಂಕ ಕುವೆಂಪು ಕ.ಅ.ಸಂಸ್ಥೆ, ಮೈಸೂರು

೭೦. ಅಭಿನವಚಂದ್ರ ವಿರಚಿತ ಅಶ್ವಶಾಸ್ತ್ರ, (ಸಂ) ಜಿ.ಜಿ.ಮಂಜುನಾಥನ್, ಪುಟ ೪೬

೭೧. ರಾಮಚಂದ್ರಕವಿಯ ಅಶ್ವಶಾಸ್ತ್ರದ ಟೀಕು (ಅಪ್ರಕಟಿತ ಕೃತಿ) ಕೆ.ಬಿ.೨೭೭ ಕ್ರಮಾಂಕ

೭೨. ಅಭಿನವಚಂದ್ರ ವಿರಚಿತ ಅಶ್ವಶಾಸ್ತ್ರ, (ಸಂ) ಜಿ.ಜಿ.ಮಂಜುನಾಥನ್, ಪುಟ ೨೪೬

೭೩. ಹಿರಿಯಣ್ಣ ಕವಿಯ ಹಯರತ್ನ ಶ್ರೇಣಿ, (ಸಂ) ಡಾ.ಎಫ್.ಟಿ.ಹಳ್ಳಿಕೇರಿ ಪುಟ ೩೭-೩೮

೭೪. ಚಾವುಂಡರಾಯನ ಲೋಕೋಪಕಾರಂ, (ಸಂ) ಹೆಚ್.ಶೇಷ ಅಯ್ಯಂಗಾರ್, ಪುಟ ೨೧೨

೭೫. ಹಿರಿಯಣ್ಣ ಕವಿಯ ಹಯರತ್ನ ಶ್ರೇಣಿ (ಸಂ) ಡಾ.ಎಫ್.ಟಿ.ಹಳ್ಳಿಕೇರಿ, ಪುಟ ೩೬

೭೬. ಅಭಿನವಚಂದ್ರ ವಿರಚಿತ ಅಶ್ವಶಾಸ್ತ್ರ, (ಸಂ) ಜಿ.ಜಿ.ಮಂಜುನಾಥನ್, ಪುಟ ೨೪೨

೭೭. ಚಾವುಂಡರಾಯನ ಲೋಕೋಪಕಾರಂ, (ಸಂ) ಹೆಚ್.ಶೇಷ ಅಯ್ಯಂಗಾರ್, ಪುಟ ೨೧೩

೭೮. ರಾಮಚಂದ್ರಕವಿಯ ಅಶ್ವಶಾಸ್ತ್ರ ಟೀಕು, ಕೆ.ಬಿ. ೨೨೭ ಕ್ರಮಾಂಕದ ಹಸ್ತಪ್ರತಿ

೭೬. ಸರ್ವಜ್ಞ ಸೋಮೇಶ್ವರ ವಿರಚಿತ ಮಾನಸೋಲ್ಲಾಸ (ಕನ್ನಡ ಅನುವಾದ) ಡಾ.ಎಂ.ಎಂ.ಕಲಬುರ್ಗಿ ಸಂಪುಟ ೧, ಪುಟ ೯೫, ೯೬

೭೭. ಚಾವುಂಡರಾಯನ ಲೋಕೋಪಕಾರಂ, (ಸಂ) ಹೆಚ್.ಶೇಷ ಅಯ್ಯಂಗಾರ್, ಪುಟ ೨೧೩

೭೮. ರಾಮಚಂದ್ರ ಕವಿಯ ಅಶ್ವಶಾಸ್ತ್ರ ಟೀಕು, (ಅಪ್ರಕಟಿತ ಕೃತಿ) ಕೆ.ಬಿ. ೨೨೭ ಕ್ರಮಾಂಕದ ಹಸ್ತಪ್ರತಿ

೭೯. ಸರ್ವಜ್ಞ ಸೋಮೇಶ್ವರ ವಿರಚಿತ ಮಾನಸೋಲ್ಲಾಸ (ಕನ್ನಡ ಅನುವಾದ) ಡಾ.ಎಂ.ಎಂ.ಕಲಬುರ್ಗಿ ಸಂಪುಟ ೧, ಪುಟ ೯೫, ೯೬

೮೦. ಅದೇ, ಪುಟ ೯೬, ೯೭

೮೧. ರಾಮಚಂದ್ರ ಕವಿಯ ಅಶ್ವಶಾಸ್ತ್ರದ ಟೀಕು, (ಅಪ್ರಕಟಿತ ಕೃತಿ) ಕೆ.ಬಿ. ೨೨೭ ಕ್ರಮಾಂಕದ ಹಸ್ತಪ್ರತಿ

೮೨. ಹಿರಿಯಣ್ಣ ಕವಿಯ ಹಯರತ್ನ ಶ್ರೇಣಿ, (ಸಂ) ಡಾ.ಎಫ್.ಟಿ.ಹಳ್ಳಿಕೇರಿ ಪುಟ ೪೧, ೪೨

೮೩. ಅದೇ, ಪುಟ ೪೨

೮೪. ಚಾವುಂಡರಾಯನ ಲೋಕೋಪಕಾರಂ (ಸಂ) ಹೆಚ್.ಶೇಷ ಅಯ್ಯಂಗಾರ್, ಪುಟ ೨೧೩

೮೫. ಸರ್ವಜ್ಞ ಸೋಮೇಶ್ವರ ವಿರಚಿತ ಮಾನಸೋಲ್ಲಾಸ, ಸಂಪುಟ ೧, ಡಾ.ಎಂ.ಎಂ.ಕಲಬುರ್ಗಿ ಪುಟ ೯೮, ೯೯

೮೬. ಅದೇ, ಪುಟ ೯೯

೮೭. ರಾಮಚಂದ್ರಕವಿಯ ಅಶ್ವಶಾಸ್ತ್ರದ ಟೀಕು, (ಅಪ್ರಕಟಿತ ಕೃತಿ) ಕೆ.ಬಿ. ೨೨೭ ಕ್ರಮಾಂಕ

೮೮. ಅದೇ, ಕೆ.ಬಿ. ೨೨೭ ಕ್ರಮಾಂಕ

೮೯. ಅಭಿನವಚಂದ್ರ ವಿರಚಿತ ಅಶ್ವಶಾಸ್ತ್ರ (ಸಂ) ಜಿ.ಜಿ.ಮಂಜುನಾಥನ್, ಪುಟ ೧೭೦

೯೦. ಚಾವುಂಡರಾಯನ ಲೋಕೋಪಕಾರಂ. (ಸಂ) ಹೆಚ್.ಶೇಷ ಅಯ್ಯಂಗಾರ, ಪುಟ ೨೧೬, ೨೧೭

೯೧. ಅದೇ, ಪುಟ ೨೧೪

೯೨. ರಾಮಚಂದ್ರಕವಿಯ ಅಶ್ವಶಾಸ್ತ್ರದ ಟೀಕು. (ಅಪ್ರಕಟಿತ ಕೃತಿ) ಕೆ.ಬಿ. ೨೨೭ ನೇ ಕ್ರಮಾಂಕ

೯೩. ಚಾವುಂಡರಾಯನ ಲೋಕೋಪಕಾರಂ, (ಸಂ) ಹೆಚ್.ಶೇಷ ಅಯ್ಯಂಗಾರ್, ಪುಟ ೨೨೧

೯೪. ಅಭಿನವಚಂದ್ರ ವಿರಚಿತ ಅಶ್ವಶಾಸ್ತ್ರ (ಸಂ) ಜಿ.ಜಿ.ಮಂಜುನಾಥನ್, ಪುಟ ೨೪೨

೯೫. ಚಾವುಂಡರಾಯನ ಲೋಕೋಪಕಾರಂ (ಸಂ) ಹೆಚ್.ಶೇಷ ಅಯ್ಯಂಗಾರ್, ಪುಟ ೨೧೧

೯೬. ಹಿರಿಯಣ್ಣ ಕವಿಯ ಹಯರತ್ನ ಶ್ರೇಣಿ (ಸಂ) ಡಾ.ಎಫ್.ಟಿ.ಹಳ್ಳಿಕೇರಿ, ಪುಟ ೩೭

೯೭. ಚಾವುಂಡರಾಯನ ಲೋಕೋಪಕಾರಂ (ಸಂ) ಹೆಚ್.ಶೇಷ ಅಯ್ಯಂಗಾರ್, ಪುಟ ೨೧೫-೨೧೬

೯೮. ಅಭಿನವಚಂದ್ರ ವಿರಚಿತ ಅಶ್ವಶಾಸ್ತ್ರ (ಸಂ) ಜಿ.ಜಿ.ಮಂಜುನಾಥನ್, ಪುಟ ೧೭೨

೯೯. ಅದೇ, ಪುಟ ೨೧೮

೧೦೦. ಅದೇ, ಪುಟ ೨೫೩ರಿಂದ ೫೫

೧೦೧ ಅದೇ, ಪುಟ ೫೬ರಿಂದ ೫೮

೧೦೨. ಅದೇ, ಪುಟ ೫೫

೧೦೩. ಚಾವುಂಡರಾಯನ ಲೋಕೋಪಕಾರಂ (ಸಂ) ಹೆಚ್.ಶೇಷ ಅಯ್ಯಂಗಾರ, ಪುಟ ೨೧೪

೧೦೪. ಅಭಿನವಚಂದ್ರ ವಿರಚಿತ ಅಶ್ವಶಾಸ್ತ್ರ. (ಸಂ) ಜಿ.ಜಿ.ಮಂಜುನಾಥನ್, ಪುಟ ೨೫೧

೧೦೫. ಅದೇ, ಪುಟ ೨೪೬

೧೦೬. ಅದೇ, ಪುಟ ೨೫೨, ೨೫೩

೧೦೭. ಅದೇ, ಪುಟ ೨೪೪, ೪೫

೧೦೮. ಅದೇ, ಪುಟ ೨೫೫-೫೬

೧೦೯. ಚಾವುಂಡರಾಯನ ಲೋಕೋಪಕಾರಂ (ಸಂ) ಹೆಚ್.ಶೇಷ ಅಯ್ಯಂಗಾರ, ಪುಟ ೨೧೭

೧೧೦. ಅದೇ, ಪುಟ ೧೫೯

೧೧೧. ಅದೇ, ಪುಟ ೨೪೬, ೨೪೮

೧೧೨. ಹಿರಿಯಣ್ಣ ಕವಿಯ ಹಯರತ್ನ ಶ್ರೇಣಿ, (ಸಂ) ಡಾ.ಎಫ್.ಟಿ.ಹಳ್ಳಿಕೇರಿ, ಪುಟ ೪೩

೧೧೩. ಅದೇ, ಪುಟ ೪೩ ರಿಂದ ೪೭

೧೧೪. ಅಭಿನವಚಂದ್ರ ವಿರಚಿತ ಅಶ್ವಶಾಸ್ತ್ರ (ಸಂ) ಜಿ.ಜಿ.ಮಂಜುನಾಥನ್, ಪುಟ ೨೫೮ರಿಂದ ೨೬೩

೧೧೫. ಅದೇ, ಪುಟ ೯೨

೧೧೬. ಅದೇ, ಪುಟ ೧೩, ೧೪, (ಪ್ರಸ್ತಾವನೆ)

೧೧೭. ತುರಗಲಕ್ಷಣ ಸದಾಶಿವರಾಯ (ಸಂ) ಜಿ.ಜಿ.ಮಂಜುನಾಥನ್ (ಅಶ್ವಶಾಸ್ತ್ರದ ಅನುಬಂಧ) ಪುಟ ೨೨೪-೨೨೫

೧೧೮. ಅದೇ, ಪುಟ ೨೭೫

೧೧೯. ಅದೇ, ಪುಟ ೨೭೫, ೨೭೬

೧೨೦. ಸರ್ವಜ್ಞ ಸೋಮೇಶ್ವರನ ಮಾನಸೋಲ್ಲಾಸ ಸಂಪುಟ ೧ (ಸಂ) ಡಾ.ಎಂ.ಎಂ.ಕಲಬುರ್ಗಿ, ಪುಟ ೪೬೨ ರಿಂದ ೪೬೪

೧೨೧ ಅದೇ, ಪುಟ ೪೬೫

೧೨೨ ಅಭಿನವಚಂದ್ರ ವಿರಚಿತ ಅಶ್ವಶಾಸ್ತ್ರ (ಸಂ) ಜಿ.ಜಿ.ಮಂಜುನಾಥನ್ ಪುಟ ೧೯

೧೨೩. ಅದೇ, ಪುಟ ೨೦

೧೨೪. ಅದೇ, ಪುಟ ೧೯೮-೨೦೨

೧೨೫. ಧರ್ಮಶಾಸ್ತ್ರದ ಇತಿಹಾಸ ಸಂಪುಟ ೫, ಪ್ರೊ. ಪಿ.ವಿ.ಕಾಣೆ, ಪುಟ ೩೩೪-೩೩೫

೧೨೬. ವರಾಹಮಿಹಿರ ಬೃಹತ್‌ಸಂಹಿತೆ (ಸಂ) ಎಂ.ರಾಮಕೃಷ್ಣ ಭಟ್, ಪುಟ ೩೬೧-೩೬೮

೧೨೭. ಕೌಟಿಲ್ಯನ ಅರ್ಥಶಾಸ್ತ್ರ (ಸಂ) ಎನ್.ಎಸ್.ವೆಂಕಟನಾಥಾಚಾರ್ಯ, ಅಧ್ಯಾಯ ೨

೧೨೮. ಗೋವಿಂದ ವೈದ್ಯ (ಸಂ) ಕಂಠೀರವ ನರಸರಾಜ ವಿಜಯ ಡಾ.ಆರ್.ಶಾಮಾ ಶಾಸ್ತ್ರಿ, ೪-೪೨

೧೨೯. ಮಾರ್ಕಂಡೆಯ ಪುರಾಣ (ದೇವಿ ಮಹಾತ್ಮೆ) ಪುಟ ೩೩೪

೧೩೦. ಗೋವಿಂದ ವೈದ್ಯ (ಸಂ) ಕಂಠೀರವ ನರಸರಾಜ ವಿಜಯ ಡಾ.ಆರ್.ಶಾಮಾ ಶಾಸ್ತ್ರಿ, ೨೦ರಿಂದ ೨೨ನೆಯ ಸಂಧಿ

೧೩೧. ಅಭಿನವಚಂದ್ರ ವಿರಚಿತ ಅಶ್ವಶಾಸ್ತ್ರ (ಸಂ) ಜಿ.ಜಿ.ಮಂಜುನಾಥನ್, ಪುಟ ೧೦೮ರಿಂದ ೧೧೬

೧೩೨ ಅದೇ, ಪುಟ ೧೦೯-೧೧೦

೧೩೩. ಅದೇ, ಪುಟ ೧೧೦

೧೩೪. ಅದೇ, ಪುಟ ೧೧ರಿಂದ ೧೪

೧೩೫. ಅದೇ, ಪುಟ ೧೨೮

೧೩೬. ಅದೇ, ಪುಟ ೧೨೮

೧೩೭. ಸರ್ವಜ್ಞ ಸೋಮೇಶ್ವರನ ಮಾನಸೋಲ್ಲಾಸ ಸಂಪುಟ ೧, (ಸಂ) ಡಾ.ಎಂ.ಎಂ.ಕಲಬುರ್ಗಿ, ಪುಟ ೪೬೮ ಮತ್ತು ೪೭೧

೧೩೮. ಕನ್ನಡ ವಿಶ್ವಕೋಶ, ಸಂಪುಟ ೪, ಪುಟ ೮೫೨ರಿಂದ ೮೫೪

೧೩೯. ಕೆಳದಿ ಬಸವರಸನ ಶಿವತತ್ತ್ವರತ್ನಾಕರ ಸಂಪುಟ ೨, (ಸಂ) ಪ್ರೊ. ಮಲ್ಲೇಪುರಂ. ಜಿ. ವೆಂಕಟೇಶ, ಪುಟ

೧೪೦. ಸೌಗಂಧಿಕಾ ಪರಿಣಯ (ಸಂ) ಶ್ರೀಮತಿ ಎಚ್.ಎಸ್. ಪುಟ ೩೬೦

ಅಧ್ಯಾಯ ೫

ಕರ್ನಾಟಕ ಅಶ್ವ ಸಂಸ್ಕೃತಿ

೫.೧. ಪ್ರವೇಶ

೫.೨. ಅಶ್ವಜಾತಿ

೫.೨.೧. ಬೊಲ್ಲ

೫.೨.೨. ಪಂಚಕಲ್ಯಾಣಿ

೫.೨.೩. ಚೇತಕ

೫.೩. ಅಶ್ವಾಚರಣೆ

೫.೩.೧. ಬಾಗಿಲ ಮೇಲೆ ಕುದುರೆಯ ಚಿತ್ರ

೫.೩.೨. ಕುದುರೆ ಕುಣಿತ

೫.೩.೩. ತೇಜಮ್ಮ ಆರಾಧನೆ

೫.೩.೪. ಕುದುರೆ ಶಿಲ್ಪಗಳು

೫.೩.೫. ಕುದುರೆಯ ಬಳಕೆ

ಅಧ್ಯಾಯ ೫

ಕರ್ನಾಟಕ ಅಶ್ವ ಸಂಸ್ಕೃತಿ

೫.೧. ಪ್ರವೇಶ

ಸಂಸ್ಕೃತಿ ಹೆಸರೇ ಸೂಚಿಸುವಂತೆ ಹಲವು ಕ್ಷೇತ್ರಗಳ ಹಲವು ವಿಚಾರಗಳ ವೈವಿಧ್ಯಮಯ ಆಚರಣೆಗಳ, ಪಾರಂಪರಿಕವಾಗಿ ಹರಿದು ಬಂದ ಸತ್ಯಸಂಗತಿಗಳ ವ್ಯವಸ್ಥಿತ ಪ್ರತಿಬಿಂಬವನ್ನು ಸಂಸ್ಕೃತಿ ಎನ್ನಬಹುದು. 'ಸಂಸ್ಕೃತಿ' ಎಂಬ ಶಬ್ದ ಈಚೆಗೆ ಬಹುಮುಖವಾದ ಅರ್ಥವನ್ನು ಪಡೆದುಕೊಂಡು ಬಂದಿದೆ. ಮಾನವನ ಸಮುದಾಯ, ಸಂಪ್ರದಾಯಗಳಿಂದ ಹಿಡಿದು ವೈಯಕ್ತಿಕವಾದ ಆಚರಣೆಗಳವರೆಗೂ ಅದರ ವ್ಯಾಪ್ತಿ ಹಬ್ಬಿದೆ. ಸಂಸ್ಕೃತಿಯ ಚಿಂತಕನಾದ ಹೆನ್ರಿಲೂಕಾಸ್ ಸಂಸ್ಕೃತಿ ಮತ್ತು ನಾಗರಿಕತೆಗಳೆರಡೂ ಸಮಾನಾರ್ಥಕ ಪದಗಳು ಎಂದು ಹೇಳಿ 'ಸಂಸ್ಕೃತಿ' ಎಂಬುದು ಸಂಕುಚಿತ ವ್ಯಾಪ್ತಿಯನ್ನುಳ್ಳದ್ದು. ನಾಗರಿಕತೆಯ ಕ್ಷೇತ್ರ ವಿಸ್ತಾರವಾದದ್ದು, ಪೌರಾತ್ಯ, ಪಾಶ್ಚಾತ್ಯ ಇತ್ಯಾದಿ ವ್ಯಾಪಕವಾದ ಅರ್ಥದಲ್ಲಿ ತೆಗೆದುಕೊಂಡಾಗ ನಾಗರಿಕತೆಯೆಂದೂ ಭಾರತ, ಅಮೇರಿಕ, ಬ್ರಿಟನ್ ಜರ್ಮನ್ ಇತ್ಯಾದಿ ದೇಶಗಳ ಪರಿಮಿತ ವ್ಯಾಪ್ತಿಯಲ್ಲಿ ಹೇಳುವಾಗ ಸಂಸ್ಕೃತಿ ಎಂದು ಹೇಳಬಹುದು ಎನ್ನುತ್ತಾರೆ.

ಸಂಸ್ಕೃತಿಯ ಕುರಿತು ಬಿ.ಎಂ.ಶ್ರೀ ಅವರು ಹೇಳುತ್ತಾ 'ಸಂಸ್ಕೃತಿಯೆಂಬುದು ಒಂದಾನೊಂದು ಹಳೆಯ ಪದಾರ್ಥದ ಹೊಸ ಹೆಸರು. ಬಾಳ್ವೆಯನ್ನು ಹದಪಡಿಸುವುದು ಎಂದು ಅದರ ಅರ್ಥ. ನಾವು ಎಂಥ ನಯ, ವಿನಯಗಳಿಂದ, ಎಂಥ ನವುರು ನಾಜೂಕುಗಳಿಂದ ಬಾಳ್ವೆಯನ್ನು ನಡೆಸಿದರೆ ಅದರಲ್ಲಿ ಹುಳಿ -ಕಹಿಗಳು ಕಡಿಮೆಯಾಗಿ, ಸ್ವಾರಸ್ಯ ಹೆಚ್ಚಿತೋ ಆ ತೆರದ ಮನೋಭಾವನೆಯನ್ನು ನಡೆತೆ ನುಡಿತೆಗಳನ್ನು ಸಂಪಾದಿಸಿಕೊಳ್ಳುವುದು ಸಂಸ್ಕೃತಿ. ಅದು ಒಂದು ಬಗೆಯ ಆತ್ಮ ಶಿಕ್ಷಣವೆಂದು' ಅಭಿಪ್ರಾಯಪಡುತ್ತಾರೆ.

'ಸಂಸ್ಕೃತಿ' ಎಂಬುದು ಒಂದು ಸಮುದಾಯ ಬದುಕುವ, ಆಲೋಚಿಸುವ ಸಮಸ್ತ ಆಯಾಮಗಳನ್ನು ಒಳಗೊಳ್ಳುವ ಒಂದು ಪರಿಭಾಷೆ 'ಸಮುದಾಯ' ಎಂದಾಗ ಒಂದು ಗುಂಪಲ್ಲ, ಹಲವಾರು ಗುಂಪುಗಳಿರುತ್ತವೆ. ಈ ಎಲ್ಲ ಗುಂಪುಗಳ ನಂಬಿಕೆ ಆಚರಣೆಗಳೂ ಒಟ್ಟು ಸೇರಿಯೇ ಸಂಸ್ಕೃತಿಯಾಗಿದೆ ಎಂದು ಸಾಂಸ್ಕೃತಿಕ ಅಧ್ಯಯನ ಕೃತಿಯಲ್ಲಿ ಡಾ.ರಹಮತ್ ತರೀಕೆರೆ ಅವರು ಚರ್ಚಿಸುತ್ತಾರೆ.

ಸಂಸ್ಕಾರಕ್ಕೂ ಸಂಸ್ಕೃತಿಗೂ ನಿಕಟ ಸಂಬಂಧವಿದೆ. ಸಂಸ್ಕಾರ ನಾನಾ ದಿಕ್ಕುಗಳಿಂದ, ನಾನಾ ಮೂಲಗಳಿಂದ ಬರುವಂತಹದ್ದು. ಆದ್ದರಿಂದ ಮಾನವನಿಗೆ ಸಂಸ್ಕಾರವನ್ನು ಒದಗಿಸುವ ಎಲ್ಲ ಅಂಶಗಳು ಸಂಸ್ಕೃತಿಯ ತಳಹದಿಯೇ ಆಗಿವೆ; ಎಂದು ಸಂಸ್ಕೃತಿ ಎಂಬ ಲೇಖನದಲ್ಲಿ ಪ್ರೊ. ಎಸ್. ಎಸ್.ಹಿರೇಮಠ ಅಭಿಪ್ರಾಯಪಡುತ್ತಾರೆ.

ಹೀಗಾಗಿ ಸಂಸ್ಕೃತಿಯು ಯಾವುದೇ ಆಗಿರಬಹುದು ಅದು ವಿಶಾಲ ವ್ಯಾಪ್ತಿಯನ್ನು ಪಡೆದುಕೊಂಡಿದೆ. ಬೇರೆ ಸಂಸ್ಕೃತಿಯಿಂದ ಆರಂಭಗೊಂಡ ಅಶ್ವಸಂಸ್ಕೃತಿ ಕೆಲವು ಶತಮಾನಗಳು ಗತಿಸಿದ ನಂತರ ಪಶುಸಂಸ್ಕೃತಿಯನ್ನು ಅವಲಂಬಿಸಿದೆ ಅದರ ಮುಂದುವರಿಕೆ ಕಾಲಮಾನಕ್ಕೆ ತಕ್ಕಂತೆ ಬದಲಾವಣೆಗೊಂಡು ಮಾನವ ಸಂಸ್ಕೃತಿಯ ಹಲವು ಮುಖಗಳಲ್ಲಿ ಬೆಸೆದುಕೊಂಡು ಬಂದಿರುವುದು ಅದರ ಪ್ರಾಚೀನತೆಯನ್ನು ಗುರುತಿಸಿಕೊಳ್ಳುವಲ್ಲಿ ಸಹಾಯಕವಾಗುತ್ತದೆ.

೫.೨. ಅಶ್ವಜಾತಿ

೫.೨.೧. ಬೊಲ್ಲ ಕುದುರೆ

ಕನ್ನಡ ಸಾಹಿತ್ಯ ಮತ್ತು ಇತಿಹಾಸದಲ್ಲಿ ಅನೇಕ ಬಗೆಯ ಅವಗಡಗಳು ನಡೆದಿವೆ. ಹಾಗೆ ನೋಡಿದರೆ "ಅಲ್ಲಾವುದ್ದೀನ್ ಖಿಲ್ಜಿಯಿಂದ ಆರಂಭವಾಗಿ (೧೨೯೬). ಮಹಮ್ಮದ್‌ಬಿನ್ ತುಘಲಕ್‌ನ ಸೇನಾಪತಿ ಮಲ್ಲಿಕ್‌ಕಾಫರ್‌ನಿಂದ ಮುಂದುವರಿದ ಅನೇಕ ಸಲದ ಆಕ್ರಮಣಗಳಿಂದ ದಕ್ಷಿಣದ ಮೂರು ಮುಖ್ಯ ಸಾಮ್ರಾಜ್ಯಗಳಾದ ಇಂದಿನ ಮಹಾರಾಷ್ಟ್ರದ ದೇವಗಿರಿ ಯಾದವರು ೧೩೦೩ರಲ್ಲಿ, ಆಂಧ್ರಪ್ರದೇಶದ ಓರುಗಲ್ಲಿನ ಕಾಕತೀಯರು ೧೩೨೩ರಲ್ಲಿ, ಕರ್ನಾಟಕದ ದ್ವಾರಸಮುದ್ರದ ಹೊಯ್ಸಳರು, ೧೩೧೨ರಲ್ಲಿ ಕುಸಿದು ಹೋದರು. ಅಂದರೆ ೧೨೧೩ರ ಹೊತ್ತಿಗೆ ಕನ್ನಡಿಗರಿಗೆ ರಾಜರಕ್ಷಣೆಯಿಲ್ಲದ ಅನಾಥಸ್ಥಿತಿ ಪ್ರಾಪ್ತವಾಯಿತು. ಈ ಮುಂದಿನ ವರ್ಷಗಳಲ್ಲಿ ಹೊಸಮಲೆದುರ್ಗ ಕಮ್ಮಟಗಳ ಕಂಪಿಲದೇವರಾಯ, ಮಗ ಕುಮಾರರಾಮ ಅನಾಥ ರಕ್ಷಣೆಯ ಹೊಣೆಹೊತ್ತರು.

ಒಂದು ಕಾಲಕ್ಕೆ ದೇವಗಿರಿ ಯಾದವರ ಸಾಮಂತರಾಗಿದ್ದ ಇವರು. ಮೊದಮೊದಲು ಎಡಬಂದ ಹೊಯ್ಸಳ ಕಾಕತೀಯರೊಡನೆ ಹೋರಾಡಿ ಆ ಎರಡೂ ಮನೆತನಗಳು ನಾಶವಾದ ಬಳಿಕ, ಏಕೈಕ ರಕ್ಷಕರೆಂಬಂತೆ ಉತ್ತರದಲ್ಲಿ ತುಘಲಕನೊಂದಿಗೆ ಹೋರಾಟ ಕೈಗೆತ್ತಿಕೊಂಡರು. ಇದರಲ್ಲಿ ವಿರೋಚಿತವಾಗಿ ವರ್ತಿಸಿ ಮಾದಗಿತ್ತಿಯ ಕೈಯಿಂದ ದುರಂತ ಮರಣದಲ್ಲಿ ಅಸ್ತಂಗತನಾದವ (ಕ್ರಿ.ಶ.೧೩೨೭) ಕುಮಾರರಾಮ. ಅನಾಥ ರಕ್ಷಣೆಯ ಹೊಣೆ ದುರಂತ ಮರಣದ ಕೊನೆ ಕಾರಣವಾಗಿ ಕರ್ನಾಟಕದ ಸಾಂಸ್ಕೃತಿಕ ಇತಿಹಾಸದಲ್ಲಿ ಚಿರಂಜೀವಿಯೆನಿಸಿದವ ಈ ಕುಮಾರ ರಾಮ."[೧] ಇವನ ಪ್ರಸಿದ್ಧ ಅಪೇಕ್ಷೆಯ ಕುದುರೆಯೇ ಬೊಲ್ಲ.

ಕುಮಾರ ರಾಮನ ಜೊತೆಗೆ ಸದಾ ಕಾಲ ಇದ್ದು, ಆತ್ಮೀಯ ಸ್ನೇಹಿತನಾಗಿ ಅವನ ಜೀವನದ ಕೊನೆ ಉಸಿರು ಇರುವವರೆಗೂ ಸಹಾಯಕವಾಗಿ ನಿಂತು ಯುದ್ಧದಲ್ಲಿ ಹೋರಾಡಿದ ಪ್ರಸಿದ್ಧ ಕುದುರೆ ಇದು. ಕುಮಾರ ರಾಮ ಎಂದಾಕ್ಷಣ ನೆನಪಿಗೆ ಬರುವುದು ಬೊಲ್ಲ ಕುದುರೆಯ ಹೆಸರು. ಬೊಲ್ಲ ಕುದುರೆಗೂ ಮತ್ತು ಕುಮಾರ ರಾಮನಿಗೂ ಇರುವ ನಂಟು ಈ ಮಾತಿಗೆ ಸಾಕ್ಷಿಯಾಗಿದೆ.

"ಬೊಲ್ಲ ಕುದುರೆಯನ್ನು ಕುರಿತು ಮಂಗರಾಜನ ನಿಘಂಟು ಮುಖ ಬೆಳ್ಳಗಿರುವ ಕುದುರೆಗೆ 'ಬೊಲ್ಲ'ನೆಂದು ಹೆಸರು (ಮಂಗರಾಜ ೮೨-೧೪) ಎಂದು ಗುರುತಿಸಲಾಗಿದೆ.

ಕನ್ನಡ ನಿಘಂಟಿನಲ್ಲಿ 'ಬೊಲ್ಲ' ಎಂಬ ಪದಕ್ಕೆ ಒಂದು ಜಾತಿಯ ವಿಶಿಷ್ಟ ಕುದುರೆ ಮುಖವು ಬೆಳ್ಳಗಿರುವ ಕುದುರೆ ಎಂದು ಹೇಳಲಾಗಿದೆ."[೨]

"ಕಂಪಿಲರಾಯ ಒಡ್ಡೋಲಗದಲ್ಲಿದ್ದ ಒಂದು ಸಂದರ್ಭ. ಗುತ್ತಿಯ ಜಗತಾಪಿ ಕಳುಹಿಸಿದ ಸ್ಥಾನ ಪತಿಗಳು ಬಂದು ತಮ್ಮ ರಾಜನಿಗೆ ಶರಣಾಗಬೇಕೆಂದು ಕೇಳಿದರು. ಆಗ ಕಂಪಿಲರಾಯನು ಅವರನ್ನು ಹೊರ ನೂಕಿದನು. ಈ ವಿಷಯವನ್ನು ಸ್ಥಾನಾದಿಪತಿಗಳಿಂದ ಕೇಳಿದ ಜಗತಾಪಿ ಹೊಸಮಲೆದುರ್ಗಕ್ಕೆ ಬಂದನು. ಆಗ ೧೨ ವರ್ಷದ ಬಾಲಕನಿದ್ದಕುಮಾರರಾಮ ಯುದ್ಧದಲ್ಲಿ ತರಬೇತಿಯನ್ನು ಪಡೆದಿದ್ದನು. ಆಗ ಜಗತಾಪಿಯನ್ನು ಸೋಲಿಸಿದನು. ರಾಮನ ಮನ್ನೆಯರು ಅವನ ಕುದುರೆಯನ್ನು ಸೆರೆಹಿಡಿದರು. ಆಗ ಕಂಪಿಲನ ೫ ಜನ ಮಕ್ಕಳು ಮನ್ನೆಯರನ್ನೂ ಬೆದರಿಸಿ ಕುದುರೆಯನ್ನು ಕಸಿದುಕೊಂಡರು. ಕುಮಾರರಾಮ ಅವರನ್ನು ಗಾಸಿಗೊಳಿಸಿದ ಮಂತ್ರಿ ಇಂತಹ ಒಳಜಗಳಗಳನ್ನು ಬಿಡಿಸಿದನು.

ರಾಮನಾಥ ಜಗತಾಪಿಯನ್ನು ಸೆರೆಹಿಡಿದು ತಂದೆಗೆ ಒಪ್ಪಿಸಿದ. ತನ್ನನ್ನು ಓಲೈಸುತ್ತ ಬಾಳು ಎಂದು ತಿಳುವಳಿಕೆಯನ್ನು ಹೇಳಿ ಕಂಪಿಲರಾಯ ಜಗತಾಪಿಯನ್ನು ಕಳುಹಿಸುತ್ತಾನೆ. ಐದು ಜನ ಕುಮಾರರು ಬಂದು ತಮ್ಮ ಹತ್ತು ಕುದುರೆಗಳು ಕಾಣೆಯಾಗಿವೆ. ನಮಗೆ ರಾಮನೊಡನೆ ಬಾಳಲು ಸಾಧ್ಯವಿಲ್ಲ; ಒಂದು ಊರು ಕೊಡು ಇಲ್ಲಿಂದ ದೂರ ಹೋಗುವೆನೆಂದು ದೂರಿದರು. ಕಂಪಿಲರಾಯ ಅವರಿಗೆ ೧೦ ಕುದುರೆ ಬಿಡಿಸಿಕೊಟ್ಟನು. ಅಲ್ಲಿಗೆ ಬಂದ ರಾಮಯ್ಯ ತನ್ನ ಮನ್ನೆಯರು ಹಿಡಿದ ಕುದುರೆಗಳನ್ನು ನೀಡಿದುದನ್ನು ಪ್ರತಿಭಟಿಸಿದ ಆಗ 'ನೀನು ಸಮರ್ಥನೇ ಆಗಿದ್ದರೆ (ಓರಗಲ್ಲಿನ ಪ್ರತಾಪರುದ್ರನ ಮಗ) ಎಪ್ಪತ್ತು ರಾಜನ ಬೊಲ್ಲ ಕುದುರೆಯನ್ನು ಗೆದ್ದು ತೆಗೆದುಕೊಂಡು ಬಾ' ಎಂದು ತಂದೆ ಕಂಪಿಲರಾಯ ಸವಾಲನ್ನು ಹಾಕುತ್ತಾನೆ. ಸವಾಲನ್ನು ಸ್ವೀಕರಿಸಿದ ಕುಮಾರರಾಮ ಅದನ್ನು ತರಲು ಸಿದ್ಧನಾಗಿ ತಾಯಿಯ ಆಶೀರ್ವಾದ ಪಡೆದು ಕಾಟಣ್ಣ ಮತ್ತು ಸೈನ್ಯದೊಂದಿಗೆ ಓರಂಗಲ್ಲಿಗೆ ಪ್ರಯಾಣ ಬೆಳೆಸುತ್ತಾನೆ. ರಾಜಧಾನಿಯ ಹೊರವಲಯದಲ್ಲಿರುವ ಗುಂಡಬ್ರಹ್ಮಯನ ಗುಡಿಯಲ್ಲಿ ಬೀಡುಬಿಟ್ಟು ರಾಮಯ್ಯನ ಸ್ಥಾನಪತಿಯು ಪ್ರತಾಪರುದ್ರನ ಆಸ್ಥಾನಕ್ಕೆ ಹೋಗಿ ತಂದೆಯೊಡನೆ ಜಗಳಕಾಯ್ದು ರಾಮಯ್ಯ ಬಂದ ವಿಷಯ

ತಿಳಿಸಿದನು."[೩] ರಾಮಯ್ಯ ಗುಂಡ ಬ್ರಹ್ಮಯ್ಯ ದೇವರಿಗೆ ನಮಸ್ಕರಿಸಿ ಈ ರೀತಿಯಾಗಿ ಬೇಡಿಕೊಳ್ಳುವುದನ್ನೂ ಹೊಸ ಕುಮಾರರಾಮ ಸಾಂಗತ್ಯದ ಪದ್ಯವೊಂದು ಹೀಗೆ ವಿವರಿಸುತ್ತದೆ.

"ಎಪ್ಪತ್ತು ರಾಜನ ಬೊಲ್ಲನು ಸಿಕ್ಕರೆ
ತಪ್ಪದೆ ನಾ ಬಲಗೊಂಬೆ
ಒಪ್ಪುವ ಶಲದ ಹಬ್ಬದ ಮೊಳ್ಪೆನು
ಛಪ್ಪನ್ನ ದೇಶರಿವಂತೆ"[೪] (೫ -೨೭ ಹೊಸ ಕುಮಾರ ಸಾಂ.)

ಎಪ್ಪತ್ತುರಾಜನ ಬೊಲ್ಲ ಕುದುರೆ ಸಿಕ್ಕರೆ 'ಶೂಲದ ಹಬ್ಬ' ಆಚರಿಸುವುದಾಗಿ ಹರಕೆ ಹೊತ್ತ ರಾಮಯ್ಯನ ಕನಸಿನಲ್ಲಿ ಗುಂಡಬ್ರಹ್ಮಯ್ಯ ಒಂದು ವರ ದಯಪಾಲಿಸಿದರು.

"ಉದಯ ಕಾಲದಲ್ಲಿ ರುದ್ರರಾಯ ಮಜ್ಜನ ಮಾಡಿ ಗುರು ಲಿಂಗ ಜಂಗಮಕೆ ವಂದಿಸಿ ರಾಸಿಯಾಟಕೆ ಬಂದು ಪಂಚರತ್ನದ ಕಂತೆ ಬೆಳ್ಳಿಕಂತೆ ಕಬ್ಬಿಣದ ಕಂತೆ ರುದ್ರಕಂತೆಯ ಜಂಗಮರಿಗೆ ವಂದಿಸಿದನು. ದೀಕ್ಷಾಬೋಧೆ ಓದುತ್ತಲಿದ್ದ ಈ ಷಡುರಸ್ಥಲದವರಿಗೆ ಶರಣುಮಾಡಿ ಓಲಗಕ್ಕೆ ಬಂದು ಗದ್ದುಗೆಯಲ್ಲಿ ಕುಳಿತು ರಾಮನನ್ನು ಕರೆತರಲು (ದೇವಿಶೆಟ್ಟಿಯ) ಲಿಂಗನನ್ನು ಕಳಿಸಿದ. ಬಂದ ರುದ್ರನ ವೈಹಾಳಿಯನ್ನೂ ನೋಡಿ ರಾಮಯ್ಯ ತಾನು ಬಂದ ಕಾರಣ ತಿಳಿಸಿದ. ಈ ಕಾರ್ಯದಲ್ಲಿ ಸ್ಥಿರವಾಗುವುದಾಗಿ ಲಿಂಗಣ್ಣ ಆಶ್ವಾಸನೆ ನೀಡಿದ. ಇಬ್ಬರೂ ಆಸ್ಥಾನಕ್ಕೆ ಹೊರಟರು. ದಾರಿಯುದ್ದಕ್ಕೂ ಹೆಂಗಳೆಯರು ರಾಮನ ರೂಪಕ್ಕೆ ಮರುಳಾದರು. ಇಬ್ಬರೂ ಆಸ್ಥಾನದೊಳಗೆ ಬಂದರು. ತನ್ನ ಮಗ ಎಪ್ಪತ್ತುರಾಜ ಮತ್ತು ರಾಮಯ್ಯ ಒಂದಾದುದು ತನ್ನ ಸುದೈವವೆಂದು ಭಾವಿಸಿದ ರುದ್ರರಾಜ ರಾಮಯ್ಯನನ್ನು ಸತ್ಕರಿಸುತ್ತಲೇ ಭಟ್ಟರು 'ಹೊನ್ನನು ಕೊಟ್ಟು ಕುದುರೆಯ ಕೊಂಬುವಂಥ ಮನ್ನೆಣೆ ರಾಯರ ಗಂಡ' ಭೂಮಿಯ ರಾಯರಗಂಡ ಎಂದು ಕಹಳೆ ಧ್ವನಿಯೊಂದಿಗೆ ಬಿರುದನ್ನು ಉಗ್ಗಡಿಸಿದರು. ಈ ಮಾತನ್ನು ಕೇಳಿದ ರುದ್ರರಾಜ ಕೋಪತಾಳಿದ. ಲಿಂಗಯ್ಯನನ್ನು ಕರೆಯಿಸಿ ರಾಮನ ಈ ವರ್ತನೆ ಸರಿಯಲ್ಲ ಎಂದು ನುಡಿದ ಇದಕ್ಕೆ ಲಿಂಗ ಸಹಮತ ನೀಡಲಿಲ್ಲ. ರುದ್ರರಾಜ ರಾಮಯ್ಯನ ಮೇಲೆ ಸೈನ್ಯ ಕಳುಹಿಸಿದ. ಲಿಂಗ ತನ್ನ ಭಂಡಾರ ಸೈನ್ಯದೊಂದಿಗೆ ಓರುಗಲ್ಲು ಬಿಟ್ಟು ರಾಮಯ್ಯನೊಂದಿಗೆ ಸೇರಿಕೊಂಡನು.

ಈ ಸುದ್ದಿ ಕೇಳಿದ ರುದ್ರರಾಯ ಸೈನ್ಯ ಕಳುಹಿಸಿದನು. ಲಿಂಗಣ್ಣ, ರಾಮಯ್ಯ ವೈರಿ ಸೈನ್ಯವನ್ನು ಮುರಿದೋಡಿಸಿದರು. ರುದ್ರರಾಯನ ಮಗ ಎಪ್ಪತ್ತುರಾಯ ತನ್ನ 'ಬೊಲ್ಲ' ಕುದುರೆಯನ್ನೇರಿ ಯುದ್ಧಕ್ಕೆ ಬಂದ. 'ಕೆಟ್ಟ ದಿನದಂದು ಹಗಲಿನಲ್ಲಿ ಮಂಗಲಿರಾಯನ ಲಯದಲ್ಲಿ ಈ 'ಬೊಲ್ಲ' ಹುಟ್ಟಿತು. ಇದು ಅಪಶಕುನವೆಂದು ಅವನು ದಿಲ್ಲಿಯ ಸುರಿತಾಳನಿಗೆ ಒಪ್ಪಿಸಿದ ಕೆಟ್ಟ ವೇಳೆಯಲ್ಲಿ ಹುಟ್ಟಿದ ಇದನ್ನು ಮಾರಲು ಸುರಿತಾಳ ಹೇಳಿದ ಎಪ್ಪತ್ತುರಾಯ ಇದನ್ನು ಖರೀದಿಸಿದ' ಎಂದು ಲಿಂಗಣ್ಣ ರಾಮಯ್ಯನಿಗೆ

ಬೊಲ್ಲನ ವೃತ್ತಾಂತ ಹೇಳಿದ. ಯುದ್ಧದಲ್ಲಿ ಎಪ್ಪತ್ತುರಾಜನನ್ನು ಸೆರೆಹಿಡಿದು. ರಾಮನು ಬೊಲ್ಲನನ್ನು ಕೈವಶಮಾಡಿಕೊಂಡನು. ಲಿಂಗಣ್ಣನ ಮಾತಿನಂತೆ ರಾಮಯ್ಯನು ಎಪ್ಪತ್ತುರಾಜನನ್ನು ಬಿಟ್ಟುಕೊಟ್ಟನು.

ರಾತ್ರಿಗುಂಡ ಬ್ರಹ್ಮಯ್ಯನ ಗುಡಿಯಲ್ಲಿ ವಸತಿಮಾಡಿ, ಮರುದಿನ ಪಯಣ ಬೆಳೆಸಿದ ಮದಗಜರೆಡ್ಡಿ, ಮಂಚನರೆಡ್ಡಿ, ಕಲ್ಲಿರೆಡ್ಡಿ ಮೊದಲಾದ ನವಲಕ್ಷ ತೆಲಗರು ಬೊಲ್ಲನನ್ನು ಬಿಡಿಸಿಕೊಳ್ಳಲು ರಾಮನನ್ನು ಪ್ರತಿಭಟಿಸಿದರು. ಇವರೆಲ್ಲರನ್ನು ಸೋಲಿಸಿ ರಾಮಯ್ಯ 'ನವಲಕ್ಷ ತೆಲುಗರ ಗಂಡ' ಎಂಬ ಬಿರುದು ಧರಿಸಿದನು. ದಾರಿಯಲ್ಲಿ ಅನೇಕ ಅರಸರು ಯುದ್ಧಕ್ಕೆ ಇಳಿದರು. ನಾಯ್ದಿನಾಯಕ, ಹುಳಿಯಾರ, ಮಾರಗೊಂಡ ಎಲ್ಲರನ್ನೂ ಎದುರಿಸಿದನು.

ಮಾರಿಗೊಂಡ ಸೋತು ಎಪ್ಪತ್ತು ಸಾವಿರ ಹಣ, ಗಿಳಿಪಂಜರ, ಎಪ್ಪತ್ತು ಆನೆ ಖಡ್ಗ ಕಾಣಿಕೆ ನೀಡಿದನು."[೫] ರಾಮಯ್ಯ ಬೊಲ್ಲನೊಂದಿಗೆ ಹೊಸಮಲೆದುರ್ಗಕ್ಕೆ ಬಂದು ತಂದೆ ಕಂಪಿಲರಾಯನಿಗೆ ಲಿಂಗಣ್ಣನ ಪರಿಚಯ ಮಾಡಿಕೊಟ್ಟು, ಎಲ್ಲರನ್ನು ಸಂತೋಷಪಡಿಸಿ ತಂದೆಯ ವಚನಕ್ಕೆ ಬದ್ಧನಾಗಿ ಎಲ್ಲರನ್ನು ಸಂತೋಷಪಡಿಸಿದನು. ಇದರಿಂದ ಕುಮಾರರಾಮನ ವೃತ್ತಾಂತ 'ಬೊಲ್ಲ'ನ ಕುರಿತ ಹೋರಾಟ ತಿಳಿದು ಬರುತ್ತದೆ.

"ಬೊಲ್ಲನನೇರಿ ಉದಯದಲಿ ರಾಮಯ್ಯ
ಅಲ್ಲಿಂದ ಕದಲಿ ಹೊಸಮಲೆಗೆ
ಬಲ್ಲಿದ ದೇವಿಶೆಟ್ಟಿಯ ಲಿಂಗ ಮೊದಲಾದ
ರೆಲ್ಲ ಪಾಳೆಯವ ತೆರಳಿಸಿದ"[೬] (೯-೧೦೯ ಹೊಸ.ಕು.ಸಾಂ.)

ಕುಮಾರ ರಾಮನು ಬೊಲ್ಲ ಕುದುರೆಯನೇರಿ ಹೊಸಮಲೆಯ ದುರ್ಗಕ್ಕೆ ಬಂದು ದೇವಿ ಶೆಟ್ಟಿ ಮತ್ತು ಲಿಂಗಣ್ಣ ಮತ್ತು ಅವನ ಪಾಳೆಯಗಾರರನ್ನು ತೆರಳಿಸಿದನು ಎಂದು ಮೇಲಿನ ಸಾಲುಗಳು ಮಾಹಿತಿಯನ್ನು ನೀಡುತ್ತವೆ.

"ಹಿಡಿತಂದ ಆನೆ ಕುದುರೆ ಭಂಡಾರವ
ಒಡನೆ ಬೊಲ್ಲನ ತೋರಿಸಿದನು
ಪೊಡವಿಯೊಳಗೆ ನೀನಲ್ಲದೆ ಬೊಲ್ಲನ
ಹಿಡಿದೇರುವ ಬಂಟರುಂಟೆ"[೭] (೬-೧೩೧)

ಆನೆ, ಕುದುರೆ ಭಂಡಾರವನ್ನು ತಂದ ಕುಮಾರರಾಮನನ್ನು ಕೊಂಡಾಡಿ ನೀನು ಇಲ್ಲದೇ 'ಬೊಲ್ಲ' ಕುದುರೆಯನ್ನು ಏರುವ ಮತ್ತು ಪಳಗಿಸುವ ಶಕ್ತಿ ಬೇರೆಯಾರಿಗೂ ಇಲ್ಲ ಎಂಬ ವಿಚಾರ ದೇವಿಶೆಟ್ಟಿ ಮತ್ತು ಲಿಂಗಣ್ಣರು ಕಂಪಿಲರಾಯನ ಮುಂದೆ ಕುಮಾರ ರಾಮನನ್ನು ಕೊಂಡಾಡುವ ವಿಚಾರ ಕೊಮಾರರಾಮನ ಚರಿತೆಯಲ್ಲಿ ಹೀಗೆ ವ್ಯಕ್ತವಾಗಿದೆ.

"ಲಕ್ಷಕುದುರೆ ಲಾಯಗ(ಟ್ಟೆ) ಮುಂಗುಲಿರಾಯ
ದಿಕ್ಕನೆ ಈ ಬೊಲ್ಲನಿರುವ
ಲೆಕ್ಕವಿಲ್ಲ(ದ) ತೀಜಿಯ ನೋಡಿ ಮನವನು
ಇಕ್ಕಿದ ಬೊಲ್ಲನ ಮೇಲೆ (೮-೩೧ ಕೊಮು.ರಾ.ಚು
ಕೇಳಿದ ಎಪ್ಪತ್ತಿರಾಜ(ನು) ಬೊಲ್ಲನು
ಹೇಳೆಂದು ಮುಂಗುಲಿಯೊಡನೆ
ಪೇಳುವೆನಿದರ ವೃತ್ತಾಂತವ ನೀ ಕೇಳು
ಮೇಳವಿಸಿದ ಮನಸಿನಲಿ (೮ -೩೨)
ಒಳ್ಳೆಯ ಶುಭಲಗ್ನದಲ್ಲಿ ಜನಿಸಿತು ಬೊಲ್ಲ
ಹೊಲ್ಲೆಯದಿನ ಶುದ್ಧ ಹಗಲೆ
ಬಲ್ಲಿದ ಎಪ್ಪತ್ತಿರಾಜ ಲಕ್ಷವ ಕೊಟ್ಟು
ನಿಲ್ಲದೆ ತಂದ ಬೊಲ್ಲನನು"[೯] (೮-೩೩)

ಲಕ್ಷ ಕುದುರೆ ಇರುವ ಲಾಯದಲ್ಲಿ ಮುಂಗುಲಿರಾಯನ ಮನಸ್ಸು ಬೊಲ್ಲನ ಮೇಲೆ ಬಿದ್ದಿತು. ಅದು ಅಷ್ಟೊಂದು ತೇಜಸ್ಸುವುಳ್ಳ ಕುದುರೆಯಾಗಿರುವ ಕಾರಣ ಬೊಲ್ಲನ ವೃತ್ತಾಂತವನ್ನು ಮುಂಗಲಿರಾಯನ ಮೂಲಕ ತಿಳಿದುಕೊಂಡ ಎಪ್ಪತ್ತಿರಾಜನು ಒಳ್ಳೆಯ ಶುಭಲಗ್ನದಲ್ಲಿ ಜನಿಸಿದ 'ಬೊಲ್ಲ' ಕುದುರೆಯನ್ನು 'ಹೊಲ್ಲೆಯ' ಕೆಟ್ಟದಿನದನಂದು ಶುದ್ಧ ಹಗಲಲ್ಲಿ ಅದರ ಮೇಲಿನ ಆಶೆಯಿಂದ ಒಂದು ಲಕ್ಷ ರೂಪಾಯಿಯನ್ನು ಕೊಟ್ಟು ತಂದನು. ನಂತರ ಅವನಿಗೆ ಕುದುರೆಯ ಮೇಲೆ ವಿಶ್ವಾಸ ಕಡಿಮೆಯಾದ ಕಾರಣ ಖರೀದಿಸಿದ ದಿನ, ಸಮಯ ಒಳ್ಳೆಯದು ಇರದೇ ಹೋದ ಕಾರಣ ಅದು ಕುಮಾರರಾಮನ ಕೈವಶವಾಯಿತು. ಇದರಿಂದ ಒಳ್ಳೆಯ ಮನಸ್ಸು, ವಿಚಾರವನ್ನು, ಆಲೋಚನೆಯನ್ನ, ತಂದುಕೊಡುತ್ತದೆ ಎಂಬುದನ್ನು ಕಂಡುಕೊಳ್ಳಬಹುದು.

"ಅಶ್ವಗಳ ಚೇಷ್ಟೆಯನ್ನು ಕುರಿತು ಹೇಳುವಾಗ ಅರ್ಜುನ ಚೈತ್ರಯಾತ್ರೆಗೆ ಹೋಗುವಾಗ ಅಶ್ವಗಳು ಕಡಿವಾಣವನ್ನು ಎಳೆಯುತ್ತಾ, ಭೂಮಿಯನ್ನು ಗೊರಸುಗಳಿಂದ ಕರೆಯುತ್ತಾ ಕತ್ತನ್ನು ಎತ್ತಿಹೇಷಾರವವನ್ನು ಮಾಡುತ್ತಿದ್ದವು. ರಾಮನು ವನವಾಸಕ್ಕೆ ಹೋದಾಗ ಅಯೋಧ್ಯೆಯಲ್ಲಿಯ ಅಶ್ವಗಳು ಕಣ್ಣೀರು ಸುರಿಸುತ್ತಾ, ಆಹಾರವನ್ನು ತಿನ್ನುವುದನ್ನು ಬಿಟ್ಟು ಹೀನಸ್ವರದಿಂದ ರೋದಿಸುತ್ತಿದ್ದವು. ಇದು ಮುಂದೆ ಆಗುವ ಮಹಾರಾಜನಾದ ದಶರಥನ ಮರಣಕ್ಕೆ ಸೂಚನೆಯೂ ಆಯಿತು. ಜಾನಪದ ಸಾಹಿತ್ಯದಲ್ಲೂ ಇಂತಹ ನಂಬುಗೆಯೆ ಪ್ರಚಾರದಲ್ಲಿದೆ. 'ಬೊಲ್ಲ' ಎಂಬ ಅಶ್ವಕ್ಕೆ ಸಂಬಂಧಿಸಿದಂತೆ ಜಾನಪದರಲ್ಲಿ ಕುಮಾರರಾಮನ ಕಥೆಯನ್ನು ಗಮನಿಸಬಹುದು"[೯] ಎಂದು ಅಶ್ವಗಳ ಚೇಷ್ಟೆಯನ್ನು ಕುರಿತು ವಿವರಿಸುವಾಗ

ಹೇಳಲಾಗಿದೆ. ಇದರಿಂದ ಕುದುರೆ ಎನ್ನುವ ನಂಬಿಗಸ್ಥ ಪ್ರಾಣಿಗೆ ಸೂಕ್ಷ್ಮಸಂವೇದನೆಗಳ ಬಗ್ಗೆ ತಿಳುವಳಿಕೆ ಇತ್ತು ಎಂಬುದು ಗೊತ್ತಾಗುತ್ತದೆ. ಹಾಗೆಯೇ ಪ್ರಾಣಿಗಳು ಮುಂದೆ ಆಗು ಅಶುಭ-ಶುಭಗಳ ಬಗ್ಗೆ ಎಚ್ಚರಿಕೆಯ ಘಂಟೆಯನ್ನು ಬಾರಿಸುತ್ತಿದ್ದವು ಎಂದು ಹೇಳಬಹುದು.

ಪ್ರಸ್ತುತ ಕುಮಾರರಾಮನು ವಾಸಿಸುತ್ತಿದ್ದ ಎನ್ನಲಾದ ಈ ಕಮ್ಮಟದುರ್ಗದ ಬಗ್ಗೆ ತಿಳಿದುಕೊಳ್ಳುವುದಾದರೆ ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿನಲ್ಲಿದೆ. ಗಂಗಾವತಿಯಿಂದ ಕೊಪ್ಪಳಕ್ಕೆ ಹೋಗುವ ಮಾರ್ಗದಲ್ಲಿ ೧೬ ಕಿ.ಮೀ. ಹೋದರೆ ಮುಕ್ಕಂಪ ಎಂಬ ಗ್ರಾಮ ಬರುತ್ತದೆ. ಅಲ್ಲಿಂದ ಕಾಲುನಡಿಗೆಯಲ್ಲಿ ಹೊಲಗಳ ಮಧ್ಯದಲ್ಲಿ ಕಾಡು, ಕಲ್ಲಿನ ಬೆಟ್ಟಗಳನ್ನು ಹತ್ತಿ ಹೋದರೆ ಗುಡ್ಡ ತುದಿಗೆ ಕಮ್ಮಟ ದುರ್ಗ ಕಾಣುತ್ತದೆ.

“ಕುಮಾರರಾಮನ ಬೆಟ್ಟದ ಪಶ್ಚಿಮದ ಮೂರು ಭಾಗದಲ್ಲಿ ಕುದುರೆ ಕಲ್ಲುಗಳಿವೆ. ಎರಡು ಗುಡ್ಡಗಳು ಸಂಧಿಸುವ ಸ್ಥಳದಲ್ಲಿ ಈ ಕುದುರೆ ಕಲ್ಲುಗಳಿದ್ದು, ಅಲ್ಲಿಂದ ಕುದುರೆಗಳು ಮೇಲೆರುತ್ತಿದ್ದವು ಎಂದು ಹೇಳಲಾಗುತ್ತಿದೆ. ಈ ಕುದುರೆ ಕಲ್ಲಿನ ದಕ್ಷಿಣಭಾಗಕ್ಕೆ ಹಾಳುಬಾವಿ ಇದೆ. ಗುಡ್ಡದ ಈಶಾನ್ಯ ಭಾಗದಲ್ಲಿ ದೊಡ್ಡ ಕೆರೆಯೊಂದಿದ್ದು ಅದನ್ನೇ ‘ಬೊಲ್ಲನಕೆರೆ’ ಎಂದು ಕರೆಯುತ್ತಾರೆ. ಇಲ್ಲಿ ನಮಗೆ ಹಲವಾರು ವೀರಗಲ್ಲುಗಳು, ಶಿಲ್ಪಗಳು ಇರುವುದು ಕಂಡು ಬರುತ್ತವೆ. ಅಲ್ಲದೆ. ಕಾರಪ್ಪನ ಗುಡ್ಡ, ಗುಲಗಂಜಿ ಗುಡ್ಡ, ಬೊಲ್ಲನಗುಡ್ಡ ಹೀಗೆ ಹಲವು ಕೋಟೆಗಳನ್ನು ಕಾಣಬಹುದಾಗಿದೆ.

ಕುಮಾರರಾಮನ ಕಲ್ಲಿನ ಕೆತ್ತನೆಗಳನ್ನು, ಶಿಲ್ಪಗಳನ್ನು ನೋಡಿದರೆ ಕುಮಾರರಾಮನು ಸದಾ ಕುದುರೆಯ ಮೇಲೆ ಕುಳಿತಿರುವ ಚಿತ್ರಗಳೇ ಹೆಚ್ಚು. ಈತನದು ಎಂದೆನ್ನುವ ಹಲವಾರು ಕೆತ್ತನೆಯ ಚಿತ್ರಗಳು ನಮಗೆ ಮಲೆನಾಡಿನಲ್ಲಿ ಕಂಡುಬರುತ್ತವೆ.”[೧೦]

ಸೊರಬ ತಾಲೂಕಿನ ‘ಹೆಚ್ಚೆ’ ಗ್ರಾಮದಲ್ಲಿ ಕುದುರೆ ಮೇಲೆ ಕತ್ತಿ ಹಿಡಿದು ಕುಳಿತ ವೀರನ ಶಿಲ್ಪಿದೆ. ತೀರ್ಥಹಳ್ಳಿ ಸಮೀಪದ ‘ಚಿಕ್ಕೋಡ ಬಯಲಿ’ನಲ್ಲಿ ಕುದುರೆಯ ಮೇಲೆ ಕುಳಿತ ವೀರನ ಕೆತ್ತನೆ ಕಲ್ಲಿನಲ್ಲಿದೆ. ಇದನ್ನು ಅಲ್ಲಿನ ಜನರು ರಾಮದೇವರು ಎಂದು ಕರೆಯುತ್ತಾರೆ. ಬಹುಶಃ ಇದು ಕುಮಾರರಾಮನ ಶಿಲ್ಪವಾಗಿರಬಹುದು.

ಸಂಡೂರು ತಾಲೂಕು ಹೊಸಮಲೆದುರ್ಗದಲ್ಲಿಯೂ ಕೂಡ ಕುಮಾರರಾಮನು ಕುದುರೆಯ ಮೇಲೆ ಕುಳಿತ ಕೆತ್ತನೆಯಿದೆ.

“ಕಾಗಿರಾಮನಕಲ್ಲು ಎಂದು ಕರೆಯುವ ಇದೊಂದು ವೀರಗಲ್ಲು. ಇದು ಕುಮಾರರಾಮನ ಬೆಟ್ಟದ ನೈರುತ್ಯ ದಿಕ್ಕಿನಲ್ಲಿರುವ ಎರಡು ಕೋಟೆಗಳ ನಡುವೆ ಹೊಂಡವೊಂದರಲ್ಲಿ ಕಂಡು ಬರುತ್ತದೆ. ಇದರಲ್ಲಿ ಕುದುರೆಯ ಮೇಲೆ ಕುಳಿತ ವೀರನೊಬ್ಬನ ಚಿತ್ರವಿದೆ. ಈತನು ಎಡಗೈಯಲ್ಲಿ ಕುದುರೆ ಲಗಾಮು ಹಿಡಿದು ಬಲಗೈಲಿ ಖಡ್ಗವನ್ನು ಎತ್ತಿದ್ದಾನೆ. ಎದೆಗೆ ಕವಚವನ್ನು ತೊಡಿಸಲಾಗಿದೆ. ಇದರ ಕುರಿತು ಅಧ್ಯಯನ ಮಾಡಿದ ರಾಮಶರ್ಮರು ‘ಬೊಲ್ಲ’ನೆಂಬ ಕುದುರೆ ಏರಿದ ಕುಮಾರರಾಮ ಎಂದು ಗುರುತಿಸಿದ್ದಾರೆ.

ಕಮ್ಮಟದುರ್ಗದಲ್ಲಿ ಬೊಲ್ಲನಕೆರೆ ತುಂಬಾ ದೊಡ್ಡದಾದ ಕೆತ್ತನೆಯಿಂದ ಕಟ್ಟಲಾಗಿದ್ದು ಸುತ್ತಲೂ ಮೂರು ಗುಡ್ಡಗಳಿಂದ ಸುತ್ತುವರಿದಿದೆ. ಕುಮಾರರಾಮನ ಗುಡ್ಡ, ಕಾಟಪ್ಪನ ಗುಡ್ಡ, ಬೊಲ್ಲನಗುಡ್ಡದಿಂದ ಹರಿದು ಬರುವ ನೀರೆಲ್ಲ ಈ ಕೆರೆಯಲ್ಲಿ ಸೇರುತ್ತವೆ. ಇಲ್ಲಿ ನೀರು ಜಾಸ್ತಿ ಇರುವಂತೆ ಸಂಗ್ರಹ ಮಾಡಲು ಬೊಲ್ಲನ ಗುಡ್ಡ ಮತ್ತು ಕುಮಾರರಾಮನ ಗುಡ್ಡದ ನಡುವೆ ಅರ್ಧ ಚಂದ್ರಕಾರದಲ್ಲಿ ಒಂದು ಕಲ್ಲಿನ ಎರಿಯನ್ನು ಕಟ್ಟಲಾಗಿದೆ.''[೧೧]

ಮೌಖಿಕ ಸಾಹಿತ್ಯದಲ್ಲಿ ಕುಮಾರರಾಮನ ಕುರಿತು ಒಂದು ಐತಿಹಾಸಿಕ ಕಥೆ ಇದೆ. ``ಕಂಪಿಲರಾಯನಿಗೆ ಬಹಳ ದಿನ ಮಕ್ಕಳಾಗಿರದೆ ಇದ್ದ ಕಾರಣ ಚಿಂತಿಸುತ್ತಿದ್ದಾಗ ಕಂಪಿಲರಾಯನಿಗೆ ಮನೆದೇವರು ಸ್ವಪ್ನದಲ್ಲಿ ಕಾಣಿಸಿ ತನ್ನನ್ನು ಮರೆತಿದ್ದೀರೆಂದು ತಿಳಿಸಿ ಅಲ್ಲದೆ ನೀವೂ ಮನೆದೇವರ ದರ್ಶನಕ್ಕೆ ಬಂದು ಅಲ್ಲಿ ಒಂದು ಮಾವಿನಗಿಡ ಇದೆ. ಆ ಹಣ್ಣನ್ನು ನೀನೂ ನಿನ್ನ ಹೆಂಡ್ರು ತಿನ್ನಿರೆಂದು ಹೇಳುತ್ತಾನೆ. ಅದೇ ರೀತಿ ದೇವಸ್ಥಾನಕ್ಕೆ ಹೋಗಿ ಮಾವಿನ ಹಣ್ಣು ತಂದು ಹರಿಯಾಲದೇವಿ ಮತ್ತು ಆಕೆಯ ನಾಲ್ಕು ಮಂದಿ ಬಾಣಗಿತ್ತಿಯರು ತಿನ್ನುತ್ತಾರೆ. ಮತ್ತೆ ಗೊಟ್ಟವನ್ನು ಅಂತಃಪುರದ ಹಿಂದುಗಡೆ ಇರುವ ಕತ್ತೆ ತಿಂದಿತು. ಅದರಿಂದ ಆರುಜನ ಗರ್ಭಧರಿಸಿ ಕತ್ತೆಯ ಬೊಲ್ಲನೆಂಬ ಕುದುರೆಗೆ ಜನ್ಮಕೊಟ್ಟರು ಎಂಬ ಕಥೆಯನ್ನು ಗಮನಿಸಬಹುದು.''[೧೨]

``ಕಂಪ್ಲಿ ಕಮ್ಮಟ ದುರ್ಗ ಪರಿಸರದಲ್ಲಿ ಕುಮಾರರಾಮನ ಕುರಿತು ಮೌಖಿಕಸಾಹಿತ್ಯ ಹೇರಳಾಗಿರುವುದನ್ನು ಕಾಣಬಹುದು. ಕೆಲವು ಕಥೆಗಳು ಗಮನಿಸಿದರೆ ಸಾಕಷ್ಟು ವ್ಯತ್ಯಾಸಗಳು ಕಾಣಸಿಗುತ್ತವೆ. ಶಂಕ್ರಪ್ಪ, ಕೆಂಗಾರಿಯವರ ಕಥೆಯಲ್ಲಿ ಕುಮಾರರಾಮನ ಕುದುರೆಯಾದ ಬೊಲ್ಲ ಜಂಟ್ಟಿಗಿ ರಾಮೇಶ್ವರನ ಆಶೀರ್ವಾದದಿಂದ ಕತ್ತೆಯ ಹೊಟ್ಟೆಯಲ್ಲಿ ಜನ್ಮ ಪಡೆಯುತ್ತದೆ ಎಂಬ ವಿಚಾರ ಬರುತ್ತದೆ.''[೧೩]

ಹೀಗೆ ಕನ್ನಡ ಸಾಹಿತ್ಯದಲ್ಲಿ ಕುಮಾರರಾಮನ ಚರಿತ್ರೆ ಅವನ ಸಾಂಗತ್ಯ ಮುಂತಾದ ಕೃತಿಗಳಲ್ಲಿ ಬೊಲ್ಲಕುದುರೆಯ ಕೆಲವು ವಿಚಾರಗಳು ಭಿನ್ನ ಭಿನ್ನವಾಗಿ ಸಿಗುತ್ತವೆ. ಆದರೂ ಸಹಿತ ಈ ಕುದುರೆಯಿಂದಾಗಿ ಕುಮಾರರಾಮನ ಹೆಸರು ಅಜರಾಮರವಾಗಿ ಉಳಿದಿದೆ. ಮತ್ತು ಗಂಡುಗಲಿ ಕುಮಾರರಾಮ, ಕನ್ನಡವರಪುತ್ರ, ತೆಲಗುರಾಯರಗಂಡ ಮುಂತಾದ ಬಿರುದು ಭಾಜನಕ್ಕೆ ಪಾತ್ರನಾಗಿದ್ದಾನೆ. ಇಂತಹ ಪ್ರಸಿದ್ದ ಅರಸನ ಆತ್ಮೀಯ ಬಂಧು ಆಗಿ 'ಬೊಲ್ಲ' ಕುದುರೆ ಹೆಸರುವಾಸಿಯಾಗಿ ಸಾಹಿತ್ಯ, ಇತಿಹಾಸದಲ್ಲಿ ಹೊಸ ಸಂಸ್ಕೃತಿಯ ಪ್ರತೀಕವಾಗಿದೆ. ಒಟ್ಟಾರೆಯಾಗಿ ಕನ್ನಡದ ಪ್ರಮುಖ ಅರಸನ ವೀರಾವೇಶದ ಬಲಿಷ್ಠ ಕುದುರೆ 'ಬೊಲ್ಲ' ಎಂಬ ಕೀರ್ತಿಗೆ ಪಾತ್ರವಾಗಿದೆ.

೫.೨.೨. ಪಂಚಕಲ್ಯಾಣಿ

ತನ್ನ ದಿನನಿತ್ಯದ ಸರಕು ಸಾಗಾಣಿಕೆಗಾಗಿ ಕುದುರೆಯನ್ನು ಬಳಸತೊಡಗಿದ. ಹೀಗಾಗಿ ಕುದುರೆಗೆ ಇರುವಷ್ಟು ಪ್ರಾಶಸ್ತ್ಯ ಮತ್ತು ಮಹತ್ವ ಆದಿಕಾಲದಿಂದಲೂ ಇನ್ನೊಂದು ಪ್ರಾಣಿ ಸಮುದಾಯಕ್ಕೆ

ಸಿಗಲಿಲ್ಲವೆಂದು ಹೇಳಬೇಕಾಗುತ್ತದೆ. ಕುದುರೆ ಎಲ್ಲಾ ಕ್ಷೇತ್ರದಲ್ಲಿ ಗುರುತಿಸಿಕೊಂಡ ಬಗೆಯನ್ನು ಅರಿತ ರಾಜ ಮಹಾರಾಜರು ತಮ್ಮ ಆಸ್ಥಾನದಲ್ಲಿರುವ ಕವಿಗಳಿಂದ ಕುದುರೆಯ ಕುರಿತಾಗಿ ಗ್ರಂಥಗಳನ್ನು ಬರೆಯಿಸತೊಡಗಿದರು. ನಂತರ ಉಪಯುಕ್ತ ಪ್ರಾಣಿ ಎಂದುಕೊಂಡ ಅರಸರು ಕುದುರೆಯ ಗುಣಲಕ್ಷ, ಸ್ವಭಾವ ಶಕ್ತಿ, ಅವುಗಳಿಗೆ ಬರುವ ರೋಗ ಮತ್ತು ಆರೈಕೆ ಚಿಕಿತ್ಸೆ ಮುಂತಾದ ವಿಷಯಗಳ ಕುರಿತು ಅಧ್ಯಯನ ನಡೆಸಿದ ಫಲವಾಗಿ ಉತ್ತಮ ಕುದುರೆಯನ್ನು ಆಯ್ಕೆ ಮಾಡಿಕೊಳ್ಳಲು ಅನುಕೂಲವಾಯಿತು. ಅಂತಹ ಪ್ರಮುಖ ಕುದುರೆಗಳಲ್ಲಿ ಪಂಚಕಲ್ಯಾಣಿಯೂ ಒಂದು.

ಕನ್ನಡ ಸಾಹಿತ್ಯ ಪರಿಷತ್ತು ನಿಘಂಟು 'ಪಂಚಕಲ್ಯಾಣ' ಕುದುರೆಯ ಲಕ್ಷಣವನ್ನು ಕುರಿತು ಹೀಗೆ ಉಲ್ಲೇಖಿಸುತ್ತದೆ. "ಮುಖವೂ ಕಾಲುಗಳೂ ಬೆಳ್ಳಗಿರುವ ಒಂದು ಬಗೆಯ ಕುದುರೆ" ಎಂದು ಅರ್ಥವನ್ನು ಕೊಟ್ಟಿದೆ.

ಅಭಿನವ ಚಂದ್ರ ಕವಿಯು ತನ್ನ ಅಶ್ವಶಾಸ್ತ್ರ ಕೃತಿಯಲ್ಲಿ ಈ ರೀತಿಯಾಗಿ ಗುರುತಿಸಿದ್ದಾನೆ.

> "ವದನದೊಳಂ ನಾಲ್ಕುಂ ಪಾ
> ದದೊಳಂ ಬೆಳ್ಪಾಗೆ ಪಂಚಕಲ್ಯಾಣಂ ಬಾ
> ಲದೊಳುರದೊಳಂತೆ ತಾಂ ಕೇ
> ಶದೊಳತಿ ಬೆಳ್ಪಾದೊಡಶ್ವ ಮಂಗಲನಕ್ಕುಂ"[೨] (೨-೧೯)

ಪ್ರಮುಖವಾಗಿ ಕುದುರೆಯ ನಾಲ್ಕು ಕಾಲುಗಳು ಮತ್ತು ಮುಖ ಬೆಳ್ಳಗಾಗಿದ್ದರೆ (ಬಿಳ್ಪಾಗಿಯೂ) ಅಂತಹ ಕುದುರೆಯನ್ನು ಪಂಚಕಲ್ಯಾಣಿ ಎಂದು ಗುರುತಿಸುತ್ತಾನೆ. ಅವುಗಳ ಬಣ್ಣ, ಆಕಾರ, ಚಲನವಲನ, ಗುಣಸ್ವಭಾವ, ದೇಹದಾರ್ಢತೆ, ವೇಗ, ಸುಳಿಗಳಿಂದಾಗಿ ವಿವಿಧ ಬಗೆಯ ಹೆಸರುಗಳನ್ನು ಶಾಸ್ತ್ರಕಾರರು ಇಟ್ಟಿರುವುದುಂಟು.

'ಪಂಚ' ಎಂದರೆ ಐದು 'ಕಲ್ಯಾಣ' ಎಂದರೆ ಶುಭವಾಗುವುದು ಎಂದು ಅರ್ಥ ಉಂಟಾಗುತ್ತದೆ. ಯಾವುದೇ ಕೆಲಸ ಕಾರ್ಯಗಳಿಗೆ ಈ ಕುದುರೆಯನ್ನು ತೆಗೆದುಕೊಂಡುಹೋದರೆ ಒಳ್ಳೆಯದು ಮತ್ತು ಶುಭಸಂಕೇತ ಸೂಚನೆ ಎಂಬುದನ್ನು ಶಾಸ್ತ್ರಕಾರರು ಅರಿತು ದೇಹದ ವರ್ಣಗಳಿಂದ ಶ್ವೇತ, ಖೈರ, ಕೈರ, ಬೊಲ್ಲ ಮುಂತಾಗಿ ಕರೆದಿರುವುದನ್ನೂ ಕಾಣಬಹುದು. ಪಂಚತತ್ವ, ಪಂಚಸಿದ್ಧಾಂತ, ಪಂಚಕಳಶ, ಪಂಚಪೀಠ, ಪಂಚಕಲ್ಯಾಣ ಹೀಗೆ ಈ ಕುದುರೆಗೆ ಒಂದು ಪಾರಂಪರಿಕ ಇತಿಹಾಸವಿದೆ ಎಂದು ಹೇಳಬಹುದು. "ಕುಮಾರ ರಾಮನ ಕಥೆಯಲ್ಲಿ ದಾಸಿ ಮಲ್ಲಮ್ಮನಿಗೆ ಹೊಲಿಕೆ ಹಾರಮ ಹುಟ್ಟಿದ. ಕುದುರೆ ಸಿಪ್ಪೆ ತಿಂದು ಹಗ್ಗ ಹರಿದುಕೊಂಡು ಹೋಗಿ ಎಲಿಸು ಓರಂಗಲ್ಲು ಪಟ್ಟಣದಲ್ಲಿ ನಿಂತುಕೊಳ್ಳುತ್ತದೆ. ಆ ಕುದುರೆಗೆ ಎರಡು ರೆಕ್ಕೆಯಿರುವ ಪಂಚಕಲ್ಯಾಣ ಕುದುರೆ ಹುಟ್ಟಿತ್ತು. ಓರಂಗಲ್ಲು ಗಣಪತಿ ರಾಯನ

ತಳವಾರರು ಅರವತ್ತು ಮಂದಿ ಆ ಕುದುರೆ ಮರಿಯನ್ನು ಹಿಡಿದುಕೊಂಡು ಕುದುರೆ ಸಾಲಿನಲ್ಲಿ ಕಟ್ಟಿಹಾಕಿದರು''[೧೫] ಎಂದು ಉಲ್ಲೇಖಿತಗೊಂಡಿರುವುದನ್ನು ಕಾಣಬಹುದು.

ಕೆಳದಿಬಸವರಸನ ಶಿವತತ್ತ್ವರತ್ನಾಕರದಲ್ಲಿ ಪಂಚಕಲ್ಯಾಣ ಕುದುರೆಯನ್ನು ಕುರಿತು ಈ ರೀತಿ ವಿಶ್ಲೇಷಿಸಲಾಗಿದೆ.

"ಯಸ್ಯಪದಾಃ ಸಿತಾಃ ಸರ್ವೇತಥಾ ವಕ್ತ್ರಂಚಮಧ್ಯತಃ
ಕಲ್ಯಾಣಪಂಚಕಃ ಪ್ರೋಕ್ತಃ ಸದಾ ಕಲ್ಯಾಣಕೃಚ್ಛ್ವಸಂ ||೮೩||"[೧೬]

ಇದು ಅಶ್ವಮೇಧಯಾಗಕ್ಕೆ ಯೋಗ್ಯವಾದ ಕುದುರೆ ಎಂದು ಹೇಳಿ ನಂತರ ಯಾವ ಕುದುರೆಯ ನಾಲ್ಕು ಪಾದಗಳು ಹಾಗೂ ಮುಖದ ಮಧ್ಯಭಾಗವು ಬಿಳುಪು ವರ್ಣದಿಂದ ಕೂಡಿದೆಯೇ ಅದು 'ಕಲ್ಯಾಣ ಪಂಚಕ' ಎಂದು ಕರೆಯುತ್ತಾರೆ. ಇದು ಅಶ್ವಜಾತಿಯಲ್ಲಿ 'ಅಶ್ವವಿಶೇಷ' ಇದು ಸಾಕಿದ ಯಜಮಾನನಿಗೆ ಯಾವಾಗಲೂ ಮಂಗಳವನ್ನುಂಟು ಮಾಡುತ್ತದೆ ಎಂದು ಹೇಳಿದ್ದಾನೆ.

೫.೨.೩. ಚೇತಕ

ಪ್ರಾಚೀನ ಇತಿಹಾಸದ ಪುಟಗಳನ್ನು ತಿರುವಿ ಹಾಕಿದಾಗ ಅನೇಕ ರಾಜಮನೆತನಗಳು ನಮಗೆ ಗೋಚರಿಸುತ್ತವೆ. ಅದರಂತೆ ಅನೇಕ ಪ್ರಸಿದ್ಧ ಅರಸರ ಹೆಸರುಗಳು ಮತ್ತು ಅವರ ರಾಜ್ಯಭಾರ. ಆಡಳಿತಕ್ರಮ, ಪ್ರದೇಶ ವಿಸ್ತಾರ ಮುಂತಾದವುಗಳ ಜೊತೆಗೆ ಸೈನ್ಯ ವ್ಯವಸ್ಥೆಯ ಒಟ್ಟು ಚಿತ್ರಣ ನಮಗೆ ಕಂಡುಬರುತ್ತದೆ. ಹಾಗೆ ನೋಡಿದರೆ ಕದಂಬರ ಪ್ರಸಿದ್ಧ ದೊರೆ ಮಯೂರವರ್ಮ, ಚಾಲುಕ್ಯರ ಪ್ರಸಿದ್ಧದೊರೆ ೨ನೇ ಪುಲಕೇಶಿ. ರಾಷ್ಟ್ರಕೂಟರ ದೊರೆ ಅಮೋಘವರ್ಷ, ವಿಜಯನಗರ ದೊರೆ ಕೃಷ್ಣದೇವರಾಯ ಬರುವಂತೆ ರಜಪೂತರ ಪ್ರಸಿದ್ಧ ದೊರೆ ರಾಣಾಪ್ರತಾಪಸಿಂಹ. ಇವನ ಪ್ರಸಿದ್ಧ ಕುದುರೆಯೇಚೇತಕ. ಕುಮಾರರಾಮನ ಬೊಲ್ಲೆ ಕುದುರೆ ಮತ್ತು ರಾಣಾಪ್ರತಾಪಸಿಂಹನ ಚೇತಕ ಕುದುರೆ ಇತಿಹಾಸವನ್ನು ಮರುಕಳಿಸುವಂತಹವು. ಇಲ್ಲಿ ಮುಖ್ಯವಾಗಿ ಕುದರೆ ಎಂದಾಕ್ಷಣ ರಾಜ, ರಾಜ ಎಂದಾಕ್ಷಣ ಕುದುರೆ ಎನ್ನುವಷ್ಟು ಸಂಬಂಧವನ್ನು ಪಡೆದುಕೊಂಡಿವೆ. ಒಂದು ಸಾಮ್ರಾಜ್ಯದ ಶಕ್ತಿಯಾಗಿ ರಾಜನ ಸಂಗಾತಿಯಾಗಿ ಪ್ರತಿಯೊಂದು ಹಂತದಲ್ಲಿ ಯಶಸ್ಸನ್ನು ತಂದು ಕೊಟ್ಟ ಇನ್ನೊಂದು ಪ್ರಾಣಿ ಎಂದರೆ ಚೇತಕ ಕುದುರೆ. ನಂಬಿಕೆಯಲ್ಲಿ ಇದರ ಸರಿಸಮಾನ ಇನ್ನೊಂದು ಪ್ರಾಣಿ ಇಲ್ಲವೆಂದೆ ಹೇಳಬೇಕಾಗುತ್ತದೆ. ಉದಾಹರಣೆಗೆ ಒಂದು ಸಲ ರಾಣಾಪ್ರತಾಪಸಿಂಹನನ್ನು ಅವನ ಶತ್ರುಗಳು ಸುತ್ತುವರಿದಾಗ ಅವನ ವೀರ ಕುದುರೆ ಚೇತಕ ದೆಹಲಿಯ ಕೋಟೆಯನ್ನು ಪಕ್ಕದ ಕಂದಕವನ್ನು ಒಂದೇ ಜಿಗತದಲ್ಲಿ ಹಾರಿ ತನ್ನ ಒಡೆಯನನ್ನು ಶತ್ರುಗಳಿಂದ ಪಾರು ಮಾಡಿದ್ದು ಪ್ರಚಂಡ ಸಾಹಸ. ಹೀಗಾಗಿ ಪ್ರತಾಪಸಿಂಹನ ಬದುಕಿನ ಎಲ್ಲಾ ಸನ್ನಿವೇಶದಲ್ಲಿ ವೀರತನದಿಂದ ಹೋರಾಡಿ ಯಶಸ್ಸನ್ನು ತಂದು ಕೊಟ್ಟ ಈ ಕುದುರೆಯ ಇತಿಹಾಸ ಚಿರಸ್ಥಾಯಿ.

೫.೩. ಅಶ್ವಾಚರಣೆ

೫.೩.೧. ಬಾಗಿಲ ಮೇಲೆ ಕುದುರೆಯ ಚಿತ್ರ

ಉತ್ತರ ಕರ್ನಾಟಕ ಬಹುತೇಕ ಜಿಲ್ಲೆಗಳಲ್ಲಿ ಪ್ರಾಚೀನ ಕಾಲದ ಮನೆಗಳ ಬಾಗಿಲ ಮೇಲೆ ಕುದುರೆ ಚಿತ್ರವಿರುವುದು ಒಂದು ವೈಶಿಷ್ಟ್ಯವಾಗಿದೆ. ಹೈದ್ರಾಬಾದ ಕರ್ನಾಟಕದ ಪ್ರಮುಖ ಜಿಲ್ಲೆಗಳಾದ ಗುಲಬುರ್ಗಾ, ಬೀದರ, ರಾಯಚೂರು, ಕೊಪ್ಪಳ ಮುಂತಾದ ಪ್ರದೇಶಗಳ ವ್ಯಾಪ್ತಿಗೆ ಒಳಪಡುವ ಸೇಡಂ, ಶಹಾಪುರ, ಚಿತ್ತಾಪುರ, ಬಸವಕಲ್ಯಾಣ, ಚಿಂಚೋಳಿ, ಲಿಂಗಸೂರು, ಮಾನ್ವಿ, ದೇವದುರ್ಗ ಮುಂತಾದ ಅನೇಕ ನಗರ ಪಟ್ಟಣಗಳಲ್ಲಿ ಇಂತಹ ಮನೆಗಳು ಕಂಡು ಬರುತ್ತವೆ. ಗತಕಾಲದ ಪ್ರಾಚೀನ ಕಾಲದ ಜೀವನ ಪದ್ಧತಿ, ಅವರ ಆಶಾದಾಯಕ ಬದುಕು ಮುಂತಾದವುಗಳನ್ನು ವಿಸ್ತೃತವಾಗಿ ತಿಳಿಯಪಡಿಸುತ್ತವೆ, ಕುದುರೆಯ ಚಿತ್ರಗಳು. ನಾಯಿಯಂತಹ ಪ್ರಾಣಿಯನ್ನು ಬಿಟ್ಟರೆ ಮತ್ತೆ ನಮಗೆ ಸಿಗುವ ನಂಬಿಗಸ್ಥ ದೊಡ್ಡ ಪ್ರಾಣಿಯೆಂದರೆ ಕುದುರೆ. ಆದ್ದರಿಂದ ಎಲ್ಲ ಶಾಸ್ತ್ರಕಾರರು ತಮಗೆ ಹತ್ತಿರವಿದ್ದ ಪ್ರಾಣಿಗಳ ಶಾಸ್ತ್ರವನ್ನೇ ಬರೆದರೆ ಹೊರತು ಇನ್ನೂಳಿದ ಪ್ರಾಣಿಗಳ ಶಾಸ್ತ್ರವನ್ನು ಬರೆಯಲಿಲ್ಲವೆಂದೆ ಹೇಳಬೇಕು.

ಆನೆ, ಸ್ಥಿರತೆಯನ್ನು ಸೂಚಿಸಿದರೆ, ಕುದುರೆ ಚಲನಶೀಲತೆಯನ್ನು ಸೂಚಿಸುತ್ತದೆ. ಚಲನಶೀಲವೆ ಅದರ ಹುಟ್ಟುಗುಣವಾಗಿದ್ದರಿಂದ ಈ ಮಾತು ಅದಕ್ಕೆ ಉಚಿತವೆನಿಸುತ್ತದೆ. ಎಲ್ಲಾ ಪ್ರಾಣಿಗಳಿಗಿಂತ ಆನೆ ದೊಡ್ಡಪ್ರಾಣಿಯಾದರು ಸಹಿತ ವೇಗದಲ್ಲಿ ಅದು ಕುದುರೆಯನ್ನು ಸರಿಗಟ್ಟಲು ಸಾಧ್ಯವಿಲ್ಲ. ಆದ್ದರಿದ ಜಾನಪದಕಾರರು ಅಭಿಪ್ರಾಯದಂತೆ ಕುದುರೆಯನೆಲೆ, ಹೆಣ್ಣಿನನೆಲೆ, ನೀರಿನನೆಲೆ ತಿಳಿಯಲಾಗದು, ಕಾರಣ ಕುದುರೆಯವೇಗ, ಹೆಣ್ಣಿನ ಗುಣಸ್ವಭಾವ ನೀರಿನ ಆಳ ಇವು ಎಷ್ಟು ಪ್ರಮಾಣ ಎಂದು ಗುರುತಿಸಲು ಕಷ್ಟ. ಕುದುರೆ ಒಂದು ರಂಗದಲ್ಲಿ ಗುರುತಿಸಿಕೊಳ್ಳದೆ ತನ್ನ ಶಕ್ತಿ ಸಾಮರ್ಥ್ಯದಿಂದಾಗಿ ಎಲ್ಲಾ ರಂಗಗಳಲ್ಲಿ ಪ್ರವೇಶವನ್ನು ಪಡೆದುಕೊಂಡರೆ ಪ್ರಾಚೀನಕಾಲದಲ್ಲಿ ಯಜ್ಞಯಾಗಗಳಲ್ಲಿ ಬಳಕೆಗೊಂಡ ಕುದುರೆ, ನಂತರ ದಿನಗಳಲ್ಲಿ ರಾಜರಿಗೆ ಯುದ್ಧದಲ್ಲಿ ಸಾರಥಿಯಾಗಿ, ಪ್ರಾಣಸ್ನೇಹಿತನಾಗಿ, ಸಾರಿಗೆ ವಾಹನವಾಗಿ, ಸಲಕರಣೆಯನ್ನು ಹೊತ್ತು ಸಾಗುವ ಪ್ರಾಣಿಯಾಗಿ, ಆಧುನಿಕ ಕಾಲದಲ್ಲಿ ಟಾಂಗ್‌ಗಾಡಿಯ ರೂವಾರಿಯಾಗಿ, ಇತ್ತೀಚಿನ ದಿನ ಮಾನಗಳಲ್ಲಿ ಮೋಜುಗಾಗಿ ರೇಸಿಗಾಗಿ, ಹಣಗಳಿಸುವ ಮಾಲಿಕರ ನಂಬಿಗೆಯ ಪ್ರಾಣಿಯಾಗಿ ಬಳಕೆಗೊಂಡಿರುವುದು ಅದರ ಪ್ರಾಮಾಣಿಕತೆಯನ್ನು ಗುರುತಿಸುತ್ತದೆ. ಪ್ರಾಚೀನಕಾಲದಿಂದಲೂ ಇಂದಿನವರೆಗೂ ಅದು ತನ್ನ ಸ್ಥಾನವನ್ನು ಸಂದರ್ಭಕ್ಕೆ ತಕ್ಕಂತೆ ಉಳಿಸಿಕೊಂಡು ಬಂದಿದೆ.

ದಕ್ಷಿಣ ಕರ್ನಾಟಕದ ಬಹುತೇಕ ಜಿಲ್ಲೆಗಳಲ್ಲಿ, ಲಕ್ಷ್ಮೀ, ಸರಸ್ವತಿ, ದುರ್ಗಾದೇವಿ, ಚಾಮುಂಡೇಶ್ವರಿ ನಂದಿ, ಗಣೇಶ, ಮುಂತಾದ ಚಿತ್ರಗಳು ಕಂಡು ಬರುವಂತೆ ಇಲ್ಲಿ ಕುದುರೆಯ ಚಿತ್ರ ಕಂಡುಬಂದಿದೆ ಕುದುರೆಯಷ್ಟು ವೇಗವಾಗಿ, ಶಕ್ತಿಶಾಲಿಯಾಗಿ ಓಡುವ ಪ್ರಾಣಿ ಮತ್ತೊಂದಿಲ್ಲವೆಂದೇ ಹೇಳಬೇಕು.

ಕಲ್ಲು, ಕಟ್ಟಿಗೆ, ಲೋಹ, ಸಿಂಹಾಸನ, ಮುಂತಾದವುಗಳು ಮಾಂಸಹಾರಿಯ ಸಂಕೇತಗಳಾಗಿವೆ. ಪ್ರಸ್ತುತ ಕುದುರೆ ಚಿತ್ರ ಹಾಗಲ್ಲ ಅದು ಅಪ್ಪಟ 'ಸಸ್ಯಹಾರಿ' ಸಂಕೇತವಾಗಿದೆ. ಕಾರಣ ಕುದುರೆ ಅತ್ಯಂತ ಬಲಶಾಲಿ ಪ್ರಾಣಿ ಆದರೂ ಅದು ಮಾಂಸಹಾರಿಯಲ್ಲ.

ಅಪ್ಪಟ ಸಸ್ಯಹಾರಿ ಪ್ರಾಣಿ. ಆದ್ದರಿಂದಲೇ ಅದು ವಿಶಿಷ್ಟವಾಗಿ ನಮಗೆ ಬಳಕೆಗೊಂಡಿದೆ. ಹುಲ್ಲು (ಕರಿಕೆ) ಹತ್ತಿಯಕಾಳು, ಸಜ್ಜೆ, ತೊಗರೆ, ಕಡಲಿ ಹುರಳಿ, ಹೆಸರು ಮುಂತಾದ ಸಸ್ಯ ಪದಾರ್ಥವನ್ನೇ ತಿನ್ನುತ್ತದೆ. ಇನ್ನೊಂದು ವೈಶಿಷ್ಟ್ಯವೆಂದರೆ ಪ್ರಾಚೀನಕಾಲದ ಇಂತಹ ಮನೆಗಳು ಕೇವಲ ಸಸ್ಯಹಾರಿ ಜನಾಂಗದವರೆಂದು, ಬ್ರಾಹ್ಮಣ, ಲಿಂಗಾಯತ, ಬಡಿಗಾರ, ಜೈನ ಮುಂತಾದವರ ಮನೆಗಳ ಬಾಗಿಲ ಮೇಲೆ ಮಾತ್ರ ಇರುವುದರಿಂದ ಕುದುರೆಯ ಬದುಕಿಗೂ ಆ ಜನಸಮುದಾಯದ ಬದುಕಿಗೂ ಅವಿನಾಭಾವ ಸಂಬಂಧ ಇರುವಂತೆ ತೋರುತ್ತದೆ. ಆದರೆ ಈಗ ಅಂತಹ ಪರಿಸ್ಥಿತಿ ಉಳಿದಿಲ್ಲ ಕಾಲ ಬದಲಾದಂತೆ ಎಲ್ಲ ಜನರು ಮಾಂಸವನ್ನೂ ತಿನ್ನುವ ಪ್ರವೃತ್ತಿ ಬೆಳಸಿಕೊಂಡಿದ್ದಾರೆ. ಹಿರಿಯ, ವಿದ್ವತ್‌ವಲಯವನ್ನು ಸಂಪರ್ಕಿಸಿದಾಗ ಅವರು ಹೇಳುವಂತೆ "ಕುದುರೆ ಒಂದು ಶಕ್ತಿಶಾಲಿಪ್ರಾಣಿ, ಅದು ಚಲನಶೀಲವಾದದ್ದು 'ಪ್ರಗತಿಯ ಸಂಕೇತ' ಆದ್ದರಿಂದ ನಮ್ಮ ಉತ್ತರ ಕರ್ನಾಟಕದ ಬಹುತೇಕ ಪ್ರಾಚೀನ ಬಾಗಿಲ ಮೇಲೆ ಈ ಚಿತ್ರವಿದೆ. ಅಂದರೆ ಇದರ ಅರ್ಥವಿಷ್ಟೇ ಕುದುರೆಯಂತೆ ನಮ್ಮ ಈ ಮನೆತನ ಉತ್ತರೋತ್ತರವಾಗಿ ಬೆಳೆಯಲಿ, ಮುಂದುವರಿಯಲಿ ಎಂದೂ ನಾಶವಾಗದೇ ಇರಲಿ, ಎಂಬ ಉದ್ದೇಶವೇ ಹೊರತು ಕೇವಲ ಶಿಲ್ಪಗಾರಿಕೆಗಾಗಿ, ಸೌಂದರ್ಯಕ್ಕಾಗಿ ಅಲ್ಲ ಎಂಬ ಅಂಶ ವಿಧಿತವಾಗುತ್ತದೆ."[೧೭]

ಕ್ರಾಂತಿಕಾರಕವಾದ ಈ ಪ್ರಾಣಿ ೧೨ನೇ ಶತಮಾನದ ವಚನಕಾರರಾದ ಬಸವಣ್ಣ, ಅಲ್ಲಮಪ್ರಭು, ಚೆನ್ನಬಸವಣ್ಣ, ಮಡಿವಾಳಮಾಚಿದೇವ, ವೀರಗೊಲ್ಲಾಳ, ದಾಸಿಮಯ್ಯ ಮುಂತಾದ ಶರಣರ ಕ್ರಾಂತಿಯ ಸಂಕೇತವಾಗಿ ಈ ಪ್ರಾಣಿಯ ಚಿತ್ರ ಇರುವ ಸಾಧ್ಯತೆ ಇದೆ. ಹಾಗೆಯೇ ಕಿತ್ತೂರು ಚೆನ್ನಮ್ಮ, ಶಿವಾಜಿ ಮುಂತಾದವರ ಚಿತ್ರಗಳನ್ನು ನೋಡಿದಾಗ ಕುದುರೆಯನ್ನೇರಿ ವೀರಾವೇಶದಿಂದ ಹೋರಾಡಿದ ಪ್ರತೀಕವೆಂಬಂತೆ ಅನೇಕ ಸರ್ಕಲ್‌ಗಳಲ್ಲಿ ಅವರ ಪುತ್ಥಳಿಯನ್ನು ಇಂದಿಗೂ ನಗರ ಪ್ರದೇಶಗಳಲ್ಲಿ ಕಾಣಬಹುದು. ಈ ಹಿನ್ನಲೆಯಲ್ಲಿ ಬಾಗಿಲ ಕುದುರೆಯ ಚಿತ್ರವನ್ನು ನಾವು ವಿವಿಧ ಮಜಲುಗಳಲ್ಲಿ ನೋಡಬಹುದಾಗಿದೆ.

೫.೩.೨. ಕುದುರೆ ಕುಣಿತ

ಕುದುರೆ ಕುಣಿತ ಒಂದು ಬಗೆಯ ಮನರಂಜನೆಯ ಪದ್ಧತಿಯಾಗಿ ಪ್ರಾಚೀನಕಾಲದಿಂದ ಇಂದಿನವರೆಗೂ ಬೆಳೆದುಕೊಂಡು ಬಂದಿದೆ. "ಕನ್ನಡ ಸಾಹಿತ್ಯದ ಜೀವಾಳವಾಗಿರುವ ಜನಪದಸಾಹಿತ್ಯದಲ್ಲಿ ಬರುವ ಸಂಕೀರ್ಣ ಕಲೆಗಳಲ್ಲಿ ಶಸ್ತ್ರ ಕುಣಿತ, ಒಡ್ಡರ ಕುಣಿತ, ಇರುಳಿಗರ ಕುಣಿತ, ಹನ್ನೆರಡು ಸೆರಗಿನ ಕುಣಿತ, ಮರಗಾಲು ಕುಣಿತ, ದೊಣ್ಣೆ ಸಿದ್ರಾಮಪ್ಪನ ಕುಣಿತ ಹೀಗೆ ಅನೇಕ ಬಗೆಯ ಕುಣಿತಗಳು ನಮ್ಮಲ್ಲಿ ಕಂಡು ಬರುತ್ತವೆ. ಅಂತಹ ಮಹತ್ವದ ಕುಣಿತಗಳಲ್ಲಿ ಪ್ರಮುಖವಾದ ಕುಣಿತವೇ ಕೀಲು ಕುದುರೆ ಕುಣಿತ.

ಇದರ ವ್ಯಾಪ್ತಿ ಬಹು ವಿಸ್ತಾರವಾದದ್ದು ಕರ್ನಾಟಕದ ಬಿಜಾಪುರ, ಬಳ್ಳಾರಿ, ಮಂಡ್ಯ, ಮೈಸೂರು, ಬೆಂಗಳೂರು, ಕೋಲಾರ, ಕೊಡಗು ಮುಂತಾದ ಅನೇಕ ಜಿಲ್ಲೆಗಳಲ್ಲಿ ಹರಡಿಕೊಂಡು ಪ್ರಚಲಿತವಿರುವ ಒಂದು ಜನಪ್ರಿಯ ಕುಣಿತ. ಕೊಡಗು ಜಿಲ್ಲೆಯಲ್ಲಿ ಈ ಕುಣಿತಕ್ಕೆ 'ಪೊಯ್ ಕುದುರೆ' ಎಂದು ಕರೆಯುವ ವಾಡಿಕೆ ಇದೆ. ಈ ಕಲೆ ಅಲ್ಲಿಯ ಜನರ ಜೀವನಾಡಿಯಾಗಿ ಬೆಳೆದುಬಂದಿದೆ. ಯಾವುದೇ ಜಾತಿ, ಸಮುದಾಯಕ್ಕೆ ಬದ್ಧವಾಗದೆ ಇರುವದು ಕಲೆಯ ಹಿರಿಮೆಗೆ ಸಾಕ್ಷಿ. ಕುದುರೆಕೋಲ, ಮರಗಾಲು ಕುಣಿತಗಳು ಇದಕ್ಕೆ ಸಂವಾದಿಯಾದ ಕಲೆಗಳಾಗಿ ಬೆಳಕು ಕಂಡಿವೆ.

ಕೀಲು ಕುದುರೆಯನ್ನು ಪ್ರಮುಖವಾಗಿ ಬಿದಿರಿನ ದಬ್ಬೆಗಳಿಂದ ರಚಿಸಿರುತ್ತಾರೆ. ಕಾಲುಗಳನ್ನು ಮಾತ್ರ ಬಿಟ್ಟು ಉಳಿದ ಹೊಟ್ಟೆ, ಎದೆ ಮತ್ತು ಹಿಂಭಾಗವನ್ನು ಕುದುರೆಯ ಆಕಾರದಂತೆ ಬಿದಿರಿನ ತೆಳುವಾದ ದಬ್ಬೆಗಳಿಂದ ಹೆಣೆಯಲಾಗುತ್ತದೆ. ಇದನ್ನು ಆಯಾ ಗ್ರಾಮದ ಕಲಾವಿದರು, ಅಕ್ಕಸಾಲಿಗರು, ಚಿತ್ರಗಾರರು, ಬಡಿಗತನದವರು ಮಾಡಿಕೊಡುವುದು ವೈಶಿಷ್ಟ್ಯವಾಗಿದೆ. ಕುದುರೆಯ ತಲೆಯನ್ನು ಕಾಗದದ ಹಿಟ್ಟಿನಿಂದ ರಚಿಸಿರುತ್ತಾರೆ. ಇದರ ಒಳಭಾಗ ಟೊಳ್ಳಾಗಿದ್ದು, ಕುಣಿಯುವಾಗ ಅದರ ನಾಲಿಗೆಯು ಮೇಲೆ ಕೆಳಗೆ ಚಲಿಸುವಂತೆ ಕೀಲನ್ನು ಅಳವಡಿಸಿರುತ್ತಾರೆ.''[೧೮]

ಕೀಲು ಕುದುರೆ ಕುಣಿತ ಹೆಸರೇ ಸೂಚಿಸುವಂತೆ ಅನೇಕ ಬಗೆಯ ಕೀಲುಗಳಿಂದ ರಚನೆಗೊಂಡಿರುವಂತಹದ್ದು. ''ಕೀಲು ಕುದುರೆ ಆಡಿಸುವವನು ಕಾಲಿಗೆ ಎರಡು ಅಡಿ ಉದ್ದದ ಮರಗಾಲು ಕಟ್ಟಿಕೊಂಡಿರುತ್ತಾನೆ. ಈ ಮರದ ಕಾಲುಗಳನ್ನು ಹಗುರ ಹಾಗೂ ಗಟ್ಟಿಯಾದ ಮರದಿಂದ ಮಾಡಿ ಅದರಲ್ಲಿ ಕಲಾವಿದರ ಕಾಲುಗಳನ್ನು ಕೂರಿಸಲು ಅನುಕೂಲವಾಗುವಂತೆ ಮಾಡಿರುತ್ತಾರೆ. ಕುದುರೆ ಆಕಾರದ ಈ ಬಿದಿರಿಗೆ ಅದೇ ಅಳತೆಯ ಬಣ್ಣಬಣ್ಣದ ಗೌನನ್ನು ಹೊದಿಸಿರುತ್ತಾರೆ. ರಾಜ- ರಾಣಿಯರ ವೇಷ ಭೂಷಣವನ್ನು ಧರಿಸಿದ ಕಲಾವಿದರು ಈ ಕುದುರೆಯ ಬೆನ್ನಿನಲ್ಲಿ ಸೇರಿ ಹೆಗಲುಗಳಿಗೆ ಕುದುರೆಯ ದಬ್ಬೆಯ ದೇಹವನ್ನು ಬಿಗಿದುಕೊಳ್ಳುವದು. ಕೈಯಲ್ಲಿ ಲಗಾಮು ಹಿಡಿದುಕೊಂಡು ಅದರ ತಲೆ, ಬಾಲಗಳನ್ನು ಆಡಿಸುತ್ತಾ ಹಿಂದು ಮುಂದು ಮಾಡಿ ಕುಣಿದಾಗ ಅದು ಕುದುರೆಯ ಭಂಗಿಯಂತೆ ಕಾಣುತ್ತದೆ. ಸಾಮಾನ್ಯವಾಗಿ ಕೀಲು ಕುದುರೆ ಕಲಾವಿದರು ರಾಜ -ರಾಣಿಯರಂತೆ ಕಿರೀಟ, ಭುಜಕೀರ್ತಿ, ಎದೆಹಾರ, ನಡುಬಿಲ್ಲೆ, ವೀರಗಾಸೆ, ಇತ್ಯಾದಿ ರಾಜಯೋಗ್ಯವಾದ ವೇಷಭೂಷಣ ತೊಟ್ಟಿರುತ್ತಾರೆ. ಮುಖಕ್ಕೆ ಬಣ್ಣ, ಕಾಲಿಗೆ ಗೆಜ್ಜೆಗಳಿರುತ್ತವೆ. ಹೆಣ್ಣು ಮತ್ತು ಗಂಡು ವೇಷಗಳು ಜೊತೆ ಜೊತೆಯಲ್ಲಿ ಕುಣಿಯುವುದು ರೂಢಿ. ಕೆಲವು ಕಡೆಗಳಲ್ಲಿ ಕೀಲು ಕುದುರೆಯ ಜೊತೆಯಲ್ಲಿ ಇಲ್ಲಿನ ಆಕೃತಿಯನ್ನು ಕಟ್ಟಿಕೊಂಡ ನರ್ತಕರೂ ಇರುತ್ತಾರೆ. ಜನಪದ ಕತೆಗಳ ಹಿನ್ನಲೆಯಿರುವ ಈ ಕೀಲುಕುದುರೆ ಕಲೆಯು ಮರಗಾಲು ಕುಣಿತವನ್ನು ಹೋಲುತ್ತದೆ. ಮರಗಾಲಿನ ಎತ್ತರ ಎರಡು ನಾಲ್ಕು ಅಡಿಗಳಿದ್ದರೆ, ಕೀಲು ಕುದುರೆ ಕುಣಿತದಲ್ಲಿ ಅದು ಎರಡು ಅಡಿಯಷ್ಟು ಉದ್ದವಿರುತ್ತದೆ. ಆದರೆ ದಕ್ಷಿಣ ಕನ್ನಡದಲ್ಲಿ

ಪ್ರದರ್ಶನವಾಗುವ ಕೀಲು ಕುದುರೆ ಕಲೆಯಲ್ಲಿ ಕೇವಲ ಒಬ್ಬನೇ ವೇಷಗಾರನಿರುತ್ತಾನೆ. ಅವನೇ ಕುದುರೆ ಸವಾರ. ಕುದುರೆಯನ್ನು ವಾದ್ಯಮೇಳ ನುಡಿತಕ್ಕೆ ವಿವಿಧ ಭಂಗಿಯಲ್ಲಿ ಕುಣಿಸುವುದಷ್ಟೇ ಕಂಡು ಬರುತ್ತದೆ."[೧೯] ಹೀಗೆ ಜನಪದ ಸಾಹಿತ್ಯದ ಒಂದು ಭಾಗವಾಗಿ, ಮನರಂಜನೆಯ ವೇದಿಕೆಯ ಆಟವಾಗಿ, ನೋಟವಾಗಿ, ಸಂಸ್ಕೃತಿಯ ಪ್ರತೀಕವಾಗಿ, ಬೆಳೆದು ಬಂದ ಕುದುರೆ ಕುಣಿತ ಶಾಸ್ತ್ರವಲ್ಲದಿದ್ದರೂ ಜನಸಮುದಾಯ ಬದುಕಿನ ಹತ್ತಿರವಾದ ಪ್ರಾಣಿಯ ವೇಷವನ್ನು ಧರಿಸಿ ಎಲ್ಲರು ಒಟ್ಟಾಗಿ ಬಾಳಲಿ ಎಂಬ ಆಶಯದೊಂದಿಗೆ ಹುಟ್ಟಿಕೊಂಡ ಸಂಸ್ಕೃತಿಯ ಪ್ರತಿಬಿಂಬವಾಗಿದೆ.

ಕುದುರೆಕೋಲ : "ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ಬಂಟ್ವಾಳ, ಸುಳ್ಯ ತಾಲೂಕುಗಳಲ್ಲಿ ಕಂಡುಬರುವ ಈ ಕಲೆಯನ್ನು 'ನಲ್ಕೆ' ಜನಾಂಗದವರು ನಡೆಸುತ್ತಾರೆ. ಇದೊಂದು ಆರಾಧನಾತ್ಮಕಲೆಯಾಗಿದ್ದು, ಸುಗ್ಗಿ, ಬೇಸಾಯ, ಪ್ರಾರಂಭಿಸುವ ಮೊದಲು ಈ ಕುಣಿತವನ್ನು ನಡೆಸುತ್ತಾರೆ. ಸಾಮಾನ್ಯವಾಗಿ ಬಿತ್ತನೆಗೆ ಗದ್ದೆಯನ್ನು ಹಸನುಗೊಳಿಸಿ ಉಳುಮೆಯನ್ನು ಪ್ರಾರಂಭಿಸುವ ಪೂರ್ತಿಗೊಳಿಸುವ ದಿನಕ್ಕೆ 'ಕಂಡದಕೋರಿ' ಎನ್ನುತ್ತಾರೆ. ಹಿಂದಿನ ಬೆಳೆಯನ್ನು ಕೊಯ್ದು ಬಳಿಕ ಗದ್ದೆಯನ್ನು ಚೆನ್ನಾಗಿ ಎತ್ತರ ನೀರು ನಿಲ್ಲಿಸಿ ಕಂಡುಬರುವ ಏರುತಗ್ಗುಗಳನ್ನು ಹಲಗೆಯಿಂದ ಸಮತಲಗೊಳಿಸಲಾಗುತ್ತದೆ. ಇದನ್ನು ಕೋರುನೆ ಅಥವಾ ಗೋರುನೆ ಎನ್ನುವರು. ಈ ಪದದಿಂದಲೇ ಕಂಡದ (ಗದ್ದೆಯ) 'ಕೋರಿ' ಎಂಬ ಹೆಸರು ಕೂಡ ಬಂದಿದೆ.

ಈ ಆಚರಣೆಯನ್ನು ದೊಡ್ಡ ಬೇಸಾಯಗಾರರು, ಅರಸರು, ಬಲ್ಲಾಳರು, ಬೂಡಿನವರು, ಗುತ್ತಿನವರು ವಿಜೃಂಭಣೆಯಿಂದ ನೆಡೆಸುತ್ತಾರೆ. ಗದ್ದೆಕೋರಿ ಆದ ಬಳಿಕ ಗದ್ದೆಮಧ್ಯೆ ಪೂರಕೆ ಹಾಕುವ ಕ್ರಮವಿದೆ. (ಪೂರಕೆ ಎಂದರೆ ಅಡಿಕೆ ಮರದ ಸುತ್ತ ಅಂಕಣ ಅಂಕಣವಾಗಿ ಸಲಿಕೆಯ ತುಂಡುಗಳನ್ನು ಜೋಡಿಸಿ ಐಫಲ್ ಮಾದರಿಯ ಗೋಪುರಾಕೃತಿಯಲ್ಲಿ ಕಟ್ಟಿದ ಒಂದು ಆಕೃತಿ) ಇದನ್ನು ಊರಿನ ಸಮಸ್ತ ಜನರ ಸಮ್ಮುಖದಲ್ಲಿ ಕೊಂಬುವಾಲಗದ ಹಿಮ್ಮೇಳದಲ್ಲಿ ತೆಗೆದುಕೊಂಡು ಹೋಗಿ ಗದ್ದೆಯ ಮಧ್ಯೆ ನೆಡುವ ಕ್ರಮಕ್ಕೆ ಪೂರಕೆ ಹಾಕುವದು ಎನ್ನುತ್ತಾರೆ. ಗದ್ದೆಕೋರಿ ಆದ ಬಳಿಕ ಪೂರಕೆ ಹಾಕುವ ಮೊದಲು 'ಕುದುರೆಕೋಲ' ನಡೆಯುತ್ತದೆ. ಸುಗ್ಗಿಯ ನಂತರ ಬೆಳೆ ಬಿತ್ತುವ ಮೊದಲು ಆಗುವ ಈ ಸಮಾರಂಭ ಸಾಮಾನ್ಯವಾಗಿ ಡಿಸೆಂಬರ ತಿಂಗಳಲ್ಲಿ ಈ ಕಾರ್ಯ ನಡೆಯುತ್ತದೆ. ಪೂರಕೆ ಮತ್ತು ಕುದುರೆಕೋಲಕ್ಕೆ ಅವಿನಾಭಾವ ಸಂಬಂಧ ಇರುವದರಿಂದ ಈ ಕೋಲಕ್ಕೆ ಹೆಚ್ಚಿನ ಮಹತ್ವ ಬಂದಿದೆ.

ಕುದುರೆ ಕೋಲವೆಂದರೆ ನಾಗಬ್ರಹ್ಮನು ಕುದುರೆಯ ಮೇಲೆ ಕುಳಿತುಕೊಂಡು ಬರುವ ದೃಶ್ಯ. ಗದ್ದೆಕೋರಿ ಸಾಮಾನ್ಯವಾಗಿ ವಿಶಾಲವಾದ ಬಾರೆಮಮರು ಗದ್ದೆಯಲ್ಲಿ ನಡೆಯುತ್ತದೆ. ಇದರ ಪಕ್ಕದಲ್ಲಿ ನಾಗಬನವಿರುತ್ತದೆ. ನಾಗಬನದಲ್ಲಿ ನಾಗಬ್ರಹ್ಮನ ವೇಷ ಹಾಕಲಾಗುತ್ತದೆ. ನಾಗಬ್ರಹ್ಮ ಸೊಂಟಕ್ಕೆ ನಿರಿಗೆ ಹಾಕಿದ ಸೀರೆಗಳನ್ನು ಲಂಗದ ರೀತಿಯಲ್ಲಿ ಕಟ್ಟಿಕೊಳ್ಳುತ್ತಾನೆ. ಮೈಗೆ ಕೆಂಪು ಬಣ್ಣದ ಉದ್ದತೋಳಿನ

ಅಂಗಿ ಇರುತ್ತದೆ. ಮುಖಕ್ಕೆ ಅಂದಾಳ ಹಾಕಿ ಸಾತ್ವಿಕಭೂತದ ಮುಖವರ್ಣಿಕೆ ಮಾಡಿಕೊಳ್ಳುತ್ತಾನೆ. ಕೆಂಪಿನ ಮಧ್ಯೆ ಬಿಳಿನಾಮ ಹಾಕಿಕೊಳ್ಳುತ್ತಾನೆ. ತಲೆಗೆ ತಲೆಮಣಿ, ಹೂವಿನದಂಡೆ ಕಟ್ಟಿ ಮೇಲೆ ಪಟ್ಟಿ (ಕಿರೀಟ) ಕಟ್ಟಿಕೊಳ್ಳುತ್ತಾನೆ. ಇವು ಎಲ್ಲವು ಬೆಳ್ಳಿಯ ಆಭರಣಗಳಾಗಿರುತ್ತವೆ. ಕಾಲಿಗೆ ಗಗ್ಗರವಿರುವುದು ವಿಶೇಷ.

ಬಿದಿರಿನ ಸಲಿಕೆಗಳಿಂದ ಮಾಡಿದ ಕುದುರೆಯ ದೇಹದ ಆಕೃತಿಯೊಂದು ಇರುತ್ತದೆ. ಅದರ ಮುಖಕ್ಕೆ ರಂಗಿನ ಹಾಳೆಯಿಂದ ಮಾಡಿದ ಕುದುರೆಯ ಮುಖವಾಡ ಕಟ್ಟಿರುತ್ತಾರೆ. ಹಿಂದೆ ತೆಂಗಿನ ತಿರಿಯಿಂದಾ ಬಾಲದ ರಚನೆ ಇರುತ್ತದೆ. ಈ ಆಕೃತಿಯನ್ನು ನಾಗಬ್ರಹ್ಮ ವೇಷಧಾರಿ ತನ್ನ ಸೊಂಟಕ್ಕೆ ಕಟ್ಟಿಕೊಳ್ಳುತ್ತಾನೆ. ಆಕೃತಿಯು ಆತನ ಸೊಂಟವನ್ನು ಸುತ್ತುವರಿಯುವುದರಿಂದ ಆತ ಕುದುರೆಯ ಮೇಲೆ ಕುಳಿತಂತೆ ಕಾಣುತ್ತದೆ. ಕುದುರೆಯ ದೇಹದ ಇತರ ಭಾಗವನ್ನು ಬಟ್ಟೆಯಿಂದ ಮುಚ್ಚಲಾಗುತ್ತದೆ. ಇದು ಕೀಲು ಕುದುರೆ ಕುಣಿತವನ್ನೇ ಹೋಲುತ್ತದೆ.

ನಾಗಬ್ರಹ್ಮನ ಜೊತೆಗೊಬ್ಬ 'ಉರವ' ಇರುತ್ತಾನೆ. ಈತ ನಾಗಬ್ರಹ್ಮನ ಸಾರಥಿ ಉರವನ ವೇಷವನ್ನು ಮಕ್ಕಳು ಮಾಡುವದು ಸಂಪ್ರದಾಯ. ಸೀರಿ ನಿರಿಗೆ ಹಿಡಿದು ಸೊಂಟಕ್ಕೆ ಲಂಗದ ರೀತಿಯಲ್ಲಿ ಕಟ್ಟುತ್ತಾರೆ. ಕೆಂಪು ನೀಲವಂಗಿ, ಕೈಗೆ ಕೇಪುಳ ಹೂವಿನದಂಡೆ, ತಲೆಗೂ ಕೇಪುಳ ಹೂವಿನ ತಲೆಪಟ್ಟಿ ಇರುತ್ತದೆ. ಆತನ ಕೈಯಲ್ಲಿ ಚಾಟಿ ಹಿಡಿದುಕೊಂಡು ನಾಗಬ್ರಹ್ಮನನ್ನು ಹಿಂಬಾಲಿಸುತ್ತಾನೆ. ಬಲ್ಲಾಳರ (ಮನೆಯಯಜಮಾನ) ಒಡ್ಡೋಲಗ ಆದ ತಕ್ಷಣ ನಾಗಬ್ರಹ್ಮ, ನಾಗಬನದಿಂದ ಹೊರಟು ಕುದುರೆ ನಡಿಗೆಯಲ್ಲಿ ಕುಣಿಯುತ್ತಾ ಬಾರೆಮತಿಮರು ಗದ್ದೆಗೆ ಬಂದು ಗದ್ದೆಯನ್ನು ಸುತ್ತಿಬಂದ ಮೇಲೆ ಬಲ್ಲಾಳನ ಎದುರು ನಿಲ್ಲುತ್ತಾರೆ."[೨೦]

ಆ ಸಂದರ್ಭದಲ್ಲಿ ಉರವ ಆತನನ್ನು ಹಿಂಬಾಲಿಸುತ್ತಾನೆ. ತೆಂಬರೆಯವನೂ ಜೊತೆಗೆ ಇರುತ್ತಾನೆ. ಮನೆಯ ಯಜಮಾನನೆದುರು ಕುಣಿತ ನಡೆಯುತ್ತದೆ. ಕುದುರೆಯ ಹೆಜ್ಜೆಯನ್ನು ಅನುಕರಿಸುವ ರೀತಿಯಲ್ಲಿ ಹೆಜ್ಜೆಯನ್ನಿಟ್ಟು ಕುಣಿಯುತ್ತಾನೆ. ಆನಂತರ ಕುದುರೆಗಳನ್ನು ಕಳಚಿ 'ಅಣಿ'ಯನ್ನು ಕಟ್ಟಿಕೊಳ್ಳುತ್ತಾನೆ. ಬಳಿಕ ನಾಗಬ್ರಹ್ಮ ನೇಮನಿತ್ಯ ನೆಡೆಯುತ್ತದೆ.

ಕುದುರೆಕೋಲ ಎಂಬುದು ನಾಗಬ್ರಹ್ಮ ಭೂತದ ಮೊದಲನೆಯ ಹಂತ, ನಾಗಬ್ರಹ್ಮ ಕುದುರೆಯ ಮೇಲೆ ಕುಳಿತುಕೊಂಡು ಒಂದು ಮನೆಯ ಯಜಮಾನನ ಎದುರು ಕುಣಿದ ಮೇಲೆ ನಾಗಬ್ರಹ್ಮನಿಗೆ ಅಣಿಕಟ್ಟಿ ಭೂತ ಕೂಡ ನೆಡೆಯುತ್ತದೆ. ಆದುದರಿಂದ ಭೂತಾರಾಧನೆಯ ಸಂದರ್ಭದಲ್ಲಿ ಅನ್ವಯವಾಗುವ ಎಲ್ಲಾ ಕಟ್ಟು ಪಾಡುಗಳನ್ನು ಕುಣಿತದವರು ಪಾಲಿಸುತ್ತಾರೆ. ಗದ್ದೆಯ ಕೆಲಸದ ಮುಕ್ತಾಯದ ಸಮಾರಂಭಕ್ಕೆ ಸೇರಿದ ಜನರು ಮಾತ್ರ ಕುದುರೆ ಕೋಲಕ್ಕೆ ಪ್ರೇಕ್ಷಕರಾಗಿರುತ್ತಾರೆ. ಕೊನೆಗೆ ಮನೆಯ ಯಜಮಾನನಿಂದ ಕಲಾವಿದರು ನಿಶ್ಚಿತ ಸಂಭಾವನೆಯನ್ನು ಪಡೆಯುತ್ತಾರೆ. ಯಾವುದೇ ಉತ್ಸವ ಹಾಗೂ ಆರಾಧನೆ

ಸಂದರ್ಭದಲ್ಲಿ ನಾಗಬ್ರಹ್ಮನ ಸೇವೆ ತುಳುನಾಡಿನಲ್ಲಿ ಮೊದಲನೆದಾಗಿ ನಡೆಯುವುದುಂಟು. ಅದೇ ಪ್ರಕಾರ ಗದ್ದೆಗೋರಿಯ ಸಮಾರಂಭದಲ್ಲಿಯೂ ಮೊದಲಿಗೆ ನಾಗಬ್ರಹ್ಮನ ಆರಾಧನೆ ನಡೆಯುತ್ತದೆ. ಆತ ಕುದುರೆಯ ಮೇಲೆ ಕುಳಿತುಕೊಂಡು ಬಂದಂತೆ ನರ್ತಿಸುವುದರಿಂದ ಇದಕ್ಕೆ ಕುದುರೆಕೋಲ ಎಂದು ಹೆಸರು ಬಂದಿದೆ. ಕುದುರೆಕೋಲಕ್ಕಿಂತ ಮೊದಲು ನಾಗ ತಂಬಿಲ ನಡೆಯುತ್ತದೆ.

ನಾಗಬ್ರಹ್ಮನ ಜೊತೆಯಲ್ಲಿ ಬರುವವ ಉರವ (ಉರಗ) ಅಂದರೆ ಹಾವು ಆತ ಮೊದಲೊಮ್ಮೆ ಗದ್ದೆಗೆ ಹೋಗಿ ಸುತ್ತಿಬರುತ್ತಾನೆ. ಬಳಿಕ ನಾಗಬ್ರಹ್ಮನ ಜೊತೆಯಲ್ಲಿಯೂ ಒಂದು ಸುತ್ತು ಬರುತ್ತಾನೆ. ಕುದುರೆಕೋಲ ಈ ಎಲ್ಲಾ ದೃಷ್ಟಿಯಿಂದ ಅಂತಿಮವಾಗಿ ನಾಗಬ್ರಹ್ಮನ ಆರಾಧನೆಯೇ ಎನಿಸಿದರೂ ಇಲ್ಲಿ ಕುದುರೆಕೋಲ ಮತ್ತು ನಾಗಬ್ರಹ್ಮನ ಸಂಪ್ರದಾಯ ಎರಡು ಸೇರಿಯೇ ನಡೆಯುವುದರಿಂದ ಒಂದರ ಬಿಂಬ ಇನ್ನೊಂದರ ಪ್ರತಿಬಿಂಬ ರೂಪವಾಗಿರುವಂತದ್ದು.”[೨೧] ಜನಪದರ ನಂಬಿಕೆ, ಆಚರಣೆ, ಸಂಪ್ರದಾಯಗಳು ಇನ್ನೂ ಜೀವಂತವಾಗಿರುವುದಕ್ಕೆ ಇಂತಹ ಕೀಲುಕುದುರೆ ಕುಣಿತ, ಕುದುರೆಕೋಲ ಸಂಪ್ರದಾಯವೇ ಸಾಕ್ಷಿ. ಇದು ಅಧ್ಯಯನ ದೃಷ್ಟಿಯಿಂದ ಶಾಸ್ತ್ರವಲ್ಲದಿದ್ದರೂ ಇಲ್ಲಿ ಆಚರಿಸುವ ಕ್ರಮಗಳು, ಪದ್ಧತಿಗಳು, ಒಂದು ಅರ್ಥದಲ್ಲಿ ಆಲೋಚಿಸಿದಾಗ ಶಾಸ್ತ್ರ ಸಾಹಿತ್ಯಕ್ಕೆ ಜೀವನದ ಮುಖ್ಯ ಭಾಗವಾದ ಮನರಂಜನೆ, ಕೂಡಿಬಾಳುವ, ಒಗ್ಗಟ್ಟನ್ನು ಪ್ರದರ್ಶಿಸುವ ಆಶಯಕ್ಕೆ ಹತ್ತಿರವಾಗಿ ನಿಲ್ಲುತ್ತವೆ.

೫.೩.೩. ತೇಜಮ್ಮ ಆರಾಧನೆ

ಪ್ರಾಚೀನ ಕಾಲದಿಂದ ನಮ್ಮ ಸಂಸ್ಕೃತಿಯಲ್ಲಿ ಅನೇಕ ಬಗೆಯ ಆರಾಧನೆಗಳು ಕಂಡು ಬರುತ್ತವೆ. ದೇವಾರಾಧನೆ, ಭೂತಾರಾಧನೆ ಕಂಡು ಬರುವಂತೆ ಪ್ರಾಣಿಗಳ ಆರಾಧನೆಯು ಸಹ ನಮ್ಮಲ್ಲಿ ಬೆಳೆದು ಬರುತ್ತಿದೆ. ಕಾರಣ ಮನುಷ್ಯನಿಗೆ ಅತ್ಯಂತ ಉಪಯೋಗವಾಗುವ ಪ್ರಾಣಿಗಳನ್ನು ದೇವರು ಎಂದು ಭಾವಿಸಿ ಆರಾಧನೆ ಮಾಡುವ ಪದ್ಧತಿ ಹಿಂದಿನಿಂದಲೂ ನಡೆದು ಕೊಂಡು ಬಂದಿದೆ. ಗೋವು ಆರಾಧನೆ ಅದರಲ್ಲಿ ಪ್ರಮುಖವಾದದ್ದು. ‘ಆರಾಧನೆ’ ಎಂಬುದಕ್ಕೆ ಸೇವೆ, ಪೂಜೆ, ಆಚರಣೆ ಎಂಬ ಸಾಮಾನ್ಯವಾದ ಅರ್ಥಗಳು ಬರುತ್ತವೆ.

ತೇಜ ಎಂದರೆ ‘ಕುದುರೆ ಎಂಬ ಅರ್ಥವಿದ್ದು ಬಳ್ಳಾರಿ, ಕೊಪ್ಪಳ ಜಿಲ್ಲೆಗಳಲ್ಲಿ ಕುದುರೆ ಕುಣಿತದ ಜೊತೆಗೆ ತೇಜಮ್ಮ ಆರಾಧನೆ ಮಾಡುವ ಪದ್ಧತಿ ಪ್ರಾಚೀನ ಕಾಲದಲ್ಲಿ ಹೆಚ್ಚು ಜನಜನಿತವಾಗಿತ್ತು. ಕುದುರೆ ಮನೆ ಮನೆಗೆ ಬರುತ್ತಿತ್ತು. ಅದಕ್ಕೆ ಪೂಜೆ ಮಾಡಲಾಗುತ್ತಿತ್ತು ನಂತರ ಅದು ಕುಣಿತದಿಂದ ಎಲ್ಲರನ್ನು ರಂಜಿಸುತ್ತಿದ್ದ ಬಗ್ಗೆ ಹಿಂದಿನ ತಲೆಮಾರಿನ ಹಿರಿಯರು ಹೇಳುತ್ತಾರೆ. ಇದು ಕರಡಿ ಕುಣಿತದಷ್ಟೇ ಪ್ರಚಲಿತವಾಗಿತ್ತು ಇಂತಹ ಒಂದು ಪದ್ಧತಿ ಕೊಗಳಿ ನಾಡಿನಲ್ಲಿ ಹೆಚ್ಚು ಕಂಡುಬರುತ್ತದೆ. ಚಿಮ್ಮನಹಳ್ಳಿಯಿಂದ ಕುದುರೆಯು ಬರುತ್ತಿದ್ದು ಊರಲ್ಲಿ ಸಂಭ್ರಮ ಸಡಗರದಿಂದ ದೇವಿ ಬಂದಳು ಎಂದು ಪೂಜಿಸುವುದರ ಮೂಲಕ ಕಪ್ಪ ಕಾಣಿಕೆಯನ್ನು ಕೊಡುವ ಪದ್ಧತಿಯಿದ್ದು, ಕುದುರೆಯನ್ನು ಮನರಂಜನೆಯ ಪ್ರಾಣಿ ಎಂದು

ಗುರುತಿಸುವುದರ ಜೊತೆಗೆ ದೇವರು ಎಂದು ಪೂಜಿಸುವ ಜನರು ಇವತ್ತಿಗೂ ಆ ಭಾಗದಲ್ಲಿ ಚಿಮ್ಮನಹಳ್ಳಿಮ್ಮ, ತೇಜಮ್ಮ ಎಂದು ಕರೆಯುವುದು ಕಾಣಬಹುದು.

ಹಾಗೆ ನೋಡಿದರೆ ಆಕಳು ಪೂಜಿಸುವುದನ್ನು ಬಿಟ್ಟರೆ ನಂತರದ ಸ್ಥಾನ, ಆನೆ ಮತ್ತು ಕುದುರೆಗಳಿಗೆ ಸಿಗುತ್ತದೆ. ಪ್ರತಿಯೊಂದು ಪ್ರಾಣಿಯನ್ನು ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ಆಚರಣೆಗೆ ತೊಡಗಿಸಿಕೊಳ್ಳುತ್ತಾರೆ. ಉದಾಹರಣೆಗೆ ಗಣೇಶನ ವಾಹನ ಇಲಿ, ಸರಸ್ವತಿಯ ವಾಹನ ನವಿಲು. ಮೈಲಾರಲಿಂಗಪ್ಪ ವಾಹನ ನಾಯಿ, ಶಿವನವಾಹನ ನಂದಿ, ಅದರಂತೆ ಬೀರಲಿಂಗೇಶ್ವರನ ವಾಹನವಾಗಿ ಹಾಲುಮತ ಸಂಸ್ಕೃತಿಯ ಬಹುತೇಕ ಜನಸಮುದಾಯ ಕುದುರೆ ಪೂಜಿಸುತ್ತಿರುವುದು ಒಂದು ವಿಶೇಷ. "ಈ ಆರಾಧನೆ ಮಾಡುವ ಸಂಪ್ರದಾಯ ಬೆಳಗಾವಿ ಜಿಲ್ಲೆಯ ಅಥಣಿ, ಚಿಕ್ಕೋಡಿ ರಾಯಬಾಗ ಭಾಗದಲ್ಲಿ ಹೆಚ್ಚು ಕಂಡು ಬರುತ್ತದೆ. ಇದನ್ನು ಹೊರತು ಪಡಿಸಿದರೆ ಸೊಲ್ಲಾಪುರದ ಭಾಗದಲ್ಲಿ ಯಾವುದೇ ಸಮುದಾಯವಿರಲಿ ಅಲ್ಲಿಯ ಜನಸಮುದಾಯ ಉತ್ಸವಗಳಲ್ಲಿ, ಮೆರವಣಿಗೆಗಳಲ್ಲಿ ಕುದುರೆಯನ್ನು ಹೆಚ್ಚಾಗಿ ಬಳಸುತ್ತಿರುವುದನ್ನು ಕಾಣಬಹುದು. ಆದ್ದರಿಂದ ಕುದುರೆ ಸಂಪ್ರದಾಯ ಆದಿಕಾಲದಿಂದಲೂ ನಡೆದುಕೊಂಡು ಬಂದ ಒಂದು ಪ್ರಮುಖ ಸಂಪ್ರದಾಯವಾಗಿದೆ. ಮೂಲತಃ ಕುದುರೆಯನ್ನು ಸಾಕುವ ಮತ್ತು ಅಭಿವೃದ್ಧಿಪಡಿಸುವ ತಾಣಗಳಾಗಿದ್ದ ಪ್ರದೇಶ ಇಲ್ಲಿಯೇ ಇರಬೇಕು ಎಂಬ ಅಂಶ ವಿಧಿತವಾಗುತ್ತದೆ.

ಪ್ರಸ್ತುತ ಕುದುರೆ ಆರಾಧನೆ ಮಾಡುವ ಪದ್ಧತಿಗೆ ನಿದರ್ಶನ ಎಂಬಂತೆ ಅಥಣಿಗೆ ಸಮೀಪ ಅಂದರೆ ೮ ಕಿ.ಮೀ. ಮೀರಜ್‌ಗೆ ಹೋಗುವ ಮಾರ್ಗದಲ್ಲಿ ಬರುವ "ಮುರಗುಂಡಿಯ ಮರುಸಿದ್ದೇಶ್ವರ ದೇವಸ್ಥಾನದಲ್ಲಿ ಈ ಆರಾಧನೆ ಕಂಡು ಬರುತ್ತದೆ. ಹಾಲುಮತ ಸಂಸ್ಕೃತಿಯ ಬೀರಲಿಂಗೇಶ್ವರ ಸಂಪ್ರದಾಯದ ಈ ದೇವಸ್ಥಾನದಲ್ಲಿ ಕುದುರೆಯನ್ನು ಕಟ್ಟಿಹಾಕಿ ಪೂಜಿಸಲಾಗುತ್ತಿದೆ. ಕುದುರೆ ಈ ಸಂಪ್ರದಾಯದ ಆರಾಧ್ಯದೇವರ ವಾಹನ ಎಂದು ಅಲ್ಲಿಯ ಗ್ರಾಮಸ್ಥರು ನಂಬಿಕೊಂಡು ಬಂದಿದ್ದಾರೆ. ಸುಮಾರು ೫೦೦ ವರ್ಷಗಳ ಇತಿಹಾಸವಿರುವ ಈ ಆರಾಧನೆಗೆ ಹೆಚ್ಚು ಮಹತ್ವ ಬಂದಿದೆ. ಇಲ್ಲಿ ಕುದುರೆಗೆ ಹೆಚ್ಚಾಗಿ ದೇವರು ಎಂದು ಭಾವಿಸುವ ಜನ ದೇವರ ಮುಂದೆ ಕುದುರೆಯ ಮೂರ್ತಿಯನ್ನು ಮಾಡಿಸಿ ಪೂಜಿಸುತ್ತಾ ಬಂದಿದ್ದಾರೆ. ಮರುಸಿದ್ದೇಶ್ವರ ದೇವರ ಕವಚದಲ್ಲಿ, ಪಟ್ಟಿಕೆಗಳಲ್ಲಿ ಕುದುರೆಯ ಚಿತ್ರಗಳು ಇರುವುದು ಇದಕ್ಕೆ ಸಾಕ್ಷಿ.

ಕುದುರೆಯನ್ನು ಪಾಲನೆ-ಪೋಷಣೆ ಮಾಡುವ ಸೇವಕರಾದ ಶ್ರೀಯುತರಾದ ಮುರಿಗೆಪ್ಪ, ಬೀರಪ್ಪ, ಊಗಾರ ಸಾ.ಮುರಗುಂಡಿ ವಯಸ್ಸು ೬೦ ಇವರನ್ನು ಸಂದರ್ಶಿಸಿದಾಗ ಅವರು ಹೇಳಿದ ಮಾಹಿತಿಯನ್ನು ಈ ಕೆಳಗಿನಂತೆ ಸಂಗ್ರಹಿಸಲಾಗಿದೆ. ನಾಲ್ಕು ತಲೆಮಾರಿನಿಂದ ಕುದುರೆಯನ್ನು ಪೂಜೆ ಮಾಡುತ್ತಿದ್ದು. ಇದುವರೆಗೂ ೬ ಕುದುರೆಗಳು ತಲೆ ಮುಗಿದು ೭ನೇ ತಲೆಯ ಕುದುರೆ ಇದು ಎಂದು ಹೇಳುತ್ತಾ ಹೆಚ್ಚಾಗಿ ಬಿಳಿಕುದುರೆಯನ್ನು ಪೂಜಿಸುತ್ತಿದ್ದು ಕುದುರೆಯು ಮರಣಹೊಂದಿದ ಸಂದರ್ಭದಲ್ಲಿ ಆ ಕುದುರೆಯನ್ನು

ದೇವಸ್ಥಾನದ ಆವರಣದಲ್ಲಿ ಹೂಳಿಟ್ಟು ಗದ್ದುಗೆಯನ್ನು ಕಟ್ಟಲಾಗುತ್ತದೆ. ಇದಕ್ಕೆ ಸಾಕ್ಷಿಯೆಂಬಂತೆ ಗದ್ದುಗೆಯ ಮೇಲೆ ಕುದುರೆಯ ಮೂರ್ತಿಯನ್ನು ಇಟ್ಟು ಪೂಜಿಸುತ್ತಿರುವುದು ಅಂದಿನಿಂದ ಇಂದಿನವರೆಗೂ ಪ್ರತಿನಿತ್ಯ ನೆಡೆಯುತ್ತಲೆ ಬಂದಿದೆ.

ಇನ್ನೊಂದು ವಿಶೇಷವೆಂದರೆ ಕುದುರೆಯನ್ನು ರವಿವಾರಕ್ಕೆ ಒಮ್ಮೆ ಮೆರವಣಿಗೆ ಮಾಡಲಾಗುತ್ತದೆ. ದೇವಸ್ಥಾನದಿಂದ ಪಾಲ್ಕಿಯು ಊರಲ್ಲಿ ಮೆರವಣಿಗೆಗೆ ಹೋಗುತ್ತದೆ. ಊರಲ್ಲಿಯೂ ಒಂದು ಮರುಸಿದ್ದೇಶ್ವರ ದೇವಸ್ಥಾನವಿದ್ದು ಅಲ್ಲಿಗೆ ಪಾಲ್ಕಿಯು ಹೋದನಂತರ ಪೂಜೆಯ ಕಾರ್ಯಕ್ರಮಗಳು ನೆಡೆಯುತ್ತವೆ. ನಂತರ ಊರಲ್ಲಿ ಮೆರವಣಿಗೆಯನ್ನು ಮಾಡಲಾಗುತ್ತದೆ. ಕುದುರೆಯನ್ನು ಪಾಲ್ಕಿಯ ಮುಂದೆ ಮುಂದೆ ಕರೆದುಕೊಂಡು ಹೋಗಲಾಗುತ್ತದೆ. ಹೀಗೆ ಮೆರವಣಿಗೆ ಮುಗಿದ ನಂತರ ಮತ್ತೆ ದೇವಸ್ಥಾನಕ್ಕೆ ಬಂದು ಕುದುರೆಯನ್ನು ಕಟ್ಟಲಾಗುತ್ತದೆ. ಇಲ್ಲಿಯ ಸಂಪ್ರದಾಯ ಬಂಡಾರಧರಿಸುವ ಈ ಪರಂಪರೆ ಹಾಲುಮತದವರದಾಗಿದ್ದು. ಈ ದೇವಸ್ಥಾನ ಆ ಮತಸ್ಥರ ಆರಾಧ್ಯ ದೈವವಾಗಿದೆ. ಪ್ರತಿವರ್ಷ ಯುಗಾದಿ ಪಾಡ್ಯಕ್ಕೆ ಜಾತ್ರೆ ನೆಡೆಯುತ್ತಿದ್ದು ಕುದುರೆಯನ್ನು ಅತ್ಯಂತ ಭಕ್ತಿ, ಶ್ರದ್ಧೆಯಿಂದ ಪೂಜಿಸಲಾಗುತ್ತದೆ ಎಂದು ಹೇಳಿದರು. ಇದೇ ರೀತಿಯ ಆರಾಧನೆಯನ್ನು ಹಾರುಗೇರಿ ಸಮೀಪವಿರುವ ಕರಿಸಿದ್ದೇಶ್ವರ ದೇವಸ್ಥಾನ, ಅಲಕನೂರು ಮತ್ತು ಯಲಪಾರಹಟ್ಟಿ ಅರಣ್ಯ ಸಿದ್ದೇಶ್ವರ ದೇವಸ್ಥಾನ ಮುಂತಾದ ಕಡೆಗಳಲ್ಲಿ ಇಂತಹ ಆರಾಧನೆಯನ್ನು ಹೆಚ್ಚಾಗಿ ಕಾಣಬಹುದು. ಜನರು ಕುದುರೆಯ ಬಗ್ಗೆ ಇಟ್ಟುಕೊಂಡಿರುವ ನಂಬಿಕೆ ವಿಶ್ವಾಸ, ಪ್ರೀತಿ ಭಕ್ತಿಯ ರೂಪದಲ್ಲಿ ಬೆಳೆದುಕೊಂಡು ಬಂದಿದೆ. ಶರಣರ ಒಂದು ಮಾತು ಇಲ್ಲಿ ನೆನಪಿಗೆ ತಂದುಕೊಳ್ಳುವುದು ಸೂಕ್ತವೆನಿಸುತ್ತದೆ. "ದಯವಿಲ್ಲದ ಧರ್ಮವಾವುದಯ್ಯ ದಯವಿರಬೇಕು ಸಕಲ ಪ್ರಾಣಿಗಳೆಲ್ಲರಲ್ಲಿ......... ಎಂಬ ವಾಕ್ಯ ಈ ಆರಾಧನೆಗೆ ಹತ್ತಿರವಾಗಿ ನಿಲ್ಲುತ್ತದೆ."[೨೨]

೫.೩.೪. ಕುದುರೆಶಿಲ್ಪಗಳು

ಒಂದು ಚಿತ್ರ ಸಾವಿರ ಶಬ್ದಗಳಿಗೆ ಸಮಾನ ಎಂಬ ಗಾದೆಯ ವಾಕ್ಯದಂತೆ ಶಿಲ್ಪ ಚಿತ್ರಗಳು ಈ ವಾಕ್ಯಗಳಿಗೆ ಪುಷ್ಠಿ ನೀಡುತ್ತವೆ. "ಕ್ರಿ.ಶ.೧೦ನೇ ಶತಮಾನದ ಬೆಂಗಳೂರು ಜಿಲ್ಲೆಯ ಮಾಗಡಿ ರಸ್ತೆಯ ತಾವರೆಕೆರೆಯಲ್ಲಿನ ಮೂರು ತುರುಗೋಳ್ ವೀರಗಲ್ಲುಗಳು ಬಹಳ ಸ್ವಾರಸ್ಯವಾಗಿವೆ. ಒಂದು ವೀರಗಲ್ಲಿನಲ್ಲಿ ವೀರನು ಕುದುರೆಯ ಮೇಲಿರುವ ಶತ್ರುವನ್ನು ಕೊಂದು ಕೆಳಕ್ಕೆ ಬೀಳಿಸಿ ಅವನ ಕುದುರೆಯನ್ನು ಸೆರೆಹಿಡಿದಿದ್ದಾನೆ. ಇವನ ಹಿಂದೆ ದನಗಳ ಚಿತ್ರಣವಿದೆ. ಶತ್ರುವಿನೊಡನೆ ಹೋರಾಡಿ ಅವನನ್ನು ಕೊಂದು ಅವನ ಕುದುರೆಯನ್ನು ಸೆರೆಹಿಡಿದು ದನಗಳನ್ನು ಊರಿಗೆ ಮರಳಿಸಿದ ವಿಷಯವನ್ನು ಈ ಶಿಲ್ಪ ತಿಳಿಸುತ್ತದೆ."[೨೩]

ಶಿಕಾರಿಪುರ ತಾಲ್ಲೂಕಿನ ಒಂದು ಶಾಸನದಲ್ಲಿ ವೀರನೊಬ್ಬನು "ಮೇಲಾಳಂಮನಿಱಿದು ಕುದುರೆಯಂ ಪಿಡಿದು ಶತ್ರುಗಳನ್ನು ಗೆದ್ದು ದನಗಳನ್ನು ರಕ್ಷಿಸಿದ ವಿಷಯವಿದೆ. ಚಿಕ್ಕಮಂಗಳೂರು ತಾಲೂಕಿನ ಒಂದು

ಶಾಸನದಲ್ಲಿಯೂ ದನಗಳನ್ನು ಅಪಹರಿಸಲು ಬಂದವರ ಕುದುರೆಯನ್ನು ಸೆರೆಹಿಡಿದ ವಿಷಯ ತಿಳಿಯುತ್ತದೆ. ನೆಲ್ಕುದುರೆಯ ಒಂದು ವೀರಗಲ್ಲಿನಲ್ಲಿ ವೀರನು ಕುದುರೆಯ ಮೇಲೆ ಕುಳಿತವರೊಡನೆ ಹೋರಾಡುತ್ತಿದ್ದಾನೆ. ದನಗಳು ಗಾಬರಿಯಿಂದ ತಮ್ಮ ಬಾಲಗಳನ್ನು ಮೇಲಕ್ಕೆ ಎತ್ತಿ ಕುತೂಹಲದಿಂದ (ಅಥವಾ ಹೆದರುತ್ತಾ) ಹೋರಾಟವನ್ನು ನೋಡುತ್ತ ನಿಂತಿವೆ.''[೨೪]

"ರಡ್ಡಿಹಳ್ಳಿಯ ವೀರಗಲ್ಲಿನಲ್ಲಿ ವೀರನು ಶತ್ರುವನ್ನು ಮತ್ತು ಅವರ ಕಡೆಯ ಕುದುರೆಯನ್ನು ಕೊಂದಿದ್ದಾನೆ. ಅಲ್ಲದೆ ಸತ್ತ ಕುದುರೆಯ ಮೇಲೆ ಮತ್ತೊಂದು ಕುದುರೆ ನಿಂತಿರುವಂತೆ ಚಿತ್ರಿಸಲಾಗಿದೆ.''[೨೫]

"ಹಳದೀಪುರದ ಚಂಡೇಶ್ವರ ದೇವಸ್ಥಾನದ ಎದುರಿರುವ ಒಂದು ವೀರಗಂಬ ಬಹಳ ಕಲಾತ್ಮಕವಾಗಿದೆ. ಇಡೀ ಕಂಬವು ಸುಮಾರು ಏಳು ಅಡಿ ಎತ್ತರವಾಗಿದ್ದು, ಚೌಕಾಕಾರವಾಗಿದೆ ನಾಲ್ಕು ಮುಖಗಳನ್ನು ಹೊಂದಿದ್ದು. ಇಡೀ ಕಂಬದಲ್ಲಿ ಇಪ್ಪತ್ತುನಾಲ್ಕು ಶಿಲ್ಪ ಪಟ್ಟಿಕೆಗಳಿವೆ. ಇವುಗಳಲ್ಲಿ ವಾದ್ಯನುಡಿಸುವುದು, ಬಿಲ್ಲ ಪ್ರದರ್ಶನ, ಕೋಟೆಕಾಳಗ, ರಾಮನ ಧನುರ್ವಿದ್ಯಾಪರೀಕ್ಷೆ ವಾಲಿ -ಸುಗ್ರೀವರ ಕಾಳಗ, ಕುದುರೆಯುದ್ಧ, ಗಜಲಕ್ಷ್ಮಿ, ಕುದುರೆ ಮತ್ತು ಸ್ತ್ರೀ ಸಂಭೋಗದ ದೃಶ್ಯ ಹಲವು ವಿವಿಧ ಕಾಮಕೇಳಿಯ ಭಂಗಿಗಳು ಅಪ್ಸರೆಯರ ನಾಟ್ಯದ ದೃಶ್ಯ ಸ್ವರ್ಗಾರೋಹಣ ಹೀಗೆ ಇನ್ನೂ ಹಲವಾರು ವಿವಿಧ ದೃಶ್ಯಗಳನ್ನು ಕೆತ್ತಲಾಗಿದೆ.''[೨೬]

ಮಂಕಿಗ್ರಾಮದ ಬಸ್ತಿ ಎದರು ಎರಡು ವೀರಗಂಬಗಳಿವೆ. ಇವುಗಳಲ್ಲಿ ಒಂದು ವೀರಗಂಬ ಬಹಳ ಕಲಾತ್ಮಕವಾಗಿದೆ. ಆರು ಹಂತಗಳಲ್ಲಿದ್ದು ಪ್ರತಿಯೊಂದು ಹಂತದಲ್ಲೂ ಮೂರು ಪಟ್ಟಿಕೆಗಳನ್ನು ಹೊಂದಿದೆ. ಇಲ್ಲಿಯೂ ಕೂಡ ಬಿಲ್ಲುವಿದ್ಯೆ, ಗಜಕಾಳಗ, ಕುದುರೆ ಕಾಳಗ ಮುಂತಾದ ಶಿಲ್ಪಗಳು ಮತ್ತು ವಿವಿಧ ರೀತಿಯ ರತಿಶಿಲ್ಪಗಳು ಕೆತ್ತನೆಗೊಂಡಿವೆ.

"ಸಸ್ತನಾಪುರದ ಮಾಸ್ತಿಶಿಲ್ಪದಲ್ಲಿ ಅಪರೂಪದ ಸಹಗಮನ ಚಿತ್ರವಿದೆ. ಮಾಸ್ತಿಶಿಲೆಯ ತಳಭಾಗದಲ್ಲಿ ನಾಲ್ಕು ಯಾಳಿಯ ಮುಖಗಳನ್ನು ಚಿತ್ರಿಸಲಾಗಿದೆ. ಅದರ ಮೇಲೆ ವೃತ್ತಾಕಾರದ ಸಮಾಧಿಗುಂಡಿಯಲ್ಲಿ ಮಡಿದ ವೀರ ಮತ್ತು ಅವನ ಹೆಂಡತಿ ಮಲಗಿದ್ದಾರೆ. ಇಲ್ಲಿ ಸತಿಯು ಮಲಗಿದ್ದಲ್ಲಿಯೇ ತನ್ನ ಬಲಗೈಯನ್ನು ಮೇಲೆತ್ತಿ ಜನರನ್ನು ಹರಸುತ್ತಿರುವಳು. ಸಮಾಧಿಯ ಮೇಲ್ಭಾಗದಲ್ಲಿ ಕಂಬದಿಂದ ಹೊರಟ ತೋಳನ್ನು ಬಿಡಿಸಲಾಗಿದೆ. ಕಂಬದ ಹಿಂಭಾಗದಲ್ಲಿ ಕುದುರೆಯ ಮೇಲಿರುವ ವೀರನನ್ನು, ಅವನನ್ನು ಇರಿಯುತ್ತಿರುವ ಇಬ್ಬರು ಶತ್ರುಗಳನ್ನು ಬಿಡಿಸಲಾಗಿದೆ. ನಂತರದ ಹಂತದಲ್ಲಿ ಶಿವಲಿಂಗ ಮತ್ತು ಭಕ್ತಿಯಿಂದ ಕುಳಿತ ಸತಿ-ಪತಿಯನ್ನು ಚಿತ್ರಿಸಲಾಗಿದೆ. ಈ ಶಿಲ್ಪದ ಮತ್ತೊಂದು ವೈಶಿಷ್ಟ್ಯವೆಂದರೆ ವೀರನ ಕುದುರೆಯ ಶಿಲ್ಪದ ಕೆಳಭಾಗದಲ್ಲಿ ಚೌಕಟ್ಟನ್ನು ಬಿಡಿಸುವುದರ ಮೂಲಕ ಕೋಟೆಯನ್ನು ಚಿತ್ರಿಸಲಾಗಿದೆ.''[೨೬]

ಹಿರೇಬಾಸೂರಿನ ಒಂದು ವೀರಮಾಸ್ತಿಕಲ್ಲಿಯ ಶಿಲ್ಪವು ಆಕರ್ಷಕವಾಗಿದ್ದು "ಈ ಶಾಸನಶಿಲೆಯು ಅರ್ಧವರ್ತುಲಾಕಾರವಾಗಿದೆ. ಅಂದರೆ ದುಂಡಾದ ಕಂಬವನ್ನು ಉದ್ದುದ್ದ ಸೀಳಿದಂತೆ ಕಂಡು ಬರುತ್ತದೆ. ಆ ಆಕಾರದಲ್ಲಿಯೇ ಶಿಲ್ಪವನ್ನು ಬಿಡಿಸಲಾಗಿದೆ. ವೀರನು ಶತ್ರುಪಕ್ಷದವನ ಕುದುರೆಯನ್ನು ತಿವಿದಿದ್ದು. ಕುದುರೆಯ ಮೇಲಿರುವವನೂ ಕೂಡ ವೀರನಿಗೆ ಈಟಿಯಿಂದ ತಿವಿದಿದ್ದಾನೆ."[೨೮] ಇಂತಹ ಉಲ್ಲೇಖಗಳು ಕುದುರೆಯ ವೀರತ್ವಕ್ಕೆ ಸಾಕ್ಷಿಯಾಗಿವೆ.

"ತವಂದಿ ಗ್ರಾಮದಲ್ಲಿ ದೊರೆತ ಮೂರು ಹಂತದ ಮಾಸ್ತಿಶಿಲೆ ಬಹಳ ಅಪರೂಪವಾದುದಾಗಿದ್ದು ಅದರಲ್ಲಿ ಏಳು ಜನ ಸತಿಯರು ಮಹಾಸತಿಯರಾದ ವಿಷಯ ತಿಳಿಸುವ ಶಿಲ್ಪವಿದೆ. ಮೊದಲ ಹಂತದಲ್ಲಿ ಬಲಗಡೆ ವೀರನು ಕುದುರೆಯ ಮೇಲೆ ಯುದ್ಧಕ್ಕೆ ಹೊರಟಿದ್ದು ಅವನ ಹಿಂದೆ ಒಬ್ಬ ಛತ್ರಿ ಹಿಡಿದಿದ್ದಾನೆ. ಎಡಭಾಗದಲ್ಲಿ ವೀರ ಕುದುರೆಯಿಂದ ಇಳಿದು ಶತ್ರುವಿನ ಕುತ್ತಿಗೆಯನ್ನು ಕತ್ತರಿಸುತ್ತಿದ್ದಾನೆ. ಎರಡನೆಯ ಹಂತದಲ್ಲಿ ಏಳು ಜನ ಸತಿಯರು ಏಳು ಕುದುರೆಗಳ ಮೇಲೆ ತಮ್ಮ ಎರಡೂ ಕೈಗಳನ್ನು ಮೇಲಕ್ಕೆತ್ತಿಕೊಂಡು ಮೆರವಣಿಗೆ ಹೊರಟಿದ್ದು, ಎಲ್ಲರೂ ಒಂದು ಕೈಯಲ್ಲಿ ಕನ್ನಡಿ ಹಿಡಿದಿದ್ದಾರೆ. ಅದರ ಮುಂದುಗಡೆ ಏಳು ಜನ ಸತಿಯರು ಕುದುರೆಯಿಂದಿಳಿದು ಉರಿಯುತ್ತಿರುವ ಚಿತೆಗೆ ಬೀಳಲು ಓಡಿ ಬರುತ್ತಿರುವಂತೆ ಚಿತ್ರಿಸಲಾಗಿದೆ."[೨೯] ದಳವಾಯಿ ಕೋಡಿಹಳ್ಳಿಯ ಒಂದು ವೀರಗಲ್ಲಿನಲ್ಲಿ ಕುದುರೆಯ ಮೇಲೆ ಕುಳಿತ ವೀರರು ಪಾದವನ್ನೂ ಮುಚ್ಚುವಂತೆ ಕಚ್ಚೆಯನ್ನು ಉಟ್ಟಿದ್ದು ಪೂರ್ಣತೋಳಿನ ಅಂಗಿಯನ್ನು ಧರಿಸಿ ಯುದ್ಧಕ್ಕೆ ಹೊರಟಿದ್ದಾರೆ. "ರೇಣುಮಾಕಲಹಳ್ಳಿಯ ಕುದುರೆಗಾಳಗದ ವೀರಗಲ್ಲಿನಲ್ಲಿ ವೀರನು ಧರಿಸಿರುವ ಕಚ್ಚೆಯು ಮಲ್ಲಗಚ್ಚೆಯಂತಿದೆ. ಮುಂಭಾಗ ಹಾಗೂ ಸೊಂಟದ ಎರಡೂ ಬದಿಗಳಲ್ಲಿ ಕುಂಚಗಳು ಸುಂದರವಾಗಿ ನೇತಾಡುತ್ತಿವೆ. ಪೂರ್ಣತೋಳಿನ ಅಂಗಿಯನ್ನು ಧರಿಸಿರುವ ವೀರನು ಎದೆಗೆ ಅಡ್ಡಪಟ್ಟಿಗಳನ್ನು ಬಿಗಿದುಕೊಂಡಿದ್ದಾನೆ. ಈ ರೀತಿಯ ಚಿತ್ರಣ ಬಹಳ ಅಪರೂಪವಾದುದು."[೩೦]

'ಗೋಖಲೆ ಸಾರ್ವಜನಿಕ ಸಂಸ್ಥೆ ಬೆಂಗಳೂರು ಇಲ್ಲಿರುವ ವೀರಗಲ್ಲಿನಲ್ಲಿ ಕೋಟೆಯನ್ನು ವೃತ್ತಾಕಾರದಲ್ಲಿ ಚಿಕ್ಕದಾಗಿ ಶಾಸನದ ಒಂದು ಮೂಲೆಯಲ್ಲಿ ಬಿಡಿಸಲಾಗಿದೆ. ಕೋಟೆಯ ಹೊರಭಾಗದಲ್ಲಿಯೂ ಯುದ್ಧ ನಡೆಯುತ್ತಿದೆ. ವೀರನು ಕೋಟೆಯ ಸಂರಕ್ಷಣಾ ಪಡೆಯವರ ಕುದುರೆಯೊಂದಕ್ಕೆ ಕತ್ತಿಯಿಂದ ತಿವಿದಿದ್ದಾನೆ. ಕುದುರೆ ಇವನ ಹೊಡೆತ ತಾಳಲಾರದೆ ಹಿಂದಕ್ಕೆ ಹೊರಳಿದೆ. ಇಲ್ಲಿನ ಕೋಟೆಗೋಡೆಯ ತೆನೆಗಳನ್ನು ವೃತ್ತಾಕಾರವಾಗಿ ಸೂಚಿಸಲಾಗಿದೆ."[೩೧]

"ಹಾನುಗಲ್ಲಿನ ವೀರಗಲ್ಲಿನಲ್ಲಿ ಎತ್ತರವಾದ ಗೋಡೆಯ ಕೋಟೆಯ ಚಿತ್ರಣವಿದೆ. ಕೋಟೆಯ ಒಳಗೆ ಮೊದಲ ಸಾಲಿನಲ್ಲಿ ಭರ್ಜಿಯವರು, ಎರಡನೇ ಸಾಲಿನಲ್ಲಿ ಕತ್ತಿಯವರು, ಮೂರನೇ ಸಾಲಿನಲ್ಲಿ ಬಿಲ್ಲುಗಾರರೂ ನಿಂತಿದ್ದಾರೆ. ಬಾಣಗಳನ್ನು ಪ್ರಯೋಗಿಸುತ್ತಿರುವ ಸೈನಿಕರ ಮುಂದೆ ಕುದುರೆಯ ಮೇಲೆ

ಕುಳಿತ ಯೋಧನೊಬ್ಬನು ವೀರನಿಗೆ ಶರಣಾಗತನಾಗಿ ತನ್ನ ಕೈಯನ್ನು ಜೋಡಿಸಿ ತಲೆ ಮೇಲಿಟ್ಟುಕೊಂಡಿದ್ದಾನೆ. ಕುದುರೆಯ ಮೇಲೆ ಕುಳಿತ ಮತ್ತೊಬ್ಬನು ತನ್ನ ಕತ್ತಿಯನ್ನು ಅಡ್ಡಡ್ಡವಾಗಿ ಮೇಲಕ್ಕೆ ಎತ್ತಿಹಿಡಿದು ಶರಣಾಗಿದ್ದಾನೆಂದು ಸೂಚಿಸುತ್ತಿರುವನು. ಈ ಚಿತ್ರಣವು ಕೋಟೆಯಲ್ಲಿದ್ದವರು ಶರಣಾಗುತ್ತಿದ್ದಾರೆಂದು ತಿಳಿಸುತ್ತದೆ.”[೩೨] ಹಾನಗಲ್ಲಿನ ವೀರಗಲ್ಲಿನಲ್ಲಿ ಮೂರನೇ ಹಂತದ ಕೆಳಪಟ್ಟಿಯಲ್ಲಿ ಕೋಟೆಯ ತೆನೆಗಳನ್ನು ಚಿತ್ರಿಸಲಾಗಿದೆ. ಕೆಳಹಂತದಲ್ಲಿ ಗಜಯುದ್ಧ, ಎರಡನೆ ಹಂತದಲ್ಲಿ ಅಶ್ವಯುದ್ಧ, ಮೂರನೇ ಹಂತದಲ್ಲಿ ಕೋಟೆಯನ್ನು ಚಿತ್ರಿಸಿ ಒಳಗಡೆ ಸೈನಿಕರು ಯುದ್ಧ ಸನ್ನದ್ಧರಾಗಿ ಕಾಳಗವನ್ನು ನೋಡುತ್ತ ನಿಂತಿದ್ದು ಕಂಡುಬರುತ್ತದೆ.

“ಎಲೆಬೇತೂರಿನ ಒಂದು ವೀರಗಲ್ಲಿನ ಹೋರಾಟದ ಹಂತದಲ್ಲಿ ಪಕ್ಕ ಮತ್ತು ಮೇಲಿನ ಭಾಗದ ಪಟ್ಟಿಯಲ್ಲಿ ಕೋಟೆಯ ತೆನೆಗಳನ್ನು ಬಿಡಿಸಲಾಗಿದೆ. ಎರಡೂ ಪಕ್ಷದವರಿಗೂ ಘೋರವಾದ ಕದನ ನಡೆಯುತ್ತಿದೆ. ಶತ್ರುಪಕ್ಷದ ಕುದುರೆಗೆ ಈಟಿ ಚುಚ್ಚಿಕೊಂಡಿದ್ದು ಕುದುರೆ ಹಿಂದಕ್ಕೆ ತಿರುಗುತ್ತಿದೆ. ಕುದುರೆಯ ಮೇಲೆ ಕುಳಿತ ಯೋಧ ಕೈಯಲ್ಲಿರುವ ಈಟಿಯನ್ನು ಗುರಿಯಿಟ್ಟು ಶತ್ರುಗಳತ್ತ ಎಸೆಯುತ್ತಿದ್ದಾನೆ.”[೩೩]

“ಕೋಲಾರಮ್ಮ ದೇವಾಲಯದಲ್ಲಿರುವ ವೀರಗಲ್ಲಿನಲ್ಲಿ ವೀರನೊಬ್ಬನು ಕುದುರೆಯಿಂದ ಇಳಿದು ನಿಂತು ಆನೆಯ ಜೊತೆ ಹೊರಾಡುತ್ತಿರುವ ಚಿತ್ರವಿದೆ. ದೊಡ್ಡ ಉಳ್ಳೂರ್ತಿಯ ವೀರಗಲ್ಲೊಂದರಲ್ಲಿ ಕುದುರೆಯ ಮೇಲೆ ಕುಳಿತ ವೀರನು ಆನೆಗಳೊಂದಿಗೆ ಹೋರಾಡುತ್ತಿದ್ದಾನೆ. ವೀರನ ಕುದುರೆಯು ಎಗರಿ ಒಂದು ಆನೆಯ ನೆತ್ತಿಗೆ ಕಾಲಿನಿಂದ ಒದೆಯುತ್ತದೆ. ಇದರಿಂದ ಕಂಗಾಲಾದ ಒಂದು ಆನೆ ತನ್ನ ಮುಂಗಾಲುಗಳನ್ನು ನೆಲಕ್ಕೆ ಊರಿ ತಲೆಯನ್ನು ಕೆಳಕ್ಕೆ ಬಗ್ಗಿಸಿದೆ. ಮತ್ತೊಂದು ಆನೆ ಹೆದರಿ ಹಿಂತಿರುಗುತ್ತಿದೆ. ಈ ಶಿಲ್ಪದಲ್ಲಿ ವೀರನ ಕುದುರೆಯನ್ನು ಆನೆಗಿಂತಲೂ ದೊಡ್ಡದಾಗಿ ಚಿತ್ರಿಸಲಾಗಿದೆ. ಇದೇ ಗ್ರಾಮದ ಮತ್ತೊಂದು ವೀರಗಲ್ಲಿನಲ್ಲಿ ಕುದುರೆಯ ಮೇಲೆ ಕುಳಿತ ವೀರನು ಆನೆಯೊಂದಿಗೆ ಹೋರಾಡುತ್ತಿರುವ ಶಿಲ್ಪವಿದೆ. ಆನೆಯ ಮೇಲಿನ ಯೋಧರು ಪ್ರಯೋಗಿಸಿರುವ ಬಾಣಗಳು ವೀರನ ಕುದುರೆಯ ಕುತ್ತಿಗೆಗೆ ಸಾಲಾಗಿ ನಾಟಿಕೊಂಡಿವೆ. ಕುದುರೆ ಮುಂಗಾಲುಗಳನ್ನೆತ್ತಿ ನಿಂತಿದ್ದು”[೩೪] ಕಂಡುಬರುವ ಚಿತ್ರವಿದೆ.

ಶ್ರವಣಬೆಳಗೊಳದ ಒಂದು ವೀರಗಲ್ಲಿನಲ್ಲಿ ಸಾವಿಯಬ್ಬೆ ಎಂಬುವವಳು ಆನೆಯೊಂದಿಗೆ ಹೋರಾಡುತ್ತಿರುವ ಶಿಲ್ಪವಿದೆ. ಶಾಸನ ಶಿಲ್ಪದಲ್ಲಿ ಕುದುರೆಯ ಮೇಲೆ ಕುಳಿತು ಆನೆಯೊಂದಿಗೆ ಹೋರಾಡುತ್ತಿರುವ ವಿವರವಿದೆ. ಕುದುರೆಯ ಮೇಲೆ ಕುಳಿತಿರುವ ಮಹಿಳೆಯೇ ಸಾವಿಯಬ್ಬೆ. ಕುದುರೆ ಮತ್ತು ಆನೆ ಎರಡೂ ಮುಂಗಾಲುಗಳನ್ನೆತ್ತಿ ಹೋರಾಡುತ್ತಿವೆ. ಆನೆಯೊಂದಿಗೆ ಹೋರಾಡುತ್ತಿರುವ ಮಹಿಳೆಯ ಶಿಲ್ಪವುಳ್ಳ ಏಕೈಕ ವೀರಗಲ್ಲು ಇದು.”[೩೫]

“ಆನೇಕಲ್ಲಿನ ಒಂದು ವೀರಗಲ್ಲಿನಲ್ಲಿ ಕುದುರೆಯ ಮೇಲೆ ಕುಳಿತ ರಾಜ ಪ್ರಮುಖನೊಬ್ಬನು ಆನೆಯನ್ನು ಎದುರಿಸುತ್ತಿದ್ದಾನೆ. ವೀರಗಲ್ಲಿನಲ್ಲಿ ಆನೆಯ ಅರ್ಧಭಾಗವನ್ನು ಮಾತ್ರ ಚಿತ್ರಿಸಲಾಗಿದೆ. ಅನೇಕ ವೀರಗಲ್ಲುಗಳಲ್ಲಿ ಆನೆಯನ್ನು ವೀರನಿಗಿಂತ, ವೀರನ ಕುದುರೆಗಿಂತ ಬಹಳ ಸಣ್ಣದಾಗಿ ಚಿತ್ರಿಸಲಾಗಿದೆ. ಇದು ವೀರನ ಶೌರ್ಯ, ಅವನ ಕುದುರೆಯ ಚಾತುರ್ಯಕ್ಕೆ ಹೆಚ್ಚು ಮಹತ್ವ ನೀಡುವ ತಂತ್ರವಾಗಿದೆಯಷ್ಟೇ. ಇಲ್ಲಿ ಬಲಶಾಲಿಯಾದ ಆನೆಯನ್ನು ಕೊಲ್ಲುವ ಅಥವಾ ಓಡಿಸುವ ಕ್ರಿಯೆಗೆ ಮಾತ್ರ ಮಹತ್ವ ನೀಡಲಾಗಿದೆ.”[೩೬]

ಕೆ.ಆರ್.ಐ. ನಲ್ಲಿರುವ ಒಂದು ವೀರಗಲ್ಲಿನಲ್ಲಿ ಬಿಜ್ಜಳ ಮಹಾರಾಜನು ಆನೆಯ ಮೇಲೆ ಕುಳಿತು ಹೋರಾಡುತ್ತಿರುವ ದೃಶ್ಯವಿದ್ದು, ಕೇತನಾಯಕನು ಬಿಜ್ಜಳನ ವಿರುದ್ಧ ಹೋರಾಡಿ ಮಡಿದ ವಿಷಯವನ್ನು ಈ ಶಾಸನ ತಿಳಿಸುತ್ತದೆ. ಇಲ್ಲಿನ ಆನೆಯನ್ನು ಮಾವುತ ನಡೆಸುತ್ತಿದ್ದು, ಅವನ ಹಿಂದೆ ಪಲ್ಲಕ್ಕಿಯಲ್ಲಿ ಬಿಜ್ಜಳ ಕುಳಿತುಕೊಂಡಿದ್ದಾನೆ. ಅವನ ಕೈಯಲ್ಲಿ ಈಟಿಯನ್ನು ಹಿಡಿದು ಶತ್ರುವಿನ ಕಡೆ ಎಸೆಯಲು ಸಿದ್ಧನಾಗಿದ್ದಾನೆ. ಆನೆಯ ಮುಂಭಾಗದಲ್ಲಿರುವ ಕುದುರೆಗಳೊಂದಿಗೆ ವೀರನೊಬ್ಬನು ಕತ್ತಿ- ಗುರಾಣಿಗಳನ್ನು ಹಿಡಿದು ಹೋರಾಡುತ್ತಿದ್ದಾನೆ. ಹಾನಗಲ್‌ನ ಒಂದು ವೀರಗಲ್ಲಿನಲ್ಲಿ ಕುದುರೆ ಮೇಲಿನ ವೀರನು ಎರಡು ಆನೆಗಳ ಜೊತೆ ಹೋರಾಡುತ್ತಿದ್ದಾನೆ ಎಂಬುದು ವಿಧಿತವಾಗುತ್ತದೆ.

“ದೊಡ್ಡ ಗದ್ದವಳ್ಳಿಯ ಒಂದು ವೀರಗಲ್ಲಿನ ಕೆಳಹಂತದಲ್ಲಿ ಎರಡು ಆನೆಗಳ ಚಿತ್ರಣವಿದ್ದು, ಅದರ ಮೇಲೆ ಇಬ್ಬರು ವೀರರು ಕುಳಿತಿರುವರು. ಎದುರುಗಡೆಯಲ್ಲಿ ಕುದುರೆ ಮೇಲೆ ಕುಳಿತ ವ್ಯಕ್ತಿಯೊಬ್ಬ ಆನೆಯ ಮೇಲಿರುವವರಿಗೆ ಕೈ ಮುಗಿಯುತ್ತಿದ್ದಾನೆ. ಇದು ನಾವು ಶರಣಾಗಿದ್ದೇವೆ ಎಂಬುದರ ಸೂಚನೆಯಾಗಿದೆ.”[೩೭]

ಕುದುರೆ ಕಾಳಗ ಶಿಲ್ಪ : ಪ್ರಾಚೀನ ಕರ್ನಾಟಕದ ಇತಿಹಾಸ ಮತ್ತು ಸಾಹಿತ್ಯವನ್ನು ಅನುಲಕ್ಷಿಸಿದಾಗ ನಮಗೆ ಯುದ್ಧ ಕಲೆಯಲ್ಲಿ ಕುದುರೆಗಳಿಗೆ ಹೆಚ್ಚಿನ ಮಹತ್ವದ ಸ್ಥಾನವಿತ್ತು ಎಂಬುದು ಪ್ರಮುಖವಾದ ಅಂಶವಾಗಿದೆ. ಯುದ್ಧದಲ್ಲೇ ಅಲ್ಲದೆ ಸಾರಿಗೆ ವಾಹನವಾಗಿಯೂ ಕೂಡ ಕುದುರೆ ಬಹಳ ಜನಪ್ರಿಯವಾದ ಪ್ರಾಣಿ ಇದಕ್ಕೆ ಸಾಕ್ಷಿ ಅದರ ವೇಗದ ಓಟ ಹಾಗೂ ಸಾಧು ಗುಣವೇ ಕಾರಣ. ‘ಅಮುಕ್ತಮೌಲ್ಯದ’ ಕೃತಿಯಲ್ಲಿ ರಾಜ್ಯಕ್ಕೆ ಆನೆ ಕುದುರೆಗಳ ಅವಶ್ಯಕತೆಯನ್ನು ಕುರಿತು “ಆನೆ ಕುದುರೆಗಳನ್ನು ಕೊಳ್ಳಲು ವೆಚ್ಚ ಮಾಡುವ ಹಣವನ್ನು ಎಂದೂ ಖರ್ಚೆಂದು ಭಾವಿಸುವಂತಿರಲಿಲ್ಲ. ರಾಜನಾದವನು ತನ್ನ ಆದಾಯದಲ್ಲಿ ಸೇನಾವ್ಯವಸ್ಥೆಗೆಂದೇ ಅರ್ಧ ಹಣವನ್ನು ಖರ್ಚು ಮಾಡಬೇಕು. ಅದರಲ್ಲಿ ಆನೆ ಕುದುರೆಗಳ ಮೇಲೆ ಮಾಡುವ ಖರ್ಚು ಹೆಚ್ಚಿನದು ಎಂದು ಹೇಳಿದೆ. ಈ ಒಂದು ಹೇಳಿಕೆಯಿಂದಲೇ ಯುದ್ಧಗಳಲ್ಲಿ ಕುದುರೆಯ ಸ್ಥಾನಮಾನವನ್ನು ಅರಿಯಬಹುದು. ಅನೇಕ ಶಾಸನಗಳಲ್ಲಿ ಕುದುರೆ ಕಾಳಗದ ವರ್ಣನೆ ಬರುತ್ತದೆ. ನೂರಾರು ವೀರಗಲ್ಲುಗಳ ಶಿಲ್ಪಗಳಲ್ಲಿಯೂ ಸಹ ಕುದುರೆ ಕಾಳಗದ ಚಿತ್ರಣ

ಸೊಗಸಾಗಿ ಮೂಡಿ ಬಂದಿದೆ. ಈ ರೀತಿಯ ಕುದುರೆಕಾಳಗದ ಚಿತ್ರಣ ನೀಡುವ ಶಾಸನಗಳನ್ನಾಧರಿಸಿ ಕುದುರೆ ಕಾಳಗದ ಶಿಲ್ಪಗಳನ್ನು ವರ್ಗೀಕರಿಸಲಾಗಿದೆ.

೧. ಕುದುರೆ ಪ್ರಯಾಣ ಶಿಲ್ಪ

೨. ಶತ್ರುಪಕ್ಷದ ಕುದುರೆ ಶಿಲ್ಪ

೩. ವೀರನ ಪಕ್ಷದ ಕುದುರೆ ಶಿಲ್ಪ

೪. ಉಭಯ ಪಕ್ಷಗಳ ಕುದುರೆ ಶಿಲ್ಪ"[೩೮]

ಹೀಗೆ ನಾಲ್ಕು ಭಾಗಗಳಲ್ಲಿ ವಿಂಗಡಿಸಿ ಅಂತರಶಿಸ್ತೀಯ ಅಧ್ಯಯನ ಮಾಡುವುದರಿಂದ ಒಂದು ಪ್ರಾಣಿಯ ಬಗ್ಗೆ ಅಂದಿನ ಕಾಲದ ಜನರಲ್ಲಿ ಯಾವ ರೀತಿ ಪ್ರೀತಿ ಮತ್ತು ಮಮತೆ ಇತ್ತು. ಇಂದು ಅದರ ಪರಿಣಾಮ ಯಾವ ರೀತಿಯಲ್ಲಿ ಬದಲಾವಣೆಗೊಂಡಿದೆ ಎಂಬುದರ ಸ್ಪಷ್ಟ ಚಿತ್ರಣ ದೊರೆತಂತೆ ಆಗುತ್ತದೆ. ಯಾವುದೇ ಬಗೆಯ ಅಧ್ಯಯನಗಳು ಹೆಚ್ಚು ಪರಿಣಾಮಕಾರಿಯಾಗಲು ಅದರ ಕೂಲಂಕುಶವಾದ ಅಧ್ಯಯನ, ತಿಳುವಳಿಕೆ, ಆಸಕ್ತಿ, ಅಭಿರುಚಿ ಇವುಗಳ ಪರಸ್ಪರ ಹೊಂದಾಣಿಕೆ, ಅದರ ಅರಿವು ಅಗತ್ಯವಾಗುತ್ತದೆ. ಆದ್ದರಿಂದ ಒಂದು ವಿಷಯವನ್ನು ಚರ್ಚಿಸುವ ಅದರ ಮುಖ್ಯ ಅಂಶಗಳತ್ತ ಕಾಳಜಿ ವಹಿಸಿ ಅಧ್ಯಯನ ಮಾಡುವ ಅವಶ್ಯಕತೆಯಿದೆ. ಇದಕ್ಕೆ ಪುಷ್ಠಿ ವಿಂಗಡನೆ ಕ್ರಮಬದ್ಧವಾದ ಪ್ರಮುಖ ಅಂಶಗಳು ಕಾರಣವಾಗುತ್ತವೆ.

ಕುದುರೆ ಪ್ರಯಾಣ ಶಿಲ್ಪ : ಕುದುರೆ ಪ್ರಯಾಣ ಶಿಲ್ಪ ಎಂದರೆ ಇಂತಹ ಶಿಲ್ಪದಲ್ಲಿ ಹೋರಾಟದ ದೃಶ್ಯವಿರುವುದಿಲ್ಲ. ಇಲ್ಲಿ ವೀರನು ಕುದುರೆಯ ಮೇಲೆ ಕುಳಿತ ಚಿತ್ರ ಮಾತ್ರ ಕಂಡು ಬರುತ್ತದೆ. ಇವು ಯುದ್ಧಕ್ಕೆ ಹೊರಟ ಅಥವಾ ಯುದ್ಧದಿಂದ ಮರಳಿದ ವಿಷಯವನ್ನು ಸೂಚಿಸುವ ಚಿತ್ರಗಳಾಗಿರಬಹುದು. ಹಾದ್ರಿಹಳ್ಳಿಯ ಒಂದು ಶಾಸನಶಿಲ್ಪದಲ್ಲಿ ವೀರನು ಕುದುರೆಯ ಮೇಲೆ ಕುಳಿತು ಯುದ್ಧಕ್ಕೆ ಹೊರಟಿದ್ದು; ಅವನಿಗೆ ಹಿಂದಿನಿಂದ ಒಬ್ಬನು ಛತ್ರಿಯನ್ನು ಹಿಡಿದಿದ್ದಾನೆ. ಕುದುರೆಯ ಮುಂದೆ ಸೈನಿಕನೊಬ್ಬನು ದೊಡ್ಡದಾದ ಬಿಲ್ಲನ್ನು ಹಿಡಿದು ಹೊರಟಿದ್ದಾನೆ. ಕುದುರೆಗೆ ಭದ್ರವಾದ ಕಡಿವಾಣವನ್ನು ಹಾಕಿದ್ದು, ಅದನ್ನು ವೀರನು ಎಡಗೈಯಲ್ಲಿ ಹಿಡಿದು ಬಲಗೈಯಲ್ಲಿ ಕತ್ತಿ ಹಿಡಿದು ಹೊರಟಿದ್ದಾನೆ. ಈ ಚಿತ್ರ ಶೌರ್ಯದ ಸಂಕೇತ. ಅರಸೊತ್ತಿಗೆಯ ಕಾಲ ಎಂದು ಪ್ರಾರಂಭವಾಗಿ ಎಂದು ಮುಗಿಯಿತೋ ಅಂದಿನವರೆಗೆ ಕೆಚ್ಚೆದೆಯ ವೀರರ ದಂಡು ನಮ್ಮಲ್ಲಿ ಇತ್ತು. ಇಂದು ಅದು ಪ್ರಜಾತಂತ್ರ ವ್ಯವಸ್ಥೆಯ ಬದಲಾವಣೆಯಿಂದ ತಂತ್ರಗಾರಿಕೆ, ಬದುಕಿನಲ್ಲಿ ಬದಲಾವಣೆಗೊಂಡಿದೆ.

"ಸಂಗೂರಿನ ಒಂದು ವೀರಗಲ್ಲಿನಲ್ಲಿ ಕುದುರೆ ಮೇಲೆ ಕುಳಿತ ವೀರನ ಚಿತ್ರಮಾತ್ರವಿದ್ದು ಎಡಗೈಯಲ್ಲಿ ಕುದುರೆಯ ಲಗಾಮು ಹಿಡಿದು ಬಲಗೈಯಲ್ಲಿ ಉದ್ದವಾದ ಈಟಿಯನ್ನು ಹಿಡಿದಿದ್ದಾನೆ. ಕುದುರೆಯ

ಅರ್ಧಭಾಗ ರಕ್ಷಣಾ ಕವಚದಿಂದ ಮುಚ್ಚಿದೆ. ಹಿರೇಕೋಣತಿಯ ಒಂದು ವೀರಗಲ್ಲು ಬಹಳ ವಿಶಿಷ್ಟವಾದ ಕುದುರೆ ಶಿಲ್ಪವನ್ನು ಹೊಂದಿದೆ. ಇದರಲ್ಲಿ ಕುದುರೆಗೆ ಧರಿಸಿರುವ ಕಡಿವಾಣಗಳು ಸ್ಪಷ್ಟವಾಗಿ ಕಾಣುತ್ತಿವೆ. ವೀರನು ಒಂದು ಕೈಯಲ್ಲಿ ಲಗಾಮನ್ನೂ, ಇನ್ನೊಂದು ಕೈಯಲ್ಲಿ ಕತ್ತಿಯನ್ನು ಹಿಡಿದಿರುವನು. ಸೇವಕರು ಕುದುರೆಯ ಮುಂದೆ ಧ್ವಜವನ್ನು ಹಿಂದೆ ರಾಜ ಛತ್ರಿಯನ್ನೂ ಹಿಡಿದು ಹೊರಟಿದ್ದಾರೆ. ಇದು ಬಹಳ ಅಪರೂಪವಾದ ಚಿತ್ರಣವಾಗಿದೆ. ಶಿಲ್ಪಿಯ ನೈಪುಣ್ಯ ನಮ್ಮನ್ನು ಬೆರಗಾಗಿಸುತ್ತದೆ. ಕುದುರೆಯ ಜನನೇಂದ್ರೀಯವನ್ನು ಸಹ ಶಿಲ್ಪಿ ಚಿತ್ರಿಸಿದ್ದಾನೆ. ಆನೆಗುಂದಿಯ ಬಿಳಿ ಹುಟ್ಟು ಬಂಡೆಯ ಮೇಲೆ ಕುದುರೆಯೊಂದು ಹೊರಟ ದೃಶ್ಯವನ್ನು ಕೆತ್ತಲಾಗಿದೆ. ಕುದುರೆಯ ಹಿಂದೆ ಹಾಗೂ ಮುಂದೆ ಇಬ್ಬರು ಸೈನಿಕರು ಕತ್ತಿಯನ್ನು ಹಿಡಿದು ಮುನ್ನುಗ್ಗುತ್ತಿರುವವರು. ಇಂತಹ ಶಿಲ್ಪಗಳನ್ನು ಸ್ಥಳೀಯರು ಕುಮಾರರಾಮ ಎಂದು ಹೆಸರಿಸುವರು."[೩೯] ಇದಕ್ಕೆ ಕಾರಣ ವೀರತನವನ್ನು ತೋರ್ಪಡಿಸಿದ ರಾಜ ಮತ್ತು ಕುದುರೆ ಪರಾಕ್ರಮದ ನೀತಿಯೇ ಸ್ಥಳೀಯ ಜನಸಮುದಾಯದ ನಂಬಿಕೆಗೆ ಕಾರಣವಾಗಿವೆ.

ಶತ್ರುಪಕ್ಷದ ಕುದುರೆಶಿಲ್ಪ : ಈ ಶಿಲ್ಪಗಳಲ್ಲಿ ವೀರನು ಯುದ್ಧರಂಗದಲ್ಲಿ ನೆಲದ ಮೇಲೆ ನಿಂತು ಹೋರಾಡುತ್ತಿರುವಂತೆ, ಎದುರಾಳಿಗಳು ಕುದುರೆ ಮೇಲಿನಿಂದ ಹೋರಾಡುತ್ತಿರುವಂತೆ ಚಿತ್ರಿಸಲಾಗಿದೆ. ದೊಡ್ಡಹುಲ್ಲೂರಿನ ಒಂದು ವೀರಗಲ್ಲಿನಲ್ಲಿ ವೀರನು ಕುದುರೆಯಿಂದ ಇಳಿದು ನೆಲದ ಮೇಲೆ ನಿಂತು ಹೋರಾಡುತ್ತಿರುವನು. ಎದುರು ಪಕ್ಷದವನು ಈಟಿಯಲ್ಲಿ ಕುದುರೆಯನ್ನು ತಿವಿಯಲು ರಭಸದಿಂದ ನುಗ್ಗುತ್ತಿದ್ದಾನೆ. ಬಾದಾಮಿಯ ತುರುಗೋಳ್ ವೀರಗಲ್ಲಿನಲ್ಲಿ ಶತ್ರುಪಕ್ಷದವರು ಮೂರು ಕುದುರೆಗಳ ಮೇಲೆ ವೀರನ ಜೊತೆ ಹೋರಾಡುತ್ತಿದ್ದಾರೆ. ಬೆಟಗೇರಿಯ ಒಂದು ವೀರಗಲ್ಲಿನಲ್ಲಿ ವೀರನ ಶೌರ್ಯಕ್ಕೆ ಹೆದರಿ ಕುದುರೆ ದಳದವರು ಹಿಂದಕ್ಕೆ ತಿರುಗಿ ನಡೆಯುತ್ತಿದ್ದು, ಕುದುರೆಯು ಹಿಂದಕ್ಕೆ ತಿರುಗಿದೆ. ಕುದುರೆಯ ಮೇಲಿರುವನು ತಲೆಕೆಳಗಾಗಿ ಕೆಳಕ್ಕೆ ಬೀಳುತ್ತಿದ್ದಾನೆ. ಹೆದರಿದ ಸೈನಿಕನೊಬ್ಬನು ಕುದುರೆಯ ಕೆಳಗಡೆ ಬೋರಲಾಗಿ ಮಲಗಿದ್ದಾನೆ. ಅಲ್ಲೇ ಇರುವ ಮತ್ತೊಂದು ವೀರಗಲ್ಲಿನಲ್ಲಿ ವೀರನು ಪ್ರಯೋಗಿಸಿದ ಬಾಣಗಳು ಎದುರು ಪಕ್ಷದ ಕುದುರೆಯ ಹಣೆಗೆ ಚುಚ್ಚಿಕೊಂಡಿವೆ. ಕುದುರೆ ಮುಂಗಾಲುಗಳನ್ನೆತ್ತಿ ಚೀರುತ್ತಿದೆ. ಕಲಕೇರಿಯ ಒಂದು ವೀರಗಲ್ಲಿನಲ್ಲಿ ವೀರನು ಎದುರು ಪಕ್ಷದ ಎರಡು ಕುದುರೆಗಳು ಹಿಂದಕ್ಕೆ ತಿರುಗಿವೆ. ಸಂಗೂರಿನ ಒಂದು ವೀರಗಲ್ಲಿನಲ್ಲಿ ವೀರನು ಎದುರು ಪಕ್ಷದ ಎರಡು ಕುದುರೆಗಳಿಗೆ ಕತ್ತಿಯಿಂದ ತಿವಿಯಲು ಮುನ್ನುಗ್ಗುತ್ತಿದ್ದಾನೆ. ಕುದುರೆಗಳು ಕೆಳಗೆ ಬಿದ್ದಿರುವ ಹೆಣದ ಮೇಲೆ ಹತ್ತಿ ನಿಂತಿವೆ. ಮಾವಳಿಯ ಒಂದು ವೀರಗಲ್ಲಿನಲ್ಲಿ ವೀರನು ದೊಡ್ಡದಾದ ಕತ್ತಿಯಿಂದ ಶತ್ರುಪಕ್ಷದವರ ಒಂದು ಕುದುರೆಯ ನೆತ್ತಿಗೆ ತಿವಿದಿದ್ದಾನೆ. ಕುದುರೆ ಕೆಳಕ್ಕೆ ಬಿದ್ದು ಚಡಪಡಿಸುತ್ತಿದೆ. ಅಬ್ಬಲೂರಿನ ಒಂದು ವೀರಗಲ್ಲಿನಲ್ಲಿ ವೀರನು ಒಂದು ಕುದುರೆಯ ಕುತ್ತಿಗೆಯನ್ನು ತಿವಿದಿದ್ದಾನೆ. ಅರ್ಧಕತ್ತಿ ಕುದುರೆಯ ಕುತ್ತಿಗೆಯ ಒಳಕ್ಕೆ ತೂರಿಕೊಂಡಿದೆ. ಇಲ್ಲೂ ಸಹ ಕುದುರೆಗಳು ವೀರನಿಂದ ಹತರಾದವರ ಹೆಣಗಳ ಮೇಲೆ ನಿಂತಿವೆ.

"ಕೆರೂರಿನ ವೀರಗಲ್ಲಿನಲ್ಲಿ ವೀರನಿಂದ ಸೋತ ಸೈನಿಕರು ಕುದುರೆಗಳನ್ನು ಹಿಂದಕ್ಕೆ ಓಡಿಸುತ್ತಿದ್ದಾರೆ. ಒಂದು ಕುದುರೆಯ ಕುತ್ತಿಗೆಯನ್ನು ವೀರನು ಕತ್ತರಿಸುತ್ತಿದ್ದಾನೆ. ತಗರೆ, ಹಳೇತಲ್ಲೂರು. ಐಹೊಳೆ, ಕೆಳದಿ ಮೊದಲಾದ ಸ್ಥಳಗಳಲ್ಲಿ. ವೀರಗಲ್ಲುಗಳಲ್ಲಿ ವೀರನು ಕುದುರೆಯನ್ನು ಕತ್ತಿಯಿಂದ ತಿವಿಯುತ್ತಿರುವ ದೃಶ್ಯವಿದೆ. ರೇಣುಮಾಲಕ ಹಳ್ಳಿಯ ಒಂದು ವೀರಗಲ್ಲಿನಲ್ಲಿ ವೀರನು ಈಟಿಯಿಂದ ಕುದುರೆಯನ್ನು ತಿವಿದು ಹಾಗೆಯೇ ಮೇಲಕ್ಕೆ ಎತ್ತಿದ್ದಾನೆ. ಬೇಗದಾಳಿಯ ವೀರಮಾಸ್ತಿಕಲ್ಲಿನಲ್ಲಿ ವೀರನು ಕುದುರೆಯ ಕಾಲಿಗೆ ಕತ್ತಿಯಿಂದ ಹೊಡೆಯುತ್ತಿದ್ದಾನೆ. ದೊಡ್ಡ ಘಟ್ಟದ ವೀರಗಲ್ಲಿನಲ್ಲಿ ವೀರನು ಕುದುರೆಯ ಮೇಲಿರುವವನ ತಲೆಯನ್ನು ಕತ್ತರಿಸಿ ಕೈಯಲ್ಲಿ ಹಿಡಿದಿದ್ದಾನೆ."[೪೦] ಅವನ ಕೃತ್ಯವನ್ನು ಕಂಡು ಇತರರು ಹೆದರಿ ಕೈ ಮುಗಿಯುತ್ತ ಶರಣಾಗತರಾಗಿರುವವರು. ಯುದ್ಧದ ಸಂದರ್ಭದಲ್ಲಿ ಶರಣು ಬಂದವರಿಗೆ ಕ್ಷಮೆ ಇರುವುದು ಯುದ್ಧದ ನಿಯಮ ನೀತಿಗೆ ಸಾಕ್ಷಿಯಾಗಿದೆ.

ವೀರನ ಪಕ್ಷದ ಕುದುರೆಶಿಲ್ಪ : ಈ ಶಿಲ್ಪದಲ್ಲಿ ವೀರನು ಕುದುರೆಯ ಮೇಲೆ ಕುಳಿತಿರುವ ಚಿತ್ರಣವಿದ್ದು, ಶತ್ರುಗಳು ನೆಲದ ಮೇಲೆ ನಿಂತು ಯುದ್ಧ ಮಾಡುತ್ತಿರುವರು. ಹೆಡಗೇನಹಳ್ಳಿಯ ಒಂದು ವೀರಗಲ್ಲಿನಲ್ಲಿ ಕುದುರೆಯ ಮೇಲಿನ ವೀರನು ಕತ್ತಿಯನ್ನು ಹಿಡಿದು ಹಲವಾರು ಶತ್ರುಗಳನ್ನು ಕತ್ತರಿಸಿದ್ದಾನೆ. ಕುದುರೆಯು ಮುಂಗಾಲುಗಳನ್ನು ಎತ್ತಿ ಒಬ್ಬನಿಗೆ ಒದ್ದು ಬೀಳಿಸಿದೆ, ಬಿದ್ದ ರಭಸಕ್ಕೆ ಅವನು ನೋವಿನಿಂದ ಸೊಂಟವನ್ನು ಹಿಡಿದು ಕುದುರೆಯ ಕಡೆಗೆ ನೋಡುತ್ತಿದ್ದಾನೆ. ಬಳ್ಳಿಗಾವಿಯ ಒಂದು ವೀರಗಲ್ಲಿನಲ್ಲಿ ವೀರನು ಕುದುರೆಯ ಮೇಲೆ ಕುಳಿತು ಕತ್ತಿಯಿಂದ ಹೊಡೆಯುತ್ತಿರುವ ಭಂಗಿ ಅಪರೂಪವಾಗಿದೆ. ಎದುರು ಪಕ್ಷದವರು ಇವನಿಂದ ವಿವಸ್ತ್ರರಾಗಿರುವಂತೆ ಕಂಡು ಬರುತ್ತದೆ. ಕುದುರೆಯ ಕಾಲ್ತುಳಿತಕ್ಕೆ ಒಬ್ಬನು ಕೆಳಕ್ಕೆ ಬಿದ್ದು ಮೃತಪಟ್ಟಿದ್ದಾನೆ. ಉಚ್ಚಂಗಿ ದುರ್ಗದಲ್ಲಿರುವ ವೀರಗಲ್ಲಿನಲ್ಲಿ ಕುದುರೆಯು ಶತ್ರುವಿಗೆ ಒದೆಯುತ್ತಿದೆ. ಇತರರು ಅದಕ್ಕೆ ಹೆದರಿ ಪಲಾಯನಗೈದಿದ್ದಾರೆ. ಬಸವನಕಲ್ಲಿನ ಒಂದು ವೀರಗಲ್ಲಿನಲ್ಲಿ ವೀರನು ಕುದುರೆಯಿಂದಿಳಿದು ಶತ್ರುವಿನ ಕುತ್ತಿಗೆಯನ್ನು ಕತ್ತಿಯಿಂದ ಕೊಯ್ಯುತ್ತಿದ್ದಾನೆ. ಕುದುರೆಗಳ ರಕ್ಷಣಾ ಕವಚಕ್ಕೆ ಬಾಣಗಳು ಚುಚ್ಚಿಕೊಂಡಿವೆ. ಹುಲಿಕಲ್ಲಿನ ಒಂದು ವೀರಗಲ್ಲಿನಲ್ಲಿ ವೀರನು ಕುಳಿತಿರುವ ಕುದುರೆಯ ಕಾಲನ್ನು ಶತ್ರುಪಕ್ಷದವನೊಬ್ಬನು ಕತ್ತರಿಸುತ್ತಿದ್ದಾನೆ ಕುದುರೆಯು ಮೈತುಂಬ ಕವಚ ಧರಿಸಿರುವುದರಿಂದ ಬೇರೆ ಮಾರ್ಗವಿಲ್ಲದೆ ಕಾಲನ್ನು ಕತ್ತರಿಸುತ್ತಿರಬಹುದು. ಕುದುರೆಯ ಕಾಲಿಗೆ ಹೊಡೆದು ಬೀಳಿಸಿದರೆ ಸುಲಭವಾಗಿ ಶತ್ರುವನ್ನು ಗೆಲ್ಲಬಹುದೆಂದು ಹೀಗೆ ಮಾಡುತ್ತಿದ್ದರು. ಇಂತಹ ಶಿಲ್ಪ ಕಲೆಯಿಂದ ಕುದುರೆಯ ಶಕ್ತಿ ಮತ್ತು ಅದರ ಎದೆಗಾರಿಕೆ ಎಷ್ಟು ಪ್ರಭಾವಶಾಲಿಯಾಗಿತ್ತು ಎಂಬುದು ವಿಧಿತವಾಗುತ್ತದೆ.

ಉಭಯ ಪಕ್ಷಗಳ ಕುದುರೆ ಶಿಲ್ಪ : ಈ ರೀತಿಯ ಶಿಲ್ಪಗಳಲ್ಲಿ ವೀರ ಹಾಗೂ ವೈರಿಗಳು ಇಬ್ಬರು ಅಥವಾ ಇಬ್ಬರ ಪಕ್ಷದವರೂ ಕುದುರೆಯ ಮೇಲೆ ಕುಳಿತು ಯುದ್ಧ ಮಾಡುತ್ತಿದ್ದಾರೆ. ಈ ಯುದ್ಧಕ್ಕೆ

ಉತ್ತಮ ಉದಾಹರಣೆಯೆಂದರೆ ಶ್ರವಣ ಗುಡಿಯ ವೀರಗಲ್ಲು. ಇದರಲ್ಲಿ ವೀರರಿಗಿಂತ ಕುದುರೆಯೇ ಪ್ರಮುಖವಾಗಿ ಚಿತ್ರಿತವಾಗಿದೆ. ಕೆಳಗೆ ಬಿದ್ದವನನ್ನು ಎರಡು ಕುದುರೆಗಳೂ ಮೆಟ್ಟಿ ನಿಂತಿವೆ. ಕುದುರೆಯ ಮೇಲಿರುವವರಲ್ಲಿ ಒಬ್ಬನು ಕತ್ತಿಯನ್ನು ಮತ್ತೊಬ್ಬನು ಈಟಿಯನ್ನು ಹಿಡಿದು ಹೋರಾಡುತ್ತಿದ್ದಾರೆ. ತಿಳಿವಳ್ಳಿಯ ಕೋಟೆ ಕಾಳಗದ ವೀರಗಲ್ಲಿನ ಕೆಳಹಂತದಲ್ಲಿ ವೀರನು ಪಲ್ಲಕ್ಕಿಯಲ್ಲಿ ಕುಳಿತಿದ್ದರೂ ಎರಡನೇ ಹಂತದಲ್ಲಿ ಕುದುರೆಯ ಮೇಲೆ ಕುಳಿತಿದ್ದಾನೆ. ಕೆಲವು ಕುದುರೆಗಳು ಹೆದರಿ ಹಿಂದಕ್ಕೆ ಓಡುತ್ತಿವೆ. ಹಾನಗಲ್‌ನ ಕೋಟೆಕಾಳಗದ ವೀರಗಲ್ಲೊಂದರಲ್ಲಿ ಉಭಯ ಪಕ್ಷದವರೂ ಕುದುರೆಯ ಮೇಲೆ ಹೋರಾಡುತ್ತಿದ್ದಾರೆ. ಇಲ್ಲಿ ವೀರನು ಕುಳಿತಿರುವ ಕುದುರೆಯನ್ನು ಬೇರೆ ಕುದುರೆಗಳಿಗಿಂತ ದೊಡ್ಡದಾಗಿ ಚಿತ್ರಿಸಲಾಗಿದೆ. ಇದರ ಎದುರು ಬಂದ ಕುದುರೆಯು ಹೆದರಿ ಮುಖವನ್ನು ಹಿಂದಕ್ಕೆ ತಿರುಗಿಸಿಕೊಂಡಿದೆ. ಲಕ್ಷ್ಮೇಶ್ವರದ ಒಂದು ವೀರಗಲ್ಲಿನಲ್ಲಿ ಕುದುರೆಗಳ ಹೋರಾಟಕ್ಕೆ ಸಿಕ್ಕಿ ಇಬ್ಬರು ಮೃತಪಟ್ಟಿದ್ದು, ಕುದುರೆಯ ಮೇಲಿರುವ ಇಬ್ಬರು ಈಟಿಯನ್ನು ಹಿಡಿದು ಹೋರಾಡುತ್ತಿದ್ದಾರೆ. ಒಬ್ಬನ ಮೇಲೆ ಚಿಕ್ಕದಾಗಿ ಛತ್ರಿಯನ್ನು ಬಿಡಿಸಲಾಗಿದೆ. ಇದರಿಂದ ಇವನೇ ವೀರನಿರಬಹುದು.

"ಕೆ.ಆರ್.ನಲ್ಲಿರುವ ಒಂದು ವೀರಗಲ್ಲಿನ ಕುದುರೆಗಾಳದ ಶಿಲ್ಪ ಬಹಳ ಸುಂದರವಾಗಿದೆ. ಈ ವೀರಗಲ್ಲು ಹಿಟ್ಟೆಯನಾಯಕ ಎಂಬುವವನ ಕುದುರೆಗಾಳಗವನ್ನು ವರ್ಣಿಸುತ್ತಿದೆ. ಇಲ್ಲಿ ಅತ್ಯಂತ ಸೂಕ್ಷ್ಮವಾಗಿ ಯುದ್ಧದ ದೃಶ್ಯವನ್ನು ಚಿತ್ರಿಸಲಾಗಿದೆ. ಹುಲಿಕಲ್ಲುವಿನ ವೀರಗಲ್ಲಿನಲ್ಲಿ ಕುದುರೆಯ ಮೇಲೆ ಕುಳಿತು ಈಟಿಯನ್ನು ಪ್ರಯೋಗಿಸುತ್ತಿರುವ ದೃಶ್ಯ ನೈಜವಾಗಿ ಮೂಡಿದೆ. ಕುದುರೆಯ ಮೇಲೆ ಕುಳಿತು ಬಾಣಗಳನ್ನು ಪ್ರಯೋಗ ಮಾಡುತ್ತಿರುವ ಯೋಧರ ಶಿಲ್ಪ ವೀರಗಲ್ಲುಗಳಲ್ಲಿ ಎಲ್ಲಿಯೂ ದೊರೆಯುವುದಿಲ್ಲ ಎಂದು ವಿದ್ವಾಂಸರೊಬ್ಬರು ಅಭಿಪ್ರಾಯಪಟ್ಟಿದ್ದಾರೆ. ಆದರೆ ಕರಡಾಳುವಿನ ವೀರಗಲ್ಲಿನಲ್ಲಿ ಶತ್ರು ಪಕ್ಷದವನೊಬ್ಬನು ಕುದುರೆಯ ಮೇಲಿನಿಂದ ಬಾಣ ಪ್ರಯೋಗಿಸುತ್ತಿರುವ ಚಿತ್ರಣವಿದೆ. ವೀರನು ಈಟಿಯಿಂದ ಅವನಿಗೆ ತಿವಿಯುತ್ತಿದ್ದಾನೆ. ಹೊಸಕೊಪ್ಪದ ಎರಡು ವೀರಗಲ್ಲುಗಳಲ್ಲಿ ವೀರನ ಕಡೆಯವರು ಮತ್ತು ಶತ್ರುವಿನ ಕಡೆಯವರು ಕುದುರೆಗಳ ಮೇಲೆ ಕುಳಿತು ಹೋರಾಡುತ್ತಿದ್ದಾರೆ. ವೀರನು ಮಾತ್ರ ನಿಂತೇ ಹೋರಾಡುತ್ತಿದ್ದಾನೆ.

ಹೀಗೆ ನಾನಾ ರೀತಿಯಾಗಿ ಕುದುರೆಕಾಳಗದ ಶಾಸನ ಶಿಲ್ಪಗಳು ನಮಗೆ ಕಂಡು ಬರುತ್ತವೆ. ಕುದುರೆಗಳನ್ನು ಬೀಳಿಸಲು ಏನೆಲ್ಲಾ ತಂತ್ರಗಳನ್ನು, ಉಪಾಯಗಳನ್ನು ಮಾಡುತ್ತಿದ್ದರೆಂದು ಈ ದಾಖಲೆಗಳಿಂದ ಅರಿಯಬಹುದು. ಕಾಲಿಗೆ ಹೊಡೆದು ಬೀಳಿಸುವುದು, ಕಣ್ಣಿಗೆ ತಿವಿಯುವುದು, ಕುತ್ತಿಗೆಗೆ ಈಟಿಯಿಂದ ಚುಚ್ಚಿ ಕೊಲ್ಲುವುದು. ಹಾಗೆಯೇ ಅವುಗಳ ರಕ್ಷಣೆಗೆ ಮೈಪೂರ್ತಿ ಮುಚ್ಚುವಂತೆ ಲೋಹದ ಕವಚ ಹಾಕುವುದು. ಹಿಂದಿನಿಂದ ದಾಳಿ ಮಾಡುವುದು ಮೊದಲಾದ ಯುದ್ಧ ತಂತ್ರಗಳು ನಮಗೆ ಗೋಚರವಾಗುತ್ತವೆ. ಕುದುರೆಯು ಅರಸೊತ್ತಿಗೆಯ ಸಂಕೇತವಾಗಿಯೂ ನಮ್ಮಲ್ಲಿ ಬಳಕೆಗೊಂಡಿದೆ.

ಅಧಿಕಾರ ಮತ್ತು ಕುದುರೆ ಹಿಂದಿನ ಕಾಲದಲ್ಲಿ ಒಂದಕ್ಕೊಂದು ಪೂರಕವಾಗಿದ್ದವು. ಮಧ್ಯಕಾಲಿನ ಕರ್ನಾಟಕದಲ್ಲಿ ಸೈನಿಕರ ಕುದುರೆಯ ಕಾಲ ಸಪ್ಪಳ ಕೇಳಿದರೆ ಸಾಕು ಸಾಮಾನ್ಯ ಜನರು ಹೆದರಿ ಓಡುತ್ತಿದ್ದರು."[೪೧] ಒಂದು ಪ್ರಾಣಿ ಇಷ್ಟೆಲ್ಲಾ ಸಾಮರ್ಥ್ಯ ಹೊಂದಿರುವುದಕ್ಕೆ ಅದು ತೆಗೆದುಕೊಳ್ಳುವ ಆಹಾರ, ಪರಿಸರ, ಸಾಕುವ ಒಡೆಯನ ಪ್ರಾಮಾಣಿಕತೆ ಮುಂತಾದ ಅಂಶಗಳು ಅದರ ಶ್ರೇಷ್ಠತೆಯನ್ನು ಅಳತೆಗೋಲಿನಿಂದ ಬಿಂಬಿಸಲು ಸಾಧ್ಯತೆಯಿದೆ.

"ಕೆಲವು ವೀರಗಲ್ಲುಗಳಲ್ಲಿ ಭರ್ಜಿಯನ್ನು ಎಲೆಯ ಆಕಾರದ ವಸ್ತುವಿನಿಂದ ಅಲಂಕರಿಸಲಾಗಿದೆ. ಈ ರೀತಿಯ ಚಿತ್ರಣ ಬಳ್ಳಿಗಾವಿ, ಲಕ್ಕುಂಡಿ, ಲಕ್ಷ್ಮೇಶ್ವರ, ಹಾನಗಲ್ಲು ಮೊದಲಾದ ವೀರಗಲ್ಲುಗಳಲ್ಲಿ ನೋಡಬಹುದು. ಭರ್ಜಿಯನ್ನು ಈಟಿ ಎಂದೂ ಕರೆಯುತ್ತಾರೆ. ಶಾಸನವೊಂದರ ಪಾಠದಲ್ಲಿ ಕುದುರೆಯನ್ನು ಈಟಿಯಿಂದ ಇರಿದ ವಿಷಯವಿದೆ.

'ಸುರಿಗೆ' ಕುದುರೆಯಂ ತಟ್ಟಿಱಿದು. ರಾಮನಾಥ ಚರಿತೆ ಕೃತಿಯಲ್ಲೂ ಸುರಗಿಯ ಪ್ರಸ್ತಾಪವಿರುವುದನ್ನು ಕಾಣಬಹುದು."[೪೨]

"ಸಾಸಲು ಗ್ರಾಮದ ಶ್ರೀ ಶಿವಬಸವ ಸ್ವಾಮಿಗಳು ಒಂದು ಕಡೆ "ಊರಿನ ಕೊಳದ ದಕ್ಷಿಣ ಭಾಗದಲ್ಲಿ ಆರು ಕಲ್ಲುಗಳನ್ನು ಭೂಮಿಯಲ್ಲಿ ನೆಟ್ಟಿದೆ. ಅವುಗಳಲ್ಲಿ ಸೋಮನಾಥಲಿಂಗವನ್ನು ಆದಿಸೆಟ್ಟಿ ಪೂಜೆ ಮಾಡುತ್ತಿರುವ ಹಾಗೂ ಮತ್ತೊಂದು ಕಲ್ಲಿನಲ್ಲಿ ಲಿಂಗಬಸವ ಇದ್ದು ಅದರ ಮಧ್ಯ ಭಾಗದಲ್ಲಿ ಅಗ್ಗಣಿ ಹೊನ್ನಮ್ಮನು ತಪಸ್ಸಿನಲ್ಲಿರುವಂತೆ ಕೈಮುಗಿದು ಕುಳಿತಿರುವಂತೆ ಇದೆ. ಅದರ ಅಡಿಯಲ್ಲಿ ಭೈರವ ರಾಜನು ಒಂದು ಕುದುರೆಯ ಮೇಲೆ ತನ್ನ ಮಂತ್ರಿಯೊಡನೆ ಸವಾರಿ ಹೋಗುವಂತೆ ಇದೆ. ಎಲ್ಲಾ ಕಲ್ಲುಗಳಲ್ಲಿಯೂ ಖಡ್ಗ, ಬಿಲ್ಲು ಹಿಡಿದು ಯುದ್ಧ ಕಾಯುವಂತೆ ಇದೆ ಎಂದು ಹೇಳುತ್ತಾರೆ. ಆದರೆ ಆ ಆರು ಕಲ್ಲುಗಳು ಸಾಮಾನ್ಯವಾದ ವೀರಮಾಸ್ತಿ ಕಲ್ಲುಗಳಾಗಿದ್ದು, ಭೈರವರಾಜ ಹಾಗೂ ಆದಿಸೆಟ್ಟಿಯವರಿಗೆ ಯಾವ ರೀತಿಯಲ್ಲೂ ಸಂಬಂಧಪಡುತ್ತಿಲ್ಲ. ಕುದುರೆಯ ಮೇಲೆ ಹೊರಟ ವೀರನನ್ನು ಭೈರವರಾಜನೆಂದೂ ಸ್ವರ್ಗಹಂತದಲ್ಲಿರುವ ವೀರನನ್ನು ಆದಿಸೆಟ್ಟಿಯೆಂದೂ ಮಹಾಸತಿಯನ್ನು ಅಗ್ಗಣಿ ಹೊನ್ನಮ್ಮನೆಂದು ಶಿವಬಸವಸ್ವಾಮಿಗಳು ಊಹಿಸಿದ್ದಾರೆ."[೪೩]

"ಬಸವನಕಲ್ಲು ಹಾಗೂ ಹುಲಿಕಲ್ಲಿನ ಎರಡು ವೀರಗಲ್ಲುಗಳಲ್ಲಿ ಕುದುರೆಗಳಿಗೆ ಕವಚವನ್ನು ಧರಿಸಿರುವಂತೆ ಚಿತ್ರಿಸಲಾಗಿದೆ. ಕುತ್ತಿಗೆಯಿಂದ ಮೊಣಕಾಲಿನವರೆಗೆ ಇಡೀ ಕುದುರೆಗೆ ಕವಚವನ್ನು ಹಾಕಲಾಗಿದೆ. ಬಸವನಕಲ್ಲಿನ ವೀರಗಲ್ಲಿನಲ್ಲಿರುವ ಕುದುರೆಯ ಕವಚವನ್ನು ಮೂರು ಬಾಣಗಳು ಭೇದಿಸಿವೆ. ಆದರೂ ಕುದುರೆ ಧೃತಿಗೆಡದೆ ಮುನ್ನಡೆಯುತ್ತಿದೆ"[೪೪] ಇಲ್ಲಿ ಪ್ರಾಚೀನ ಕಾಲದಿಂದಲೂ ನಮ್ಮ ರಾಜ ಮಹಾರಾಜರಲ್ಲಿ ಸೌಂದರ್ಯಪ್ರಜ್ಞೆ, ವಿಲಾಸಮಯಜೀವನ, ಮನರಂಜನಾ ಪ್ರಜ್ಞೆ ಎಷ್ಟು

ವ್ಯಾಪಕವಾಗಿ ಬೆಳೆದು ಬಂದಿದೆ ಎಂಬ ವಿಚಾರ ಕುದುರೆ ಶಿಲ್ಪಗಳ ಜೊತೆಗೆ ದೃಶ್ಯ ಮಾಧ್ಯಮದ ಮೂಲಕ ಥಟ್ಟನೆ ಹೊಳೆಯುತ್ತದೆ.

ಕುದುರೆ ಸವಾರನ ಶಿಲ್ಪ : ಕುದುರೆ ಸವಾರನ ಶಿಲ್ಪವೊಂದು ಧಾರವಾಡದ ಉತ್ತರಕ್ಕೆ ಆರು ಮೈಲು ದೂರ ಇರುವ ಯಾದವಾಡ ಎಂಬ ಗ್ರಾಮದಲ್ಲಿದೆ. ಇದು ಬೆಳವಡಿ ಸಂಸ್ಥಾನಕ್ಕೆ ಸೇರಿದ್ದು. "ಇಲ್ಲಿಯ ಹನುಮಂತ ದೇವಾಲಯದ ಮುಂಭಾಗದಲ್ಲಿ ಪಶ್ಚಿಮಕ್ಕೆ ಒಂದು ಕೆತ್ತಿದ ಶಿಲ್ಪವಿದೆ. ಅದುವೇ ಕುದುರೆ ಸವಾರನ ಶಿಲ್ಪ. ಎತ್ತರ ಮೂರು ಫೂಟು, ಅಗಲ ಎರಡೂವರೆ ಫೂಟು ಇದ್ದು. ಮೇಲ್ಭಾಗದಲ್ಲಿ ವರ್ತುಳಾಕಾರವಾಗಿದೆ. ಶಿಲ್ಪದಲ್ಲಿ ಅಡ್ಡವಾಗಿ ಎರಡು ಭಾಗಗಳಿದ್ದು, ಮೇಲಿನ ಮಧ್ಯ ಭಾಗದಲ್ಲಿ ಎಡಗಡೆಗೆ ಮುಖ ಮಾಡಿದ ಕುದುರೆಯ ಮೇಲೆ ವೀರನಿದ್ದಾನೆ. ಅವನ ಮೇಲೆ ಛತ್ರಿ ಹಿಡಿಯಲಾಗಿದೆ. ಈ ವೀರನ ಬಲಗಡೆಯ ಕಾಲಿನ ಹತ್ತಿರ ಎಡಗಡೆಯ ಕಡೆಗೆ ಮುಖ ಮಾಡಿ ನಿಂತಿರುವ ಓರ್ವ ಸಿಪಾಯಿ ಇದ್ದು, ಅವನ ಮುಂದೆ ಎಡಗಡೆಗೆ ಮುಖ ಮಾಡಿ ಓಡುತ್ತಿರುವ ಒಂದು ನಾಯಿಯ ಚಿತ್ರವಿದೆ. ಮುಖ್ಯ ವೀರನ ಹಿಂದೆ ಸೂರ್ಯಪಾನ ಹಿಡಿದಿರುವ, ಎಡಗಡೆಗೆ ಮುಖ ಮಾಡಿರುವ ಒಬ್ಬ ಪುರುಷನಿದ್ದು, ಮುಂದೆ ಕೈಯಲ್ಲಿ ಹೂಜಿ ಹಿಡಿದಿರುವ ಎಡಕ್ಕೆ ಮುಖ ಮಾಡಿದ ಒಬ್ಬ ನೌಕರನಿದ್ದಾನೆ. ಕುದುರೆಯ ಮೇಲಿನ ವೀರನ ಎಡಬಲ ಕೈಗಳಲ್ಲಿ ಡಾಲು ಮತ್ತು ಖಡ್ಗಗಳಿದ್ದು. ವೀರನ ಮೈಮೇಲೆ ದಪ್ಪವಾದ ಅಂಗಿಯಿದೆ. ತಲೆಗೆ ಮುಂಡಾಸು, ಕಾಲಲ್ಲಿ ದಪ್ಪ ಚಣ್ಣ ಮತ್ತು ಪಾದತ್ರಾಣಗಳಿವೆ. ಆದರೆ ಗದ್ದದ ಮೇಲೆ ಗಡ್ಡಗಳಿಲ್ಲ ಮತ್ತು ಮುಂಡಾಸು ಶಿವಾಜಿ ಮಹಾರಾಜರ ಚಿತ್ರದಂತಿಲ್ಲ, ಕುದುರೆಗೆ ಜೀನು ಹಾಕಿದ್ದಾರೆ. ಆದರ ಹೆಗಲ ಮೇಲೆ ಜೋಲಾಡುವ ಅಲಂಕಾರಿಕ ವಸ್ತ್ರಗಳಿವೆ. ನೌಕರನ ವೇಷ ಸಾಮಾನ್ಯವಾಗಿ ದಕ್ಷಿಣಾತ್ಯವಾಗಿದೆ.

ಶಿಲ್ಪದ ಕೆಳಗಿನ ಅರ್ಧದಲ್ಲಿ ಉದ್ದವಾಗಿ ಮತ್ತೆ ಮೂರು ಭಾಗಗಳನ್ನು ಮಾಡಿದ್ದಾರೆ. ನಡುವಿನ ಭಾಗದಲ್ಲಿ ಒಂದು ಡೊಳ್ಳಾರಿಗೆಯ ಮೇಲೆ ಒಬ್ಬ ಧೋತರವನ್ನುಟ್ಟ ಪುರುಷನು ಸುಖಾಸೀನವಾಗಿ ಕುಳಿತುಕೊಂಡಿದ್ದು, ಅವನ ಎಡತೊಡೆಯ ಮೇಲೆ ಒಂದು ಚಿಕ್ಕ ಮಗುವಿದೆ. ಆ ಪುರುಷನ ತಲೆಗೆ ರುಮಾಲು ಇದ್ದು. ಮೈಮೇಲೆ ಉತ್ತರೀಯ ಮತ್ತು ಬಲಗೈಯಲ್ಲಿ ಬಟ್ಟಲಿದೆ. ಇವನಿಗೆ ಸ್ವಲ್ಪ ಗಡ್ಡ ಮತ್ತು ಕಿವಿಯ ಹತ್ತಿರ ಕೆಳಗಿಳಿದಿದ್ದ ಕೂದಲುಗಳಿವೆ. ಹುಡುಗನಿಗೆ ಕುಡಿಸಲು ಇವನು ಕೈಯಲ್ಲಿ ಹಾಲು ತೆಗೆದುಕೊಂಡಿರಬೇಕೆಂದು ಡಾ.ಗಣೇಶ ಹರಿಬರೆಯವರು ಅಭಿಪ್ರಾಯಪಟ್ಟಿದ್ದಾರೆ. ಈ ಪುರುಷನ ಎಡಬಲಗಳಲ್ಲಿ ಅನುಕ್ರಮವಾಗಿ, ಬಲಗಡೆಗೆ ತಿರುಗಿದ್ದ ಮತ್ತು ಎಡಗಡೆಗೆ ಮುಖ ಮಾಡಿದ್ದ ಸ್ತ್ರೀಯರಿದ್ದು ಇಬ್ಬರ ಎಡ-ಬಲಕೈಗಳಲ್ಲಿ ಗುರುತಿಸಲಾಗದ ವಸ್ತು ಮತ್ತು ಹೂಜಿಗಳಿವೆ. ಅವರು ತಮ್ಮ ಎಡ -ಬಲಕೈಗಳನ್ನು ಮುಖ್ಯ ಪುರುಷನ ಮುಖದ ಕಡೆಗೆ ಒಯ್ದಿದ್ದಾರೆ. ಮುಖ್ಯ ಪುರುಷನ ಬಲಗಡೆಯ ಭಾಗದಲ್ಲಿ ಧೋತರವುಟ್ಟ, ಕೂದಲಿಗೆ ಗಂಟು ಹಾಕಿದ, ಎಡಗಡೆಗೆ ಮುಖ ಮಾಡಿದ ಬಿಲ್ಲುಗಾರನಿದ್ದು;

ಎಡಗಡೆಯಭಾಗದಲ್ಲಿ ಸೊಂಡೆಯ ಹೂಜಿಯನ್ನು ಹಿಡಿದುಕೊಂಡಿದ್ದ ನಿಲುವಂಗಿ ಹಾಕಿದ, ರುಮಾಲು ಸುತ್ತಿದ ಬಲಗಡೆಗೆ ಮುಖ ಮಾಡಿದ ಪುರುಷನಿದ್ದಾನೆ. ಈ ಶಿಲ್ಪದ ಮೇಲ್ಭಾಗದಲ್ಲಿ ವೀರನ ತಲೆಗೆ ಎರಡೂ ಬದಿಗೆ ೬ ರಿಂದ ೮ ಅಕ್ಷರಗಳ ಕನ್ನಡ ಬರಹವಿದೆ. ಇದು ಅಸ್ಪಷ್ಟವಾಗಿದ್ದು, ಅರ್ಥವಾಗಲಿಲ್ಲವೆಂದು 'ಬರೆ'ಯವರು ತಮ್ಮ ಲೇಖನದಲ್ಲಿ ಸ್ಪಷ್ಟಪಡಿಸಿದ್ದಾರೆ. ಈ ಶಿಲ್ಪ ಅತ್ಯಂತ ಗಮನಾರ್ಹವಾದುದಾದರೂ ಉಲ್ಲೇಖ ಸ್ಪಷ್ಟವಾಗಿಲ್ಲ. ಇಂತಹ ಶಿಲ್ಪಗಳು ನೂರಾರು ವರ್ಷಗಳ ಇತಿಹಾಸವನ್ನು ಮರುಕಳಿಸುತ್ತವೆ.''[೪೫] ಇಂತಹವುಗಳ ಅಧ್ಯಯನ ಅವಶ್ಯವಾಗಿ ನಮಗೂ, ನಮ್ಮ ಮುಂದಿನ ಪರಂಪರೆಗೂ ಬೇಕು. ಇವುಗಳ ರಕ್ಷಣೆ ಮಾಡುವುದು ನಮ್ಮ ನಿಮ್ಮೆಲ್ಲರ ಕರ್ತವ್ಯದ ಒಂದು ಭಾಗ ಎಂದರೆ ತಪ್ಪಾಗಲಿಕ್ಕಿಲ್ಲ. ಬರವಣಿಗೆಗಿಂತ ಹೆಚ್ಚು ಉಪಯುಕ್ತವಾದವು ಚಿತ್ರಗಳು ಎಂಬ ತಿಳುವಳಿಕೆಯಿಂದ ರಾಜರು ತಾವು ಮಾಡಿದ ಕೆಲಸ ಕಾರ್ಯಗಳು ಶಾಶ್ವತವಾಗಿ ಉಳಿದುಕೊಂಡು ಬರಲಿ ಎಂಬ ಸದಾಶಯದಿಂದ ಶಿಲ್ಪಗಳನ್ನ, ವೀರಗಲ್ಲುಗಳನ್ನ, ಶಾಸನಗಳನ್ನು ಕೊರೆಯಿಸಿದರು. ಅಳಿದು ಹೋಗದ, ಮಾಸದ ಚಿರಕಾಲ ಉಳಿಯುವ ಇಂತಹ ಚಿತ್ರಕಲೆ ಅಂದಿನ ಜನರ ಜೀವನ ಕ್ರಮದ ಬಗ್ಗೆ ಮಾಹಿತಿಯನ್ನು ಒದಗಿಸಿಕೊಡುವಲ್ಲಿ ಮಹತ್ವದ ಪಾತ್ರವನ್ನು ವಹಿಸಿವೆ.

ದೇವರ ವಾಹನ: ಕುದುರೆ : "ಆದಿಮಾನವ ಅಲೆಮಾರಿ ಜೀವನವನ್ನು ನಿಲ್ಲಿಸಿ ಒಂದೆಡೆ ನೆಲೆ ನಿಂತು ಕೃಷಿಯನ್ನು ತನ್ನ ಉಪಜೀವನಕ್ಕಾಗಿ ಅವಲಂಬಿಸಿದನು. ಕೃಷಿ ಹಾಗೂ ವ್ಯಾಪಾರ ಪ್ರಧಾನವಾದ ಮಾನವನ ಬದುಕಿನಲ್ಲಿ ಪ್ರಾಣಿಗಳ ಸಹಾಯ -ಸಹಕಾರ ಮುಖ್ಯವಾಯಿತು. ಇದರಿಂದಾಗಿ ಸಹಜವಾಗಿಯೇ ಅವುಗಳನ್ನು ಕುರಿತು ಅವನಲ್ಲಿ ಭಯ -ಭಕ್ತಿ -ಪ್ರೀತಿ -ಗೌರವ ಭಾವನೆಗಳು ಮೂಡಿದವು. ದುಷ್ಟ ಪ್ರಾಣಿಗಳಾದ ಚಿರತೆ, ಕೋಣ, ಸಿಂಹ, ಹಾವು, ಹುಲಿ ಮುಂತಾದವುಗಳಿಗೆ ದೈವೀಶಕ್ತಿಯನ್ನು ಆರೋಪಿಸಿದನು; ಪೂಜ್ಯತೆಯಿಂದ ಕಂಡನು. ಇದರಿಂದಾಗಿ ಪ್ರಾಣಿಗಳಿಗೂ ಪೌರಾಣಿಕ ಸ್ಥಾನಮಾನಗಳು ಸಿಕ್ಕವು. ಒಂದೊಂದು ಧರ್ಮ, ಮತ ಪಂಗಡದ ಜನರು ತಮಗೆ ಇಷ್ಟವಾದ ಪ್ರಾಣಿಗಳನ್ನು ಲಾಂಛನವಾಗಿರಿಸಿಕೊಂಡು ಪಾವಿತ್ರ್ಯತೆಯ ಹಿನ್ನೆಲೆಯಲ್ಲಿ ಉನ್ನತ ಸ್ಥಾನ ನೀಡಿದರು.

ಗೋವು ಹಿಂದೂ ಹಾಗೂ ಬ್ರಾಹ್ಮಣರಿಗೆ, ಮೇಕೆ ಕ್ರಿಶ್ಚಿಯನ್ನರಿಗೆ ಹಾಗೂ ಕೋಣ, ಕತ್ತೆ, ಎಮ್ಮೆ, ನಾಯಿಗಳು ಶೂದ್ರರಿಗೆ ಪೂಜ್ಯವಾಗಿ ಕಂಡು ಬಂದವು. ಐತಿಹ್ಯ, ನಂಬಿಕೆ, ಆಚರಣೆ, ಸಂಪ್ರದಾಯಗಳ ಹಿನ್ನಲೆಯಲ್ಲಿ ಬದುಕಿನುದ್ದಕ್ಕೂ ಪರಂಪರಾಗತವಾಗಿ ಉಳಿದು ಬಂದವು.''[೪೬] ಶಿವನವಾಹನ 'ವೃಷಭ'ವೆಂದೂ, ನಂದಿಯೆಂದು ಕರೆಯುತ್ತಾರೆ. ಹಾಗೆಯೇ ಇಂದ್ರನ ವಾಹನವಾದ ಬಿಳಿ ಆನೆಯನ್ನು ಐರಾವತವೆಂತಲೂ, 'ಸಿಂಹ' ಭಾರತದಲ್ಲಿ ಗ್ರಾಮದೇವತೆಗಳ ವಾಹನವೆಂದೂ ಇದು ವಿಷ್ಣುವಿನ ದಶಾವತಾರಗಳಲ್ಲೊಂದು ಹಾಗೂ ಅಯಶ್ಯಂಕುವಿನ ವಾಹನ. ದುರ್ಗದ ಎಲ್ಲಮ್ಮ, ದುರ್ಗಮ್ಮ, ರೇಣುಕಮ್ಮ, ಬನಶಂಕರಿ, ಅನ್ನಪೂರ್ಣೇಶ್ವರಿ, ಜಗದಂಬೆ ಮುಂತಾದ ದೇವತೆಗಳ ವಾಹನವೆಂದು ಗುರುತಿಸಲಾಗಿದೆ. ಹುಲಿ ದುರ್ಗೆ,

ಕಾಳಿಕಾದೇವಿಯರಿಗೆ ಮತ್ತು ಮಲೆ ಮಾದೇಶ್ವರನಿಗೆ, ವ್ಯಾಘ್ರವಾಹನ. ಮಠಾಧೀಶರು, ಮಹರ್ಷಿಗಳು ಹುಲಿ ಚರ್ಮದ ಮೇಲೆ ಆಸೀನರಾಗಿರುವರೆಂದೂ, 'ಇಲಿ' ಗಣೇಶನ ವಾಹನ, ಕೋಣ ಯಮಧರ್ಮನ ವಾಹನ, ಜಿಂಕೆ ವಾಯುವಿನ (ಮಾರುತ) ವಾಹನವೆಂದೂ, 'ನಾಯಿ' ದತ್ತಾತ್ರೇಯನ ವಾಹನವೆಂದು ಹಾಗೆಯೇ ಮೈಲಾರಲಿಂಗನ ಸಂಪ್ರದಾಯದಲ್ಲಿ 'ನಾಯಿಗೊರವ ದೀಕ್ಷೆ' ಆಚರಣೆಯಲ್ಲಿರುವಂತೆ 'ಕುದುರೆ'ಯನ್ನು 'ಇಂದ್ರವಾಹನ'ವೆಂದೂ "ಇಂದ್ರನ ಚಿನ್ನದ ರಥಕ್ಕೆ ಒಂದು ಸಹಸ್ರ ಕುದುರೆಗಳು ಸೂರ್ಯನ ರಥಕ್ಕೆ 'ಏಳು ಕೆಂಪು' ಕುದುರೆಗಳು, ರಾಹು ಕೇತುವಿನ ರಥಕ್ಕೆ ಎಂಟು ಮಾಸಲು ಕೆಂಪು ಬಣ್ಣದ ಕುದುರೆಯನ್ನು ಕಟ್ಟಲಾಗಿದೆ. ಪ್ರಹ್ಲಾದ, ಆದಿತ್ಯ, ಹನ್ನೊಂದು ಜನ ರುದ್ರರು, ಕುಜಂಭ ಹಾಗೂ ನವಗ್ರಹಗಳ ರಥಗಳಿಗೆ ಕುದುರೆಗಳನ್ನು ಕಟ್ಟಲಾಗಿದೆ.

"ಮೈಲಾರಲಿಂಗನ ಸಂಪ್ರದಾಯದಲ್ಲಿ 'ಕುದುರೆಗೊರವನದೀಕ್ಷೆ' ಎಂಬ ಪದ್ಧತಿ ಕುರಿತು ಹೀಗೊಂದು ಕಥೆಯಿದೆ. ಮೈಲಾರಲಿಂಗ ಒಬ್ಬ ಅರಸನಾಗಿದ್ದನು. ಆತ ಕುದುರೆ ಮೇಲೆ ಕುಳಿತು ದೈತ್ಯ ಸಂಹಾರ ಮಾಡಿದನು. ಕುದುರೆ ಮೈಲಾರಲಿಂಗನ ವಾಹನವಾಗಿದ್ದರಿಂದ ಕುದುರೆಯಾಗಿ ಸೇವೆ ಸಲ್ಲಿಸುತ್ತೇವೆ ಎಂದು ಹರಕೆ ಹೊತ್ತವರು ಈ ದೀಕ್ಷೆ ಪಡೆದು ಕುದುರೆಯಂತೆ ಕುಣಿಯುತ್ತ ತಮ್ಮ ಮೈಯನ್ನು ಚಾಟಿಯಿಂದ ಹೊಡೆದುಕೊಳ್ಳುತ್ತಾರೆ. 'ಮೈಲಾರ ಗೊರವನಂತೆ ತಂತಮನೆ ಬಂದು ಕೊಳ್ವಚ್ಚುಳಾಯಿಲರು' ಎಂಬ ನಯಸೇನ ಹಾಗೂ ಬ್ರಹ್ಮಶಿವ ಕವಿಗಳ ವಿಡಂಬನಾತ್ಮಕ ಮಾತುಗಳು ಈ ಆಚರಣೆಯ ಪ್ರಾಚೀನತೆಗೆ ಕುರುಹುಗಳಾಗಿವೆ. ಕುಲದೇವತೆಗೆ ಕೆಂಪು ಬಣ್ಣದ ಕುದುರೆ, ಬೇರೆ ಕೆಲವು ದೇವತೆಗಳಿಗೆ ಹಳದಿ, ಬಿಳಿ, ಹಸಿರು ಬಣ್ಣದ ಕುದುರೆಗಳನ್ನು ವಾಹನಗಳಾಗಿ ನಿರ್ಮಿಸಿರುತ್ತಾರೆ. ಒಂದು ಕುಟುಂಬ ಇಲ್ಲವೇ ಜನಾಂಗಕ್ಕೆ ವೀಸಲಾದ ದೇವತೆಗಳನ್ನು ಅವುಗಳ ವಾಹನಗಳಿಂದ ಗುರುತಿಸಲು ಸಾಧ್ಯವಾಗುತ್ತದೆ. ಗುಡ್ಡದ ಎಲ್ಲಮ್ಮ ಕುದುರೆ ಮೇಲೆ ಆಸೀನಳಾಗಿರುತ್ತಾಳೆ. ಈಗಲೂ ಬಿದಿರಿನಿಂದ ಮೈಯನ್ನು ತಯಾರಿಸಿ, ಕಟ್ಟಿಗೆಯಿಂದ ಮಾಡಿದ ಕುದುರೆ ಮುಖ ತೊಡಿಸಿ ನಾರಿನಿಂದ ಬಾಲ ರೂಪಿಸಿಕೊಂಡು ಕಟ್ಟಿಗೆ ಕಾಲನ್ನು ಹಾಕಿಕೊಂಡು ಕುದುರೆ ಕುಣಿತ ಕುಣಿಯುವ ಪದ್ಧತಿ ಮದುವೆ ಹಬ್ಬ ಹರಿದಿನಗಳಲ್ಲಿ ಈಗಲೂ ಚಾಲ್ತಿಯಲ್ಲಿದೆ.

ಕರಕುಶಲ ಕಲೆಗಾರರು ಕುದುರೆಯನ್ನು ಕಿಟ್ಟದಿಂದ (ನೀರಿನಲ್ಲಿ ಹಾಳೆಯನ್ನು ನೆನಸಿ, ಆ ಮುದ್ದೆಯಿಂದ ಕುದುರೆಯನ್ನು ತಯಾರಿಸುವ ಬಗೆ) ನಿರ್ಮಿಸಿರುತ್ತಾರೆ. ಕುದುರೆ ಬಾಲಕ್ಕೆ ಕಪ್ಪು, ಶರೀರಕ್ಕೆ ಬಿಳಿ ಮತ್ತು ಗೋಧಿವರ್ಣದ ಬಣ್ಣದ ಕಣ್ಣುಗಳಿಗೆ ಕೆಂಪುಬಣ್ಣ ವಿಶೇಷವಾಗಿ ಬಳಸಲಾಗುತ್ತದೆ. ಕುದುರೆಯ ಮೈಮೇಲಿನ ಜೀವನವು ವೈವಿಧ್ಯಮಯ ವರ್ಣಗಳಿಂದ ಕಲಾತ್ಮವಾಗಿ ವಿನ್ಯಾಸಗೊಂಡಿರುತ್ತದೆ. ಅಶ್ವಮೇಧದ ಯಜ್ಞದ ಕುದುರೆ ದೇವತಾಂಶವನ್ನು ಪ್ರತಿನಿಧಿಸುವಂತದ್ದಾಗಿದ್ದು ಜನಪದ ಕಲಾವಿದರ ಮುಗ್ಧ ಕಲಾವಂತಿಕೆಯು ಈ ಕುದುರೆ ನಿರ್ಮಾಣದಲ್ಲಿ ಎದ್ದು ಕಾಣುತ್ತದೆ."[೪೭]

“ರಥವು ನವಗ್ರಹಗಳ ವಾಹನವು ಆಗಿದೆ. ಕುದುರೆಗಳನ್ನು ಕಟ್ಟಿದ ದೊಡ್ಡ ರಥ ಶುಕ್ರ ಗ್ರಹದ ವಾಹನ. ಸೂರ್ಯನ ವಾಹನವಾದ ರಥಕ್ಕೆ ಒಂದೇ ಚಕ್ರ ಹಾಗೂ ಹನ್ನೆರಡು ಅರೆಕಾಲುಗಳು, ಅರುಣದೇವ ಸೂರ್ಯನ ರಥದ ಸಾರಥಿ. ಹತ್ತು ಬಿಳಿ ಕುದುರೆಗಳನ್ನು ಕಟ್ಟಿದ ಮೂರು ಚಕ್ರದ ರಥ ಚಂದ್ರನ ವಾಹನ. ಬುಧ ಗ್ರಹದ ರಥವನ್ನು ಗಾಳಿ, ಬೆಂಕಿ ಮತ್ತು ಚಿನ್ನದ ಬಣ್ಣಗಳಿಂದ ನಿರ್ಮಿಸಲಾಗಿದೆ. ಗಾಳಿವೇಗದಲ್ಲಿ ಚಲಿಸುವ ಕುದುರೆಗಳನ್ನು ಕಟ್ಟಲಾಗಿದೆ. ಚಿನ್ನದಿಂದ ಮಾಡಿದ, ಅಗ್ನಿಯಿಂದ ಹುಟ್ಟಿದ ಎಂಟು ಕುದುರೆಗಳನ್ನು ಕಟ್ಟಿದ ರಥ ಕುಜಗ್ರಹದ ವಾಹನ. ಬೃಹಸ್ಪತಿಯ ವಾಹನವಾದ ಚಿನ್ನದರಥವನ್ನು ಎಂಟು ಬಿಳಿಯ ಕುದುರೆಗಳು, ಶನಿದೇವನ ರಥವನ್ನು ಹಲವು ಬಣ್ಣದ ಕುದುರೆಗಳು ರಾಹುವಿನ ರಥವನ್ನು ಜೀರುಂಡೆಯಂತಹ ಕಪ್ಪು ಬಣ್ಣದ ಕುದುರೆಗಳು, ಕೇತುವಿನ ರಥವನ್ನು ಗಾಳಿವೇಗದ ಕುದುರೆಗಳು ಎಳೆಯುತ್ತವೆ.”[೪೮] ಹೀಗೆ ವಿವಿಧ ದೇವಾನುದೇವತೆಗಳು, ನವಗ್ರಹಗಳು, ಮುಂತಾದ ವಿಶಿಷ್ಟ ಬಗೆಯ ಶಕ್ತಿದೇವತೆಗಳ ವಾಹನವಾಗಿ ಕುದುರೆ ಆಚರಣೆ ಮತ್ತು ಆರಾಧನೆಯಲ್ಲಿಯೂ ಕೂಡ ಪ್ರಸಿದ್ಧಿಯನ್ನು ಪಡೆದುಕೊಂಡಿದೆ.

ದೇವತಾ ಕುದುರೆಗಳು : ಕುದುರೆಗಳನ್ನು ಪ್ರಾಚೀನ ಕಾಲದಲ್ಲಿ ದೇವತೆಗಳ ವಾಹನವೆಂದೂ, ದೇವರ ಪ್ರತಿರೂಪವೆಂದು ಕರೆಯುತ್ತಿದ್ದರು. ಹಾಗಾಗಿ ಇವುಗಳಿಗೆ ಹೆಚ್ಚಿನ ಮಹತ್ವವಿದೆ. ಕುಮಾರರಾಮನ ಸಂಪ್ರದಾಯದಲ್ಲಿ ಕುದುರೆ ಕುರಿತು ಜಾನಪದಗಾರರು, ಬುಡಕಟ್ಟು ಕುಟುಂಬವರ್ಗ ಹಾಡುಗಳನ್ನು ಕಟ್ಟಿ ಹಾಡುವುದರ ಮೂಲಕ ಮನರಂಜನೆಯನ್ನು ಪಡೆಯುತ್ತಿದ್ದರು. ತಮ್ಮದೇ ಭಾಷೆಯನ್ನು ಹೊಂದಿರುವ ಜನಸಮುದಾಯ ದೇಶೀ ಸಂಸ್ಕೃತಿಯನ್ನು ಗ್ರಾಮ್ಯ ಭಾಷೆಯಲ್ಲಿ ಸಹಜವಾಗಿ ಹಾಡಿರುವುದನ್ನು ಕಾಣಬಹುದು.

ಉದಾಹರಣೆಗೆ

ಓರಗಲ್ಲ ಪಟ್ನ ಗಣಪತರಾಜ
ಏನ್ಮಾಡ್ದ ಕೆರೆ ವಾರ್ಮ್ಯಂದೆ
ಕೆರೆಯಾಗ ಕಡ್ಲಿ ಹಾಕಿದ್ದ
ಕಡ್ಲಿ ಹಾಕಿದ್ರೆ
ಆಗ ಇಬ್ರುನ್ನ ಕಾಯಕಿಟ್ಟ ಹೊಲನ
ಒಂದೊಂದು ಗಿಡಕ್ಕ
ಸೇರು ಅಚ್ಚೇರು ಆಗ್ತಾವ ಕಡ್ಲಿ
ಆಗಸಟ್ಟು ಸವ್ರತ್ಕ್ಯಾಗ
ಮೂರೋ ಮೇಘದಾಗಿರವು

ಆಗ ಇನ್ನ ಎರಡು ಕುದುರಿ
ನಾಕು ಕಾಲು ಎರಡು ರೆಕ್ಕೆ
ದೇವತಾ ಕುದ್ರಿಗಳು
ಈ ಕಡ್ಲಿ ತಿಂಬಾಕ
ಸಟ್ಟ ಸರಿಹೊತ್ನಾಗ
ಪಟ ಪಟ ರೆಕ್ಕೆ ಬಡಿಯೋದು
ಕೆಳಗೆ ಹಾರೋದು
ಆಗ ರೆಕ್ಕೆಲಿಂದ ಹಾಂಗೆ ಬಳಕೊಂಬೋರು
ಆಗ ಗಿಡಗೊಳು ಬಾಯಾಗಿಟ್ಟು ಕೊಂಬೋದು
ಒಂದೆಯೇಕ್ರಿ ಒಂದೊಂದು ತಿಂದ್ಹೋಗೊದು
ಗಣಪತರಾಜ ಮುಂಚಾಲಿ ಬಂದ
ಕುದ್ರಿಮ್ಯಾಲ ಕುತ್ಕಂಡು
ಎನ್ನಪ್ಪಾ ತಳವಾರ್ರೇ ನಿಮ್ಮನ್ನು ಕಾಯಕಿಟ್ಟಿವಿ
ಏನು ಇಷ್ಟು ಬಯಲಾಗೈತಿ
ಏನ್ರಿ ರಾತ್ರಿ ಏನೋ ಪಟಪಟಾಂತಾವ
ಹೊಂಯ್ ಅಂದು ಬಿಡ್ತೀವಿ
ಅವುಯತ್ತಾಗ ಹೊತಾವೋ ಯತ್ತಾಗ ಇಲ್ಲೋ
ಏಯ್ ಇಂಗಾದ್ರೆ ಬೇಸಲ್ಲ
ಏನ್ ಬರ್ತಾವೋ ಏನಿಲ್ಲೋ?
ನನ್ನ ಇನ್ನವುತಾ ಕಡ್ಲೆ
ನಾಶವಾಗಿ ಹೊತ್ತೈತೆ ಹೊಲ
ಆಗ ಏನು ಮಾಡ್ದ
ಮೊಣ್ಕಾಲಷ್ಟು ಕುಣಿತೋಡಿ
ಗುಂಡುಗಳು ಹಾಕಿದ ಕುಣ್ಯಾಗ ಭೂಮಿ ಒಳ್ಗೆ
ಅವು ಎರ್ಡು ಬಂದು ಕುಪ್ಪಳಿಸಿ ಎರಗಿದಾಗ
ಭೂಮಿ ಗಡಗಡಾ ಅಗುರಿ ಬಿದ್ದೈತಿ
ಭೂಮ್ಯಾಗಿದ್ದ ಗುಂಡುಗಳು ಎದ್ದು ಬಿಡ್ತಾವ

ಆಗಿನ್ನವ್ರು ತಾವಾಗಿ ಸತ್ತೋತಾವ ಯಾವಾಗಿರ್‍ಲಿ
ಅಂತ ಗುಂಡುಗಳಿಟ್ಟಿದ್ರು
ಸುಟ್ಟು ಸವ್ರತ್ಸ್ಯಾಗ
ಮೂರೋ ಮೇಘದಾಗ್ಲಿದ್ದ
ಎರ್‍ಡ ರೆಕ್ಕೆ ನಾರಪಾದ ಕುದುರಿಗಳು
ದೇವತೆ ಕುದುರಿಗಳು
ಅವು ಏನೂ ತಿಂಬಂಗಿಲ್ಲ
ಕಡ್ಡಿ ತಿಂಬವು ತೊಗರಿ ತಿಂಬವು
ಆಗ ಜನಲೋಕ ನೋಡವಲ್ಲ
ಅಂಥಾ ದೇವತೆ ಕುದುರಿಗಳು''[೪೯]

ಮೌಖಿಕ ಸಾಹಿತ್ಯದಲ್ಲಿ ಹಾಡುಗಳನ್ನು ಹಾಡುವುದರ ಮೂಲಕ ಒಂದು ಪ್ರಾಣಿಯ ಬಗ್ಗೆ ನಂಬಿಕೆಯನ್ನು ಇಟ್ಟುಕೊಂಡಿರುವ ಜನಸಮುದಾಯ ತಮಗೆ ಹೊಳೆದ ವಿಚಾರಗಳನ್ನು ಸಂಭಾಷಣೆಯ ರೂಪದಲ್ಲಿ ಕಟ್ಟಿಕೊಟ್ಟಿರುವುದು ಅವರ ಭಾಷಾ ಪರಂಪರೆಯ ಇತಿಹಾಸವನ್ನು ಬಿಂಬಿಸುತ್ತದೆ. ಜೊತೆಗೆ ಐತಿಹಾಸಿಕವಾಗಿ ಮನ್ನಣೆ ಪಡೆದ ವಿಚಾರ ಲಹರಿಗಳು ಮೂಡಿಬಂದ ಆಲೋಚನಾಕ್ರಮವನ್ನು ಮೇಲಿನ ಸಾಲುಗಳು ಸ್ಪಷ್ಟಪಡಿಸುತ್ತವೆ. ಮೇಲೆ ವಿವರಿಸಿದ ಪದ್ಯಗಳು ಓರಂಗಲ್ಲಿನ ಗಣಪತಿರಾಜ ಕುರಿತು ಜೊತೆಗೆ ಆತನ ಕೃಷಿ ಪದ್ಧತಿ, ಆಡಳಿತ ವ್ಯವಸ್ಥೆಯನ್ನು ಸಹ ಬಿಂಬಿಸುತ್ತವೆ. ಓರಂಗಲ್ಲಿನ ರಾಜ ಕೆರೆಯಲ್ಲಿ ಕಡ್ಡಿ ಹಾಕಿದ ವಿವರ, ಅದನ್ನು ಕಾಯಲು ಇಬ್ಬರು ಆಳುಗಳು, ದೇವತಾ ಕುದುರೆಗಳು ಬಂದು ಕಡ್ಡಿ ತಿನ್ನಲಿಕ್ಕೆ ಬರುವ ಸನ್ನಿವೇಶ, ಕುದುರೆಗಳ ಅಂಗಾಂಗ ವರ್ಣನೆ ಅವುಗಳಿಗೆ ರೆಕ್ಕೆ ಇರುವ ಸನ್ನಿವೇಶ, ಕುದುರೆ ಬರುವುದು, ರೆಕ್ಕೆಯಿಂದ ಕಡ್ಡಿ ಬಳಿದುಕೊಂಡು ನಾಶ ಮಾಡುವುದು ಮುಂತಾದ ವಿಷಯಗಳನ್ನು ಜನಪದಕಾರರು ಸಂಭಾಷಣೆಯ ರೂಪದಲ್ಲಿ ಚಿತ್ರಿಸಿದ್ದಾರೆ.

“ಆಹಾ ನೋಡಣ್ಣ
ಮೂರು ಮೇಘುಲಿದ್ದಣ್ಣೋ
ಪಟಪಟಾಲೆ ರೆಕ್ಕೆ ಬಡ್ದೋ
ಕುಪ್ಪಳಿಸಿ ಹಾರ್‍ಯಾವ ಭೂಮಿ ಮ್ಯಾಲೆ ನೋಡಣ್ಣ
ಭೂತಾಯಿ ಗಡ ಗಡಾಂತ ಅದುರಿ ಬಿದ್ದ್ಯಾಪ್ಪ ಭೂಮಿ
ಅದುರ್‍ಹೊತ್ತಿಗೆ ಭೂಮ್ಯಾಗಿದ್ದ ಗುಂಡುಗಳು
ಆಹಾ ನೋಡಣ್ಣ

ಟಪಾಟಪಾ ಟಪಾ ಅಂತಾ
ಮ್ಯಾಕೆ ಎಗರುವಾಗಣ್ಣೊ
ಗಂಡು ಕುದುರಿ ನೋಡಣ್ಣೋ
ಪಟಪಟನೆ ರೆಕ್ಕೆ ಬಡ್ದೋ
ಗಗನಕ್ಕ ಹೋಗೈತೋ ಇನ್ನೂ ಮೂರು ವೇಗದಾಗಣ್ಣೋ"[೧೦]

ಈ ಪದ್ಯಗಳ ಮೂಲಕ ತಿಳಿದು ಬರುವ ವಿಚಾರವೇನೆಂದರೆ ಆಕಾಶದಿಂದ ಕುದುರೆಗಳು ಪಟ ಪಟ ರೆಕ್ಕೆ ಬಡಿಯುತ್ತ, ಜಿಗಿಯುತ್ತ ಹಾರಿ ಭೂಮಿಯ ಮೇಲೆ ಬರುವ ಸಂದರ್ಭದಲ್ಲಿ ಭೂತಾಯಿಯೇ ನಡುಗಿದಳು. ಜೊತೆಗೆ ಟಪಾ ಟಪಾ ಅಂತ ಮೇಲೆ ಜಿಗಿಯುವ ಗಂಡು ಕುದುರೆಗಳು ಆಕಾಶಕ್ಕೆ ಮತ್ತೆ ಹಾರಿ ಹೋದ ಬಗೆಯನ್ನು ಸ್ಪಷ್ಟಪಡಿಸುತ್ತವೆ. ಇಂತಹ ಶೌರ್ಯ ಸಾಹಸವನ್ನು ಹೊಂದಿರುವ ಕುದುರೆಗಳು ಇಂದ್ರಲೋಕದ ದೇವತಾ ಕುದುರೆಗಳು ಎಂಬ ಅಭಿಪ್ರಾಯ ವ್ಯಕ್ತವಾಗುತ್ತದೆ.

"ಗಂಡು ಕುದುರಿ ಪಟ ಪಟ ರೆಕ್ಕೆ ಬಡಿದು
ಮೂರು ಮೇಗ್ದಾಗ ಹೋಗಿಬಿಡ್ತು
ಹೆಣ್ಣು ಕುದುರಿ ಆಗೋ ಈಗೋ ಈದಂಗೈತಿ
ದಿವ್ಯದಲ್ಲೆ ಇನ್ನ ರೆಕ್ಕೆ ಬಡ್ದು ಮ್ಯಾಕ ಏರುವಾಗ
ಮೂರು ಮೇಘು ಹೋಗೊನೆಂದುವಾಗ
ಹೊಟ್ಟ್ಯಾನ ಪಿಂಡ ಜ್ಯಾರಿಕಂಡು ಬಿದ್ದಿದ್ದು
ರೆಕ್ಕೆಗೂಡ ಆರಲಿಲ್ಲ
ಆಗ ಮೂವರ್ನ ಕೊಲ್ಲುತೈತಿ ಅದು
ಅಲೇ ಎಷ್ಟು ಚೆಂದೈತಿ
ಎರಡು ರೆಕ್ಕೆ ಕುದುರಿ ಇರಬೇಕು ನಮ್ಮ ಲೋಕದಾಗಂತ
ಹಿಡಕಂಬಾಕ್ಹೋದ್ರು
ಹಂದಿಬಲೆ ಹಾಕಿ ಬಿಟ್ಟಾರ
ಈಗಿನ್ನವು ಹಿಡಕಂಬಾಕ್ಹೋದ್ರೆ
ಆಹಾ ಕುದುರೆಣ್ಣಾ
ಮುಂದೆ ಬಂದವರನ್ನೋ
ಇನ್ನ ಕಡ್ಯಾಕ ಬರತೈತೋ
ಹಿಂದು ಬಂದವರನ್ನ ಕಾಲಿಲಾಗಿ ಒದಿತೈತೋ

ಬಲಗೈಲಿ ಬಂದವನ್ನ
ಬಲರೆಕ್ಕೆಲಿ ಹೊಡಿತೈತೋ
ಎಡಕ್ಕಾಗಿ ಬಂದವನ್ನ
ಎಡ ರೆಕ್ಕೇಲಿ ಹೊಡಿತೈತೋ
ಕುದುರ‍್ಯಾಗಿ ಬರಗೊಡ್ಸದಿಲ್ಲೊ
ಒಬ್ಬ ಮಣುಷ್ಯಾನ್ನಾ"॥೧॥

ಗಂಡು ಕುದುರಿ ಪಟಪಟ ರೆಕ್ಕೆ ಬಡಿಯುತ್ತಾ ಮೂರು ಲೋಕ ಆಕಾಶದ ಕಡೆಗೆಹೋದ ನಂತರ; ಹೆಣ್ಣು ಕುದುರೆ ತನ್ನ ಮಗುವಿಗೆ ಜನ್ಮಕೊಟ್ಟು ಸ್ವಲ್ಪ ಸಮಯದಲ್ಲೇ ಇನ್ನ ರೆಕ್ಕೆ ಬಡಿದು ಮೇಲಕ್ಕೆ ಏರುವಾಗ ಮೂರು ಮೇಘಕ್ಕೆ ಹೋಗುವ ಸಂದರ್ಭದಲ್ಲಿ, ಹೊಟ್ಟೆಯೊಳಗಿನ ಪಿಂಡ ಜ್ಯಾರಿ ಬಿದ್ದ ಕ್ಷಣ ರೆಕ್ಕೆಕೂಡ ಆರಿಲ್ಲ ಆದರೂ ಮೂವರ‍್ನ ಕೊಲ್ಲುತೈತಿ ಅನ್ನಿಸುತ್ತದೆ. ಸುಂದರವಾದ ಎರಡು ರೆಕ್ಕೆ ಹೊಂದಿರುವ ಕುದುರೆ ಇದ್ದು ಇಂತಹ ಕುದುರೆ ಭೂಲೋಕದೊಳಗೆ ಇರಬೇಕು ಎಂಬ ಆಶಯ ಜನಪದಕಾರರ ದೂರದೃಷ್ಟಿತ್ವವಾಗಿದೆ. ಅದನ್ನು ಮುಟ್ಟಲು ಸಾಧ್ಯವಿಲ್ಲ, ಏಕೆಂದರೆ ಅದಕ್ಕೆ ಹಂದಿಯ ಬಲೆಯನ್ನು ಹಾಕಲಾಗಿದೆ. ಕುದುರೆ ಮಾತ್ರ ಮುಂದೆ ಬಂದವರನ್ನ ಕಡಿಯ್ಯಾಕ ಬರತೈತಿ. ಹಿಂದೆ ಬಂದವರನ್ನ ಕಾಲಿಲೆ ಒದೆಯಕ ಬರುತೈತಿ. ಬಲಗಡೆ ಬಂದವರನ್ನ ಬಲರೆಕ್ಕೆಯಲಿ ಹೊಡೆಯುತ್ತದೆ. ಎಡಗಡೆ ಬಂದವರನ್ನ ಎಡರೆಕ್ಕೆಯಲಿ ಹೊಡೆಯುತ್ತದೆ. ಕುದುರೆ ಹತ್ತಿರ ಒಬ್ಬ ಮನುಷ್ಯನನ್ನು ಬರಗೊಡವಲ್ಲು ಇಂತಹ ಬಲಿಷ್ಠವಾದ ಕುದುರೆ ಎಂದು ಅದರ ಶೌರ್ಯ, ಸಾಹಸ, ವೀರತ್ವ ಗುಣವನ್ನು ಕೊಂಡಾಡಲಾಗಿದೆ.

ಅದರಂತೆ ಮೈಲಾರ ಲಿಂಗನ ಸಂಪ್ರದಾಯದಲ್ಲಿ ಕುದುರೆಯ ಆಚರಣೆ ಮತ್ತು ವಿಧಿ ವಿಧಾನ ಕುರಿತು ವಿಪುಲವಾದ ಮಾಹಿತಿ ದೊರೆಯುತ್ತದೆ. ಈ ವಿಷಯವನ್ನು ಪ್ರಭಾವವಾಗಿಟ್ಟುಕೊಂಡು ಡಾ.ಎಂ.ಬಿ.ನೇಗಿನಾಳ ಅವರು ಪ್ರಬಂಧದಲ್ಲಿ ಚರ್ಚಿಸುತ್ತಾ ಹೋಗುತ್ತಾರೆ. ಮೈಲಾರದ ದೇವರ ಗುಡ್ಡಕ್ಷೇತ್ರ ಆ ಭಾಗದ ಎರಡನೆಯ ಅತಿ ಮಹತ್ವದ ದೇವಾಲಯ, ಮೈಲಾರದ ಕಾರಣಿಕೋತ್ಸವಕ್ಕೆ ಹೋಗುವವರು ಮೊದಲು ಇಲ್ಲಿಗೆ ಬಂದು ದೇವರ ದರ್ಶನ ಪಡೆದುಕೊಂಡು ಹೋಗುವುದು ಪರಂಪರೆಯಾಗಿ ನಡೆದು ಬಂದಿದೆ. "ಪ್ರಸ್ತುತ ದೇವಾಲಯ ಗರ್ಭಗೃಹ ಅದಕ್ಕೆ ಹೊಂದಿ ಹೊರಗರ್ಭಗೃಹ, ಸುಕನಾಶಿಯಭಾಗ, ರಂಗಮಂಟಪ, ಅದಕ್ಕೆ ಹೊಂದಿದಂತೆ ವಿಶಾಲವಾದ ಮುಖಮಂಟಪ ಇವುಗಳಿಂದೊಡಗೂಡಿದೆ. ಪೂರ್ವ ಪಶ್ಚಿಮ ಮತ್ತು ಉತ್ತರ ದಿಕ್ಕುಗಳಿಂದ ಪ್ರದೇಶ ದ್ವಾರಗಳಿವೆ. ಮುಖ ಮಂಟಪದ ಎಡಭಾಗದಲ್ಲಿ ದೊಡ್ಡದೊಂದು ಕಟ್ಟೆಯಿದ್ದು ಅದರ ಮೇಲೆ ದೇವರ ವಾಹನವಾದ ಕುದುರೆಯ ಅನೇಕ ಮೂರ್ತಿಗಳನ್ನು ಇಡಲಾಗಿದೆ. ಇವೆಲ್ಲ ಕಟ್ಟಿಗೆಯಿಂದ ಮಾಡಿದವುಗಳಾಗಿದ್ದು ಇದಕ್ಕೆ ಬಣ್ಣ ಕೊಟ್ಟಿರುತ್ತಾರೆ. ಈ ಮೂರ್ತಿಗಳ

ಮುಂಭಾಗದ ಎಡ ಮೂಲೆಯಲ್ಲಿ 'ಭೂತಾಳಗಂಡಿ' ಎಂದು ಕರೆಯಲ್ಪಡುವ ಭಸ್ಮದ ಕುಂಡವಿದೆ. ಮುಖಮಂಟಪದಲ್ಲಿ ದೇವಸ್ಥಾನಕ್ಕೆ ಸಂಬಂಧಿಸಿದ ಗೊರವರೂ ಇತರ ಸೇವಕರೂ ಕುಳಿತಿರುತ್ತಾರೆ.

ಕುದುರೆಪ್ಪ ಉತ್ತರ ಬದಿಯ ಪ್ರವೇಶದ್ವಾರದ ಎಡ ಬಲಗಳಲ್ಲಿ ಎರಡು ಕಟ್ಟೆಗಳಿದ್ದು, ಬಲಬದಿಯ ಕಟ್ಟೆಯ ಮೇಲೆ ಒಂದು ತೂಗು ಮಂಚವನ್ನು ಇಳಿಬಿಡಲಾಗಿದೆ. ಅದರ ಮೇಲೆ ಚೆನ್ನಾಗಿ ಬಣ್ಣ ಬಳಿದ ಸುಂದರ ಕುದುರೆಯನ್ನಿಡಲಾಗಿದೆ. ಇದು ಕಟ್ಟಿಗೆಯ ಮೂರ್ತಿಯಾಗಿದ್ದು 'ಕುದುರೆಪ್ಪ' ಎಂದು ಅಲ್ಲಿನ ಜನ ಕರೆಯುತ್ತಾರೆ. ಇದಕ್ಕೆ ವಿಶೇಷ ಪೂಜೆ ಪುನಸ್ಕಾರಗಳು ಗೌರವವೂ ಸಲ್ಲುತ್ತವೆ. ಈ ಕುದುರೆಯ ಸಮ್ಮುಖದಲ್ಲಿ ಇಲ್ಲಿಯ ಒಡೆಯರು ಹೊರೆ ಹೊದಿಸುವುದು ಮುಂತಾದ ಕಾರ್ಯಕಲಾಪ ನೆರವೇರಿಸುತ್ತಾರೆ."[೨೨]

ವಿಜಾಪುರದಿಂದ ಪೂರ್ವಕ್ಕೆ ಸು.೩೫ ಕಿ.ಮೀ. ಅಂತರದಲ್ಲಿ ವಿಜಾಪುರ, ಕಲಬುರ್ಗಿಗಳ ಹೆದ್ದಾರಿಯಲ್ಲಿ ಹಿಪ್ಪರಗಿ ಗ್ರಾಮವಿದೆ. ಇದನ್ನು ದೇವರ ಹಿಪ್ಪರಗಿ ಎಂದು ಕರೆಯುತ್ತಾರೆ. ಜನಸಾಮಾನ್ಯರು ಇಲ್ಲಿಯ ದೇವರನ್ನು 'ಹಿಪ್ಪರಗಿ ಮಲ್ಲಯ್ಯ' ಎಂದು ಗುರುತಿಸುತ್ತಾರೆ. ಈ ದೇವಸ್ಥಾನದಲ್ಲಿ ಮಲ್ಲಯ್ಯನ ಕಟ್ಟೆ ಇದ್ದು. ಕಟ್ಟೆಯ ಎದುರುಗಡೆ ಸ್ವಲ್ಪ ಅಂತರದಲ್ಲಿ ಕಲ್ಲಿನಲ್ಲಿ ಕೆತ್ತಿದ ಕುದುರೆಯನ್ನು ಶಿಲಾಪೀಠದ ಮೇಲೆ ಸ್ಥಾಪಿಸಲಾಗಿದೆ. ಕುದುರೆಯ ಹಿಂಬದಿಯಲ್ಲಿ ಕರ್ನಾಟಕದ ಉತ್ತರಗಡಿ ಪ್ರದೇಶ ಮತ್ತು ಮಹಾರಾಷ್ಟ್ರದ ದೇವಾಲಯಗಳಲ್ಲಿ ತೋರಿರುವಂಥ ದೀಪಮಲಾಸ್ತಂಭವಿದೆ.

ಕಲ್ಲಿನ ಕುದುರೆ ದಕ್ಷಿಣಾಭಿಮುಖವಾಗಿದ್ದು ಸುಂದರವಾಗಿದೆ. ಕುದುರೆಯ ಎದೆಯ ಮೇಲೆ ಸರ್ಪವನ್ನು ಬಿಡಿಸಲಾಗಿದೆ. ಅಡಿಯಲ್ಲಿ ಏನೋ ಬರಹವಿದ್ದ ಹಾಗಿದೆ. ಆದರೆ ಗಾರೆಯ ಕೆಲಸದಲ್ಲಿ ಅದು ಮುಚ್ಚಿಹೋಗಿದೆ. ಪೌಳಿಯ ಇತರೆಡೆಗಳಲ್ಲಿ ಪ್ರಾಚೀನ ಅವಶೇಷಗಳು ಹರಡಿವೆ.

"ರಾವುತರಾಯನ ಬಲಬದಿಯಕಟ್ಟೆಯ ಮೇಲೆ ಅಶ್ವಾರೋಹಿಯಾದ ಮೈಲಾರಲಿಂಗನ ಇನ್ನೊಂದು ಮೂರ್ತಿಯಿದ್ದು ಇದರ ಮಗ್ಗುಲಲ್ಲಿ ಚಿಕ್ಕದಾಗಿ ಗಂಗಿಮಾಳವ್ವನನ್ನು ತೋರಿಸಲಾಗಿದೆ. ಅಶ್ವೀನ ಶುದ್ಧ ಏಕಾದಶಿಯಂದು 'ರಾವುತರಾಯನ' ಬಂಡಿ ಕಟ್ಟುತ್ತಾರೆ. ಆ ಬಂಡಿಯ ಮೇಲೆ ಕಟ್ಟಿಗೆಯ ಕುದುರೆಯನ್ನು ಸ್ಥಾಪಿಸಿ ಅದರ ಮೇಲೆ ರಾವುತರಾಯನ ಮೂರ್ತಿಯನ್ನ ಬಿಗಿಯಾಗಿ ಕಟ್ಟುತ್ತಾರೆ. ಊರಲ್ಲಿಂದ ಉತ್ಸವ ಹೊರಟು ರಸ್ತೆಯ ಮೇಲಿರುವ ಶಿರಗಟ್ಟಿಗೆ ಬಂದು ಅಲ್ಲಿ ಹೇಳಿಕೆಯ ಕಾರ್ಯಕ್ರಮ ನಡೆಯುತ್ತದೆ. ಅಲ್ಲಿ ಗುಂಡಿನ ಗೊಂಚಲಿನಿಂದ ಬಡಿದು ಕೊಳುವ ಕಬ್ಬಲಿಗ ಜಾತಿಯ ಗೊರವಯ್ಯನ ಮೇಲೆ ದೇವರ ಆವೇಶವಾಗುತ್ತದೆ. ಆಮೇಲೆ ಹೇಳಿಕೆ ತರುವಾಯ ರಾವುತರಾಯನನ್ನು ಮುಖ್ಯ ದೇವಾಲಯಕ್ಕೆ ತರಲಾಗುತ್ತದೆ. ಸೀಗೆಯ ಹುಣ್ಣಿಮೆಯವರೆಗೆ ದೇವರು ಅಲ್ಲಿಯೇ ಇರುತ್ತಾನೆ.

ಏಕಾದಶಿಯ ತರುವಾಯ ನಡೆಯುವ ಈ ಉತ್ಸವ ಕುದುರೆಯ ಹಬ್ಬದ ರೂಪಾಂತರವೆಂಬುದು ನಿಶ್ಚಯ. ಈ ಹಬ್ಬದಲ್ಲಿ ದೇವರು ಕುದುರೆ ಏರಿ ಮುಖ್ಯ ದೇವಾಲಯದದಿಂದ ದೂರ ಹೋಗಿ

ಕುರುಬತೆವ್ವನ ದರ್ಶನ ಮಾಡಿ ಬರುವುದು ಸಾಮಾನ್ಯವಾದ ಸಂಪ್ರದಾಯ. ಈ ದೇವಸ್ಥಾನದ ಉಸ್ತುವಾರಿಯನ್ನು ಹಿಪ್ಪರಗಿಯ ನಾಡಗೌಡ ಮತ್ತು ದೇಶಪಾಂಡೆ (ಬ್ರಾಹ್ಮಣ) ಯವರು ನೋಡಿಕೊಳ್ಳುತ್ತಿದ್ದಾರೆ. ಪಂಚಮಸಾಲಿ ಲಿಂಗಾಯತರು ಎರಡು ದೇವಾಲಯಗಳಲ್ಲಿ ನಿತ್ಯಪೂಜೆ, ಭಂಡಾರಪೂಜೆ, ನಂದೀ ದೀವಿಗೆ ಮುಂತಾದ ಕಾರ್ಯ ನಿರ್ವಹಿಸುತ್ತಾರೆ. 'ಮಳ್ಳರು' ಎಂದು ಕರೆಯಲಾಗುವ ಇನ್ನೊಂದು ಕುರುಬ ಮನೆತನದವರು ರಾವುತರಾಯನು ಏರುವ ಕುದುರೆಯ ವ್ಯವಸ್ಥೆ ನೋಡಿಕೊಳ್ಳುತ್ತಾರೆ. ಕುದುರೆಗೆ ಬಣ್ಣ ಹಾಕುವುದು, ಬಂಡಿಕಟ್ಟುವಾಗ ಅದನ್ನು ತಂದು ಬಂಡಿಯ ಮೇಲೆ ಸ್ಥಾಪಿಸುವುದು ಪುನಃ ಗರ್ಭಗೃಹದಲ್ಲಿ ಅದನ್ನು ನೆಲೆಗೊಳಿಸುವುದು ಇವು 'ಮಳ್ಳರು' ಮಾಡುವ ಸೇವೆಗಳು."[illegible]

ಕುದುರೆಹಬ್ಬ : ಇಲ್ಲಿ ಕುದುರೆಯ ಹಬ್ಬವನ್ನು ಶೀಗೆಯ ಹುಣ್ಣಿಮೆಯ ತರುವಾಯ ಏಳನೆಯ ದಿನಕ್ಕೆ ಆಚರಿಸುವರು. ಅಂದು ನಾಲ್ಕು ಗಂಟೆಯ ಸುಮಾರಿಗೆ ಅಶ್ವಾರೋಹಿಯಾಗಿ ಮಲ್ಲಯ್ಯ ಬೇಟೆಗಾಗಿ ಹೊರಡುವನು. ಇವನು ಹೊರಟಿರುವುದು ಹೆಸರಿಗೆ ಹುಲಿಬೇಟೆಗಾಗಿಯಾದರೂ ನಿಜವಾದ ಉದ್ದೇಶ. ಕುರುಬತಿಯ ಮನೆಗೆ ಹೋಗಿ ಬರುವದು.

"ಅಶ್ವಾರೋಹಿಯಾಗಿರುವ ಉತ್ಸವ ಮೂರ್ತಿಯನ್ನು ಕಟ್ಟಿಗೆಯ ಕುದುರೆಯೊಂದರ ಮೇಲೆ ಬಿಗಿದು ಕಟ್ಟಿ, ಅದನ್ನು ಪುನಃ ಒಂದು ಚಿಕ್ಕ ಬಂಡಿಯ ಮೇಲೆ ಬಿಗಿಯಾಗಿ ಕಟ್ಟುವರು. ಜೊತೆಯಲ್ಲಿ ಪಲ್ಲಕ್ಕಿಯೊಳಗೆ ಉತ್ಸವ ಮೂರ್ತಿಯನ್ನು ಹೊರಡಿಸುವರು. ಅದರ ಮುಂದೆ ಕುದುರೆಯನ್ನು ಎಂದರೆ ಅದನ್ನು ಕಟ್ಟಿದ ಬಂಡಿಯನ್ನು ಎಳೆದೊಯ್ಯುವರು.

ದೇವರು ಹೊಲಲದ ದಾರಿಯಲ್ಲಿರುವ ಶಿಬಾರಕ್ಕೆ ಹೋಗಿ ಅಲ್ಲಿಂದ ಮುಂದೆ ಕುರಬತೆವ್ವನ ಸ್ಥಾನಕ್ಕೆ ಹೋಗುವನು. ಇಲ್ಲಿಗೆ ಬರಬೇಕಾದರೆ ನೇರವಾಗಿ ದಾರಿ ಹಿಡಿದು ಬರದೆ ಕುದುರೆ ಬದಿಯ ಹೊಲಗಳಲ್ಲಿ ಸಿಕ್ಕಾಪಟ್ಟೆ ಓಡುತ್ತದೆ ಎಂದರೆ ಬಂಡಿಯನ್ನು ಆ ರೀತಿ ಲಂಗು ಲಗಾಮಿಲ್ಲದೆ ಜನ ಎಳೆದಾಡುತ್ತಾರೆ. ಹೊಲಗಳಲ್ಲಿ ಬೆಳೆ ಬೆಳೆದು ನಿಂತಿದ್ದರೂ ಈ ರೀತಿ ಕುದುರೆಯ ಓಡಾಟ ನಡೆಯಲೇಬೇಕು.

ಕುರುಬತಿಯ ಸ್ಥಾನದಲ್ಲಿ ದೇವರಿಗೆ ಮಂಗಳಾರತಿಯಾಗುತ್ತದೆ. ತರುವಾಯ ಒಡೆಯರು ಅಂಬು ಹೊಡೆಯುವರು. ಒಟ್ಟು ಮೂರು ಬಾಣಗಳನ್ನು ಹೊಡೆಯುವುದು ಸಂಪ್ರದಾಯ. ಇದು ಹುಲಿ ಹೊಡೆದುದರ ಸಂಕೇತವಾಗಿದೆ."[illegible] ಈ ರೀತಿಯ ಹಬ್ಬವನ್ನು ಸಂಭ್ರಮದಿಂದ ಆಚರಿಸುತ್ತಿರುವುದು ತಲೆತಲಾಂತರದಿಂದ ನಡೆದುಕೊಂಡು ಬಂದಿದೆ.

"ಮಾರ್ಗಶಿರ ಶು. ಪಾಡ್ಯದಂದು ದೇವಸ್ಥಾನದಲ್ಲಿ ಪುನಃ ನವರಾತ್ರಿಯಂತೆ ನಂದಾದೀಪ ಇಡಲಾಗುವುದು. ದೇವರಿಗೆ ನಿತ್ಯ ಅಭಿಷೇಕ, ಬುತ್ತಿ ಪೂಜೆ ಮುಂತಾದ ಸೇವೆಗಳು ನಡೆಯುತ್ತವೆ. ಷಷ್ಠಿಯಂದು

ಊರಲ್ಲಿಯ (ಆಯ್ದ ಜನ) ಮುತ್ತೈದೆಯರು (ಸಾಮಾನ್ಯವಾಗಿ ಗೊರವಿಯರು) ಉಪವಾಸ ಆಚರಿಸುವರು. ಅವರು ನದಿ ಸ್ನಾನಕ್ಕೆ ಹೋಗಿ ಸ್ನಾನ ಮಾಡಿ ಬರುವರು. ನಿಶ್ಚಿತ ಪ್ರಮಾಣದ ಅರಿಸಿಣ ಕೊಂಬುಗಳನ್ನು ತೆಗೆದುಕೊಂಡು ಅವನ್ನು ಕುಟ್ಟುವರು. ತರುವಾಯ ಅದರಲ್ಲಿ 'ಕರಿಯೆಳೆ ಎಂದರೆ ಸ್ವಲ್ಪ ಕುರಿಉಣ್ಣೆ, ಬಂಗಾರ, ಬೆಳ್ಳಿ ಮತ್ತು ಮುತ್ತು ಹವಳಗಳನ್ನು ಸೇರಿಸಿ ಬೇಸಿ ತಯಾರಾದ ಅರಿಸಿಣವನ್ನು ಒಂದು ತಟ್ಟೆಯಲ್ಲಿಟ್ಟು ದಂಡೆಯ ಹೂಗಳಿಂದ ಅಲಂಕರಿಸುವರು. ಅಷ್ಟರಲ್ಲಿ ಗಂಗಿ ಮಾಳಮ್ಮ, ತುಪ್ಪದ ಮಾಳಮ್ಮ, ಚಿಕ್ಕಯ್ಯ, ಜುಂಜಯ್ಯ, ಹೆಗ್ಗಡೆ ಮೊದಲಾದ ಎಲ್ಲ ದೇವರಿಗೆ ಪೂಜೆ ಸಂದಿರುತ್ತದೆ. ಆನಂತರ 'ಕುದುರೆಯಮನೆ' ಎಂದಿರುವ ಒಡೆಯರ ಮನೆಯ ಸ್ಥಳಕ್ಕೆ ಮುಖ್ಯ ಒಡೆಯರು ಪತ್ನಿ ಸಮೇತರಾಗಿ ಭಕ್ತರು ಪರಿವಾರ, ವಾಲಗಗಳಿಂದೊಡಗೂಡಿ ಆ ತಟ್ಟೆಯೊಂದಿಗೆ ಬರುವರು. ಅವರು ಬರುವಾಗ ಅದರ ದಾರಿಗುಂಟ ಹಡದಿ ಹಾಸುವರು. ಗೊರವರು, ಡಮರು, ಗಂಟೆ, ಪಾರಿ ಮುಂತಾದ ವಾದ್ಯಗಳನ್ನು ಬಾರಿಸುತ್ತಿರುವರು."[೫೫]

ಆರತಿಯನ್ನು ಕಕ್ಕಡವನ್ನು ಅವರ ಕೈಯಿಂದ ಕಿತ್ತುತೆಗೆದು ಮೇಲೆ ಪದ್ಧತಿಯಂತೆ ಅವನು ಆ.....ಹಾ.....ಹಾ.....' ಎಂದು ವಂದಿಸಿ ತನ್ನ ಮುಂಗೈ ರಕ್ತದ ಕೆಲವು ಹನಿಗಳನ್ನು ದೇವರತ್ತ ಸಿಂಪಡಿಸುವನು. ಆಗ ಒಡೆಯರು ತಮ್ಮ ಮನೆಯಿಂದ ತಂದ ಬಿಲ್ಲಿಗೆ ದೇವರ ಬಾಣಗಳನ್ನು ಹೂಡಿ ಮೂರು ಸಲ ಬಾಣ ಬಿಡುವರು.

"ಇತ್ತ ಬದಿಯ ಬಯಲಿನಲ್ಲಿ ಕುದುರೆ, ಕತ್ತಿ ಗೂಳಪ್ಪಗಳ ಓಡಾಟ, 'ನಾಯಿ ಜಗಳದ ಸೇವೆ' ಕುದುರೆಯ ಕುಣಿತ ಮುಂತಾದ ಕಾರ್ಯಗಳು ನಡೆಯುತ್ತಲೇ ಇರುವವು. ರಾತ್ರಿ ಗುಡ್ಡದ ಮೇಲೆ ನಡೆಯುವ ಈ ಕಾರ್ಯಕ್ರಮ ಒಟ್ಟಿನಲ್ಲಿ ರುದ್ರಗಂಭೀರವಾಗಿಯೇ ತೋರುವುದು. ಬಾಣ ಹೊಡೆಯುವ ಕಾರ್ಯಕ್ರಮ ಮುಗಿದ ಮೇಲೆ ಉತ್ಸವ ಮರಳುವುದು. ಬರುತ್ತ ದಾರಿಯಲ್ಲಿರುವ ಇನ್ನೊಂದು ಶಿಬಾರದಲ್ಲಿ ದೇವರು ಮಂಡಿಸುವನು. ಅಲ್ಲಿ ಮಂಗಳಾರತಿಯಾಗಿ ದೇವರು ಕುರುಬತೆವ್ವನ ಭೇಟಿಗೆ ಹೋಗುವನು.

ಕುರುಬತೆವ್ವ ಅಥವಾ ಕುರುಬ ಮಾಳವ್ವನ ಗುಡಿಗೆ ಪಲ್ಲಕ್ಕಿ ಬಂದ ಮೇಲೆ ಅಲ್ಲಿ ಅದನ್ನು ಇಳಿಸಿಟ್ಟು ದೇವರಿಗೂ ಕುರುಬತ್ತೆವ್ವನ ಮೂರ್ತಿಗೂ ಆರತಿ ಎತ್ತುವರು. ಮುಂದಿನ ಕ್ರಮಗಳೆಲ್ಲ ಮೈಲಾರದಲ್ಲಿಯಂತೆ ನಡೆದು ತಪ್ಪೊಪ್ಪಿಗೆಯ ಆನಂತರ ಪೌಳಿಯಲ್ಲಿ ಪ್ರದಕ್ಷಿಣೆ ಹಾಕಿ ದೇವರನ್ನು ಗುಡಿ ತುಂಬಿಸುವರು.

ಮಹಾಲಯ ಅಮವಾಸ್ಯೆಯಿಂದ ಪ್ರಾರಂಭವಾದ ಒಟ್ಟು ಕಾರ್ಯಕ್ರಮಗಳು ಈ ಕುದುರೆಯ ಹಬ್ಬದ ಆಚರಣೆಯೊಂದಿಗೆ ಮುಕ್ತಾಯಗೊಳ್ಳುವವು. ಈ ಅವಧಿಯಲ್ಲಿ ದೇವರ ಗುಡ್ಡದಲ್ಲಿ ದನಗಳ ದೊಡ್ಡ ಪ್ರಮಾಣದ ಜಾತ್ರೆ ನಡದೇ ಇರುವುದು. ನಾನಾ ಬಗೆಯ ಹರಕೆ ಹೊತ್ತವರು ಬಂದು ತಮ್ಮ ಹರಕೆಗಳನ್ನು ಒಪ್ಪಿಸುತ್ತಲೆ ಇರುವರು. ಹೊರೆ ಹೊರುವವರು ಹೊರೆ ಹೊರುತ್ತಲೇ ಇರುವರು.

‘ಭಟ್ಟಿಯ ಭಂಡಾರ ಪೂಜೆ’ ಮೈಲಾರದಲ್ಲಿ ನಡೆಯುವಂತೆ ಈ ಕಾರ್ಯಕ್ರಮ ಮೈಲಾರ ಲಿಂಗ ದೇವಸ್ಥಾನಗಳು ಎಲ್ಲೆಲ್ಲಿ ಇವೆಯೋ ಅಲ್ಲಲ್ಲಿ ನಡೆಯಲೇ ಬೇಕು. ಅದೇ ಪ್ರಕಾರ ದೇವರ ಗುಡ್ಡದಲ್ಲಿಯೂ ನಡೆಯುತ್ತದೆ. ಮೈಲಾರದಲ್ಲಿನಂತೆ ಮರುದಿನ ಬೆಳಗಿನ ನಾಲ್ಕು ಗಂಟೆಗೆ ಗೊರವರು ಪೂಜಾರಿಗಳು ಮುಂತಾದವರು ಸೇರಿ ಅರುಣೋದಯಕ್ಕೆ ಮುಂಚೆ ಬೀಗ ಮುದ್ರೆ ತೆರೆದು ಭಂಡಾರವನ್ನು ‘ಕುದುರೆಪ್ಪನ’ ಸ್ಥಾನಕ್ಕೆ ಒಯ್ಯುವರು. ಭಂಡಾರ ಪೊಡೆದ ಸುದ್ದಿ ಊರಲ್ಲಿ ಹರಡಿ ಬಂದ ಭಕ್ತಾದಿಗಳು ಕುದುರೆಯಪ್ಪನ ಎದರು ಭಂಡಾರ ಪಿಡೆದು ತಮ್ಮ ಊರುಗಳಿಗೆ ತೆರಳುವರು.”[೫೬]

ಮಹಾರಾಷ್ಟ್ರದ ವ್ಯಾಘ್ರ ಮುರಳಿಯರು ಕರ್ನಾಟಕದವರಂತೆ ಕಂಬಳಿಯ ನಿಲುವಂಗಿ, ಮುರಗಿ, ಮುಂಡಾಸ, ಕುಲಾವಿ ಮುಂತಾದವನ್ನು ಧರಿಸುವುದಿಲ್ಲ. ಸಾಮಾನ್ಯರ ಬಟ್ಟೆಯಲ್ಲಿಯೇ ಇರುತ್ತಾರೆ. (ಪೇಂಬರ ಮೈಲಾರದ ಖಿದಾಮತಿ ವೆಗ್ಗೆರು ಕಸೆಯಂಗಿ ಅಲ್ಲಿ ‘ಕುದುರೆ’ ಇರುವ ಮಂಟಪದ ಮುಂದೆ ಆ ತಟ್ಟೆಯನ್ನಿಟ್ಟು ದಂಡೆಯ ಹೂಗಳಿಂದ ಕುದುರೆ ಮೊದಲಾದ ದೇವರ ಪ್ರತೀಕಗಳನ್ನು ಪೂಜಿಸುವರು. ನಂತರ ಒಂದು ಬಟ್ಟಲು ಭಂಡಾರ ತೆಗೆದು ಮಂಟಪದಲ್ಲಿ ಅರ್ಪಿಸುವರು. ಆಮೇಲೆ ಬಂದ ರೀತಿಯಲ್ಲಿಯೇ ವೈಭವದೊಡನೆ ಗಂಗಿ ಮಾಳಮ್ಮನ ಗುಡಿಗೆ ಬರುವರು. ದೇವಿಗೆ ನಮಸ್ಕರಿಸಿ, ಮುಖ್ಯ ದೇವಾಲಯದ ಸುತ್ತ ಒಂದು ಪ್ರದಕ್ಷಿಣೆ ಬರುವರು.

“ಕುದುರೆಯಹಬ್ಬವನ್ನು ಮೈಲಾರದಲ್ಲಿ ಶೀಗೆ ಹುಣ್ಣಿಮೆ (ಆಶ್ವೀನ ಶುದ್ಧ ೧೫) ಯ ತರುವಾಯ ೭ನೆಯ ದಿನದಂದು ಆಚರಿಸಿದರೆ, ದೇವರ ಗುಡ್ಡದಲ್ಲಿ ೯ನೆಯ ದಿನದಂದು ಆಚರಿಸುತ್ತಾರೆ. ದೇವರಗುಡ್ಡದ ಆಚರಣೆಯಲ್ಲಿಯೂ ಕೆಲವು ವ್ಯತ್ಯಾಸಗಳು ಸದ್ಯ ಗೋಚರಿಸುತ್ತಿರುವುದರಿಂದ ಇಲ್ಲಿಯೂ ಅದನ್ನು ತಕ್ಕಷ್ಟು ವಿವರಗಳಿಂದ ವರ್ಣಿಸಲಾಗುವದು. ೯ನೆಯ ದಿನ ರಾತ್ರಿ ಏಳುವರೆ ಗಂಟೆಯ ಸುಮಾರಿಗೆ ನಗಾರಿ ಬಾರಿಸಲಾಗುತ್ತದೆ. ಅದನ್ನು ಕೇಳಿ ಒಡೆಯರು ಗೊರವ ಗೊರವಿಯರು ಇತರ ಪರಿಚಾರಕರು ಮುಂತಾದವರೆಲ್ಲ ದೇವಸ್ಥಾನದಲ್ಲಿ ಬಂದು ಸೇರಿ ದೇವರ ಉತ್ಸವ ಮೂರ್ತಿಯನ್ನು ಸಜ್ಜುಗೊಳಿಸುವರು. ಜೊತೆಗೆ ಕಟ್ಟಿಗೆಯ ಕುದುರೆ ಮತ್ತು ‘ಖಂಡೇರಾಯ’ನ ಮೂರ್ತಿಯನ್ನು ಮೈಲಾರದಲ್ಲಿನಂತೆ ಬಂಡಿಯ ಮೇಲೆ ಚೆನ್ನಾಗಿ ಬಿಗಿಯುವರು. ಏಳೆಂಟು ಜನ ಆ ಬಂಡಿಯ ಮೇಲೆ ಏರಿ ನಿಂತು ಮೂರ್ತಿಯನ್ನು, ಕುದುರೆಯನ್ನೂ ಗಟ್ಟಿಯಾಗಿ ಹಿಡಿದುಕೊಳ್ಳುವರು.

ತರುವಾಯ ಬ್ರಾಹ್ಮಣ ಅರ್ಚಕನೊಬ್ಬನನ್ನೂ, ‘ಕತ್ತಿಯ ಗೂಳಪ್ಪ’ ಅಥವಾ ‘ಮಿಂಡಗಾರ’ನನ್ನಾಗಿ ಅಲಂಕರಿಸುವರು. ಈತನ ಹಣೆಯ ಮೇಲೆ ಭಂಡಾರ, ಗಂಧ, ಕುಂಕುಮ ಹಚ್ಚಿ ಕೊರಳಲ್ಲಿ ಹೂಮಾಲೆ ಹಾಕುವರು. ಈತನ ಕೈಯಲ್ಲಿ ಹಿಡಿಯಲು ದೇವಾಲಯದಲ್ಲಿರುವ ಮರದ ದೊಡ್ಡ ಕತ್ತಿಯನ್ನು ಕೊಡುವರು. ಮೈಮೇಲೆ ಹೊಸಬಟ್ಟೆ ಧರಿಸಿಕೊಂಡು ಈತ ಸಜ್ಜಾಗಿರುವನಾದರೂ ಹೆಚ್ಚು ಬಟ್ಟೆ ಇರುವುದಿಲ್ಲ. ಕಾರಣವೆಂದರೆ ಈತ ದೇವರ ಜೊತೆಗೆ ವಿಪರೀತ ಓಡಾಡಬೇಕು. ಆದ್ದರಿಂದ ಒಂದು ಧೋತರ ಅಥವಾ ಪೈಜಾಮು ಹಾಕಿಕೊಂಡು ಮೇಲೊಂದು ಬನಿಯನ್ನು ತೊಡುವನು.

ಪಲ್ಲಕ್ಕಿ ಸಮೇತ ಎಲ್ಲರೂ ಉತ್ತರ ತುದಿಯಲ್ಲಿರುವ ಗುಡ್ಡದ ಶಿಬಾರಕ್ಕೆ ಹೊರಡುವರು. ಪಲ್ಲಕ್ಕಿಯೇನೋ ಮೆಲ್ಲನೆ ಸಾಗುತ್ತಿರುತ್ತದೆ. ಆದರೆ ಕುದುರೆ ಮತ್ತು ಕತ್ತಿಯ ಗೂಳಪ್ಪ ಮಾತ್ರ ಜೋರಾಗಿ ಓಡಾಡುತ್ತಾರೆ. ಎಷ್ಟೋ ವೇಳೆ ಓಡಲು ಅಸಮರ್ಥನಾದ ಕತ್ತಿಯ ಗೂಳಪ್ಪನನ್ನು ಉತ್ಸಾಹಿ ತರುಣರು ಎತ್ತಿಕೊಂಡು ಓಡುವರು. ಈ ಓಡಾಟದಿಂದ ಅವನೆಷ್ಟು ಸುಸ್ತಾಗಿರುವನೆಂದರೂ ಬಿಡದೇ ಓಡಿಸುತ್ತಲೇ ಇರುವರು.

ಪಲ್ಲಕ್ಕಿಯ ಮೆರವಣಿಗೆ ವಾಲಗ, ವಾದ್ಯ, ಗೊರವರ ನಾಯಿಜಗಳ, ಇತರ ಸೇವೆಗಳು ಇತ್ಯಾದಿಯಾಗಿ ಮೆಲ್ಲನೆ ಹೊರಟು ಮೇಲೆ ಹೇಳಿದ ಶಿಬಾರಕ್ಕೆ ಬರುವದು. ಅಲ್ಲಿ ಪಲ್ಲಕ್ಕಿಯಲ್ಲಿನ ಉತ್ಸವ ಮೂರ್ತಿಯನ್ನು ಪೂರ್ವಾಭಿಮುಖವಾಗಿಟ್ಟು ಅಭಿಷೇಕ ಮಾಡುವರು. ಕಂಚಾವೀರರು ಮುಂಗೈ ಪವಾಡ ಮಾಡಿ ದೇವರಿಗೆ ಅದರಿಂದ ಆರತಿ ಮಾಡುವರು.

ಭಂಡಾರ ಚೀಲ ಕವಡೆಯ ಸರ, ಜೋಳಿಗೆ ಇವು ಇರಲೇಬೇಕು. ಢೋಳ, ತುಂತುಣಿ, ತಾಳ, ಕಾಲ್ಗೆಜ್ಜೆಗಳಿಂದ ಕುಣಿಯುತ್ತ ಹಾಡುವುದು ಅವರ ವೈಶಿಷ್ಟ್ಯ.

"ಕುದುರೆಕಾರರು ಕಂಬಳಿಯ ನಿಲುವಂಗಿಯ ಬದಲು ಹಸಿರು, ಕೆಂಪು ಮುಂತಾದ ಬಣ್ಣಗಳ ಕುತನಿಯ (velvet) ನಿಲುವಂಗಿ ಧರಿಸುವರು. ಕಾಲಲ್ಲಿ, 'ಗಗ್ಗರ' ಅಥವಾ ಗೆಜ್ಜೆಸರ ಕಟ್ಟಿಕೊಳ್ಳುವರು. ಕೈಯಲ್ಲಿ ಬಾರಕೋಲು (ಚಾಟಿ) ಹಿಡಿದಿರುವರು. ದೀಕ್ಷೆಯ ಕಾಲಕ್ಕೆ ಈ ಗಗ್ಗರ ಮತ್ತು ಚಾಟಿಗಳಿಗೂ ಪೂಜೆ ಸಲ್ಲುವುದು. ಒಡೆಯರು ದೀಕ್ಷೆಕೊಟ್ಟು ತರುವಾಯ ಇವರು ಸ್ವಲ್ಪ ಹೊತ್ತು (ಗಂಗಿ ಮಾಳಮ್ಮನ) ಗುಡಿಯ ಮುಂದೆ ಕುಣಿದು ತಮ್ಮ ಹೊರೆಯ ಕಾಯಕ ಪ್ರಾರಂಭಿಸುವರು. ಜೊತೆಗೆ ಕುದುರೆಯ 'ದಾಣಿ' (ಆಹಾರ) ಎಂದರೆ ಮಂಡಕ್ಕಿ, ಸೇವು, ಚೋಡಾ, ಹುರಿಗಡಲೆ, ಮುಂತಾದ ಐದು ದಿನಸುಗಳುಳ್ಳ 'ಪರಾಳ'ನ್ನು ಬಾಯಿಂದ ಮುಕ್ಕುತ್ತ ಕುಣಿಯುವುದು ಅವಶ್ಯ. ಇತರ ಭಕ್ತರು ಇವರ ಮುಂದೆ ಎತ್ತರದ ಒಂದು ಬಟ್ಟೆಯಲ್ಲಿ ಈ 'ದಾಣಿ' ಹಾಕಿ ಹಿಡಿದಿರುವರು. 'ಕುದುರೆ'ಗಳು ಕುಣಿಯುತ್ತ ಬಂದು ಅದನ್ನು ಬಾಯಿಂದ ಮುಕ್ಕಬೇಕು.

ಮೈಲಾರ ಲಿಂಗನ ವಾಹನ ಕುದುರೆಯಷ್ಟೇ. ಇವರು ತಾವು ಅವರ ಕುದುರೆಗಳೇ ಎಂದು ಭಾವಿಸಿಕೊಂಡು ಕುಣಿಯುವರು. ವಿಶೇಷವಾಗಿ ಗಂಗಿಮಾಳಮ್ಮನ ಗುಡಿಯ ಮುಂದೆ ಉತ್ಸವ ಹೊರಟಾಗ ಪಲ್ಲಕ್ಕಿಯ ಮುಂದೆ ಕುಣಿಯುತ್ತಿರಬೇಕಾದುದು ಇವರ ಕಾರ್ಯ. ಕಾಲಿಗೆ ಗಗ್ಗರ ಕಟ್ಟಿಕೊಂಡು ವಿಶೇಷ ಗತ್ತಿನಿಂದ ಢೈ, ಢೈ ಎಂದು ಕುಣಿಯುತ್ತ ಕೈಯಲ್ಲಿಯ ತಮ್ಮ ಚಾಟಿಯಿಂದ ಕಾಲುಗಳಿಗೆ ತಾವೇ 'ಧಡ್ ಧಡ್' ಎಂದು ಹೊಡೆದುಕೊಳ್ಳುವರು. ಅನೇಕ ವೇಳೆ ಕಾಲಿನ ಚರ್ಮ ಕಿತ್ತು ರಕ್ತ ಒರಸುತ್ತಿದ್ದರೂ ಬಿಡದೆ ಹೊಡೆದುಕೊಳ್ಳುತ್ತಲೇ ಇರುವರು. ಮಹಾರಾಷ್ಟ್ರದಲ್ಲಿ ಇದು ಕ್ವಚಿತ್ತಾಗಿ ಕಂಡು ಬರುವ ಹೊರೆ. ನಳದುರ್ಗ ಮತ್ತು ಪಾಲಿ ಪೇಂಬರ (ಸಾತಾರಾ ಜಿಲ್ಲೆ)ಗಳಲ್ಲಿ ಇದು ಈಗಲೂ ಊರ್ಜಿತದಲ್ಲಿದೆ.

ಕ್ರಿ.ಶ.೧೧೧೨ರಲ್ಲಿ ನಯಸೇನನಿಂದ ರಚಿತವಾದ 'ಧರ್ಮಾಮೃತ'ದಲ್ಲಿ ಮೈಲಾರನ ಗೊರವನಂತೆ ತಂತಮ್ಮನೆ ಬಡಿದುಕೊಳ್ವ 'ಅಚ್ಚುಳಾಯ್ನರು' ಎಂಬ ಉಲ್ಲೇಖವಿದೆ. ನಯಸೇನನ ಹೇಳಿಕೆ, ಈ ಕುದುರೆಯ ಕುಣಿತವನ್ನೇ ಕುರಿತಿದೆಯೆಂಬುದು ಸ್ಪಷ್ಟ. ಈ ಸಂಪ್ರದಾಯದ ಆರಾಧನಾ ವಿಧಿಗಳಲ್ಲಿ ಎಲ್ಲಕ್ಕೂ ಮೊದಲು ಉಲ್ಲೇಖಗೊಂಡ ಕೀರ್ತಿ ಇದಕ್ಕೆ ಸಲ್ಲುತ್ತದೆ."[೫೭]

ಕರ್ನಾಟಕದಲ್ಲಿ ಕುರುಬತಿ ಸಂಬಂಧವಾದ ಈ ಕತೆಯನ್ನೊಳಗೊಂಡ ಹಾಡುಗಳನ್ನು 'ಕುದುರೆಯ ಹಬ್ಬದ' ಸಂದರ್ಭದಲ್ಲಿ ಹಾಡಲಾಗುವ ಅಂಶ ಇಲ್ಲಿ ನೆನಪಿಡಬೇಕಾದುದು.

"ನಾಯಿಗೊರವರಿರುವಂತೆ ಕರ್ನಾಟಕದಲ್ಲಿ ಕುದುರೆ ಗೊರವರು ಅಥವಾ ಕುದುರೆಕಾರರು ಪ್ರತ್ಯೇಕವಾಗಿಯೇ ಇದ್ದಾರೆ. ಮಹಾರಾಷ್ಟ್ರದಲ್ಲೀಗ ಕುದುರೆಕಾರರ ಸಂಖ್ಯೆ ವಿಶೇಷವಾಗಿ ಕಂಡು ಬರುವುದಿಲ್ಲವಾದರೂ ಕುಣಿತದ ಆಚಾರ ಪಾಲಿ ಮತ್ತು ನಳ ದುರ್ಗದಲ್ಲಿ ಈಗಲೂ ಉಳಿದು ಬಂದಿರುವುದು ಗಮನಾರ್ಹ.

ಹಿರೇಮೈಲಾರ ಮತ್ತು ದೇವರ ಗುಡ್ಡರ ದೇವಸ್ಥಾನಗಳಲ್ಲಿ 'ಕುದುರೆ' ಅಥವಾ 'ಕುದುರೆಪ್ಪ'ನ ಪ್ರತ್ಯೇಕ ಪೂಜಾಸ್ಥಾನಗಳಿರುವುದನ್ನು ಮತ್ತು ಅದರ ಸನ್ನಿಧಿಯಲ್ಲಿ ಪ್ರಮುಖ ಆಚರಣೆಗಳು ಮತ್ತು ದೀಕ್ಷೆಯ ಚಟುವಟಿಕೆಗಳು ಜರುಗುವ ವಿಶೇಷವನ್ನು ಈಗಾಗಲೇ ವರ್ಣಿಸಿದೆ. ಅಷ್ಟೇ ಅಲ್ಲದೇ ಕುದುರೆಯ ಹಬ್ಬ ಎಂಬ ಪ್ರತ್ಯೇಕವಾದ ಹಬ್ಬವೇ ರೂಢಿಯಲ್ಲಿರುವುದು ತುಂಬ ಕುತೂಹಲ ಹುಟ್ಟಿಸುವ ಅಂಶ. ಕುರುಬರ ಮಾಳವ್ವನನ್ನು 'ತುರಂಗಬಾಲೆ' ಎಂದು ಎಲ್ಲೆಡೆ ಕರೆಯುವ ಅಂಶವನ್ನು ಈಗಾಗಲೇ ಹೇಳಿದೆ. ಮೈಲಾರ ದೇವರನ್ನು 'ಹಯಪತಿ' ಎಂದೂ ಕರೆಯಲಾಗುತ್ತದೆ.

ಭಕ್ತರು ಕುದುರೆಕಾರರಾಗುವುದು. ಕುದುರೆಯ ಪ್ರತ್ಯೇಕವಾದ ಮೂರ್ತಿಗೆ ಪೂಜೆ ಸಲ್ಲಿಸುವುದು. (ಕುದುರೆಕಾರರು) ಚಾಟಿಯಿಂದ ತಮ್ಮನ್ನು ಹೊಡೆದುಕೊಳ್ಳುತ್ತ ಕುಣಿಯುವುದು. ಅಂಥವರಿಗೆ 'ದಾಣಿ' ತಿನ್ನಿಸುವುದು. ದೋಣಾ ತುಂಬುವಾಗ ಕೆಲವರು ಇತರ ಆಹಾರದ ಜೊತೆಗೆ ಗುಗ್ಗರಿಯನ್ನೂ ಅದಕ್ಕೆ ತುಂಬುವುದು. ಇವು ಕುದುರೆ ಸಂಬಂಧಿಯಾದ ಪ್ರಮುಖ ಆಚರಣೆಗಳು. ಮಾಲೆಗಾವ (ಮಹಾರಾಷ್ಟ್ರ) ದೇವಸ್ಥಾನದ ಜಾತ್ರೆಯಲ್ಲಿ ಕುದುರೆಯ ಸಂತೆ ನೆರೆಯುವುದನ್ನು ಇಲ್ಲಿ ಗಮನಿಸಬಹುದು.

ಮಲ್ಲಾರಿ ಮಹಾತ್ಮೆ ನಾಯಿಯನ್ನು ಅಲಕ್ಷಿಸಿದಂತೆ ಕುದುರೆಯನ್ನು ಅಲಕ್ಷಿಸಿಲ್ಲ. ಶಿವನು ನಂದಿ ವಾಹನನಾದರೂ ಅಸುರರ ಜೊತೆಗೆ ಯುದ್ಧಕ್ಕೆ ಹೋಗಬೇಕಾಗಿ ಬಂದ ಸನ್ನಿವೇಶದಲ್ಲಿ ಅಶ್ವಾರೂಢನಾದನೆಂದು ಅದು ವಿವರಣೆ ನೀಡುತ್ತದೆ. ಆದ್ದರಿಂದ ಮೈಲಾರ ಲಿಂಗನ ಕುಳಿತ ಮೂರ್ತಿಗಳಿರುವಂತೆ ಅಶ್ವಾರೋಹಿಯಾದ ಮೂರ್ತಿಗಳ ಒಂದು ದೊಡ್ಡ ಸಮುದಾಯವೇ ಇದೆ. ಪ್ರೇಮಪುರ, ಮೈಲಾರದಲ್ಲಿ ಮುಂಚೆ ಪೂಜಾಮೂರ್ತಿಯಾಗಿದ್ದದ್ದು ಅಶ್ವಾರೋಹಿ ಮೂರ್ತಿಯೇ; ಈಗಲೂ ಅಲ್ಲಿನ ವಗ್ಗೇರಗದ್ದುಗೆಯಲ್ಲಿ ಅಂಥ ಮೂರ್ತಿಯೇ ಇದೆ. ಕರ್ನಾಟಕದ ಪ್ರಮುಖ ದೇವಸ್ಥಾನಗಳಲ್ಲಿ ಕುದುರೆಯ ಹಬ್ಬ ಅಥವಾ

ತುರಂಗಬಾಲಿಯ ಗುಡಿಗೆ ಹೋಗುವಾಗ ಉಪಯೋಗಿಸುವ ಮೂರ್ತಿಗಳು ಅಶ್ವಾರೋಹಿ ಮೂರ್ತಿಗಳೇ. ಇವನ್ನು 'ರಾವುತರಾಯ' ಎಂದು ಕರೆಯಲಾಗಿದೆ.

ಸಾಮಾನ್ಯ ಭಕ್ತರು ತಮ್ಮ ಮನೆಗಳಲ್ಲಿ ಪೂಜಿಸುವ ಮೂರ್ತಿಗಳೆಲ್ಲ ಅಶ್ವಾರೋಹಿ ಮೂರ್ತಿಗಳೇ. ಮೂರ್ತಿಯ ಬದಲು ಅಚ್ಚು ಇದ್ದುದಾದರೆ ಅದೂ ತಪ್ಪದೇ ಅಶ್ವಾರೋಹಿಯೇ ಆಗಿರುತ್ತದೆ. ಇತ್ತೀಚೆಗೆ ಬಳಕೆಗೆ ಬರುತ್ತಿರುವ ದೇವರ ಫೋಟೊಗಳು ಅಶ್ವಾರೋಹಿಯಾಗಿರುವುದು ಎಲ್ಲೆಡೆಗೆ ಕಂಡು ಬರುತ್ತದೆ.

ದೇವರ ಈ ಕುದುರೆ ಬಿಳಿಯ ಬಣ್ಣದ್ದೆಂಬ ವಿಚಾರ ಮಹಾರಾಷ್ಟ್ರದಲ್ಲಿ ಹೆಚ್ಚಾಗಿ ಕಂಡು ಬರುತ್ತದೆ. ದೇವಧ್ಯಾನ ಶ್ಲೋಕದಲ್ಲಿ ಶ್ವೇತಾಶ್ವ ಎಂದೇ ಇದೆ.

ಧ್ಯಾಯೇನ್ಮೆಲ್ಲಾರಿದೇವಂ ಕನಕಗಿರಿನಿಭಂ ಮ್ಹಾಲಸಾಭೂಷಿತಾಂಕಂ
ಶ್ವೇತಾಶ್ವಂ ಖಡ್ಗಹಸ್ತಂ ವಿವಿಧ ಬುಧಗಣೈ ಸೇವ್ಯ ಮಾನಂಕೃತಾರ್ಥೈಃ
ಯುಕ್ತಾಘ್ರಿಂ ದೈತ್ಯ ಮೂರ್ಧ್ನೀ ಡಮರು ವಿಲಸಿತಂ ನೈಶಚೂರ್ಣಾಭಿರಾಮಂ
ನಿತ್ಯಂ ಭಕ್ತೇಷು ತುಷ್ಟಂಶ್ವಗಣ ಪರಿವೃತಂ ಶುಂಭುಮೋಂಕಾರಗಮ್ಯಂ

ಆದರೆ ಸಂತರಾಮದಾಸರ ಒಂದು ಪದ್ಯದಲ್ಲಿ ಅಶ್ವದ ಬಣ್ಣ ನೀಲಿ ಎಂದಿದೆ

ದೇವ ಶಿವಾಚಾ ಅವತಾರ ಜಾಲುನಿಬಸಲಾ ಗಡಾವರ
ಏಕನೀಳ್ಯಾ ಘೋಡ್ಯಾವರ ಏಕಧವಳ್ಯಾ ನಂದೀವರ

ಮಹಾರಾಷ್ಟ್ರದಂತೆ ಕರ್ನಾಟಕದಲ್ಲಿ ಕೂಡ ದೇವರವಾಹನ ಕುದುರೆಯ ಬಣ್ಣ ಬಿಳಿದು ಎಂದೂ ನೀಲಿ ಎಂದೂ ಇಬ್ಬಗೆಯ ನಂಬಿಕೆ ಪ್ರಚಲಿತವಾಗಿದೆ.

ದೇವರನ್ನು 'ಮಣಿಪ್ರೇತಾಸನ' ಎಂದಿರುವುದು ಕಂಡು ಬರುತ್ತದೆ. ಎಂದರೆ ದೇವರ ಆಸನ ಅಥವಾ ವಾಹನವಾದ ಕುದುರೆ ಎಂದರೆ ಮಲ್ಲನ ತಮ್ಮ ಮಣಿ ಎಂಬ ದೈತ್ಯನೆಂದು ಮಲ್ಹಾರಿ ಮಹಾತ್ಮೆ ಹೇಳುತ್ತದೆ. ಯುದ್ಧದ ಕೊನೆಯಲ್ಲಿ ದೇವರು ಮಣಿಕನನ್ನು ಮೆಟ್ಟಿ ತುಳಿದಾನ ಅವನಿಗೆ ಜ್ಞಾನೋದಯವಾಯಿತೆಂದೂ, ಆಗ ಅವನು ತನ್ನನ್ನು ವಾಹನವನ್ನಾಗಿ ಮಾಡಿಕೊಳ್ಳುವಂತೆ, ದೇವರನ್ನು ಪ್ರಾರ್ಥಿಸಿದ್ದರಿಂದ ದೇವರು ಒಪ್ಪಿ ಅಶ್ವರೂಪದ ಮಣಿಕನನ್ನು ವಾಹನವಾಗಿ ಪಡೆದನೆಂದೂ ಹೇಳಲಾಗಿದೆ. ಮಣಿ ಎಂದರೆ ದೇವರ ವಾಹನ ಕುದುರೆ ಎಂಬ ಜಾನಪದ ನಂಬಿಕೆಯನ್ನು ಪುರಾಣ ಧಾರಾಳವಾಗಿ ಒಪ್ಪಿಕೊಂಡಿದೆ ಎಂದು ಹೇಳಬಹುದು. ಕುದುರೆ ಕನಸಿನಲ್ಲಿ ಕಾಣಿಸಿಕೊಂಡರೆ ತಾವು ದೇವರಿಗೆ ಒಪ್ಪಿಸಬೇಕಾದ ಹರಕೆಯೊಂದು ಬಾಕಿ ಉಳಿದಿದೆ ಎಂದು ಭಕ್ತರು ನಂಬುತ್ತಾರೆ.

ಆಂಧ್ರ ಪ್ರದೇಶದ 'ಮಾಲ' ಜನಾಂಗದ ಬೆಡಗುಗಳಲ್ಲಿ ಕುದುರೆಯೂ ಒಂದು. ಅದೇ ರೀತಿ ಕರ್ನಾಟಕದ ಕುರುಹಿನಶೆಟ್ಟಿ, ಒಕ್ಕಲಿಗ ಮುಂತಾದ ಜಾತಿಗಳಲ್ಲಿಯೂ ಕುದುರೆ ಬೆಡಗಿನ ಹೆಸರಾಗಿ ಬಂದಿದೆ."[೫೭]

ಕಪ್ಪು ಸಮುದ್ರ ತೀರದಲ್ಲಿ ಮೊದಲು ಇದನ್ನು ಜನರು ಪಳಗಿಸತೊಡಗಿದರೆಂದು ತಿಳಿಯಲಾಗಿದೆ. ಋಗ್ವೇದ ಮುಂತಾದ ವೈದಿಕ ಸಾಹಿತ್ಯದಲ್ಲಿ ಕುದುರೆ ತುಂಬ ಪರಿಚಿತವಾದ ಪ್ರಾಣಿ. ಅಲ್ಲಿ ಅದಕ್ಕೆ ಗೌರವ ಸಲ್ಲುವಂತೆ ವಧೆಯೂ ಸಲ್ಲುತ್ತದೆ. ಕುಮಾರರಾಮ ಮುಂತಾದ ಪ್ರಾಚೀನ ವೀರರ ಚರಿತ್ರೆಯಲ್ಲಿ 'ಬೊಲ್ಲ' ಮುಂತಾದ ಹೆಸರಿನ ಕುದುರೆಗಳು ಕಾಣಿಸಿಕೊಳ್ಳುವಲ್ಲಿ ಜಾನಪದ ನಂಬಿಕೆಗಳು ಕೆಲಸಮಾಡಿವೆ.

ಮಾನವ ಚರಿತ್ರೆಯಲ್ಲಿ ತುಂಬ ಪ್ರಮುಖ ಪಾತ್ರವಾಡಿದ ಪ್ರಾಣಿ ಕುದುರೆ. ಆದರೆ ಇದು ಭಾರತಕ್ಕೆ ಹೊರಗಿನಿಂದ ಬಂದುದು ಎಂದು ಊಹಿಸಲಾಗಿದೆ.

ಈ ದೇವರ ಕುರಿತು ಬರುವ ಕನ್ನಡ ಸಾಹಿತ್ಯದ ಉಲ್ಲೇಖಗಳಲ್ಲಿ ನಯಸೇನನ ಧರ್ಮಾಮೃತಕ್ಕೆ ಪ್ರಥಮಸ್ಥಾನ ಸಲ್ಲುತ್ತದಷ್ಟೇ. ಅಲ್ಲಿರುವ ಉಲ್ಲೇಖದಲ್ಲಿ ಕುದುರೆಯ ಕುಣಿತವೇ ಎಡೆ ತಡೆದಿರುವದು ಗಮನಾರ್ಹ.

ಕುದುರೆಯ ಚಿತ್ರ : ಸರ್ವಜ್ಞ ಸೋಮೇಶ್ವರ ತನ್ನ ಕೃತಿಯಾದ ಮಾನಸೋಲ್ಲಾಸದಲ್ಲಿ ಕುದುರೆಯ ಚಿತ್ರ ವಿನ್ಯಾಸ ಮತ್ತು ರಚನೆಯ ಕುರಿತು ಅಳತೆ ಪ್ರಮಾಣದಲ್ಲಿ ಕರಾರುವಕ್ಕಾಗಿ ಚಿತ್ರಿಸಿದ್ದಾನೆ.

"ಗ್ರಹಗಳನ್ನೆಲ್ಲ ಕಿರೀಟಗಳಿರುವಂತೆ ರತ್ನಕುಂಡಲ, ಕೇಯೂರ, ಹಾರ ಈ ಆಭರಣಗಳಿಂದ ಶೋಭಿಸುವಂತೆ ಒಂಭತ್ತು ತಾಲ ಪ್ರಮಾಣದಿಂದ ರಚಿಸಬೇಕು. ಚಿತ್ರಗಳ ಕಾರ್ಯದ ಉಪಯೋಗದಿಂದಾಗಿ ಕುದುರೆಯ ಲಕ್ಷಣವನ್ನು ಸುತ್ತಳತೆ, ಎತ್ತರ, ವಿಸ್ತಾರ ಈ ಕ್ರಮದಿಂದ ಹೇಳಿ, ಸುತ್ತಳತೆಯ ಪ್ರಕಾರವಾಗಿ ಮುಖವು ಮೂರು 'ತಾಲ' ಪ್ರಮಾಣದಷ್ಟು ಇದ್ದು, ಮುಖದ ಮಧ್ಯಭಾಗದಲ್ಲಿರುವ ಪ್ರದೇಶಗಳನ್ನು ಮಾತ್ರಾಪ್ರಮಾಣದ ಅಳತೆಯಿಂದ ಮಸ್ತಕ (ಶೀರ್ಷ)ವನ್ನು ಚಿತ್ರಶಾಸ್ತ್ರಜ್ಞರು ವರ್ತುಲವನ್ನಾಗಿ ಆರು ಅಂಗುಲಗಳ ಪ್ರಮಾಣದಿಂದ ರಚಿಸಬೇಕು ಎಂದಿರುವರು.

ಕಿವಿಯ ಮೂಲ ಪ್ರದೇಶದಿಂದ ಕೊನೆಯವರೆಗೆ ಒಂದು ಅಂಗುಲ ಎತ್ತರ, ಕಿವಿಯ ಮೂಲದಿಂದ ಕಿವಿಗಳನ್ನು ಎಂಟು ಅಂಗುಲಗಳಷ್ಟು ಎತ್ತರ ರಚಿಸಿ ಕಿವಿಗಳು ವೀಳ್ಯದೆಲೆಯ ಆಕಾರದಲ್ಲಿ ನಾಲ್ಕು ಅಂಗುಲಗಳ ವಿಸ್ತಾರವನ್ನು ಹೊಂದಿ, ಕಿವಿಯ ಮೂಲಭಾಗದ ಹಾಗೂ ಕಣ್ಣಿನ ಅಂತರವು ಒಂಭತ್ತು ಅಂಗುಲಗಳಿಷ್ಟಿರಬೇಕು. ಕಣ್ಣಿನ ಭಾಗದ ಉದ್ದ ಎರಡುವರೆ ಅಂಗುಲಗಳಷ್ಟು, ಹುಬ್ಬುಗಳ ವಿಸ್ತಾರವು ಅಗಲ ಎರಡು ಅಂಗುಲಗಳು, ಉದ್ದ ಆರು ಅಂಗುಲಗಳು, ಎರಡು ಹುಬ್ಬುಗಳ ಮಧ್ಯ ಅಂತರ ಹನ್ನೆರಡು ಅಂಗುಲ ಪ್ರಮಾಣದಲ್ಲಿದ್ದು, ಕೂದಲು ತುದಿಭಾಗದಲ್ಲಿ (ಪಕ್ಕಗಳಲ್ಲಿ) ಹಣೆಯು ಆರು ಅಂಗುಲ. ಹುಬ್ಬುಗಳ ಮಧ್ಯಪ್ರದೇಶದಿಂದ ಎಂಟು ಅಂಗುಲ ವಿಸ್ತಾರ, ಅಲ್ಲಿಂದ ಕೆಳಭಾಗದಲ್ಲಿ ಹನ್ನೆರಡು ಅಂಗುಲ ವಿಸ್ತಾರ, ಹಣೆಯು ಒಂದು 'ತಾಲ' ಪ್ರಮಾಣದಷ್ಟು ದೀರ್ಘವಾಗಿದ್ದು, ಕಣ್ಣಿನಿಂದ ಕಪೋಲದ ವಿಸ್ತಾರವು ಹದಿನಾರು ಅಂಗುಲಗಳ ಮಿತಿಯಲ್ಲಿರಲು ನಾಸಾವಂಶದ ವಿಸ್ತಾರ ಮೂರು

ಅಂಗುಲಗಳ ಪ್ರಮಾಣದಲ್ಲಿ, ಮೂಗು ನಾಲ್ಕು ಅಂಗುಲ ವಿಸ್ತಾರ, ಮೂಗಿನ ಹೊಳ್ಳೆಯು ಎರಡು ಅಂಗುಲ, ಮೂರ್ಧ (ಶೀರ್ಷ) ಭಾಗದಲ್ಲಿ ನಾಸಾಪುಟಗಳ ಅಂತರವು ಆರು ಅಂಗುಲಗಳು ಎಂದು ಹೇಳಿ ಕೆಳಭಾಗದಲ್ಲಿ ನಾಸಾಪುಟಗಳ ಅಂತರವು ಒಂದು ಭಾಗ ಪ್ರಮಾಣದಷ್ಟಿದ್ದು, ಅಲ್ಲಿ ಮೂರು ಗೆರೆಗಳಿರಬೇಕು. ಆದರೆ ಕೆಳಗೆ ಇರುವ ಪ್ರೋಥ (ಮೂಗಿನ ನೇರಭಾಗ) ಎಂಬ ಪ್ರದೇಶ ಅದು ನಾಲ್ಕು ಅಂಗುಲಗಳಷ್ಟು ಆಯತವಾಗಿದ್ದು, ಅದರ ವಿಸ್ತಾರ ನಾಲ್ಕು ಅಂಗುಲಗಳು. ಅದು ನಾಲ್ಕು ಅಂಗುಲಗಳಷ್ಟು ದಪ್ಪವಾಗಿರಬೇಕು. 'ಮುಖರಾಜಿ' ಮತ್ತು ನಾಸಾಪುಟಗಳ ಮಧ್ಯದ ಅಂತರ ನಾಲ್ಕು ಅಂಗುಲಗಳು, ಮುಖರೇಖೆಯ ಹೊರಭಾಗದಲ್ಲಿ ಹನು (ಗದ್ದ) ನಾಲ್ಕು ಅಂಗಲುಗಳಷ್ಟಿರಬೇಕು. ಚಿಬುಕ (ತುಟಿಯಕೆಳಭಾಗ) ವನ್ನು ತಜ್ಞರು ಐದು ಅಂಗುಲಗಳ ಪರಿಮಿತಿಯಲ್ಲಿ ರಚಿಸಿ ಪ್ರೋಥ ಪ್ರದೇಶದಿಂದ ಬಾಯಿಯತನಕದ ಬಾಯಿ ಗೆರೆಯು ಸ್ವರ (ಏಳು) ಅಂಗುಲಗಳಷ್ಟು, ಮಸ್ತಕದಿಂದ ಕೀಕಸದವರೆಗೆ ನಾಲ್ಕು 'ತಾಲ' ಪ್ರಮಾಣ ಕೂದಲ ಪ್ರದೇಶದ ವಿಸ್ತಾರ ಶೀರ್ಷ ಪ್ರದೇಶದಲ್ಲಿ ಮೂರು ಅಂಗುಲ, ಮಧ್ಯಮವು (ಕೀಕಸದ ಮೇಲ್ಭಾಗದಲ್ಲಿ ಕೂದಲಿರುವ ಜಾಗ) ಒಂದು ಭಾಗ ಪ್ರಮಾಣ ಪಕ್ಕದವು ಮಧ್ಯದ ಮಿತಿಗನುಗುಣವಾಗಿದ್ದು, ಸ್ಕಂಧ (ಕುತ್ತಿಗೆಯ ಮೇಲ್ಭಾಗ)ವನ್ನು ಕೀಕಸಪ್ರದೇಶದವರೆಗೂ ಕೇಸರ (ಕೂದಲುಗಳಂತಿರುವ ರೋಮ)ಗಳಿಂದ ಕೂಡಿರುವಂತೆ ಚಿತ್ರಿಸಬೇಕು.

ಕೀಕಸೆಯಲ್ಲಿ ಕೇಸರಗಳನ್ನು ತುಂಬ ಉದ್ದವಾಗಿರುವಂತೆ ರಚಿಸಿ, ತಲೆಯ ಮೇಲ್ಭಾಗದಲ್ಲಿ ಕೇಶಗಳನ್ನು ಹನ್ನೆರಡು ಅಂಗುಲಗಳಷ್ಟು ದೀರ್ಘವಾಗಿರುವಂತೆ, ಕೂದಲುಗಳನ್ನ ಅಲೆ ಅಲೆಗಳಾಗಿರುವಂತೆ ದಟ್ಟವಾಗಿರುವ, ತೈಲಾಂಶವಿರುವ, ನುಣುಪಾಗಿರುವ ಚಿತ್ರವನ್ನು ಆಕರ್ಷಿಸುವಂತೆ ಬರೆಯಬೇಕು. ನಿಗಾಲ (ನುಂಗುವಜಾಗ)ದಿಂದ ವತ್ಸ ದೇಶದವರೆಗೂ ಗ್ರೀವಾ ಕತ್ತು ಪ್ರದೇಶವು ನಳಿಗೆಯಂತೆ (ಕೊಳವೆ) ಉದ್ದವಾಗಿರಬೇಕು. ಗ್ರೀವಾದೇಶದ ಉದ್ದವು ಎರಡು 'ತಾಲ' ಪ್ರಮಾಣ. ಅದರ ವಿಸ್ತಾರವು ಮೂರು ಅಂಗುಲ, ಭುಜ ಮೂಲದ ಸುತ್ತಳತೆಯು ಆರು 'ತಾಲ' ಹಾಗೂ ಎರಡು ಅಂಗುಲ, ಕತ್ತಿನ ಮಧ್ಯಭಾಗದ ಸುತ್ತಳತೆಯು ಐವತ್ತು ನಾಲ್ಕು ಅಂಗುಲ. ಗ್ರೀವಾ (ಕತ್ತು) ಸಂಧಿಯ ಸುತ್ತಳತೆಯು ಮೂರು 'ತಾಲ' ಹಾಗೂ ಒಂಭತ್ತು ಅಂಗುಲ, ಎದೆಯ ಪ್ರದೇಶದ ವಿಸ್ತಾರ ಹನ್ನೆರಡು ಅಂಗುಲಗಳ ಪರಿಮಿತಿ. ಎದೆಯ ಉದ್ದವು ಹದಿನೆಂಟು ಅಂಗುಲ, ಕಕ್ಷಾ (ಪಕ್ಕೆ) ಮತ್ತು ಕೀಕಸೆಗಳ ಅಂತರ ನಾಲ್ವತ್ತೆರಡು ಅಂಗುಲ, ಬಾಹುವಿನ ಉದ್ದವು ಐವತ್ತು ಅಂಗುಲಗಳೆಂದು ಹೇಳಲಾಗಿದೆ.

ಬಾಹುಮೂಲ ಭಾಗದ ಸುತ್ತಳತೆಯು ಮೂವತ್ತು ಅಂಗುಲಗಳ ಮಿತಿ, ಬಾಹುವಿನ ಮಧ್ಯದ ಸುತ್ತಳತೆಯು ಎರಡು 'ವಿತಸ್ತಿ'ಗಳನ್ನು ಸುತ್ತು ಹಾಕಿದಷ್ಟು ಇದ್ದು, ಬಾಹುಗಳ ಪಕ್ಕದಲ್ಲಿ ಹದಿನೆಂಟು ಅಂಗುಲ ಸುತ್ತಳತೆ. ಜಂಘೆ (ಕಿರುದೊಡೆ)ಯ ಸುತ್ತಳತೆ ಹನ್ನೆರಡು ಅಂಗುಲಗಳ ಪರಿಮಿತಿ. ಪಲಿ (ಪಾದದ ಮೇಲ್ಭಾಗ) ಹಸ್ತದ ಉದ್ದವು ಆರು ಅಂಗುಲ, ಪಲಿಹಸ್ತದ ಸುತ್ತಳತೆಯ ಹದಿನೆಂಟು ಅಂಗುಲ,

ಕುಷ್ಟಿಕೆ (ಗೊರಸಿನ ಮೇಲ್ಭಾಗದ) ಉದ್ದವು ಆರು ಅಂಗುಲ. ಕುಷ್ಟಿಕೆಯ ಸುತ್ತಳತೆ ಹನ್ನೆರಡು ಅಂಗುಲಗಳ ಪರಿಮಾಣ ಪ್ರಾಜ್ಞರು ಕುದುರೆಯ ಗೊರಸಿನ ಉದ್ದವು ಆರು ಅಂಗುಲಗಳ ಮಿತಿಯಲ್ಲಿರಬೇಕೆಂದು ಹೇಳಿ, ಗೊರಸಿನ ಸುತ್ತಳತೆಯು ಇಪ್ಪತ್ತು ಅಂಗುಲ ಪ್ರಮಾಣ ಎಂದಿರುವರು.

ಮಧ್ಯಭಾಗದ ಸುತ್ತಳತೆಯು ನೂರು ಅಂಗುಲಗಳ ಪರಿಮಿತಿಯಲ್ಲಿದ್ದು, ರಂಧ್ರ ಸ್ಥಾನದಲ್ಲಿರಬೇಕಾದ ಸುತ್ತಳತೆಯು ಏಳು 'ತಾಲ' ಹಾಗೂ ಹತ್ತು ಅಂಗುಲಗಳಷ್ಟು, ರಂಧ್ರ ಮತ್ತು ಉಪರಂಧ್ರ ಇವುಗಳ ಮಧ್ಯಭಾಗವು ಇಪ್ಪತ್ತು ಅಂಗುಲಗಳಷ್ಟು ಆಯಾತವಾಗಿದ್ದು, 'ತ್ರಿಕ' ಪ್ರದೇಶದ ವಿಸ್ತಾರವು ಮೂವತ್ತೆರಡು ಅಂಗುಲಗಳಷ್ಟು, ಜಘನ ಪ್ರದೇಶದ ವಿಸ್ತಾರವು ನಾಲ್ವತ್ತಾರು ಅಂಗುಲ, ಬಾಲದ ಮೂಲಭಾಗವು ಒಂದು 'ಭಾಗ'ದ ಪ್ರಮಾಣವಾಗಿದ್ದು, ನಾಹದಿಂದ ಹನ್ನೆರಡು ಅಂಗುಲಗಳಷ್ಟು, 'ವರ್ತಿಕೆ' (ಬಾಲದ ಕೂದಲು ಹೊರುವ ಅಂಗ)ಯ ಉದ್ದವು ಇಪ್ಪತ್ತು ಅಂಗುಲಗಳ ಮಿತಿ. ಅಲ್ಲಿ ಚಮರೀ ಮೃಗದ ಬಾಲದಂತಿರುವ ಕೂದಲುಗಳನ್ನು ರಚಿಸಬೇಕು. ಜನನಾಂಗವು ಇರುವ ಜಾಗದಿಂದ ಇಪ್ಪತ್ತೆರಡು ಅಂಗುಲಗಳಷ್ಟಿದ್ದು ವಕ್ರವಾಗಿರುವ ಸಕ್ಥಿ (ತೊಡೆ)ಯ ಉದ್ದವು ಮೂವತ್ತಾರು ಅಂಗುಲ, ಮೂಲಭಾಗದಲ್ಲಿ ಅದರ ಸುತ್ತಳತೆಯು ನಲವತ್ತು ಅಂಗುಲ, ಸಕ್ಥಿಯ ಮಧ್ಯಭಾಗದ ಸುತ್ತಳತೆಯು ಇಪ್ಪತ್ತೊಂಬತ್ತು ಅಂಗುಲ.

ಸಕ್ಥಿಯ ಪಕ್ಕದ ಸುತ್ತಳತೆಯು ಎರಡು ತಾಲ ಪ್ರಮಾಣದಲ್ಲಿದ್ದು, ಸ್ಥೂರಾ ಎಂಬ ಭಾಗವು ಒಂಬತ್ತು ಅಂಗುಲಗಳಷ್ಟು ಉದ್ದವಾಗಿದ್ದು. ಸುತ್ತಳತೆಯು ಮೂವತ್ತು ಅಂಗುಲ ಉಪರಂಧ್ರದಿಂದ ಆರಂಭಗೊಂಡು ಕೋಶ (ಅಂಡ) ಪ್ರದೇಶದವರೆಗೆ ಒಂದು 'ತಾಲ' ಪ್ರಮಾಣ ಅಂತರವಿರಬೇಕು, ಕೋಶವು ಒಂದು ಭಾಗ ಪ್ರಮಾಣದಷ್ಟು ಉದ್ದವಾಗಿದ್ದು, ಮುಷ್ಕ ಅಂಡಕೋಶಗಳು ಎಂಟು ಅಂಗುಲಗಳಷ್ಟು ಆಯತವಾಗಿದ್ದು, ಸ್ಥೂರಗಳ ಬುಧ್ನಭಾಗದಲ್ಲಿರುವ ಜಂಘೆಗಳನ್ನು, ಕಲಿಹಸ್ತಗಳನ್ನು, ಕುಷ್ಟಕಗಳನ್ನು ಹಾಗೂ ಎರಡು ಗೊರಸುಗಳನ್ನು ಮುಂಭಾಗದ ಪಾದಗಳ ರೀತಿಯಲ್ಲಿಯೇ ಬರೆಯಬೇಕು. ಸ್ಕಂಧ (ಭುಜ)ಗಳನ್ನು ಮುಖವನ್ನು ಹಾಗೂ ಮಧ್ಯಭಾಗವನ್ನು ಸಪ್ರಮಾಣವಾಗಿ ಕೃಶವಾಗಿ ರಚಿಸಬೇಕು. ವಡವೆ (ಹೆಣ್ಣು ಕುದುರೆ)ಯ ಎದೆ ಮತ್ತು ಜಘನ ಪ್ರದೇಶವು ತುಂಬಾ ವಿಸ್ತಾರವಾಗಿರಬೇಕು"[೫೯] ಎಂದು ಸೋಮೇಶ್ವರನು ತನ್ನ ಶಾಸ್ತ್ರಕೃತಿಯಾದ ಮಾನಸೋಲ್ಲಾಸದಲ್ಲಿ ಕುದುರೆಯ ಲಕ್ಷಣವನ್ನೂ ವಿರಳ ವಿರಳವಾಗಿ ಪ್ರಮಾಣ ರೂಪದಲ್ಲಿ ಸಾಮಾನ್ಯರಿಗೂ ಅರ್ಥವಾಗುವಂತಹ ರೀತಿಯಲ್ಲಿ ವಿವರಿಸಿದ್ದಾನೆ. ಶಾಸ್ತ್ರ ಪಂಡಿತನಾದ ಕವಿಗೆ 'ಶಾಸ್ತ್ರಗಳ ಋಷಿ'ಯೆಂದು ಹೆಸರು ಪ್ರಾಪ್ತವಾಗಿದೆ.

೫.೩.೫. ಕುದುರೆಯ ಬಳಕೆ

ಅಶ್ವಬಲ : ಪ್ರಾಚೀನ ಭರತ ಖಂಡದ ಸೇನೆಯನ್ನು ಚತುರಂಗ ಬಲವೆಂದು ಕರೆಯುತ್ತಿದ್ದರು. ರಥ, ಗಜ, ಅಶ್ವ, ಪದಾತಿ ಇವೇ ಆ ಚತುರಂಗಗಳು. ಅರ್ಥಶಾಸ್ತ್ರ, ಕಾಮಂದಕನ ನೀತಿಶಾಸ್ತ್ರ, ಅಗ್ನಿಪುರಾಣ,

ನೀತಿವಾಕ್ಯಮೃತ, ಯುಕ್ತಿಕಲ್ಪತರು ಮುಂತಾದ ನೀತಿ ಗ್ರಂಥಗಳು ಚತುರಂಗಸೇನೆಯೇ ಅತ್ಯುತ್ತಮವಾದುದೆಂದು ಬಣ್ಣಿಸುತ್ತವೆ ಎಂದು ಡಾ.ಎಂ.ಚಿದಾನಂದಮೂರ್ತಿಯವರು ತಮ್ಮ ಪ್ರಸಿದ್ಧ ಸಂಶೋಧನ ಕೃತಿಯಾದ 'ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ' ಎಂಬ ಯುದ್ಧಕಲೆ ಅಧ್ಯಾಯದಲ್ಲಿ ಚರ್ಚಿಸುತ್ತಾರೆ. ಹಾಗೆ ನೋಡಿದರೆ ಭಾರತೀಯ ಸೈನ್ಯದ ತೃತೀಯ ಅಂಗ ಅಶ್ವಬಲ. ಸೈನ್ಯದಲ್ಲಿ ಇದು ಸಂಚಾರಿ ಸೌಧ. ಅಶ್ವಬಲ ಪ್ರಧಾನವಾಗಿರುವ ರಾಜ ಯುದ್ಧದಲ್ಲಿ ಸುಲಭ ಜಯವನ್ನು ಪಡೆಯುವನು. ಯಾತ್ರೆ ಆಕ್ರಮಣ, ಹಿಂದೆಗೆತ, ಸೈನ್ಯಭೇದ ಅಶ್ವದಿಂದ ಸಾಧ್ಯ ಎಂಬ ವಿಚಾರವನ್ನು ನೀತಿಸೂತ್ರ ಸ್ಪಷ್ಟಪಡಿಸುತ್ತದೆ.

ಹರಪ್ಪ ಮತ್ತು ಮಹೆಂಜೋದಾರೊ ಸಂಸ್ಕೃತಿಯ ಅವಶೇಷಗಳಲ್ಲೂ ಕುದುರೆಯ ಎಲಬು ದೊರಕಿದೆ. ಲೋಥಾಲ್‌ನಲ್ಲಿ ಮೂರು ಕುದುರೆಯ ಮಣ್ಣಿನ ಗೊಂಬೆಗಳು ಲಭ್ಯವಾಗಿವೆ. ಆದ್ದರಿಂದ ಆರ್ಯಪೂರ್ವದ ಯುಗದ ಭಾರತೀಯರಿಗೆ ಕುದುರೆಯ ಬಗೆಗೆ ತಿಳಿದಿರುವುದು ಸ್ಪಷ್ಟವಿದೆ.

ವೇದಕಾಲೀನ ಭಾರತದಲ್ಲಿ ರಥಗಳು ಪ್ರತಿಷ್ಠೆಯ ವಿಷಯವಾಗಿತ್ತು. "ಆನೆಗಳನ್ನು ಬಿಟ್ಟರೆ ನಾಲ್ಕು ಕುದುರೆಗಳ ರಥ ಹೆಚ್ಚಿನದು ಎಂಬ ಮೆಗಾಸ್ತನೀಸ್‌ನ ಅಭಿಪ್ರಾಯದಲ್ಲೂ ಈ ಅಂಶ ವ್ಯಕ್ತವಾಗಿದೆ. ವೇದಗಳಲ್ಲಿ ಕುದುರೆ ಹಾಗೂ ರಥಗಳಿಗೆ ಅವುಗಳನ್ನು ಬಳಸಿದ್ದರ ಬಗೆಗೆ ಮಾಹಿತಿಗಳಿವೆ. ಓದೇವ ಮಾನವಾದಿಗಳೆಲ್ಲರ ವೀರನೇ ನೀನು ಯಾರು ನಿನ್ನ ಕುದುರೆಗಳಲ್ಲಿ, ಲಗಾಮೆಲ್ಲಿ ನೀನು ಬಲಶಾಲಿಯಾದುದು ಹೇಗೆ ಎಂದು ಮರುತನನ್ನು ಕುರಿತು ಬರುವ ಈ ಉಲ್ಲೇಖದಲ್ಲಿ ಕುದುರೆಗಳನ್ನು ಯುದ್ಧದಲ್ಲಿ ಬಳಸುತ್ತಿದ್ದರೆಂದು ತಿಳಿದು ಬರುತ್ತದೆ."[೨೦] ಕುದುರೆಯ ಮೇಲೆ ಕುಳಿತು ಯುದ್ಧಕುಶಲರಾದ ಯೋಧರು ಪರಸ್ಪರ ಯುದ್ಧ ಮಾಡುತ್ತಿರುವ ಚಿತ್ರ ವೇದದಲ್ಲಿದೆ. ರಣಭೇರಿಯೊಡನೆ ಯುದ್ಧ ಸಂಕೇತವನ್ನು ನೀಡಲು ನಮ್ಮ ವೀರಯೋಧರು ಕುದುರೆಯೇರಿ ಬರುವರು ರಥಿಕ ಇಂದ್ರ ವಿಜಯಗಳಿಸಿ ಬರುವರು ಎಂಬಲ್ಲಿ, ಅಶ್ವ ಮತ್ತು ರಥಿಕರನ್ನು ಸ್ಪಷ್ಟವಾಗಿ ಸ್ವರ್ಗವನ್ನು ಗೆದ್ದವರು ಎಂದಿದೆ. ಧೂಳನ್ನೆಬ್ಬಿಸುತ್ತ ಬರುವ ಅಶ್ವಾರೋಹಿಗಳ ಚಿತ್ರ ಅಥರ್ವಣ ವೇದದಲ್ಲಿದೆ. ಕೆಲವೆಡೆ ಸವಾರನ ಹಗಲು ಪ್ರಯಾಣದ ಚಿತ್ರವಿದೆ. ವಾಜಸನೇಯ ಸಂಹಿತದಲ್ಲಿ ಅಶ್ವಾರೋಹಿ, ಅಶ್ವಪಾಲಕ ಮತ್ತು ಅಶ್ವವಿದ್ಯೆಯ ಗುರುವಿನ ಉಲ್ಲೇಖವಿದೆ. ಪ್ರಜಾಪತಿಯ ಪಾದದಲ್ಲಿ ಅಶ್ವ ಹುಟ್ಟಿದ್ದನ್ನು ತೈತ್ತರೀಯ ಸಂಹಿತೆ ಹೇಳಿದೆ. ಹೀಗಾಗಿ ಅಶ್ವಗಳ ಬಳಕೆ ಭಾರತೀಯರಿಗೆ ತೀರ ಪ್ರಾಚೀನ ಕಾಲದಲ್ಲೇ ತಿಳಿದಿತ್ತೆಂಬಲ್ಲಿ ಸಂಶಯವಿಲ್ಲ.

ವಿನಯಪಿಟಕದಲ್ಲಿ ಚತುರಂಗಬಲದ ಉಲ್ಲೇಖ ಸ್ಪಷ್ಟವಾಗಿದ್ದು. "ಸಾಮ ವಿಧಾನ ಬ್ರಾಹ್ಮಣದಲ್ಲಿ ಹಸ್ತ್ಯಶ್ವ ರಥ ಪದಾತಯಃ ಎಂಬಲ್ಲಿ ಗಜ, ಅಶ್ವ, ರಥ, ಪದಾತಿ ಎಂದು ಸೈನ್ಯದ ನಾಲ್ಕು ಅಂಗಗಳನ್ನು ಗುರುತಿಸಿದೆ. ಅಜಾತಶತ್ರು ಮತ್ತು ಪಸೆನದಿಯ ನಡುವೆ ನಡೆದ ಹೋರಾಟದಲ್ಲಿ ಚತುರಂಗಬಲವಿತ್ತು. ವಿನಯಪಿಟಕದಲ್ಲಿ ಗಜಬಲವು ಈ ಕಡೆ, ಕುದುರೆಗಳು ಈ ಬದಿಯಲ್ಲಿ, ರಥಗಳು ಈ ದಿಕ್ಕಿನಲ್ಲಿ, ಪದಾತಿಗಳು ಈ ಕಡೆಗೆಂದು ಸೈನ್ಯದ ನಾಲ್ಕು ಅಂಗಗಳನ್ನು ಹೆಸರಿಸುವಲ್ಲಿ ಅಶ್ವಬಲದ ಉಲ್ಲೇಖ

ಸ್ಪಷ್ಟವಾಗಿದೆ. ಭಾರತದ ಮೇಲೆ ಅಲೆಗ್ಸಾಂಡರ್ ದಾಳಿ ಮಾಡಿದ ಕಾಲಕ್ಕೆ ಪುರೂರವನಲ್ಲಿ ೪೦೦೦ ಕುದುರೆಗಳಿದ್ದವು ಎಂಬ ಉಲ್ಲೇಖಗಳನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

"ಅರ್ಥಶಾಸ್ತ್ರದಲ್ಲಿ ಕುದುರೆಗಳ ಮೇಲ್ವಿಚಾರಕನನ್ನು ಅಶ್ವಾಧ್ಯಕ್ಷ ಎಂದು ಕರೆದಿದೆ. ಕುದುರೆಯನ್ನು ಪ್ರತ್ಯೇಕವಾಗಿ ಗಮನಿಸಿ ಅವುಗಳ ಕುಲ, ಪ್ರಾಯ, ವರ್ಣ, ಬಾಲ, ತಲೆ ಮೊದಲಾದ ಕಡೆಗಳಲ್ಲಿರುವ ಚಿಹ್ನೆ ಅವು ಸಿಕ್ಕಿದ ಸ್ಥಳ ಮತ್ತು ರೀತಿಗಳನ್ನು ಪುಸ್ತಕದಲ್ಲಿ ಬರೆದಿಡಬೇಕಿತ್ತು. ಕುದುರೆಗಳಲ್ಲಿ ಸ್ವಲ್ಪವೂ ಪೆಟ್ಟನ್ನು ಸಹಿಸದ ಹೆಚ್ಚು ತೇಜಸ್ಸತ್ವವುಳ್ಳವುಗಳನ್ನು ತೀಕ್ಷ್ಣಗಳು ಎಂದು ಹೇಳಿದೆ. ತೇಜಸ್ಸತ್ವವಿದ್ದು ಪೆಟ್ಟು ಕೊಟ್ಟಾಗ ತ್ರಾಣಕ್ಕೆ ಸರಿಯಾಗಿ ಕೆಲಸ ಮಾಡುವ ಕುದುರೆ ಭದ್ರ, ಹೆಚ್ಚು ಹೊಡೆದು ಕೆಲಸ ಮಾಡಿಸಬೇಕಾದ ಕುದುರೆಗೆ ಮಂದವೆಂದು ಹೆಸರು. ಇವುಗಳ ಸ್ವಭಾವಗಳಿಗನುಗುಣವಾಗಿ ಯುದ್ಧ, ಸವಾರಿ ಮೊದಲಾದವುಗಳಲ್ಲಿ ಅದನ್ನು ಉಪಯೋಗಿಸಬೇಕು. ಮೆಲ್ಲಗೆ, ಮಧ್ಯಮ, ವೇಗವಾಗಿ ಹೋಗುವುದು ಕುದುರೆಗಳ ಮಾರ್ಗಗಳು. ಯುದ್ಧದ ರಥ ಮತ್ತು ಕುದುರೆಯ ಅಲಂಕಾರವನ್ನು ಸೂತರು ನಿರ್ದೇಶಿಸಬೇಕು. ಅಶ್ವವೈದ್ಯರು ಆಯಾ ಕಾಲಮಾನ ಅನುಗುಣವಾಗಿ ಆಹಾರವನ್ನು ಕುದುರೆಗೆ ನಿರ್ದೇಶಿಸಬೇಕು" ೬೧ ಎಂದು ಹೇಳಿದೆ.

ಎಲ್ಲಾ ಕುದುರೆಗಳೂ ರಾಜನ ಸವಾರಿಗೆ ಯೋಗ್ಯವಾದವುಗಳಲ್ಲಿ, ಉದ್ದಕತ್ತು, ಒಳ್ಳೆಯ ಪಾರ್ಶ್ವ, ವಿಸ್ತಾರಕಣ್ಣು, ಸೊಂಟ, ಹಣೆ, ಹೆಗಲು, ಎದೆಯಿದ್ದು, ಕಠಿಣ ಗೊರಸು, ದೀರ್ಘವಾದ ಮಾಂಸವಿಲ್ಲದೆ ತೊಡೆ, ಸೂಕ್ಷ್ಮವಾದ ಪಕ್ಕೆಲುಬು, ರೋಮದಿಂದ ಕೂಡಿದ ಮೆತ್ತನೆಯ ನಾರಿಗೆಯಿದ್ದು ಬಲಿಷ್ಠವಾಗಿರಬೇಕು. ಸುಳಿಶುದ್ಧವಿದ್ದು, ಬಿಳಿಮೋಡದಂತಿರುವ ಹಲ್ಲುಗಳನ್ನು ಹೊಂದಿರುವ ಕುದುರೆಗಳು ರಾಜನ ಸವಾರಿಗೆ ಯೋಗ್ಯವಾದವು.

ಕಾಂಭೋಜದಲ್ಲಿ ಶಿಕ್ಷಣ ಪಡೆದ ಕುದುರೆಗಳಿಂದ ಉತ್ತಮ ಬಲವನ್ನು ರಚಿಸಿದರೆ ದೂರದ ವೈರಿಗಳನ್ನು ಗೆಲ್ಲಬಹುದೆಂದು ಅಭಿಲಕ್ಷಿತಾರ್ಥ ಚಿಂತಾಮಣಿಯಲ್ಲಿದೆ. ಸಿಂಧು, ಯವನ, ಕಾಂಭೋಜದಲ್ಲಿ ಹುಟ್ಟಿದ ಶಿಕ್ಷಿತ ಕುದುರೆಗಳಿಂದ ದೂರದ ವೈರಿಗಳನ್ನು ಸೋಲಿಸಬಹುದು. ಸೈಂದವರು ಶ್ರೇಷ್ಠ ತುರಗಳನ್ನು ಕಾಣಿಕೆ ತಂದಿರುವರೆಂದು ಯಶಸ್ತಿಲಕ ಚಂಪುವಿನಲ್ಲಿದೆ. ಗುಜರಾತ್ ದೇಶದ ರಾಜನಲ್ಲಿ ಒಳ್ಳೆಯ ಸೈನ್ಯವಿದೆ. ಈ ಅಶ್ವದಳವನ್ನು ಮೀರಿಸುವ ಸೈನ್ಯ ಬೇರೊಬ್ಬರಲ್ಲಿಲ್ಲವೆಂದು ಪ್ರವಾಸಿ ಸುಲೇಮಾನ ಬರೆದಿರುವನು. ಪಳಗಿದ ಯುದ್ಧ ಯೋಗ್ಯವಾದ ಕುದುರೆಗಳಲ್ಲಿ ಕಾಂಭೋಜ, ಸಿಂಧು, ಅರಟ್ಟ, ವಾನಾಯು ದೇಶದಲ್ಲಿ ಹುಟ್ಟಿದವು. ಉತ್ತಮ, ಬಾಹ್ಲೀಕ ಪಾಪೇಯಕ, ಸಾವೀರಕ, ತೈತಲ ದೇಶದ ಅಶ್ವಗಳು ಮಧ್ಯಮ. ಸೌರಾಷ್ಟ್ರಾದಿ ದೇಶದ ಅಧಮವೆಂದು ಕೌಟಿಲ್ಯನ ಅಭಿಪ್ರಾಯ.

ಮಹಾಭಾರತದಲ್ಲಿ ಸಾರಾಂಗ, ಪಾರಾವತ, ಮಲ್ಲಿಕಾಕ್ಷ, ಕಾಂಭೋಜ, ಲಲಾಮ, ಹರಿ, ಸಿಂಧು, ಬಾಹ್ಲೀಕ, ಪದ್ಮವರ್ಣ, ಕ್ರೌಂಚವರ್ಣದ ಕುದುರೆ ಮತ್ತು ಅದರ ಲಕ್ಷಣ, ಬಣ್ಣ ಇತ್ಯಾದಿ ಅಂಶಗಳನ್ನು ವಿವರಿಸಿದೆ ಮಹಾಭಾರತದಲ್ಲಿ-

"ಮಹಾಲಲಾಟ ಜಘನಸ್ಕನ್ಧವಕ್ಷೋಜವಾ ಹಯಾಃ

ದೀರ್ಘಗ್ರಿವಾಯತಾ ಹ್ರಸ್ವ ಮುಷ್ಕಾಃ ಕಾಮ್ಬೋಜಕಾಃ ಸ್ಮೃತಾಃ"[೬೨]

ಎಂದು ಕಾಂಭೋಜದ ಅಶ್ವಗಳ ಲಕ್ಷಣವನ್ನು ಹೇಳಿದೆ. ಯಾವ ಕುದುರೆಗೆ ಹಣೆ, ನಿತಂಬ ಪ್ರದೇಶ, ಹೆಗಲು, ಎದೆ ವಿಶಾಲವಾಗಿದ್ದು ಹೆಚ್ಚಿನ ವೇಗವುಳ್ಳದ್ದೋ, ಉದ್ದ ಹಾಗೂ ಅಗಲ ಕತ್ತಿನಿಂದ ಕೂಡಿರುವ ಕುದುರೆಗಳನ್ನು ಕಾಂಭೋಜದವು ಎಂದು ಹೇಳಿದೆ. ಉತ್ತರಾಪಥದ ಕುದುರೆಗಳು ಶ್ರೇಷ್ಠವೆನ್ನುತ್ತ ಅಲ್ಲಿಂದ ೫೦೦ ಕುದುರೆಯೊಂದಿಗೆ ಬಂದ ಅಶ್ವವ್ಯಾಪಾರಿಯನ್ನು ವಿನಯಪಿಟಕ ಚಿತ್ರಿಸಿದೆ. ಬಹುತೇಕ ಕಡೆಗಳಲ್ಲಿ ಅಶ್ವಗಳು ಹುಟ್ಟಿದ ದೇಶಗಳ ಹೆಸರಿನಿಂದಲೇ ಅವುಗಳನ್ನು ಕರೆದಿದೆ. ಕುದುರೆಯ ಆಯ್ಕೆಯ ಸಂದರ್ಭದಲ್ಲಿ ಅದರ ದೇಶ ಮತ್ತು ಅವುಗಳಿಗೆ ದೊರೆತ ಶಿಕ್ಷಣವನ್ನು ಗಮನಿಸುತ್ತಿದ್ದ ವಿಷಯ ಇದರಿಂದ ಗೊತ್ತಾಗುತ್ತದೆ.

ಸಮಭೂಭಾಗದಲ್ಲಿ ರಥ, ಕುದುರೆಗಳಿಂದ ಹೋರಾಡಬೇಕೆಂದು ಮನುಸ್ಮೃತಿಯಲ್ಲಿದೆ. ಅಲ್ಪವೃಕ್ಷವಿರುವ, ಕಲ್ಲುಗಳಿಂದ ಛಿದ್ರಗೊಂಡು ಹಾರಬಹುದಾದ ಕಂದಕವುಳ್ಳ, ಮರಳು ಕಡಿಮೆ ಇರುವ, ಕೆಸರಿಲ್ಲದ ಭೂಮಿ ಅಶ್ವವ್ಯೂಹಕ್ಕೆ ಯೋಗ್ಯವಾದದ್ದು. ಕೆಸರು, ಮರಳು, ಕಲ್ಲಿಲ್ಲದ ಹಿಂಜರಿಯಲು ಅವಕಾಶವಿರುವ ಯುದ್ಧಭೂಮಿ ಅಶ್ವದಳದ ಉನ್ನತಿಗೆ ನೆರವಾಗಬಲ್ಲದು ಎಂದು ಶಿವತತ್ತ್ವರತ್ನಾಕರವೂ ಇದಕ್ಕೆ ಪುಷ್ಟಿಯನ್ನು ನೀಡುತ್ತದೆ.

ಕ್ಷತ್ರಿಯರಿಗೆ, ರಾಜಕುಮಾರರಿಗೆ ಅಶ್ವಗಳನ್ನು ಬಳಸುವ ಅದರ ಮೇಲೇರಿ ಯುದ್ಧ ಮಾಡುವ ಬಗೆಗೆ ಶಿಕ್ಷಣವನ್ನು ನೀಡುತ್ತಿದ್ದರು. ಮಜ್ಜಿ ಮನಿಕಾಯರಲ್ಲಿ ಕುದುರೆಗೆ ತರಬೇತಿ ನೀಡುವ ವಿಷಯ ಸಾಕಷ್ಟು ಬಂದಿದೆ. ಐತರೇಯ ಬ್ರಾಹ್ಮಣದಲ್ಲಿ ಕುದುರೆಯನ್ನು ಪಕ್ಕದಿಂದ ಏರುತ್ತಿದ್ದರೆಂದು ಹೇಳಿದೆ. ವಿದುರ, ಪಾಂಡು ಅಶ್ವಶಾಸ್ತ್ರದಲ್ಲಿ ತಜ್ಞರು. ರಾಮ ಸಮರ್ಥ ಕುದುರೆ ಸವಾರನಾಗಿದ್ದು, ಅದನ್ನು ಪಳಗಿಸುವ ಕಲೆಯನ್ನು ಬಲ್ಲವನಾಗಿದ್ದನು. ದ್ರೋಣರು ಅರ್ಜುನನಿಗೆ ಅಶ್ವದ ಮೇಲೆ ಕುಳಿತು ಯುದ್ಧ ಮಾಡುವ ಶಿಕ್ಷಣ ನೀಡಿದ್ದರು. ದ್ರೋಣರು ಕುರುರಾಜಕುಮಾರರಿಗೆ ಏರ್ಪಡಿಸಿದ ಶಸ್ತ್ರ ವಿದ್ಯಾ ಪ್ರದರ್ಶನ ಸ್ಪರ್ಧೆಯಲ್ಲಿ ಕುದುರೆ ಸವಾರಿಯೂ ಸೇರಿತ್ತು. ಇಲ್ಲಿ ಬಿಲ್ಗಾರಿಕೆ ಮತ್ತು ಕುದುರೆ ಸವಾರಿ ಏಕಕಾಲಕ್ಕೆ ಪ್ರದರ್ಶನವಾಗಿದೆ. ಯುದ್ಧಕಲೆಯಲ್ಲಿ ಚಾಣಾಕ್ಷರಾದ ಅಶ್ವರೋಹಿಗಳು ರಥಿಕರ ಶಿರಚ್ಛೇದವನ್ನು ಮಾಡಿದ್ದಿದೆ. ಕುದುರೆಗಳು ಕೆನೆಯುತ್ತ ಮುಂದಿನ ಎರಡು ಕಾಲನ್ನು ಮೇಲೆತ್ತಿ ಹಾರುವುದಕ್ಕೆ ಸಂಗ್ರಹ ಅಥವಾ ಬೃಹದುದ್ರಂಗ ಎಂದು ಹೆಸರು. ಕುದುರೆಯ ಮೇಲಕ್ಕೇರಿದೊಡನೆ ಕುಣಿಯುವ ಇಲ್ಲವೇ ಎಲ್ಲೆತಪ್ಪಿ ಹೋಗದ ಶಿಕ್ಷಣವನ್ನು ಅವುಗಳಿಗೆ ನೀಡಲಾಗುತ್ತಿತ್ತು.

"ಕುದುರೆಗೆ ಜೀನು ಹಾಕುವುದಿಲ್ಲ. ಕಡಿವಾಣಕ್ಕೆ ಬದಲು ಹದಮಾಡಿದ ಎತ್ತಿನ ಚರ್ಮದ ಮುಳ್ಳುಕುರು ಹಾಕುತ್ತಾರೆ. ಇದರ ಒಳಭಾಗದಲ್ಲಿ ಕಬ್ಬಿಣದ ಅಥವಾ ಹಿತ್ತಾಳೆಯ ಮುಳ್ಳುಗಳಿರುತ್ತವೆ.

ಶ್ರೀಮಂತರು ದಂತದ ಮುಳ್ಳುಗಳನ್ನು ಹಾಕಿಸುತ್ತಾರೆ. ಕುದುರೆಯ ಬಾಯಲ್ಲಿ ಕಬ್ಬಿಣದ ಕವಲುಗೋಲಿರುತ್ತದೆ. ಇದಕ್ಕೆ ಲಗಾಮು ತಗಲಿಸುತ್ತಾರೆ. ಸವಾರ ಲಗಾಮು ಹಿಡಿದು ಎಳೆದಾಗ ಕವಲುಗೋಲು ಕುದುರೆಯನ್ನು ಹತೋಟಿಗೆ ತರುತ್ತದೆ. ಏಕೆಂದರೆ ಕವಲುಗೋಲಿಗೆ ತಗಲಿಸಿರುವ ಮುಳ್ಳುಗಳು ಕುದುರೆಯ ಬಾಯನ್ನು ಚುಚ್ಚುತ್ತವೆ ಎಂದು ಮೆಗಾಸ್ತನೀಸ್ ಬರೆದಿರುವನು".[೬೬]

ಅಶ್ವಾರೋಹಿಗಳು ಕವಚ, ಆಭರಣ ವಿಭೂಷಿತರಾಗಿದ್ದು ಪತಾಕೆಗಳನ್ನು ಹಿಡಿದಿರುತ್ತಿದ್ದರು. ಕವಚಕ್ಕೆ ಉಷ್ಣೀಷವೆಂದು ಹೆಸರು. ವೇದಕಾಲೀನ ಅಶ್ವಾರೋಹಿಗಳು ಖಡ್ಗ ಮತ್ತು ಭಲ್ಲೆಯನ್ನು ಆಯುಧವನ್ನಾಗಿ ಬಳಸುತ್ತಿದ್ದರು.

ಕುದುರೆ ಸವಾರರು ಕತ್ತಿ, ಈಟಿ, ಗುರಾಣಿಗಳನ್ನು ಹಿಡಿದು ಯುದ್ಧ ಮಾಡುತ್ತಿದ್ದರು. ರಾವುತರು ಸೌನಿಯಾ ಎಂಬ ಭಲ್ಲೆಯನ್ನು ಧರಿಸುತ್ತಿದ್ದರು. ಇವರ ಡಾಲು ಕಾಲ್ದಳದವರಿಗಿಂತ ಚಿಕ್ಕದು. ಯುದ್ಧಕ್ಕೆ ಹೋಗುವ ಮುನ್ನ ಅಶ್ವಗಳಿಗೆ ಮದ್ಯವನ್ನು ಕುಡಿಸುತ್ತಿದ್ದ ಮಾಹಿತಿ ಮಹಾಭಾರತದಲ್ಲಿದೆ. ಒಟ್ಟಿನಲ್ಲಿ ಕುದುರೆಗಳು ಎಲ್ಲಾ ಅಡೆತಡೆಗಳನ್ನು ಹಿಮ್ಮೆಟ್ಟಿಸಿ ಶೀಘ್ರ ಸಂಪರ್ಕವನ್ನು ಕಲ್ಪಿಸುವುದರಿಂದ ಅತ್ಯಂತ ಉಪಯುಕ್ತವಾಗಿದ್ದವು.

ಮಧ್ಯಕಾಲದ ಸಂದರ್ಭದಲ್ಲಿ ಕರ್ನಾಟಕದ ಸೈನ್ಯ ವ್ಯವಸ್ಥೆಯಲ್ಲಿ ಕುದುರೆ, ಪ್ರಾಚೀನ ಕಾಲದಿಂದ ಆನೆ ಪಡೆದುಕೊಂಡು ಬಂದಿದ್ದ ಪ್ರಥಮ ತನವನ್ನು ಕಸಿದುಕೊಂಡಿತು ಎಂದೇ ಹೇಳಬೇಕು. ಇದಕ್ಕೆ ಕಾರಣ "ಮಹಮದ್- ಬಿನ್ -ತುಘಲಕ್ ಮತ್ತು ಅಲ್ಲಾವುದ್ದೀನ್ ಖಿಲ್ಜಿಯವರ ದಕ್ಷಿಣ ಭಾರತದ ದಂಡೆಯಾತ್ರೆಗಳು ಕಾರಣವಾಗಿರಬೇಕು. ಮುಸ್ಲಿಂರ ಪ್ರಭಾವದಿಂದ ಕರ್ನಾಟಕ ಸೈನ್ಯದಲ್ಲಿ ಕುದುರೆಯು ಹೆಚ್ಚು ಪರಿಚಯವಾಯಿತು. ಮಧ್ಯಯುಗದ ಯುದ್ಧ ವ್ಯವಸ್ಥೆಯಲ್ಲಿ ಕುದುರೆ ಅನಿವಾರ್ಯ ಅಂಗವಾಗಿದ್ದಿತು. ಅದು ಕರ್ನಾಟಕದ ಸೈನ್ಯದಲ್ಲಿ ಹೆಚ್ಚು ಹೆಚ್ಚು ಬಳಕೆಗೊಂಡುದು ಹೊಯ್ಸಳರು, ಯಾದವರು ಮತ್ತು ಅನಂತರ ಬಂದ ಬಹುಮನಿ ಹಾಗೂ ವಿಜಯನಗರ ಅರಸರ ಕಾಲಗಳಲ್ಲಿ. ಹೊಯ್ಸಳರ ಕಾಲದಲ್ಲಿ ವಿದೇಶಗಳಿಂದ ಕುದುರೆಗಳನ್ನು ಆಮದು ಮಾಡಿಕೊಳ್ಳಲಾಗುತ್ತಿತ್ತು. ಅವುಗಳ ಸವಾರಿಯ ಶಿಕ್ಷಣ ನೀಡಲು ವಿಷ್ಣುವರ್ಧನನು ಪ್ರತ್ಯೇಕ ಶಾಲೆಯನ್ನು ತೆರೆದಿದ್ದನು. 'ಅನ್ನಪಾಲ ಸಾಹಣಿ' ಎಂಬುವವನು ಅಶ್ವಪಡೆಯ ಮುಖ್ಯಸ್ಥ ಹಾಗೂ ತರಬೇತುದಾರನಾಗಿದ್ದುದು ತಿಳಿದು ಬರುತ್ತದೆ. ಕುದುರೆಯ ಮೇಲ್ವಿಚಾರಕನಿಗೆ 'ತುರಗಸಾಹಣಿ' ಎಂದೂ ಕರೆಯಲಾಗುತ್ತಿತ್ತು. ಕುದುರೆಗಳನ್ನು ಕೊಳ್ಳುವ ಮೊದಲು ಅದರ ಲಕ್ಷಣಗಳನ್ನು ಗುರುತಿಸುವಲ್ಲಿ ತುರಗ ಸಾಹಣಿಗಳ ಪಾತ್ರ ಅತ್ಯಂತ ಮಹತ್ವದ್ದು. ಅಂತೆಯೇ ರಾಜನ ವಾಹನವಾಗಿರಬೇಕಾದ ಕುದುರೆಯು ಯಾವ ಯಾವ ಲಕ್ಷಣಗಳನ್ನು ಹೊಂದಿರಬೇಕೆಂಬುದನ್ನು ಶಿವತತ್ತ್ವ ರತ್ನಾಕರದಲ್ಲಿ ಸ್ಪಷ್ಟವಾಗಿ ಹೇಳಲಾಗಿದೆ. 'ಉದ್ದಕತ್ತು, ಸೊಗಸಾದ ಪಕ್ಕೆ, ದೊಡ್ಡಕಣ್ಣು, ಸೊಂಟ, ಹೆಗಲು, ಎದೆ, ಹಣೆ, ಬೆನ್ನು, ವೃಷಣ, ಕಿವಿಗಳು ಚಿಕ್ಕದಾಗಿದ್ದು, ಗಟ್ಟಿಯೂ, ಒತ್ತಾಗಿಯೂ

ಇರುವ ಗೊರಸುಗಳು, ಉದ್ದ ಮಾಂಸವಿಲ್ಲದ ಮೊಳಕಾಲುಗಳ, ನಿತಂಬ ಭಾಗದ ಹಾಗೂ ರೋಮಗಳು ತೆಳ್ಳಗಿರುವ ಬಾಲ, ಮೃದುವಾದ ನಾಲಿಗೆ, ಮೂತಿ, ಕಟವಾಯಿ, ತುಟಿ ಹಾಗೂ ಕತ್ತಿನ ಕೂದಲುಗಳು, ಶುದ್ಧವಾದ ಸುಳಿಗಳು. ಒಳ್ಳೆಯಬಣ್ಣದ ಒಂದಕ್ಕೊಂದು ಬಿಗಿಯಾಗಿ ಸೇರಿಕೊಂಡ ಹಲ್ಲುಗಳು ಈ ಬಗೆಯ ಕುದುರೆಗಳು ರಾಜರಿಗೆ ವಾಹನವಾಗಿರಬೇಕು. ಯುದ್ಧ ಕುದುರೆಗಳನ್ನು ಆಯ್ಕೆ ಮಾಡುವಾಗಲೂ ಈ ಬಗೆಯ ಲಕ್ಷಣಗಳನ್ನು ಗುರುತಿಸುತ್ತಿದ್ದುದು ಸಾಮಾನ್ಯವಾಗಿದ್ದಿತು".[೬೪]

ವಿಜಯನಗರ ಕಾಲದಲ್ಲಿ ಕಾಲ್ದಳದ ನಂತರ ಸ್ಥಾನ ಅಶ್ವದಳದ್ದಾಗಿತ್ತು. "ಈ ಅರಸರು ಅಶ್ವಪಡೆಯಲ್ಲಿ ವಿಶೇಷ ಪರಿಣತಿ ಹೊಂದಿದ್ದುದರಿಂದ ಎರಡನೇ ದೇವರಾಯ, ಕೃಷ್ಣದೇವರಾಯ, ಸದಾಶಿವರಾಯರನ್ನು ಅಶ್ವಪತಿಗಳೆಂದೇ ಶಾಸನಗಳಲ್ಲಿ ಕರೆಯಲಾಗಿದೆ. ಅಮುಕ್ತಮೌಲ್ಯ ಕೃತಿಯು ಇವುಗಳ ಆರೈಕೆ ಕುರಿತು ಗಜಸೈನ್ಯ, ಅಶ್ವಸೈನ್ಯಗಳನ್ನು ಎಚ್ಚರಿಕೆಯಿಂದ ಸಂರಕ್ಷಿಸಿಕೊಳ್ಳುತ್ತಿರಬೇಕು ಆನೆ ಕುದುರೆಗಳನ್ನು ಅವುಗಳ ಹಿತಾಹಿತಗಳನ್ನು ಅರಿತು ಆರೈಕೆ ಮಾಡಬಲ್ಲ ನೆಚ್ಚಿನ ಭಂಟರ ವಶದಲ್ಲಿರಿಸಬೇಕು. ತಮ್ಮ ಸುಖ ಸಂತೋಷಗಳಿಗಾಗಿ ಆ ಪ್ರಾಣಿಗಳನ್ನು ಹಿಂಸೆಗೀಡು ಮಾಡುವ ಅಧಿಕಾರಿಗಳನ್ನು ನಂಬಬಾರದು ಎಂದಿದೆ. ಹೀಗೆ ಅಶ್ವಪಡೆಗೆ ಬೇಕಾದ ಕುದುರೆಯ ಆಯ್ಕೆ ಅದರ ಆರೈಕೆ ಮತ್ತು ಬಳಕೆಯ ಸಂಗತಿಗಳು ಗಮನಾರ್ಹವಾಗಿವೆ.

ಮೌರ್ಯರ ಕಾಲದಿಂದಲೂ ಭಾರತದಲ್ಲಿ ಅಶ್ವದಳವು ಮುಖ್ಯ ಪಾತ್ರ ವಹಿಸಿದ್ದುದು ತಿಳಿದು ಬರುವ ಸಂಗತಿ. ಚಂದ್ರಗುಪ್ತ ಮೌರ್ಯನು ೨೦,೦೦೦ ಅಶ್ವದಳ ಮತ್ತು ೯,೦೦೦ ಗಜಗಳನ್ನು ಹೊಂದಿದ್ದನು. ಕರ್ನಾಟಕದಲ್ಲಿ ಕ್ರಿ.ಶ. ಏಳನೆಯ ಶತಮಾನದಲ್ಲಿ ಅಶ್ವಸೇನೆಯು ಅಸ್ತಿತ್ವದಲ್ಲಿದ್ದಿತು. ಬಾದಾಮಿ ಚಾಲುಕ್ಯರ ಐಹೊಳೆ ಶಾಸನವು ಮಂಗಳೇಶನ ಅಶ್ವಸೇನೆಯನ್ನು ಉಲ್ಲೇಖಿಸಿದೆ. ಸೇವುಣರ ಐದನೆಯ ಬಿಲ್ಲಮನು ಹೊಯ್ಸಳರ ವಿರುದ್ಧ ಸೊರಟೂರು ಕದನಕ್ಕೆ ೧೨,೦೦೦ ಅಶ್ವದಳವನ್ನು ತೆಗೆದುಕೊಂಡು ಹೋದದ್ದು ಶಾಸನದಿಂದ ತಿಳಿದು ಬರುತ್ತದೆ. ಇದೇ ಮನೆತನಕ್ಕೆ ಸೇರಿದ ಸಿಂಘಣನ ಕ್ರಿ.ಶ.೧೨೩೯ರ ಶಾಸನವು ಕದಂಬರ ವಿರುದ್ಧ ಗುತ್ತಿಕೋಟೆಯನ್ನು ವಶಪಡಿಸಿಕೊಳ್ಳಲು ೨೦,೦೦೦ ಅಶ್ವಗಳನ್ನು ಉಪಯೋಗಿಸಿದ್ದನೆಂದು ತಿಳಿಸುತ್ತದೆ. ಇವು ವಿಜಯನಗರ ಪೂರ್ವದ ಅಶ್ವಬಲವನ್ನು ಸಮರ್ಥಿಸುವಂಥವು."[೬೫]

ನಿರ್ವಹಣೆ : ವಿಜಯನಗರ ಆರಂಭಕಾಲದ ಸೈನ್ಯದಲ್ಲಿ ಅಶ್ವದಳವಿದ್ದರೂ ಅಷ್ಟೊಂದು ಪ್ರಬಲಯುತವಾಗಿರಲಿಲ್ಲ. ಆದರೆ ಬಹುಮನಿಯವರಿಗೆ ದೆಹಲಿ ಸುಲ್ತಾನರ ಪ್ರಭಾವವಿದ್ದುದರಿಂದ ಅವರು ಪ್ರಬಲ ಅಂಗವಾಗಿ ರೂಪಿಸಿಕೊಂಡಿದ್ದರು. ಬುಕ್ಕರಾಯನು ಅಶ್ವಪಡೆಗೆ ಕುದುರೆಗಳನ್ನು ಅರಬ್, ಪರ್ಶಿಯಾ ಮುಂತಾದ ದೇಶಗಳಿಂದ ಆಮದು ಮಾಡಿಕೊಳ್ಳುವ ಮೂಲಕ ಅಶ್ವಪಡೆಯತ್ತ ವಿಶೇಷ ಗಮನಹರಿಸಿದ್ದುದನ್ನು ಈ ಹಿಂದೆ ನೋಡಿದ್ದೇವೆ. ಇವನ ನಂತರ ಒಂದನೇ ದೇವರಾಯ ಅಶ್ವಗಳನ್ನು

ಪರ್ಶಿಯಾ ಮತ್ತು ಅರೇಬಿಯಾಗಳಿಂದ ಹೆಚ್ಚಿನ ಪ್ರಮಾಣದಲ್ಲಿ ಖರೀದಿಸಿ ಅವುಗಳ ನಿರ್ವಹಣೆಗೆ ಯೋಗ್ಯ ಸಿಬ್ಬಂದಿಯನ್ನು ನೇಮಿಸಿದ್ದನು. ಎರಡನೇ ದೇವರಾಯನು ತನ್ನ ಕಾಲದಲ್ಲಿದ್ದ ಯುದ್ಧಗಳಲ್ಲಿ ವಿಜಯನಗರವು ಅನುಭವಿಸುತ್ತಿದ್ದ ವೈಫಲ್ಯಗಳಿಗೆ ಕಾರಣಗಳನ್ನು ಹುಡುಕುತ್ತಾನೆ. ಅದರಂತೆ ಬಹುಮನಿಗಳು ದೆಹಲಿ ಸುಲ್ತಾನರ ಪದ್ಧತಿಯನ್ನು ಅನುಸರಿಸಿ ಅಶ್ವದಳದ ಮೇಲೆ ಹೆಚ್ಚು ನಂಬಿಕೆಯನ್ನು ಇಟ್ಟಿದ್ದುದು. ಕಾರಣ ಅಶ್ವದಳವು ಹೆಚ್ಚು ಕಾರ್ಯ ಪ್ರವೀಣವಾಗಿದ್ದು ವಿಜಯನಗರದವರಿಗಿಂತ ಚುರುಕಾಗಿದ್ದುದು ಗೊತ್ತಾಗುತ್ತದೆ. ಇದನ್ನು ತಿಳಿದ ವಿಜಯನಗರ ಅರಸನು ಮುಂದೆ ಅಶ್ವಪಡೆಯತ್ತ ಹೆಚ್ಚು ಗಮನ ಹರಿಸಿದನು.

ಈ ಅರಸರಿಗೆ ಇದ್ದ ಆಸಕ್ತಿ ಕುರಿತು ನ್ಯೂನಿಜ್ ಒಂದೆಡೆ "ವಿಜಯನಗರದ ಅರಸುಗಳಿಗೆ ಕುದುರೆಗಳೂ ೪೦೦ -೫೦೦ ಆನೆಗಳು ಇರುತ್ತಿದ್ದವು ಎಂದಿದ್ದಾನೆ. ಅಲ್ಲದೆ ಇವುಗಳ ನಿರ್ವಹಣೆ ಕುರಿತು ವಿವರಿಸುತ್ತಾ, ಕುದುರೆಗಳ ನಿರ್ವಹಣೆಗೆ ದಿನಕ್ಕೆ ೨೦೦೦ ಪಾರ್ದಾಂವ್‌ಗಳಷ್ಟು ಖರ್ಚಾಗುತ್ತದೆ. ೬೦೦೦ ಜನ ಕುದುರೆ ಸವಾರರನ್ನು ರಾಜನು ಸಂಬಳ ಕೊಟ್ಟು ಇಟ್ಟುಕೊಂಡಿದ್ದುದಾಗಿಯೂ ಹೇಳುವನು. ವಿದೇಶಗಳಿಂದ ಆಮದಾಗುತ್ತಿದ್ದ ಕುದುರೆಗಳನ್ನು ಹೇಗೆ ಸಾಕುತ್ತಿದ್ದರೆನ್ನುವುದಕ್ಕೆ ನ್ಯೂನಿಜ್ "ಕುದುರೆ ಸಾಕುವವರಿಗೆ ಒಬ್ಬೊಬ್ಬನಿಗೆ ಆರಾರು ಕುದುರೆಗಳನ್ನು ಸಾಕುವುದಕ್ಕೆ ಕೊಡುತ್ತಾನೆ. ಕುದುರೆಗಳ ಮೇಲೆ ರಾಜನ ಗುರುತು ಹಾಕಿರುತ್ತಾರೆ. ಕುದುರೆ ಸತ್ತರೆ ಗುರುತು ಹಾಕಿರುವ ಭಾಗದ ಚರ್ಮವನ್ನು ಕೊಯ್ದು ಅಶ್ವದಶದ ನಾಯಕನಾದ ಮದನಾರ್ಕನಿಗೆ ತೋರಿಸಿ ಬೇರೆ ಕುದುರೆ ಪಡೆಯಬಹುದು ಎಂದಿರುವನು. ಬಾರ್ಬೋಸಾ ಕುದುರೆ ಸಾಕುವ ವ್ಯವಸ್ಥೆಯನ್ನು ಈ ರೀತಿ ಹೇಳಿದ್ದಾನೆ. "ಕುದುರೆಗಳನ್ನು ತನ್ನ ಶ್ರೀಮಂತ ಸರದಾರರಿಗೆ ಹಂಚಿಕೊಟ್ಟು ಅವರು ಅವುಗಳನ್ನು ಸಾಕುವಂತೆ ವ್ಯವಸ್ಥೆ ಮಾಡಿದ್ದಾನೆ.

ವಿಜಯನಗರ ಕಾಲದಲ್ಲಿ ಹಿಂದೆಂದಿಗಿಂತಲೂ ಹೆಚ್ಚಿನ ಸ್ಥಾನ ಹಾಗೂ ಪ್ರಾಶಸ್ತ್ಯ ಕುದುರೆಗಳಿಗೆ ದೊರಕಿತು. ಇದಕ್ಕೆ ಕಾರಣ ಸಮಕಾಲೀನ ಶತ್ರುಪಡೆಗಳ ಬಲಕ್ಕೆ ಪ್ರತಿಯಾಗಿ ಬಲಗೊಳಿಸಬೇಕಾಗಿತ್ತು. ಅದರಂತೆ ಆರಂಭದ ಅರಸರಿಂದಲೂ ಕುದುರೆಗಳನ್ನು ಸೈನ್ಯದಲ್ಲಿ ಹೆಚ್ಚು ಅಳವಡಿಸಿಕೊಂಡಿರುವುದನ್ನು ಕಾಣಬಹುದು. ಕ್ರಿ.ಶ.೧೩೬೬ -೬೮ರಲ್ಲಿ ೪೦,೦೦೦ ಅಶ್ವದಳವಿದ್ದುದನ್ನು ಫೆರಿಸ್ತಾ ಉಲ್ಲೇಖಿಸುತ್ತಾನೆ. ಫೆರಿಸ್ತಾ ಹೇಳುವುದು ಒಂದನೇ ಬುಕ್ಕರಾಯನ ಕಾಲದ ಅಶ್ವದಳವಾಗಿದೆ. ಇದಕ್ಕೆ ಸಮರ್ಥನೀಯವೆನ್ನುವಂತೆ ಶಾಸನವೊಂದು ಬುಕ್ಕರಾಯನನ್ನು "ಹೊನ್ನ ಕೊಟ್ಟು ಕುದುರೆಯ ಕೊಂಬ ಮಾಂಡಲಿಕರ ಗಂಡ" ನೆಂದು ಕರೆದಿದೆ. ಈ ಬಿರುದನ್ನು ಗಮನಿಸಿದರೆ ಅಂದು ಹೊರದೇಶಗಳಿಂದ ಮಾಂಡಲೀಕರನ್ನೊಳಗೊಂಡಂತೆ ಅರಸರು ಕುದುರೆಗಳನ್ನು ಸೈನ್ಯಕ್ಕಾಗಿ ಆಮದು ಮಾಡಿಕೊಳ್ಳುತ್ತಿದ್ದುದಾಗಿ ತಿಳಿದು ಬರುವುದು. ಅಲ್ಲದೆ ಕುದುರೆಗಳಿಗೆ ಪ್ರತಿಯಾಗಿ ಹೊನ್ನನ್ನು ವಿನಿಮಯ ಸಾಧನವಾಗಿ ಬಳಸಿರುವುದು ಗಮನಿಸಬೇಕಾದ ಅಂಶ.

ಎರಡನೇ ದೇವಾರಾಯನ ಕಾಲದಲ್ಲಿ ಅಂದರೆ ಕ್ರಿ.ಶ. ೧೪೪೨ರ ಸುಮಾರಿಗೆ ವಿಜಯನಗರ ಸೇನೆಯು ಕೆಲವು ಯುದ್ಧಗಳಲ್ಲಿ ವಿಫಲತೆ ಹೊಂದಿದ್ದುದನ್ನು ಫೆರಿಸ್ತಾ ಹೇಳುತ್ತಾನೆ. ಆಗ ದೇವರಾಯನು ತನ್ನ ಸೈನ್ಯದ ಹಿನ್ನೆಡೆಗೆ ಕಾರಣಗಳನ್ನು ತಿಳಿಯಲು ವರಿಷ್ಠ ಅಧಿಕಾರಿಗಳು ಹಾಗೂ ಪ್ರಮುಖ ಬ್ರಾಹ್ಮಣರ ಅಧಿವೇಶನ ಕರೆಯುತ್ತಾನೆ. ಅದರಲ್ಲಿ ತನ್ನ ಕರ್ನಾಟಕ ನಾಡು ಬಹುಮನಿ ರಾಜ್ಯಕ್ಕಿಂತ ವಿಸ್ತಾರ, ಜನಸಂಖ್ಯೆ ಮತ್ತು ಆದಾಯಗಳಲ್ಲಿ ಎಷ್ಟೋ ಪಟ್ಟು ಮೇಲಾಗಿದೆ ಎಂದು ತಿಳಿಸುತ್ತಾನೆ. ಅರಸನಿಗೆ ಮುಸಲ್ಮಾನರ ಶ್ರೇಷ್ಠತೆ ಎರಡು ಸ್ಥಿತಿಗಳಿಂದ ಉಂಟಾಗಿದೆ. ಒಂದು ಅವರ ಕುದುರೆಗಳೆಲ್ಲ ಬಲಿಷ್ಠವಾಗಿವೆ ಮತ್ತು ಕರ್ನಾಟಕದ ದುರ್ಬಲ, ತೆಳ್ಳಗಿನ ಕುದುರೆಗಳಿಗಿಂತ ಹೆಚ್ಚು ಶ್ರಮ ಸಹಿಸಬಲ್ಲವು. ಎರಡನೇ ದೇವರಾಯ ತನ್ನ ಅಧಿಕಾರಾವಧಿಯಲ್ಲಿ ಅಶ್ವಸೈನ್ಯ ಹಾಗೂ ಬಿಲ್ಲುಗಾರರ ಪಡೆಯನ್ನು ಬಲಪಡಿಸುವಲ್ಲಿ ಸಾಕಷ್ಟು ಶ್ರಮಿಸಿದನು. ಫೆರಿಸ್ತಾನು ಎರಡನೇ ದೇವರಾಯನ ಕಾಲದಲ್ಲಿ ಎರಡು ಸಾವಿರ ಬಿಲ್ಲುಗಾರರಿದ್ದರೆಂದು ತಿಳಿಸಿದರೆ ಶಾಸನವೊಂದು ಹತ್ತು ಸಾವಿರ ತುರುಕ ರಾವುತರಿದ್ದುದನ್ನು ಸ್ಪಷ್ಟಪಡಿಸುತ್ತದೆ.

೧೪೬೮-೭೪ರ ನಡುವೆ ಭೇಟಿ ನೀಡಿದ್ದ ರಷ್ಯಾದ ವರ್ತಕ ನಿಕಿಟಿನ್, ೫೦,೦೦೦ ಕುದುರೆಗಳು ವಿಜಯನಗರ ಸೈನ್ಯದಲ್ಲಿದ್ದವೆನ್ನುವನು. ಎರಡನೇ ದೇವರಾಯನ ಮಹಾಸೇನಾಪತಿ ನಾಗಮನಾಯಕನು ದಕ್ಷಿಣದ ದಿಗ್ವಿಜಯಕ್ಕೆಂದು ೪೦,೦೦೦ ಆಯ್ಕೆ ಮಾಡಿದ ಕುದುರೆಗಳನ್ನು ತೆಗೆದುಕೊಂಡು ಹೋಗಿದ್ದುದಾಗಿಯೂ ತಿಳಿದು ಬರುತ್ತದೆ.

ಇವನ ನಂತರ ನಮಗೆ ಅಶ್ವದಳದ ಕುರಿತು ಹೆಚ್ಚಿನ ಮಾಹಿತಿಗಳು ದೊರೆಯುವುದು ಕೃಷ್ಣದೇವರಾಯನ ಕಾಲದಲ್ಲಿ ಈ ಕಾಲಘಟ್ಟದಲ್ಲಿ ಅಶ್ವಪಡೆಯು ಅವನತಿ ಸ್ಥಿತಿಯನ್ನು ತಲುಪಿದ್ದು, ಕೃಷ್ಣದೇವರಾಯನು ಸ್ವತಃ ಅಶ್ವಾರೋಹಿಯಾಗಿದ್ದನು. ಅಮುಕ್ತಮೌಲ್ಯದಲ್ಲಿ ಅವನು ಸೈನ್ಯಕ್ಕೆ ಅದರಲ್ಲೂ ಆನೆ -ಕುದುರೆಗಳಿಗೆ ಕೊಂಡುಕೊಳ್ಳುವ, ವೆಚ್ಚ ಮಾಡುವ ಹಣ ಖರ್ಚೆಂದು ಭಾವಿಸುವಂತಿಲ್ಲ. ರಾಜನಾದವನು ತನ್ನ ಆದಾಯದ ಅರ್ಧಭಾಗವನ್ನು ಸೇನಾವ್ಯವಸ್ಥೆಗೆಂದೇ ಖರ್ಚು ಮಾಡಬೇಕು. ಕೃಷ್ಣದೇವರಾಯ ತಾನು ಹೇಳಿದಂತೆ ಮಾಡಿಯೂ ತೋರಿಸಿದ್ದಾನೆ. ಅವನ ಮೂಲ ಸೈನ್ಯದಲ್ಲಿ ೩೫,೦೦೦ ಅಶ್ವದಳವಿದ್ದುದನ್ನು ಪಾಯೇಸ್ ಉಲ್ಲೇಖಿಸಿದರೆ, ಬಾರ್ಬೋಸಾ ೨೦,೦೦೦ವೆಂದೂ, ನ್ಯೂನಿಜ್ ೩೨,೬೦೦ ಎಂದು ಹೇಳಿರುವರು. ರಾಯವಾಚಕಮು ಕೃಷ್ಣದೇವರಾಯನ ಜೀವನ ಸಾಧನೆಗಳಿಗೆ ಸಂಬಂಧಿಸಿದ್ದು, ರಾಯನ ಸೈನ್ಯದಲ್ಲಿ ೬೦,೦೦೦ ಕುದುರೆಗಳಿದ್ದುದನ್ನು ಸ್ಪಷ್ಟಪಡಿಸುತ್ತದೆ. ಕೃಷ್ಣದೇವರಾಯ ಅಶ್ವಪಡೆಗೆ ವಿಶೇಷ ಮಹತ್ವ ನೀಡಿದ್ದುದನ್ನು ಇಲ್ಲಿ ಗಮನಿಸಬಹುದು.

ಅಶ್ವದಳದ ಕರ್ತವ್ಯಗಳು : ಸೈನ್ಯದಲ್ಲಿ ಅಶ್ವದಳದ ಪಾತ್ರ ಮಹತ್ವದ್ದು ಹಾಗೂ ತುಂಬಾ ಚಟುವಟಿಕೆಯುಳ್ಳದ್ದು. ಈ ಪಡೆಯ ಕರ್ತವ್ಯಗಳನ್ನು ಕೌಟಿಲ್ಯನು ಸುದೀರ್ಘವಾಗಿ ವಿವರಿಸಿದ್ದಾನೆ. "ಕುದುರೆಯ ಸೈನ್ಯವು ಶಿಬಿರವನ್ನು ಏರ್ಪಡಿಸುವ ಭೂಮಿಯಲ್ಲಿ ಗೂಢವಾಗಿರುವ ಶತ್ರು ಸೈನ್ಯವನ್ನು

ಓಡಿಸುವ, ಸೈನ್ಯವು ಬೀಡುಬಿಟ್ಟಿಲ್ಲ. ಉಪದ್ರವ ಇಲ್ಲದಂತೆ ಮಾಡುವ ದಾರಿಯಲ್ಲಿ ಸಿಗುವ ಕಾಡಿನಲ್ಲಿ ಕಳ್ಳರನ್ನು ಓಡಿಸುವ ಕೆಲಸ ಮಾಡಬೇಕು. ಶಿಬಿರಕ್ಕೆ ಯೋಗ್ಯವಾದ ಪ್ರದೇಶವನ್ನು ಮೊದಲು ಆಕ್ರಮಿಸಿಕೊಳ್ಳುವುದು ಜಲಾಶಯಗಳನ್ನು ತಮಗನುಕೂಲವಾದ ಗಾಳಿಯುಳ್ಳ ಮತ್ತು ಎದುರಿಗೆ ಸೂರ್ಯರಶ್ಮಿ ಬೀಳದ ಪ್ರದೇಶವನ್ನು ಆಕ್ರಮಿಸುವುದು. ಶತ್ರು ಸೈನಿಕರು ಪ್ರವೇಶಿಸಿದಂತೆ ನೋಡಿಕೊಳ್ಳುವುದು.

ಶತ್ರು ಸೈನ್ಯದಿಂದ ಉಂಟಾಗುವ ಕ್ಷೋಭೆಯನ್ನು ಹೋಗಲಾಡಿಸಿ ಧೈರ್ಯವನ್ನು ಉಂಟುಮಾಡುವುದು. ಶತ್ರುಸೈನ್ಯದೊಳಗೆ ಹೊಕ್ಕಿ ಕ್ಷೋಭೆ ಉಂಟು ಮಾಡುವುದು. ಆಯಾಸದಿಂದ ಬಳಲಿದ ತನ್ನ ಸೈನ್ಯಕ್ಕೆ ಸಹಾಯ ಮಾಡುವದು. ಶತ್ರು ಸೈನಿಕರನ್ನು ಹಿಂಬಾಲಿಸಿ ಬಂಧಿಸುವುದು. ಬಂಧಿಸಲ್ಪಟ್ಟ ತನ್ನವರನ್ನು ಬಿಡಿಸುವದು. ಹಿಂದೆ, ಮುಂದೆ ಮತ್ತು ಪಾರ್ಶ್ವಗಳಿಂದ ಶತ್ರುಗಳಿಗೆ ಹೊಡೆತ ಕೊಡುವುದು. ಸೋತ ಶತ್ರು ಸೈನ್ಯವನ್ನು ಬೆನ್ನಟ್ಟುವುದು. ಚದುರಿರುವ ತನ್ನ ಸೈನ್ಯವನ್ನು ಒಂದುಗೂಡಿಸುವುದು. ಇವುಗಳೆಲ್ಲಾ ಅಶ್ವದಳದ ಕರ್ತವ್ಯಗಳು ಎಲ್ಲಾ ಕಾಲಗಳಲ್ಲೂ ಪ್ರಸ್ತುತವಾಗಿದ್ದವು.

ಒಬ್ಬೊಬ್ಬ ಅಂಗರಕ್ಷಕ ಯೋಧನಿಗೆ ಒಂದು ಕುದುರೆಯನ್ನೂ, ಕುದುರೆಯ ಮಾಲೀಸು ಮಾಡಲು ಒಬ್ಬ ಆಳನ್ನೂ ಕೊಡುತ್ತಾನೆ. ಅಲ್ಲದೇ ಒಬ್ಬ ಗುಲಾಮೀ ಹುಡುಗಿಯನ್ನೂ ಕೊಟ್ಟು, ನಾಲ್ಕೈದು ಚಿನ್ನದ ಪರ್ದೋಗಳ ಮಾಸಾಶನವನ್ನು ಕೊಡುತ್ತಾನೆ. ಇದು ಕುದುರೆಗಳನ್ನು ಸಾಕುವ ಪರಿಯಾದರೆ, ಇವುಗಳಿಗಾಗಿ ಮಾಡಲಾದ ಖರ್ಚನ್ನು ಕುರಿತಂತೆ ಬಾರ್ಬೋಸಾ "ರಾಜನ ಖರ್ಚಿನಲ್ಲಿ ಇವುಗಳನ್ನು ಸಾಕಿ ಸಲುಹುತ್ತಾರೆ" ಎಂದಿರುವನು. ರಾಜನಿಗೆ ಈ ಹಣವೆಲ್ಲಿ ಬರುತ್ತಿತ್ತೆನ್ನುವುದುಕ್ಕೆ ಪಾಯೇಸ್ "ಬಿಸನಗರದಿಂದ ಬರುವ ಉತ್ಪತ್ತಿಯಿಂದ ಈ ಆನೆ ಕುದುರೆಗಳ ಖರ್ಚು ತೂಗುತ್ತದೆ" ಎನ್ನುತ್ತಾನೆ. ಇಷ್ಟೆಲ್ಲಾ ಆರೈಕೆಯಿಂದ ಕುದುರೆಗಳನ್ನು ಸಾಕುತ್ತಿದ್ದರೂ "ಇಲ್ಲಿ ಕುದುರೆಗಳು ಬಹಳ ದಿನಗಳು ಬದುಕುವುದಿಲ್ಲ"ವೆಂದು ಹೇಳುವುದನ್ನು ಬಾರ್ಬೋಸಾ ಮರೆಯುವುದಿಲ್ಲ.

ಕುದುರೆಗಳ ಆಮದು : "ಕುದುರೆಗಳು ನಮ್ಮದೇಶದ ಪ್ರಾಣಿಗಳಲ್ಲ. ಅವುಗಳನ್ನು ಅರೇಬಿಯಾದಿಂದ ತರಿಸಿಕೊಳ್ಳುತ್ತಿದ್ದರು. ತುರುಷ್ಕ (Turkey) ದೇಶದ ಕುದುರೆಗಳೂ ಪ್ರಸಿದ್ಧವಾಗಿದ್ದುವು. ಕುದುರೆಗಳನ್ನು ನೋಡಿಕೊಳ್ಳಲು ಪ್ರತ್ಯೇಕವಾದ ಇಲಾಖೆಯೇ ಇರಬೇಕೆಂದು ಕೌಟಿಲ್ಯನ ಅರ್ಥಶಾಸ್ತ್ರವು ಹೇಳುತ್ತದೆ. ಆ ಇಲಾಖೆಗೆ ಶಾಸನಗಳಲ್ಲಿ ಬರುವ 'ತುರಗ ಸಾಹಣಿ'ಯು ಮುಖ್ಯಾಧಿಕಾರಿ [ಸಾಹಣಿ= (ಅಶ್ವ) ಶಿಕ್ಷಕ] ಕೌಟಿಲ್ಯ 'ಹಯಾಧ್ಯಕ್ಷ' ಇವನೇ ಇರಬೇಕು. 'ಶಾಲಿಹೋತ್ರವು (=ಅಶ್ವಶಾಸ್ತ್ರ) ಪ್ರಾಚೀನ ಕರ್ನಾಟಕದ ವಿದ್ಯಾಭ್ಯಾಸದ ಒಂದು ಅಂಗವಾಗಿತ್ತು"[೬] ಈಗಲೂ ಮೈಸೂರಿನಲ್ಲಿ ಅಶ್ವವೈದ್ಯನನ್ನು ಕುದುರೆಗಾಡಿ ಹೊಡೆಯುವವರು 'ಸಾಲಿತ್ರಿ', 'ಸಾಲಿಸ್ತ್ರಿ' ಎಂದು ಕರೆಯುತ್ತಾರೆ ಎಂಬುದು ಮೇಲಿನ ಮಾತಿಗೆ ಪುಷ್ಟಿಯನ್ನು ನೀಡುತ್ತದೆ.

ಕೌಟಿಲ್ಯನು ಪಳಗಿದ ಯುದ್ಧಯೋಗ್ಯವಾದ ಕುದುರೆಗಳಲ್ಲಿ ಉತ್ತಮವಾದವುಗಳು ಕಾಂಭೋಜ, ಸಿಂಧುದೇಶ, ಆರಟ, ವಾನಾಯು ದೇಶಗಳಲ್ಲಿ ಹುಟ್ಟಿದವುಗಳು ಎಂದು ಹೇಳುತ್ತಾನೆ. ಮೌರ್ಯರ ಕಾಲದಲ್ಲಿ ಅಶ್ವದಳವು ಅಸ್ತಿತ್ವದಲ್ಲಿದ್ದು, ಚಂದ್ರಗುಪ್ತನು ಮೂವತ್ತು ಸಾವಿರ ಅಶ್ವದಳವನ್ನು ಹೊಂದಿದ್ದನೆಂದು ತಿಳಿದು ಬರುತ್ತದೆ. ಕರ್ನಾಟಕದಲ್ಲಿ ಹೊಯ್ಸಳರು ಮತ್ತು ದೇವಗಿರಿಯ ಸೇವುಣರ ಕಾಲಾವಧಿಯಲ್ಲಿ ಕುದುರೆಗಳು ಮಹತ್ವದ ಪಾತ್ರವಹಿಸಿದ್ದವು ಎಂದು ಪ್ರಮುಖ ಆಕರಗಳಿಂದ ತಿಳಿದು ಬರುತ್ತದೆ.

ಭಾರತದಲ್ಲಿ ಹುಟ್ಟಿ ಬೆಳೆಯುವ ಕುದುರೆಗಳು ಸೈನ್ಯಕ್ಕೆ ಯೋಗ್ಯವಾಗಿರಲಿಲ್ಲವೆಂಬುದು ಹಲವು ವಿದ್ವಾಂಸರ ಅಭಿಮತ. ಮಾರ್ಕೋಪೋಲೋ 'ಈ ದೇಶದಲ್ಲಿ (ಭಾರತ) ಕುದುರೆಗಳ ತಳಿ ಅಭಿವೃದ್ಧಿಯಾಗುವುದಿಲ್ಲ. ಏಕೆಂದರೆ ಹವಾಮಾನದಿಂದಲೋ ಏನೋ ಇಲ್ಲಿ ಒಳ್ಳೆಯ ತಳಿಗೆ ಹುಟ್ಟಿದ ಮರಿಗಳೂ ವಕ್ರವಾಗಿಯೇ ಹುಟ್ಟುತ್ತವೆ. ಆದುದರಿಂದ ವರ್ಷ ವರ್ಷ ಕಿಸ್, ಓರ್ಮಸ್, ದೋಫರ್, ಸೂಯರ್ (ಸೂಪಾರ), ಏಡ ನಿನ್ನ ವರ್ತಕರುಗಳಿಂದ ಸಾವಿರಾರು ಕುದುರೆಗಳನ್ನು ಕೊಂಡುಕೊಳ್ಳುತ್ತಾರೆ' ಎಂದಿರುವನು.

ಬಾರ್ಬೋಸಾ ಕೂಡ, ಇಲ್ಲಿ ಕುದುರೆಗಳು ಬಹಳ ದಿನಗಳು ಬದುಕುವುದಿಲ್ಲ. ಈ ದೇಶದಲ್ಲಿ ಕುದುರೆಗಳನ್ನು ಬೆಳೆಸುವುದಿಲ್ಲ. ಓರ್ಮಸ್ ಮತ್ತು ಕ್ಯಾಂಬೆಯಿಂದ ಇಲ್ಲಿಗೆ ಕುದುರೆಗಳನ್ನು ತರಿಸಿ ಸಾಕುತ್ತಾರೆ ಎಂದಿರುವುದು ಭಾರತದಲ್ಲಿ ಬೆಳೆಯುತ್ತಿದ್ದ ಕುದುರೆಗಳಿಗಿಂತ ಬಲಿಷ್ಠವಾದ ಉತ್ತಮ ಜಾತಿಯ ಕುದುರೆಗಳು ಅರಬ್ಬೀ ದೇಶಗಳಲ್ಲಿ ಹೇರಳವಾಗಿ ದೊರೆಯುತ್ತವೆಂದು ಹೇಳಿರುವುದು ಆಮದಿಗೆ ಕಾರಣವಾಗಿದೆ.

ಕುದುರೆಗಳನ್ನು ಆಮದು ಮಾಡಿಕೊಳ್ಳುವ ಕುರಿತು ಬಾರ್ಬೋಸಾ ಹೇಳುವ ಮಾತು. "ಓರ್ಮಸ್ ರಾಜ್ಯದಿಂದ ಕುದುರೆಗಳನ್ನು ಹೊತ್ತುಕೊಂಡು ಅನೇಕ ಹಡಗುಗಳು ಇಲ್ಲಿಗೆ (ಗೋವಾ) ಬರುತ್ತವೆ. ಕುದುರೆಗಳನ್ನು ಕೊಳ್ಳಲು ನರಸಿಂಗುವಾ ಮತ್ತು ದಖನ್ ರಾಜ್ಯಗಳಿಂದ ಅನೇಕ ವರ್ತಕರು ಇಲ್ಲಿಗೆ ಬರುತ್ತಾರೆ. ಕುದುರೆಯ ಸಂಖ್ಯೆಗಳ ಬಗೆಗೆ, ವರ್ಷಕ್ಕೆ ಒಂದು ಸಾವಿರದಿಂದ ಎರಡು ಸಾವಿರ ಕುದುರೆಗಳು ಇಂಡಿಯಾಕ್ಕೆ ಬರುತ್ತಿದ್ದವೆಂದೂ ಹೇಳುತ್ತಾನೆ. ನ್ಯೂನಿಜ್ ದೇಶಿಯ ಕುದುರೆಗಳ ಜೊತೆಗೆ ಓರ್ಮಸಿನಿಂದ ಹದಿಮೂರು ಸಾವಿರ ಕುದುರೆಗಳನ್ನು ಕೊಂಡುಕೊಳ್ಳುತ್ತಾನೆ ಎಂದು ಕೃಷ್ಣದೇವರಾಯನ ಕಾಲದ ಕುದುರೆಗಳ ಬೇಡಿಕೆಯನ್ನು ವ್ಯಕ್ತಪಡಿಸುವನು. ಪ್ರವಾಸಿಗರು ಹೇಳುವಂತೆ ಇಷ್ಟೊಂದು ಸಂಖ್ಯೆಯಲ್ಲಿ ಆಮದಾಗುತ್ತಿದ್ದ ಕುದುರೆಗಳಿಗೆ ಬಹುಮನಿ ಮತ್ತು ವಿಜಯನಗರಗಳೆರಡೂ ಪೈಪೋಟಿ ನಡೆಸುತ್ತಿದ್ದವು. ಕುದುರೆ ವ್ಯಾಪಾರಕ್ಕೆ ಮುಖ್ಯ ಕೇಂದ್ರವಾದ ಗೋವಾದ ಮೇಲೆ ಹಿಡಿತ ಸಾಧಿಸಲು ಈ ಎರಡೂ ರಾಜ್ಯಗಳು ಆಗಾಗ್ಗೆ ಕದನಕ್ಕಿಳಿಯುತ್ತಿದ್ದುದು ಚರಿತ್ರಾರ್ಹ ಸಂಗತಿಯಾಗಿದೆ.

ಪೋರ್ಚುಗೀಸರು ಭಾರತಕ್ಕೆ ಆಗಮಿಸಿದ ಮೇಲೆ ವಿಜಯನಗರದವರು ಅವರೊಂದಿಗೆ ಸ್ನೇಹ ಬೆಳೆಸಲು ಉತ್ಸುಕರಾಗಿದ್ದರು. ಪೋರ್ಚುಗೀಸ್ ಮತ್ತು ಮುಸಲ್ಮಾನರಿಗೂ ಇದ್ದ ಪಾರಂಪರಿಕ ದ್ವೇಷದ ವಿಚಾರ ತಿಳಿದಿದ್ದ ಕೃಷ್ಣದೇವರಾಯ ಅವರಿಗೆ ಪ್ರೋತ್ಸಾಹ ನೀಡುವ ಮೂಲಕ ಕುದುರೆಗಳನ್ನು ತನ್ನ ರಾಜ್ಯಕ್ಕೆ ಮಾರಾಟ ಮಾಡುವ ಕರಾರುಗಳನ್ನು ಹಾಕಿಕೊಂಡಿದ್ದನು. ಅದರಂತೆ ಅಲ್ಬುಕರ್ಕನು ಒಪ್ಪಿದನೆಂದೂ ಹೇಳಲಾಗಿದೆ. ಕೃಷ್ಣದೇವರಾಯನ ನಂತರವೂ ಪೋರ್ಚುಗೀಸರು ವಿಜಯನಗರದೊಂದಿಗೆ ವ್ಯಾಪಾರ ಒಪ್ಪಂದ ಮಾಡಿಕೊಂಡಿದ್ದರು. ಕ್ರಿ.ಶ. ೧೫೪೭ರಲ್ಲಿ ರಾಮರಾಯ ಮತ್ತು ಪೋರ್ಚುಗೀಸರ ಮಧ್ಯೆ ವ್ಯಾಪಾರ ಮತ್ತು ಕುದುರೆಗಳ ಖರೀದಿಗೆ ಸಂಬಂಧಿಸಿದಂತೆ ಒಪ್ಪಂದವಾಗಿತ್ತು. ಅದರನ್ವಯ ಗೋವೆಯಲ್ಲಿ ಬಂದಿಳಿದ ಎಲ್ಲ ಯುದ್ಧಾಶ್ವಗಳನ್ನು ವಿಜಯನಗರಕ್ಕೆ ಮಾರಬೇಕಾಗಿದ್ದಿತು. ಹೀಗೆ ಭಾರೀ ಸಂಖ್ಯೆಯಲ್ಲಿ ಕೊಂಡ ಕುದುರೆಗಳನ್ನು ನೋಡಿಕೊಳ್ಳಲು ಸಾಕಷ್ಟು ಸಿಬ್ಬಂದಿಯಿದ್ದಿತು.

ನ್ಯೂನಿಜ್ ಕುದುರೆಗಳನ್ನು ಮಾಲೀಸು ಮಾಡುವುದಕ್ಕೆ ೧೫೦೦ ಜನರಿದ್ದಾರೆ. ಇಷ್ಟಲ್ಲದೆ ಕುದುರೆಗಳಿಗೆ ತರಬೇತಿ ಕೊಡುವ ೨೦೦ ಜನ ಅಶ್ವಶಿಕ್ಷಕರಿದ್ದಾರೆ ಎಂದಿದ್ದಾನೆ. ಕುದುರೆಗಳ ಸಾಕಣೆ, ತರಬೇತಿ ಮತ್ತು ನಿರ್ವಹಣೆಯನ್ನು ನ್ಯೂನಿಜ್ 'ಇದೆಲ್ಲಾ ತುಂಬಾ ವ್ಯವಸ್ಥೆ ಹಾಗೂ ಕ್ರಮದಿಂದ ನಡೆಯುತ್ತದೆ' ಎನ್ನುವ ಮೂಲಕ ಅಂದಿನ ಅಶ್ವದಳದ ಬಗೆಗಿದ್ದ ಜಾಗರೂಕತೆಯನ್ನು ದೃಢಗೊಳಿಸುತ್ತಾನೆ. ಕುದುರೆಗಳಿಗೆ ಮೇಯಲೆಂದೇ ಪ್ರತ್ಯೇಕ ಭೂಮಿಯನ್ನು ಬಿಡುವ ಪದ್ಧತಿ ವಿಜಯನಗರದಲ್ಲಿ ಇದ್ದುದನ್ನು ಕಾಣಬಹುದು. ಗುಡೇಕೋಟೆ ಬಳಿಯ ಸ್ಥಳವೊಂದನ್ನು ಇಂದಿಗೂ "ಕುದುರೆಡವು" ಎಂದು ಕರೆಯಲಾಗುತ್ತದೆ. ಸ್ಥಳೀಯರ ಪ್ರಕಾರ ಈ ಸ್ಥಳವು ಗುಡೇಕೋಟೆಯ ಪಾಳೆಯಗಾರರು ಕುದುರೆಗಳಿಗೆ ಬೇಕಾದ ಹುಲ್ಲನ್ನು ಬೆಳೆಸುವ ಸಲುವಾಗಿ ಬಿಟ್ಟುಕೊಟ್ಟ ಭೂಮಿಯಿಗಾದ್ದಿತು. ಆದ್ದರಿಂದ ಈ ಸ್ಥಳವನ್ನು ಕುದುರೆಯ ಅಡವಿಯೆಂದು ಕರೆಯುತ್ತಿದ್ದು, ಕಾಲಾಂತರದಲ್ಲಿ "ಕುದುರೆಡವು" ಆಗಿ ಬಳಕೆಗೊಂಡಿದೆ. ಇಂದಿಗೂ ಗ್ರಾಮಗಳಲ್ಲಿ ದನಕರುಗಳಿಗಾಗಿ ಬಿಟ್ಟ ಗೋಮಾಳಗಳಿರುವಂತೆ ಹಿಂದೆ ಕುದುರೆಗಳಿಗೂ ಅಡವಿಗಳಿದ್ದುದು ಗಮನಿಸಬಹುದಾದ ಅಂಶವಾಗಿದೆ.

೫.೩.೫.೪ ಕುದುರೆಗಳ ಬೇಡಿಕೆ

ವಿಜಯನಗರದ ಅರಸರ ಅವಧಿಯಲ್ಲಿ ಕುದುರೆಗಳಿಗೆ ದೊರತ ಬೇಡಿಕೆ ಮತ್ತಾವ ಕಾಲದಲ್ಲಿಯೂ ಸಿಗಲಿಲ್ಲವೆನ್ನಬಹುದು. ಕಾರಣ ಕುದುರೆಗಳು ಅಂದಿನ ಸೈನ್ಯಕ್ಕೆ ತೀರಾ ಅಗತ್ಯ ಸರಕಾಗಿದ್ದವು. ಅಮುಕ್ತ ಮೌಲ್ಯದಲ್ಲಿ ಹೇಳುವಂತೆ. ಕೃಷ್ಣದೇವರಾಯನು ಬೀದರ ಸುಲ್ತಾನನ ವಿರುದ್ಧ ಮಾಡಿದ ಯುದ್ಧದಲ್ಲಿ ಜಯಗಳಿಸಲು ಸಾಧ್ಯವಾದುದು ಅಶ್ವಪಡೆಯ ಸಹಾಯದಿಂದ ಎಂದಿರುವುದು ಅಂದು ಕುದುರೆಗಳಿಗಿದ್ದ ಶಕ್ತಿ, ಮಾನ್ಯತೆ ಮತ್ತು ಬೇಡಿಕೆಯ ಸಂಕೇತವಾಗಿದೆ.

ಮಧ್ಯಯುಗದ ಅದರಲ್ಲೂ ವಿಜಯನಗರ ಕಾಲದಲ್ಲಿ ಕುದುರೆಗಳ ಬೆಲೆಯು ಎಷ್ಟೆಷ್ಟು ಪ್ರಮಾಣದಲ್ಲಿದ್ದಿತೆಂಬುದನ್ನು ಪ್ರವಾಸಿಗರು ನೀಡಿದ ವರದಿಗಳ ಹಿನ್ನಲೆಯಲ್ಲಿ ರಚಿಸಲಾದ ಈ ಕೆಳಗಿನ ಅಂಕಣದಲ್ಲಿ ಕಾಣಬಹುದು.

ಸಂಖ್ಯೆ ವರ್ಷ ದೇಶ ವಿವರಣೆ ಬೆಲೆ

೧. ೧೨೯೩ ಪರ್ಶಿಯಾದ ಕುದುರೆಗಳು ೨೦೦ ಲಿವ್ರೆಸ್ ಟರ್ನಾಯಿಸ್ (Livres tournois)

೨. ೧೨೯೩ ಪರ್ಶಿಯಾ ಮತ್ತು ಅರೇಬಿಯಾ ೫೦೦ ಸಪ್ಪಿ ಅಥವಾ ೧೦೦ ಬೆಳ್ಳಿಯ ಮಾರ್ಕಗಳು

೩. ೧೨೯೩ ಅರೇಬಿಯ ೧೦೦ ಮಾರ್ಕ್‌ಗಳು

೪. ೧೩೧೦ ಅರೇಬಿಯ ೨೨೦ ಚಿನ್ನದ ದಿನ್ನಾರುಗಳು

೫. ೧೩೩೦ ಅರೇಬಿಯ ೨೨೦ ಚಿನ್ನದ ಕೆಂಪು ದಿನ್ನಾರುಗಳು

೬ ೧೩೪೯ " ೧೦೦ ರಿಂದ ೧೦೦೦ ಚಿನ್ನದ ತುಣಕುಗಳು

೭ ೧೫೦೪ " ೨೦೦, ೪೦೦, ೫೦೦, ೮೦೦ ಪರ್ದಾವೋಗಳು

೮. ೧೫೧೬ " ೫೦೦ ಕ್ರುಜೆಡೋಗಳು

೯. ೧೫೧೬ " ೬೦೦ ಕ್ರುಜೆಡೋಗಳು

೧೦. ೧೫೧೬ " ೪೦೦ "

೧೧. ೧೫೧೬ " ೩೦೦ "

೧೨. ೧೫೩೭ ೩೩೩೧/೨ ಪರ್ದಾವೋಗಳು

ಹೀಗೆ ೧೨೯೩ರಿಂದ ೧೫೩೭ರವರೆಗೆ ಕುದುರೆಗಳ ಬೆಲೆ ಮತ್ತು ಅವುಗಳ ಬೇಡಿಕೆಯ ಪರಿಮಾಣವನ್ನು ಗಮನಿಸಬಹುದಾಗಿದೆ. ಪೋರ್ಚುಗೀಸ್‌ನ ಅಲ್ಬುಕರ್ಕನು ವಿಜಯನಗರದೊಂದಿಗೆ ಮಾಡಿಕೊಂಡ ವಾರ್ಷಿಕ ಒಪ್ಪಂದಕ್ಕೆ ಬರೆದ ಪತ್ರದಲ್ಲಿ ರಾಯಕುದುರೆಗಳ ಪೂರೈಕೆಗಾಗಿ ಪ್ರತಿವರ್ಷ. ೩೦,೦೦೦ ಕ್ರುಜೆಡೋಗಳನ್ನು ಕೊಡುವುದಾದರೆ ಮತ್ತು ಕುದುರೆಗಳನ್ನು ತರಲು ಗೋವಾಕ್ಕೆ ತನ್ನದೇ ಆಳುಗಳನ್ನು ಕಳುಹಿಸುವುದಾದರೆ ರಾಯನಿಗೆ ತನ್ನೆಲ್ಲ ಕುದುರೆಗಳನ್ನು ಕೊಳ್ಳುವ ಇಲ್ಲವೇ ಬಿಡುವ ಹಕ್ಕನ್ನು ನೀಡಲಾಗುವುದು ಎಂದು ಬರೆದಿದ್ದನು. ಇದೇ ರೀತಿ ಬಿಜಾಪುರದ ಸುಲ್ತಾನನಿಗೂ ಪತ್ರ ಬರೆದಿದ್ದನೆಂದು ಹೇಳಲಾಗಿದೆ. ಆದರೆ ಇದು ಇತ್ಯರ್ಥವಾಗಲಿಲ್ಲವೆಂದು ಸಿವೆಲ್ ಅಭಿಪ್ರಾಯಪಡುತ್ತಾರೆ.’’[೬೬] ಶಾಸನಗಳಲ್ಲಿ ಒಂದನೇ ಬುಕ್ಕರಾಯನನ್ನು ‘ಹೊನ್ನ ಕೊಟ್ಟು ಕುದುರೆಯ ಕೊಂಬ ಮಾಂಡಲಿಕರ ಗಂಡ’ ಎಂಬ

ಬಿರುದಿನಿಂದ ಕರೆದಿವೆ. ಇದರಿಂದ ಅಂದು ಕುದುರೆಗಳಿಗೆ ವಿಶೇಷ ಬೇಡಿಕೆಯಿದ್ದು ಅರಸರು, ಮಾಂಡಲೀಕರು ಹೊರರಾಜ್ಯಗಳಿಂದ ಕೊಂಡು ಕೊಳ್ಳುತ್ತಿದ್ದುದು ಈ ಬಿರುದಿನಿಂದ ಸ್ಪಷ್ಟವಾಗುತ್ತದೆ. ಇಂತಹ ಮಾಂಡಲಿಕರನ್ನು ಬಗ್ಗುಬಡಿದು ಅಧಿಪತಿಯಾಗಿದ್ದು ಇದರಿಂದ ತಿಳಿಯುತ್ತದೆ.

ಯುದ್ಧಾಶ್ವಗಳ ಸಿದ್ಧತೆ : ಯುದ್ಧಕ್ಕೆ ಹೋಗುವ ಸಂದರ್ಭದಲ್ಲಿ ಕುದುರೆಗಳನ್ನು ಯಾವ ರೀತಿಯಲ್ಲಿ ಸಿದ್ಧಪಡಿಸುತ್ತಿದ್ದರು ಎಂಬ ವಿಚಾರವನ್ನು ವಿದೇಶಿ ಪ್ರವಾಸಿಗರು ಹಾಗೂ ಸಾಹಿತ್ಯ ಕೃತಿಗಳಿಂದ ತಿಳಿದುಬರುತ್ತದೆ. ಗಂಗಾದೇವಿಯು ತನ್ನ ಮಧುರಾವಿಜಯಂನಲ್ಲಿ ಅಶ್ವದಳದ ವರ್ಣನೆಯನ್ನು ಹೀಗೆ ವಿವರಿಸಿದ್ದಾಳೆ.

"ಕಚ್ಚಿದ ಹಾವಂತೆ ಬಾಯಲಿರೆ ಕಡಿವಾಣ
ಚಿತ್ತಾರಗೊಂಡ ಪಕ್ಕರೆ ರೆಕ್ಕೆಯಂತೆ
ದೇಹರೂಪದಿ ಕೂಡ ಹೋಲಿಕೆಯ ತೋರಿತು
ದಿವ್ಯ ತುರಗವು ತಾನು ಗರುಡನಂತೆ"[೬೮]

ಎಂದು ತನ್ನ ಪತಿ ಕಂಪಣ್ಣನು ಕೈಗೊಂಡ ಮಧುರೆಯ ದಂಡಯಾತ್ರೆಯ ಅವಧಿಯಲ್ಲಿ ಸಿದ್ಧತೆಗೊಳಿಸಿದ ಕುದುರೆಯ ಚಿತ್ರಣ ಮೇಲಿನ ಸಾಲುಗಳಿಂದ ವಿಧಿತವಾಗುತ್ತದೆ. ಹಾಗೆಯೇ ರಾಮನಾಥ ಚರಿತದಲ್ಲಿ ಈ ಬಗೆಯ ವರ್ಣನೆಗಳು ಕಂಡು ಬರುತ್ತವೆ.

"ತೆಗೆದು ತೇಜಗಳ ಹಲ್ಲಣಿಸಿ ಹಕ್ಕರಿಕೆಯ
ಪುಗಿಸಿ ಸವಗ ಜೋಡುಗಳನು
ಬಿಗಿದು ಬಿರಿದನಿಕ್ಕಿ ಪೊರಮಟ್ಟರೊಸೆದು ಕಾ

ಳೆಗ ಕಾರಾಯ ರಾವುತರು" [೬೯] ಎಂದಿದ್ದಾನೆ ಮುಂದುವರೆದು ಇನ್ನೊಂದು ಪದ್ಯದಲ್ಲಿ ಚರ್ಚಿಸುತ್ತಾ.

"ಲೋಹವಕ್ಕರೆ ಝಲ್ಲಿ ಮೊಗರಂಭ ಮೊದಲ
ದಾಹವ ಸನ್ನಾಹವೆಸೆಯೆ
ಗಾವುಗದುಕನುಳಿದೇರಿದರ ಶ್ವಾ
ರೋಹಕರಾ ಸಮಯದಲಿ"[೭೦]

ಎಂಬ ಪದ್ಯಗಳಲ್ಲಿ ಕುದುರೆಗಳನ್ನು ಅಲಂಕರಿಸುತ್ತಿದ್ದ ಬಗೆ ಹಾಗೂ ಅವುಗಳ ಪರಿಕರಗಳನ್ನು ಕಾಣಬಹುದು. ಕುದುರೆಗಳಿಗೆ ಕಣ್ಣು, ಗೊರಸುಗಳನ್ನು ಬಿಟ್ಟು ಉಳಿದೆಲ್ಲ ಅಂಗಗಳಿಗೆ ಕವಚಗಳನ್ನು ತೊಡಿಸುತ್ತಿದ್ದರೆಂದು ತಿಳಿದು ಬರುತ್ತದೆ. ಕುದುರೆಗಳಿಗೆ ತೊಡಿಸುತ್ತಿದ್ದ ಇಂತಹ ಮುಖವಾಡಕ್ಕೆ 'ಮೊಗರಂಭ'ವೆಂದು ಕಾವ್ಯಗಳಲ್ಲಿ ಕರೆಯಲಾಗಿದೆ. ಪಾಯೇಸ್‌ನು ಕುದುರೆಗಳ ಮುಖಕ್ಕೆ ಸರ್ಪ

ಮುಂತಾದ ದೊಡ್ಡ ಪ್ರಾಣಿಗಳ ತಲೆಗಳಂಥ ಮುಖವಾಡಗಳನ್ನು ತೊಡಿಸಿದ್ದರು" ಎಂದು ಅವುಗಳಿಗೆ ತೊಡಿಸುತ್ತಿದ್ದ ಕವಚಗಳನ್ನು ಕುರಿತು ಹೇಳುತ್ತಾನೆ. ಇದಕ್ಕೆ ಪೂರಕವಾಗಿ ನ್ಯೂನಿಜ್ ಕುದುರೆಗಳಿಗೆ ವಸ್ತ್ರಗಳನ್ನು ಹೊದಿಸಿದ್ದರೆಂಬುದನ್ನು ತಿಳಿಸುತ್ತಾನೆ.

ಯುದ್ಧದಲ್ಲಿ ಕುದುರೆಗಳಿಗೆ ಕವಚಗಳನ್ನು ತೊಡಿಸುತ್ತಿದ್ದರು. ಹೀಗೆ ಕವಚಗಳನ್ನು ತೊಡಿಸಿದಾಗ ಅವುಗಳ ಕಣ್ಣು ಮತ್ತು ಗೊರಸುಗಳು ಮಾತ್ರ ಕಾಣಿಸಿಕೊಳ್ಳುತ್ತಿದ್ದುವು ಎಂಬ ಪಂಪನ ಉಕ್ತಿಯಲ್ಲಿ ಅಷ್ಟೇನೂ ಉತ್ಪ್ರೇಕ್ಷೆಯಿಲ್ಲ. ಇಂತಹ ಕುದುರೆಗಳ ಚಿತ್ರಗಳನ್ನು ಶಾಸನಗಳಲ್ಲಿ ಕಾಣಬಹುದು. ಬೇಗೂರಿನ ವೀರಗಲ್ಲಿನಲ್ಲಿರುವ ಕುದುರೆಗಳ ಮುಖಗಳಿಗೆ ಒಂದು ರೀತಿಯ ಕವಚವಿರುವಂತಿದೆ. ಒಂದೊಂದು ಕುದುರೆಗೂ ಜೀನು ಹಾಕಿದೆ. ಈ ಜೀನು ಒಂದು ರೀತಿಯಲ್ಲಿ ದೇಹಕ್ಕೆ ಕವಚವಿದ್ದಂತೆ. ಮುಂಭಾಗದಲ್ಲಿ ಕೊರಳಸುತ್ತಲೂ, ಹಿಂಭಾಗದಲ್ಲಿ ಬಾಲದ ಸುತ್ತಲೂ ಗಂಟೆಗಳ ಸರವನ್ನು ಹಾಕಲಾಗಿದೆ. ಕಡಿವಾಣವನ್ನು ಎಡಗೈಯಲ್ಲಿ ಹಿಡಿದು, ಬಲಗೈಯಲ್ಲಿ ಖಡ್ಗವನ್ನು ಹಿಡಿದು ಸವಾರನು ಮೇಲೆ ಕುಳಿತಿದ್ದಾನೆ. ಕುದುರೆಗಳ ಗೊರಸುಗಳಿಗೆ ಲಾಳಗಳನ್ನು ಕಟ್ಟಿಸುತ್ತಿದ್ದರು. ಅಶ್ವಯುದ್ಧದ ಅನೇಕ ವಿನ್ಯಾಸಗಳನ್ನು ಹೇಳುವ ಪಾರಿಭಾಷಿಕ ಪದಗಳನ್ನು ಪಂಪನು ಬಳಸುತ್ತಾನೆ. ಅವುಗಳಿಗೆ ಅರ್ಥವನ್ನು ಹೇಳುವದು ಕಷ್ಟ. ಕುದುರೆಯೊಡನೆ ಹೆಣೆದು ಹೋರಾಡಿ ಸತ್ತ ವೀರನ ವಿಷಯ ಶಾಸನವೊಂದರಲ್ಲಿ ಬಂದಿದೆ. ಬಹುಶಃ ಶತ್ರುವಿನ ಕುದುರೆಯ ಕೊರಳಿಗೆ ಜೋತುಬಿದ್ದು ತನ್ನ ಕಾಲುಗಳನ್ನು ಅದರ ಎದೆಗೆ ಹೆಣೆದು ಹೋರಾಡಿರಬೇಕು. 'ಕುದುರೆಯ ಕಾಳಗ'ವೆಂಬುದು ಬಹುಶಃ ಅಶ್ವಸೇನೆಗಳ ಮಧ್ಯೆ ನಡೆದ ಯುದ್ಧವನ್ನು ಸೂಚಿಸುತ್ತದೆ. ಕಳ್ಳರು ದನಗಳನ್ನು ಕಳವು ಮಾಡಲು ಕುದುರೆಗಳನ್ನು ಬಳಸುತ್ತಿದ್ದರು. ಊರ ಹೊರಗೆ ಒಟ್ಟಾಗಿ ಮೇಯುತ್ತಿರುವ ದನಗಳನ್ನು ಕುದುರೆಯ ಮೇಲೇರಿ ಬಂದು ವೇಗವಾಗಿ ಓಡಿಸಿಕೊಂಡು ಹೋಗುವುದು ಸುಲಭ. ಅವರನ್ನು ಅಟ್ಟಿಕೊಂಡು ಹೋಗಿ ದನಗಳನ್ನು ಹಿಂದಿರುಗಿಸಲೂ ಕುದುರೆಗಳನ್ನು ಬಳಸುತ್ತಿದ್ದರು. ಆನೆಯ ಕುಂಭಸ್ಥಳಕ್ಕೆ ತನ್ನ ಕುದುರೆಯನ್ನು ಹಾಯಿಸಿದ ವೀರನೊಬ್ಬನ ಅದ್ಭುತ ಸಾಹಸವನ್ನು ಶಾಸನವೊಂದು ಹೊಗಳುತ್ತದೆ.

ಭೀಮಯ್ಯನ ಮಗಂ ಪೆರ್ಗ್ಗಡೆ ಬೆಣ್ಣಯ್ಯಂ ಗಂಗರಾನೆಯ ಕುಂಭಸ್ಥಳಕ್ಕೆ ಕುದುರೆಯಂ ಪಾಯಿಸತ್ತೊಡೆ....

ಯುದ್ಧ ಸನ್ನದ್ಧವಾದ ಕುದುರೆಗೆ ಜೀನುಗಳನ್ನು ತೊಡಿಸುತ್ತಿದ್ದುದು ಮಾತ್ರವಲ್ಲದೇ ಅದರ ಮೇಲೆ ಸವಾರನ ಉಪಯೋಗಕ್ಕಾಗಿ ಬಿಲ್ಲು, ಪರಶು, ಸುಲಿಗೆ, ತೀರಿಕೆ, ಭಿಂಡಿವಾಳ, ಕರವಾಳ ಕರ್ಕಡೆ, ಚಕ್ರ ಮುಂತಾದ ಆಯುಧಗಳನ್ನು ಸಿದ್ಧಗೊಳಿಸುತ್ತಿದ್ದರು"

ಬಾರ್ಬೊಸಾ ಕುದುರೆಗಳ ಕವಚಗಳೊಂದಿಗೆ ಆಯುಧಗಳನ್ನು ಉಲ್ಲೇಖಿಸುತ್ತಾನೆ. "ಕುದುರೆಗಳ ತಲೆಗೆ ಉಕ್ಕಿನ ಟೋಪಿ ಹಾಕಿ ಜೀನು ಬಿಗಿದು ಎರಡಾಳುಗಳಿಗಾಗುವಷ್ಟು ಗಂಡು ಗೊಡಲಿ, ಎರಡು

ಕತ್ತಿ, ಲೋಹದ ಮುಳ್ಳುಗಧೆ ಎರಡು ಮೂರು ತುರ್ಕಿಬಿಲ್ಲುಗಳು, ಬಹು ಉದ್ದವಾದ ಬಾಣಗಳು ಇವುಗಳಿಂದ ಸುಸಜ್ಜಿತರಾಗಿ ಯುದ್ಧಕ್ಕೆ ಹೊರಡುತ್ತಾರೆ ಎಂದು ಬಹುಮನಿ ಯುದ್ಧಾಶ್ವಗಳ ನೈಜಚಿತ್ರಣ ನೀಡುತ್ತಾನೆ. ಕುದುರೆಗಳಿಗೆ ತೊಡಿಸಲಾಗುತ್ತಿದ್ದ ಯುದ್ಧ ಕವಚ ಕೆಲವು ವೀರಗಲ್ಲುಗಳಲ್ಲೂ ಕಂಡು ಬರುತ್ತದೆ. ಬೇಗೂರು, ಚಂದ್ರಶೇಖರಪುರ (ಕೂಡ್ಲಿಗಿ ತಾ) ಮತ್ತು ಕೊಂಚಗೆರೆ (ಸಿರಗುಪ್ಪ ತಾ) ಹುಲಿಕಲ್ಲು, ಬಸವನಕಲ್ಲು (ಶಿವಮೊಗ್ಗ ಜಿಲ್ಲೆ)ಗಳಲ್ಲಿರುವ ವೀರಗಲ್ಲುಗಳಲ್ಲಿ ಕುದುರೆಯ ಮೈತುಂಬಾ ಕವಚವನ್ನು ಕಡೆಯಲಾಗಿದೆ. ಕಾಲು ಮತ್ತು ಮುಖಗಳನ್ನು ಬಿಟ್ಟು ಉಳಿದಭಾಗ ಪೂರ್ಣವಾಗಿ ಕವಚವು ಆವರಿಸಿದೆ. ಇದರಿಂದ ಕುದುರೆಗಳಿಗೆ ಮೊಗರಂಭದಂತಹ ಮುಖವಾಡವಲ್ಲದೆ ಜೀನು ಮತ್ತು ಮೈಕವಚಗಳನ್ನು ತೊಡಿಸುತ್ತಿದ್ದರೆಂಬುದು ಗೊತ್ತಾಗುತ್ತದೆ.”[೭೧] ಆದರೆ ವಿಜಯನಗರ ಕಾಲದಲ್ಲಿ ಬಳಕೆಗೊಂಡ ಅಗಾಧ ಸಂಖ್ಯೆಯ ಎಲ್ಲಾ ಕುದುರೆಗಳಿಗೂ ಈ ಬಗೆಯ ಕವಚಗಳನ್ನು ತೊಡಿಸಿದ್ದರೆಂದು ಹೇಳುವುದು ಕಷ್ಟ.

ರಾಹುತರು : ಕುದುರೆಯ ಸವಾರಿಯಲ್ಲಿ ಪರಿಣಿತಿ ಹಾಗೂ ಸವಾರಿಯೊಂದಿಗೆ ಆಯುಧಗಳನ್ನು ಪ್ರಯೋಗಿಸುವ ನಿಪುಣತೆ ಹೊಂದಿರುವ ಯೋಧರನ್ನು ರಾವುತರೆನ್ನುವರು. ಕುದುರೆಯ ಮೇಲೆ ಕುಳಿತು ಹೋರಾಡುತ್ತಿದ್ದುದರಿಂದ ಇವರನ್ನು ಮೇಲಾಳುಗಳೆಂದೂ ಕರೆಯಲಾಗುತ್ತಿತ್ತು. ರಾವುತರು ಸಾಮಾನ್ಯವಾಗಿ ತಮ್ಮ ರಕ್ಷಣೆಗೆ ಎದೆಕವಚ, ಶಿರಸ್ತ್ರಾಣಗಳನ್ನು ಧರಿಸಿ, ಕೈಗಳಲ್ಲಿ ಭರ್ಜಿ, ಖಡ್ಗ ಮತ್ತು ಕಠಾರಿಗಳನ್ನು ಹಿಡಿದಿರುತ್ತಿದ್ದರು. ವಿಜಯನಗರ ಕಾಲದ ರಾವುತರನ್ನು ಕುರಿತು ಪಾಯೇಸ್‌ನು ನೀಡುವ ವರ್ಣನೆ ಸ್ವಲ್ಪ ಉತ್ಪ್ರೇಕ್ಷೆಯನ್ನೇ ಒಳಗೊಂಡಿದೆ. ಅವನು “ರಾವುತರು ಚರ್ಮದ ಹಾಗೂ ಕಿಂಕಾಪು ಮತ್ತು ಮಕಮಲ್ಲಿನಿಂದ ತಯಾರಾದ ಲೂದಿಗಳನ್ನು ತೊಟ್ಟಿದ್ದರು. ತಲೆಗೆ ಕುತ್ತಿಗೆಯವರೆಗೂ ಬರುವ ಶಿರಸ್ತ್ರಾಣಗಳನ್ನು ಹಾಕಿಕೊಂಡಿದ್ದರು. ಮುಖವನ್ನು ಮುಚ್ಚಿಕೊಳ್ಳುವುದಕ್ಕೆ ಬೇಕಾದ ರಕ್ಷಣೋಪಾಯ ಸಲಕರಣೆಯನ್ನು ಒದಗಿಸಿಕೊಂಡಿದ್ದರು. ಕುತ್ತಿಗೆಯಲ್ಲಿ ಚಿನ್ನದ ಗಿಲೀಟಿನ ಇಲ್ಲವೆ ಕನ್ನಡಿಯಂತೆ ಪ್ರಕಾಶಮಾನವಾದ ಉಕ್ಕಿನ ಕೊರಳಾಪುವನ್ನು ಧರಿಸಿದ್ದರು. ನಡುವಿಗೆ ಗಂಡುಗೊಡಲಿಯನ್ನು ಸಿಕ್ಕಿಸಿ, ಕೈಯಲ್ಲಿ ಭಲ್ಲೆ-ಭರ್ಚಿಗಳನ್ನು ಹಿಡಿದಿದ್ದರು ಎಂದಿದ್ದಾನೆ.”[೭೨]

ಹಾಗೆಯೇ ಬಾರ್ಬೋಸಾ ಕೂಡ ಇದೇ ಬಗೆಯಲ್ಲಿ ರಾವುತರನ್ನು ವಣಿಸುತ್ತಾನೆ ರಾವುತರ ಕೈಯಲ್ಲಿ ಒಂದು ಗುರಾಣಿ ಮತ್ತು ಎರಡು ಕತ್ತಿಗಳು ಇರುತ್ತವೆ. ಅಲ್ಲದೆ ಒಂದು ಈಟಿ ಮತ್ತು ತುರ್ಕಿಬಿಲ್ಲು ಬಾಣಗಳಿರುತ್ತವೆ. ಕೆಲವರು ಉಕ್ಕಿನ ಕವಚ ಧರಿಸಿರುತ್ತಾರೆ. ಮತ್ತೆ ಕೆಲವರು ಹತ್ತಿಯ ಗಿಲೀಟು ಮಾಡಿದ ಚರ್ಮದ ಕವಚಗಳನ್ನು ಧರಿಸಿರುತ್ತಾರೆ. ಕುದುರೆಗಳಿಗೆ ರಕ್ಷಾ ಬಟ್ಟೆಯನ್ನೂ, ಉಕ್ಕಿನ ಕವಚಗಳನ್ನು ಹಾಕಿರುತ್ತಾರೆ. ಕಾರಣ ಈ ಜನ ಚೆನ್ನಾಗಿ ಯುದ್ಧ ಮಾಡಬಲ್ಲರು. ಬಾರ್ಬೋಸಾ ಮತ್ತು ಪಾಯೋಸ್‌ರು ನೀಡುವ ವರ್ಣನೆಗಳಲ್ಲಿ ಯಾವುದೇ ರೀತಿಯ ಸತ್ಯಾಂಶವಿಲ್ಲ. ಇದು ಒಬ್ಬ ಸಾಮಾನ್ಯ ರಾವುತ ಧರಿಸಬೇಕಾದ ಅತ್ಯವಶ್ಯಕ ಪರಿಕರಗಳೆಂಬುದರಲ್ಲಿ ಸಂಶಯವಿಲ್ಲ.

ವಿಜಯನಗರದ ಸೈನ್ಯದಲ್ಲಿದ್ದ ಕೆಲವು ಪ್ರಮುಖ ರಾವುತರ ಹೆಸರುಗಳನ್ನು ಶಾಸನಗಳು ಉಲ್ಲೇಖಿಸಿವೆ. ಈ ರಾವುತರು ಕೆಲವು ಭೂಮಿಗಳನ್ನು ದಾನ ನೀಡಿದ ವಿವರಗಳೂ ಇವೆ. ವಿಜಯನಗರ ಸೇನೆಯಲ್ಲಿ ಸೇವೆ ಸಲ್ಲಿಸುತ್ತಿದ್ದ ರಾಮಿಯಪ್ಪ ರಾವುತನು ಭೂಮಿಯನ್ನೂ ದಾನ ಮಾಡಿದನೆಂದು ಹೇಳಿದೆ. ಇದೇ ರಾಮಪ್ಪ ರಾವುತನನ್ನು ನರಸಣ ರಾವುತರ ಮಗನೆಂದು ಇನ್ನೊಂದು ಶಾಸನದಲ್ಲಿ ಹೇಳಲಾಗಿದೆ. ಕೃಷ್ಣದೇವರಾಯನ ಅಶ್ವದಳದಲ್ಲಿ ಮುರಾರಿ ರಾವುತ ಮತ್ತು ವಿಸಣರಾವುತರು ಸೇವೆ ಸಲ್ಲಿಸುತ್ತಿದ್ದುದು ಚಟ್ನಹಳ್ಳಿ ಶಾಸನದಿಂದ ತಿಳಿದು ಬರುತ್ತದೆ.

ಹಾಗೆಯೇ ಈ ರಾವುತರಿಗೆ ನಾಯಕತನವನ್ನು ನೀಡಿದುದರಿಂದ ಇವರು ಸೈನ್ಯದಲ್ಲಿ ಮಹತ್ವ ಪಾತ್ರವಹಿಸಿದ್ದರೆಂದು ಹೇಳಬಹುದು. ಕೃಷ್ಣದೇವರಾಯನ ಕಾಲದ ಇನ್ನೊಂದು ಶಾಸನದಲ್ಲಿ ದುಗ್ಗಾವಿಯ ಮಲಿರಾಮಹ ರಾವುತ ಮತ್ತು ಅವನ ಮಗ ಹರಿದಾಸ ರಾವುತರಿದ್ದುದನ್ನು ಹೇಳುತ್ತದೆ. ಹೀಗೆ ಪ್ರಮುಖ ರಾವುತರ ಉಲ್ಲೇಖವನ್ನು ಶಾಸನಗಳಲ್ಲಿ ಕಾಣಬಹುದು. ಇದರ ಜೊತೆಗೆ ಪ್ರಾದೇಶಿಕತೆಯನ್ನು ಹೊಂದಿದ ರಾವುತ ಪಡೆಗಳಿದ್ದುದೂ ತಿಳಿದು ಬರುತ್ತದೆ. ರಾಯವಾಚಕಮುವಿನಲ್ಲಿ ಮೊರಸರಾವುತರು, ಕಬ್ಬಿಲರಾವುತರು, ತುಳುವರಾವುತರು ವಿಜಯನಗರ ಸೇನೆಯಲ್ಲಿದ್ದರೆಂದು ಹೇಳಿದೆ. ಇದು ಶ್ರೀ ಕೃಷ್ಣದೇವರಾಯನ ದಿನಚರಿಯಲ್ಲಿ ಉಲ್ಲೇಖಿಗೊಂಡಿದೆ. ರಾಮನಾಥ ಚರಿತವು ಕಂಪಿಲರಾಯನ ಸೈನ್ಯದಲ್ಲಿದ್ದ ರಾವುತರನ್ನು ಕುರಿತು ಹೀಗೆ ಹೇಳಿದೆ.

> "ಲಾಳ ರಾವುತರಾರಿಯ ರಾವುತರು ಕೈ
> ಮೇಳದ ಕನ್ನೋಜಿಗಳು
> ಗೌಳರಾವುತರು ಗುರ್ಜರ ರಾವುತರು ಬಂದ
> ರಾಳುತನದ ಮತ್ಸರದೊಳು"[೨೩]

ಎಂದು ಸ್ಪಷ್ಟಪಡಿಸಿದ್ದರಿಂದ ವಿವಿಧ ಪ್ರದೇಶಗಳಿಂದ ಬಂದ ರಾವುತರು ಸೈನ್ಯದಲ್ಲಿರುತ್ತಿದ್ದರೆಂದು ತಿಳಿದುಬರುತ್ತದೆ.

ಅಡಿಟಿಪ್ಪಣಿಗಳು

೧. ಹೊಸ ಕುಮಾರ ರಾಮನ ಸಾಂಗತ್ಯ, (ಸಂ) ಎಂ.ಎಂ.ಕಲಬುರ್ಗಿ ಮತ್ತು ವೀರಣ್ಣ ರಾಜೂರ, (ಪ್ರಸ್ತಾವನೆ) ಪುಟ ೭

೨. ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟು, ಸಂಪುಟ -೧ ಪುಟ ೯೨೬

೩. ಹೊಸ ಕುಮಾರರಾಮನ ಸಾಂಗತ್ಯ (ಸಂ) ಎಂ.ಎಂ.ಕಲಬುರ್ಗಿ ಮತ್ತು ವೀರಣ್ಣ ರಾಜೂರ, ಪುಟ ೧೮, ೧೯

೪. ಅದೇ, ಪುಟ ೬೩

೫. ಅದೇ, ಪುಟ ೧೯, ೨೦

೬. ಅದೇ, ಪುಟ ೯೬

೭. ಅದೇ, ಪುಟ ೯೯

೮. ಕೊಮಾರ ರಾಮಯ್ಯನ ಚರಿತ್ರೆ, (ಸಂ) ಡಾ. ಎಂ.ಎಂ.ಕಲಬುರ್ಗಿ, ಪುಟ ೮೩

೯. ಕೆಳದಿ ಬಸವರಾಜ ಸಂಕಲಿಸಿದ ಶಿವತತ್ತ್ವರತ್ನಾಕರ (ಸಂ) ಪ್ರೊ.ಮಲ್ಲೇಪುರಂ. ಜಿ.ವೆಂಕಟೇಶ, ಸಂಪುಟ-೨ ಪುಟ ೭೬

೧೦. ಕುಮಾರರಾಮ ಸಂಪ್ರದಾಯದ ಅಧ್ಯಯನ, ಡಾ.ಎಸ್.ಎಂ.ಸಾವಿತ್ರಿ, ಪುಟ ೧೬, ೨೦, ೨೧

೧೧. ಅದೇ, ಪುಟ ೨೧, ೨೨, ೨೩

೧೨. ಅದೇ, ಪುಟ ೫೬

೧೩. ಅದೇ, ಪುಟ ೬೪

೧೪. ಅಭಿನವಚಂದ್ರ ವಿರಚಿತ ಅಶ್ವಶಾಸ್ತ್ರ ಸಂ.ಜಿ.ಜಿ.ಮಂಜುನಾಥ್ ಪುಟ

೧೫. ಕುಮಾರ ರಾಮ ಸಂಪ್ರದಾಯ ಅಧ್ಯಯನ ಡಾ.ಎಸ್.ಎಂ.ಸಾವಿತ್ರಿ, ಪುಟ ೫೧

೧೬. ಕೆಳದಿ ಬಸವರಾಜ ಸಂಕಲಿಸಿದ ಶಿವತತ್ತ್ವ ರತ್ನಾಕರ (ಸಂ) ಪ್ರೊ.ಮಲ್ಲೇಪುರಂ ಜಿ.ವೆಂಕಟೇಶ, ಸಂಪುಟ-೨ ಪುಟ ೭೪೮

೧೭. ಮಾಹಿತಿ ವಿವರಣೆ ಕುದುರೆ ಬಾಗಿಲ ಚಿತ್ರ, ಪ್ರೊ.ಪಿ.ಎಸ್.ಫೈಲ್, ವ್ಹಿ.ಸಿ.ಬಿ.ಕಾಲೇಜು, ಲಿಂಗಸ್ಗೂರು

೧. ಡಾ.ಚಂದ್ರಕಲಾಬಿದರಿ, ಶ್ರೀ ಕೊತ್ತಲ ಬಸವೇಶ್ವರ ಮಹಾವಿದ್ಯಾಲಯ ಸೇಡಂ

೨. ಡಾ.ಅಗ್ನಿಹೋತ್ರಿ, ಅದೇ

೩. ದಾಮೋದರ ಆಚಾರ, ಶಿಕ್ಷಕರು, ಜೂರಟಗಿ ತಾ. ಗಂಗಾವತಿ

೧೮. ಕರ್ನಾಟಕ ಜನಪದ ಕಲೆಗಳ ಕೋಶ, (ಸಂ) ಡಾ.ಹಿ.ಚಿ.ಬೋರಲಿಂಗಯ್ಯ ಪ್ರಸಾರಾಂಗ, ಪುಟ ೨೨೭

೧೯. ಅದೇ, ಪುಟ ೨೨೮

೨೦. ಅದೇ, ಪುಟ ೧೭೩

೨೧. ಅದೇ, ಪುಟ ೧೭೪

೨೨. ಮಾಹಿತಿ: ಶ್ರೀ ಮುರಿಗೆಪ್ಪ, ಬೀರಪ್ಪ, ಊಗಾರ ಸಾ. ಮುರಗುಂಡಿ, ತಾ. ಅಥಣಿ, ಜಿ. ಬೆಳಗಾವಿ

೧. ಕುಮಾರ ಅಥಣಿ ಛಾಯಾಚಿತ್ರಗಾರರು.

೨೩. ಕನ್ನಡ ಶಾಸನಶಿಲ್ಪ ಡಾ.ಡಿ.ವಿ.ಪರಮಶಿವಮೂರ್ತಿ, ಪುಟ ೭೯

೨೪. ಅದೇ, ಪುಟ ೭೯

೨೫. ಅದೇ, ಪುಟ ೮೩

೨೬. ಅದೇ, ಪುಟ ೧೦೯

೨೭. ಅದೇ, ಪುಟ ೧೩೯, ೧೪೦

೨೮. ಅದೇ, ಪುಟ ೧೫೩

೨೯. ಅದೇ, ಪುಟ ೧೫೪

೩೦. ಅದೇ, ಪುಟ ೧೭೬

೩೧. ಅದೇ, ಪುಟ ೧೯೬

೩೨. ಅದೇ, ಪುಟ ೧೯೭

೩೩. ಅದೇ, ಪುಟ ೧೯೯

೩೪. ಅದೇ, ಪುಟ ೨೦೨

೩೫. ಅದೇ, ಪುಟ ೨೦೩

೩೬. ಅದೇ, ಪುಟ ೨೦೫

೩೭. ಅದೇ, ಪುಟ ೨೦೪

೩೮. ಅದೇ, ಪುಟ ೨೦೬

೩೯. ಅದೇ, ಪುಟ ೨೦೬, ೨೦೭

೪೦. ಅದೇ, ಪುಟ ೨೦೭, ೦೮

೪೧. ಅದೇ, ಪುಟ ೨೧೦, ೨೧೧

೪೨. ಅದೇ, ಪುಟ ೨೧೫

೪೩. ಅದೇ, ಪುಟ ೨೩೩

೪೪. ಅದೇ, ಪುಟ ೨೧೯

೪೫. ಸಂಸ್ಥಾನಿಕರ ಐತಿಹಾಸಿಕ ಸಾಹಿತ್ಯ, (ಅಪ್ರಕಟಿತ) ಪಿಎಚ್.ಡಿ. ಪ್ರಬಂಧ ಕರ್ನಾಟಕ ವಿ.ವಿ. ಧಾರವಾಡ, ೨೦೦೭, ಶ್ರೀ ಕೆ.ಆರ್.ಮೆಳವೆಂಕಿ

೪೬. ಅಗ್ನಿ ದಿವ್ಯ ಡಾ.ಕೆ.ರವೀಂದ್ರನಾಥ, ಪುಟ ೧೧೩, ೨೦೦೩

೪೭. ಅದೇ, ಪುಟ ೧೧೫, ೧೧೬

೪೮. ಅದೇ, ಪುಟ ೧೨೩

೪೯. ಕುಮಾರರಾಮ ಮತ್ತು ಕೃಷ್ಣಗೊಲ್ಲರ ಮಹಾಕಾವ್ಯ (ಸಂ) ಡಾ.ಕೆ.ಎಂ.ಮೈತ್ರಿ, ಪುಟ ೬೨, ೬೩

೫೦. ಅದೇ, ಪುಟ ೬೩

೫೧. ಅದೇ, ಪುಟ ೬೪

೫೨. ಮೈಲಾರಲಿಂಗ, ಖಂಡೋಬಾ, ಒಂದು ಸಾಂಸ್ಕೃತಿಕ ಅಧ್ಯಯನ ಡಾ.ಎಂ.ಬಿ.ನೇಗಿನಾಳ, ಪುಟ ೧೮, ೧೯

೫೩. ಅದೇ, ಪುಟ ೪೩ ರಿಂದ ೪೫

೫೪. ಅದೇ, ಪುಟ ೧೦೪

೫೫. ಅದೇ, ಪುಟ ೧೦೫

೫೬. ಅದೇ, ಪುಟ ೧೩೨, ೧೩೩, ೧೩೫

೫೭. ಅದೇ, ಪುಟ ೧೫೭

೫೮. ಅದೇ, ಪುಟ ೨೩೫ರಿಂದ ೨೫೭

೫೯. ಸರ್ವಜ್ಞಸೋಮೇಶ್ವರ ವಿರಚಿತ ಮಾನಸೋಲ್ಲಾಸ, (ಕನ್ನಡ ಅನುವಾದ) ಡಾ.ಎಂ.ಎಂ.ಕಲಬುರ್ಗಿ, ಸಂ.೧ ಪುಟ ೨೮೪ರಿಂದ ೨೮೮

೬೦. ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಯುದ್ಧಕಲೆ ಡಾ.ಶ್ರೀಧರ ಎಚ್.ಜಿ. ಪುಟ ೫೨, ೫೩

೬೧. ಅದೇ, ಪುಟ ೫೩

೬೨. ಅದೇ, ಪುಟ ೫೪

೬೩. ಅದೇ, ಪುಟ ೫೫, ೫೬

೬೪. ವಿಜಯನಗರ ಕಾಲದ ಸೈನ್ಯ ವ್ಯವಸ್ಥೆ ಮತ್ತು ಯುದ್ಧನೀತಿ, ಡಾ.ಎಸ್.ವೈ.ಸೋಮಶೇಖರ. ಪುಟ ೪೨

೬೫. ಅದೇ, ಪುಟ ೪೨ರಿಂದ ೪೭

೬೬. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಡಾ.ಎಂ.ಚಿದಾನಂದಮೂರ್ತಿ, ಪುಟ ೨೯೪

೬೭. ವಿಜಯನಗರ ಕಾಲದ ಸೈನ್ಯ ವ್ಯವಸ್ಥೆ ಮತ್ತು ಯುದ್ಧ ನೀತಿ, ಡಾ.ಎಸ್.ವೈ.ಸೋಮಶೇಖರ ಪುಟ. ೪೭ ರಿಂದ ೫೦

೬೮. ಗಂಗಾದೇವಿ ಮಧುರಾವಿಜಯಂ, (ಸಂ) ಕುಶಾಲಪ್ಪಗೌಡ, ಪುಟ ೪ ಮತ್ತು ೨೫

೬೯. ರಾಮನಾಥಚರಿತೆ, (ಸಂ) ದೇವಿರಪ್ಪ ಎಚ್. ಸಂಪುಟ-೨ ಪುಟ ೧೧-೧೬

೭೦. ಅದೇ, ಪುಟ ೧೨-೮೮

೭೧. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಡಾ.ಎಂ.ಚಿದಾನಂದಮೂರ್ತಿ ಪುಟ ೨೯೫, ೨೯೬

೭೨. ವಿಜಯನಗರ ಕಾಲದ ಸೈನ್ಯವ್ಯವಸ್ಥೆ ಮತ್ತು ಯುದ್ಧ ನೀತಿ, ಡಾ.ಎಸ್.ವೈ.ಸೋಮಶೇಖರ, ಪುಟ ೫೨-೫೩

೭೩. ರಾಮನಾಥಚರಿತೆ, (ಸಂ) ದೇವಿರಪ್ಪ ಎಚ್. ಪುಟ ೧೯೦ (೧೧-೨೪ ಆ.ಪ).

ಅಧ್ಯಾಯ ೬

ಸಮಾರೋಪ

ಅಧ್ಯಾಯ ೬

ಸಮಾರೋಪ

ಕನ್ನಡ ಸಾಹಿತ್ಯದ ಕೃಷಿ ಸಾಕಷ್ಟು ಪ್ರಮಾಣದಲ್ಲಿ ಆಗಿದೆ; ಇನ್ನೂ ಆಗುತ್ತಲೇ ಇದೆ. ಆದರೆ ಸಾಹಿತ್ಯದ ಭಾಗವಾದ ಶಾಸ್ತ್ರಸಾಹಿತ್ಯದ ಕೃಷಿ ಕಡಿಮೆಯೆಂದೇ ಹೇಳಬೇಕಾಗುತ್ತದೆ. ಬಹುಶಃ ಸಾಮಾನ್ಯ ಜನರಿಗೆ ಅರ್ಥವಾಗದ ಹಿನ್ನಲೆಯಲ್ಲಿ ಶಾಸ್ತ್ರಪಂಡಿತರಿಗೆ ಮಾತ್ರ ಸೀಮಿತಗೊಂಡಿರಬೇಕು. ಇಂತಹ ಉಪೇಕ್ಷಿತ ಕ್ಷೇತ್ರವಾದ ಅಶ್ವಶಾಸ್ತ್ರಸಾಹಿತ್ಯ ಕುರಿತು ಅಧ್ಯಯನ ಮಾಡುವುದು ಸೂಕ್ತವೆನಿಸುತ್ತದೆ. ಆ ಹಿನ್ನಲೆಯಲ್ಲಿ ಮಹಾಪ್ರಬಂಧ ತನ್ನ ವಿವಿಧ ಆಕರ ಪರಿಕರಗಳ ಮೂಲಕ ಆರು ಅಧ್ಯಾಯಗಳಲ್ಲಿ ಹರವು ಪಡೆದುಕೊಂಡಿದೆ.

ಮುಖ್ಯವಾಗಿ ಕುದುರೆ ಸಾಹಿತ್ಯದಲ್ಲಿ ಗುರುತಿಸಿಕೊಂಡ ಎಲ್ಲ ಬಗೆಯ ಸನ್ನಿವೇಶಗಳು, ವಿದ್ವಾಂಸರ ಆಲೋಚನಾ ಕ್ರಮಗಳು, ಪ್ರಸ್ತುತತೆ, ವೈಧಾನಿಕತೆ, ಆಕರಗಳ ಸ್ವರೂಪ, ವ್ಯಾಪ್ತಿ., ಮಹತ್ವ ಮತ್ತು ಉಪಯೋಗಗಳ ಕುರಿತು ಚರ್ಚಿಸುವುದಾಗಿದೆ. ಅಧ್ಯಯನ ಶಾಸ್ತ್ರಮುಖಿಯಾಗಿ ಹೆಚ್ಚು ಬೆಳಕು ಚೆಲ್ಲುವುದರಿಂದ ಆ ಪರಂಪರೆಯಲ್ಲಿ ಬರುವ ಇನ್ನಿತರ ಶಾಸ್ತ್ರಗ್ರಂಥಗಳನ್ನು ಪರಿಚಯಿಸುವುದು. ಅವುಗಳ ವಿಷಯ ವೈವಿಧ್ಯತೆ ಕುರಿತು ಆಲೋಚಿಸುವುದು ಉತ್ತಮವೆಂದು ಭಾವಿಸಿ, ಲೌಕಿಕಶಾಸ್ತ್ರ ಸಾಹಿತ್ಯ ಬೆಳೆದು ಬಂದು ಹಿನ್ನಲೆ, ಅರ್ಥ, ಸ್ವರೂಪ, ಮಹತ್ವ ಕುರಿತು ವಿವರಿಸಲಾಗಿದೆ. ಹಾಗೆಯೇ ಶಾಸ್ತ್ರ ಸಾಹಿತ್ಯದ ಪ್ರಮುಖ ಕೃತಿಗಳಾದ ವೈದ್ಯಶಾಸ್ತ್ರ. ವಿಷವೈದ್ಯಶಾಸ್ತ್ರ, ಗೋವೈದ್ಯಶಾಸ್ತ್ರ, ಜ್ಯೋತಿಷ್ಯಶಾಸ್ತ್ರ, ಶಕುನಶಾಸ್ತ್ರ, ಸಾಮುದ್ರಿಕಶಾಸ್ತ್ರ, ಕಾಮಶಾಸ್ತ್ರ, ಸೂಪಶಾಸ್ತ್ರಗಳಂತಹ ಮುಂತಾದ ಶಾಸ್ತ್ರಕೃತಿಗಳನ್ನು ಅಧ್ಯಯನಕ್ಕೆ ಪೂರಕವಾಗಿ ಬಳಸಿಕೊಳ್ಳಲಾಗಿದೆ. ಜೊತೆಗೆ ಅವುಗಳ ಪರಿಚಯಾತ್ಮಕ ಅಧ್ಯಯನವನ್ನು ಮಾಡಲಾಗಿದೆ.

ಅಶ್ವಶಾಸ್ತ್ರಕೃತಿಗಳ ಪರಿಚಯಾತ್ಮಕ ಅಧ್ಯಾಯವೊಂದರ ಕುರಿತು ಸಮಗ್ರವಾಗಿ ಚರ್ಚಿಸಿ ವಿಷಯವನ್ನು ವಿಶ್ಲೇಷಣೆ ಮಾಡಿ ಸತ್ಯತೆಯನ್ನು ಕಂಡುಕೊಳ್ಳುವ ಪ್ರಯತ್ನ ಮಾಡಲಾಗಿದ್ದು, ಪ್ರಮುಖವಾಗಿ ವಿಷಯವನ್ನು ಪ್ರಧಾನ ಕೃತಿಗಳು, ಅನುಷಂಗಿಕ ಕೃತಿಗಳು, ಇತರೆ ಎಂದು ಮೂರು ರೀತಿಯಲ್ಲಿ ವಿಂಗಡಿಸಿಕೊಂಡು ಅಧ್ಯಯನ ಮಾಡಲಾಗಿದೆ. ಕವಿಯ ಕಾಲ, ಕೃತಿಯ ವಿಷಯವಸ್ತು, ವೈವಿಧ್ಯತೆ, ಆಶಯ ಮುಂತಾದ ವಿಷಯಗಳ ಕುರಿತು ಇಲ್ಲಿ ವಿವರಿಸಲಾಗಿದೆ.

ಕುದುರೆ ವೇದಗಳು, ಪುರಾಣಗಳು, ಉಪನಿಷತ್ತುಗಳಲ್ಲಿ ಉಲ್ಲೇಖಿಗೊಂಡ ಈ ಶಾಸ್ತ್ರದ ಕ್ರಮವನ್ನು ಅಧ್ಯಯನದ ಮೂಲಕ ಸ್ಪಷ್ಟಪಡಿಸಲಾಗಿದೆ. ಹಾಗೆಯೇ ಪಂಪ, ಪೊನ್ನ, ರನ್ನ, ಜನ್ನ, ಹರಿಹರ, ರಾಘವಾಂಕ, ಕುಮಾರವ್ಯಾಸ, ಷಡಕ್ಷರದೇವ ಮುಂತಾದ ಕವಿಗಳು ಹೇಳಿರುವ ಕುದುರೆಗಳ ಪ್ರಸ್ತಾವ ವಚನಕಾರರು, ಕೀರ್ತನಕಾರರು, ಸರ್ವಜ್ಞ, ಜನಪದಕಾರರು ಹೇಳಿರುವ ಪ್ರಮುಖ ವಿಚಾರಗಳನ್ನು ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ. ಸೈನ್ಯ ವ್ಯವಸ್ಥೆಯ ಮೂರನೇ ಅಂಗವಾದ ಕುದುರೆ ರಾಜಮಹಾರಾಜರಿಗೆ, ಚಕ್ರವರ್ತಿಗಳಿಗೆ ಯಾವ ರೀತಿಯಲ್ಲಿ ಸಹಕಾರಿಯಾಗಿದೆ ಎಂಬುದನ್ನು ಮಹಾಪ್ರಬಂಧದಲ್ಲಿ ಸ್ಪಷ್ಟಪಡಿಸಲಾಗಿದೆ. ಅಪ್ರಕಟಿತ ಕೃತಿಗಳಾದ ಅಶ್ವಶಾಸ್ತ್ರ (ಅನಾಮಿಕ) ರಾಮಚಂದ್ರಕವಿಯ ಅಶ್ವಶಾಸ್ತ್ರ, ಅಶ್ವಪರೀಕ್ಷೆ ಸಚಿತ್ರ, ಅಶ್ವವೈದ್ಯ, ಮುಂತಾದ ಕೃತಿಗಳ ವಸ್ತು, ಅವುಗಳ ಸ್ವರೂಪ, ಕುರಿತು ವಿವರಿಸಲಾಗಿದೆ. ರಾಮಚಂದ್ರಕವಿ ಹೇಳುವ ವಿಚಾರಗಳಿಗೂ ಮತ್ತು ಅಭಿನವಚಂದ್ರ ಹೇಳುವ ವಿಚಾರಗಳು ಹೆಚ್ಚು ಕಡಿಮೆ ಒಂದೇ ರೀತಿಯಾಗಿರುವುದನ್ನು ಅಧ್ಯಯನದ ಮೂಲಕ ಕಂಡುಕೊಳ್ಳಲಾಗಿದೆ. ಅಭಿನವಚಂದ್ರ ನೇರವಾಗಿ ಶಾಲಿಹೋತ್ರನನ್ನು ಅನುಸರಿಸಿದ್ದರೆ, ರಾಮಚಂದ್ರಕವಿ, ಇವರಿಬ್ಬರನ್ನು ಅನುಸರಿಸಿದ್ದಾನೆ. ಬಾಚರಸನ ಶಾಲಿಹೋತ್ರನ ಮತ ಕೃತಿಯಲ್ಲಿ ಹಯಚೇಷ್ಟೆ, ರೂಪ, ಸುಳಿ, ನಾಲಿಗೆ, ಗಂಧ, ಶುಭಾಅಶುಭಗಳ ಕುರಿತು ಸಂಕ್ಷಿಪ್ತವಾಗಿ ವೃತ್ತಗಳಲ್ಲಿ ಹೇಳಿದ್ದಾನೆ. ಅಭಿನವಚಂದ್ರನ ಅಶ್ವಶಾಸ್ತ್ರ ವೈಶಿಷ್ಟ್ಯತೆಯಿಂದ ಕೂಡಿದ್ದು, ಕುದುರೆಯ ಜನನದಿಂದ ಹಿಡಿದು ಮರಣದವರೆಗೆ ಜಾತಿ, ಪ್ರಕಾರಗಳು, ದೇಹರಚನೆ, ಅಂಗಾಂಗಗಳ ತಿಳುವಳಿಕೆ, ರೋಗಗಳು, ಚಿಕಿತ್ಸೆ, ಆರೈಕೆ, ಉಪಯೋಗ, ಮಹತ್ವ ಕುರಿತು ವಿವರಣಾತ್ಮಕವಾಗಿ ಮಾಹಿತಿಯನ್ನು ಕೊಡುವ ಪ್ರಮುಖ ಗ್ರಂಥವಾಗಿ ರೂಪಗೊಂಡಿರುವುದನ್ನು ಕಾಣುತ್ತೇವೆ. ಪದ್ಮಣಪಂಡಿತನ ಹಯಶಾಸ್ತ್ರಸಾರ ಕೃತಿಯು ಕುದುರೆಯ ಚಿಕಿತ್ಸಾ ಕ್ರಮದ ಬಗ್ಗೆ ಮಾಹಿತಿಯನ್ನು ನೀಡುತ್ತದೆ. ಆದರೆ ಈ ಕೃತಿಯ ಹಸ್ತಪ್ರತಿಯು ತುಂಬ ಜೀರ್ಣಾವಸ್ಥೆ ಹೊಂದಿರುವುದರಿಂದ ವಿಷಯದ ಸ್ಪಷ್ಟತೆ ಸಿಗುವುದಿಲ್ಲ. ಅಶ್ವಪರೀಕ್ಷೆ ಸಚಿತ್ರ ಕುದುರೆಯ ವೈದ್ಯೋಪಚಾರದ ಕುರಿತು ವಿವರವನ್ನು ಒದಗಿಸುತ್ತದೆ. ಕೃತಿ ಮೋಡಿ ಲಿಪಿಯಲ್ಲಿದ್ದು ಕುದುರೆಯ ಲಕ್ಷಣವನ್ನು ಚಿತ್ರಸಮೇತ ವಿವರಿಸುತ್ತದೆ. ಜಯದತ್ತನ ಅಶ್ವವೈದ್ಯಕ ಕೃತಿ ಸಂಸ್ಕೃತದಲ್ಲಿದ್ದು, ಒಟ್ಟು ೬೮ ರೋಗಗಳ ಕುರಿತು ಮಾಹಿತಿಯನ್ನು ನೀಡುತ್ತದೆ. ಮಹಾಭಾರತದಲ್ಲಿ ಬರುವ ನಕುಲ ಗವಾಶ್ವಶಾಸ್ತ್ರ, ಚಿಕಿತ್ಸಾ ಪ್ರಣೀತನಾಗಿರುವುದರಿಂದ ಕುದುರೆಯ ಚಿಕಿತ್ಸಾ ಕ್ರಮವನ್ನು ಕೃತಿಯಲ್ಲಿ ಉಲ್ಲೇಖಿಸಿರುವುದನ್ನು ಜಿ.ಜಿ.ಮಂಜುನಾಥನ್ ಅವರು ಸ್ಪಷ್ಟಪಡಿಸುತ್ತಾರೆ.

ಶಾಲಿಹೋತ್ರನ ಹಯಾಯುರ್ವೇದ ಕೃತಿಯು ಅಶ್ವಶಾಸ್ತ್ರ ಸಾಹಿತ್ಯದ ಪ್ರಥಮ ಕೃತಿ. ಏಕೆಂದರೆ ಇದುವರೆಗೂ ಅಧ್ಯಯನ ಮಾಡಿ ಕೃತಿರಚನೆ ಮಾಡಿದ ಎಲ್ಲ ಶಾಸ್ತ್ರಕಾರರು ಶಾಲಿಹೋತ್ರನನ್ನು ತಮ್ಮ ಗ್ರಂಥದಲ್ಲಿ ಸ್ಮರಿಸಿರುವುದರಿಂದ ಈ ಮಾತು ಕವಿಗೂ ಮತ್ತು ಕೃತಿಗೂ ಅನ್ವಯವಾಗುತ್ತದೆ. ಕೃತಿ

ಸಂಸ್ಕೃತದಲ್ಲಿದ್ದು ೮ ವಿಭಾಗಗಳಲ್ಲಿ ಕುದುರೆಯ ಒಂದೊಂದು ವಿಚಾರಗಳನ್ನು ಸಮಗ್ರವಾಗಿ ಪರಿಚಯಿಸುತ್ತದೆ. ಹಿರಿಯಣ್ಣ ಕವಿಯ ಹಯರತ್ನ ಶ್ರೇಣಿ ಕಿರುಗ್ರಂಥವಾಗಿದ್ದು, ಕುದುರೆಯ ಲಕ್ಷಣ, ವಂಶ, ಬಣ್ಣ, ಜಾತಿ, ಸುಳಿಗಳು, ಶುಭ-ಅಶುಭ, ವೈದ್ಯೋಪಚಾರದ ಕುರಿತು ಮಾಹಿತಿ ಒದಗಿಸುತ್ತದೆ. ಹಾಗೆಯೇ ಹೇಮಸೂರಿಯ ಅಶ್ವಶಾಸ್ತ್ರ, ಭೋಜನಶಾಲಿಹೋತ್ರ, ಅಶ್ವವೈದ್ಯ (ಸಚಿತ್ರ) ಗ್ರಂಥಗಳು ಕುದುರೆಯ ವೈದ್ಯೋಪಚಾರ, ರೋಗಗಳ ಬಗ್ಗೆ ಸ್ಪಷ್ಟತೆ ಒದಗಿಸುತ್ತವೆ. ಇವೆಲ್ಲವುಗಳ ಅಧ್ಯಯನ ಪ್ರಸ್ತುತ ಪ್ರಬಂಧದಲ್ಲಿ ಕಟ್ಟಿಕೊಡುವ ಪ್ರಯತ್ನ ಮಾಡಲಾಗಿದೆ. ಇನ್ನೂ ಅನುಷಂಗಿಕ ಕೃತಿಗಳಾದ ಚಾವುಂಡರಾಯನ ಲೋಕೋಪಕಾರ, ಕುದುರೆಗೆ ಬರುವ ರೋಗಗಳು ಮತ್ತು ಚಿಕಿತ್ಸೆ ಕುರಿತು ಮಾಹಿತಿಯನ್ನು ನೀಡುತ್ತದೆ. ಕೆಳದಿ ಬಸವರಾಜನ ಶಿವತತ್ತ್ವರತ್ನಾಕರ ಅಶ್ವಪ್ರಭೇದಗಳು, ಗತಿ, ಪ್ರೋಥ, ದಂತ, ಸುಳಿಗಳು, ಚೇಷ್ಟೆಗಳ ಕುರಿತು ಸಮಗ್ರವಾಗಿ ವಿವರಣೆ ಕೊಡುತ್ತದೆ. ಸೋದೆಯ ಸದಾಶಿವರಾಯನ ಸದಾಶಿವನೀತಿ ಕುದುರೆ ಲಕ್ಷಣ ಕುರಿತು ವಿವರಿಸಿದರೆ, ಸರ್ವಜ್ಞ ಸೋಮೇಶ್ವರನ ಮಾನಸೋಲ್ಲಾಸ ಅಶ್ವವೈದ್ಯ, ತುರುಗವ್ಯಾಹಾಲೀವಿನೋದದ ಬಗ್ಗೆ ವಿವರಿಸುತ್ತದೆ. ಸೌಗಂಧಿಕಾ ಪರಿಣಯ ಕೃತಿ ಅಶ್ವಶಾಸ್ತ್ರದ ಕುರಿತು ವಿವರಿಸುತ್ತದೆ. ಆದರೆ ಇಲ್ಲಿ ಬರುವ ಪ್ರಭೇದಗಳು, ಜಾತಿ, ಲಕ್ಷಣಗಳು ಕೆಳದಿ ಬಸವರಾಜನ ಶಿವತತ್ತ್ವರತ್ನಾಕರವನ್ನು ಹೋಲುವುದರಿಂದ ಬಹುಶಃ ಶ್ಲೋಕವನ್ನು ಕೈಬಿಟ್ಟು ಶಿವತತ್ತ್ವರತ್ನಾಕರ ಕೊಡುವ ವಿವರಣೆಯನ್ನು ಮುಖ್ಯ ಆಕರವಾಗಿ ಬಳಸಿಕೊಂಡಿರಬೇಕು. ಇನ್ನೂ ಕನ್ನಡ ಕಾವ್ಯ ಪುರಾಣಗಳಲ್ಲಿ ಅಶ್ವಶಾಸ್ತ್ರದ ಉಲ್ಲೇಖಗಳು ಅಲ್ಲಲ್ಲಿ ಅನುಷಂಗಿಕವಾಗಿ ದೊರೆಯುವುದರಿಂದ ಅವುಗಳನ್ನು ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ. ಹಾಗೆಯೇ ಶಾಸನಗಳು ಕುದುರೆಯ ಕುರಿತು ವಿವರಿಸುತ್ತವೆ. ಉದಾಹರಣೆಗೆ ನಂಜನಗೂಡು ತಾಲೂಕಿನ ೧೮೪೭ರ ಶಾಸನ ಕುದುರೆಯ ಆಭರಣದ ಬಗ್ಗೆ ವಿವರ ಪೂರ್ಣವಾದ ಮಾಹಿತಿಯನ್ನು ಒದಗಿಸುತ್ತದೆ. ಅದರಂತೆ ಕೃಷ್ಣದೇವರಾಯನ ದಿನಚರಿ ಕುದುರೆಯ ಆರೈಕೆ, ಉಪಚಾರ, ರಕ್ಷಣೆ, ಬಳಕೆ ಕುರಿತು ಮಾಹಿತಿಯನ್ನು ನೀಡುತ್ತದೆ. ಇವೆಲ್ಲವುಗಳ ಅಧ್ಯಯನ ಪ್ರಸ್ತುತ ಮಹಾಪ್ರಬಂಧದಲ್ಲಿ ಚರ್ಚಿಸಲಾಗಿದೆ.

ಈ ಮಹಾಪ್ರಬಂಧದ ಮುಖ್ಯಭಾಗವಾದ ಅಶ್ವಪ್ರಭೇದಗಳು, ಜನನ, ಗುಣಸ್ವಭಾವ, ಆರೈಕೆ, ಬಳಕೆ ವಿಧಿ -ವಿಧಾನ ಕುರಿತು ಸಮಗ್ರವಾಗಿ ಚರ್ಚಿಸಲಾಗಿದ್ದು, ಅಶ್ವಪ್ರಭೇದಗಳನ್ನು ಪ್ರಾಂತಭೇದ, ವರ್ಣಭೇದ ಎಂದು ಗುರುತಿಸಿ ವಿಶ್ಲೇಷಿಸಲಾಗಿದೆ. ಶಿವತತ್ತ್ವರತ್ನಾಕರ ಪ್ರಾಂತಭೇದಗಳಿಂದ ಕುದುರೆಗಳನ್ನು ಹೆಸರಿಸಿದರೆ, ಸರ್ವಜ್ಞ ಸೋಮೇಶ್ವರ, ಅಭಿನವಚಂದ್ರ ವರ್ಣಭೇದಗಳಿಂದ ಹೆಸರಿಸುತ್ತಾರೆ. ಹಾಗೆಯೇ ಅಶ್ವಗಳ ಜನನ, ವಂಶ ಗುಣಲಕ್ಷಣಗಳನ್ನು ಕುರಿತು ವಿವರಿಸಲಾಗಿದ್ದು, ಅವುಗಳ ಉತ್ಪತ್ತಿ ಕ್ಷೇತ್ರಗಳು ಪೌರಾಣಿಕ ಹಿನ್ನಲೆಯಲ್ಲಿ ಚರ್ಚಿತವಾಗಿವೆ. ಅಮೃತ, ಭಾಷ್ಪ, ವಹ್ನಿ, ದೇವತೆಗಳು, ಅಂಡಜ, ಗರ್ಭಾಶಯ, ಸಾಮವೇದ ಎಂದು ವಿಭಾಗಿಸಿಕೊಂಡು ವಿವರಿಸಲಾಗಿದೆ. ಚಾತುರ್ವರ್ಣಗಳಾದ ಬ್ರಾಹ್ಮಣ, ಕ್ಷತ್ರಿಯ,

ವೈಶ್ಯ, ಶೂದ್ರ, ಇವುಗಳ ಹಿನ್ನಲೆಯಲ್ಲಿ ಕುದುರೆಯನ್ನು ಗುರುತಿಸುವ ಪ್ರಯತ್ನ ಮಾಡಲಾಗಿದೆ. ಕುದುರೆಯ ಜಾತಿ ಲಕ್ಷಣವನ್ನು ಸುಳಿ, ಬಣ್ಣ, ಶಕ್ತಿ, ಕಾಂತಿ, ವಾಸನೆ, ನಡಿಗೆ, ಸ್ವರ, ಆಕೃತಿ ಇವುಗಳ ಸಹಾಯದಿಂದ ಉತ್ತಮ, ಮಧ್ಯಮ, ಕನಿಷ್ಠ ಎಂದು ಗುರುತಿಸಲಾಗಿದೆ. ಶಾರೀರಿಕ; ಪ್ರಕೃತಿಯಿಂದಲೂ ಕುದುರೆಯ ಲಕ್ಷಣವನ್ನು ವಿವರಿಸಿ, ರೇಖೆಯ ಆಧಾರದ ಮೂಲಕ ಕುದುರೆಯ ಆಯುಷ್ಯವನ್ನು, ಅವುಗಳ ದೇಹರಚನೆ, ವರ್ತನೆಗಳ ಹಿನ್ನಲೆಯಲ್ಲಿ ೩೨ ವರ್ಷ ಎಂದು ಸ್ಪಷ್ಟಪಡಿಸಲಾಗಿದೆ. ವಾತ, ಪಿತ್ತ, ಕಫಗಳಿಂದ ಬರುವ ಲಕ್ಷಣಗಳನ್ನು ಋತುಗಳ ಮೂಲಕ ವಿಶ್ಲೇಷಿಸಲಾಗಿದೆ. ಛಾಯೆಯನ್ನು ಪುಷ್ಪ, ಗಂಧ, ಕಿರಣ, ಧ್ವನಿ, ನಡೆಗಳ ಆಧಾರದ ಮೂಲಕ ಗುರುತಿಸಲಾಗಿದೆ. ಅಶ್ವಗತಿಯನ್ನು ಸಿಂಹ, ಹುಲಿ, ಆನೆ, ಹಂಸ, ನವಿಲು, ಶರಭ, ಎತ್ತು, ಶಾಖಾಮೃಗಗಳ ಮೂಲಕ ಗತಿಯನ್ನು ನೋಡಲಾಗಿದೆ. ಗಂಧ, ಸ್ವರ, ಪ್ರೋಥವನ್ನು ರೇಖೆಗಳ, ದಂತ ಬಿದ್ದು ಹುಟ್ಟಿದ ಹಲ್ಲುಗಳ ಪರೀಕ್ಷೆಯಿಂದ ನಿರ್ಧರಿಸಲಾಗಿದೆ. ಕುದುರೆಯ ಅಂಗರಚನೆ, ಸ್ವಭಾವವನ್ನು ಅಗ್ನಿಕರ್ಮ, ಶಸ್ತ್ರಕರ್ಮಗಳಿಗೆ ಉಪಯುಕ್ತವಾದ ಜ್ಞಾನವೆಂದು ತಿಳಿದು ೧೯೦ ಅವಯವಗಳನ್ನು ಹೆಸರಿಸಲಾಗಿದೆ. ಸುಳಿಗಳು ಮತ್ತು ಅಂಗಚೇಷ್ಟೆಯನ್ನು ಉರ, ಶಿರ, ಹಣೆ, ತಿಕದಲ್ಲಿ ಗುರುತಿಸಿ ಅವುಗಳ ಲಕ್ಷಣವನ್ನು ಕುರಿತು ಚರ್ಚಿಸಲಾಗಿದ್ದು, ಆವರ್ತ, ಶತಪಾದೀ, ಶುಕ್ತಿ, ಅವಲೀಢಕ, ಪಾದುಕಾ, ಪಾದುಕಾರ್ಧ, ಸಮೂಹ, ಮುಕುಲವೆಂದು ನೀರಿನ ಸುಳಿಯಂತೆ ಹೊಂದಿರುತ್ತವೆ. ಅವುಗಳ ಕುರಿತು ವಿಶ್ಲೇಷಿಸಲಾಗಿದೆ. ಬಹುಮುಖ್ಯವಾಗಿ ಶಾಸ್ತ್ರಕೃತಿಗಳ ಆಶಯ ಕುದುರೆಗೆ ಬರುವ ರೋಗಗಳು ಮತ್ತು ಚಿಕಿತ್ಸಾ ಕ್ರಮವನ್ನೇ ಹೆಚ್ಚು ಸ್ಪಷ್ಟಪಡಿಸುವುದನ್ನು ವಿವಿಧ ಶಾಸ್ತ್ರಕಾರರ ಕೃತಿಗಳ ಹಿನ್ನಲೆಯಲ್ಲಿ ಚರ್ಚಿಸಲಾಗಿದೆ.

ಗ್ರಂಥದಿಂದ ಗ್ರಂಥಕ್ಕೆ ರೋಗಗಳು ಮತ್ತು ಚಿಕಿತ್ಸಾ ವಿಧಾನ ಬದಲಾವಣೆಗೊಂಡಿರುವುದನ್ನು ಅಧ್ಯಯನದ ಮೂಲಕ ಸ್ಪಷ್ಟಪಡಿಸಲಾಗಿದೆ. ಕುದುರೆಯ ಪೋಷಣೆ, ರಕ್ಷಣೆ, ಆರೈಕೆಯ ಕುರಿತು ಚರ್ಚಿಸಲಾಗಿದ್ದು, ಜೊತೆಗೆ ಕುದುರೆಯ ಶುಭ-ಅಶುಭಗಳನ್ನು ಅವುಗಳ ಸುಳಿ, ಬಣ್ಣ, ಆಕಾರದಿಂದ ಗುರುತಿಸಲಾಗಿದೆ. ನೀರಾಜನ ವಿಧಿ ವಿಧಾನವನ್ನು ಕುಲ, ಬಲ, ತೇಜ, ಸ್ವರ, ಸತ್ವಗಳ ಹಿನ್ನೆಲೆಯಲ್ಲಿ ಗಮನಿಸಿ, ರಾಜರು ಯುದ್ಧದಲ್ಲಿ ವೈರಿಯನ್ನು ಗೆಲ್ಲಬಹುದೆಂದು ನಿರ್ಧರಿಸಿ ಮಾಡುವ ಕ್ರಮವನ್ನು ವಿಶ್ಲೇಷಿಸಲಾಗಿದೆ. ಅಶ್ವಶಿಕ್ಷಣವನ್ನು ಮುಖ್ಯವಾಗಿ ಯಾರು ಯಾರಿಗೆ ಕಲಿಸಬೇಕು ಎಂಬ ವಿಚಾರವನ್ನು ಹೇಳಲಾಗಿದೆ. ಜೊತೆಗೆ ಪಳಗಿಸುವ, ನಿಯಂತ್ರಣದಲ್ಲಿಟ್ಟುಕೊಳ್ಳುವ ಕ್ರಮಗಳನ್ನು ಕುರಿತು ವಿವರಿಸಿದ್ದು, ಹಾಗೆಯೇ ಕುದುರೆಯ ತಳಿ ಅಭಿವೃದ್ಧಿಯ ಕುರಿತು ವಿವರಿಸಲಾಗಿದೆ. ಅಯೋಗ್ಯ ಕುದುರೆ ಲಕ್ಷಣವನ್ನು ಸಹ ಹೇಳಲಾಗಿದೆ. ಈ ಎಲ್ಲ ವಿಷಯಗಳು ಪ್ರಸ್ತುತ ಅಧ್ಯಾಯದಲ್ಲಿ ಅಡಕಗೊಂಡಿವೆ.

ಕರ್ನಾಟಕ ಅಶ್ವ ಸಂಸ್ಕೃತಿ ಎಂಬ ಅಧ್ಯಾಯದಲ್ಲಿ ಅಶ್ವಜಾತಿ ಮತ್ತು ಅಶ್ವಾಚರಣೆ ಎಂದು ಎರಡು ಭಾಗಗಳಲ್ಲಿ ಗುರುತಿಸುವ ಪ್ರಯತ್ನ ಮಾಡಲಾಗಿದೆ. ಬೊಲ್ಲ ಕುದುರೆಯ ಮಹತ್ವ ಅದರ ಶಕ್ತಿ, ಗುಣಸ್ವಭಾವದ

ಜೊತೆಗೆ ಕುಮಾರರಾಮನ ಇತಿಹಾಸವನ್ನು ಕಟ್ಟಿಕೊಡುವ, ಪಂಚಕಲ್ಯಾಣಿಯಂತಹ ಕುದುರೆಯ ಉಪಯೋಗ ಮತ್ತು ಮಹತ್ವ, ಚೇತಕ ಕುದುರೆಯ ಸಾಹಸ ಪ್ರವೃತ್ತಿಯನ್ನೂ ಕುರಿತು ವಿಶ್ಲೇಷಿಸಲಾಗಿದೆ.

ಅಶ್ವಾಚರಣೆಯಲ್ಲಿ ಬಾಗಿಲಮೇಲೆ ಕುದುರೆಯ ಚಿತ್ರ ಬಳಸಿದ ಕಾರಣವೇನು? ಎಂಬುದನ್ನು ಕ್ಷೇತ್ರಕಾರ್ಯದ ಮೂಲಕ ಅಭಿಪ್ರಾಯಗಳನ್ನು ಸಂಗ್ರಹಿಸಿ ಗುರುತಿಸಲಾಗಿದೆ. ಕುದುರೆ ಕುಣಿತ ಒಂದು ಸಾಂಸ್ಕೃತಿಕ ಪರಂಪರೆಯಾಗಿ ರೂಪಗೊಂಡಿರುವುದನ್ನು ಚರ್ಚಿಸಲಾಗಿದೆ. ತೇಜಮ್ಮ ಆರಾಧನೆ ಯಾವ ರೀತಿಯಲ್ಲಿ ನಡೆಯುತ್ತದೆ ಎಂಬುದನ್ನೂ, ಕುದುರೆ ಶಿಲ್ಪಗಳು ಚಾರಿತ್ರಿಕ ಮಹತ್ವವನ್ನು ಪಡೆದುಕೊಂಡ ಬಗೆಯನ್ನು ವೀರಗಲ್ಲುಗಳ ಆಧಾರದಿಂದ ವಿಶ್ಲೇಷಿಸಲಾಗಿದೆ. ಕುದುರೆಯು ಬಳಕೆಗೊಂಡು ಹಂತ ಹಂತವಾಗಿ ಉಪಯೋಗವಾದ ವಿಚಾರವನ್ನು ದೇಶಿ, ವಿದೇಶಿ ವಿದ್ವಾಂಸರ ಅಭಿಪ್ರಾಯದ ಹಿನ್ನಲೆಯಲ್ಲಿ ಚರ್ಚಿಸಲಾಗಿದೆ. ಇವೆಲ್ಲವುಗಳನ್ನು ಅಧ್ಯಯನ ಮಾಡಿ ಶಾಸ್ತ್ರ ರೂಪದ ಈ ಮಹಾಪ್ರಬಂಧಕ್ಕೆ ಸಾಂಸ್ಕೃತಿಕ ಸ್ಪರ್ಶವನ್ನು ಕೊಡಲಾಗಿದೆ.

ಅಧ್ಯಯನದ ಫಲಿತಗಳು

* ಚರಿತ್ರೆ ಸಾಹಿತ್ಯವನ್ನು, ಸಾಹಿತ್ಯ ಚರಿತ್ರೆಯನ್ನು ಕಟ್ಟಿಕೊಡಬಹುದು ಆದರೆ ಕುದುರೆಯಂತಹ ಪ್ರಾಣಿಯ ಸಮಗ್ರ ಇತಿಹಾಸ ಮತ್ತು ಚರಿತ್ರೆಯನ್ನು ಕಟ್ಟಿಕೊಡುವುದು ಸುಲಭದ ಕೆಲಸವಲ್ಲ. ಆದಾಗ್ಯೂ ಸಾಹಿತ್ಯದ ಒಂದು ಭಾಗವಾದ ಶಾಸ್ತ್ರದ ಮೂಲಕ ಇಂತಹ ಒಂದು ಪ್ರಯತ್ನವನ್ನು ಕನ್ನಡದಲ್ಲಿ ಅಶ್ವಶಾಸ್ತ್ರ ಮಹಾಪ್ರಬಂಧ ಮಾಡಿದೆ.
* ಉಪೇಕ್ಷಿತ ಕ್ಷೇತ್ರವಾದ ಶಾಸ್ತ್ರವನ್ನು ಮುಖ್ಯ ಭೂಮಿಕೆಯನ್ನಾಗಿ ಮಾಡಿಕೊಂಡು ಅಧ್ಯಯನ ಮಾಡಲಾಗಿದೆ.
* ಕುದುರೆ ಸಾಹಿತ್ಯದಲ್ಲಿ ಗುರುತಿಸಿಕೊಂಡ ಬಗೆಯನ್ನು ವಿವಿಧ ಪರಿಕರಗಳ ಮೂಲಕ ಕಟ್ಟಿಕೊಡಲಾಗಿದೆ.
* ಕುದುರೆಯ ಇತಿಹಾಸ ಕ್ರಿ.ಪೂ. ೪೦೦೦ ವರ್ಷಗಳಷ್ಟು ಹಿಂದೆಯೇ ಇತ್ತು ಎಂಬುದು ವಿಧಿತವಾಗುತ್ತದೆ.
* ಪ್ರಧಾನ ಮತ್ತು ಅನುಷಂಗಿಕ ಎಂದು ವಿಭಾಗ ಮಾಡಿಕೊಂಡಿರುವ ಕ್ರಮದಿಂದಾಗಿ ಅಶ್ವಶಾಸ್ತ್ರ ಕೃತಿಗಳ ಸ್ಪಷ್ಟಚಿತ್ರಣ ಗೊತ್ತಾಗುತ್ತದೆ.
* ಅಭಿನವಚಂದ್ರನ ಕಾಲವನ್ನು ಈ ಕೃತಿಯ ಮೂಲಸಂಪಾದಕರಾದ ಶ್ರೀಮಾನ್ ಹೆಚ್.ಶೇಷಯ್ಯಂಗಾರ್ ಮತ್ತು ಡಾ. ಕೆ.ಜಿ.ನಾರಾಯಣ ಪ್ರಸಾದರು ಕ್ರಿ.ಶ. ೧೪೦೦ ಎಂದು ಗುರುತಿಸಿರುವುದನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ. ಕಳಚೂರಿಯ ಚಕ್ರವರ್ತಿ ಸೋವಿದೇವನ ಕಾಲದ ವಿಜಾಪುರ ಜಿಲ್ಲೆಯ ಬಾಗೇವಾಡಿ ಶಾಸನದಿಂದ ಪರಿಶೀಲಿಸಿ ಗುರುತಿಸಿದ ಜಿ.ಜಿ.ಮಂಜುನಾಥನ್ ಅವರು ಹೇಳಿರುವ ೧೨ನೇ ಶತಮಾನ ಸೂಕ್ತವಾದ ಕಾಲ ಎಂದು ಒಪ್ಪಿಕೊಳ್ಳಬಹುದು.
* ಹಿರಿಯಣ್ಣ ಕವಿಯ ಕಾಲವನ್ನು ೧೭ನೇ ಶತಮಾನವೆಂದು ಗುರುತಿಸಲು ಕವಿಯು ಕೊಡುವ ೭ನೇ ಸಂಧಿ ೩೭ನೇ ಪದ್ಯ ಪ್ರಮುಖ ಆಕರವಾಗುತ್ತದೆ.

* ಕುದುರೆಯ ವೈದ್ಯದ ಕುರಿತು ಹೆಚ್ಚು ಬೆಳಕು ಚೆಲ್ಲುವ ಶಾಸ್ತ್ರಕೃತಿ ಚಾವುಂಡರಾಯ ಲೋಕೋಪಕಾರ
* ಕೆಳದಿ ಬಸವರಾಜನ ಶಿವತತ್ವರತ್ನಾಕರ ಕೃತಿ ಕುದುರೆಯ ಪ್ರಭೇದಗಳ ಕುರಿತು ವಿಸ್ತೃತವಾಗಿ ಚರ್ಚಿಸುವ ಏಕೈಕ ಕೃತಿಯಾಗಿದೆ.
* ಹಾಲಸ್ಯ ಪುರಾಣದ ಕರ್ತೃ ಇಮ್ಮಡಿ ಮುರಿಗಾಗುರುಸಿದ್ಧ ಚಿತ್ರದುರ್ಗದ ಒಂಬತ್ತನೆಯ ಮಠಾಧಿಪತಿಯಾಗಿರುವುದರಿಂದ ಈತನ ಕಾಲವನ್ನು ೧೭೨೦ ಎಂದು ಗುರುತಿಸಬಹುದು.
* ಹಾಲಸ್ಯ ಪುರಾಣ, ಪುರಾಣ ಎಂದು ಗುರುತಿಸಿಕೊಳ್ಳಲು ಸಾಧ್ಯವಿಲ್ಲ. ಏಕೆಂದರೆ ಈ ಕೃತಿಯಲ್ಲಿ ಅನೇಕ ಶಾಸ್ತ್ರ ಗ್ರಂಥಗಳು ಅಡಕವಾಗಿರುವುದನ್ನು ಕಾಣಬಹುದು. ಛಂದಸ್ಸಿನ ದೃಷ್ಟಿಯಿಂದ ಹೆಚ್ಚು ಮನ್ನಣೆ ಪಡೆದ ಇದು ಕಂದ, ವಚನ, ಉತ್ಪಲಮಾಲೆ, ಚಂಪಕಮಾಲೆಯ ಜೊತೆಗೆ ಪೃಥ್ವಿ, ಸ್ವಾಗತ, ಶಿಖರಣೆ, ಆರ್ಯಪ್ರಭಾತ, ಮಂಜುಭಾಷಿತ, ಪ್ರಮಣಿಕ, ವಿಬ್ರಮ, ಮನಮಯೂರ, ಅಮಳವಿಲಾಸ, ಹಂಸಪದ ಮುಂತಾದ ವೈಶಿಷ್ಟ್ಯಪೂರ್ಣ ಛಂದೋಜಾತಿಯನ್ನು ಪರಿಚಯಿಸುವುದರಿಂದ ಮತ್ತು ಕುದುರೆಶಾಸ್ತ್ರದ ಕುರಿತು ಮಾಹಿತಿ ನೀಡುವುದರಿಂದ ಪುರಾಣ ಎನ್ನುವುದಕ್ಕಿಂತ ಶಾಸ್ತ್ರಪುರಾಣ ಎನ್ನುವುದು ಸೂಕ್ತವೆನಿಸುತ್ತದೆ.
* ಪ್ರಸಿದ್ಧ ಶಾಸ್ತ್ರಕಾರನಾದ ಶಾಲಿಹೋತ್ರನನ್ನು ಅನುಸರಿಸಿ ಅಭಿನವಚಂದ್ರ, ರಾಮಚಂದ್ರ, ಬಾಚರಸ, ಸದಾಶಿವರಾಯ ಮುಂತಾದ ಶಾಸ್ತ್ರಕಾರರು ಕೃತಿ ರಚಿಸಿದ್ದಾರೆ ಎಂಬ ಅಂಶ ಸ್ಪಷ್ಟವಾಗುತ್ತದೆ.
* ಎಲ್ಲಾ ಅಶ್ವಶಾಸ್ತ್ರ ಕೃತಿಗಳು ಕುದುರೆಯ ರೋಗ, ಗುಣಲಕ್ಷಣ, ಚಿಕಿತ್ಸೆ ಕುರಿತು ಹೆಚ್ಚು ಮಾಹಿತಿಯನ್ನು ನೀಡುತ್ತವೆ ಹೊರತು ಅವುಗಳ ಬಳಕೆ ಮಾಡಿಕೊಂಡ ವಿಧಾನ ಕುರಿತು ಹೇಳುವುದಿಲ್ಲ.
* ಕುದುರೆಯ ಆರೈಕೆ, ಉಪಚಾರ, ರಕ್ಷಣೆ ಅಂದಿನ ಕಾಲದಲ್ಲಿ ಮುಖ್ಯವಾಗಿತ್ತು ಎಂಬ ವಿಚಾರ ಸ್ಪಷ್ಟವಾಗುತ್ತದೆ. ಏಕೆಂದರೆ ನಾಯಿಯಂತಹ ನಂಬಿಗಸ್ಥ ಪ್ರಾಣಿಯನ್ನು ಬಿಟ್ಟರೆ ಕುದುರೆಯಂತಹ ಇನ್ನೊಂದು ನಂಬಿಗಸ್ಥ ದೊಡ್ಡ ಪ್ರಾಣಿ ಇಲ್ಲ ಎಂಬ ಅಂಶವೇ ಮುಖ್ಯವಾಗುತ್ತದೆ.
* ಅಭಿನವಚಂದ್ರ ಕುದುರೆಯ ಜಾತಿಗಳು ೫೪ ಎಂದು ಗುರುತಿಸುತ್ತಾನೆ. ಮನಸೋಲ್ಲಾಸಕಾರ ಜಾತಿಗಳು ೬೫ ಎಂದು ಹೇಳಿ ೩೯ನ್ನು ಮಾತ್ರ ಗುರುತಿಸಿ, ೨೬ನ್ನು ಗುರುತಿಸದೇ ಇವು ಅಷ್ಟು ಮುಖ್ಯವಾದವುಗಳಲ್ಲ ಎನ್ನುವ ಕ್ರಮ ಅಸ್ಪಷ್ಟ ಮಾಹಿತಿ ನೀಡಿದಂತಾಗುತ್ತದೆ.
* ಸರ್ವಜ್ಞ ಸೋಮೇಶ್ವರ ಮಾನಸೋಲ್ಲಾಸಕಾರ ಕುದುರೆಯ ಪ್ರಬೇಧಗಳನ್ನು ಗುರುತಿಸುವಾಗ ಅವಯವಗಳ ಹೆಸರನ್ನೇ ಸೂಚಿಸುತ್ತಾನೆ. ಆದರೆ ಅಭಿನವಚಂದ್ರ ಅವಯವಗಳನ್ನು ಹೊರತುಪಡಿಸಿ ಅವುಗಳ ಆಕಾರದ ಹಿನ್ನೆಲೆಯಲ್ಲಿ ಗುರುತಿಸುತ್ತಾನೆ.
* ಚಾವುಂಡರಾಯನು ಕೊಡುವ ರೋಗಗಳ ಪಟ್ಟಿಗೂ ಮತ್ತು ಆನಂತರ ಬಂದ ಶಾಸ್ತ್ರಕಾರರು ಕೊಡುವ ರೋಗದ ಪಟ್ಟಿಗೂ ವ್ಯತ್ಯಾಸವಿದೆ. ಔಷಧ ಕೊಡುವ ಹಿನ್ನೆಲೆಯಲ್ಲಿಯೂ ಭಿನ್ನತೆ ಇದೆ. ಸೆಂಬರೋಗ, ಖಾಸರೋಗ ಕುರಿತು ಯಾವ ಶಾಸ್ತ್ರಕಾರನು ಹೆಸರಿಸುವುದಿಲ್ಲ. ಆದದರಿಂದ ಅವನ ಕಾಲದಲ್ಲಿಯೇ ಪ್ರಚಲಿತವಿದ್ದವು ಎಂಬ ಅಂಶ ಸ್ಪಷ್ಟವಾಗುತ್ತದೆ.

* ವಾತ, ಪಿತ್ತ, ಕಫ ರೋಗಗಳು ಶಾಲಿಹೋತ್ರನಿಂದ ಹಿಡಿದು ಇಂದಿನವರೆಗೂ ಕುದುರೆಗೆ ಬರುವುದರಿಂದ ಎಲ್ಲಾ ಕಾಲಕ್ಕೂ ಈ ರೋಗ ಕುದುರೆಗೆ ಇದೆ ಎಂದು ಹೇಳಬಹುದು.
* ಶುಭ ಅಶುಭ ನಿರ್ದೇಶನ ಅಧ್ಯಯನ ಮಾಡುವುದರಿಂದ ಜ್ಯೋತಿಷ್ಯಶಾಸ್ತ್ರವನ್ನು ಅಧ್ಯಯನ ಮಾಡಿದಂತಾಗುತ್ತದೆ.
* ನೀರಾಜನ ವಿಧಿವಿಧಾನ ರಾಷ್ಟ್ರೀಯ ಹಬ್ಬವನ್ನು ಆಚರಣೆ ಮಾಡುವುದರ ಜೊತೆಗೆ ಸಾಂಸ್ಕೃತಿಕ ಚರಿತ್ರೆಯನ್ನು ನಿರ್ಮಿಸುತ್ತದೆ.
* ಬೊಲ್ಲ, ಪಂಚಕಲ್ಯಾಣಿ, ಚೇತಕ ಕುದುರೆಗಳು ರಾಜಕೀಯ ವೈಭವದ ಜೊತೆಗೆ ಸಾಂಪ್ರದಾಯಿಕ ಚೌಕಟ್ಟನ್ನು ನಿರ್ಮಿಸುತ್ತದೆ.
* ಬಾಗಿಲ ಮೇಲಿನ ಕುದುರೆಯ ಚಿತ್ರ, ಕುದುರೆಯ ಕುಣಿತ, ತೇಜಮ್ಮ ಆರಾಧನೆ ಪ್ರಾಚೀನ ಕಾಲದ ಹಬ್ಬಗಳ ಜೊತೆಗೆ ಸಂಸ್ಕೃತಿ, ಮನರಂಜನೆಯನ್ನು ಬಿಂಬಿಸುತ್ತವೆ.
* ಕುದುರೆಯ ಶಿಲ್ಪಗಳು ಗತಕಾಲದ ಇತಿಹಾಸವನ್ನು ಮರುಕಳಿಸುತ್ತವೆ ಹಾಗೆಯೇ ಶೌರ್ಯ, ಸಾಹಸ, ಬಲಿದಾನ, ತ್ಯಾಗ ಗುಣಗಳನ್ನು ಬಿಂಬಿಸುತ್ತವೆ.

ಒಟ್ಟಾರೆಯಾಗಿ ಈ ಮೇಲಿನ ಎಲ್ಲ ಅಧ್ಯಯನ ಫಲಿತಗಳು ಮಹಾಪ್ರಬಂಧದ ಮುಖ್ಯ ಆಶಯವನ್ನು ಬಿಂಬಿಸುವಲ್ಲಿ ಯಶಸ್ವಿಯಾಗಿವೆ.


ಅನುಬಂಧ
ಛಾಯಾಚಿತ್ರಗಳು
ಪರಾಮರ್ಶನ ಗ್ರಂಥಗಳು



ಅಶ್ವಪರೀಕ್ಷೆ ಸಚಿತ್ರ ಕೆ.ಎ. ೫೨೭ ನಂಬರಿನ ಹಸ್ತಪ್ರತಿ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು




ಅಶ್ವಪರೀಕ್ಷೆ ಸಚಿತ್ರ ಕೆ.ಎ. ೫೨೭ ನಂಬರಿನ ಹಸ್ತಪ್ರತಿ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು



ಅಶ್ವಪರೀಕ್ಷೆ ಸಚಿತ್ರ ಕೆ.ಎ. ೫೨೭ ನಂಬರಿನ ಹಸ್ತಪ್ರತಿ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು



ಅಶ್ವಪರೀಕ್ಷೆ ಸಚಿತ್ರ ಕೆ.ಎ. ೫೨೭ ನಂಬರಿನ ಹಸ್ತಪ್ರತಿ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು




ಅಶ್ವಪರೀಕ್ಷೆ ಸಚಿತ್ರ ಕೆ.ಎ. ೫೨೭ ನಂಬರಿನ ಹಸ್ತಪ್ರತಿ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು




ಉಬ್ಬು ಶಿಲ್ಪದ ಸೊಗಸು, ಹಿರೇಕೊಣತಿ.




ಅಶ್ವಪರೀಕ್ಷೆ ಸಚಿತ್ರ ಕೆ.ಎ. ೫೨೭ ನಂಬರಿನ ಹಸ್ತಪ್ರತಿ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು




ಅಶ್ವಪರೀಕ್ಷೆ ಸಚಿತ್ರ ಕೆ.ಎ. ೫೨೭ ನಂಬರಿನ ಹಸ್ತಪ್ರತಿ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು



ಸೌಂಗಧಿಕಾ ಪರಿಣಯ, ಸಂ. ಡಾ. ಎಚ್. ಎಸ್. ಶ್ರೀಮತಿ



ಅಶ್ವಪರೀಕ್ಷೆ ಸಚಿತ್ರ ಕೆ.ಎ. ೫೨೭ ನಂಬರಿನ ಹಸ್ತಪ್ರತಿ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು



ಸೌಂಗಧಿಕಾ ಪರಿಣಯ, ಸಂ. ಡಾ. ಎಚ್. ಎಸ್. ಶ್ರೀಮತಿ



ಅಶ್ವ ಶರೀರದ ಶುಭಾಶುಭ ಲಕ್ಷಣಗಳು

ಕೆಳದಿಬಸವರಾಜನ ಶಿವತತ್ತ್ವರತ್ನಾಕರ, ಸಂ. ಪ್ರೊ. ಮಲ್ಲೇಪುರಂ. ಜಿ ವೆಂಕಟೇಶ್



ಉತ್ತಮಾಶ್ವ

ಕೆಳದಿಬಸವರಾಜನ ಶಿವತತ್ತ್ವರತ್ನಾಕರ, ಸಂ. ಪ್ರೊ. ಮಲ್ಲೇಪುರಂ. ಜಿ ವೆಂಕಟೇಶ್




ಕೆಳದಿಬಸವರಾಜನ ಶಿವತತ್ತ್ವರತ್ನಾಕರ, ಸಂ. ಪ್ರೊ. ಮಲ್ಲೇಪುರಂ. ಜಿ ವೆಂಕಟೇಶ್





ಕುದುರೆ ಪಳಗಿಸುತ್ತಿರುವ ಯೋಧ, ಮಹಾನವಮಿ ದಿಬ್ಬ, ಹಂಪಿ

ಕೆಳದಿಬಸವರಾಜನ ಶಿವತತ್ತ್ವರತ್ನಾಕರ, ಸಂ. ಪ್ರೊ. ಮಲ್ಲೇಪುರಂ. ಜಿ ವೆಂಕಟೇಶ್



ಉತ್ತಮಾಶ್ವ

ಕೆಳದಿಬಸವರಾಜನ ಶಿವತತ್ತ್ವರತ್ನಾಕರ, ಸಂ. ಪ್ರೊ. ಮಲ್ಲೇಪುರಂ. ಜಿ ವೆಂಕಟೇಶ್



ಹಜಾರರಾಮ ದೇವಾಲಯ, ಹಂಪಿ



ಯುದ್ಧಕ್ಕೆ ಹೊರಟ ಯೋಧ ಪರಿವಾರ, ವಸ್ತು ಸಂಗ್ರಹಾಲಯ, ರಾಯಚೂರು.



ಅಶ್ವಪರೀಕ್ಷೆ ಸಚಿತ್ರ ಕೆ.ಎ. ೫೨೭ ನಂಬರಿನ ಹಸ್ತಪ್ರತಿ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು



ಕರಿಸಿದ್ದೇಶ್ವರದೇವರ ಮೂರ್ತಿ, ಸಂಗ್ರಹಿಕೊಪ್ಪ, ಧಾರವಾಡ.



ಅಲೆಮಾರಿಕುರುಬರ ವಲಸೆ, ಪಾಪಿನಾಯಕನಹಳ್ಳಿ, ಹೊಸಪೇಟೆ.



ಕೃಷಿಯ ಬಳಕೆಯಲ್ಲಿ ಕುದುರೆ, ವಿಜಯಕರ್ನಾಟಕ ಪತ್ರಿಕೆ, ೧೮-೦೬-೦೬, ಚಂದ್ರಪ್ಪಸೊಬಟಿ.

ಪರಾಮರ್ಶನ ಗ್ರಂಥಗಳು

೧. ಅಗ್ನಿದಿವ್ಯ, ಡಾ.ಕೆ.ರವೀಂದ್ರನಾಥ ಅಮರ ಪ್ರಕಾಶನ, ಗುಲಬರ್ಗಾ, ೨೦೦೩

೨. ಅಂಡಯ್ಯ ಕವಿಯ ಕಬ್ಬಿಗರಕಾವಂ (ಗದ್ಯಾನುವಾದ) ಆರ್.ವಿ. ಕುಲಕರ್ಣಿ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೪

೩. ಅನಂತನಾಥ ಪುರಾಣ (ಸಂ) ಎಚ್.ದೇವಿರಪ್ಪ ಹಾಗೂ ಎಂ.ಸಿ. ಪದ್ಮನಾಭಶರ್ಮ, ಪ್ರಸಾರಾಂಗ ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೭೨

೪. ಅಮರಸಿಂಹನ ನಾಮಲಿಂಗಾನುಶಾಸನ ಅಥವಾ ಅಮರಕೋಶ, ಎನ್. ರಂಗನಾಥಶರ್ಮಾ, ಸುವಿದ್ಯಾ ಪ್ರಕಾಶನ, ಬೆಂಗಳೂರು, ೧೯೯೬

೫. ಅಭಿನವಚಂದ್ರ ವಿರಚಿತ ಅಶ್ವಶಾಸ್ತ್ರ (ಸಂ) ಜಿ.ಜಿ. ಮಂಜುನಾಥನ್, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ೧೯೮೭

೬. ಅಲಂಕಾರಶಾಸ್ತ್ರಕಾರರು ಒಂದು ಸಮೀಕ್ಷೆ ಬಿ.ವ್ಹಿ. ಮಲ್ಲಾಪುರ, ಪ್ರಸಾರಾಂಗ, ಕರ್ನಾಟಕದ ವಿಶ್ವವಿದ್ಯಾಲಯ, ಧಾರವಾಡ, ೨೦೦೦

೭. ಅಶ್ವಪರೀಕ್ಷೆ ೨೨೭ ನೇ ಕ್ರಮಾಂಕದ ಹಸ್ತಪ್ರತಿ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ ಮೈಸೂರು.

೮. ಅಶ್ವಶಾಸ್ತ್ರ ಒಂದು ವಿವೇಚನೆ ಡಾ. ಎಸ್.ಎಸ್. ಅಂಗಡಿ (ಲೇಖನ) ಹಸ್ತಪ್ರತಿ ವ್ಯಾಸಂಗ ಸಂಪುಟ ೮, (ಸಂ) ಡಾ ಎಫ್.ಟಿ.ಹಳ್ಳಿಕೇರಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೮

೯. ಅಶ್ವಶಾಸ್ತ್ರದ ಟೀಕು (ಅಪ್ರಕಟಿತ ಕೃತಿ) ರಾಮಚಂದ್ರ ಕವಿ ಕೆ.ಬಿ. ೨೨೭ ಕ್ರಮಾಂಕದ ಹಸ್ತಪ್ರತಿ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು

೧೦. ಆದಿಪುರಾಣ (ಸಂ) ಕೆ.ಜಿ. ಕುಂದಣಗಾರ ಹಾಗೂ ಅನಂತ ಅಣ್ಣಾರಾವ್ ಚೌಗುತಿ, ಶ್ರೀ ಚಂದ್ರಪ್ರಭ ಪ್ರಿಂಟಿಂಗ್ ಪ್ರೆಸ್ ಬೆಳಗಾವಿ, ೧೯೫೭

೧೧. ಇತಿಹಾಸ ದರ್ಶನ ಸಂಪುಟ ೨೨, (ಸಂ) ಡಾ. ಎಂ.ಜಿ.ನಾಗರಾಜ ಮತ್ತು ಡಾ.ಪಿ.ವಿ.ಕೃಷ್ಣಮೂರ್ತಿ, ಇತಿಹಾಸ ಅಕಾಡೆಮಿ, ಬೆಂಗಳೂರು, ೨೦೦೭

೧೨. ಇಮ್ಮಡಿ ಗುರುಸಿದ್ಧನ ಹಾಲಸ್ಯ ಪುರಾಣಂ (ಸಂ) ಜಿ.ಜಿ. ಮಂಜುನಾಥನ್, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿ.ವಿ. ಮೈಸೂರು, ೧೯೭೫

೧೩. ಸರ್ವಜ್ಞನ ತ್ರಿಪದಿಗಳು, (ಸಂ) ಉತ್ತಂಗಿ ಚನ್ನಪ್ಪ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೪

೧೪. ಎಫಿಗ್ರಾಫಿಯಾ ಕರ್ನಾಟಕ ಸಂಪುಟ ೧, ೨, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

೧೫. ಎಫಿಗ್ರಾಫಿಯಾ ಕರ್ನಾಟಕ ಸಂಪುಟ ೩,೪, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

೧೬. ಎಫಿಗ್ರಾಫಿಯಾ ಕರ್ನಾಟಕ ಸಂಪುಟ ೫, ೬, ೭, ೮, ೯, ೧೦, ೧೧, ೧೨, ೧೩, ೧೪, ೧೫, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

೧೭. ಎಮ್ಮೆ ಬಸವನ ಕಾಲಜ್ಞಾನ ಸಾಹಿತ್ಯ (ಸಂ) ಡಾ. ಎಫ್. ಟಿ. ಹಳ್ಳಿಕೇರಿ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯

೧೮. ಕಂಠೀರವ ನರಸರಾಜ ವಿಜಯ (ಸಂ) ಡಾ.ಆರ್.ಶಾಮಾಶಾಸ್ತ್ರಿ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ೧೯೭೧

೧೯. ಕನ್ನಡ ವಿಶ್ವಕೋಶ ಸಂಪುಟ ೪, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ೧೯೭೨.

೨೦. ಕನ್ನಡದಲ್ಲಿ ಸೂಪಶಾಸ್ತ್ರ ಸಾಹಿತ್ಯ ಡಾ.ಬಿ.ಮಂಜುಳಾ, ಭರಣಿ ಪ್ರಕಾಶನ, ಹೊಸಪೇಟೆ, ೨೦೦೬

೨೧. ಕನ್ನಡ ದಾಖಲು ಸಾಹಿತ್ಯ, ಡಾ. ಕೆ.ರವೀಂದ್ರನಾಥ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೨

೨೨. ಕನ್ನಡ ನಿಘಂಟು ಸಂಪುಟ ೧ ರಿಂದ ೮ (ಪ್ರ.ಸಂ) ಎನ್ ಬಸವಾರಾಧ್ಯ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೯೫

೨೩. ಕನ್ನಡ ವರ್ಣನಾತ್ಮಕ ಸೂಚಿ (ಸಂ) ಬಿ.ಎಸ್.ಸಣ್ಣಯ್ಯ, ಶ್ರವಣಬೆಳಗೊಳ

೨೪. ಕನ್ನಡ ವಿಶ್ವವಿದ್ಯಾಲಯ, ಹಸ್ತಪ್ರತಿಸೂಚಿ ಸಂಪುಟ ೩ (ಸಂ) ಡಾ. ಎಫ್.ಟಿ.ಹಳ್ಳಿಕೇರಿ ಮತ್ತು ಡಾ.ಕೆ.ರವೀಂದ್ರನಾಥ್, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪

೨೫. ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿ, ಸಂಪುಟ ೮, (ಸಂ) ಎನ್. ಬಸವಾರಾಧ್ಯ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು

೨೬. ಕನ್ನಡ ವರ್ಣನಾತ್ಮಕ ಸೂಚಿ ಸಂಪುಟ ೫, ಬಿ.ಎಸ್. ಸಣ್ಣಯ್ಯ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, ೧೯೯೦

೨೭. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಡಾ. ಚಿದಾನಂದಮೂರ್ತಿ, ಸಪ್ನಬುಕ್ ಹೌಸ್ ಬೆಂಗಳೂರು, ೨೦೦೨

೨೮. ಕನ್ನಡ ನಿಘಂಟು ಸಂಪುಟ ೨, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೯೫

೨೯. ಕನ್ನಡ ನಿಘಂಟು ಸಂಪುಟ ೮, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೯೫

೩೦. ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿ, ಸಂಪುಟ ೫, (ಸಂ) ಬಿ.ಎಸ್. ಸಣ್ಣಯ್ಯ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೮೦

೩೧. ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿ, ಸಂಪುಟ ೪, (ಸಂ) ಹೆಚ್.ದೇವಿರಪ್ಪ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೯೩

೩೨.. ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿ, ಸಂಪುಟ ೧, (ಸಂ) ಹೆಚ್. ದೇವಿರಪ್ಪ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೯೩

೩೩. ಕನ್ನಡ ಜೈಮಿನಿ ಭಾರತ (ಸಂ) ದೇವುಡು ನರಸಿಂಹಶಾಸ್ತ್ರಿ ಹಾಗೂ ಬ. ಶಿವಮೂರ್ತಿಶಾಸ್ತ್ರಿ (ಪ) ಮೈಸೂರು ಸಂಸ್ಥಾನದ ಸಾಹಿತ್ಯ ಮತ್ತು ಸಂಸ್ಕೃತಿ ಅಭಿವೃದ್ಧಿ ಇಲಾಖೆ, ಬೆಂಗಳೂರು, ೧೯೫೬

೩೪. ಕನ್ನಡ ಶಾಸನಶಿಲ್ಪ, ಡಾ. ಡಿ.ವಿ. ಪರಮಶಿವಮೂರ್ತಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯

೩೫. ಕನ್ನಡ ಶಾಸನ ಪರಿಭಾಷೆ : ಸಾಂಸ್ಕೃತಿಕ ಅಧ್ಯಯನ ಡಾ.ಸಂಗೀತಾ ಎಸ್.ಹೊನ್ನಳ್ಳಿ, ಅಮರ ಪ್ರಕಾಶನ, ಗುಲಬರ್ಗಾ, ೨೦೦೫

೩೬. ಕವಿರಾಜಮಾರ್ಗ ಸಾಂಸ್ಕೃತಿಕ ಮುಖಾಮುಖಿ (ಸಂ) ರಹಮತ್ ತರೀಕೆರೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦

೩೭. ಕವಿರಾಜಮಾರ್ಗ ಶ್ರೀ ವಿಜಯ (ಸಂ) ಶ್ರೀ ಎಂ.ವಿ. ಸೀತಾರಾಮಯ್ಯ, ಜಿ. ಬ್ರಹ್ಮಪ್ಪ, ಡಿ.ವಿ.ಕೆ. ಮೂರ್ತಿ ಪ್ರಕಾಶನ ಮೈಸೂರು, ೧೯೯೮

೩೮. ಕವಿಚಕ್ರವರ್ತಿ ರನ್ನ ವಿರಚಿತಂ, ಸಾಹಸಭೀಮ ವಿಜಯಂ (ಗದ್ಯಾನುವಾದ) ಆರ್.ವಿ. ಕುಲಕರ್ಣಿ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ೨೦೦೪

೩೯. ಕರ್ನಾಟಕ ಕವಿಚರಿತೆ ಸಂಪುಟ ೧, ಆರ್. ನರಸಿಂಹಾಚಾರ್ ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೭೩- ೭೪

೪೦. ಕರ್ನಾಟಕ ಕವಿಚರಿತೆ, ಸಂಪುಟ ೨, ಆರ್. ನರಸಿಂಹಾಚಾರ್ಯ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೭೩-೭೪

೪೧. ಕರ್ನಾಟಕ ಜನಪದ ಕಲೆಗಳ ಕೋಶ (ಸಂ) ಡಾ. ಹಿ.ಚಿ. ಬೋರಲಿಂಗಯ್ಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ೧೯೯೬

೪೨. ಕರ್ನಾಟಕ ಭಾರತ ಕಥಾಮಂಜರಿ (ಸಂ) ಕುವೆಂಪು ಹಾಗೂ ಮಾಸ್ತಿ ವೆಂಕಟೇಶ ಅಯ್ಯಂಗಾರ್, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ೧೯೮೮

೪೩. ಕರ್ನಾಟಕ ಪಂಚತಂತ್ರಂ (ಗದ್ಯಾ) ಗುಂಡ್ಮಿ ಚಂದ್ರಶೇಖರ ಐತಾಳ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ೧೯೩೯

೪೪. ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಡಾ. ಎಚ್. ತಿಪ್ಪೇರುದ್ರಸ್ವಾಮಿ, ಡಿ.ವಿ.ಕೆ.ಮೂರ್ತಿ ಪ್ರಕಾಶನ, ಮೈಸೂರು ೨೦೦೧

೪೫. ಕಾಲಜ್ಞಾನ ಸಾಹಿತ್ಯ ಸಂಗ್ರಹ (ಸಂ) ಶ್ರೀ ಶಿವಬಸವಸ್ವಾಮಿಗಳು ಶಿವಶರಣ ವಾಙ್ಮಯ ಪ್ರಕಾಶನ ಕಾರ್ಯಾಲಯ ಮೈಸೂರು, ೧೯೪೬

೪೬. ಕುಮಾರವ್ಯಾಸ ಭಾರತ (ಸಂ) ತ.ಸು.ಶಾಮರಾಯ, ಸಾಹಿತ್ಯ ಅಕಾಡೆಮಿ, ಹೊಸದೆಹಲಿ, ೧೯೭೧

೪೭. ಕುಮಾರರಾಮ ಮತ್ತು ಕೃಷ್ಣಗೊಲ್ಲರ ಮಹಾಕಾವ್ಯ (ಸಂ) ಕೆ.ಎಂ. ಮೈತ್ರಿ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೭

೪೮. ಕುಮಾರರಾಮ ಸಂಪ್ರದಾಯದ ಅಧ್ಯಯನ, ಡಾ.ಎಸ್.ಎಂ. ಸಾವಿತ್ರಿ, ಚಿತ್ರಶ್ರೀ ಪ್ರಕಾಶನ, ಹೊಸಪೇಟೆ, ೨೦೦೨

೪೯. ಕೃಷ್ಣದೇವರಾಯನ ದಿನಚರಿ (ಸಂ) ಡಾ.ವಿ.ಎಸ್.ಆಚಾರ್ಯ ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ, ಬೆಂಗಳೂರು, ೧೯೮೩

೫೦. ಕೆಳದಿ ಬಸವರಾಜನ ಶಿವತತ್ತ್ವ ರತ್ನಾಕರ ಸಂಪುಟ ೨, (ಸಂ) ಪ್ರೊ.ಮಲ್ಲೇಪುರಂ ಜಿ. ವೆಂಕಟೇಶ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯

೫೧. ಕೊಮಾರ ರಾಮಯ್ಯ ಚರಿತ್ರೆ (ಸಂ) ಡಾ.ಎಂ.ಎಂ. ಕಲಬುರ್ಗಿ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧

೫೨. ಕೌಟಿಲ್ಯನ ಅರ್ಥಶಾಸ್ತ್ರ (ಸಂ) ಎನ್.ಎಸ್.ವೆಂಕಟನಾಥಾಚಾರ್ಯ, ಪ್ರಾಚ್ಯ ಸಂಶೋಧನಾ ಗ್ರಂಥಾಲಯ ಮೈಸೂರು, ೧೯೮೬

೫೩. ಚಾವುಂಡರಾಯನ ಲೋಕೋಪಕಾರ ಒಂದು ಅಧ್ಯಯನ, ಡಾ. ಎ. ರಂಗಸ್ವಾಮಿ, ದರ್ಶನಕೀರ್ತಿ ಪ್ರಕಾಶನ, ಮೈಸೂರು, ೧೯೯೬

೫೪. ಚನ್ನಬಸವಪುರಾಣ ಸಂಪುಟ ೧,೨, (ಗದ್ಯ) ಎಂ.ಚಂದ್ರಶೇಖರ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೭೭

೫೫. ಜನಪದ ಹಾಲುಮತ ಮಹಾಕಾವ್ಯ (ಸಂ) ಡಾ. ವೀರಣ್ಣ ದಂಡೆ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು ೨೦೦೨

೫೬. ಜನವಶ್ಯ, (ಸಂ) ಜಿ.ಜಿ.ಮಂಜುನಾಥನ್, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೮೭

೫೭. ಜನ್ನಕವಿಯ ಯಶೋಧರ ಚರಿತೆ (ಗದ್ಯಾನುವಾದ) ತೆಕ್ಕುಂಜೆ ಗೋಪಾಲಕೃಷ್ಣಭಟ್ಟ, ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು, ೨೦೦೧

೫೮. ಜಾತಕತಿಲಕಂ (ಸಂ) ಎಸ್.ಎನ್. ಕೃಷ್ಣಜೋಯಿಸ್, ಪ್ರಾಚ್ಯ ವಿದ್ಯಾ ಸಂಶೋಧನಾಲಯ, ಮೈಸೂರು, ೧೯೫೯

೫೯. ಜೈಮಿನಿ ಭಾರತ (ಸಂ) ದೇವುಡು ನರಸಿಂಹಶಾಸ್ತ್ರಿ ಮತ್ತು ಬ. ಶಿವಮೂರ್ತಿಶಾಸ್ತ್ರಿ (ಪ) ಮೈಸೂರು ಸಂಸ್ಥಾನದ ಸಾಹಿತ್ಯ ಮತ್ತು ಸಂಸ್ಕೃತಿ ಅಭಿವೃದ್ಧಿ ಇಲಾಖೆ ಬೆಂಗಳೂರು, ೧೯೫೬

೬೦. ತುರಗ ಲಕ್ಷಣ (ಸಂ) ಜಿ.ಜಿ. ಮಂಜುನಾಥನ್, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೮೭

೬೧. ತೊರವೆ ರಾಮಾಯಣ ೧ (ಗದ್ಯಾ) ಕೆ.ಎಸ್.ಕೃಷ್ಣಮೂರ್ತಿ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೭೭

೬೨. ಧರ್ಮಾಮೃತಂ (ಗದ್ಯ) ಕೆ. ವೆಂಕಟರಾಮಪ್ಪ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೭೭

೬೩. ಧರ್ಮ ಕನ್ನಡ ವಿ.ವಿ. ವಿಶ್ವಕೋಶ ಸಂಪುಟ ೩, ಡಾ. ರಹಮತ್ ತರೀಕೆರೆ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦

೬೪. ಧರ್ಮಶಾಸ್ತ್ರದ ಇತಿಹಾಸ ಸಂಪುಟ ೫, ಭಂಡಾರ್ಕರ್ ಪ್ರಾಚ್ಯ ಸಂಶೋಧನಾಲಯ, ಪುಣೆ

೬೫. ನಂಜುಡ ವಿರಚಿತ ಕೃತಿಗಳು (ಸಂ) ಎನ್. ಬಸವಾರಾಧ್ಯ, ಗೀತಾ ಬುಕ್ ಹೌಸ್, ಮೈಸೂರು, ೧೯೮೫

೬೬. ನಿಜಗುಣಶಿವಯೋಗಿ ವಿರಚಿತ ವಿವೇಕಚಿಂತಾಮಣಿ (ಸಂ) ಜಿ.ಎ. ಶಿವಲಿಂಗಯ್ಯ ಶಿವಕವಿ ಪ್ರಕಾಶನ, ಮೈಸೂರು, ೧೯೮೯

೬೭. ನೇಮಿಚಂದ್ರ ಕವಿಕೃತ ನೇಮಿನಾಥ ಪುರಾಣಂ, ಗದ್ಯಾನುವಾದ ಆರ್.ವಿ. ಕುಲಕರ್ಣಿ, ಕನ್ನಡ ಸಾಹಿತ್ಯ ಪರಿಷತ್ತು ೨೦೦೧

೬೮. ಪಂಪಭಾರತ (ಸಂ) ಎಸ್. ಅನಂತರಂಗಾಚಾರ್, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೭೭

೬೯. ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಯುದ್ಧಕಲೆ, ಡಾ. ಶ್ರೀಧರ ಎಚ್.ಜಿ.ಶಿವರಾಮ ಕಾರಂತ ಅಧ್ಯಯನ ಕೇಂದ್ರ, ಪುತ್ತೂರು, ೨೦೦೨

೭೦. ಬಸವಪುರಾಣ (ಸಂ) ಡಾ.ಪಿ.ವಿ.ನಾರಾಯಣ ತರಳಬಾಳು ಪ್ರಕಾಶನ, ಸಿರಿಗೆರೆ,೧೯೮೨

೭೧. ಬಸವಣ್ಣನವರ ವಚನ ಸಂಗ್ರಹ (ಸಂ) ಸ.ಸ. ಮಾಳವಾಡ ಸಾಹಿತ್ಯ ಅಕಾಡೆಮಿ, ಹೊಸದೆಹಲಿ, ೧೯೮೯

೭೨. ಭಾರತೀಯ ಸಂಸ್ಕೃತಿ, ಎಸ್. ಶ್ರೀಕಂಠಶಾಸ್ತ್ರಿ (ಪ್ರ.ಸಂ) ಕೆ.ವಿ.ಪುಟ್ಟಪ್ಪ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ೧೯೫೪

೭೩. ಮದನತಿಲಕಂ (ಸಂ) ಆರ್.ಎಸ್.ಪಂಚಮುಖಿ ಕನ್ನಡ ಅಧ್ಯಯನ ಸಂಸ್ಥೆ, ಧಾರವಾಡ, ೧೯೫೩

೭೪. ಮಾರ್ಗ ಸಂಪುಟ ೧, ಡಾ.ಎಂ.ಎಂ.ಕಲಬುರ್ಗಿ, ನರೇಶ ಆ್ಯಂಡ್ ಕಂಪನಿ, ಹನುಮಂತನಗರ, ಬೆಂಗಳೂರು ೧೯೮೮

೭೫. ಮಾತಿನ ಚಪ್ಪರ (ಪ್ರಬಂಧ ಸಂಕಲನ) ಶಿಕಾರಿಪುರ ಕೆ. ಹರಿಹರೇಶ್ವರ, ಸಂವಹನ ಪ್ರಕಾಶನ, ಮೈಸೂರು, ೨೦೦೫

೭೬. ಮಾರ್ಕಂಡೇಯ ಪುರಾಣ (ದೇವಿ ಮಹಾತ್ಮೆ) ಗೀತಾ ಪ್ರೆಸ್, ಗೋರಖ್‌ಪುರ

೭೭. ಮುಮ್ಮಡಿ ಕೃಷ್ಣರಾಜ ಒಡೆಯರ ಸೌಗಂಧಿಕಾ ಪರಿಣಯ (ಸಂ) ಎಚ್.ಎಸ್. ಶ್ರೀಮತಿ, ಸಾಹಿತ್ಯ ಅಕಾಡೆಮಿ, ೨೦೦೪

೭೮. ಮೈಲಾರಲಿಂಗ ಖಂಡೋಬಾ ಒಂದು ಸಾಂಸ್ಕೃತಿಕ ಅಧ್ಯಯನ, ಡಾ.ಎಂ.ಬಿ. ನೇಗಿನಹಾಳ ಪ್ರಸಾರಾಂಗ, ಕರ್ನಾಟಕ ವಿ.ವಿ. ಧಾರವಾಡ, ೧೯೯೨

೭೯. ಮೋದಿರುದ್ರ ವಿರಚಿತ ವಿರಕ್ತರ ಕಾವ್ಯ (ಸಂ) ಡಾ. ನಗುವನಹಳ್ಳಿ ಪಿ. ರತ್ನ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, ೧೯೯೬

೮೦. ರಟ್ಟಮತ (ಸಂ) ಎಚ್.ಶೇಷಅಯ್ಯಂಗಾರ್, ಗೌರ್ನಮೆಂಟ್ ಓರಿಯಂಟಲ್ ಹಸ್ತಪ್ರತಿ ಭಂಡಾರ, ಮದರಾಸು ೧೯೫೦

೮೧. ರಾಮಧಾನ್ಯ ಚರಿತ್ರೆ, ಡಾ.ಕೆ.ಬಿ. ತಳಗೇರಿ ವಿದ್ಯಾನಿಧಿ ಪ್ರಕಾಶನ, ಗದಗ, ೧೯೯೭-೯೮

೮೨. ಲೋಕೋಪಕಾರಂ (ಸಂ) ಹೆಚ್. ಶೇಷ ಅಯ್ಯಂಗಾರ್ ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ೨೦೦೩

೮೩. ವರಹಾಮಿಹಿರನ ಬೃಹತ್‌ಸಂಹಿತೆ (ಸಂ) ಎಂ.ರಾಮಕೃಷ್ಣ ಭಟ್

೮೪. ವಿಜಯನಗರ ಕಾಲದ ಸೈನ್ಯ ವ್ಯವಸ್ಥೆ ಮತ್ತು ಯುದ್ಧನೀತಿ, ಡಾ. ಎಸ್.ವೈ.ಸೋಮಶೇಖರ್, ಸಂಚಿಕೆ ಪ್ರಕಾಶನ, ಚಿತ್ರದುರ್ಗ, ೨೦೦೯

೮೫. ವಿದ್ಯಾನಿಧಿ ಶತಮಾನೋತ್ಸವ ಸಂಪುಟ, ಸಾಂಗತ್ಯದಲ್ಲಿ ಬರುವ ಕುಮಾರರಾಮನಕಥೆ (ಲೇಖನ) ಕರ್ನಾಟಕ ವೀರಶೈವ ವಿದ್ಯಾಭಿವೃದ್ಧಿ ಸಂಸ್ಥೆ, ಬೆಂಗಳೂರು, ೨೦೦೫

೮೬. ವಿರಕ್ತರ ಕಾವ್ಯ (ಸಂ) ಡಾ. ನುಗುವನಹಳ್ಳಿ ಪಿ.ರತ್ನ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೯೬

೮೭. ಶರಣರ ಅನುಭವಸಾಹಿತ್ಯ, ಡಾ.ಎಚ್.ತಿಪ್ಪೇರುದ್ರಸ್ವಾಮಿ, ಡಿ.ವಿ.ಕೆ.ಮೂರ್ತಿ ಪ್ರಕಾಶನ, ಮೈಸೂರು, ೧೯೯೮

೮೮. ಶಬ್ದಮಣಿದರ್ಪಣ. (ಸಂ) ತ.ಸು.ಶಾಮರಾಯ ಮತ್ತು ಎಚ್.ನಂಜೇಗೌಡ, ಪುಸ್ತಕಾಲಯ, ಮೈಸೂರು, ೧೯೮೬

೮೯. ಶಿವಕೋಟ್ಯಾಚಾರ್ಯರ ವಡ್ಡಾರಾಧನೆ (ಗದ್ಯಾನುವಾದ) ಟಿ.ಕೇಶವಭಟ್ಟ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೩

೯೦. ಶಾಲಿಹೋತ್ರನಮತ (ಸಂ) ಜಿ.ಜಿ. ಮಂಜುನಾಥನ್, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೮೭.

೯೧. ಶಾಸನಾಧ್ಯಯನ ಉಲ್ಲೇಖ (ಸಂ) ಡಾ. ಎಸ್.ಎಂ.ಹಿರೇಮಠ, ವಿದ್ಯಾನಿಧಿ ಪ್ರಕಾಶನ, ಗದಗ, ೧೯೯೮

೯೨. ಶಾಸ್ತ್ರಸಾಹಿತ್ಯ, ಸಂಪುಟ ೩ ಪ್ರೊ. ಎಂ.ವಿ. ಸೀತಾರಾಮಯ್ಯ, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ೨೦೦೦

೯೩. ಶಾಸ್ತ್ರೀಯ ಡಾ. ಟಿ.ವ್ಹಿ. ವೆಂಕಟಾಚಲಶಾಸ್ತ್ರಿ ಸಂಪುಟ ೧ ರಿಂದ ೪, ಸಪ್ನ ಬುಕ್‌ಹೌಸ್ ಬೆಂಗಳೂರು, ೧೯೯೯

೯೪. ಶ್ರೀವತ್ಸ ನಿಘಂಟು, ಡಾ. ಟಿ.ವ್ಹಿ.ವೆಂಕಟಾಚಲಶಾಸ್ತ್ರಿ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೧೯೯೯

೯೫. ಸಂಸ್ಕೃತಿ, ಡಿ.ವಿ.ಜಿ. ಕಾವ್ಯಾಲಯ ಪ್ರಕಾಶನ, ಜಯನಗರ, ಮೈಸೂರು ೨೦೦೬

೯೬. ಸಕಲ ವೈದ್ಯ ಸಂಹಿತಾಸಾರಾರ್ಣವ ಸಂಪುಟ ೧, (ಸಂ) ಡಿ. ಶ್ರೀನಿವಾಸಚಾರ ಹಾಗೂ ಡಿ.ಎಲ್. ನರಸಿಂಹಾಚಾರ್ (ಪ) ಪ್ರಾಚ್ಯವಿದ್ಯಾ ಸಂಶೋಧನಾಲಯ, ಮೈಸೂರು, ೧೯೯೪.

೯೭. ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ ಸಂಪುಟ ೨, (ಪ್ರ.ಸಂ.) ಜಿ.ಎಸ್. ಶಿವರುದ್ರಪ್ಪ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

೯೮. ಸಮಾಲೋಕನ ತೀ.ನಂ. ಶ್ರೀಕಂಠಯ್ಯ, ಶಾರದಾ ಮಂದಿರ, ಮೈಸೂರು, ೧೯೭೪

೯೯. ಸರ್ವಜ್ಞ ಸೋಮೇಶ್ವರ ವಿರಚಿತ ಮಾನಸೋಲ್ಲಾಸ ಸಂಪುಟ ೧,೨, (ಕನ್ನಡ ಅನುವಾದ) ಡಾ.ಎಂ.ಎಂ. ಕಲಬುರ್ಗಿ ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೯೬

೧೦೦. ಸರ್ವಜ್ಞನ ವಚನಗಳು : ಒಂದು ಜಾನಪದೀಯ ಅಧ್ಯಯನ ಡಾ. ರಾಜಶೇಖರ ಜಮದಂಡಿ ಅಖಿಲಭಾರತ ಶರಣ ಸಾಹಿತ್ಯ ಪರಿಷತ್ತು, ಮೈಸೂರು, ೨೦೦೪

೧೦೧. ಸಂಸ್ಥಾನಿಕರ ಐತಿಹಾಸಿಕ ಸಾಹಿತ್ಯ (ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ) ಶ್ರೀ ಕೆ.ಆರ್.ಮೆಳವಂಕಿ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೨೦೦೭

೧೦೨. ಸಾಂಸ್ಕೃತಿಕ ಅಧ್ಯಯನ, ರಹಮತ್ ತರೀಕೆರೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೪

೧೦೩. ಸೂಪಶಾಸ್ತ್ರ (ಸಂ) ಎಸ್.ಎನ್.ಕೃಷ್ಣಜೋಯಿಸ್, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೭೯

೧೦೪. ಹಸ್ತಪ್ರತಿ ವ್ಯಾಸಂಗ ಸಂಪುಟ ೮, (ಸಂ) ಡಾ. ಎಫ್.ಟಿ. ಹಳ್ಳಿಕೇರಿ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೮

೧೦೫. ಹಿರಿಯಣ್ಣ ಕವಿಯ ಹಯರತ್ನಶ್ರೇಣಿ (ಸಂ) ಡಾ. ಎಫ್.ಟಿ.ಹಳ್ಳಿಕೇರಿ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೩

೧೦೬. ಹೊಸ ಕುಮಾರರಾಮನ ಸಾಂಗತ್ಯ (ಸಂ) ಎಂ.ಎಂ.ಕಲಬುರ್ಗಿ ಮತ್ತು ವೀರಣ್ಣ ರಾಜೂರ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೨